ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು – ೫೭೦ ೦೦೬.

KARNATAKA STATE OPEN UNIVERSITY
Mukthgangothri. Mysore - 570 006.

# POLITICAL SCIENCE

**MA (FINAL)**

**COURSE - 8**

# ರಾಜ್ಯಶಾಸ್ತ್ರ



**ಎಂ.ಎ (ಅಂತಿಮ)**

**ಕೋರ್ಸ್ – 8**

**ಕನ್ನಡ ಮಾಧ್ಯಮ**

# ಆಧುನಿಕ ರಾಜಕೀಯ ಸಿದ್ಧಾಂತ

# Recent Political Theory


**Block : 1- 7**

**ಬ್ಲಾಕ್: 1- 7**

# ಕರಾಮುವಿ

## ರಾಷ್ಟ್ರೀಯ ಅಂತಾರಾಷ್ಟ್ರೀಯ ಮಾನ್ಯತೆ

- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಜೂನ್ ೧, ೧೯೯೬ ರಂದು ಸರ್ಕಾರಿ ಅದೇಶ ಸಂಖ್ಯೆ : ED1/UOV/dated 12th February 1996 (Karnataka State Open University Act - 1992) ರ ಪ್ರಕಾರ ಕರ್ನಾಟಕ ರಾಜ್ಯಪಾಲರ ಅನುಮೋದನೆಯೊಂದಿಗೆ ಪೂರ್ಣಪ್ರಮಾಣದ ವಿಶ್ವವಿದ್ಯಾನಿಲಯವಾಗಿ ಸ್ಥಾಪನೆಗೊಂಡಿತು. ರಾಜ್ಯದ ಶೈಕ್ಷಣಿಕ ಪದ್ಧತಿಯಲ್ಲಿ 'ದೂರ ಶಿಕ್ಷಣ ಪದ್ಧತಿ'ಯನ್ನು ಆರಂಭಿಸುವ ಮತ್ತು ಉತ್ತೇಜಿಸುವ ದೃಷ್ಟಿಯಿಂದ ಈ ಮುಕ್ತ ವಿಶ್ವವಿದ್ಯಾನಿಲಯವನ್ನು ಅಧಿನಿಯಮದ ಮೂಲಕ ಸ್ಥಾಪಿಸಲಾಯಿತು.
- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧಿನಿಯಮ ೧೯೯೨ ರಂತೆ ಈ ವಿಶ್ವವಿದ್ಯಾನಿಲಯವು ಕರ್ನಾಟಕ ರಾಜ್ಯದ ಒಳಗೆ ಸಂಸ್ಥೆಗಳನ್ನು, ಕಾಲೇಜುಗಳನ್ನು, ಪ್ರಾದೇಶಿಕ ಕೇಂದ್ರಗಳನ್ನು ಮತ್ತು ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸುವ, ನಿರ್ವಹಿಸುವ ಮತ್ತು ಮಾನ್ಯತೆ ಕೊಡುವ ಅಧಿಕಾರವನ್ನು ಹೊಂದಿದೆ. ಅಗತ್ಯವಿದ್ದ ಸಂದರ್ಭಗಳಲ್ಲಿ ಕರ್ನಾಟಕ ರಾಜ್ಯದ ಹೊರಗಿನ ಸ್ಥಳಗಳಲ್ಲೂ ಪ್ರಾದೇಶಿಕ ಕೇಂದ್ರ ಮತ್ತು ಅಧ್ಯಯನ ಕೇಂದ್ರಗಳನ್ನು ತೆರೆಯಲು ಅಧಿಕಾರವನ್ನು ಪಡೆದಿದೆ.
- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಎಲ್ಲಾ ಶೈಕ್ಷಣಿಕ ಕಾರ್ಯಕ್ರಮಗಳು 'ದೂರ ಶಿಕ್ಷಣ ಮಂಡಳಿ' (DEC), ಮಾನವಸಂಪನ್ಮೂಲ ಅಭಿವೃದ್ಧಿ ಸಚಿವಾಲಯ (MHRD), ನವದೆಹಲಿಯ ಮಾನ್ಯತೆಯನ್ನು ಪಡೆದಿವೆ.
- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ೧೯೯೯ರಿಂದ ನವದೆಹಲಿಯಲ್ಲಿರುವ 'ಭಾರತೀಯ ವಿಶ್ವವಿದ್ಯಾನಿಲಯಗಳ ಸಂಘ'ದ (AIU) ಖಾಯಂ ಸದಸ್ಯತ್ವವನ್ನು ಹೊಂದಿದೆ.
- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ೧೯೯೯ರಿಂದ 'ಕಾಮನ್‌ವೆಲ್ತ್ ವಿಶ್ವವಿದ್ಯಾನಿಲಯಗಳ ಸಂಘ' (ACU), ಲಂಡನ್, ಯುನೈಟೆಡ್ ಕಿಂಗ್‌ಡಮ್‌ನ ಶಾಶ್ವತ ಸದಸ್ಯ ಸಂಸ್ಥೆಯಾಗಿದೆ. ಸದಸ್ಯತ್ವದ ಸಂಖ್ಯೆ : ZKASOPENUINI.
- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ೧೯೯೯ ರಿಂದ 'ಏಷಿಯಾದ ಮುಕ್ತ ವಿಶ್ವವಿದ್ಯಾನಿಲಯಗಳ ಸಂಘ' (AAOU), ಬೀಜಿಂಗ್, ಚೀನಾ – ಇದರ ಶಾಶ್ವತ ಸದಸ್ಯ ಸಂಸ್ಥೆಯಾಗಿದೆ.
- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು 'ಕಾಮನ್‌ವೆಲ್ತ್ ಆಫ್ ಲರ್ನಿಂಗ್' (COL) ಕೆನಡ, ಇದರ ಸಹಯೋಗವನ್ನು ೨೦೦೩ ರಿಂದ ಹೊಂದಿದೆ. 'ಕಾಮನ್‌ವೆಲ್ತ್ ಆಫ್ ಲರ್ನಿಂಗ್' ಎನ್ನುವುದು ದೂರ ಶಿಕ್ಷಣದಲ್ಲಿ ಮುಕ್ತಕಲಿಕಾ ತಿಳಿವಳಿಕೆ, ಸಂಪನ್ಮೂಲಗಳು ಮತ್ತು ತಂತ್ರಜ್ಞಾನಗಳ ಅಭಿವೃದ್ಧಿ ಮತ್ತು ಹಂಚುವಿಕೆಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಕಾಮನ್‌ವೆಲ್ತ್ ದೇಶಗಳ ಸರ್ಕಾರಗಳಿಂದ ನಿರ್ಮಾಣಗೊಂಡ ಅಂತಾರಾಷ್ಟ್ರೀಯ ಸರ್ಕಾರಿ ಸಂಸ್ಥೆಯಾಗಿದೆ.

**ಉನ್ನತ ಶಿಕ್ಷಣ ಎಲ್ಲರಿಗೂ ಎಲ್ಲೆಡೆ**

# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು–006.

## ಎಂ.ಎ., ರಾಜ್ಯಶಾಸ್ತ್ರ (ಅಂತಿಮ)

## ಪತ್ರಿಕೆ – 08 : ಆಧುನಿಕ ರಾಜಕೀಯ ಸಿದ್ಧಾಂತ


| ಬ್ಲಾಕ್ – 1 | | | ಪುಟ ಸಂಖ್ಯೆ |
|---|---|---|---|
| ಘಟಕ – 1 | : | ಆದರ್ಶ (ಸಿದ್ಧಾಂತ)ದ ಅರ್ಥ, ಲಕ್ಷಣಗಳು ಮತ್ತು ಪ್ರಾಮುಖ್ಯತೆ | 01 – 11 |
| ಘಟಕ – 2 | : | ಬಹುತ್ವವಾದ : ಅರ್ಥ ಮತ್ತು ಬೆಳವಣಿಗೆ | 13 – 22 |
| ಘಟಕ – 3 | : | ಏಕತ್ವ ಮತ್ತು ಬಹುತ್ವ ವಾದಗಳ ನಡುವಿನ ವಿವಾದಗಳು | 23 – 35 |
| **ಬ್ಲಾಕ್ – 2** | | | |
| ಘಟಕ – 4 | : | ಕಾನೂನು : ಅರ್ಥ ಮತ್ತು ವಿಧಗಳು | 36 – 45 |
| ಘಟಕ – 5 | : | ಕಾನೂನಿನ ಸಿದ್ಧಾಂತ : ಚಾರಿತ್ರಿಕ, ವಿಶ್ಲೇಷಣಾತ್ಮಕ, ತಾತ್ತ್ವಿಕ, ಹೋಲಿಕಾ ಹಾಗು ಸಮಾಜಶಾಸ್ತ್ರ ಅಧ್ಯಯನ ಮಾರ್ಗಗಳು | 46 – 55 |
| ಘಟಕ – 6 | : | ಸಮಾನತೆಯ ಇತ್ತೀಚಿನ ಸಿದ್ಧಾಂತಗಳು, ನ್ಯಾಯ ಹಾಗು ರಾಲ್ಸ್‌ರವರ ನ್ಯಾಯ ಸಿದ್ಧಾಂತ | 56 – 71 |
| ಘಟಕ – 7 | : | ಕಾನೂನು ಹಾಗು ನೈತಿಕತೆ, ಕಾನೂನು ಮತ್ತು ಸ್ವಾತಂತ್ರ್ಯ, ಕಾನೂನು ಮತ್ತು ಸಮಾನತೆ | 72 – 80 |
| **ಬ್ಲಾಕ್ – 3** | | | |
| ಘಟಕ – 8 | : | ಉದಾರವಾದದ ಅರ್ಥ ಮತ್ತು ಸಾಂಪ್ರದಾಯಿಕ ಉದಾರವಾದದ ಬೆಳವಣಿಗೆ | 81 – 90 |
| ಘಟಕ – 9 | : | ಹೊಸ ಉದಾರವಾದ | 91 – 102 |
| ಘಟಕ – 10 | : | ಉದಾರವಾದದ ಪುನರ್ ನವೀಕರಣ | 103 – 109 |
| ಘಟಕ – 11 | : | ಉದಾರವಾದದ ಅವನತಿ | 110 – 119 |
| **ಬ್ಲಾಕ್ – 4** | | | |
| ಘಟಕ – 12 | : | ಸಮಾಜವಾದ ಅರ್ಥ ಹಾಗು ಬೆಳವಣಿಗೆ | 120 – 129 |
| ಘಟಕ – 13 | : | ಸಮಾಜವಾದದ ಬಗೆಗಳು | 130 – 138 |
| ಘಟಕ – 14 | : | ಸಮಾಜವಾದದ ತತ್ತ್ವಗಳು | 139 – 146 |
| ಘಟಕ – 15 | : | ಪ್ರಜಾಸತ್ತಾತ್ಮಕ ಸಮಾಜವಾದ | 147 – 155 |

## ಬ್ಲಾಕ್ – 5


| | | | |
|---|---|---|---|
| ಘಟಕ – 16 | : | ಪ್ರಜಾಪ್ರಭುತ್ವ, ಅರ್ಥ ಬಗೆಗಳು ಮತ್ತು ಸಿದ್ಧಾಂತಗಳು | 156 – 166 |
| ಘಟಕ – 17 | : | ಪ್ರಜಾಪ್ರಭುತ್ವದ ಸಾಂಪ್ರದಾಯಿಕ ಮತ್ತು ಉದಾರವಾದಿ ಸಿದ್ಧಾಂತ | 167 – 178 |
| ಘಟಕ – 18 | : | ಪ್ರಜಾಪ್ರಭುತ್ವದ ಗಣ್ಯರ, ಬಹುತ್ವ ಮತ್ತು ಮಾರ್ಕ್ಸ್‌ವಾದಿ ಸಿದ್ಧಾಂತಗಳು | 179 – 195 |
| ಘಟಕ – 19 | : | ಪ್ರಜಾಪ್ರಭುತ್ವದ ಅಗತ್ಯಾಂಶಗಳು | 196 – 207 |
| ಘಟಕ – 20 | : | ಪ್ರಜಾಪ್ರಭುತ್ವದ ಮೌಲ್ಯಗಳು ಹಾಗು ಮಿತಿಗಳು | 208 – 218 |


## ಬ್ಲಾಕ್ – 6


| | | | |
|---|---|---|---|
| ಘಟಕ – 21 | : | ವೈಜ್ಞಾನಿಕ ಸಮಾಜವಾದ ಅಥವಾ ಸಮತಾವಾದ | 219 – 238 |
| ಘಟಕ – 22 | : | ಸೋವಿಯತ್ ಸಮತಾವಾದ | 239 – 253 |
| ಘಟಕ – 23 | : | ಮಾವೋ ವಾದ ಮಾವೋತ್ಸೆ ತುಂಗ್ ಸಿದ್ಧಾಂತ | 254 – 262 |


## ಬ್ಲಾಕ್ – 7


| | | | |
|---|---|---|---|
| ಘಟಕ – 24 | : | ಗಾಂಧಿ – ರಾಜ್ಯ, ಗುರಿ ಮತ್ತು ಸಾಧನೆ, ಧರ್ಮದರ್ಶಿತ್ವ ಮಂಡಳಿ | |
| | | ಮತ್ತು ಅಹಿಂಸಾವಾದ | 263 – 273 |
| ಘಟಕ – 25 | : | ಸತ್ಯಾಗ್ರಹದ ತಂತ್ರಗಳು, ಗ್ರಾಮ ಸ್ವರಾಜ್ಯ ಮತ್ತು ಮಹಿಳೆಯ | |
| | | ಸ್ಥಾನಮಾನದ ಬಗ್ಗೆ ಗಾಂಧಿಯ ಅಭಿಪ್ರಾಯ | 274 – 284 |
| ಘಟಕ – 26 | : | ಡಾ. ಬಿ.ಆರ್. ಅಂಬೇಡ್ಕರ್‌ರವರ ಜೀವನ ಮತ್ತು ಸಂವಿಧಾನ | |
| | | ರಚನೆಯಲ್ಲಿ ಅವರ ಪಾತ್ರ | 285 – 294 |
| ಘಟಕ – 27 | : | ಅಂಬೇಡ್ಕರ್‌ರವರ ಆರ್ಥಿಕ ಮತ್ತು ರಾಜಕೀಯ ಅಂಶಗಳು ಸಾಮಾಜಿಕ | |
| | | ನ್ಯಾಯ ಮತ್ತು ವಿಮರ್ಶೆ | 295 – 304 |

## ಪಠ್ಯಕ್ರಮ ವಿನ್ಯಾಸ ಮತ್ತು ಸಂಪಾದಕ ಮಂಡಳಿ

**ಪ್ರೊ. ಎಂ.ಜಿ. ಕೃಷ್ಣನ್**
ಕುಲಪತಿಗಳು ಮತ್ತು ಅಧ್ಯಕ್ಷರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು.

**ಪ್ರೊ. ಟಿ.ಡಿ.ದೇವೇಗೌಡ**
ಪ್ರಭಾರ ಡೀನ್ (ಶೈಕ್ಷಣಿಕ) ಸಮಾವೇಶಕರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು.

***ಡಾ. ಕೆ.ಜೆ. ಸುರೇಶ್***
ಅಧ್ಯಕ್ಷರು, ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
ಮುಕ್ತಗಂಗೋತ್ರಿ, ಮೈಸೂರು – 06

**ವಿಷಯ ಸಂಯೋಜಕರು**

## ಪಠ್ಯಕ್ರಮ ನಿರೂಪಕರು

**ಘಟಕಗಳು**

***ಡಾ. ಹರೀಶ್‌ರಾಮಸ್ವಾಮಿ***
ರೀಡರ್, ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರ್ನಾಟಕ ವಿಶ್ವವಿದ್ಯಾನಿಲಯ
ಧಾರವಾಡ.

***ಪ್ರೊ. ಸದಾನಂದ ಜೆ.ಎಸ್.***
ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕುವೆಂಪು ವಿಶ್ವವಿದ್ಯಾನಿಲಯ,
ಶಿವಮೊಗ್ಗ

ಘಟಕ 01 – 03
ಘಟಕ 04 – 07
ಘಟಕ 08 – 11
ಘಟಕ 12 – 15
ಘಟಕ 16 – 20
ಘಟಕ 21 – 23
ಘಟಕ 24 – 27

***ಪ್ರಕಾಶಕರು***
ಕುಲಸಚಿವರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
ಮುಕ್ತಗಂಗೋತ್ರಿ, ಮೈಸೂರು –೦೬

**ಕುಲಸಚಿವರು**

ಕ.ರಾ.ಮು.ವಿ., ಯ ಶೈಕ್ಷಣಿಕ ವಿಭಾಗದಿಂದ ಸಿದ್ಧಪಡಿಸಲಾಗಿದೆ.
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, 2014

ಎಲ್ಲಾ ಹಕ್ಕುಗಳನ್ನು ಕಾದಿರಿಸಲಾಗಿದೆ. ಅಪ್ಪಣೆ ಇಲ್ಲದೆ ಈ ಕೃತಿಯನ್ನು ಪೂರ್ಣವಾಗಿ ಅಥವಾ ಭಾಗವಾಗಿ ಪುನರ್ ಮುದ್ರಿಸಬಾರದು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕೋರ್ಸ್‌ಗಳ ಹೆಚ್ಚಿನ ವಿವರಗಳನ್ನು ವಿಶ್ವವಿದ್ಯಾನಿಲಯದ ಕಾರ್ಯಾಲಯ, ಮುಕ್ತಗಂಗೋತ್ರಿ, ಮೈಸೂರು – 6 ಇಲ್ಲಿಂದ ಪಡೆಯಬಹುದು.

# ಕೋರ್ಸ್ – 8ರ ಪರಿಚಯ
# ಆಧುನಿಕ ರಾಜಕೀಯ ಸಿದ್ಧಾಂತ

ಆಧುನಿಕ ರಾಜಕೀಯ ಸಿದ್ಧಾಂತ ಎಂಬ ಪತ್ರಿಕೆ (ಕೋರ್ಸ್)ಯನ್ನು ಅಂತಿಮ ಎಂ.ಎ. ರಾಜ್ಯಶಾಸ್ತ್ರದ ವಿದ್ಯಾರ್ಥಿಗಳಿಗೆ ಮೂರನೇ ಪತ್ರಿಕೆ (ಕೋರ್ಸ್) ಆಗಿ ಇಡಲಾಗಿದೆ. ಆಧುನಿಕ ರಾಜಕೀಯ ಸಿದ್ಧಾಂತಗಳ ಪರಿಕಲ್ಪನೆಗಳು ಹಾಗು ಘಟನಾವಳಿಗಳು ಹೆಚ್ಚು ಮಹತ್ವವನ್ನು ಪಡೆದಿದ್ದು, ಭಾರತ ಹಾಗೂ ವಿದೇಶಗಳ ಅನೇಕ ವಿಶ್ವವಿದ್ಯಾನಿಲಯಗಳು ಇದನ್ನು ರಾಜ್ಯಶಾಸ್ತ್ರದ ಒಂದು ಭಾಗವಾಗಿ ಪರಿಗಣಿಸಿವೆ. ಇದರಲ್ಲಿ ನೀವು ಸಿದ್ಧಾಂತ (ಆದರ್ಶ), ಉದಾರವಾದ, ಬಹುತ್ವವಾದ, ಕಾನೂನಿನ ಸಿದ್ಧಾಂತಗಳು, ಸಮಾಜವಾದ, ಪ್ರಜಾಪ್ರಭುತ್ವ, ಸಮತಾವಾದ ಮೊದಲಾದವುಗಳನ್ನು ಅಧ್ಯಯನ ಮಾಡುವಿರಿ.

ಎಲ್ಲ ವಿಧವಾದ ಸರ್ಕಾರಗಳು, ರಾಜಕೀಯ, ಸಾಮಾಜಿಕ ಹಾಗು ಆರ್ಥಿಕ ಪದ್ಧತಿಗಳೆಲ್ಲವು ಸಾಮಾಜಿಕ, ರಾಜಕೀಯ ಹಾಗು ಆರ್ಥಿಕ ಸಿದ್ಧಾಂತಗಳ ಫಲವಾಗಿ ಬಂದಿರುವಂತವುಗಳೆಂಬುದು ಪ್ರತಿಯೊಬ್ಬರಿಗೂ ತಿಳಿದಿರುವಂತಹ ವಿಚಾರವಾಗಿದೆ. ಸರ್ಕಾರಗಳಲ್ಲಿನ ಅಥವಾ ಪದ್ಧತಿಗಳ ಯಾವುದೇ ರೀತಿಯ ಬದಲಾವಣೆ ಹಾಗೂ ಸುಧಾರಣೆಗಳು ಪರಿಕಲ್ಪನೆಗಳು ಹಾಗು ಸಿದ್ಧಾಂತಗಳಲ್ಲಿ ಆಗುವಂತಹ ಬದಲಾವಣೆಗಳನ್ನು ಆಧರಿಸಿಕೊಂಡಿರುತ್ತವೆ. ಇಂದಿನ ಆಧುನಿಕ ರಾಜಕೀಯ ವ್ಯವಸ್ಥೆಯಲ್ಲಿ ಯಾವುದೇ ಸರ್ಕಾರದ ಅಥವಾ ಪದ್ಧತಿಯ ಏಳಿಗೆ ಹಾಗು ವಿಫಲತೆಯು ಈ ಸಿದ್ಧಾಂತಗಳನ್ನೇ ಆಧರಿಸಿಕೊಂಡಿರುತ್ತದೆ. ಉದಾಹರಣೆಗೆ ಸಮಾಜವಾದ, ಸಮತಾವಾದ, ಪ್ರಜಾಪ್ರಭುತ್ವ ಮೊದಲಾದವುಗಳು. ಇದರ ಹಿನ್ನೆಲೆಯಲ್ಲಿ ಆಧುನಿಕ ರಾಜಕೀಯ ಸಿದ್ಧಾಂತದ ಅಧ್ಯಯನವು ಅತ್ಯವಶ್ಯಕವಾದುದಾಗಿದೆ.

ಈ ಕೋರ್ಸ್‌ನ್ನು ಸ್ವಯಂ ಅಧ್ಯಯನ ಮಾದರಿಯಲ್ಲಿ ರಚಿಸಿದ್ದು, ಇದರಲ್ಲಿ ಏಳು ಬ್ಲಾಕ್‌ಗಳಿದ್ದು, ಈ ಏಳು ಬ್ಲಾಕ್‌ಗಳನ್ನು 27 ಘಟಕಗಳಾಗಿ ವಿಂಗಡಿಸಿ ವಿವಿಧ ಸಿದ್ಧಾಂತಗಳನ್ನು ವಿವರಿಸಲಾಗಿದೆ.

## ಬ್ಲಾಕ್ –1ರ ಪರಿಚಯ:–

ಬ್ಲಾಕ್ ಒಂದರಲ್ಲಿ ಮೂರು ಘಟಕಗಳಿದ್ದು, ಅವುಗಳನ್ನು 1 ರಿಂದ 3 ಘಟಕಗಳು ಎಂದು ಪರಿಗಣಿಸಲಾಗಿದೆ. ಘಟಕ 1ರಲ್ಲಿ ಸಿದ್ಧಾಂತ (ಆದರ್ಶ) ಎಂದರೇನು? ಅದರ ಲಕ್ಷಣಗಳು ಹಾಗು ಮಹತ್ವಗಳನ್ನು ವಿವರಿಸಲಾಗಿದೆ. ಘಟಕ 2ರಲ್ಲಿ ಬಹುತ್ವವಾದದ ಅರ್ಥ ಮತ್ತು ಬೆಳವಣಿಗೆಯನ್ನು ಗುರುತಿಸಲಾಗಿದೆ. ಘಟಕ 3ರಲ್ಲಿ ಏಕಾತ್ಮಕ ಮತ್ತು ಬಹುತ್ವವಾದ ನಡುವಿನ ವಿವಾದದ ಬಗ್ಗೆ ವಿವರಿಸಲಾಗಿದೆ.

## ಬ್ಲಾಕ್ –2ರ ಪರಿಚಯ:–

ಬ್ಲಾಕ್ ಎರಡರಲ್ಲಿ ಒಟ್ಟು ನಾಲ್ಕು ಘಟಕಗಳನ್ನು ಹೊಂದಿದ್ದು, ಅವುಗಳನ್ನು 4 ರಿಂದ 7 ಘಟಕಗಳು ಎಂದು ಪರಿಗಣಿಸಲಾಗಿದೆ. ಘಟಕ 4ರಲ್ಲಿ ಕಾನೂನು ಎಂದರೇನು? ಕಾನೂನಿನಲ್ಲಿ ಎಷ್ಟು ವಿಧಗಳಿವೆ ಎಂಬುದನ್ನು ವಿವರಿಸಲಾಗಿದೆ. ಘಟಕ 5ರಲ್ಲಿ ಕಾನೂನಿನ ವಿವಿಧ ಸಿದ್ಧಾಂತಗಳಾದ ಚಾರಿತ್ರಿಕ, ವಿಶ್ಲೇಷಣಾ, ತಾತ್ವಿಕ, ಹೋಲಿಕಾ ಹಾಗೂ ಸಮಾಜಶಾಸ್ತ್ರೀಯ ಸಿದ್ಧಾಂತದ ಬಗೆಗಿನ ವಿವರವನ್ನು ನೀಡಲಾಗಿದೆ. ಘಟಕ 6ರಲ್ಲಿ ಸಮಾನತೆಯ ಬಗೆಗಿನ ಇತ್ತೀಚಿನ ಸಿದ್ಧಾಂತಗಳನ್ನು ಚರ್ಚಿಸಲಾಗಿದೆ. ಜೊತೆಗೆ ನ್ಯಾಯ ಎಂದರೇನು ಹಾಗು ರಾಲ್ಸ್‌ರವರ ನ್ಯಾಯ ಸಿದ್ಧಾಂತವನ್ನು ಚರ್ಚಿಸಲಾಗಿದೆ. ಘಟಕ 7ರಲ್ಲಿ ಕಾನೂನು ಹಾಗು ನೈತಿಕತೆ, ಕಾನೂನು ಹಾಗು ಸಮಾನತೆ, ಕಾನೂನು ಹಾಗು ಸ್ವತಂತ್ರತೆಗಳ ನಡುವಿನ ಸಂಬಂಧದ ಬಗ್ಗೆ ವಿಮರ್ಶೆ ಮಾಡಲಾಗಿದೆ. ಒಟ್ಟಾರೆ ಈ ಘಟಕದಲ್ಲಿ ಕಾನೂನು ಹಾಗು ನ್ಯಾಯಕ್ಕೂ ಸಂಬಂಧಿಸಿದಂತೆ ಇರುವಂತ ಅಂಶಗಳನ್ನು ವಿವರವಾಗಿ ವಿಮರ್ಶೆ ಮಾಡಲಾಗಿದೆ.

## ಬ್ಲಾಕ್ –3ರ ಪರಿಚಯ:–

ಬ್ಲಾಕ್ ಮೂರನ್ನು ಒಟ್ಟು ನಾಲ್ಕು ಘಟಕಗಳಾಗಿ ವಿಂಗಡಿಸಿದ್ದು, ಅವುಗಳನ್ನು 8 ರಿಂದ 11 ಘಟಕಗಳು ಎಂದು ಪರಿಗಣಿಸಲಾಗಿದೆ. ಈ ನಾಲ್ಕು ಘಟಕಗಳಲ್ಲಿ ಉದಾರವಾದದ ಸಂಪೂರ್ಣ ವಿವರಣೆಯನ್ನು ನೀಡಲಾಗಿದೆ. ಘಟಕ 8ರಲ್ಲಿ ಉದಾರವಾದ ಎಂದರೇನು ಅದರಲ್ಲಿ ಸಾಂಪ್ರದಾಯಿಕ ಉದಾರವಾದ ಹೇಗೆ ಬೆಳವಣಿಗೆ ಹೊಂದಿತು ಎಂಬುದನ್ನು ವಿವರಿಸಲಾಗಿದೆ. ಘಟಕ 9ರಲ್ಲಿ ಸಾಂಪ್ರದಾಯಿಕ ಉದಾರವಾದದಿಂದ ಹೊಸ ಉದಾರವಾದ ಹೇಗೆ ಬೆಳೆದು ಬಂದಿತು ಎಂಬುದರ ಸವಿವರವನ್ನು ನೀಡಲಾಗಿದೆ. ಘಟಕ 10ರಲ್ಲಿ ಉದಾರವಾದದ ಪುನರ್ ನವೀಕರಣವನ್ನು ವಿವರಿಸಲಾಗಿದೆ. ಘಟಕ 11ರಲ್ಲಿ ಉದಾರವಾದದ ಅವನತಿಯ ಬಗೆಗೆ ವಿವರಿಸಲಾಗಿದೆ.

## ಬ್ಲಾಕ್ – 4ರ ಪರಿಚಯ :–

ಬ್ಲಾಕ್ ನಾಲ್ಕರಲ್ಲಿ ಒಟ್ಟು ನಾಲ್ಕು ಘಟಕಗಳನ್ನು ಹೊಂದಿದ್ದು, ಅವುಗಳನ್ನು 12 ರಿಂದ 15 ಘಟಕಗಳು ಎಂದು ಪರಿಗಣಿಸಲಾಗಿದೆ. ಘಟಕ 12ರಲ್ಲಿ ಸಮಾಜವಾದ ಎಂದರೇನು? ಅದು ಹೇಗೆ ಬೆಳವಣಿಗೆಯನ್ನು ಹೊಂದಿ ಪ್ರಚಲಿತಗೊಂಡಿತು ಎಂಬುದನ್ನು ವಿವರಿಸಲಾಗಿದೆ. ಘಟಕ 13ರಲ್ಲಿ ಸಮಾಜವಾದದ ವಿವಿಧ ಬಗೆಗಳನ್ನು ವಿವರಿಸಿ ಅವುಗಳ ಸೈದ್ಧಾಂತಿಕ ನೆಲಗಟ್ಟನ್ನು ಚಿತ್ರಿಸಲಾಗಿದೆ. ಘಟಕ 14ರಲ್ಲಿ ಸಮಾಜವಾದದ ಮುಖ್ಯ ತತ್ತ್ವಗಳು ಹಾಗು ವಿವಿಧ ಸಮಾಜವಾದಗಳಲ್ಲಿನ ಸೈದ್ಧಾಂತಿಕ ತತ್ತ್ವಗಳ ಬಗೆಗೆ ವಿವರಿಸಲಾಗಿದೆ. ಘಟಕ 15ರಲ್ಲಿ ಪ್ರಜಾಸತ್ತಾತ್ಮಕ ಸಮಾಜವಾದ ಎಂದರೇನು ಅದು ಹೇಗೆ ಯಾರಿಂದ ಉಗಮಗೊಂಡು ಬೆಳವಣಿಗೆಯನ್ನು ಹೊಂದಿತು ಎಂಬುದನ್ನು ವಿವರಿಸಲಾಗಿದೆ. ಒಟ್ಟಾರೆ ಈ ಬ್ಲಾಕ್‌ನ ನಾಲ್ಕು ಘಟಕಗಳು ಸಹ ಸಮಾಜವಾದದ ಬಗೆಗಿನ ಸವಿವರಣೆಯನ್ನು ನೀಡುತ್ತವೆ.

## ಬ್ಲಾಕ್ –5ರ ಪರಿಚಯ:–

ಬ್ಲಾಕ್ ಐದು ಒಟ್ಟು ಐದು ಘಟಕಗಳನ್ನು ಹೊಂದಿದ್ದು, ಅವುಗಳನ್ನು 16 ರಿಂದ 20 ಘಟಕಗಳು ಎಂದು ಪರಿಗಣಿಸಲಾಗಿದೆ. ಘಟಕ 16ರಲ್ಲಿ ಪ್ರಜಾಪ್ರಭುತ್ವದ ಅರ್ಥ ಮತ್ತು ವಿಧಗಳನ್ನು ವಿವರಿಸಿ ಅದರ ಸಿದ್ಧಾಂತಗಳ ಪರಿಚಯ ಮಾಡಲಾಗಿದೆ. ಘಟಕ 17ರಲ್ಲಿ ಪ್ರಜಾಪ್ರಭುತ್ವದ ಸಾಂಪ್ರದಾಯಿಕ ಮತ್ತು ಉದಾರವಾದಿ ಸಿದ್ಧಾಂತಗಳ ಬಗೆಗೆ ವಿವರಿಸಲಾಗಿದೆ. ಘಟಕ 18ರಲ್ಲಿ ಪ್ರಜಾಪ್ರಭುತ್ವದ ಗಣ್ಯರ ಸಿದ್ಧಾಂತ, ಬಹುತ್ವ ಸಿದ್ಧಾಂತ ಹಾಗು ಮಾರ್ಕ್ಸ್ ಸಿದ್ಧಾಂತಗಳ ಬಗ್ಗೆ ವಿವರಿಸಲಾಗಿದೆ. ಘಟಕ 19ರಲ್ಲಿ ಪ್ರಜಾಪ್ರಭುತ್ವದ ಅಗತ್ಯ ಅಂಶಗಳನ್ನು ವಿವರಿಸಲಾಗಿದೆ. ಘಟಕ 20ರಲ್ಲಿ ಪ್ರಜಾಪ್ರಭುತ್ವದ ಮೌಲ್ಯ ಮತ್ತು ನಿಯಂತ್ರಣಗಳನ್ನು ವಿವರಿಸಲಾಗಿದೆ. ಒಟ್ಟಾರೆ ಈ ಬ್ಲಾಕಿನ ಐದೂ ಘಟಕಗಳಲ್ಲಿ ಪ್ರಜಾಪ್ರಭುತ್ವದ ಸವಿವರವನ್ನು ನೀಡಲಾಗಿದೆ.

## ಬ್ಲಾಕ್ –6ರ ಪರಿಚಯ:–

ಬ್ಲಾಕ್ ಆರರಲ್ಲಿ ಒಟ್ಟು ಮೂರು ಘಟಕಗಳನ್ನು ಹೊಂದಿದ್ದು, ಅವುಗಳನ್ನು 21 ರಿಂದ 23 ಘಟಕಗಳು ಎಂದು ಪರಿಗಣಿಸಲಾಗಿದೆ. ಘಟಕ 21ರಲ್ಲಿ ಸಮತಾವಾದದ ಪ್ರತಿಪಾದಕರಾದ ಕಾರ್ಲ್‌ಮಾರ್ಕ್ಸ್‌ರವರ ಜೀವನ್ ಮತ್ತು ಕೃತಿಗಳನ್ನು ವಿವರಿಸಿ, ಇದಲ್ಲದೆ ಅವರು ಪ್ರತಿಪಾದಿಸಿದಂತ ಸಮತಾವಾದದ ಮುಖ್ಯ ತತ್ತ್ವಗಳನ್ನು ವಿವರಿಸಲಾಗಿದೆ. ಘಟಕ 22ರಲ್ಲಿ ಸೋವಿಯತ್ ಸಮತಾವಾದದ ಬಗ್ಗೆ ಚರ್ಚಿಸಲಾಗಿದೆ. ರಷ್ಯಾದಲ್ಲಿ ಸಮತಾವಾದ ಹೇಗೆ ಅಸ್ಥಿತ್ವಕ್ಕೆ ಬಂದಿತು ಅದರಲ್ಲಿ ಲೆನಿನ್ ಪಾತ್ರವೇನು, ನಂತರ ಲೆನಿನ್ ಮಾಡಿದ ಸುಧಾರಣೆಗಳೇನು ಎಂಬುದನ್ನು ಮಾರ್ಕ್ಸ್ ವಾದಕ್ಕೆ ಹೋಲಿಕೆ ಮಾಡಿ ವಿವರಿಸಲಾಗಿದೆ. ಘಟಕ 23ರಲ್ಲಿ ಮಾವೋ ಸಮತಾವಾದದ ಬಗ್ಗೆ ವಿವರಿಸಲಾಗಿದೆ. ಚೀನಾದಲ್ಲಿ ಸಮತಾವಾದ ಅಸ್ಥಿತ್ವಕ್ಕೆ ತರಲು ಮಾಡಿದಂತೆ ಸಾಧನೆ ಹಾಗು ಅವರು ಅಳವಡಿಸಿಕೊಂಡಂತ ವಿಧಾನಗಳು ಏನು ಎಂಬುದನ್ನು ವಿವರಿಸಲಾಗಿದೆ.

## ಬ್ಲಾಕ್ –7ರ ಪರಿಚಯ:–

ಬ್ಲಾಕ್ ಏಳರಲ್ಲಿ ಒಟ್ಟು ನಾಲ್ಕು ಘಟಕಗಳನ್ನು ಹೊಂದಿದ್ದು, ಅವುಗಳನ್ನು 24 ರಿಂದ 27 ಘಟಕಗಳು ಎಂದು ಪರಿಗಣಿಸಲಾಗಿದೆ. ಘಟಕ 24ರಲ್ಲಿ ಮಹಾತ್ಮಗಾಂಧಿಯವರ ಜೀವನ ಕೃತಿಗಳನ್ನು ವಿವರಿಸಿ, ಅವರ ತತ್ತ್ವಗಳಾದ ಗುರಿ ಮತ್ತು ಸಾಧನೆ, ಸತ್ಯ ಮತ್ತು ಅಹಿಂಸೆ ಹಾಗು ಧರ್ಮದರ್ಶಿತ್ವ ಸಿದ್ಧಾಂತಗಳನ್ನು ವಿವರಿಸಲಾಗಿದೆ. ಘಟಕ 25ರಲ್ಲಿಯು ಸಹ ಮಹಾತ್ಮ ಗಾಂಧಿಯವರ ಮೂಲಮಂತ್ರವಾದ ಸತ್ಯಾಗ್ರಹ ಹಾಗು ಅದರ ತಂತ್ರಗಳನ್ನು ವಿವರಿಸಲಾಗಿದೆ. ಇದರ ಜೊತೆಗೆ ಗ್ರಾಮ ಸ್ವರಾಜ್ಯ ಹಾಗು ಗಾಂಧಿಯವರ ದೃಷ್ಟಿಯಲ್ಲಿ ಮಹಿಳೆ ಎಂಬುವ ಅಂಶಗಳನ್ನು ವಿವರಿಸಲಾಗಿದೆ. ಘಟಕ 26ರಲ್ಲಿ ಅಂಬೇಡ್ಕರ್‌ರವರ ಜೀವನ ಮತ್ತು ಕೃತಿಗಳನ್ನು ತಿಳಿಸಿ ಸಂವಿಧಾನ ರಚನೆಯಲ್ಲಿ ಅವರು ನಿರ್ವಹಿಸಿದ ಪಾತ್ರವನ್ನು ಸವಿವರವಾಗಿ ಚರ್ಚಿಸಲಾಗಿದೆ. ಘಟಕ 27ರಲ್ಲಿಯೂ ಸಹ ಅಂಬೇಡ್ಕರ್‌ರವರ ಆರ್ಥಿಕ ವಿಚಾರಗಳು, ರಾಜಕೀಯ ವಿಚಾರಗಳು, ಸಾಮಾಜಿಕ ನ್ಯಾಯ ಹಾಗು ಅವರ ವಿಚಾರಗಳ ವಿಮರ್ಶೆಯನ್ನು ವಿವರಿಸಲಾಗಿದೆ. ಈ ನಾಲ್ಕು ಘಟಕಗಳಲ್ಲಿ ಮೊದಲೆರಡು ಮಹಾತ್ಮ ಗಾಂಧಿಯವರನ್ನು ಹಾಗು ಕಡೆಯ ಎರಡು ಘಟಕಗಳು ಅಂಬೇಡ್ಕರ್‌ರವರನ್ನು ಹಾಗು ಇವರ ಮುಖ್ಯ ವಿಚಾರಗಳನ್ನು ಚರ್ಚಿಸಲಾಗಿದೆ.

**ನಿಮಗೆಲ್ಲಾ ಶುಭವನ್ನು ಹಾರೈಸುವ**

**ಅಧ್ಯಕ್ಷರು**
**ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ**
**ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ**
**ಮುಕ್ತಗಂಗೋತ್ರಿ, ಮೈಸೂರು**

# ಘಟಕ 1 ಆದರ್ಶದ (ಸಿದ್ಧಾಂತ) ಅರ್ಥ ಲಕ್ಷಣಗಳು ಮತ್ತು ಪ್ರಾಮುಖ್ಯತೆ

<u>ರಚನೆ</u>

1.0 ಉದ್ದೇಶಗಳು

1.1 ಪೀಠಿಕೆ

1.2 ಆದರ್ಶ (ಸಿದ್ಧಾಂತದ)ದ ಅರ್ಥ ಮತ್ತು ಲಕ್ಷಣಗಳು

1.3 ಆದರ್ಶ ಹಾಗೂ ವಿವಿಧತೆ

1.4 ಆದರ್ಶ ಮತ್ತು ಅದರ ಪ್ರಾಮುಖ್ಯತೆ

1.5 ಆದರ್ಶದ ಹಿನ್ನೋಟ

1.6 ಉಪಸಂಹಾರ

1.7 ಮತ್ತೊಮ್ಮೆ ಪುನರ್ ಪರಿಶೀಲನೆ

1.8 ಕಠಿಣ ಪದಗಳು

1.9 ಕೆಲವು ಉಪಯುಕ್ತ ಪುಸ್ತಕಗಳು

1.10 ನಿಮ್ಮ ಪ್ರಗತಿಯನ್ನು ಪರಿಶೀಲಿಸಿಕೊಳ್ಳಿ

## 1.0 ಉದ್ದೇಶಗಳು

ಪ್ರೀತಿಯ ವಿದ್ಯಾರ್ಥಿಗಳ ಈ ಯುನಿಟ್‌ನ ಮುಖ್ಯ ಉದ್ದೇಶವೆಂದರೆ, ಆದರ್ಶದ ಬಗ್ಗೆ ನಾವು ಹೆಚ್ಚಿನ ಕಲಿಕೆಯನ್ನು ಮಾಡುವ ನಿಟ್ಟಿನಲ್ಲಿ ಅದರ ಉಗಮ, ಅರ್ಥ, ಲಕ್ಷಣಗಳು ಮತ್ತು ಪ್ರಾಮುಖ್ಯತೆಯನ್ನು ತಿಳಿದುಕೊಳ್ಳುವುದಾಗಿದೆ. ಈ ಯುನಿಟ್‌ನ್ನು ಓದಿದ ನಂತರದಲ್ಲಿ ನೀವು ಆದರ್ಶದ ಅರ್ಥ ಲಕ್ಷಣಗಳು ಮತ್ತು ಪ್ರಾಮುಖ್ಯತೆಯನ್ನು ಬಗ್ಗೆ ಪೂರ್ಣ ಮಾಹಿತಿ ಹೊಂದುವಿರಿ.

## 1.1 ಪ್ರಸ್ತಾವನೆ

ಉದಾರವಾದವು ಮಾರ್ಕ್ಸ್‌ವಾದವು ಮತ್ತು ವಿಕಸಿತ ಸಮಾಜವಾದವನ್ನು ಪ್ರಸ್ತುತ ವಿಶ್ವದ ಅತ್ಯಂತ ಪ್ರಬಲವಾದ ಆದರ್ಶವಾಗಿದೆ. ಈ ಎಲ್ಲಾ ಚಿಂತನೆಗಳ ಮೂಲಭೂತವಾಗಿ ಇಂಗ್ಲೆಂಡ್ ಮತ್ತು ಯುರೋಪಿನಲ್ಲಿ ತಮ್ಮ ಉಗಮವನ್ನು ಕಂಡುಕೊಂಡಿರಿ. ಈ ಎಲ್ಲಾ ಅಂಶಗಳು ಅಂದಿನ ಸಮಾಜದ, ಆರ್ಥಿಕ, ಸಾಮಾಜಿಕ ರಾಜಕೀಯ ಹಾಗೂ ಸಾಂಸ್ಕೃತಿಕ-ವಿಷಯಗಳಲ್ಲಿ ಸ್ಪಂದಿಸಿ ವ್ಯಕ್ತಿಯೋರ್ವನ ಬೆಳವಣಿಗೆಗೆ ಸಹಾಯಕಾರಿಯಾಗುವಂತಹ ಬಲಿಷ್ಠತೆ ಹೊಂದಿದ ಚಳವಳಿಗಳಾಗಿ ಪುನರ್ ಪುನರ್ ಉತ್ಥಾನಗಳಾಗಿ ಕೈಗಾರಿಕಾ ಕ್ರಾಂತಿಯ ಹಿನ್ನೆಲೆಯಲ್ಲಿ ಸುಧಾರಣೆಗಳನ್ನು ತಂದಿವೆ. ಈ ಎಲ್ಲ ಆದರ್ಶಗಳು ಮೂಲಭೂತವಾಗಿ ತಾಂತ್ರಿಕ ಹಾಗೂ ಔದ್ಯೋಗಿಕ ಸಮಾಜಕ್ಕೆ ಅವಶ್ಯವಾದ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ತರುವಲ್ಲಿ ಜನರ ಒಪ್ಪಿಗೆಯನ್ನು ಪಡೆದುಕೊಂಡಂತಹ ಚಿಂತನೆಗಳಾಗಿವೆ. ಉದಾರವಾದವು ತನ್ನ ಗುರಿಗಳನ್ನು ವ್ಯಕ್ತಿ ಸ್ವಾತಂತ್ರ್ಯ ವ್ಯಕ್ತಿಗತವಾದ ಹಕ್ಕು ಕಾನೂನಿನ ದೃಷ್ಟಿಯಲ್ಲಿ ಎಲ್ಲರೂ ಸಮಾನರು ಸಂವಿಧಾನಿಕ ಪ್ರಜಾಪ್ರಭುತ್ವ ಜಾತ್ಯಾತೀತತೆ, ಬಂಡವಾಳಶಾಹಿತ್ವ ವೈಚಾರಿಕತೆ ವಿಜ್ಞಾನ ಮತ್ತು ಪುರೋಭಿವೃದ್ಧಿ ಎಂಬ ಅಂಶಗಳ ಬೆಳಕಿನಲ್ಲಿ ಅಸ್ತಿತ್ವಕ್ಕೆ ಬಂದಿದ್ದರೆ, ಮಾರ್ಕ್ಸ್‌ವಾದವು ಬಂಡವಾಳಶಾಹಿತ್ವವನ್ನು ವಿರೋಧಿಸಿ ಬಂಡವಾಳಶಾಹಿತ್ವದ ಅಡಿಯಲ್ಲಿ ಇರುವ ಉದಾರವಾದವು ತಿರಸ್ಕರಿಸಿ ವ್ಯಕ್ತಿಗತವಾದ ಸ್ವಾತಂತ್ರ್ಯವನ್ನು ಕೇವಲ ವರ್ಗರಹಿತ ಮತ್ತು ರಾಜ್ಯರಹಿತ ಕಮ್ಯುನಿಸ್ಟ್ ರಾಜ್ಯದ ಮೂಲಕ ಕಂಡುಕೊಳ್ಳಬಹುದೆಂದಿದ್ದಾರೆ. ಈ ಗುರಿಯನ್ನು ಸಾಧಿಸುವಲ್ಲಿ ಕ್ರಾಂತಿಕಾರ ಯೋಜನೆಗಳನ್ನು ಹಾಕಿಕೊಂಡಿದ್ದು, ಶ್ರಮಿಕವರ್ಗದವರನ್ನು ಒಟ್ಟುಗೂಡಿಸಿ ಹಿಂಸಾ ಮಾರ್ಗದಿಂದ ಕ್ರಾಂತಿಕಾರಕವಾಗಿ ಬಂಡವಾಳಶಾಹಿ ರಾಷ್ಟ್ರವನ್ನು ಕಿತ್ತೊಗೆದು ಕಾರ್ಮಿಕ ರಾಜ್ಯದ ಸೃಷ್ಟಿಯನ್ನು ಪ್ರತಿಪಾದಿಸಿ ಇದೊಂದು ವರ್ಗರಹಿತ ಸಮಾಜವೆಂದು ಗುರುತಿಸಿದರು. ವಿಕಸನ ಸಮತಾವಾದವು ಉದಾರವಾದ ಮತ್ತು ಮಾರ್ಕ್ಸ್‌ವಾದ ಒಳಗೊಂಡಂತೆ ಒಂದೆಡೆ ಮಾರ್ಕ್ಸ್‌ವಾದ ಸಮತಾವಾದಿ ಸ್ಥಾಪನೆಗೆ ತನ್ನ ಒಪ್ಪಿಗೆಯನ್ನು ನೀಡುತ್ತಾ ಮತ್ತೊಂದೆಡೆಗೆ ಕ್ರಾಂತಿಕಾರ ಮಾರ್ಗಗಳನ್ನು ವಿರೋಧಿಸಿ ಉದಾರವಾದಿ ಚಿಂತನೆಯನ್ನು ಬೆಂಬಲಿಸಿ ಸಂವಿಧಾನಿಕ ಹಾಗೂ ಪ್ರಜಾಪ್ರಭುತ್ವಿಕ ಮಾರ್ಗವನ್ನು ಅನುಸರಿಸಿ ತನ್ನ ಗುರಿಯನ್ನು ಸಾಧಿಸುವ ಯೋಜನೆಯನ್ನು 21ನೇ ಶತಮಾನದಲ್ಲಿ ಅದರಲ್ಲೂ ಎರಡನೇ ಮಹಾಯುದ್ಧದ ನಂತರ ಸುಧಾರಣವಾದಿ ಉದಾರವಾದಿಗಳ ಮತ್ತು ವಿಕಸನವಾದಿ ಸಮಾಜವಾದಿಗಳು ಇವರೀರ್ವರ ನಡುವಿನ ವ್ಯತ್ಯಾಸಗಳು ಕಡಿಮೆಯಾಗಿ ಕಲ್ಯಾಣ ರಾಷ್ಟ್ರದ ಹೆಸರಿನಲ್ಲಿ ಒಂದಾಗಿ ತೊಡಗಿದ್ದನ್ನು ನಾವು ಇಲ್ಲಿ ಗಮನಿಸಬೇಕಾಗಿದೆ. ಎರಡನೇ ಮಹಾಯುದ್ಧದ ನಂತರದ ಅಂತರರಾಷ್ಟ್ರೀಯ ವ್ಯವಸ್ಥೆಯಲ್ಲಿ ಒಂದು ಪ್ರಮುಖವಾದ ಬದಲಾವಣೆಯೆಂದರೆ ವಿಶ್ವವು ಜಾಗತಿಕವಾಗಿ ಮೂರು ಭಾಗವಾಗಿ ವಿಂಗಡನೆಗೊಂಡು ಮೊದಲ ವಿಶ್ವವೆಂಬ ಹೆಸರಿನಲ್ಲಿ ಇಂಗ್ಲೆಂಡ್, ಪೂರ್ವಯುರೋಪ, ಅಮೆರಿಕಾ, ಕೆನಡಾ, ಆಸ್ಟ್ರೇಲಿಯಾ ದೇಶಗಳಿದ್ದರೆ ಇವು ಉದಾರವಾದಿ ಆದರ್ಶಗಳಲ್ಲಿ ನಂಬಿಕೆಯಿಟ್ಟು ವ್ಯಕ್ತಿಗತವಾದ ಹಕ್ಕುಗಳ ನಾಗರಿಕ ಸ್ವಾತಂತ್ರ್ಯ ಸಂವಿಧಾನಕ ಸರ್ಕಾರ ಉದಾರವಾದಿ ಪ್ರಜಾಪ್ರಭುತ್ವ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆ ಹಾಗೂ ಸಮಾಜದಲ್ಲಿ ಹೆಚ್ಚಿನ ಕರ್ತವ್ಯಗಳನ್ನು ನೀಡುವಲ್ಲಿ ನಂಬಿಕೆ ಇಟ್ಟಿವೆ. ಔದ್ಯೋಗಿಕರಣ ಮತ್ತು ತಾಂತ್ರಿಕರಣ ದೃಷ್ಟಿಯಲ್ಲಿ ಇವು ಅತ್ಯಂತ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಾಗಿವೆ. ದ್ವಿತೀಯ ವಿಶ್ವವು ರಷ್ಯಾ ಪಶ್ಚಿಮ ಯುರೋಪ ರಾಷ್ಟ್ರಗಳು ಸೇರಿದಂತಿದ್ದು, ಈ ಮಾರ್ಕ್ಸ್ ಸಿದ್ಧಾಂತಗಳನ್ನು ಪ್ರಜ್ಞಾವಂತರಾಗಿ ಒಪ್ಪಿಕೊಂಡು ಸಮಾಜ ಮತ್ತು ರಾಜಕೀಯದಲ್ಲಿ ಬದಲಾವಣೆ ಮಾಡಿಕೊಂಡು ಕೇಂದ್ರೀಕೃತ ಯೋಜನಾ ಅರ್ಥ ವ್ಯವಸ್ಥೆ ಸಮುದಾಯಿಕ ಮಾಲಿಕತ್ವ ಹಾಗೂ ಉತ್ಪಾದನಾ

ಮೂಲಗಳನ್ನು ಸಮುದಾಯದ ಅಡಿಯಲ್ಲಿರಿಸಿ ಅಲ್ಪ ಮಟ್ಟಿಗೆ ಆರ್ಥಿಕವಾಗಿ ಸುಧಾರಣೆಗಳನ್ನು ಮಾಡಿವೆ. ಈ ರಾಷ್ಟ್ರಗಳ ಪ್ರಮುಖ ಲಕ್ಷಣಗಳೆಂದರೆ, ಇವು ಎರಡನೇ ಶತಮಾನದಲ್ಲಿ ಅತ್ಯಂತ ಮೂಲಭೂತವಾದ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಕಂಡುಕೊಂಡಿದ್ದು 50ವರ್ಷಗಳ ನಂತರ 21ನೇ ಶತಮಾನದೆಡೆಗೆ ತೆರಳಲು ಸಿದ್ಧವಾಗಿವೆ. ತೃತೀಯ ಜಗತ್ತಿನ ಹೆಸರಿನಲ್ಲಿ ಏಷ್ಯಾ ಮತ್ತು ಲ್ಯಾಟಿನ್ ಅಮೆರಿಕಾ ರಾಷ್ಟ್ರಗಳಿದ್ದು ಇವು ಪ್ರಜಾಪ್ರಭುತ್ವದ ಮತ್ತು ಸಮತಾವಾದಿಗಳ ನಡುವೆ ಅಂತರದಲ್ಲಿವೆ. ಸುಮಾರು 100ಕ್ಕು ಹೆಚ್ಚು ರಾಷ್ಟ್ರಗಳನ್ನು ಹೊಂದಿದ ಈ ತೃತೀಯ ಜಗತ್ತಿ ಭಾಗಶಃ 45ರಷ್ಟು ವಿಶ್ವದ ಜನಸಂಖ್ಯೆಯನ್ನು ಹೊಂದಿದ್ದು 48 ಭಾಗಶಃ ಭೌಗೋಳಿಕ ಪ್ರದೇಶವನ್ನು ಹೊಂದಿದ್ದು ಸುಮಾರು 8ಭಾಗದಷ್ಟು ತನ್ನ ಉತ್ಪಾದನೆ ಹೊಂದಿದೆ. ಇದು ಸಂಪೂರ್ಣ ಅಭಿವೃದ್ಧಿ ಹೊಂದಿದ ಅಥವಾ ಬಂಡವಾಳಶಾಹಿಯಾಗಲಿ ಅಥವಾ ಸಂಪೂರ್ಣ ಸಮತಾವಾದಿ ಅರ್ಥ ವ್ಯವಸ್ಥೆಯನ್ನು ಹೊಂದಿಲ್ಲ. ಇವುಗಳಲ್ಲಿ ಹಲವು ರಾಷ್ಟ್ರಗಳು ರಾಜತ್ವ ಸಾಮ್ರಾಜ್ಯಶಾಹಿತ್ವದ ಅಡಿಯಲ್ಲಿ ಬೆಳೆದಿವೆ. ಈ ಮೂರು ಸಿದ್ಧಾಂತಗಳು ಹೋಲಿಕಾ ಅಧ್ಯಯನಕ್ಕೆ ಉಪಯುಕ್ತವಾಗಿದ್ದು ರಾಷ್ಟ್ರ ರಾಷ್ಟ್ರಗಳ ನಡುವೆ ಹೋಲಿಕೆಯನ್ನು ಮಾಡುವುದರ ಮೂಲಕ ತೃತೀಯ ಜಗತ್ತನ್ನು ಸರಿಯಾಗಿ ಅರ್ಥೈಸಿಕೊಳ್ಳಬಹುದು ಸ್ಕೂಟರ್‌ರವರ ಪ್ರಕಾರ ಇಂತಹ ವ್ಯತ್ಯಾಸಗಳು ಕೇವಲ ರಾಜಕೀಯವಾಗಿದ್ದು, ಆರ್ಥಿಕಾಂಶಗಳಿಗೆ ಸಂಬಂಧಿಸಿದಂತೆ ಹೆಚ್ಚು ಹೊಂದಾಣಿಕೆ ಕಂಡು ಬರುವುದಿಲ್ಲ ಎಂದಿದ್ದಾರೆ. ತೃತೀಯ ಜಗತ್ತನ್ನು ಇಂತಹ ಪ್ರಮುಖವಾದ ರಾಜಕೀಯ ವಿಂಗಡನೆಯೊಂದಿಗೆ ಹೊಂದಾಣಿಕೆ ಮಾಡಿಕೊಳ್ಳದಿದ್ದರೂ ಸಾರ್ಜೆಂಟ್‌ರವರ ಪ್ರಕಾರ ಈ ತೃತೀಯ ಜಗತ್ತಿನ ರಾಷ್ಟ್ರಗಳು ತಮ್ಮಷ್ಟಕ್ಕೆ ತಾವೇ ಒಟ್ಟಾಗಿ ಸೇರಿ ಹೊಸ ವ್ಯವಸ್ಥೆಯನ್ನು ರೂಪಿಸಿಕೊಂಡು ಬಂಡವಾಳಶಾಹಿ ಮತ್ತು ಸಮತಾವಾದದಿಂದ ದೂರ ಸರಿಯುವ ಪ್ರಯತ್ನ ನಡೆಸಿವೆ ಎಂದಿದ್ದಾರೆ. ಬಂಡವಾಳಶಾಹಿಯನ್ನು ತಿರಸ್ಕರಿಸಿ ಈ ರಾಷ್ಟ್ರಗಳು ಸಾಮ್ರಾಜ್ಯಶಾಹಿತ್ವದಿಂದಾಗಿ ಅರ್ಥ ವ್ಯವಸ್ಥೆಯಲ್ಲಿ ಸಹ ಬದಲಾವಣೆಗಳನ್ನು ಕಂಡುಕೊಂಡಿವೆ ಎಂದು ತಿಳಿಸಿದ್ದಾರೆ. ಅಂತೆಯೇ ಸಮತಾವಾದವು ತಿರಸ್ಕರಿಸಿದ ಈ ರಾಷ್ಟ್ರಗಳು ಮಾರ್ಕ್ಸ್‌ವಾದವನ್ನು ತಿರಸ್ಕರಿಸಿ ಹೀಗೆ ಆದರ್ಶವಾದವು ಕೇವಲ ಒಂದು ರಾಜಕೀಯ ಥವಾ ಆರ್ಥಿಕ ಚರ್ಚೆಯಾಗಿರದೆ ಬೇರೆ ಬೇರೆ ನಂಬಿಕೆ ಆಧಾರದ ಮೇಲೆ ರಾಷ್ಟ್ರ ರಾಷ್ಟ್ರಗಳನ್ನು ವಿಭಜಿಸುವಷ್ಟು ಬಲಿಷ್ಠವಾದ ಚಿಂತನೆಯಾಗಿದ್ದು ಇವು ಕೆಲವೊಮ್ಮೆ ಚಿಂತನೆ ಅಥವಾ ರಾಷ್ಟ್ರೀಯ ಗೀತೆ ಚಿಹ್ನೆ ನಂಬಿಕೆ, ತರಬೇತಿ ಹೀಗೆ ಹಲವಾರು ಮಾರ್ಗಗಳನ್ನು ಅನುಸರಿಸಿ ಆಚರಣೆಯಲ್ಲಿರುತ್ತದೆ.

## 1.2 ಆದರ್ಶ (ಸಿದ್ಧಾಂತ)ದ ಅರ್ಥ ಮತ್ತು ಲಕ್ಷಣಗಳು

ಆದರ್ಶವು ಒಂದು ರಾಜಕೀಯ ಚಿಂತನೆಯಾಗಿ ಕೆಲವು ರಾಜಕೀಯ ವ್ಯವಸ್ಥೆಯನ್ನು ತನ್ನ ವಿಶಾಲ ಅರ್ಥದಲ್ಲಿ ಒಳಗೊಂಡಿದೆ. ಇಂತಹ ಅರ್ಥವು ಕೇವಲ ಮೌಲ್ಯ ಹಾಗೂ ಆದರ್ಶಗಳನ್ನು ಅನುಸರಿಸಿ ಮಾನವನ ಚಿಂತನಾಶೀಲತೆಯಲ್ಲಿ ಒಂದು ಆದರ್ಶ ವ್ಯವಸ್ಥೆಯನ್ನು ರಚಿಸುತ್ತವೆ. ಇಂತಹ ಒಂದು ವ್ಯವಸ್ಥೆಯನ್ನು ಆಚರಣೆಗೆ ತರುವ ಪ್ರಯತ್ನ ಸದಾಕಾಲದಲ್ಲಿಯೂ ನಡೆದಿರುತ್ತದೆ. ಆದ ಕಾರಣ ಒಂದು ರಾಜಕೀಯ ಚಿಂತನೆಗೆ ಅಥವಾ ಅರ್ಥಕ್ಕೆ ಅದರ ಆಚರಣೆಯೇ ಪರೀಕ್ಷೆಯಾಗಿರುತ್ತದೆ. ಪ್ರಸ್ಟನ್‌ಕಿಂಗ್ ಹೇಳುವಂತೆ ಆದರ್ಶವು ಆಚರಣೆಗೆ ತರುವಂತಹ ವಿಚಾರಗಳನ್ನು ಒಂದಕ್ಕೊಂದು ಪೂರಕವಾಗಿರುವಂತಹ ಆಲೋಚನೆಗಳನ್ನು ಹೊಂದಿದ್ದು ತನ್ನ ಗುರಿಸಾಧನೆಯೆಡೆಗೆ ಪ್ರಯತ್ನವನ್ನು ನಡೆಸುತ್ತದೆ. ಇದನ್ನೆ ಬೇರೊಂದು ರೀತಿಯಲ್ಲಿ ಹೇಳುವುದಾದರೆ, ಆದರ್ಶವು ಕಾರ್ಯವನ್ನು ಅವಲಂಬಿಸಿರುವ ರಾಜಕೀಯ ಚಿಂತನೆಗಳಾಗಿದ್ದು ಇವು ಒಟ್ಟಾರೆ ಆಲೋಚನೆಗಳಾಗಿದ್ದು ಪ್ರಸ್ತುತ ವ್ಯವಸ್ಥೆಯನ್ನು ತಿರಸ್ಕರಿಸುವುದರಲ್ಲಿ ಅಥವಾ ಬೆಂಬಲಿಸುವ ಕೆಲಸವನ್ನಾಗಿ ಮಾಡುತ್ತವೆ. ಇದು ತಾರ್ಕಿಕ ಅಥವಾ ತಾತ್ವಿಕ ಲಕ್ಷಣಗಳನ್ನು ಹೊಂದಿಲ್ಲದೆ ರಾಜಕೀಯ ಗುಣಗಳನ್ನು ಹೊಂದಿದ್ದು ರಾಜಕೀಯ ಚಟುವಟಿಕೆಗಳನ್ನು ನಿರ್ದೇಶಿಸುವಂತಾಗಿರುತ್ತವೆ.

ಆದರ್ಶದ ವಾಸ್ತವಿಕ ಅರ್ಥವು ಬೇರೆ ಪದಗಳಿಗಿಂತ ವಿಭಿನ್ನವಾಗಿದ್ದು ಕೆಲವೊಮ್ಮೆ ಅದಲು ಬದಲುಗಳಾಗುವ ಸಾಧ್ಯತೆಗಳಾಗಿವೆ. ಉದಾ: ಆದರ್ಶ ಮತ್ತು ಸ್ವಭಾವ ಇವು ಒಂದೇ ತೆರನಾದ ಪದಗಳಲ್ಲ. ಆದರ್ಶವು ಒಂದು ಆಲೋಚನಾ ಪದ್ಧತಿಯಾಗಿದ್ದರೆ, ಇದು

ಭೌದ್ಧಿಕವಾಗಿದ್ದು, ಬರಹದ ಮೂಲಕ ಪ್ರತಿಪಾದಿಸುವುದಾಗಿದ್ದರೆ ಇದಕ್ಕೆ ಚಿಂತನಾಶೀಲರು ಬುದ್ಧಿಜೀವಿಗಳು ಬೆಂಬಲ ನೀಡುವಂತಾಗಿದ್ದರೆ ಸ್ವಭಾವವು ಒಬ್ಬರು ಆಲೋಚನಾ ಮಾಡುವ ರೀತಿ ಅಥವಾ ಭಾವನೆಗಳನ್ನು ಪ್ರತಿಪಾದಿಸುವ ಭಾವನಾತ್ಮಕ ಅಂಶವಾಗಿದ್ದು ಇದು ವೈಚಾರಿಕತೆಯಿಂದ ಕೂಡಿರುವುದಿಲ್ಲ. ಅಂತೆಯೇ ಆದರ್ಸ ಮತ್ತು ರಾಜಕೀಯ ತತ್ವವನ್ನು ಸಹ ಸಮನಾರ್ಥ ಕೊಡುವದೆಂದೂ ಗುರುತಿಸುವುದು ತಪ್ಪು ರಾಜಕೀಯ ತತ್ವವು, ಚಿಂತನಾಶೀಲತೆಯನ್ನು ಎತ್ತಿ ಅರ್ಥೈಸುವದನ್ನು ಚರ್ಚಿಸಿದರೆ, ಆದರ್ಶವು ಕಾರ್ಯೋನ್ಮುಖತೆ ಮತ್ತು ಅಚಲ ನಂಬಿಕೆಯನ್ನು ಪ್ರತಿಪಾದಿಸುತ್ತದೆ. ಇಂತಹ ದೃಷ್ಟಿಕೋನದ ವಿವರಣೆಯನ್ನು ಗಮನದಲ್ಲಿಟ್ಟುಕೊಂಡು ಒಬ್ಬ ರಾಜಕೀಯ ಚಿಂತಕನಾದವನು ತನ್ನ ವಿಶ್ಲೇಷಣಾ ಕಾರ್ಯವನ್ನು ಸಮರ್ಪಕವಾಗಿ ಮಾಡಬಹುದಾಗಿದೆ. ರಾಜಕೀಯ ಸಂಸ್ಕೃತಿ ಈ ನಿಟ್ಟಿನಲ್ಲಿ ಹೆಚ್ಚಿನ ಸಹಾಯವನ್ನು ಒದಗಿಸುತ್ತದೆ. ಮತ್ತು ರಾಜಕೀಯ ಆದರ್ಶದ ಬಗ್ಗೆ ಕೆಲವು ಲಕ್ಷಣಗಳನ್ನು ಗುರುತಿಸಲು ಇದು ಸಹಾಯಕಾರಿಯಾಗಿದೆ. ಆದ ಕಾರಣ ಆದರ್ಶವನ್ನು ಗುರುತಿಸುವಾಗ ನಾವು ಅದೊಂದು ಮೌಲ್ಯ, ಅದೊಂದು ಭಾವನಾತ್ಮಕ ಅಥವಾ ರಾಜಕೀಯ ಸಂಸ್ಕೃತಿಯಿಂದ ಗುರುತಿಸುವುದು ತಪ್ಪಾಗುತ್ತದೆ. ಕಾರಣ ಇವು ರಾಜಕಾರಣಕ್ಕೆ ನಿರ್ಧರಿತ ಯೋಜನಾ ಕಾರ್ಯೋನ್ಮುಖತೆಗೆ ಸಹಾಯ ಮಾಡುವ ವ್ಯವಸ್ಥೆಯಾಗಿದೆ. ಇವು ಬದಲಾಗುತ್ತಿರುವ ರಾಜಕೀಯ ಪದ್ಧತಿಗೆ ಕೆಲವೊಮ್ಮೆ ಪೂರಕವಾಗಿದ್ದು ಬದಲಾವಣೆಗೆ ಅವಶ್ಯಕವಾದ ಭಾಷೆಯ ಬೆಂಬಲ ನೀಡಿ ರಾಜಕೀಯ ಪ್ರಕ್ರಿಯೆಗೆ ಬೆಂಬಲ ಸೂಚಿಸುತ್ತದೆ. ಕೆಲವೊಮ್ಮೆ ಆದರ್ಶವಾದದ ಚಿಂತನೆಗೆ ಅಷ್ಟೆ ಅಲ್ಲ. ಅದರ ಕಾರ್ಯ ಕೂಡ ಇದನ್ನು ವಿಭಿನ್ನವಾಗಿ ಕಾಣಲು ಸಹಾಯ ಮಾಡುತ್ತಿದೆ. ಉದಾ: ಒಂದು ಸರ್ವಾಧಿಕಾರಿ ರಾಜ್ಯದಲ್ಲಿ ಆದರ್ಶದ ಪ್ರಾಮುಖ್ಯತೆ ಇವು ಒಂದು ಉದಾರವಾದಿ ರಾಜ್ಯಕ್ಕಿಂತ ಹೆಚ್ಚಾಗಿರುತ್ತದೆ. ಇಂತಹ ಆದರ್ಶಗಳು ಕಾಲಕಾಲಕ್ಕೆ ಬದಲಾಗುವುದು ಸಹಜವಾಗಿದೆ. ಆದರೆ ಇದು ಭ್ರಷ್ಟತೆ ಹೊಂದಿದ ಕಾರಣದಿಂದ ಬದಲಾಗುವುದಕ್ಕಿಂತ ರಾಜಕೀಯದ ಪ್ರಕ್ರಿಯೆಯಲ್ಲಿ ಅವುಗಳ ಪಾತ್ರ ಕೊನೆಗೊಳ್ಳುವುದರಿಂದ ಆಗುತ್ತದೆ. ಇದು ಕೆಲವೊಮ್ಮೆ ರಾಜಕೀಯದಲ್ಲಿ ಅವಕಾಶವಾದಿತನಕ್ಕೆ ಸಹಾಯ ಮಾಡುತ್ತದೆ. ಯಾವದೆ ಅವಕಾಶವನ್ನು ನೇರವಾಗಿ ಪ್ರಾಯೋಗಿಕವಾಗಿ ಆಚರಣೆಯಲ್ಲಿ ತರಲು ಸಾಧ್ಯವಿಲ್ಲ. ಇದು ಕೆಲವೊಮ್ಮೆ ಆದರ್ಶದಲ್ಲಿಯೇ ವಿಭಜನೆ ತರುತ್ತದೆ. ಅಥವಾ ಆದರ್ಶದ ಅರ್ಥದಲ್ಲಿ ಅಪಾರ್ಥವನ್ನು ನೀಡುತ್ತದೆ. ಕೆಲವೊಮ್ಮೆ ಆದರ್ಶಗಳಿಗೆ ವಿರೋಧಿ ಗುಂಪುಗಳಿದ್ದಾರೆ. ಇವು ಹೆಚ್ಚು ಪ್ರಾಮುಖ್ಯತೆಯನ್ನು ಪಡೆಯುತ್ತದೆ. ಕೆಲವೊಮ್ಮೆ ಆದರ್ಶಗಳನ್ನು ಒಂದು ರಾಜಕೀಯ ಪದ್ಧತಿಯೊಂದಿಗೆ ಅವುಗಳ ಪಾತ್ರವನ್ನು ಖರಿತಂತೆ ಗುರುತಿಸಲು ಸಾಧ್ಯವಿಲ್ಲ. ಬಲಪಂಥಿಯವರು ಎಡಪಂಥಿಯವರು ಬದಲಾವಣೆಯಲ್ಲದವರು, ಬದಲಾವಣೆ ಬಯಸುವವರು. ಸಂಪ್ರದಾಯವಾದಿಗಳು ಕ್ರಾಂತಿವಾದಿಗಳು ಸುಧಾರಣಾವಾದಿಗಳು ಹೀಗೆ ಹಲವಾರು ರೀತಿಯ ವೈವಿಧ್ಯತೆಯನ್ನು ಸಹ ಈ ಆದರ್ಶ ಚಿಂತನೆಯಲ್ಲಿ ಗುರುತಿಸಬಹುದಾಗಿದೆ. ಉದಾರವಾದಿಗಳು ಇಂತಹ ವೈವಿಧ್ಯತೆಯಲ್ಲಿ ಕೂಡ ಕೊನೆಗೊಳಿಸುವಲ್ಲಿ ಪ್ರಯತ್ನ ಮಾಡಿದ್ದಾರೆ. ಒಂದು ರಾಜಕೀಯ ಪಕ್ಷದ ಅಥವಾ ಗುಂಪಿನ ಒಂದು ಮೂಲಭೂತ ಅಂಶವೆಂದರೆ ಆದರ್ಶ ಇದರಿಂದ ರಾಷ್ಟ್ರಗಳಿಗೆ ವಿವಿಧ ತೆರನಾದ ಆದರ್ಶವಾದಿ ಅವಲಂಬಿತ ರಾಜಕೀಯ ಗುಂಪುಗಳು ಕಾಲದುದ್ದಕ್ಕೂ ಕಂಡುಬರುತ್ತವೆ. ರಷ್ಯಾದಲ್ಲಿ ಸ್ಟಾಲಿನ್ ಮತ್ತು ಟ್ರಟಸ್ಕಿ, ಚೈನಾದಲ್ಲಿ ಮಾವೋ ಮತ್ತು ಲಿಯೋಇಸ್ಟ್ಸ್ ಹಾಗೆಯೇ ವೈವಿಧ್ಯತೆರನಾದ ಆದರ್ಶದ ಗುರಿಗಳನ್ನು ಹೊಂದಿರುವವರು ಕೆಲವೊಮ್ಮೆ ಕಂಡು ನಂಬಿಕೆಯನ್ನು ಅಥವಾ ಭಾಷಾ ಬಲಾಢ್ಯತೆಯನ್ನು ಮಾಧ್ಯಮಗಳ ಮೂಲಕ ಹೆಚ್ಚಿನ ಬೆಳಕನ್ನು ಕಂಡವುಗಳಾಗಿದ್ದು ರಾಜಕೀಯ ಸತ್ಯತೆಯಿಂದ ಕೆಲವೊಮ್ಮೆ ದೂರವಾಗಿಯೂ ಇರಬಹುದು. ಹೀಗಾಗಿ ರಾಜಕೀಯ ಆದರ್ಶಗಳು ಅಸ್ತಿತ್ವದಲ್ಲಿರುವ ರಾಜಕೀಯ ಪದ್ಧತಿಯನ್ನು ಬೆಂಬಲಿಸುವ ಅಥವಾ ವಿರೋಧಿಸುವ ಸಾಧ್ಯತೆಗಳಿವೆ. ಹೋಲಿಕಾ ರಾಜಕೀಯ ಅಧ್ಯಯನಗಾರರು ಆದರ್ಶಗಳನ್ನು ರಾಜಕೀಯ ಪಕ್ಷಗಳ ನಡುವೆ ಒಗ್ಗಟ್ಟನ್ನು ತರುವಲ್ಲಿ ಪ್ರಯತ್ನಿಸಿವೆ. ಈ ರೀತಿಯಾಗಿ ಒಂದು ಸಕಆರ ಅಸ್ತಿತ್ವಕ್ಕೆ ಬರುವಲ್ಲಿ ರಾಜಕೀಯ ಸಿದ್ಧಾಂತವು ಆ ಸರ್ಕಾರದ ವ್ಯವಸ್ಥೆಯನ್ನು ಶಾಸನೀಕರಣಗೊಳಿಸುವಲ್ಲಿ ಸಹಾಯಕಾರಿಯಾಗಿದೆ. ಹೀಗಾಗಿ ಆದರ್ಶ ಎಂಬ ಪದವು ಅರ್ಥದಲ್ಲಿ ನಂಬಿಕೆಯನ್ನು, ಹೋಲಿಕೆಯಲ್ಲಿ ಹೋರಾಟದ ಕಾರಣಗಳನ್ನು, ಕಾರ್ಯೋನ್ಮುಖತೆಯಲ್ಲಿ ಗುರಿಯನ್ನು ಸೂಚಿಸುವ ಒಂದು ಕೇವಲ ಚಿಂತನೆಯಾಗಿರದೆ ಪೂರ್ಣವಾದ ಪರಿಕಲ್ಪನೆಯಾಗಿದ್ದು ಆಚರಣೆಯಲ್ಲಿ ತರಲು ಸರ್ವರೀತಿಯಲ್ಲಿ

ಕಾರ್ಯೋನ್ಮುಖತೆಯನ್ನು ಹೊಂದಿದೆ. ಇಂತಹ ಆದರ್ಶವು ಅರ್ಥೈಸಿಕೊಳ್ಳಲು ಕಠಿಣವಾದರೂ ಇದೊಂದು ಪೂರ್ಣವಾದ ಪರಿಕಲ್ಪನೆಯಾಗಿದ್ದು ತನ್ನದೇ ಆದ ಸಾಧನ ಮಾರ್ಗವನ್ನು ಹೊಂದಿದೆ.

## 1.3 ಆದರ್ಶ ಹಾಗೂ ವಿವಿಧತೆ

ಈ ಮೇಲೆ ತಿಳಿಸಿದಂತೆ ಆದರ್ಶವನ್ನು ಕೇವಲ ಒಂದು ರಾಜಕೀಯ ವ್ಯವಸ್ಥೆಯನ್ನು ಶಾಸನೀಯಗೊಳಿಸುವುದಷ್ಟೆ ಅಲ್ಲದೆ ಇದು ತನ್ನ ವಿವಿಧತೆ ಮೂಲಕ ತನ್ನ ಆಂತರ್ಯದ ಬಲಿಷ್ಠತೆಯನ್ನು ಸಾರುತ್ತದೆ.

ಉದಾರವಾದದ ಆದರ್ಶಗಳು

ಸರ್ವಾಧಿಕಾರತ್ವದ ವಿರೋಧಿ ಚಿಂತನೆಯಾಗಿ ಬೆಳೆದ ಈ ಉದಾರವಾದಿ ಆದರ್ಶವು ಬಲಪಂಥೀಯವಾಗಲಿ ಅಥವಾ ಎಡಪಂಥೀಯವಾಗಲಿ ತನ್ನ ತತ್ವದ ಆಂತರ್ಯದಲ್ಲಿ ಸ್ವಾತಂತ್ರ್ಯ ಪ್ರಜಾಪ್ರಭುತ್ವ ಮತ್ತು ಮಾನವೀಯತೆಗೆ ಪ್ರಾಮುಖ್ಯತೆಯನ್ನು ನೀಡಿದೆ. ಇದರ ನಂಬಿಕೆಗಳು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿನಿಧಿತ್ವ ನಿರ್ಧಾರ ಜವಾಬ್ದಾರಿಯುತ ಕಾರ್ಯಗಳು ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಅಡಚಣೆಗಳು ನ್ಯಾಯಾಂಗದ ಸ್ವಾತಂತ್ರ್ಯ ಕಾನೂನಿನ ಸರ್ವಾಧಿಕಾರತ್ವ ಇವುಗಳನ್ನು ನಿಯಮಿತ ನಿರ್ಧಾರ ಬಹುತ್ವ ಸಮಾಜ ಮತ್ತು ಆಯ್ಕೆಗೆ ಅನಿಯಮಿತ ಅವಶೇಷಗಳು ಈ ಮೂರು ಮುಖ್ಯ ಅಂಶಗಳ ಹಿನ್ನೆಲೆಯಲ್ಲಿ ಒತ್ತು ಕೊಡುತ್ತದೆ. ನಿರ್ಧಾರಗಳು ಒಂದು ಸ್ವಾತಂತ್ರ್ಯವಾದ ವ್ಯವಸ್ಥೆಯಾಗಿ ಆ ವ್ಯವಸ್ಥೆಯಲ್ಲಿ ಸ್ವಯಂ ಸೇವಾ ಸಂಘಟನೆಗಳು ಸಮಾಜದಲ್ಲಿನ ಕೆಲವು ಕಾರ್ಯಚರಣೆಗಳನ್ನು ಹಮ್ಮಿಕೊಳ್ಳಲು ಹಾಗೂ ಬಹುತ್ವ ಸಮಾಜದ ಹಲವು ಎಲ್ಲಾ ಲೆಕ್ಕಾಚಾರಗಳನ್ನು ಇವು ಕಾಪಾಡಿಕೊಂಡು ಮುಂದುವರೆಯುತ್ತದೆ. ಇವರ ದೃಷ್ಟಿಯಲ್ಲಿ ಸತ್ಯವು ವ್ಯಕ್ತಿಯೋರ್ವನ ಮನಸಾಕ್ಷಿಗೆ ಸೇರಿದ ವಿಚಾರವಾಗಿ ಪರಿಗಣಿಸಲಾಗಿದ್ದು ಅವನ ನಂಬಿಕೆಯು ಅವನ ಮನಸಾಕ್ಷಿಯನ್ನು ಎತ್ತಿ ಹಿಡಿಯುತ್ತದೆ. ಇಂತಹ ವ್ಯಕ್ತಿಗಳು ಒಂದು ಪ್ರಜಾಪ್ರಭುತವ ವ್ಯವಸ್ಥೆಯಲ್ಲಿ ಮತ್ತು ಬಹುತ್ವ ಸಮಾಜದಲ್ಲಿ ಇತರರ ಬಗ್ಗೆ ನಂಬಿಕೆ ಹಾಗೂ ಬಹು ಆಡಳಿತವನ್ನು ಬೆಂಬಲಿಸುತ್ತದೆ. ಇದೇ ವಿಚಾರವಾಗಿ ಆದರ್ಶವು ತನ್ನಲ್ಲಿ ಬದಲಾವಣೆಗೆ ಅವಕಾಶವನ್ನು ಇಟ್ಟುಕೊಂಡು ಕಾರ್ಯೋನ್ಮುಖವಾಗುವುದು ಎಲ್ಲಾ ರಾಷ್ಟ್ರಗಳಲ್ಲಿ ಕಂಡು ಬರಲು ಸಾಧ್ಯವಾದಲ್ಲಿ ಇದಕ್ಕೆ ಆಯಾ ರಾಷ್ಟ್ರಗಳ ರಾಜಕೀಯ ಸಂಸ್ಥೆಯೇ ಕಾರಣ. ಚಾರಿತ್ರಿಕವಾಗಿ ಇದಕ್ಕೆ ಹಿನ್ನೆಲೆಯಿದ್ದು ಅಮೇರಿಕಾ ಮತ್ತು ಬಲಿಷ್ಟ ಪದ್ಧತಿಗಳಲ್ಲಿ ಸರ್ಕಾರಗಳು ಸಂಪಾದಿತ ವಿರೋಧಿ ಪಕ್ಷಗಳಲ್ಲಿಯೂ ಈಗಾಗಲೆ ಸರ್ವಾಧಿಕಾರ ಸರ್ಕಾರಗಳಾಗಬಹುದಾಗಿತ್ತು. ಸ್ವತಂತ್ರ್ಯವಾದ ಚುನಾವಣೆಗಳು ಸ್ವತಂತ್ರವಾದ ಮಾಧ್ಯಮ ಆಳವಾಗಿ ರಚಿಸಿಕೊಂಡ ವೈಯಕ್ತಿಕ ಹಕ್ಕುಗಳ ಸ್ವಾತಂತ್ರ್ಯ ಈ ಎಲ್ಲವುಗಳು ಪ್ರಸ್ತುತ ಪ್ರಜಾಪ್ರಭುತ್ವವನ್ನು ಉತ್ತಮ ಸರ್ಕಾರಗಳಾಗಿ ಮಾರ್ಪಡಿಸಲು ಸಹಾಯಕಾರಿಯಾಗಿದೆ. ಈ ಒಂದು ನಂಬಿಕೆಯ ಕಾರಣದಿಂದ ಮತ್ತು ವಿಚಾರವಾದಿ ಆದರ್ಶಗಳು ಹೆಚ್ಚಿನ ಮಟ್ಟಿಗೆ ಸರ್ಕಾರಗಳು ವ್ಯಕ್ತಿಗತ ಸ್ವಾತಂತ್ರ್ಯವನ್ನು ತಡೆಹಿಡಿಯುವಲ್ಲಿ ಬೆಂಬಲಿಸಿವೆ. ಜಾನ್ ಸ್ಟುವರ್ಟ್‌ಮಿಲ್‌ರವರು ಈ ವ್ಯಕ್ತಿಗತ ಸ್ವಾತಂತ್ರ್ಯಕ್ಕೆ ಸರ್ಕಾರದ ನಿಯಂತ್ರಣ ಇರುವುದನ್ನು ಒಪ್ಪಿಕೊಂಡಿರುವುದು ಒಂದು ನಿದರ್ಶನವಾಗಿದೆ. ಜನರಿಗೆ ತಮ್ಮ ದಿನಚರಿಯಲ್ಲಿ ಹಲವಾರು ಕಾರ್ಯಗಳನ್ನು ಪೂರ್ಣವಾಗಿ ರಚಿಸಿಕೊಳ್ಳಲು ಇಂತಹ ಸರ್ಕಾರಗಳು ಸಹಾಯಕಾರಿಯಾಗಿದೆ ಎಂದು ಹೇಳುವುದು ಕೆಲವು ಬರಹಗಾರರು ಇಂತಹ ರಾಜ್ಯದ ಮೇಲಿನ ನಂಬಿಕೆಯನ್ನು ಕುರಿತು ಅಪಾರ್ಥಗಳನ್ನು ಕಲ್ಪಿಸಿದ್ದಾರೆ. ಈ ಸಂದರ್ಭದಲ್ಲಿ ಇವರು ಆದರ್ಶದ ಕೊನೆ ಎಂಬ ವಿಚಾರಗಳನ್ನು ಪ್ರತಿಪಾದಿಸಿ ವಿಚಾರವಾದಿ ಪ್ರಜಾಪ್ರಭುತ್ವದಲ್ಲಿ ಆದರ್ಶಗಳಿಗೆ ಅವಕಾಶವಿಲ್ಲವೆಂಬಂತೆ ತಿಳಿಸಿದ್ದಾರೆ. ಇದು ಸರಿಯಿಲ್ಲ, ಕೆಲವೊಮ್ಮೆ ಆರ್ಥಿಕ ಅಬಿವೃದ್ಧಿ ಮತ್ತು ರಾಜಕೀಯ ಸ್ಥಿರತೆ ಈ ಅಂಶಗಳ ಆಧಾರದ ಮೇಲೆ ಕೂಡ ವಿಚಾರವಾದಿ ಆದರ್ಶಕ್ಕೆ ಧಕ್ಕೆ ಇದೆ ಎಂಬ ಚರ್ಚೆಯೂ ಕೂಡ ಸರಿಯಲ್ಲ. ಒಮ್ಮೆ ಜನರು ಕೆಲವು ಸಂಸ್ಥೆಗಳಲ್ಲಿ ನಂಬಿಕೆಯಿಟ್ಟು ಆ ನಂಬಿಕೆಯನ್ನು ಒಂದು ಸಂಸಾರ ಮತ್ತು ಪರಿಸ್ಥಿತಿ ಎಂಬಂತೆ ಮುಂದುವರೆಸಿದಲ್ಲಿ ಅವು ಯಾವುದೇ ಒತ್ತಡಗಳಿಂದ ಬದಲಾವಣೆಗೆ ಕಂಡುಕೊಳ್ಳುವಲ್ಲಿ ಮಾನವನು ಅಭಿವೃದ್ಧಿಯ ನಿಟ್ಟಿನಲ್ಲಿ ಆರ್ಥಿಕ ಅಭಿವೃದ್ಧಿ ಒಂದು

ಮುಖ್ಯ ಹಂತವಾಗಿದ್ದು ಇದು ಅಮೇರಿಕದಂತಹ ರಾಷ್ಟ್ರಗಳಲ್ಲಿ ಕೂಡ ಯಾವುದೇ ಆದರ್ಶವನ್ನು ಹೊಂದಿದ ಪಕ್ಷವೇ ಅಧಿಕಾರಕ್ಕೆ ಬಂದಲ್ಲಿ ಅವು ಮೂಲತಃ ಇಂತಹ ಬದಲಾವಣೆಗಳಿಗೆ ಸ್ಪಂದಿಸುವಲ್ಲಿ ಇದು ಬ್ರಿಟನ್ನಿನ ಸಂಪ್ರದಾಯಿಕ ಮತ್ತು ಶ್ರಮಿಕ ವರ್ಗದ ಪಕ್ಷಕ್ಕೆ ಸ್ಪಷ್ಟಪಡಿಸುವುದಾಗಿದೆ. ಹೀಗೆ ಆದರ್ಶವನ್ನು ನಾವು ತೊಡೆದು ಹಾಕಲು ಸಾಧ್ಯವಿಲ್ಲವಾದಲ್ಲಿ ಅದರ ವಿವಿಧ ಮುಖಗಳಲ್ಲಿ ಬದಲಾವಣೆ ಕಂಡುಕೊಳ್ಳಬಹುದಾಗಿದೆ. ಹಾಗಾಗಿ ಒಂದು ಕಾಲದಲ್ಲಿ ಪ್ರಜಾಪ್ರಭುತ್ವ ಆದರ್ಶಗಳನ್ನು ಒಪ್ಪಿಕೊಂಡ ನಾವು ಇಂದಿನ ಆದರ್ಶಗಳಲ್ಲಿ ಮಾರ್ಪಾಡುಗಳನ್ನು ಮಾಡಬೇಕೆಂದು ಮುಂದುವರೆದಿದ್ದವೋ ಹೊರತು ಆದರ್ಶದ ಕೊನೆಯನ್ನು ಕಂಡು ಕೊಂಡಲ್ಲಿ ಆದರ್ಶವು ಎಲ್ಲಾ ಕಾಲದಲ್ಲಿ ಅಸ್ತಿತ್ವದಲ್ಲಿದ್ದು ಪ್ರತಿಕಾಲದಲ್ಲಿ ಹಂತಹಂತವಾಗಿ ಬದಲಾವಣೆಗಳನ್ನು ಕಂಡುಕೊಂಡಿದೆ. ಕೆಲವೊಮ್ಮೆ ಇದು ಕ್ಲಿಷ್ಟ ಪರಿಸ್ಥಿತಿಯಲ್ಲಿ ಸಿಲುಕಿ ಸಮಾಜವಾದಿ ಅಥವಾ ಕಮ್ಯುನಿಸ್ಟ್ ಸರ್ಕಾರಗಳು ಒಂದು ಚೌಕಟ್ಟಿನಲ್ಲಿ ಪ್ರಾನ್ಸ್, ಇಟಲಿ, ಮಿಲ್‌ರವರು ತಮ್ಮ ಬರಹದಲ್ಲಿ ಆದರ್ಶವು ಮೂಲಭೂತವಾದ ಬದಲಾವಣೆ ಕಂಡುಕೊಳ್ಳುವುದಾಗಿದೆ. ವಿವಿಧ ಆದರ್ಶಗಳನ್ನು ಪಡೆದುಕೊಂಡು ಕಾರ್ಯಚರಣೆಗಳು ಸಾಧ್ಯವಿದೆ. ಹಾಗೇ ಕೆಲವೊಮ್ಮೆ ಸಂಕುಚಿತ ವ್ಯಕ್ತಿಗಳಲ್ಲಿ ಸಿಕ್ಕಿಕೊಂಡು ಆದರ್ಶವು ಕ್ರಾಂತಿಕಾರಕ ಬದಲಾವಣೆ ಎಂಬ ಹಿನ್ನೆಲೆ ಪಡೆದುಕೊಂಡಿರುವುದು ಕಂಡು ಬರುತ್ತದೆ.

## ಫ್ಯಾಸಿಸ್ಟ್ ಆದರ್ಶ

ಫ್ಯಾಸಿಸ್ಟ್ ಆದರ್ಶ ಒಂದು ಸರ್ವಾಧಿಕಾರಿ ಲೆಕ್ಕಾಚಾರಗಳನ್ನು ವಿಚಾರವಾದಿ ಉಲ್ಬಣಗಳನ್ನು ತನ್ನದಾಗಿಸಿಕೊಂಡಿದೆ. ಇದು ತನ್ನ ಕಾರ್ಯಾಚರಣೆಯಲ್ಲಿ ಕ್ರಾಂತಿಕಾರಕ ಬದಲಾವಣೆಯನ್ನು ತರುವ ಪ್ರಯತ್ನ ಮಾಡುವ ನಂಬಿಕೆಯನ್ನು ಹೊಂದಿದೆ ಸರ್ವಾಧಿಕಾರಿ ಚಿಂತನೆಯನ್ನು ಬೆಳೆಸಿರುವ ಈ ಒಂದು ಫ್ಯಾಸಿಸ್ಟ್ ಆದರ್ಶವು ಉದಾರವಾದಿ ಮತ್ತು ಆದರ್ಶವಾದಿ ವಿಚಾರಗಳಿಂದ ವಿಭಿನ್ನವಾಗಿದೆ. ಹೋಲಿಕಾ ರಾಜಕಾರಣದ ಅಧ್ಯಯನವನ್ನು ಮಾಡುವ ಯಾವುದೇ ವಿದ್ಯಾರ್ಥಿಯು ಈ ಆದರ್ಶದ ಮುಖ್ಯಾಂಶಗಳನ್ನು ಗುರುತಿಸಲು ಸಾಧ್ಯವಾಗುತ್ತದೆ. ಫ್ಯಾಸಿಸ್ಟ್ ಆದರ್ಶವು ಮೊದಲು ಇಟಲಿಯಲ್ಲಿ ಬೆಳೆದರೂ ಮತ್ತು ಇದರ ಕಡೆಗೂ ಮುಸಲೋನಿ ಆಗಿದ್ದರು. ಇದರ ಎಲ್ಲಾ ಲಕ್ಷಣಗಳು ಮುಸಲೋನಿ ಹೇಳುವಂತೆ ಸಂಪೂರ್ಣವಾದ ಕ್ರಾಂತಿಕಾರಕ ರಾಜ್ಯದ ಅಸ್ತಿತ್ವ (2) ಒಂದೇ ಪಕ್ಷ ಅಥವಾ ಏಕಪಕ್ಷ ಪದ್ಧತಿಯಿದ್ದ ಅದರ ಮೂಲಕ ರಾಜಕೀಯ & ಆರ್ಥಿಕ ನಿಯಂತ್ರಣ ತಂದು ಎಲ್ಲಾ ಜನರನ್ನು ಒಟ್ಟುಗೂಡಿಸುವುದು. (3) ಇಂತಹ ರಾಜ್ಯಗಳು ಸಮಾಜವನ್ನು ತಮ್ಮ ಬಿಗಿಹಿಡಿತದಲ್ಲಿಟ್ಟುಕೊಂಡು ಇವೇ ಸಮಾಜದ ಪರಿವರ್ತನೆಗೆ ಪ್ರಯತ್ನಿಸುವುದು. ಇಂತಹ ಬದಲಾವಣೆಗಳು ಒಂದು ರಾಷ್ಟ್ರದಲ್ಲಿ ಮೈಗೂಡಿಸಿಕೊಂಡಾಗ ಇತರೇ ರಾಷ್ಟ್ರಗಳು ಕೂಡಾ ಇದನ್ನು ಹಮ್ಮಿಕೊಳ್ಳುವರೆಂಬ ಚರ್ಚೆಯು ಇಲ್ಲಿ ಕಂಡು ಬರುತ್ತದೆ. ಇಂತಹ ಚರ್ಚೆಗಳು ಒಂದೆಡೆ ಮಾರ್ಕ್ಸ್‌ವಾದ ಮತ್ತು ಮತ್ತೊಂದೆಡೆ ಸರ್ವಾಧಿಕಾರತ್ವದ ವಿಚಾರಗಳಾಗಿ ಕಂಡು ಬರುತ್ತವೆ. ಮುಸಲೋನಿಯು ಹೇಳಿದಂತೆ ಫ್ಯಾಸಿಸ್ಟ್ ಚಿಂತನೆಯು ಹೆಚ್ಚಿನ ನಿಟ್ಟಿನಲ್ಲಿ ಸರ್ವಾಧಿಕಾರಿ ಲಕ್ಷಣಗಳನ್ನು ಹೊಂದಿರುತ್ತದೆ. ಇಂತಹ ರಾಜ್ಯವು ಫ್ಯಾಸಿಸ್ಟ್ ಕಲ್ಪನೆಯಂತೆ ಇದ್ದು ವ್ಯಕ್ತಿಗಳು ವಿಶಾಲವಾದ ಪ್ರಜ್ಞೆಯನ್ನು ಹೊಂದಿರುತ್ತಾರೆ. ಅಂದರೆ ವ್ಯಕ್ತಿ ಮತ್ತು ರಾಜ್ಯದ ನಡುವೆ ವ್ಯತ್ಯಾಸಗಳು ಇರಬೇಕು ಎಂಬುದನ್ನು ಇದು ಎತ್ತಿ ತೋರಿಸುತ್ತದೆ. ಹೀಗೆಯೇ ಹಿಟ್ಲರ್ ಸಹ ನಾಜಿ ಪಕ್ಷದಲ್ಲಿ ವ್ಯಕ್ತಿ ಮತ್ತು ರಾಜ್ಯದ ನಡುವಿನ ವ್ಯತ್ಯಾಸವನ್ನು ಗುರುತಿಸಿದನು. ರಾಜ್ಯದ ಕಲ್ಪನೆಯು ವ್ಯಕ್ತಿಗಳ ಆಸೆ ಆಕಾಂಕ್ಷೆಗಳ ಮೇಲೆ ಅವಲಂಬಿತವಾಗಿರುವುದರಿಂದ ಜನರ ಹಿತಾಸಕ್ತಿಗಳ ಮೇಲೆ ಬೆಂಬಲ ನೀಡುತ್ತದೆಂಬುದು ಹಿಟ್ಲರನ ವಾದವಾಗಿತ್ತು. ಹಾಗೆ ರಾಜ್ಯದ ಮತ್ತು ಸರ್ಕಾರದ ನಡುವೆ ಅಧ್ಯಯನ ಮಾಡುವುದಕ್ಕಿಂತ ಮಿಗಿಲಾಗಿ ನಾವು ಫ್ಯಾಸಿಸ್ಟ್ ಚಿಂತನೆಯ ಬಗ್ಗೆ ತಪ್ಪು ಕಲ್ಪನೆಗಳನ್ನು ಹೊಂದಿರುವುದು ನಿಜವಾಗಿ ಕಂಡು ಬರುತ್ತದೆ. ವ್ಯಕ್ತಿಗೆ ಅವನ ಹಕ್ಕಿಗಿಂತ ಮೊದಲು ಅವನ ಕರ್ತವ್ಯವೇ ಪ್ರಾಮುಖ್ಯವಾದುದು ಎಂಬುದು ಫ್ಯಾಸಿಸ್ಟ್ ವ್ಯವಸ್ಥೆಯಾಗಿದೆ. ಎಲ್ಲೆಡೆಯಲ್ಲೂ ಒಂದೇ ತೆರನಾಗಿದೆ ಎಂಬುದು ಆದರ್ಶವಾಗಿದೆ ಇದೊಂದು ರೀತಿಯಲ್ಲಿ ಬಲಪಂಥೀಯ ಚಿಂತನೆಯ ಸರ್ವಾಧಿಕಾರತ್ವ ಎಂದರೆ ತಪ್ಪಾಗಲಾರದು. ಮುಸಲೋನಿ ಮತ್ತು ಹಿಟ್ಲರ್ ಸಹ ರಾಜ್ಯವನ್ನು ಸಂಪೂರ್ಣವಾಗಿ

ತೋಷವು ಹಾಕಬೇಕೆಂಬ ಚಿಂತನೆ ಹೊಂದಿದ್ದು, ಫ್ಯಾಸಿಸ್ಟ್ ಚಿಂತನೆಯು ಮಾರ್ಕ್ಸ್ ಚಿಂತನೆಗಿಂತ ವಿಭಿನ್ನವಾದದ್ದು ಎಂದು ಚರ್ಚಿಸಿದ್ದಾರೆ. ಇದರಿಂದ ಮಾರ್ಕ್ಸ್ ಮತ್ತು ಅವನಿಂದ ವಿರೋಧಿಸಲ್ಪಡುವ ಆದರ್ಶಗಳು ಸಹ ಕೆಲವೊಮ್ಮೆ ಒಟ್ಟಿಗೆ ಅಸ್ತಿತ್ವದಲ್ಲಿರ ಬೇಕಾದ ಸಂದರ್ಭಗಳನ್ನು ಈ ಚರ್ಚೆ ತೋರಿಸಿಕೊಡುತ್ತದೆ. ಈಗಾಗಲೆ ಹೇಳಿದಂತೆ ಈ ಎರಡು ಆದರ್ಶಗಳು ವೈಯಕ್ತಿಕ ಸ್ವಾತಂತ್ರ್ಯ ಯಾವುದೇ ರೀತಿಯ ಚರ್ಚೆ ಇವುಗಳನ್ನು ಮೀರಿ ರಾಜ್ಯವಾದಲ್ಲಿ ಕೇಂದ್ರೀಕರಣ ಹಾಗೂ ರಾಷ್ಟ್ರದ ಬಗ್ಗೆ ಹೆಚ್ಚಿನ ಮಾಹಿತಿ ನೀಡುವ ಮೂಲಕ ಬರ್ನಾರ್ಡ್ ಷಾ ರವರು ಹೇಳಿರುವಂತೆ ಪ್ರಜಾಪ್ರಭುತ್ವಿಕ ಮತ್ತು ಸರ್ವಾಧಿಕಾರಿ ಮೌಲ್ಯಗಳು ಒಟ್ಟಿನಲ್ಲಿ ಒಂದು ರೀತಿಯಲ್ಲಿ ಪರಸ್ಪರ ಅವಲಂಬಿತವಾಗಿರುತ್ತವೆ ಎಂದು ತಿಳಿಸುತ್ತದೆ. ಇದೇ ರೀತಿಯಲ್ಲಿ ಸರ್ವಾಧಿಕಾರಿಗಳು ಸಹ ಬಂದಲ್ಲಿ ಒಂದು ರೀತಿಯಲ್ಲಿ ಪ್ರಗತಿಯ ಹಾದಿಯನ್ನು ಸಾರ್ವಜನಿಕರಿಗೆ ತೋರಿಸುವುದರಿಂದ ಈ ಬಗ್ಗೆ ವಿಭಿನ್ನ ಅಭಿಪ್ರಾಯಗಳು ಸ್ಪಷ್ಟವಾಗಿ ಕಂಡು ಬರುತ್ತವೆ.

### ಮಾರ್ಕ್ಸ್‌ವಾದದ ಆದರ್ಶ

ಮಾರ್ಕ್ಸ್‌ವಾದದ ಮೂಲ ಉದ್ದೇಶ ಚಾರಿತ್ರಿಕ ಬದಲಾವಣೆಗಳು ಅಲ್ಲಿನ ಆರ್ಥಿಕ ಉತ್ಪಾದನಾ ಮೂಲಗಳ ಬದಲಾವಣೆಯ ಮೇಲೆ ನಿರ್ಧರಿತವಾಗಿರುತ್ತದೆ ಎಂಬುದು ಉತ್ಪಾದನಾ ಮೂಲಗಳಲ್ಲಿ ಬದಲಾವಣೆಯಾದರೆ ಬೇರೆಯ ರೀತಿಯ ಬದಲಾವಣೆಗೆ ಎಡೆಮಾಡಿಕೊಡುತ್ತದೆ. ಕೈಯಿಂದ ನಡೆಸುವ ಕಾರ್ಖಾನೆಗಳು ಉಳಿಗಮಾನ್ಯ ಪದ್ಧತಿಗೆ ಅವಕಾಶ ಮಾಡಿಕೊಟ್ಟಿದೆ. ಅದೇ ರೀತಿ ಕೈಗಾರಿಕಾ ಬಂಡವಾಳಶಾಹಿಗಳು ಅಸಮಾನ ಸಮಾಜಕ್ಕೆ ಅವಕಾಶ ಮಾಡಿಕೊಡಲಾಗಿದೆ. ಇದು ಕಾರ್ಮಿಕರು ಹಾಗೂ ಆಡಳಿತಗಾರರಲ್ಲಾದ ಎರಡು ವಿಭಿನ್ನ ಸಮಾಜ ಸೃಷ್ಟಿಸಿವೆ. ಯಾವುದೇ ಸಮಾಜದಲ್ಲಿ ಎರಡು ವರ್ಗಗಳಿದ್ದು ಉಳ್ಳವರು ಮತ್ತು ಉಳ್ಳದಿರುವವರು ಎಂಬ ಆರ್ಥಿಕ ಅಂಶಗಳ ಮೇಲೆ ವಿಭಜನೆಗೊಂಡಿರುತ್ತದೆ. ಉಳ್ಳವರು ಆಡಳಿತದಲ್ಲಿದ್ದು ಶೋಷಣೆ ಮಾಡುವವರಾಗಿದ್ದರೆ ಉಳ್ಳದಿರುವವರು ಅಂತಹ ವ್ಯವಸ್ಥೆಯಲ್ಲಿ ಶ್ರೇಷ್ಠತೆಗೆ ಸಿಕ್ಕು ನರಳುವವರಾಗಿರುತ್ತಾರೆ. ಹೀಗೆ ಆಳುವ ವರ್ಗ ಮತ್ತು ಆಳಿಸಿಕೊಳ್ಳುವ ವರ್ಗ ಇವುಗಳು ಸಮಾಜದ ವರ್ಗಗಳ ನಡುವಿನ ಸಂಬಂಧಗಳನ್ನು ವಿವರಿಸುವುದಲ್ಲದೆ. ರಾಜ್ಯದ ಬೆಳಕನ್ನು ಚಲ್ಲುತ್ತದೆ.ಇವರ ಪ್ರಕಾರ ಪ್ರಸ್ತುತದಲ್ಲಿನ ಎಲ್ಲಾ ಸಮಾಜವಾದದ ಸಮಾಜಗಳು ಭಾತೃತ್ವ ಸಮಾಜಗಳಾಗಿರುತ್ತವೆ ಈ ಕಾರ್ಮಿಕರನ್ನು, ರೈತರನ್ನು, ದುಡಿಯುವ ನೌಕರರನ್ನು ಒಟ್ಟಿಗೆ ಸೇರಿಸಿ ಈಗ ಉದಾರವಾದಿ ಚಿಂತನೆಯಲ್ಲಿರುವಂತಹ ಪ್ರತಿನಿಧಿತ್ವದ ಬಗ್ಗೆ ಚರ್ಚೆ ನಡೆಸಿದರೆ, ಮಾರ್ಕ್ಸ್ ತನ್ನ ಜೀವಿತದ ಕಾಲದಲ್ಲಿ ಬರೆದ ಹಲವಾರು ಪುಸ್ತಕಗಳನ್ನು ಲೆನಿನ್‌ರವರ ಕಾಲದಲ್ಲಿ ಹೊಸದಾಗಿ ಅರ್ಥವನ್ನು ಪಡೆದುಕೊಂಡನು.1848ರಲ್ಲಿ ಮಾರ್ಕ್ಸ್‌ರವರು ತಿಳಿಸಿದ್ದ ಕಮ್ಯುನಿಸ್ಟ್ ಮ್ಯಾನಿಫೆಸ್ಟ್‌ನ ಬರಹಗಳು ಬಂಡವಾಳಶಾಹಿಯ ಕೊನೆಯ ದಿನಗಳ ಬಗ್ಗೆ ಚರ್ಚಿಸಿದ್ದರೆ, ಲೆನಿನ್ 20ನೇ ಶತಮಾನದ ಅಂಚಿನಲ್ಲಿ ಹೇಗೆ ಜನರು ಬದುಕಿರ್ತಾರೆ ಎಂಬ ಪ್ರಜಾಪ್ರಭುತ್ವ ಸರ್ಕಾರದ ಮುಖಾಂತರ ಈ ಪಕ್ಷಗಳ ಉದಾರವಾದಿ ಚಿಂತನೆಗಳನ್ನು ಮಾರ್ಕ್ಸ್‌ವಾದದೊಂದಿಗೆ ಸೇರಿಸಿದ್ದಾರೆ. ಹೀಗಾಗಿ ಮಾರ್ಕ್ಸ್ ಮತ್ತು ಲೆನಿನ್ ಎಂಬುವ ಇವರೀರ್ವರ ಚಿಂತನೆಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿದೆ. ಒಟ್ಟಿನಲ್ಲಿ ಇಂತಹ ಆದರ್ಶಗಳ ಮೌಲ್ಯಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಆದರ್ಶಗಳಿಂದ ದೂರವಿಟ್ಟು ಅಧ್ಯಯನ ಮಾಡುವ ಪ್ರಯತ್ನವಾಗಿದೆ. ಹರ್ಮನ್‌ಪೈನರ್‌ರವರ ಪ್ರಕಾರ ಮಾರ್ಕ್ಸ್‌ರವರ ಮತ್ತು ಲೆನಿನ್‌ರವರ ಚಿಂತನೆಗಳಲ್ಲಿ ಇಡೀ ಮಾನವ ಸಮುದಾಯವು ಒಂದೇ ತೆರನಾಗಿರುತ್ತದೆ ಎಂಬುದು ತಪ್ಪು. ಸಮಾಜದಲ್ಲಿ ರಾಜ್ಯವು ಜನರು ಒಪ್ಪಿಕೊಂಡಂತಹ ಯಾವುದೇ ಕೆಲಸಗಳನ್ನು ನಿರ್ವಹಿಸುತ್ತದೆ. ಯಾವುದೇ ಸಮಾಜದಲ್ಲಿ ನಾವು ನಿರ್ಣಯಗಳನ್ನು ತೆಗೆದುಕೊಳ್ಳುವಾಗ ಅವು ವೈಜ್ಞಾನಿಕವಾಗಿರಬೇಕು. ಈ ರೀತಿಯ ಚರ್ಚೆಗಳು ಆದರ್ಶದ ವಿವಿಧ ವಿಷಯಗಳನ್ನು ಪರಿಚಯಿಸುವಲ್ಲಿ ಸಹಾಯಕಾರಿಯಾಗಿವೆ.

## 1.4 ಆದರ್ಶ ಮತ್ತು ಅದರ ಪ್ರಾಮುಖ್ಯತೆ

ಒಂದು ರಾಜಕೀಯದ ಮೌಲ್ಯಗಳನ್ನು ಅಧ್ಯಯನಿಸುವಲ್ಲಿ ಆದರ್ಶದ ಚೌಕಟ್ಟು ಇದೆ ಎಂದು ಹೇಳುವ ಎರಡು ಮಾತಿಲ್ಲ. ಸಾಮಾನ್ಯವಾಗಿ ಮತ್ತು ಹೋಲಿಕಾ ಅಧ್ಯಯನದಲ್ಲಿ ರಾಜಕೀಯ ಪ್ರತಿನಿಧಿಗಳನ್ನು ಅರ್ಥೈಸಿಕೊಳ್ಳಲು ಆದರ್ಶದ ಅವಶ್ಯಕತೆಯಿದೆ.

ಈ ಹೋಲಿಕಾ ಅಧ್ಯಯನದಲ್ಲಿ ವಿವಿದ ಮೌಲ್ಯ ಮತ್ತು ನಂಬಿಕೆಗಳ ಮೇಲೆ ಪದ್ಧತಿಗಳು ರಚಿತವಾಗಿರುವುದರಿಂದ ಆ ಬಗ್ಗೆ ವಿವರಣೆ ನೀಡುವಲ್ಲಿ ಆದರ್ಶಗಳು ಬಹಳಷ್ಟು ಸಹಾಯಕಾರಿಯಾಗಿವೆ. ಬ್ರಿಟನ್ನಿನ ಸಂಪ್ರದಾಯವಾದದಿಂದ ಪ್ರಾರಂಭದಿಂದ ಅಮೆರಿಕೆಯ ಉದಾರವಾದದಿಂದ ಇಟಲಿಯ ಫ್ಯಾಸಿಸ್ಟ್ ಚಿಂತನೆ ಜರ್ಮನಿಯ ನಾಜಿಝಂ ಚೈನಾ, ಮತ್ತು ರಷ್ಯಾದ ಸಮತಾವಾದ ಮತ್ತು ಸಮಾಜವಾದ ಇವುಗಳನ್ನು ನಾವು ಆದರ್ಶದ ಚೌಕಟ್ಟಿನಲ್ಲಿ ಅರ್ಥೈಸಿಕೊಳ್ಳಬೇಕಾಗುತ್ತದೆ. ಅಭಿವೃದ್ಧಿಪರ ರಾಷ್ಟ್ರಗಳು ಅಭಿವೃದ್ಧಿ ವಿರುದ್ಧ ರಾಷ್ಟ್ರಗಳು ಈ ನಿಟ್ಟಿನಲ್ಲಿಯೇ ತಮ್ಮ ಸ್ಥಿತಿಗತಿಗಳನ್ನು ಅರ್ಥೈಸಿಕೊಳ್ಳುತ್ತವೆ. ಈ ರೀತಿಯಾಗಿ ಪಕ್ಷ ಪದ್ಧತಿಯಿಂದ ಪ್ರಾರಂಭವಾಗಿ ರಾಜಕಾರಣದ ನಾಯಕತ್ವದ ಕಡೆಗೆ ಉತ್ಪಾದನಾ ಚಟುವಟಿಕೆಗಳು ಸೇರಿದಂತೆ ಆದರ್ಶವು ಒಂದು ಮೂಲಭೂತವಾದ ಅಧ್ಯಯನ ಮಾರ್ಗವಾಗಿ ಕಾರ್ಯನಿರ್ವಹಿಸುವುದನ್ನು ನಾವು ಇಲ್ಲಿ ಕಾಣಬಹುದಾಗಿದೆ. ಇಂತಹ ಆದರ್ಶಗಳ ನಡುವೆ ಒಮ್ಮತವಿಲ್ಲದೆ ಇರುವುದು ಒಂದು ಪದ್ಧತಿಯಿಂದ ಮತ್ತೊಂದು ಪದ್ಧತಿಗೆ ವ್ಯತ್ಯಾಸ ಮಾಡಲಾಗುತ್ತದೆ. ಹಾಗಾಗಿ ಆದರ್ಶದ ಪ್ರಾಮುಖ್ಯತೆಯು ಯುದ್ಧಗಳ ಉದರದಿಂದ ಬೆಳೆದು ಎರಡನೇ ಮಹಾಯುದ್ಧದ ಕೊನೆಗೆ ಕೆಲವು ಸಾಮ್ರಾಜ್ಯಶಾಹಿ ಹಿಡಿತದಿಂದ ಸ್ವಾತಂತ್ರ್ಯದ ಕಾಲದವರೆಗೂ ತನ್ನ ಪ್ರಭಾವವನ್ನು ಎಲ್ಲ ಕಾಲದಲ್ಲಿಯೂ ಬೀರಿರುವುದು ಕಂಡು ಬರುತ್ತದೆ. ಮೊದಲನೆಯದಾಗಿ ಇಟಲಿ ಮತ್ತು ಜರ್ಮನಿಯಲ್ಲಿ ಬೆಳೆದ ಫ್ಯಾಸಿಸ್ಟ್ ಚಿಂತನೆಯು ಒಂದು ಆದರ್ಶವಾದರು ರಾಷ್ಟ್ರೀಯತೆ ಚಿಂತನೆಯ ಸ್ವಾಭಿಮಾನದ ಮುಖವಾಡಗಳನ್ನು ಧರಿಸಿತ್ತು. ಅದೇ ಯುದ್ಧ ನಂತರದಲ್ಲಿ ಇಬ್ಭಾಗವಾಗಿ ಸಮಾಜವಾದಿ ಮತ್ತು ಪ್ರಜಾಪ್ರಭುತ್ವವಾಗಿ ಆದರ್ಶಗಳು ವಿಭಜಿತಗೊಂಡು ಮತ್ತೊಮ್ಮೆ ಆದರ್ಶದ ಪ್ರಾಮುಖ್ಯತೆ ನಡುವೆ ಕಂಡುಬಂದಿತ್ತು. ಆಧುನಿಕ ಸಮಾಜದಲ್ಲಿ ಸ್ವತಂತ್ರ್ಯವಾದ ಆದರ್ಶವು ಸಹ ಇರಾಕ್ ಮೇಲಿನ ಯುದ್ಧವನ್ನು ಗಮನಿಸಿದಾಗ ಹೊಸ ರೀತಿಯ ಮುಖವಾಡದ ಪರಿಚಯವಾಗುತ್ತದೆ. ಹಾಗಾಗಿ ಎಲ್ಲಾ ಸಂಬಂಧಗಳಲ್ಲಿ ಆದರ್ಶದ ಪ್ರಾಮುಖ್ಯತೆಯ ವಿವಿಧ ಹಂತಗಳಲ್ಲಿ ವಿವಿಧ ರೀತಿಗಳಲ್ಲಿ ಪ್ರತಿಬಿಂಬಿತವಾಗಿದೆ.

## 1.5 ಆದರ್ಶದ ಹಿನ್ನೋಟ

ಚಾರಿತ್ರಿಕವಾಗಿ ಅಧಿಕಾರ ಒಂದು ನಿಟ್ಟಿನಲ್ಲಿ ಆದರ್ಶದ ಚಳುವಳಿಗಳನ್ನು ಮಾನವನ ಚರಿತ್ರೆಯಲ್ಲಿ ಕಾಣಬಹುದು ಒಂದೆಡೆ ಗಣ್ಯರ ಸಿದ್ಧಾಂತದ ಹಿನ್ನೆಲೆಯಲ್ಲಿ ಬಹುವಿವಿಧ ಹೆಸರಿನಲ್ಲಿ ಅಲ್ಪಸಂಖ್ಯಾತರು ಅಧಿಕಾರವನ್ನು ಪಡೆದುಕೊಂಡಿರುವುದನ್ನು ಗಮನಿಸಿದರೆ ಮತ್ತೊಂದೆಡೆ ವರ್ಗರಹಿತ ಸಮಾಜದ ಹೆಸರಿನಲ್ಲಿ ಕೆಲವು ವರ್ಗಗಳು ಅಧಿಕಾರದ ಚುಕ್ಕಾಣಿ ಹಿಡಿದಿರುವವರ ಗಮನಕ್ಕೆ ಬರುತ್ತದೆ. ಇಂತಹದರ ಮುಖ್ಯ ಲಕ್ಷಣವೆಂದರೆ ಆದರ್ಶವು ಅಧಿಕಾರದಲ್ಲಿ ನಂಬಿಕೆಯನ್ನು ಹೊಂದಿರುವುದು ಈ ರೀತಿ ವಿವರಣೆಗಳು ಕ್ಲಿಷ್ಟವಾಗಿ ಕಂಡು ಬಂದರೂ ಗಣ್ಯ ಸಿದ್ಧಾಂತವನ್ನು ಪ್ರತಿಪಾದಿಸಿದ ಪಾರೆಟ್ಟೋ ಹಾಗೂ ಸಿ.ರೈಟ್ ಮಿಡ್ಸ್ ಇವರುಗಳು ಎಲ್ಲಾ ಸಮಾಜಗಳಲ್ಲಿಯೂ ಅಧಿಕಾರವು ಕೆಲವರ ಹಿಡಿತದಲ್ಲಿಯೇ ಇರುತ್ತದೆ ಎಂಬ ಮಾತು ಆಳುವ ವರ್ಗಗಳು ಸೃಷ್ಟಿಸುವಲ್ಲಿ ಅವಶ್ಯವಿಲ್ಲ ಮತ್ತು ಈ ರೀತಿ ಸೃಷ್ಟಿಗೊಂಡ ಆಳುವ ವರ್ಗವು ತಮ್ಮ ತಮ್ಮ ನಡುವೆ ಆಡಳಿತದ ಅಧಿಕಾರ ಬದಲಾವಣೆ ರೂಢಿಸಿಕೊಳ್ಳುತ್ತಿರುತ್ತವೆ. ಈ ಒಂದು ಸಂದರ್ಭದಲ್ಲಿ ಪ್ರತಿನಿಧಿತ್ವ ಸರ್ಕಾರದ ಆದರ್ಶಗಳಾಗಲಿ ಅಥವಾ ಅಧ್ಯಕ್ಷೀಯ ಮಾದರಿಯ ಪ್ರತಿನಿಧಿತ್ವ ಸರ್ಕಾರವಾಗಲಿ ಅಲ್ಪಸಂಖ್ಯಾತರನ್ನು ಟೀಕೆಗಳಿಂದ ದೂರಮಾಡುತ್ತವೆ. ಆಳುವ ವರ್ಗವು ಇದರಿಂದ ಮಾನವ ಸಮಾಜವನ್ನು ಯಾವ ನಿಟ್ಟಿಗೆ ಒಯ್ಯಬೇಕು ಎಂಬ ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳುತ್ತಾರೆ. ಹೀಗೆ ತನ್ನ ಚಾರಿತ್ರಿಕ ಅಧ್ಯಯನ ವರ್ಗದಿಂದಲೇ ಎಲ್ಲಾ ಕಾಲದಲ್ಲಿಯೂ ಆಳಿಸಿಕೊಳ್ಳುವ ವರ್ಗ ಚರಿತ್ರೆಯ ಕಾಲದಲ್ಲಿ ಆಡಳಿತ ವರ್ಗಕ್ಕಿಂತ ವಿಭಿನ್ನವಾದ ಜ್ಞಾನವನ್ನು ಹೊಂದಿರುತ್ತಾರೆ ಎಂಬುದು ಪ್ರತಿಪಾದಿಸುತ್ತಾನೆ. ಇಂತಹುದೇ ಆದರ್ಶವನ್ನು ಮೈಕೆಲ್ಸ್ ಸಹ ಪ್ರತಿಪಾದಿಸುತ್ತಾನೆ. ಹೀಗೆ ಚರಿತ್ರೆಯಲ್ಲಿ ಆದರ್ಶಗಳು ಜನರಿಗಾಗಿ ಸಾರ್ವಜನಿಕರಿಗಾಗಿ ರಚಿಸಲ್ಪಟ್ಟಿರುವುದು ಒಂದು ವರ್ಗವಾಗಿದ್ದು ಇಂತಹ ವರ್ಗಗಳನ್ನು ಆಳುವ ವರ್ಗಗಳು ತಿರಸ್ಕರಿಸುವ ಸಾಧ್ಯತೆಗಳಿವೆ. ಸಿದ್ಧಾಂತದ ಆದರ್ಶವು ಈ ನಿಟ್ಟಿನಲ್ಲಿ ಪ್ರಜಾಪ್ರಭುತ್ವವು ಜನರ ಸರ್ಕಾರವಾದ ಆದರ್ಶವನ್ನು ಇದೊಂದು ಕೇವಲ ಆಳುವ ವರ್ಗದ

ಅಲ್ಪಸಂಖ್ಯಾತರ ವರ್ಗವೆಂದು ಪ್ರತಿಪಾದಿಸುತ್ತದೆ. ಇಂತಹ ಉದಾರ ಚಿಂತನೆಯನ್ನು ವಿರೋಧಿಸುವುದೇ ಮಾರ್ಕ್ಸ್‌ವಾದ. ಇದು ಶ್ರಮಿಕ ವರ್ಗದ ವಿಶ್ವ ಸಂಘಟನೆಯೆಂದು ಪ್ರತಿಪಾದಿಸುತ್ತದೆ ಮತ್ತು ವಿಶ್ವದಲ್ಲಿ ಚರಿತ್ರೆಗಳು ಆಳುವ ಮತ್ತು ಆಳಿಸಿಕೊಳ್ಳುವ ಶ್ರಮಿಕ ವರ್ಗದ ಹೋರಾಟವನ್ನು ಪ್ರತಿಬಿಂಬಿಸುತ್ತದೆ ಎಂದಿದ್ದಾರೆ. ಒಟ್ಟು ಸ್ವತಂತ್ರವಾಗಿರುವ ಮನುಷ್ಯನು ಗುಲಾಮ ಸಮಾಜದಲ್ಲಿ ಸಮಾನತೆಯನ್ನು ಕಾಣಲು ಸಾಧ್ಯವಿಲ್ಲ ಅಂತೆಯೇ ಚರಿತ್ರೆಯುದ್ದಕ್ಕೂ ಎಲ್ಲಾ ಕಾಲದಲ್ಲಿಯೂ ಒಂದು ಆಳುವ ವರ್ಗವಿದ್ದಲ್ಲಿ ಮತ್ತೊಂದು ಶ್ರಮಿಕ ವರ್ಗವಿದ್ದು ಶ್ರಮಿಕ ವರ್ಗ ಎಚ್ಚರಗೊಂಡಲ್ಲಿ ಆಳುವ ವರ್ಗದೊಂದಿಗೆ ತನ್ನ ಹೋರಾಟದೊಂದಿಗೆ ಅದನ್ನು ಮಾಡುತ್ತೇನೆ ಎಂದಿದ್ದಾರೆ. ಇವರ ದೃಷ್ಟಿಯಲ್ಲಿ ರಾಜಕೀಯ ಅಧಿಕಾರವು ಯಾವಾಗಲೂ ಭ್ರಷ್ಟಾಚಾರದ ಕೈಯಲ್ಲಿಯೇ ಇರುತ್ತದೆ. ಇದು ಈಗ ಬಂಡವಾಳಶಾಹಿಗಳ ಕೈಯಲ್ಲಿರುತ್ತದೆ ಎಂಬ ಚರ್ಚೆ. ಇಂತಹ ಚರ್ಚೆಯಿಂದ ಶ್ರಮಿಕವರ್ಗವು ತನ್ನ ಅನುಕೂಲಕ್ಕಾಗಿ ಹೋರಾಡಲು ಮಾರ್ಕ್ಸ್‌ವಾದವನ್ನು ತನ್ನ ಆದರ್ಶದ ಚೌಕಟ್ಟಾಗಿ ರೂಪಿಸಿಕೊಳ್ಳುತ್ತದೆ. ಹೀಗೆ ಪ್ರತಿ ಕಾಲದಲ್ಲಿಯೂ ಬದಲಾವಣೆಗಳು ಆದರ್ಶದ ಚೌಕಟ್ಟಿನಲ್ಲಿ ಮುಂದುವರೆದಿರುವುದು ಕಂಡು ಬರುತ್ತದೆ. ರಾಜಕೀಯ ಪಕ್ಷಗಳು ಪ್ರಜಾಪ್ರಭುತ್ವ ಸರ್ಕಾರಗಳಲ್ಲಿ ಒಂದಲ್ಲ ಒಂದು ರೀತಿ ದುಂಬಾಲು ಬಿದ್ದಿರುವುದು ಕಂಡು ಬರುತ್ತವೆ ಇದು ವ್ಯಕ್ತಿ ತೆರನಾದ ಆದರ್ಶದ ಸಮಾಜ ಶ್ರಮಿಕವರ್ಗ ಸಮುದಾಯ ಹೀಗೆ ಹಲವಾರು ಅಂಶಗಳನ್ನು ಆಧಾರಿತವಾಗಿರುವುದು ಕಂಡುಬರುತ್ತದೆ. ಇಂತಹ ಪಕ್ಷಗಳಲ್ಲಿ ಕೆಲವು ಬಲಪಂಥೀಯ ಪಕ್ಷಗಳಿದ್ದರೆ ಅವರು ಸಮಾಜದಲ್ಲಿ ಆಗಬೇಕಾದ ಬದಲಾವಣೆಗಳನ್ನು ತ್ವರಿತವಾಗಿ ಮಾಡಬೇಕೆಂಬ ಚರ್ಚೆಯನ್ನು ಹೊಂದಿರುವುದಿಲ್ಲ ಶಾಂತಿಯುತ... ಬದಲಾವಣೆಯನ್ನು ಹೊಂದಿರುತ್ತದೆ. ಇದೇ ರೀತಿಯಲ್ಲಿ ಪಕ್ಷಗಳು ಎಡಪಂಥೀಯವಾಗಿದ್ದರೆ ಸಮಾಜದಲ್ಲಿನ ಬದಲಾವಣೆಗಳನ್ನು ಅವು ಕೂಡಲೇ ಕ್ರಾಂತಿಕಾರಕವಾಗಿ ತರಬೇಕೆಂದು ಚರ್ಚಿಸುತ್ತವೆ ಹೀಗೆ ಕೆಲವೊಮ್ಮೆ ಯಾವುದೇ ಆಲಸ್ಯಗಳಿಲ್ಲದೇ ಪಕ್ಷಗಳು ಅಸ್ತಿತ್ವದಲ್ಲಿರುವ ಸಾಧ್ಯತೆಗಳಿವೆ ಭಾರತೀಯ ಪಕ್ಷ ಪದ್ಧತಿಯಲ್ಲಿ ಈ ರೀತಿ ಪಕ್ಷ ಪದ್ಧತಿಯಲ್ಲಿ ಕಂಡು ಬರುವುದನ್ನು ನಾವು ಗುರುತಿಸಬಹುದಾಗಿದೆ.

ಹೀಗೆ ಹೋಲಿಕಾ ಪಕ್ಷ ಪದ್ಧತಿಯಿಂದ ಪ್ರಾರಂಭವಾಗಿ ಹೋಲಿಕಾ ರಾಜಕೀಯ ಪದ್ಧತಿಯವರೆಗೆ ಆದರ್ಶದ ಪ್ರಾಮುಖ್ಯತೆಯನ್ನು ನಾವು ಅಲ್ಲಗಳೆಯಲು ಸಾಧ್ಯವಿಲ್ಲ ಸಮಾಜದಲ್ಲಿ ಯಾವುದೇ ತೆರನಾದ ಬದಲಾವಣೆಯಾದರೆ ಆ ಬದಲಾವಣೆ ಒಂದಲ್ಲ ಒಂದು ಹಂತದಲ್ಲಿ ಆದರ್ಶದ ಹಿನ್ನೆಲೆಯಲ್ಲಿಯೇ ಇರುತ್ತದೆ ಹೀಗೆ ಆದರ್ಶಗಳು ಕಾಲಕಾಲಕ್ಕೆ ಬದಲಾವಣೆಯಾಗುತ್ತ ಬರುವ ಆದರ್ಶಗಳು ಒಂದು ಹೊಸ ಚಿಂತನ ವರ್ಗಗಳನ್ನು ನಮ್ಮೆಲ್ಲರಿಗೂ ತಿಳಿಸಿಕೊಡುತ್ತದೆ ಎಂದರೆ ತಪ್ಪಾಗಲಾರದು.

## ನಿಮ್ಮ ಪ್ರಗತಿ ಪರಿಶೀಲನೆ - 1

**ಸೂಚನೆ:** 1. ಈ ಕೆಳಗೆ ಬಿಟ್ಟಿರುವ ಜಾಗವನ್ನು ನಿಮ್ಮ ಉತ್ತರಕ್ಕೆ ಉಪಯೋಗಿಸಿಕೊಳ್ಳಿ.

2. ಈ ಘಟಕದ ಕೊನೆಯಲ್ಲಿ ನೀಡಿರುವ ಉತ್ತರದೊಂದಿಗೆ ನಿಮ್ಮ ಪ್ರಗತಿಯನ್ನು ಪರಿಶೀಲಿಸಿಕೊಳ್ಳಿ.

**1. ಆದರ್ಶ ಅಥವಾ ಸಿದ್ಧಾಂತದ ಲಕ್ಷಣಗಳನ್ನು ವಿವರಿಸಿ.**

..........................................................................................................

..........................................................................................................

..........................................................................................................

..........................................................................................................

..........................................................................................................

..........................................................................................................

2. ಆದರ್ಶ ಹಾಗೂ ವಿವಿಧತೆಯನ್ನು ಚರ್ಚಿಸಿ.

.....................................................................................................................

.....................................................................................................................

.....................................................................................................................

.....................................................................................................................

.....................................................................................................................

.....................................................................................................................

## 1.6 ಉಪಸಂಹಾರ

1960 ರ ದಶಕದಲ್ಲಿ ಆದರ್ಶದ ಕೊನೆ ಎಂಬ ಚರ್ಚೆಯು ಬಹಳ ಮಟ್ಟಿಗೆ ಕೇಳಿ ಬಂದಿತ್ತು. ನಿಜವಾದ ಪರಿಸ್ಥಿತಿಯು ಈ ಚರ್ಚೆಗಳಿಗಿಂತ ವಿಭಿನ್ನವಾಗಿದೆ ಸಮಾಜಶಾಸ್ತ್ರಜ್ಞರಾದ ಲಿಪ್ಪಸಲ್, ಮೊರೇ, ಮೋರೇಕೇಸ್, ಹಕ್ಸ್ ಮೊದಲಾದ ಹಲವಾರು ಬರಹಗಾರರು ಆದರ್ಶದ ಕೊನೆ ಎಂಬ ಚರ್ಚೆಯನ್ನು ರಾಜಕಾರಣದಲ್ಲಿ ಹೊಸ ಬದಲಾವಣೆ ಎಂಬ ಅರ್ಥದಲ್ಲಿ ಪ್ರತಿಪಾದಿಸಿದರು.ಲಿಪ್‌ಸಲ್ ಆದರ್ಶವನ್ನು ಎಡಪಂಥೀಯ ಮತ್ತು ಬಲಪಂಥೀಯ ಚಿಂತನೆಗಳಿಗೆ ಮಾತ್ರ ಮೀಸಲಾಗಿಸಿದರು ಮತ್ತು ಇವರು ಮಾರ್ಕ್ಸ್‌ವಾದವನ್ನು ಮಾತ್ರ ಪ್ರತಿಪಾದಿಸುವ ಚಿಂತನೆಯನ್ನು ಮಾಡಿದರು. ಇದೇ ಸಂದರ್ಭದಲ್ಲಿ ಆದರ್ಶದ ಪ್ರಭುತ್ವಕ್ಕೆ ಆದರ್ಶದ ಹೊಗಳಿಕೆ ಎಂಬ ಚರ್ಚೆಗಳನ್ನು ತಂದು ಆದರ್ಶದ ಮೂಲಭೂತ ಚರ್ಚೆಯನ್ನು ತಪ್ಪುಹಾದಿಗೆಳೆದರು ಇದೇ ರೀತಿಯಲ್ಲಿ ಆದರ್ಶದ ಕೊನೆ ಎಂಬ ಚರ್ಚೆಯ ಟೀಕಾಕಾರರು ಮಾರ್ಕ್ಸ್‌ವಾದವನ್ನು ಸಹ ಕಡೆಗಣಿಸಿದರು. ಕಡಿಗಣಿಸಲು ಮಾಡಿರುವ ಟೀಕೆಯೊಂದು ಕಡೆಗಣಿಸಿದರೂ ಹೀಗೆ ಪ್ರತಿ ಕಾಲದಲ್ಲಿಯೂ ಬೆಂಬಲ ಮತ್ತು ಟೀಕೆಗಳಿಗೆ ಒಳಗಾಗಿ ಸಿಲುಕಿದ ಈ ಆದರ್ಶದ ಚರ್ಚೆಗಳು ಬದಲಾವಣೆಯ ಮಾರ್ಗದಲ್ಲಿಯೇ ನಡೆದಿವೆ.

## 1.7 ಮತ್ತೊಮ್ಮೆ ಪುನರ್ ಪರಿಶೀಲನೆ

ಕೆಲವೊಮ್ಮೆ ರಾಜಕೀಯ ಪದ್ಧತಿ ಅಥವಾ ಪಕ್ಷ ಪದ್ಧತಿಯಲ್ಲಿ ಆದರ್ಶಗಳ ನ್ಯೂನತೆಯಿಂದ ಸ್ಥಿರತೆ ಅಭಿವೃದ್ಧಿ ಅಂಶಗಳ ಮೇಲೆ ಬಹಳಷ್ಟು ಬದಲಾವಣೆಗಳು ಆಗುವ ಸಾಧ್ಯತೆಗಳಿವೆ ಡಾಂಟಿಜರ್ಮಿರವರು ಹೇಳಿರುವಂತೆ ಆದರ್ಶದ ಕುಗ್ಗುವಿಕೆಗೆ ಅಥವಾ ಅಗಸ್ಟ್‌ಕಾಮ್ಟೆ ಮಾನವನ ಧಾರ್ಮಿಕ ಲೌಕಿಕ ಅಂಶಗಳನ್ನು ಮೀರಿ ನಡೆದಿದ್ದಾರೆ ಎಂಬುದರ ಬಗ್ಗೆ ಮಾಡದಿರಬಹುದು ಅಂತೆಯೇ ಈಸ್ಟನ್ ಮತ್ತು ಕೆಬಾಲ್‌ರವರು ಹೇಳಿರುವಂತೆ ಆದರ್ಶದ ಚಿಂತನೆಯಲ್ಲಿ ಕ್ಷೀಮತೆ ಇರಬಹುದು. ಇತ್ತೀಚಿನ ದಿನಗಳ ಸಂಶೋಧನೆ ಹೆಚ್ಚು ಹೆಚ್ಚಾಗಿ ವಾಸ್ತವಿಕತೆ ಕಡೆಗೆ ಗಮನಹರಿಸಿದೆ. ಮೈಕಲ್‌ಓಕಸಾಟ್ ಅನ್ನಾ, ಅರಗನಂಟ್, ಜೊವೆನಾಯಲ್, ಓಗಾಲಿಸ್, ಇವರುಗಳು ಚರ್ಚಿಸಿದಂತೆ ಇಂದು ರಾಜಕೀಯ ಸಿದ್ಧಾಂತಗಳಲ್ಲಿ ಆದರ್ಶಗಳು ಮರುಕಳಿಸುತ್ತಿರುವುದು ಹೋಲಿಕಾ ರಾಜಕಾರಣದಲ್ಲಿ ಆದರ್ಶದ ಪ್ರಾಮುಖ್ಯತೆ ಹೆಚ್ಚುತ್ತಿರಬಹುದು ರಾಜಕಾರಣದ ಕಾರ್ಯಚಟುವಟಿಕೆಗಳಲ್ಲಿ ಆದರ್ಶ ಒಂದು ಮೌಲ್ಯ ವ್ಯಾಪಕವಾಗಿಯೂ ಇರಬಹುದು. ಆದರೆ ಈ ಎಲ್ಲ ಸಂದರ್ಭಗಳಲ್ಲಿ ಆದರ್ಶಗಳು ಒಂದಲ್ಲ ಒಂದು ರೀತಿಯಲ್ಲಿ ಸಮಾಜದ ರಾಜಕೀಯ ಚೌಕಟ್ಟಿನಲ್ಲಿ ಬದಲಾವಣೆಗೆ ಅವಕಾಶಗಳನ್ನು ಮಾಡಿಕೊಡುತ್ತಾ ಇರಬಹುದು ಇಂತಹ ಒಂದು ಪ್ರಮುಖವಾದ ಅರ್ತ ಲಕ್ಷಣಗಳು ಮತ್ತು ಪ್ರಾಮುಖ್ಯತೆಯನ್ನು ಇಲ್ಲಿಯವರೆಗೆ ತಾವು ಅಭ್ಯಸಿಸಿರುವಲ್ಲಿ ಇದು ಶ್ರೇಷ್ಟವಾದರೂ ರಾಜ್ಯಶಾಸ್ತ್ರದ ವಿದ್ಯಾರ್ಥಿಗಳಾಗಿ ಬಹಳ ಪ್ರಮುಖವಾದದ್ದು.

## 1.8 ಕಠಿಣ ಪದಗಳು

ತೃತೀಯ ಜಗತ್ತಿನ ರಾಷ್ಟ್ರಗಳು - ಅಲಿಪ್ತ ನೀತಿ ಅನುಸರಿಸಿರುವ ರಾಷ್ಟ್ರಗಳು

ಫ್ಯಾಸಿಸ್ಟ್ - ಇಟಲಿಯಲ್ಲಿನ ಸರ್ವಾಧಿಕಾರಿಯಾಗಿದ್ದ ಮುಸಲೋನಿಯವರ ಪ್ರತಿಪಾದಿತವಾದ

ಮಾರ್ಕ್ಸ್‌ವಾದ - ಕಾರ್ಲ್‌ಮಾರ್ಕ್ಸ್ ಪ್ರತಿಪಾದಿಸಿದಂತ ಸಮತಾವಾದ

ನಾಜಿ - ಜರ್ಮನಿಯ ಸರ್ವಾಧಿಕಾರಿ ಹಿಟ್ಲರ್ ಪ್ರತಿಪಾದಿಸಿದ ವಾದ

## 1.9 ಕೆಲವು ಉಪಯುಕ್ತ ಪುಸ್ತಕಗಳು

ಎಫ್.ಡಬ್ಲ್ಯೂ. ಕೊಕರ್ - ರಿಸೆಂಟ್ ಪೊಲಿಟಿಕಲ್ ಥಾಟ್

ಎಸ್.ಪಿ. ವರ್ಮಾ - ಮಾಡರ್ನ್ ಪೊಲಿಟಿಕಲ್ ಥಿಯರಿ

ಡಾ. ಕೆ.ಜೆ.ಸುರೇಶ್ - ಆಧುನಿಕ ರಾಜಕೀಯ ಸಿದ್ಧಾಂತ

ಡಾ. ಟಿ.ಡಿ.ದೇವೇಗೌಡ - ರಾಜಕೀಯ ಸಿದ್ಧಾಂತ

ಡಾ. ಟಿ.ಡಿ. ದೇವೇಗೌಡ - ರಾಜ್ಯಶಾಸ್ತ್ರದ ಮೂಲ ಪರಿಕಲ್ಪನೆಗಳು

## 1.10 ನಿಮ್ಮ ಪ್ರಗತಿಯನ್ನು ಗಮನಿಸಿಕೊಳ್ಳಿ

**ನಿಮ್ಮ ಪ್ರಗತಿ ಪರಿಶೀಲನೆ - 1**

1. ನೋಡಿ ವಿಭಾಗ 1.2
2. ನೋಡಿ ವಿಭಾಗ 1.3



VOP_FL_MA_Pol_Sci_C-8(1-7)_TF.20_F.No.52
52

# ಟಿಪ್ಪಣಿ

## ಘಟಕ 2 ಬಹುತ್ವವಾದ:ಅರ್ಥ ಮತ್ತು ಬೆಳವಣಿಗೆ

ರಚನೆ


2.0 ಉದ್ದೇಶಗಳು

2.1 ಪ್ರಸ್ತಾವನೆ

2.2 ಸಾರ್ವಭೌಮತ್ವ ಸ್ಥೂಲ ಪರಿಚಯ

2.3 ಸಾರ್ವಭೌಮತ್ವ- ವಿವಿಧ ಸಿದ್ಧಾಂತಗಳು

2.4 ಬಹುತ್ವ ಸಿದ್ಧಾಂತದ ಅರ್ಥ ಮತ್ತು ಬೆಳವಣಿಗೆ

2.5 ಬಹುತ್ವ ಸಿದ್ಧಾಂತದ ಬಗ್ಗೆ ಲಾಸ್ಕಿಯವರ ವಿಚಾರ

2.6 ಬಹುತ್ವ ಸಿದ್ಧಾಂತದ ಬಗ್ಗೆ ಮ್ಯಾಕೈವರ್‌ರವರ ವಿಚಾರಗಳು

2.7 ಒಟ್ಟಾರೆ ಅಭಿಪ್ರಾಯ

2.8 ಕಠಿಣ ಪದಗಳು

2.9 ಕೆಲವು ಉಪಯುಕ್ತ ಪುಸ್ತಕಗಳು

2.10 ನಿಮ್ಮ ಬೆಳವಣಿಗೆಯನ್ನು ಗುರುತಿಸಿಕೊಳ್ಳಿ

## 2.0 ಉದ್ದೇಶಗಳು

ಈ ಪಠ್ಯಕ್ರಮವನ್ನು ವಿದ್ಯಾರ್ಥಿಗಳಾದ ತಮಗೆ ಬಹು ಸಂಸ್ಕೃತಿ ಸಮಾಜದಲ್ಲಿ ಬಹುತ್ವವಾದದಂತಹ ಸಾಂಪ್ರದಾಯಿಕ ಸಿದ್ಧಾಂತಗಳ ಪ್ರಾಮುಖ್ಯತೆಯನ್ನು ತಿಳಿಸಿಕೊಡಲು ರಚಿಸಲಾಗಿದೆ. ಇದರಲ್ಲಿ ಸಾರ್ವಭೌಮತ್ವದ ಅಧಿಕಾರದ ವಿವರಣೆಯನ್ನು ಚರ್ಚೆಗೆ ಗುರಿಪಡಿಸಿ ಯಾವುದೇ ರಾಜ್ಯವು ಸಾರ್ವಭೌಮತ್ವ ಅಧಿಕಾರ ಹೊಂದಲು ಸಾಧ್ಯವಿಲ್ಲವೆಂಬುದನ್ನು ವಿವರಿಸುವುದೇ ಆಗಿದೆ. ಈ ಪಠ್ಯಭಾಗದಲ್ಲಿ ಬಹುತ್ವ ಸಿದ್ಧಾಂತದ ಪ್ರಾಮುಖ್ಯತೆಯನ್ನು ಚರ್ಚಿಸುವುದರೊಂದಿಗೆ ಅದರ ಅರ್ಥ ಮತ್ತು ಬೆಳವಣಿಗೆಯನ್ನು ಚರ್ಚಿಸುತ್ತ ಈ ಪಠ್ಯಕ್ರಮದ ಕೊನೆಗೆ ಏಕಾತ್ಮಕ ಸಿದ್ಧಾಂತದ ಪ್ರಾಮುಖ್ಯತೆಯನ್ನು ಹಾಗೂ ಆದರ ವಿರೋಧಿ ಚರ್ಚೆಯಾದ ಬಹುತ್ವ ಸಿದ್ಧಾಂತದ ವಿವಿಧ ವಿಷಯ ವಸ್ತುಗಳನ್ನು ತಮ್ಮ ಮುಂದೆ ಇಡುವುದೇ ಆಗಿದೆ.

## 2.11 ಪ್ರಸ್ತಾವನೆ

ಇವತ್ತಿನ ರಾಜ್ಯಗಳು ಸಾರ್ವಭೌಮತ್ವ ರಾಷ್ಟ್ರಗಳಾಗಿವೆ. ನ್ಯಾಯದ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಈ ಸಾರ್ವಭೌಮತ್ವವು ರಾಜ್ಯದ ಪ್ರಮುಖ ಅಂಶಗಳಲ್ಲಿ ಒಂದಾಗಿದೆ. ಈ ಸಾರ್ವಭೌಮತ್ವ ಅಧಿಕಾರದಿಂದಲೇ ರಾಜ್ಯವನ್ನು ಇತರೆ ಮಾನವ ನಿರ್ಮಿತ ಸಂಸ್ಥೆಗಳಿಗಿಂತ ವಿಭಿನ್ನವೆಂದು ಪರಿಗಣಿಸಲಾಗಿದೆ. ಈ ಪದವನ್ನು ಗ್ರೀಕ್ ಮತ್ತು ಲ್ಯಾಟಿನ್ ಸುಪರ್‌ನಸ್ ಎಂಬ ಪದದಿಂದ ಬಳಸಿಕೊಳ್ಳಲಾಗಿದೆ. ಪಾಶ್ಚಿಮಾತ್ಯ ರಾಜಕೀಯ ಚಿಂತಕರಲ್ಲಿ ಈ ಸಾರ್ವಭೌಮತ್ವದ ಚರ್ಚೆ ಹೆಚ್ಚು ಕ್ಲಿಷ್ಟಕರವಾದ ಚರ್ಚೆಗಳಿಗೆ ಅವಕಾಶ ಮಾಡಿಕೊಟ್ಟಿದೆ. ಆದರೆ ಇದರ ಒಟ್ಟಾರೆ ಅಭಿಪ್ರಾಯವನ್ನು ಪ್ರಸ್ತಾಪ ಮಾಡುವಲ್ಲಿ ಸಮಾಜದಲ್ಲಿ ಇದೊಂದು ಅತ್ಯುನ್ನತ ಅಧಿಕಾರವೆಂದು ಇದು ವ್ಯಕ್ತಿಗಳನ್ನೆಲ್ಲಾ ಮೀರಿ ಇರುವ ಸರ್ವಾಧಿಕಾರವೆಂದೂ ವರ್ಗ, ಗುಂಪು, ವರ್ಗಗಳ ಹಿತಾಸಕ್ತಿ ಸಂಸ್ಥೆಗಳು ಇವುಗಳನ್ನೆಲ್ಲಾ ನಿಯಂತ್ರಣದಲ್ಲಿಟ್ಟು ವ್ಯವಹರಿಸುವ ಅಧಿಕಾರವೆಂದೂ ಪರಿಗಣಿಸಲಾಗಿದೆ. ಇದೇ ಪ್ರಚಲಿತ ಸಮಾಜದಲ್ಲಿ ರಾಜ್ಯದ ಸರ್ವಾಧಿಕಾರವೆಂದು ಚರ್ಚಿಸಿದ್ದಾಗ್ಯೂ ಕೆಲವು ರಾಜಕೀಯ ಚಿಂತಕರು ಈ ಸಾರ್ವಭೌಮತ್ವ ಪದವನ್ನು ನಾಗರಿಕರ ಮೇಲ ಅನಿರ್ಬಂಧಿತ ಕಾನೂನುಗಳನ್ನೆ ಬಳಸಿ ನಿಯಂತ್ರಿಸುವ ಅಧಿಕಾರವೆಂದು ಬೋಡಿನ್ ಕರೆದಿದ್ದಾರೆ. ಬ್ರೋಫಿಸ್‌ರ ಪ್ರಕಾರ ಇದು ಅತ್ಯುನ್ನತ ರಾಜಕೀಯ ಅಧಿಕಾರ. ಹೀಗೆ ಕಾಲಾನುಕ್ರಮದಲ್ಲಿ ಸಾರ್ವಭೌಮತ್ವ ಚಿಂತನೆಯು ರಾಜ್ಯದ ಅತ್ಯುನ್ನತ ಸ್ಥಾನವೆಂದು ಪರಿಗಣಿಸಲ್ಪಟ್ಟಿದ್ದರೂ ಸಹ ಇದನ್ನು ವಿರೋಧಿಸುವ ಚಟುವಟಿಕೆಗಳು ಕಂಡು ಬಂದ ನಂತರವೂ ಮುಂದಿನ ಭಾಗದಲ್ಲಿ ಚರ್ಚಿಸಲಾಗಿದೆ.

## 2.2 ಸಾರ್ವಭೌಮತ್ವ: ಒಂದು ಸ್ಥೂಲ ಚರಿತ್ರೆ

ಒಂದು ನಿರ್ಧರಿತ ಭೂ ಪ್ರದೇಶದಲ್ಲಿರುವ ಸರ್ವ ಅಧಿಕಾರದ ಪರಿಕಲ್ಪನೆಯನ್ನು ಸಾರ್ವಭೌಮ ಅಧಿಕಾರವೆಂದು ಗುರುತಿಸುವುದು ಆಧುನಿಕ ಕಾಲದ ಉಗಮದಲ್ಲಿ ಕಂಡು ಬಂದಿದೆ. ಆದರೆ ಈ ಹೇಳಿಕೆ ಪೂರ್ವಕಾಲಗಳಲ್ಲಿ ಈ ಬಗ್ಗೆ ತಿಳಿದಿರಲಿಲ್ಲವೆಂಬ ಅರ್ಥವನ್ನು ಕೊಡುವುದಿಲ್ಲ. ಕಾರಣ ಸಾರ್ವಭೌಮತ್ವದ ಪದವು ಪೂರ್ವ ಕಾಲದಲ್ಲಿ ಅರ್ಥೈಸಲ್ಪಟ್ಟ ರೀತಿ ಆಧುನಿಕ ರಾಷ್ಟ್ರಗಳಲ್ಲಿ ಇದು ಅರ್ಥೈಸಲ್ಪಡುವ ರೀತಿ ಒಂದನ್ನೊಂದು ಪರಾವಲಂಬಿಯಾದರು ಒಂದೇ ತೆರನಾಗಿರಲಿಲ್ಲ. ಉದಾ:ಗ್ರೀಕ್ ಸಮಾಜಗಳು ಸಮೃದ್ಧಿ ಹೊಂದಿದ ಸಮುದಾಯಗಳಾಗಿದ್ದರೂ ಅವರಿಗೆ ಸಾರ್ವಭೌಮ ಅಧಿಕಾರವೆಂಬುದು ರಾಜ ಅಥವಾ ಸಮುದಾಯಕ್ಕೆ ಸೀಮಿತವಾಗಿದ್ದ ಅಧಿಕಾರವಾಗಿತ್ತು. ಕಾನೂನನ್ನು ಇವರು ತಮ್ಮ ಗುರುವೆಂದು ಪರಿಗಣಿಸಿದ್ದರು. ಅಂತೆಯೇ ಅರಿಸ್ಟಾಟಲ್‌ರವರ ಸಂವಿಧಾನದ ವಿಂಗಡಣೆ ಸಹ ಈ ಸಾರ್ವಭೌಮ ಅಧಿಕಾರ ಒಬ್ಬರ ಕೆಲವರ ಅಥವಾ ಹಲವಾರು ಜನರ ಕೈಯಲ್ಲಿರುತ್ತಿತ್ತು. ರೋಮನ್‌ರ ಕಾಲದಲ್ಲಿ ರೋಮನ್ನರೇ ಸರ್ವಾಧಿಕಾರ ಹೊಂದಿದವರೆಂದು ಗುಲಾಮರಿಂದ ವಿಶ್ಲೇಷಿಸಲ್ಪಡುತ್ತಿತ್ತು. ಮಧ್ಯಕಾಲದಲ್ಲಿ ಮತ್ತು ಊಳಿಗಮಾನ್ಯ ಪದ್ಧತಿಯಲ್ಲಿ ಚರ್ಚ್ ಮತ್ತು ಭೂ ಒಡೆತನ ಹೊಂದಿದವರನ್ನು ಸರ್ವಾಧಿಕಾರದೊಂದಿಗೆ ಗುರುತಿಸಲು ಸಾಧ್ಯವಾಗುತ್ತಿತ್ತು ಹೀಗೆ ಸರ್ವಾಧಿಕಾರ

ಎಂಬುದು ಅಧಿಕಾರದ ಉಚ್ಛ್ರಾಯ ಸ್ಥಿತಿಯಾಗಿದ್ದು, ಪರಮಾಧಿಕಾರ ಎಂದು ಕೂಡ ಸಾವರ್ನಿಟಿ ಎಂಬ ಪದವನ್ನು ತರ್ಜುಮೆ ಮಾಡುವಾಗ ಬಳಸಲಾಗುತ್ತದೆ.

ಮುಂದುವರೆದು ಮಧ್ಯಕಾಲೀನ ಧಾರ್ಮಿಕ ಚಿಂತನೆಗಳನ್ನು ಅಧ್ಯಯನಿಸಿದಾಗ ಲಾರ್ಡ್‌ಬ್ರೈಸ್‌ರವರು ಹೇಳುವಂತೆ ಧಾರ್ಮಿಕ ಕೇಂದ್ರಗಳು ಪರಮಾಧಿಕಾರಿ ಕೇಂದ್ರಗಳಾಗಿ ಅಸ್ತಿತ್ವದಲ್ಲಿದ್ದವು. ಜನರು ಕಾಲಾನುಕ್ರಮದಲ್ಲಿ ಈ ಧಾರ್ಮಿಕ ಸಂಸ್ಥೆಗಳ ಮುಖ್ಯ ಪುರೋಹಿತರುಗಳನ್ನು ಮತ್ತು ರಾಜ್ಯಗಳ ಒಡೆಯನಾದ ರಾಜನು ಸಾರ್ವಭೌಮ ಮತ್ತು ಪರಮಾಧಿಕಾರ ಹೊಂದಿದವರೆಂದು ಗುರುತಿಸುವ ಪ್ರಯತ್ನಗಳು ನಡೆದಾಗ ಇವೆರಡರ ನಡುವಿನ ಅಧಿಕಾರದ ಹೋರಾಟ ಬಹುಶಃ ಬಹುತ್ವ ಚರ್ಚೆಯ ಪ್ರಾರಂಭಕ್ಕೆ ಕಾರಣವಾಗಿರಬಹುದು.

## 2.3 ಸಾರ್ವಭೌಮತ್ವ: ವಿವಿಧ ಸಿದ್ಧಾಂತಗಳು

ಸಾರ್ವಭೌಮತ್ವದ ಒಂದು ಮುಖ್ಯ ಲಕ್ಷಣವೆಂದರೆ ಇದು ವಿವಿಧ ಸಂದರ್ಭಗಳಲ್ಲೂ ವಿಧವಿಧವಾಗಿ ಜನರಿಂದ ಅರ್ಥೈಸಲ್ಪಡುತ್ತಿತ್ತು. ಹೀಗಾಗಿ ಕಾಲಾನುಕ್ರಮದಲ್ಲಿ ಈ ಚರ್ಚೆಯ ಮೂಲಭೂತ ವಿಚಾರಗಳು ಅದನ್ನು ಪ್ರತಿಪಾದಿಸಿದ ಚಿಂತಕರ ವೈವಿಧ್ಯತೆಗಳನ್ನು ಪ್ರತಿಪಾದಿಸುವಂತಾಗಿ ವಿವಿಧ ಅಧ್ಯಯನ ಮಾರ್ಗಗಳ ಮುಖಾಂತರ ವಿವರಿಸಲ್ಪಟ್ಟಿದೆ. ಇವುಗಳಲ್ಲಿ ಪ್ರಮುಖ ಸಿದ್ಧಾಂತಗಳೆಂದರೆ.

**1. ಶಾಸನ ಬದ್ಧವಾದ ಪರಮಾಧಿಕಾರ**

ಈ ಚರ್ಚೆಯನ್ನು ಹಾಬ್ಸ್, ಬೆಂಥ್ಯಾಮ್, ಆಸ್ಟಿನ್ ಇವರುಗಳು ಪ್ರತಿಪಾದಿಸಿದ್ದಾರೆ. 16ನೇ ಶತಮಾನದಲ್ಲಿ ಪ್ರಚಲಿತಗೊಂಡ ಈ ಚಿಂತನೆ ಫ್ರಾನ್ಸ್‌ನ ರಾಜತ್ವವು ಯಾವ ರೀತಿಯಲ್ಲಿ ಆ ಸಮಾಜದ ಸಂಪೂರ್ಣ ಭದ್ರತೆಯನ್ನು ನೀಡುತ್ತಿತ್ತೊ ಅದರ ಆಧಾರದ ಮೇಲೆ ರಚಿತವಾಗಿದೆ ಎನ್ನಬಹುದು. ರಾಜನನ್ನು ಈ ದೃಷ್ಟಿಯಲ್ಲಿ ಕಾನೂನಿನ ಕರ್ತವ್ಯ ಹಾಗೂ ಕಾನೂನನ್ನು ಆಚರಣೆಗೆ ತರುವವರು ಎಂದು ಗುರುತಿಸಲಾಗಿದೆ.

ಭೋಡಿನ್ ಈ ರೀತಿಯ ವಿಷಯವನ್ನು ಕೇಂದ್ರ ಬಿಂದುವಾಗಿಟ್ಟುಕೊಂಡ ಸರ್ವಾಧಿಕಾರತ್ವದ ಸಿದ್ಧಾಂತವನ್ನು ಪ್ರತಿಪಾದಿಸಿದರು. ಸರ್ವಾಧಿಕಾರವು ಇವರ ಪ್ರಕಾರ ಸಂಪೂರ್ಣವಾಗಿ ಎಲ್ಲ ನಾಗರಿಕರ ಮೇಲೆ ಕಟ್ಟುನಿಟ್ಟಾಗಿ ಹೇರಲ್ಪಟ್ಟಿದ್ದು, ಆದರೆ ಅದೇ ಕಾನೂನು ಇವರನ್ನು (ರಾಜನನ್ನು) ಯಾವುದೇ ರೀತಿ ನಿಯಂತ್ರಿಸಲು ಸಾಧ್ಯವಿಲ್ಲ ಇಂತಹ ಅಧಿಕಾರವು ಯಾವ ರೀತಿಯಲ್ಲಿಯೂ ವಿಭಜಿಸಲಾಗದ ಅಧಿಕಾರವೆಂದು ಇವರು ಅಭಿಪ್ರಾಯಪಟ್ಟಿದ್ದಾರೆ. ಮುಂದುವರೆದು ಬೋಡಿನ್‌ರ ಪ್ರಕಾರ ರಾಜನು ನಾಗರಿಕ ಸಮಾಜದ ಎಲ್ಲ ಕಾನೂನುಗಳಿಗಿಂತ ಮಿಗಿಲಾಗಿದ್ದರೂ ಆತ ನೈಸರ್ಗಿಕ ಕಾನೂನು ಮತ್ತು ದೇವರ ಕಾನೂನಿನ ಹಿಡಿತಕ್ಕೆ ಒಳಪಡುತ್ತಾನೆ ಹೀಗೆ ಬೋಡಿನ್ ರಾಜನ ಅಧಿಕಾರವನ್ನು ನಿಯಂತ್ರಿಸುವ ಚರ್ಚೆ ಮಂಡಿಸಿದರು.

ಥಾಮಸ್ ಹಾಬ್ಸ್ ಇಂತಹ ಚರ್ಚೆಯನ್ನು ಮುಂದುವರಿಸಿ ಸಾರ್ವಭೌಮ ಅಧಿಕಾರಕ್ಕೆ ಯಾವುದೇ ನೈತಿಕ ನಿಯಂತ್ರಣಗಳಲ್ಲಿ ಎಂದು ಪ್ರತಿಪಾದಿಸುತ್ತಾ ಅವರ ಸಾಮಾಜಿಕ ಒಪ್ಪಂದದ ಚರ್ಚೆಯಲ್ಲಿ ಸಾರ್ವಭೌಮತ್ವ ಈ ಒಪ್ಪಂದದ ಒಂದು ಅಂಗವಲ್ಲ. ಆದರೆ ವ್ಯಕ್ತಿಗಳು ಅನಿರ್ಭಂಧಿತವಾಗಿ ಯಾವುದೇ ಪೂರ್ವಾಯೋಜಿತ ನಿರ್ಧಾರಗಳಿಲ್ಲದೇ ತಮ್ಮ ಸಂಪೂರ್ಣ ಅಧಿಕಾರವನ್ನು ರಾಜನಿಗೆ ವಹಿಸಿರುತ್ತಾರೆ ಎಂದಿದ್ದಾರೆ. ಒಬ್ಬ ಸಾರ್ವಭೌಮನು ಈ ರೀತಿಯಾಗಿ ಅಧಿಕಾರವನ್ನು ಪಡೆದಲ್ಲಿ ಅನಿಯಂತ್ರಿತ ಅಧಿಕಾರವನ್ನು ಹೊಂದಿದವನಾಗಿ ಬೇಜವಾಬ್ದಾರಿಯಾಗಿ ಯಾವುದೇ ಕಾನೂನಿನ ಹಿಡಿತಕ್ಕೆ ಒಳಗಾಗದೇ ಇರುವ ದೈವತಾ ಅವತಾರವನ್ನು ಸಹ ಹೊಂದಬಹುದಾಗಿದೆ ಅವನ ಇಚ್ಛೆಯೇ ಇಲ್ಲಿ ಕಾನೂನಾಗಿ ಅವನು ಜನರನ್ನು ಸರ್ವಕಾಲದಲ್ಲಿಯೂ ಪ್ರತಿನಿಧಿಸುತ್ತಾನೆ ಹಾಬ್ಸ್‌ನ

ಪ್ರಕಾರ ಈ ಅಧಿಕಾರವು ಪ್ರತಿರಾಜ್ಯಕ್ಕೂ ಅವಶ್ಯಕವಾದದ್ದು. ಇದನ್ನು ವಿಭಜಿಸಲು ನಿಯಂತ್ರಿಸಲು ಸಾಧ್ಯವಿಲ್ಲ ಮತ್ತು ಇಂತಹ ಅಧಿಕಾರವಿಲ್ಲದಿದ್ದಲ್ಲಿ ಉತ್ತಮ ಸರ್ಕಾರವು ಇರುವುದಿಲ್ಲವೆಂದು ಅಭಿಪ್ರಾಯಪಟ್ಟಿದ್ದಾನೆ. ಹಾಬ್ಸ್‌ನ ನಂತರದಲ್ಲಿ ಪರಮಾಧಿಕಾರದ ಪರಿಕಲ್ಪನೆಗೆ ಬೆಂಥ್ಯಾಮ್ ಸರಿಯಾದ ಸ್ವರೂಪವನ್ನು ನೀಡಲು ಪ್ರಯತ್ನಿಸಿರುವನು. ಇವರ ಪ್ರಕಾರ ಪರಮಾಧಿಕಾರವು ಉಚ್ಛ್ರಾಯ ಮಟ್ಟದ ಕಾನೂನನ್ನು ರಚಿಸುವ ಅಧಿಕಾರ ಇವರ ಪ್ರಕಾರ ಕಾನೂನಿನ ಉಗಮವು ನೈಸರ್ಗಿಕವಲ್ಲ ಇದು ಪರಮಾಧಿಕಾರಿಯೇ ಎಂಬುದಾಗಿದೆ.

ಜಾನ್ ಆಸ್ಟಿನ್‌ರವರು 1832ರಲ್ಲಿ ಶಾಸನ ಬದ್ಧ ಪರಮಾಧಿಕಾರದ ಬಗ್ಗೆ ನ್ಯಾಯಾಂಗ ಸಿದ್ಧಾಂತದ ತಮ್ಮ ಭಾಷಣದಲ್ಲಿ ಪ್ರತಿಪಾದಿಸಿದ್ದನ್ನು ಕಾಣಬಹುದು. ಇವರ ಪ್ರಕಾರ ಸಾಧಾರಣವಾಗಿ ಯಾವ ವ್ಯಕ್ತಿಯು ಸಾಮಾನ್ಯ ಜನರಂತೆ ತನಗಿಂತ ಹಿರಿಯರಿಗೆ ಗೌರವ ಸೂಚಿಸುವ ಕಾರ್ಯವನ್ನು ಎಸಗುವುದಿಲ್ಲವೋ ಅವನನ್ನೇ ಪರಮಾಧಿಕಾರಿಯೆನ್ನಬಹುದು. ಕಾನೂನು ಇವನ ನಿರ್ದೇಶನವಾಗಿದ್ದು ಮೇಲಧಿಕಾರಿಯು ಕೆಳಗಿನ ಅಧಿಕಾರಿಗೆ ನೀಡಿದ ನಿರ್ದೇಶನವೇ ಇದಾಗುತ್ತದೆ. ಇಡೀ ಸಮಾಜದ ಎಲ್ಲ ಸದಸ್ಯರು ಈ ಪರಮಾಧಿಕಾರಿಯನ್ನೇ ಅವಲಂಬಿಸಿರುತ್ತಾರೆ. ಈ ಅಧಿಕಾರಿಯೇ ಎಲ್ಲ ನೇರವಾದ ಮತ್ತು ಪರೋಕ್ಷವಾದ ಕಾನೂನೆ ಕಾರಣಕರ್ತನೆಂದು ತಿಳಿಸಿದ್ದಾನೆ. ಹೀಗೆ ಆಸ್ಟಿನ್‌ರ ಪ್ರಕಾರ ಸರ್ವಾಧಿಕಾರವು ಅತ್ಯಂತ ಕೊನೆಯ ಅಧಿಕಾರವಾಗಿರುತ್ತದೆ. ಇದು ಅನಿಯಂತ್ರಿತ ಅಧಿಕಾರವಾಗಿರುತ್ತದೆ. ಇದು ನಿರ್ದೇಶನ ನೀಡುವ ಅಧಿಕಾರವನ್ನು ಹೊಂದಿರುತ್ತದೆ ಎಂದು ವಿವರಿಸಿದ್ದಾರೆ.

### ರಾಜಕೀಯ ಪರಮಾಧಿಕಾರ

ಜಾನ್ ಲಾಕ್ ಇದರ ಪ್ರತಿಪಾದಕ ಇವರ ಪ್ರಕಾರ ನಾಗರಿಕ ಸಮಾಜವು ಅತ್ಯುನ್ನತ ವಿಧಿಬದ್ಧ ಅಧಿಕಾರವನ್ನು ಹೊಂದಿರುತ್ತದೆ. ಶಾಸಕಾಂಗವು ಜನರಿಂದ ಆಯ್ಕೆಗೊಂಡದ್ದಾದ್ದರಿಂದ ಇದು ವಿಧಿಬದ್ಧವಾಗಿ ಅಧಿಕಾರಯುಕ್ತವಾದದ್ದು. ಶಾಸಕಾಂಗದೊಂದಿಗೆ ಹೊಂದಿಕೊಂಡ ವಿಧಿಬದ್ಧ ಅಧಿಕಾರವೇ ಕಾರ್ಯಾಂಗ ಎಂಬುದು. ಇವರ ಸರಕಾರವು ಅಧಿಕಾರವನ್ನು ಹೊಂದಿದ್ದರೂ ಪರಮೋಚ್ಚ ಅಧಿಕಾರವು ನಾಗರಿಕ ಸಮಾಜದ ಹಿಡಿತದಲ್ಲಿರುತ್ತದೆ. ಈ ದಿಸೆಯಲ್ಲಿ ಪರಮಾಧಿಕಾರವು ಸಾರ್ವಜನಿಕರಲ್ಲಿಯೂ ಮತ್ತು ಸರ್ಕಾರದಲ್ಲಿಯೂ ಇರುತ್ತದೆ ಇವೆರಡೂ ಅಧಿಕಾರವು ಒಮ್ಮೆಗೆ ಆಚರಣೆಗೆ ಬರದಿದ್ದರೂ ಅವಶ್ಯಕತೆಯ ಆಧಾರದ ಮೇಲೆ ಇವು ಆಚರಣೆಗೆ ಬರುತ್ತವೆ. ಉದಾ: ಸಾಧಾರಣ ಸಂದರ್ಭಗಳಲ್ಲಿ ಸರ್ಕಾರಗಳು ಕಾರ್ಯನಿರ್ವಹಿಸುತ್ತಿದ್ದರೆ, ಸರ್ಕಾರಗಳೇ ಸರಿಯಾಗಿ ಕಾರ್ಯ ನಿರ್ವಹಿಸದ ಸಂದರ್ಭದಲ್ಲಿ ನಾಗರಿಕರು ತಮ್ಮ ಅಧಿಕಾರವನ್ನು ಬಳಸುತ್ತಾರೆ ಎಂದಿದ್ದಾರೆ.

ಲಾಕ್‌ರವರ ಈ ಪರಮಾಧಿಕಾರ ತತ್ವವು ಮಹಾಕ್ರಾಂತಿಗೆ ಬೆಂಬಲವಾಗಿದ್ದ ಯಾವುದೇ ಸಂದರ್ಭದಲ್ಲಿ ಸರ್ಕಾರಗಳು ಸರಿಯಾಗಿ ಕಾರ್ಯ ನಿರ್ವಹಿಸುದ ಸಂದರ್ಭದಲ್ಲಿ ಜನರು ಈ ಅಧಿಕಾರವನ್ನು ಕೈಗೆ ತೆಗೆದುಕೊಳ್ಳುತ್ತಾರೆ ಎಂದಿದ್ದಾರೆ. ಇಂತಹುದೇ ಚಿಂತನೆ ಮಾಂಟೆ ಸ್ಕ್ಯೂರವರ ಅಧಿಕಾರ ವಿಭಜನಾ ಸಿದ್ಧಾಂತದಲ್ಲೂ ಕಂಡು ಬರುತ್ತದೆ.

### ಜನಪ್ರಿಯ ಪರಮಾಧಿಕಾರ

ರಾಜಕೀಯ ಪರಮಾಧಿಕಾರವನ್ನು ರೂಸೋರವರು ಜನಪ್ರಿಯ ಅಧಿಕಾರವಾಗಿ ಪರಿವರ್ತಿಸಿದರು. ಇವರ ಪ್ರಕಾರ ಜನರೇ ಎಲ್ಲಾ ರೀತಿಯ ಅಧಿಕಾರಕ್ಕೂ ಕಾರಣಕರ್ತರು. ಇವರ ಪ್ರಕಾರ ಜನರು ಒಂದು ಭೌಗೋಳಿಕ ಅಂಶವನ್ನು ಪ್ರತಿನಿಧಿಸುವ ಸಂಖ್ಯೆ. ರಾಜ್ಯ ಮತ್ತು ಪರಮಾಧಿಕಾರವು ಈ ಜನರ ಒಂದು ಅಂಗ. ಈ ಜನರು ತಮ್ಮನ್ನು ತಾವೇ ಆಳಿಕೊಳ್ಳಬಲ್ಲರು ಆದರೂ ಇವರು ಕೆಲವು ವಿಶ್ವದಾದ್ಯಂತ ಒಪ್ಪಿಗೆ ಪಡೆದ ಅಂಶದ ಆಧಾರದ ಮೇಲೆ ಎಲ್ಲ ಜನರಿಗೂ ನ್ಯಾಯವನ್ನು ಒದಗಿಸಿಕೊಡುವ ಸಲುವಾಗಿ ನಾಗರಿಕರಾಗಿ ಪರಮಾಧಿಕಾರವನ್ನು, ಪ್ರಜೆಗಳಾಗಿ ಆ ಪರಮಾಧಿಕಾರದ ಕಾನೂನುಗಳನ್ನು ಗೌರವಿಸುವವರಾಗಿದ್ದಾರೆ ಎಂದಿದ್ದಾರೆ. ಇವರ ದೃಷ್ಟಿಯಲ್ಲಿ ನಾಗರಿಕ ಸಮಾಜವು ಒಂದು ಸಾರ್ವಜನಿಕ ವ್ಯಕ್ತಿತ್ವ ಇದು ನೈತಿಕವಾಗಿಯೂ ಹಾಗೂ ಒಟ್ಟುಗೂಡಿಕೊಂಡು ಇರುವ ಸಂಸ್ಥೆಯಾಗಿದೆ.

ಇವರ ಪ್ರಕಾರ ಸಾರ್ವಜನಿಕ ಇಚ್ಛೆಯು ಸಾರ್ವಜನಿಕ ಒಳಿತನ್ನು ಬಯಸುವ ವರಿಷ್ಠ ಶಕ್ತಿಯಾಗಿದ್ದು ಇದು ಖಡಾಖಂಡಿತವಾಗಿ ಕೊಟ್ಟ ಕೊನೆಯ ನಿರ್ದೇಶನಾಧಿಕಾರವನ್ನು ಹೊಂದಿರುತ್ತದೆ.

ಇಂತಹ ಜನಪ್ರಿಯ ಪರಮಾಧಿಕಾರದ ಚರ್ಚೆಯನ್ನು ಬೆಳೆಸಿದ ರೂಸೋರವರು ಜನರ ಈ ಅಧಿಕಾರವನ್ನು ದೇವರ ಧ್ವನಿಯೆಂದು ಗುರುತಿಸಿದ್ದಾರೆ. ಆದರೆ ಜನರು ಎಂದಾಗ ಇಂತಹವರು ಎಂದು ಗುರುತಿಸಲು ಸಾಧ್ಯವಾಗದೇ ಇರುವುದರಿಂದ ಆಧುನಿಕ ಪ್ರಜಾಪ್ರಭುತ್ವಗಳಲ್ಲಿ ಮತ್ತು ಕಲ್ಯಾಣ ರಾಷ್ಟ್ರಗಳಲ್ಲಿ ಇದು ಪರಿಪೂರ್ಣ ಚರ್ಚೆ ಸಾಧ್ಯವಿಲ್ಲ. ಆದರೆ ಈ ಚರ್ಚೆಯಿಂದ ತಿಳಿಯಬಹುದಾದ ಅಂಶಗಳೆಂದರೆ 1) ಸರ್ಕಾರಗಳು ಜನರ ಒಳಿತಿಗಾಗಿ ಅಸ್ತಿತ್ವದಲ್ಲಿರುತ್ತದೆ ಎಂಬುದನ್ನು 2) ಜನರ ಆಸೆ ಆಕಾಂಕ್ಷೆಗಳನ್ನು ಸರಿಯಾಗಿ ಸ್ಪಂದಿಸದಿದ್ದರೆ ಅವರನ್ನು ವಿರೋಧಿಸುವ ಚಳುವಳಿ ಆಗುವ ಸಾಧ್ಯತೆಗಳಿವೆ ಎಂಬುದು. 3) ಸಾರ್ವಜನಿಕರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಶಾಸನಬದ್ಧವಾದ ಮಾರ್ಗಗಳಿರಬೇಕೆಂಬುದೂ ಮತ್ತು ಸರ್ಕಾರಗಳು ಚುನಾವಣೆ ಅಧಿಕಾರ ವಿಕೇಂದ್ರೀಕರಣ ಮತ್ತಿತರೇ ಮಾರ್ಗಗಳ ಮೂಲಕ ಜನರಿಗೆ ನೇರವಾಗಿ ಜವಾಬ್ದಾರಿಯಾಗಿರಬೇಕೆಂಬುದು ಕೊನೆಯದಾಗಿ ಸರ್ಕಾರಗಳು ಕಾನೂನಿನ ಪ್ರಕಾರ ಅಧಿಕಾರವನ್ನು ಚಲಾಯಿಸಬೇಕೆಂಬುದು.

## 2.4 ಬಹುತ್ವ ಸಿದ್ಧಾಂತದ ಅರ್ಥ ಮತ್ತು ಬೆಳವಣಿಗೆ

ಇಲ್ಲಿಯವರೆಗೆ ಬಹುತ್ವ ಸಿದ್ಧಾಂತದ ಬೆಳವಣಿಗೆಯ ಹಿಂದಿನ ಹಿನ್ನೆಲೆಯನ್ನು ಅಧ್ಯಯನಿಸಿದ್ದೀರಿ, ಇದರಂತೆ ಬಹುತ್ವವಾದವು ಪರಮಾಧಿಕಾರದ ಚರ್ಚೆಯ ಹಿನ್ನೆಲೆಯಲ್ಲಿ ತನ್ನ ಅಸ್ತಿತ್ವ ಕಂಡುಕೊಂಡಿದೆ ಎಂಬುದು ಸಮಾಜದಲ್ಲಿ ಆರ್ಥಿಕ ಅಂಶಗಳ ಅಭಿವೃದ್ಧಿ ಹೊಂದಿದ ವಿಜ್ಞಾನ ತಂತ್ರಜ್ಞಾನದಿಂದ ಕಾಲ ಬದಲಾದಂತೆ ಸಮಾಜದಲ್ಲಿ ಪ್ರಜ್ಞೆ ಮೂಡಿದಂತೆ ಚಿಂತನೆಗಳು ಬದಲಾಗಿ ಹೊಸ ವಿಚಾರಗಳು ಅಸ್ತಿತ್ವಕ್ಕೆ ಬಂದವು. ಇಂತಹ ಬೆಳವಣಿಗೆಯ ಅಸ್ತಿತ್ವದಲ್ಲಿರುವ ಚಿಂತನೆಗೆ ಅಧಿಕಾರಕ್ಕೆ ಸವಾಲಾಗಿ ಕಂಡು ಬರುವುದು ಆಶ್ಚರ್ಯಕರವಲ್ಲ ಹೀಗಾಗಿ 19ನೇ ಶತಮಾನದಲ್ಲಿ ರಾಜ್ಯವನ್ನು ಉನ್ನತ ಅಧಿಕಾರವೆಂದು ಪರಿಗಣಿಸುವುದಕ್ಕಿಂತ ಸಮಾಜದಲ್ಲಿರುವ ಹಲವಾರು ಸಂಘಟನೆಗಳಲ್ಲಿ ರಾಜ್ಯವೂ ಒಂದು ಸಂಘಟನೆ ಎಂಬ ಅಭಿಪ್ರಾಯ ಬೆಳೆಯಿತು.

ಹೀಗೆಯೇ ರಾಜ್ಯದಲ್ಲಿನ ಕಾನೂನುಗಳೂ ಸಹ ಆಯಾ ಸಮಾಜದ ಬೆಳವಣಿಗೆಯೊಂದಿಗೆ ಅಭಿವೃದ್ಧಿ ಹೊಂದಿದ ಸಾಂಪ್ರದಾಯಗಳು ಕಟ್ಟಳೆಗಳು ಎಂಬ ಚರ್ಚೆಯೂ ಬೆಳೆದು ಇಂತಹ ಕಟ್ಟಳೆಗಳು ರಾಜ್ಯದಲ್ಲಿ ನಿಯಂತ್ರಣವನ್ನು ತರುವುದರೊಂದಿಗೆ ಆಧುನಿಕ ಸಮಾಜದಲ್ಲಿ ಕಾನೂನಾಗಿ ಪರಿವರ್ತನೆ ಹೊಂದಿದೆ ಎಂದಿದ್ದಾರೆ. ಇಂತಹ ಚರ್ಚೆಗಳು ಪರಮಾಧಿಕಾರದ ಚರ್ಚೆಗಳಾಗಿ ವಿರೋಧಿ ಚರ್ಚೆಗಳಾಗಿ ಬೆಳೆದು ಪರಮಾಧಿಕಾರವನ್ನು ತಿಳಿಗೊಳಿಸಿ ಪರಮಾಧಿಕಾರದ ಇಚ್ಛೆಯೇ ಕಾನೂನು ಎಂಬ ಚರ್ಚೆ ಅಲ್ಲಗಳೆದು ಪರಮಾಧಿಕಾರ ಅಸ್ತಿತ್ವಕ್ಕೆ ಬರುವ ಮೊದಲೇ ಕಾನೂನು ಅಸ್ತಿತ್ವದಲ್ಲಿತ್ತು ಎಂಬ ಚರ್ಚೆಗಳು ಬಹುತ್ವ ಸಿದ್ಧಾಂತದ ಉಗಮಕ್ಕೆ ಕಾರಣವಾಗಿವೆ ಇಂತಹ ಹೊಸ ಚರ್ಚೆಗಳು ರಾಜ್ಯದ ಪರಮಾಧಿಕಾರವನ್ನು ಕೇವಲ ಒಂದು ಭೌಗೋಳಿಕ ಪ್ರದೇಶದಲ್ಲಿಯೇ ಎಂಬುದು ಅಂತರರಾಷ್ಟ್ರೀಯ ಮಟ್ಟದಲ್ಲಿಯೂ ಅಲ್ಲಗಳೆದಿರುವುದನ್ನು ನಾವು ಕಂಡುಕೊಳ್ಳಬಹುದು. ಯಾವುದೇ ಪರಮಾಧಿಕಾರ ಸಿದ್ಧಾಂತವು ಅಂತರರಾಷ್ಟ್ರೀಯ ಮಟ್ಟದಲ್ಲಿ ಕೇವಲ ಒಂದೇ ರಾಜ್ಯಕ್ಕೆ ಸರ್ವಾಧಿಕಾರವನ್ನು ನೀಡಲು ಕಾರಣ ಹಾಗೂ ಇತರೇ ರಾಷ್ಟ್ರಗಳು ತಮ್ಮ ಸ್ವಗೌರವವನ್ನು ದೃಷ್ಟಿಯಲ್ಲಿಟ್ಟುಕೊಂಡು ಅಂತರರಾಷ್ಟ್ರೀಯ ಮಟ್ಟದಲ್ಲೂ ಪರಿಗಣಿಸುವುದರಿಂದ ಯಾವ ಒಂದು ರಾಜ್ಯಕ್ಕೂ ಮಿತಿಮೀರಿದ ಅಧಿಕಾರವಿಲ್ಲ. ಇಂತಹ ನವ ಚಿಂತನೆಯ ಪ್ರಕಾರಗಳು ಸರ್ವವ್ಯಾಪಿ ರಾಜ್ಯದ ಕಲ್ಪನೆಗಳನ್ನು ಅಲ್ಲಗಳೆದುದರ ಕಾರಣ ಬಹುತ್ವ ಸಿದ್ಧಾಂತವು ತನ್ನ ಚಾರಿತ್ರಿಕ ಹಿನ್ನೆಲೆಯಲ್ಲಿ ಬೆಳೆದು ನಿಂತಿರುವುದನ್ನು ಗಮನಿಸಬಹುದಾಗಿದೆ.

ಅರ್ಥ

ಬಹುತ್ವವಾದವು ರಾಜ್ಯಶಾಸ್ತ್ರೇತರ ಸಮಾಜ ವಿಜ್ಞಾನಿಗಳ ಚಿಂತನೆಯಿಂದ ಬೆಳೆದು ಬಂದಿದ್ದರೂ ಇದರ ಚರ್ಚೆ ರಾಜಕೀಯ ಸಮಾಜಶಾಸ್ತ್ರಜ್ಞರು ಹಾಗೂ ಚರಿತ್ರೆಕಾರರ ಚರ್ಚೆಗಳಿಂದ ಪ್ರಭಾವಿತಗೊಂಡಿದೆ. ಆದಾಗ್ಯೂ ಈ ಚರ್ಚೆಯು ರಾಜಕೀಯದ ಮೂಲಭೂತ ಚರ್ಚೆಗಳಲ್ಲಿ ಒಂದಾಗಿದ್ದ ಪರಮಾಧಿಕಾರ ಅವಿಭಾಜ್ಯ ಅಂಗವಾಗಿ ಬೆಳೆದು ನಿಂತಿದೆ. ಲಿಂಡ್‌ಸೋ ಅವರ ಪ್ರಕಾರ ರಾಜ್ಯವು ಬೇರೆ ಸಾಮಾಜಿಕ ಸಂಘಟನೆಗಳಂತೆ ಇರುವ ಒಂದು ಸಂಘಟನೆ ಹಾಗೂ ಇದು ತನ್ನದೇಯಾದ ವ್ಯಕ್ತಿತ್ವವನ್ನು ಹೊಂದಿದೆ ಎಂತಲೂ ಚರ್ಚಿಸಿದ್ದಾರೆ. ಮ್ಯಾಕೈವರ್‌ರವರು ಈ ಬಗ್ಗೆ ವ್ಯಾಖ್ಯಾನಿಸುತ್ತಾ ರಾಜ್ಯಕ್ಕೂ ಸಮಾಜದಲ್ಲಿನ ಇತರೇ ಸಂಘಟನೆಗೂ ಯಾವುದೇ ವ್ಯತ್ಯಾಸಗಳಿಲ್ಲ ಆದರೆ ಈ ಸಂಘಟನೆಗಳು ರಾಜ್ಯದಂತೆ ಶಿಕ್ಷಿಸುವ ಹಾಗೂ ನಿಯಂತ್ರಿಸುವ ಕೆಲವು ಅಧಿಕಾರಗಳನ್ನು ಹೊಂದಿರುವುದಿಲ್ಲ ಎಂದಿದ್ದಾರೆ. ಬಹುತ್ವವಾದವು ಈ ನಿಟ್ಟಿನಲ್ಲಿ ಒಂದು ಅನಿರ್ಬಂಧಿತ ಸಮಾಜದ ಪ್ರಜ್ಞಾಪೂರ್ವಕ ಹೇಳಿಕೆಯಾಗಿ ಕಂಡು ಬರುತ್ತದೆ.

**ಬಹುತ್ವವಾದದ ಬೆಳವಣಿಗೆ**

ಬಹುತ್ವ ಸಿದ್ಧಾಂತವು ಮೊದಲಿಗೆ ಗಿರ್ಕೆ ಎಂಬ ಜರ್ಮನ್ ಬರಹಗಾರ ಮೇಕ್‌ಲ್ಯಾಂಡ್ ಎಂಬ ಇಂಗ್ಲಿಷ್ ಬರಹಗಳಲ್ಲಿ 13ನೇ ಶತಮಾನದ ಪೂರ್ವದಲ್ಲಿ ಬೆಳಕಿಗೆ ಬಂದಿದೆ. ಫಿಗ್ಗೀಸ್, ಸಿಡ್ನಿವೆಬ್, ಲಿಂಡ್‌ಸೇ, ಕ್ರಾಬೆ, ಬಾರ್ಕ್‌ರ್, ಲಾಸ್ಕಿ ಮೊದಲಾದವರು ಪರಮಾಧಿಕಾರ ಸಿದ್ಧಾಂತವನ್ನು ಟೀಕಿಸುವ ಸಂದರ್ಭದಲ್ಲಿ ಬಹುತ್ವವಾದಕ್ಕೆ ಬೆಂಬಲ ನೀಡಿದ್ದಾರೆ. ಇವರು ತಮ್ಮ ಚರ್ಚೆಗಳನ್ನು ಈ ಕೆಳಕಂಡ ಅಂಶಗಳ ಮೇಲೆ ಆಧಾರಿತವಾಗಿಟ್ಟುಕೊಂಡಿದ್ದರು.

1) ರಾಜ್ಯವು ಸಮಾಜದಲ್ಲಿನ ಇತರೇ ಸಂಘಟನೆಗಳಂತೆ ಒಂದು ಸಂಘವೆಂಬುದು.

2) ಕಾನೂನುಗಳು ಸರ್ವಾಧಿಕಾರಿಯೇ ಅಥವಾ ಪರಮಾಧಿಕಾರದ ನಿರ್ದೇಶನವಲ್ಲ.

3) ಅಂತರರಾಷ್ಟ್ರೀಯ ಮಟ್ಟದಲ್ಲಿ ರಾಜ್ಯವು ಸರ್ವಾಧಿಕಾರಿಯಲ್ಲ ಎಂಬುದು

ಇವರು ತಮ್ಮ ಚರ್ಚೆಗಳಲ್ಲಿ ಮಾನವನು ಸಮಾಜದಲ್ಲಿ ಹಲವಾರು ರೀತಿಯಿಂದ ತನ್ನ ಭಾವನೆಗಳನ್ನು ವ್ಯಕ್ತಪಡಿಸುತ್ತಾನೆ. ಗುರಿ ಸ್ಥಾಪಿಸಿಕೊಳ್ಳುತ್ತಾನೆ. ಈ ಸಂದರ್ಭದಲ್ಲಿ ರಾಜ್ಯವನ್ನು ಬಿಟ್ಟಂತೆ ಸಂಸಾರ, ದೇವಸ್ಥಾನ, ರಾಜಕೀಯ ಪಕ್ಷಗಳು, ಮಾರುಕಟ್ಟೆ ಎಂಬ ಹಲವಾರು ಸಂಸ್ಥೆಗಳು ಮಾನವನನ್ನು ಅವನ ಗುರಿಸಾಧಿಸುವಲ್ಲಿ ಬೆಂಬಲಿಸುತ್ತದೆ. ಈ ಸಂಘಟನೆಗಳೂ ಸ್ವಾಯತ್ತತೆಯನ್ನು ಹೊಂದಿದ ಸಂಘಟನೆಗಳಾಗಿ ಜನರ ಸ್ವಾತಂತ್ರ್ಯವನ್ನು ಸ್ಪಂದಿಸಿ ಅವರನ್ನು ಅಭಿವೃದ್ಧಿಯೆಡೆಗೆ ಕರೆದೊಯ್ಯುತ್ತವೆ ಆದ್ದರಿಂದ ಪರಮಾಧಿಕಾರ ರಾಜ್ಯಕ್ಕೆ ಮಾತ್ರ ಸೀಮಿತವಾಗಿರಕೂಡದು ಅದು ಇತರ ಸಂಘ ಸಂಸ್ಥೆಗಳಿಗೂ ಹಂಚಲ್ಪಡಬೇಕು ಎಂಬುದು.

## 2.5 ಬಹುತ್ವವಾದದೆಡೆಗೆ ಲಾಸ್ಕಿಯವರ ಅಭಿಪ್ರಾಯ

ಹೆರಾಲ್ಡ್ ಜೆ ಲಾಸ್ಕಿಯವರು ಬಹುತ್ವ ಸಿದ್ಧಾಂತದ ಪ್ರತಿಪಾದಕರಲ್ಲಿ ಅತ್ಯಂತ ಪ್ರಮುಖರು. ಇವರು ಈ ಸಿದ್ಧಾಂತವನ್ನು ರೂಪಿಸುವಲ್ಲಿ ಪ್ರಯತ್ನವನ್ನು ಮಾಡಿ ಸಫಲರಾದವರು. ಈ ಚಿಂತನೆಯಿಂದ ಸಾಂಪ್ರಾದಾಯಿಕವಾಗಿ ರಾಜಕೀಯ ಸಿದ್ಧಾಂತಗಳನ್ನು ಅವಲಂಬಿಸಿ ಬೆಳೆದಿದ್ದ ಹಲವಾರು ರಾಜಕೀಯ ಸಂಸ್ಥೆಗಳು ಪುನರ್ ವಿಮರ್ಶೆಗೆ ಒಳಗಾದವು. ಲಾಸ್ಕಿಯವರ ಪ್ರಕಾರ ಆಸ್ಟಿನ್‌ರವರ ಪರಮಾಧಿಕಾರಿ ಸಿದ್ಧಾಂತವು ಆಂತರಿಕವಾಗಿ ಒಂದು ಭೌಗೋಳಿಕ ಪ್ರದೇಶದಲ್ಲಿ ಎಲ್ಲ ಸಂಘಟನೆಗಳನ್ನು ವ್ಯಕ್ತಿಗಳನ್ನು ನಿಯಂತ್ರಿಸುವ ಅಧಿಕಾರವನ್ನು ಹೊಂದಿದ್ದು ಯಾವುದೇ ಕಾನೂನಿನ ಪರಿಮಿತಿಯನ್ನು ಹೊಂದದಿದ್ದರೂ ಇದು ನಿಜಕ್ಕೂ ರಾಜಕೀಯ ಚರ್ಚೆಯಲ್ಲಿ ಬೆಳಕಿಗೆ ಬರುವ ಪರಮಾಧಿಕಾರ ತತ್ವವಲ್ಲ. ಕಾರಣ ಇದು 16ನೇ ಶತಮಾನದ ಧಾರ್ಮಿಕ ಹೋರಾಟದಲ್ಲಿ ರಾಜಕೀಯ ಚರ್ಚೆಗೆ ಬೆಂಬಲಿತವಾಗಿ ಬೆಳೆದ ಚಿಂತನೆಯೆಂದು ಗುರುತಿಸಿದ್ದಾರೆ. ಇವರ ಪ್ರಕಾರ ಸರ್ವಾಧಿಕಾರದ ಚರ್ಚೆಯು ಈ ಧಾರ್ಮಿಕ ಹೋರಾಟದ

ಮಧ್ಯೆ ಬೆಳೆದು ಬಂದಿದ್ದರಿಂದ ರಾಜ್ಯದ ಅಸ್ತಿತ್ವವು ಕಳೆದುಹೋದದನ್ನು ತಡೆಯುವ ಪ್ರಯತ್ನವಾಗಿ ಪರಮಾಧಿಕಾರದ ಚರ್ಚೆಯಾಗಿ ಬೆಳೆದು ಬಂದಿದೆ ಎಂದಿದ್ದಾರೆ. ಹೀಗೆ ಲಾಸ್ಕಿಯವರ ಪ್ರಕಾರ ಪರಮಾಧಿಕಾರದ ಚರ್ಚೆಯು ಚಾರಿತ್ರಿಕವಾಗಿ ಬೆಳೆದು ಬಂದ ಚರ್ಚೆಯೇ ಹೊರತು ಶಾಸನಬದ್ಧವಾಗಿ ಬೆಳೆದು ಬಂದದ್ದಲ್ಲ. ಇವರ ಪ್ರಕಾರ ಇಂತಹ ಚರ್ಚೆಯು ಚರಿತ್ರೆಯ ಒಂದು ಘಟ್ಟದಲ್ಲಿ ಕಾಲದ ಅವಶ್ಯಕತೆಗನುಗುಣವಾಗಿ ಕೆಲವು ಕಾರ್ಯವನ್ನು ಪೂರೈಸುವುದಕ್ಕಾಗಿ ಬಂದ ಸಿದ್ಧಾಂತ ಇವರು ಶಾಸನ ಬದ್ಧವಾಗಿ ಅನಿಯಂತ್ರಿತ ಅಧಿಕಾರದ ಯಾವುದೇ ಸಿದ್ಧಾಂತವನ್ನು ಒಪ್ಪಲು ಸಾಧ್ಯವಿಲ್ಲವೆಂದು ಪ್ರತಿಪಾದಿಸಿದ್ದಾರೆ.

ಲಾಸ್ಕಿಯವರ ಪ್ರಕಾರ ರಾಜ್ಯದ ಅಧಿಕಾರದ ಪರಿಮಿತಿಯಲ್ಲಿ ಕಾನೂನು ನಿರ್ದೇಶನವಿದ್ದಂತೆ ಆದರೆ ಆಧುನಿಕ ರಾಜ್ಯಗಳಲ್ಲಿ ನಿರ್ದೇಶನಗಳನ್ನು ಅಲ್ಲಗಳೆದು ಕಾನೂನುಗಳನ್ನು ಕೇವಲ ಒಬ್ಬ ಅಧಿಕಾರಿಯ ಅಥವಾ ಒಂದು ಅಧಿಕಾರದ ನಿರ್ದೇಶನದ ಮಟ್ಟಿಗೆ ಸಂಕುಚಿತಗೊಳಿಸಲು ಸಾಧ್ಯವಿಲ್ಲ ಎಂದಿದ್ದಾರೆ. ಯಾವುದೇ ರಾಜ್ಯವಾಗಲಿ ರಾಜನಿಗಾಗಲಿ ಅನಿರ್ಬಂಧಿತ ಅನಿಯಮಿತ ಅಧಿಕಾರವಿಲ್ಲ. ಹೀಗಾಗಿ ಕಾನೂನು ಯಾವ ಸಂದರ್ಭದಲ್ಲಿಯೂ ಒಬ್ಬರ ಇಚ್ಚೆಯನ್ನು ಸಂಕುಚಿತಗೊಳಿಸಲು ಸಾಧ್ಯವಿಲ್ಲ ಎಂದಿದ್ದಾರೆ.

ಸಮಾಜವು ಸಂಘಟನೆಯಾಗದೆ ಪರಮಾಧಿಕಾರವು ತನ್ನ ಅಸ್ತಿತ್ವದಲ್ಲಿ ಬದಲಾವಣೆಗಳನ್ನು ಕಂಡುಕೊಳ್ಳುತ್ತದೆ. ಕಾರಣ ರಾಜಕೀಯವಾಗಿ ಅನಿಯಂತ್ರಿತ ಅಧಿಕಾರವಿರಲು ಸಾಧ್ಯವಿಲ್ಲ ಎಂದಿದ್ದಾರೆ.

ಹೆಚ್ಚಿನ ಅಂಶ ಎಲ್ಲ ಬಹುತ್ವವಾದಿಗಳು ರಾಜ್ಯ ಮತ್ತು ಸಮಾಜದ ನಡುವಿನ ಅಂತರವನ್ನು ಗುರುತಿಸುವಲ್ಲಿ ಸಾಮಾಜಿಕ ಜೀವನದ ನ್ಯೂನ್ಯತೆಯನ್ನ ಗುರುತಿಸಿ ಆ ಕ್ಲಿಷ್ಟತೆಗೆ ಕೇವಲ ರಾಜ್ಯವೇ ಸಮಂಜಸವಾದ ಉತ್ತರವನ್ನೀಯಬಲ್ಲದ್ದು ಎಂಬ ಚರ್ಚೆಯನ್ನು ಒಪ್ಪುವುದಿಲ್ಲ. ಇಂತಹುದೇ ಅಭಿಪ್ರಾಯವನ್ನು ಪ್ರತಿಪಾದಿಸುವ ಲಾಸ್ಕಿಯವರೂ ಸಹ ಮಾನವನ ಅವಶ್ಯಕತೆಗಳು ಹಲವಾರು ಅದನ್ನು ಪೂರೈಸಲು ಸಾಧ್ಯವಿಲ್ಲ ಎಂಬ ಚರ್ಚೆಯನ್ನು ಮುಂದುವರೆಸಿ ರಾಜ್ಯವನ್ನು ಹೊರತುಪಡಿಸಿದಂತೆ ಮಾನವನು ತನ್ನ ಸಂಘಟನಾ ಸಂಯಮದಿಂದ ಅಥವಾ ಸಂವೇದನೆಯಿಂದ ತನ್ನ ಗುರಿಸಾಧಿಸುವುದನ್ನು ತಪ್ಪಿಸಲು ಸಾಧ್ಯವಿಲ್ಲವೆಂದು ಅಭಿಪ್ರಾಯ ಪಟ್ಟಿದ್ದಾರೆ. ಹೀಗೆ ಲಾಸ್ಕಿಯವರು ತಮ್ಮ ಬರಹದಲ್ಲಿ ರಾಜ್ಯವನ್ನು ಸಮಾಜದಲ್ಲಿನ ಇತರೇ ಸಂಘಟನೆಯೊಂದಿಗೆ ಹೋಲಿಸಿ ರಾಜ್ಯಕ್ಕೆ ಇರುವ ಕೆಲವು ಮಿತಿಗಳನ್ನು ಚರ್ಚಿಸಿದ್ದಾರೆ.

## 2.6 ಬಹುತ್ವವಾದ ಕುರಿತು ಮ್ಯಾಕ್‌ರವರ ಅಭಿಪ್ರಾಯ

ಮ್ಯಾಕೈವರ್‌ರವರು ಲಾಸ್ಕಿಯವರಂತೆ ಅಭಿಪ್ರಾಯಗಳನ್ನು ಹೊಂದಿದ್ದು ರಾಜ್ಯ ಮತ್ತು ಸಮಾಜದ ನಡುವೆ ಭೂ ಒಡೆಯ ಹಾಗೂ ಗುಲಾಮನ ನಡುವಿನ ಸಂಬಂಧವಿರಲು ಸಾಧ್ಯವಿಲ್ಲ ಎಂದಿದ್ದಾರೆ. ಒಬ್ಬ ಸಮಾಜಶಾಸ್ತ್ರಜ್ಞರಾಗಿ ಇವರು ರಾಜಕೀಯವಾಗಿ ಪರಮಾಧಿಕಾರವು ಅಧಿಕಾರದ ಒಂದು ಸಾಧನವೆಂದು ಅಭಿಪ್ರಾಯ ಪಟ್ಟಿದ್ದಾರೆ. ಕೇವಲ ಪ್ರಜೆಗಳ ಗೌರವವನ್ನು ಒತ್ತಡದ ಮೂಲಕ ಪಡೆಯುವ ಅಥವಾ ಭಯದಿಂದ ಗಿಟ್ಟಿಸಿಕೊಳ್ಳುವ ಶಕ್ತಿ ಸರ್ವಾಧಿಕಾರವಲ್ಲ ಎಂದಿದ್ದಾರೆ. ಒಂದು ಸ್ವತಂತ್ರ ಸಮಾಜದಲ್ಲಿ ನಿರ್ಬಂಧನ ವ್ಯವಸ್ಥೆಯನ್ನು ಸಂಘ ರಾಜ್ಯವಾಳುವ ಬದಲು ಭಯದ ವಾತಾವರಣದಿಂದ ಅಧಿಕಾರವನ್ನು ನಿಯಂತ್ರಿಸುವುದು ಸರ್ವೋಚ್ಛ ಅಧಿಕಾರವಲ್ಲ ಎಂದಿದ್ದಾರೆ. ರಾಜ್ಯದ ಅಧಿಕಾರದ ಬಗ್ಗೆ ರಾಜ್ಯಶಾಸ್ತ್ರಜ್ಞರು ಅನಿಯಮಿತ ಅಧಿಕಾರವಿರಬೇಕು ಎಂದು ಹೇಳುವ ಚರ್ಚೆಯನ್ನು ಒಪ್ಪಿಕೊಂಡರೂ ಅನಿಯಮಿತ ಅಧಿಕಾರವೆಂದರೆ ಸರ್ವಾಧಿಕಾರವಲ್ಲ ಎಂದು ಇವರು ಅಭಿಪ್ರಾಯಪಟ್ಟಿದ್ದಾರೆ. ಇವರ ದೃಷ್ಟಿಯಲ್ಲಿ ರಾಜ್ಯವು ಸೇವೆಗೈಯುವುದರಿಂದ ನಿರ್ದೇಶನ ನೀಡುತ್ತದೆ. ಇಲ್ಲಿ ಸೇವಕ ನಾಯಕನಿಗಿಂತ ಮೇಲಲ್ಲ ಎಂಬ ಚರ್ಚೆಯನ್ನು ಪ್ರತಿಪಾದಿಸಿ ರಾಜ್ಯದ ಹಿಡಿತಕ್ಕೆ ಒಳಪಡಿಸುತ್ತಾನೆ. 20 ನೇ ಶತಮಾನದ ಸಂದರ್ಭದಲ್ಲಿ ಇವರ ಪ್ರಕಾರ ಬಂಡವಾಳಶಾಹಿ ರಾಷ್ಟ್ರಗಳು ಬಂಡವಾಳಗಾರರ ಮೂಲಕ ಹಲವಾರು ಅಧಿಕಾರ ಕೇಂದ್ರಗಳು ಸ್ಥಾಪಿಸುವುದರಿಂದ ರಾಜ್ಯಗಳು ಅನಿಯಂತ್ರಿತವಾಗಿ ವರ್ತಿಸಲು ಸಾಧ್ಯವಿಲ್ಲ ಎಂದಿದ್ದಾರೆ.

ಹೀಗಾಗಿ ಇವರ ಪ್ರಕಾರ ರಾಜ್ಯವು ಸಂಘಟನೆಗಳಲ್ಲೊಂದು ಸಂಘಟನೆಯಾಗಿ ಸಂಘಗಳಲ್ಲೊಂದು ಸಂಘವಾಗಿ, ಈ ಸಂಘಟನೆಗಳ ಮೇಲೆ ಅರಾಜಕತೆಯನ್ನು ನಿಯಂತ್ರಿಸುವ ಸಂಸ್ಥೆಯಾಗಿ ಸಾಮಾಜಿಕ ಸಂಸ್ಥೆಗಳ ಹಿಡಿತದಲ್ಲಿ ನಿಯಂತ್ರಣಗಳಿಗೆ ಒಳಗಾಗಿ ವರ್ತಿಸುವ ಸಂಸ್ಥೆ ಎಂದಿದ್ದಾರೆ.

## ನಿಮ್ಮ ಪ್ರಗತಿ ಪರಿಶೀಲನೆ - 1

**ಸೂಚನೆ:** 1. ಈ ಕೆಳಗೆ ಬಿಟ್ಟಿರುವ ಜಾಗವನ್ನು ನಿಮ್ಮ ಉತ್ತರಕ್ಕೆ ಉಪಯೋಗಿಸಿಕೊಳ್ಳಿ.

2. ಈ ಘಟಕದ ಕೊನೆಯಲ್ಲಿ ನೀಡಿರುವ ಉತ್ತರದೊಂದಿಗೆ ನಿಮ್ಮ ಪ್ರಗತಿಯನ್ನು ಪರಿಶೀಲಿಸಿಕೊಳ್ಳಿ.

**1. ಸಾರ್ವಭೌಮತ್ವ ಎಂದರೇನು ವಿವರಿಸಿ.**

..............................................................................................................................................

..............................................................................................................................................

..............................................................................................................................................

..............................................................................................................................................

..............................................................................................................................................

..............................................................................................................................................

**2. ಬಹುತ್ವವಾದದ ಅರ್ಥ ಮತ್ತು ಬೆಳವಣಿಗೆಯನ್ನು ಪರಿಶೀಲಿಸಿ.**

..............................................................................................................................................

..............................................................................................................................................

..............................................................................................................................................

..............................................................................................................................................

..............................................................................................................................................

..............................................................................................................................................

**3. ಬಹುತ್ವವಾದಕ್ಕೆ ಲಾಸ್ಕಿಯವರ ಅಭಿಪ್ರಾಯವನ್ನು ಪರೀಕ್ಷಿಸಿ.**

..............................................................................................................................................

..............................................................................................................................................

..............................................................................................................................................

..............................................................................................................................................

..............................................................................................................................................

..............................................................................................................................................

## 2.7 ಒಟ್ಟಾರೆ ಅಭಿಪ್ರಾಯ

ಇಲ್ಲಿಯವರೆಗೆ ನಾವು ಬಹುತ್ವ ಸಿದ್ಧಾಂತ ಚರ್ಚೆಯನ್ನು, ಅದರ ಚಾರಿತ್ರಿಕ ಹಿನ್ನಲೆಯಲ್ಲಿ ಅದನ್ನು ಪ್ರತಿಪಾದಿಸಿರುವವರ ದೃಷ್ಟಿಕೋನದಲ್ಲಿ ಚರ್ಚಿಸಿದ್ದಾರೆ. ಇದು ಮಧ್ಯಕಾಲದಲ್ಲಿ ರಾಜತ್ವಕ್ಕೆ ಬೆಂಬಲವಾಗಿ ಬೆಳೆದು ನಂತರದಲ್ಲಿ ಧಾರ್ಮಿಕ ಸಂಸ್ಥೆಗಳು

ಬೆಂಬಲಿತವಾಗಿ ಬೆಳೆದು ಬಂಡವಾಳಶಾಹಿ ಪ್ರಜಾಪ್ರಭುತ್ವ ಕಾಲದಲ್ಲಿ ಸರ್ವಾಧಿಕಾರ ಚಿಂತನೆಯ ವಿರೋಧಿ ಚಿಂತನೆಯಾಗಿ ಬೆಳೆದು ಬಂದ ಚಿಂತನೆಯಾಗಿದೆ. ಸಮಾನರಲ್ಲಿ ಒಬ್ಬರು ಎಂಬ ಮೂಲ ಚಿಂತನೆಯ ಹಿನ್ನೆಲೆಯಲ್ಲಿ ಬೆಳೆದಿರುವ ಬಹುತ್ವ ಸಿದ್ಧಾಂತವು ಇಂದು ಅತ್ಯಂತ ಪ್ರಚಲಿತ ಸಿದ್ಧಾಂತವಾಗಿದೆ.

## 2.8 ಕಠಿಣ ಪದಗಳು

ಸಾರ್ವಭೌಮ - ಪರಮಾಧಿಕಾರ ಪಡೆದ ವ್ಯಕ್ತಿ

ಊಳಿಗಮಾನ್ಯ - ಜಮಿನ್ದಾರಿ ಪದ್ಧತಿ

ಗುಲಾಮಗಿರಿ - ನಾಗರಿಕತ್ವ ಹಾಗೂ ಯಾವುದೇ ಸವಲತ್ತಿಲ್ಲದ ದುಡಿಮೆಗಾರ

## 2.9 ಕೆಲವು ಉಪಯುಕ್ತ ಗ್ರಂಥಗಳು

ಎಫ್.ಡಬ್ಲ್ಯೂ. ಕೊಕರ್ - ರಿಸೆಂಟ್ ಪೊಲಿಟಿಕಲ್ ಥಾಟ್

ಎಸ್.ಪಿ. ವರ್ಮಾ - ಮಾಡರ್ನ್ ಪೊಲಿಟಿಕಲ್ ಥಿಯರಿ

ಡಾ. ಕೆ.ಜೆ.ಸುರೇಶ್ - ಆಧುನಿಕ ರಾಜಕೀಯ ಸಿದ್ಧಾಂತ

ಡಾ. ಟಿ.ಡಿ.ದೇವೇಗೌಡ - ರಾಜಕೀಯ ಸಿದ್ಧಾಂತ

ಡಾ. ಟಿ.ಡಿ. ದೇವೇಗೌಡ - ರಾಜ್ಯಶಾಸ್ತ್ರದ ಮೂಲ ಪರಿಕಲ್ಪನೆಗಳು

## 2.10 ನಿಮ್ಮ ಅಭಿವೃದ್ಧಿಯನ್ನು ಗಮನಿಸಿಕೊಳ್ಳಿ

<u>ನಿಮ್ಮ ಪ್ರಗತಿ ಪರಿಶೀಲನೆ</u> - 1

1. ನೋಡಿ ವಿಭಾಗ 2.2
2. ನೋಡಿ ವಿಭಾಗ 2.4
3. ನೋಡಿ ವಿಭಾಗ 2.5

# ಟಿಪ್ಪಣಿ

# ಘಟಕ 3 ಏಕತ್ವ ಮತ್ತು ಬಹುತ್ವ ವಾದಗಳ ನಡುವಿನ ವಿವಾದಗಳು

ರಚನೆ

3.0 ಉದ್ದೇಶಗಳು

3.1 ಪ್ರಸ್ತಾವನೆ

3.2 ಏಕತ್ವವಾದದ ಹುಟ್ಟು

3.3 ಬಹುತ್ವವಾದದ ಉದಯ

3.4 ಬಹುತ್ವ ಸಿದ್ಧಾಂತವನ್ನು ಬೆಂಬಲಿಸುವ ಚರ್ಚೆಗಳು

3.5 ಏಕತ್ವ ಸಿದ್ಧಾಂತವನ್ನು ಬೆಂಬಲಿಸುವ ಚರ್ಚೆಗಳು

3.6 ಏಕಸಾಮಿತ್ವ ಸಿದ್ಧಾಂತದ ಒಂದು ಟೀಕೆ

3.7 ವ್ಯಾಖ್ಯೆಯ ಚರ್ಚೆ

3.8 ಒಟ್ಟಾರೆ ಅಭಿಪ್ರಾಯ

3.9 ಕಠಿಣ ಪದಗಳು

3.10 ಕೆಲವು ಉಪಯುಕ್ತ ಗ್ರಂಥಗಳು

3.11 ನಿಮ್ಮ ಬೆಳವಣಿಗೆ ಗುರುತಿಸಿಕೊಳ್ಳಿ

## 3.0 ಉದ್ದೇಶಗಳು

ಈ ಏಕತ್ವ ಮತ್ತು ಬಹುತ್ವದ ಚರ್ಚೆ ಸಾರ್ವಭೌಮತ್ವದ ಚರ್ಚೆಗಳ ಮುಂದುವರೆದ ಭಾಗವಾಗಿದ್ದು, ಈ ಪಠ್ಯಭಾಗವನ್ನು ತಾವು ಓದಿದ ನಂತರ ಏಕತ್ವ ಮತ್ತು ಬಹುತ್ವದ ನಡುವಿನ ವ್ಯತ್ಯಾಸವನ್ನು ಗುರುತಿಸಲು ಸಾಧ್ಯವಾಗುತ್ತದೆ, ಈ ಭಾಗದ ಕೊನೆ ತಲುಪಿಸುವಲ್ಲಿ ತಾವು ಇದರ ಬಗೆಗಿನ ವ್ಯಾಖ್ಯೆ, ಬಹುತ್ವದ ಲಕ್ಷಣಗಳಾವುವು ಹಾಗೂ ಇವೆರಡರ ನಡುವಿನ ವಿವಾದಗಳು ಏನು ಎಂಬುದನ್ನು ಅರ್ಥೈಸಿಕೊಳ್ಳಲು ಸಾಧ್ಯವಾಗುತ್ತದೆ.

## 3.1 ಪ್ರಸ್ತಾವನೆ

ಈ ಹಿಂದಿನ ಭಾಗದಲ್ಲಿ ಆಸ್ಟಿನ್‌ರವರ ಸಾರ್ವಭೌಮತ್ವದ ಚರ್ಚೆಯನ್ನು ಮಾಡಲಾಗಿದ್ದು, ಇದೇ ಚರ್ಚೆ ಏಕತ್ವ ಸಿದ್ಧಾಂತ ಎಂದು ಗುರುತಿಸಲ್ಪಟ್ಟ ಭಾಗವನ್ನು ವಿವರಿಸಲಾಗಿದೆ. ಇದಕ್ಕೆ ಮುಖ್ಯ ಕಾರಣವೆಂದರೆ ಅಧಿಕಾರದ ಕೇಂದ್ರೀಕರಣ ಹಾಗೂ ಅಧಿಕಾರದ ಒಟ್ಟುಗೂಡುವಿಕೆ ಮತ್ತು ಅಧಿಕಾರದ ಪರಿಮಿತಿಯು ಎಲ್ಲ ರೀತಿಯಲ್ಲಿ ಸಂಘಟಿತ ಎಂದು ಅದನ್ನು ಯಾವ ರೀತಿಯಲ್ಲಿಯೂ ವಿಭಜಿಸಲು ಸಾಧ್ಯವಿಲ್ಲ ಎಂಬ ವಿಷಯ ಪ್ರವೇಶದೊಂದಿಗೆ ಸಾರ್ವಭೌಮತ್ವದ ಲಕ್ಷಣಗಳನ್ನು ವಿವರಿಸುವುದನ್ನು ಕಂಡುಕೊಳ್ಳುತ್ತವೆ ನುರಿತ ಸರ್ವವ್ಯಾಪಿ ಸಾರ್ವಭೌಮತ್ವದ ಅಧಿಕಾರ ಕೇಂದ್ರೀಕರಣ ಸಿದ್ಧಾಂತವನ್ನು ಬಹಳಷ್ಟು ರಾಜಕೀಯ ಸಿದ್ಧಾಂತಗಳು ಟೀಕೆ ಮಾಡಿರುವುದನ್ನು ಗುರುತಿಸಲಾಗಿದೆ. ಇದೇ ಸಿದ್ಧಾಂತವನ್ನು ಸಮಾಜಶಾಸ್ತ್ರಜ್ಞರು, ಚರಿತ್ರೆಕಾರರು ಸಹ ಇಂತಹ ಚಿಂತನೆಯನ್ನು ಹುಟ್ಟಿನಿಂದಲೇ ಟೀಕಿಸುತ್ತಾ, ತಿರಸ್ಕರಿಸುತ್ತಾ ಬಂದಿರುವುದನ್ನು ಕಾಣಬಹುದಾಗಿದೆ. ಆದರೆ ಇಂತಹ ಸಿದ್ಧಾಂತದ ವಿರೋಧಿ ಸಿದ್ಧಾಂತವಾಗಿ ಬಹುತ್ವ ಸಿದ್ಧಾಂತವು ಸರ್ವಾಧಿಕಾರತ್ವವನ್ನು ಟೀಕಿಸಿ ವೈಜ್ಞಾನಿಕ ವಿಶ್ಲೇಷಣೆಯೊಂದಿಗೆ ಏಕಸಾಮಿತ್ವ ಸಿದ್ಧಾಂತವನ್ನು ವಿರೋಧಿಸಿ ಬೆಳೆದದ್ದು 19 ನೇ ಶತಮಾನದ ಕೊನೆಯಲ್ಲಾದರೂ 20ನೇ ಶತಮಾನದ ಮೊದಲಿಗೆ ಇವು ಸರ್ವಾಧಿಕಾರಿ ಮತ್ತು ಸಹವ್ಯಾಪಿಯಾದ ರಾಜ್ಯದ ಶಕ್ತಿಯನ್ನು ವಿರೋಧಿಸುವ ಒಂದು ಪ್ರಜಾಸತ್ತಾತ್ಮಕ ಚಳುವಳಿಯಾಗಿ ಪ್ರಾರಂಭಗೊಂಡು ರಾಜ್ಯದ ಸರ್ವಾಧಿಕಾರಿ ಅದಿಕಾರವನ್ನು ನಿಯಂತ್ರಿಸಿ ಕುಂಠಿತಗೊಳಿಸುವ ಪ್ರಯತ್ನವಾಗಿ ಬೆಳೆದವು ಅದು ಇಂತಹ ಸರ್ವವ್ಯಾಪಿಯಾದ ರಾಜ್ಯವನ್ನು ವಿರೋಧಿಸುವಲ್ಲಿ ಹಲವು ಸಣ್ಣ ಸಣ್ಣ ಗುಂಪುಗಳಾಗಿ ಸಂಘಟನೆಗಳಾಗಿ ಸಮಾಜದಲ್ಲಿ ಬೆಳೆಯತೊಡಗಿದವು. ಇಂತಹ ಉಪಾಯಗಳು ಕೇಂದ್ರೀಕೃತ ಸರ್ವಾಧಿಕಾರಿಯಾದ ರಾಜ್ಯದ **ಅಧಿಕಾರವನ್ನು** ಕಾರ್ಯೋನ್ಮುಖ ಪ್ರಜಾಪ್ರಭುತ್ವದಲ್ಲಿ ವಿಭಜಿಸಬೇಕೆಂಬ ಚರ್ಚೆಯನ್ನು ಮುಂದುವರೆಸಿದಾಗ ರಾಜ್ಯದ ಅಧಿಕಾರವನ್ನು ಇಂತಹ ಚರ್ಚೆಯು ರಾಜ್ಯವು ಸರ್ವವ್ಯಾಪಿ ಅಲ್ಲ ಇದರಲ್ಲಿ ಅಧಿಕಾರ ಕೇಂದ್ರೀಕೃತ ಇದ್ದಲ್ಲಿ ಸಮಾಜದ ಅಭಿವೃದ್ಧಿಗೆ ಧಕ್ಕೆ ತರುತ್ತದೆ ಜನರ ಗೌರವವನ್ನು ಇದು ಒತ್ತಡದ ಮೂಲಕ ಪಡೆದುಕೊಳ್ಳುವುದರಿಂದ ಜನರ ಸ್ವಾತಂತ್ರ್ಯವನ್ನು ಕುಂಠಿತಗೊಳಿಸುತ್ತದೆ ಎಂದು ಹೇಳುವುದರೊಂದಿಗೆ ರಾಜ್ಯ ಒಂದು ಪ್ರಮುಖವಾದ ಸಂಸ್ಥೆಯೇ ಹೊರತು ಸರ್ವಾಧಿಕಾರಿ ಅಲ್ಲ ಎಂಬ ಚರ್ಚೆಯನ್ನು ಪ್ರಾರಂಭಿಸಲು ಈ ಪಠ್ಯಭಾಗದಲ್ಲಿ ಸಾರ್ವಭೌಮತ್ವ ಪ್ರಜಾಪ್ರಭುತ್ವದ ಪರಿಚಯ ಮಾಡಲಾಗಿದೆ. ಇದನ್ನು ಅರ್ಥೈಯಿಸಿಕೊಂಡಲ್ಲಿ ಮಾತ್ರ ಈ ಬಗ್ಗೆ ಹೆಚ್ಚಿನ ಜ್ಞಾನವನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ.

## 3.2 ಏಕತ್ವವಾದದ ಹುಟ್ಟು

ಏಕಸಾಮಿತ್ವ ಸಿದ್ಧಾಂತವನ್ನು ವಿರೋಧಿಸಿ ಬೆಳೆದದ್ದು ಬಹುತ್ವ ಸಿದ್ಧಾಂತ. ಈ ಸಿದ್ಧಾಂತದ ಪ್ರಕಾರ ಶಕ್ತಿಯುತ ಅಧಿಕಾರವು ಕೇವಲ ಒಂದೇ ಮೂಲದಿಂದ ಬೆಳೆಯಲು ಸಾಧ್ಯವಿಲ್ಲ. ಇದು ಎಲ್ಲ ರೀತಿಯಿಂದಲೂ ಸರ್ವವ್ಯಾಪಿಯಾಗಿರಲು ಅಸಾಧ್ಯ. ಅಂತೆಯೇ ಯಾವುದೇ ಅಧಿಕಾರ ವ್ಯವಸ್ಥೆಯು ಸಹ ಕೇಂದ್ರೀಕೃತವಾಗಿ, ಕಾನೂನು ಅದಿಕಾರ ಆಡಳಿತವನ್ನು ರಾಜಕೀಯ ಇಚ್ಛೆಯನ್ನು ಸಮಷ್ಠಿಗೊಳಿಸಲು ಸಾಧ್ಯವಿಲ್ಲ. ಇದರ ವಿರೋಧವಾಗಿ, ಹೇಳಬೇಕೆಂದರೆ ಅಧಿಕಾರವು ವಿವಿಧ ಮೂಲಗಳಿಂದ ಬೆಳೆದು ತನ್ನಷ್ಟಕ್ಕೆ

ತಾನೇ ಮಾರ್ಪಾಡುಗೊಂಡು ವಿವಿಧ ಹಂತಗಳಲ್ಲಿ ವಿಭಜನೆಗೊಂಡು ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುತ್ತದೆ. ಅಂತೆಯೇ ಇದೊಂದು ವಿವಿಧ ಗುಂಪುಗಳ ಅಧಿಕಾರ ಸಂಸ್ಥೆಗಳ ವ್ಯವಸ್ಥೆಯಾಗಿದ್ದು, ಒಂದು ಸಮಾಜದಲ್ಲಿ ಹಂಚಲ್ಪಟ್ಟಿರುತ್ತದೆ ಎಂದು ಕೂಡ ವಿವರಿಸಲ್ಪಟ್ಟಿದೆ ಏಕಸಾಮಿತ್ವವನ್ನು ಹೋಲಿಸಿ ನೋಡಿದಾಗ ಬಹುತ್ವ ಸಿದ್ಧಾಂತವು ಯಾವುದೇ ಸಮಾಜದಲ್ಲಿ ಅತಿ ಮೂಲಭೂತವಾಗಿ ಕಂಡುಕೊಳ್ಳುವ ಒಂದೇ ಸಂಸ್ಥೆಯ ಸಾಮಿಪ್ಯವೆಂದು ಏಕಸಾಮಿತ್ವವನ್ನು ವಿವರಿಸಿದರೆ ದ್ವಿಸಾಮಿಪ್ಯವಿರುವ ವ್ಯವಸ್ಥೆಗಳಲ್ಲಿ ರಾಜ್ಯ ಮತ್ತು ಧಾರ್ಮಿಕ ಸಂಸ್ಥೆಗಳು ಅಸ್ತಿತ್ವದಲ್ಲಿರುವುದನ್ನು ನಾವು ವಿವರಣೆಯ ಸಲುವಾಗಿ ಬಳಸಬಹುದು. ಅದೇ ಬಹುತ್ವ ಸಿದ್ಧಾಂತದ ವಿವರಣೆ ನಾವು ಆಧುನಿಕ ಸಮಾಜವನ್ನು ಉದಾಹರಣೆಗೆ ತೆಗೆದುಕೊಂಡಲ್ಲಿ ಆ ಸಮಾಜದಲ್ಲಿರುವ ಹಲವು ಸಂಘಟನೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಚರ್ಚೆಯನ್ನು ಮುಂದುವರೆಸಲಾಗಿದೆ.

ಸಾರ್ವಭೌಮತ್ವ ಅಧಿಕಾರವೆಂಬ ಪರಿಕಲ್ಪನೆಯು ಆಧುನಿಕ ವ್ಯಾಖ್ಯಾನದಲ್ಲಿ ಒಂದು ನಿರ್ಧರಿತ ಗಡಿ ಪ್ರದೇಶದಲ್ಲಿನ ಉಚ್ಛ್ರಾಯ ಅಧಿಕಾರವೆಂದು ಗುರುತಿಸಲ್ಪಡುತ್ತದೆ. ಇಂತಹ ಚಿಂತನೆಯು ಆಧುನಿಕವಾದ ರಾಜ್ಯ ಮತ್ತು ರಾಷ್ಟ್ರಗಳ ಪರಿಕಲ್ಪನೆಯ ಹಿನ್ನೆಲೆಯಲ್ಲಿ ತನ್ನ ಉಗಮವನ್ನು ಕಂಡುಕೊಂಡಿದೆ, ಆದರೆ ಈ ಹೇಳಿಕೆಯು ಪ್ರಾಚೀನ ಅಥವಾ ಮಧ್ಯ ಕಾಲದಲ್ಲಿ ಅಸ್ತಿತ್ವದಲ್ಲಿರಲಿಲ್ಲವೆಂದು ಚರ್ಚೆಗೆ ಬೆಂಬಲಿಸುವಂತಹ ಚರ್ಚೆ ಅಲ್ಲ ಕಾರಣ ಎಲ್ಲ ಕಾಲದಲ್ಲಿಯೂ ಸಾರ್ವಭೌಮತ್ವ ಅಧಿಕಾರವೆಂಬುದು ವಿಭಜಿತಗೊಂಡಿದ್ದರೂ ಆಯಾ ಕಾಲದಲ್ಲಿ ಅದರ ರಚನೆಗೆ ಅನುಗುಣವಾಗಿ ಅದು ವಿವರಣೆಯನ್ನು ಸಹ ಕಂಡುಕೊಳ್ಳುತ್ತಿದ್ದವು. ಈ ಕಾರಣದಿಂದಲೇ ಸಾರ್ವಭೌಮತ್ವ ಅಧಿಕಾರದ ಹುಟ್ಟನ್ನು ಗುರುತಿಸುವಾಗ ಅದರ ಚರಿತ್ರೆಯಲ್ಲಿ ಮೂಲವನ್ನು ಹುಡುಕಲು ಪ್ರಯತ್ನಿಸುತ್ತವೆ.

ಗ್ರೀಕರ ಕಾಲದಲ್ಲಿ ಸುಲಭಗೊಂಡ ಸಮುದಾಯಗಳಿದ್ದು ಈ ಸಮುದಾಯಗಳಿಗೆ ತಮ್ಮ ಅಸ್ತಿತ್ವದ ಪ್ರಜ್ಞೆಯು ಇತ್ತು ಅಂತೆಯೆ ಉಚ್ಛ್ರಾಯ ಅಧಿಕಾರದ ರಾಜನ ಅಸ್ತಿತ್ವದ ಬಗ್ಗೆಯೂ ಪ್ರಜ್ಞೆ ಇತ್ತು. ಇವರ ಕಾರ್ಯವನ್ನು ತಮ್ಮ ಅಧಿಕಾರವೆಂದು ಗುರುತಿಸಿಕೊಳ್ಳುತ್ತಿದ್ದರು. ಅರಿಸ್ಟಾಟಲ್‌ನ ಸಂವಿಧಾನದ ವರ್ಗೀಕರಣವು ಇಂತಹ ಉಚ್ಛ್ರಾಯ ಅಧಿಕಾರವು ಒಬ್ಬರ ಕೈಯಲ್ಲಿರದೇ ಕೆಲವೇ ಜನರ ಕೈಯಲ್ಲಿರುವಾಗ ಹೆಚ್ಚಿನ ಜನರ ಕೈಯಲ್ಲಿರುವ ಎಂಬ ವರ್ಗೀಕರಣದ ಮೇಲೆ ಆಧಾರಿತವಾಗಿದೆ ಎಂಬುದನ್ನು ಗುರುತಿಸಿಕೊಳ್ಳುವುದು ರೋಮನ್ನ್‌ರ ಕಾಲದಲ್ಲಿ ಜನಸಾಮಾನ್ಯರ ಉಚ್ಛ್ರಾಯ ಅಧಿಕಾರವೆಂದು ಪರಿಗಣಿಸಿ ಕಾಣಬಹುದಾಗಿದೆ ಈ ಬಗ್ಗೆ ಆ ಸಮಾಜದ ಎಲ್ಲರ ಅಭಿಪ್ರಾಯ ಒಂದೇ ಆಗಿತ್ತು ಎಂಬುದನ್ನು ಗಮನಿಸಬೇಕಾಗಿದೆ. ಆದರೆ ಮಧ್ಯಕಾಲೀನ ಊಳಿಗಮಾನ್ಯ ಪದ್ಧತಿ ವ್ಯವಸ್ಥೆಯಲ್ಲಿ ಇಂತಹ ನಂಬಿಕೆಗಳು ಕಳಚಿ ಸರ್ವಾಧಿಕಾರ ಮತ್ತೇ ಏಕಸಾಮಿತ್ವದ ಚಿಂತನೆಗಳು ಬೆಳೆದಿದ್ದನ್ನು ಗುರುತಿಸಬೇಕಾಗಿದೆ. ಊಳಿಗಮಾನ್ಯ ಪದ್ಧತಿಯಲ್ಲಿ ಮೇಲಿಂದ ಕೆಳಗೆ ಅಧಿಕಾರ ವಿಭಜನೆ ಇದ್ದು, ಕೆಳಸ್ಥರಕ್ಕಿಂತ ಮೇಲಿದ್ದವರು ಕೆಳಸ್ತರದಲ್ಲಿರುವುದನ್ನುಅಧಿಕಾರಯುಕ್ತವಾಗಿ ದಮನಗೊಳಿಸಿ ದೃಷ್ಟಿ ಹರಿಸುತ್ತಿದ್ದುದು ಕಂಡುಬರುತ್ತದೆ. ಈ ಕಾರಣದಿಂದ ಸರ್ವಾಧಿಕಾರವೆಂಬುದು ಈ ಕಾಲದಲ್ಲಿ ಅಧಿಕಾರದ ಪರಮಾವಧಿ ಎಂದು ಗುರುತಿಸಲ್ಪಡುತ್ತದೆ. ಆಧುನಿಕ ರಾಷ್ಟ್ರಗಳಲ್ಲಿ ಇಂತಹ ಊಳಿಗಮಾನ್ಯ ಪದ್ಧತಿ ಮುರಿದುಬಿದ್ದು, ಅಧಿಕಾರವು ರಾಜ್ಯದ ಕೈ ಸೇರಿತು. ಇದೇ ತೆರನಾಗಿ ಮಧ್ಯ ಕಾಲದಲ್ಲಿ ಧಾರ್ಮಿಕವಾಗಿ ಪ್ರಾಬಲ್ಯಗೊಂಡ ಪದ್ಧತಿಗಳಿದ್ದು, ಸರ್ವಾಧಿಕಾರವು ಧಾರ್ಮಿಕ ಸಂಸ್ಥೆಗಳ ಹಿಡಿತದಲ್ಲಿದ್ದುದು ಕಂಡುಬರುತ್ತದೆ. ಲಾರ್ಡ್‌ಬ್ರೈಸ್‌ರವರ ಪ್ರಕಾರ ಮಧ್ಯಕಾಲೀನ ಯುಗದ ಧಾರ್ಮಿಕ ಸಂಸ್ಥೆಗಳ ಮುಖ್ಯಸ್ಥರುಗಳು ಕೂಡ ಸರ್ವಾಧಿಕಾರಿಗಳೆಂದು ಕರೆಸಿಕೊಳ್ಳುತ್ತಿದ್ದರು ಎಂದು ತಿಳಿದುಬರುತ್ತದೆ. ಪೋಪರ ಅಧಿಕಾರವು ಹೆಚ್ಚಿದಂತೆ ರಾಜನು ಸಹ ತನ್ನ ಅಧಿಕಾರವನ್ನು ವೊದಲು ಪ್ರಾರಂಭಿಸಿದ ಇವರ ಅಧಿಕಾರವು ಸರ್ವವ್ಯಾಪಿಯಾಗಿ ಬೆಳೆದಾಗ ರಾಜನ ಅಧಿಕಾರವು ಕೇವಲ ಮೊದಲಿನಂತಾಗುವ ಪರಿಸ್ಥಿತಿ ಒದಗಿಬಂತು. ಇಂಗ್ಲೆಂಡಿನ ರಾಜ ಫ್ರಾನ್ಸನ ರಾಜ ಮತ್ತು ಸ್ಪೇನಿನ ರಾಜರು ಪೋಪರ ಹಿಡಿತಕ್ಕೆ ಸಿಕ್ಕಿಬಿದ್ದರು. ಆದರೆ 15ಮತ್ತು 16ನೇ ಶತಮಾನದಲ್ಲಿ ಸುಧಾರಣೆ ಪುನರುತ್ಥಾನದ ಕಾಲದಲ್ಲಿ ಪೋಪನ ಅಧಿಕಾರವು ಕಡಿಮೆಯಾಗುತ್ತಾ ಬಂದಂತೆ ರಾಜನ ಅಧಿಕಾರವು ಹೆಚ್ಚುತ್ತಾ ಹೋಗಿತ್ತು. ಹೀಗೆ ರಾಷ್ಟ್ರ ಮತ್ತು

ರಾಜ್ಯದ ಬೆಳವಣಿಗೆಯೊಂದಿಗೆ ರಾಜತ್ವವು ಸರ್ವಾಧಿಕಾರಿಯಾಗಿ ಬೆಳೆದು ಸಾಮ್ರಾಟರಾಗಿ ಪರಿವರ್ತನೆಗೊಂಡರು ಇಂತಹ ಸಾಮ್ರಾಟರಿಗೆ ಬೆಂಬಲಿಸುವ ಜನರಿಗೆ ಕಡಿಮೆಯೇ ಇರಲಿಲ್ಲ. ಮತ್ತು ಮರ್ಸಿಲಿಯಾದ ಪಡುವಾ ಇವರುಗಳು ಇಂತಹ ಅಧಿಕಾರಯುಕ್ತ ರಾಜರುಗಳನ್ನು ಬೆಂಬಲಿಸಿದರು ಬೋಡಿನ್ ಮತ್ತು ಹಾಬ್ಸ್ ಈ ಸರ್ವಾಧಿಕಾರಿ ಅಧಿಕಾರಕ್ಕೆ ಸೈದ್ಧಾಂತಿಕ ತಳಹದಿ ನೀಡಿದರು. ಇದನ್ನೇ ಇವರ ನಂತರದ ರಾಜಕೀಯ ಚಿಂತಕರು ಮತ್ತೆ ಮತ್ತೆ ವಿಮರ್ಶೆಗೆ ಒಳಪಡಿಸಿ ಇಂತ ಚಿಂತನೆಗಳನ್ನು ಬಲಿಷ್ಠಪಡಿಸಿದರು. ಹಾಬ್ಸ್ ಇಂತಹ ಚಿಂತನೆಗೆ ಕಾನೂನಾತ್ಮಕವಾಗಿ ಸರ್ವಾಧಿಕಾರಿ ಎಂಬ ರೂಪವನ್ನು ಕೊಟ್ಟಲ್ಲಿ ಬೆಂಥ್ಯಾಮ್ ಮತ್ತು ಆಸ್ಟೀನ್ ಇಂತಹ ಚಿಂತನೆಗಳನ್ನು ಮತ್ತಷ್ಟು ಸಮೃದ್ಧಿಗೊಳಿಸಿದರು. ಇದೇ ಸಂದರ್ಭದಲ್ಲಿ ಜಾನ್‌ಲಾಕ್ ಇಂತಹ ಸರ್ವಾಧಿಕಾರ ವ್ಯವಸ್ಥೆಯನ್ನು ಸಂಸತ್ತಿನ ಅಧಿಕಾರದಲ್ಲಿ ಗುರುತಿಸಿ ಈ ಸಂಸತ್ತಿನ ಅಧಿಕಾರದ ಹಿಂದೆ ಸಮುದಾಯದ ಅಧಿಕಾರವಿದೆ ಎಂದು ಗುರುತಿಸಿದನು. ಇದನ್ನು ನಾವು ಇಂದು ರಾಜಕೀಯ ಸರ್ವಾಧಿಕಾರವೆಂದು ಗುರುತಿಸಿದರೂ ರೂಸೋ ಈ ಚಿಂತನೆಯನ್ನು ಮುಂದುವರೆಸಿ ಸರ್ವಜನರ ಪರಮಾಧಿಕಾರ ಎಂಬ ಪರಿಕಲ್ಪನೆಯನ್ನು ಸಾಮಾನ್ಯ ಇಚ್ಛೆಯನ್ನು ಪ್ರತಿಪಾದಿಸಿದನು. ಇಂತಹ ಕಾನೂನಾತ್ಮಕ ಸರ್ವಾಧಿಕಾರಿ ಚರ್ಚೆಯನ್ನು 20ನೇ ಶತಮಾನದ ಬಹುತ್ವ ಸಿದ್ಧಾಂತ ಪ್ರತಿಪಾದಿಸಿದರು ಹಾಗೂ ತೀವ್ರವಾಗಿ ವಿರೋಧಿಸಿದರೂ ಲಾಸ್ಕಿ ಮಾರ್ಕ್ಸ್. ಬಾರ್ಕರ್ ಮೊದಲಾದವರ ಇವರುಗಳ ಬರಹದಲ್ಲಿ ಇವರಿಗೆ ತೀಕ್ಷ್ಣವಾದ ವಿರೋಧದ ವಿಚಾರಗಳನ್ನು ಪ್ರತಿಪಾದಿಸಲ್ಪಟ್ಟರೆ ಇದೇ 20ನೇ ಶತಮಾನದಲ್ಲಿ ಉದಾರವಾದವು ಈ ಪರಮಾಧಿಕಾರವನ್ನು ರಾಜ್ಯದ ನ್ಯಾಯಬದ್ಧವಾದ ಅಧಿಕಾರವೆಂದು ಗುರುತಿಸಿ ಇದು ವಿವಾದಗಳನ್ನು ತೀರ್ಮಾನಿಸುವ ಅಧಿಕಾರವೆಂದು ಸಮಾಜದಲ್ಲಿ ಒಗ್ಗಟ್ಟನ್ನು ಸ್ಥಾಪಿಸುತ್ತದೆ ಎಂತಲೂ ಏರುಪೇರುಗಳಿಂದ ಒಳಗೊಂಡ ಸಮಾಜವನ್ನು ಕಾನೂನು ಮತ್ತು ಆಜ್ಞೆ ಮೂಲಕ ವ್ಯವಸ್ಥಿತ ಸಮಾಜವಾಗಿ ಪರಿವರ್ತಿಸಲ್ಪಟ್ಟಿದೆ ಎಂದು ತಿಳಿಸಿದರು. ಮಾರ್ಕ್ಸ್‌ವಾದವು ಮತ್ತೊಂದೆಡೆ ಈ ಸರ್ವಾಧಿಕಾರವನ್ನು ರಾಜ್ಯವನ್ನು ಆಳುವ ವರ್ಗದ ಅಧಿಕಾರವೆಂದು ವಿವರಿಸಿದರು. ಇವರು ರಾಜ್ಯದೊಂದಿಗೆ ಸರ್ವಾಧಿಕಾರಿ ಪರಿಕಲ್ಪನೆಯನ್ನು ಸುಲಲಿತವಾಗಿ ತೊಡೆದು ಹಾಕಿ ಸಮತಾವಾದವನ್ನು ಸ್ಥಾಪಿಸುವ ಪ್ರಯತ್ನ ಮಾಡಿದರು. ಈ ರೀತಿಯಾದ ಏಕಸಾಮಿತ್ವ ವಿರೋಧದಿ ಚಿಂತನೆಗಳಲ್ಲಿ ಸರ್ವಾಧಿಕಾರಿ ವಿರೋಧಿ ಚಿಂತನೆಗಳನ್ನು ಏಕಸಾಮಿತ್ವ ಮತ್ತು ಬಹುತ್ವ ಸಿದ್ಧಾಂತ ನಡುವಿನ ಚರ್ಚೆಯನ್ನು ಬೆಳಕಿಗೆ ತಂದನು. ಹೀಗಾಗಿ 15 ಮತ್ತು 16ನೇ ಶತಮಾನದ ಸಾಮಾಜಿಕ ಪರಿಸರವು ಏಕಸಾಮಿತ್ವದ ಚಿಂತನೆ ಬೆಂಬಲಿಸಿ ಅದರ ಬೆಳವಣಿಗೆಗೆ ಕಾರಣವೆಂದರೆ ಪುನರುತ್ಥಾನದ ನಂತರ ಕಾಲವು ಬಹುತ್ವ ಸಿದ್ಧಾಂತದ ಬೆಳವಣಿಗೆಗೆ ಪಕ್ವವಾದ ಸಮಾಜವಾಗಿದ್ದು, ಈ ಚರ್ಚೆಗೆ ನಾಂದಿಯಾಯಿತು ಎಂದು **ಹೇಳಬಹುದು.**

## 3.3 ಬಹುತ್ವವಾದದ ಉದಯ

ಬಹುತ್ವವಾದ ಮತ್ತು ಅದರ ಸಾರ್ವಭೌಮತ್ವ ಸಿದ್ಧಾಂತವು ಜರ್ಮನ್ ಬರಹಗಾರ ಶಿರ್ಕೆ ಮತ್ತು ಈ ಮೋಷ್, ಮೆಕಲ್ಯಾಂಡ್ ಅವರ ಬಂಪಗಳಲ್ಲಿ 19ನೆಯ ಶತಮಾನದ ಕೊನೆಯ ಭಾಗದಲ್ಲಿ ಬೆಳಕಿಗೆ ಬಂದಿತು. ಫ್ಲೀಗ್ಲಿನ್, ಸಿನ್ನಿ, ಬಿಬ್ಬ, ಲಿಂಡಸ್ಸೆ, ಡ್ಯೂಯಿಟ್, ಕ್ಯಾಥೆ, ಬಾರ್ಕರ್, ಲಾಸ್ಕಿ, ವೇಶ್, ಅವೈ ಮೊದಲಾದವರು ಇದರ ಅಭಿವೃದ್ಧಿಗೆ ಕಾರಣಕರ್ತರಾದರು, ಈ ಬರಹಗಾರರು ಸಾರ್ವಭೌಮತ್ವ ಸಿದ್ಧಾಂತದ ಸಾಂಪ್ರದಾಯಿಕ ಸಿದ್ಧಾಂತಗಳನ್ನು ಈ ಕೆಳಗಿನ ಮೂರು ಮುಖ್ಯ ಆಧಾರದ ಮೇಲೆ ಟೀಕಿಸಿದ್ದಾರೆ.

1. ಇವರ ದೃಷ್ಟಿಯಲ್ಲಿ ರಾಜ್ಯವು ಸಮಾಜದಲ್ಲಿ ಅಸ್ತಿತ್ವದಲ್ಲಿರುವ ಹಲವಾರು ಸಂಘಗಳಲ್ಲಿ ಒಂದು ಸಂಸ್ಥೆಯಾಗಿದೆ ಎಂದರು.
2. ಕಾನೂನು ಸಂಪ್ರದಾಯದಿಂದ ಅಸ್ತಿತ್ವಕ್ಕೆ ಬಂದದ್ದು ಇದು ಸರ್ವಾಧಿಕಾರಿಯ ಇಚ್ಛೆಯಲ್ಲಾ ಎಂದರು.
3. ರಾಜ್ಯವು ಅಂತರರಾಷ್ಟ್ರೀಯ ಮಟ್ಟದಲ್ಲಿ ಸರ್ವಾಧಿಕಾರಿಯಾಗಿ ವರ್ತಿಸಲು ಸಾಧ್ಯವಿಲ್ಲ ಎಂಬುದಾಗಿದೆ. ಇವರುಗಳ ಸರ್ವಾಧಿಕಾರ ಸಿದ್ಧಾಂತವನ್ನು ಟೀಕಿಸುವುದರೊಂದಿಗೆ ರಾಜ್ಯದೊಂದಿಗೆ ಸಮಾಜದಲ್ಲಿ ಹಲವಾರು ಸಂಘಸಂಸ್ಥೆಗಳು ಅಸ್ತಿತ್ವದಲ್ಲಿವೆ. ಮಾನವನ ಅಭಿವೃದ್ಧಿಯು ರಾಜ್ಯದಿಂದ ಮಾತ್ರವಲ್ಲ ರಾಜ್ಯದಲ್ಲಿರುವ ವಿವಿಧ ಸಂಘ ಸಂಸ್ಥೆಗಳ ಸಹಾಯದಿಂದ ಆಗುತ್ತದೆ ಮಾನವನು ಬೆಳವಣಿಗೆಯಾಗುವಲ್ಲಿ ಹಲವಾರು ಧಾರ್ಮಿಕ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಸಂಘ ಸಂಸ್ಥೆಗಳ ಪಾತ್ರವಿರುತ್ತದೆ ಮತ್ತು

ಇಂತಹ ಆಂತರಿಕ ಅಂಶಗಳು ಸಮಾಜದಲ್ಲಿರುವ ಚರ್ಚ್ ಮತ್ತು ದೇವಾಲಯ, ಸಂಸಾರ, ಪಕ್ಷಗಳು, ವ್ಯಾಪಾರಿ ಸಂಘಟನೆಗಳು ಮೊದಲಾದವುಗಳ ಮೂಲಕವಾಗಿ ಪ್ರತಿಬಿಂಬಿತಗೊಂಡು ಅಭಿವೃದ್ಧಿಯಾಗಲು ಸಹಾಯಕಾರಿಯಾಗಿದೆ ಎಂದು ತಿಳಿಸುತ್ತದೆ. ಈ ಸಾಮಾಜಿಕ ಸಂಘಟನೆಗಳು ರಾಜ್ಯಕ್ಕಿಂತ ಮೊದಲೇ ಅಸ್ತಿತ್ವದಲ್ಲಿದ್ದ ಇವು ಬಹುತ್ವವಾದಿಗಳ ಪ್ರಕಾರ ಕಾರ್ಯನಿರ್ವಾಹಕ ಸ್ವಾತಂತ್ರ್ಯ ಹೊಂದಿದ್ದ, ರಾಜ್ಯವು ಇಂತಹ ವ್ಯವಸ್ಥೆಯ ಒಂದು ಅವಿಭಾಜ್ಯ ಅಂಗವಾಗಿದೆ ಎಂದು ತಿಳಿಸಿದ್ದಾರೆ. ಮತ್ತು ಈ ಸಂಸ್ಥೆಗಳು ರಾಜ್ಯಕ್ಕಿಂತ ಪೂರ್ವದಲ್ಲಿ ಅಸ್ತಿತ್ವದಲ್ಲಿತ್ತು ಎಂದು ತಿಳಿಸಿದ್ದಾರೆ ಬಹುತ್ವವಾದಿಗಳು ಇಂತಹ ಸಂಸ್ಥೆಗಳಿಗೆ ಹೆಚ್ಚಿನ ಸ್ವಾತಂತ್ರ್ಯ ಇರಬೇಕು ಮತ್ತು ರಾಜ್ಯವು ಈ ಸಂಸ್ಥೆಗಳಿಗಿಂತ ವಿಭಿನ್ನವಾದುದು ಎಂಬ ಚರ್ಚೆಯನ್ನು ಮಂಡಿಸುವುದು. ರಾಜ್ಯವೇ ಮಾನವನ ಸಮಾಜದ ಹಿತಾಸಕ್ತಿಯನ್ನು ಕಾಪಾಡಲು ಇರುವ ಒಂದೇ ಪ್ರತಿನಿಧಿ ಎಂಬುವ ಚರ್ಚೆಯನ್ನು ವಿರೋಧಿಸುತ್ತಾನೆ. ಗಿರ್ಕೆ ಮತ್ತು ಮೈಕ್‌ಲ್ಯಾಂಡ್ ಇವರುಗಳು ಇದೇ ಚರ್ಚೆಯನ್ನು ಮುಂದುವರಿಸಿ ಕಾನೂನು ಸಹ ಇಂತಹ ರಾಜ್ಯಕ್ಕಿಂತ ಪೂರ್ವದಲ್ಲಿದ್ದ ಸಂಪ್ರದಾಯಗಳ ಫಲವೆಂದು ಪ್ರತಿಪಾದಿಸಿದ್ದಾರೆ. ಇವರು ಮುಂದುವರೆದು ಇಂತಹ ಸಂಘ ಸಂಸ್ಥೆಗಳು ಕಾರ್ಯನಿರ್ವಹಣೆಯಲ್ಲಿ ಸ್ವತಂತ್ರವಾಗಿರುತ್ತವೆ. ಅವುಗಳು ರಾಜ್ಯದ ನಿಯಂತ್ರಣಕ್ಕೆ ಒಳಪಟ್ಟಿರುವುದಿಲ್ಲವೆಂದು ಸ್ಪಷ್ಟಪಡಿಸಿದ್ದಾರೆ, ಇದೇ ರೀತಿ ದುಡಿಯುವ ಗುಂಪುಗಳು ಮತ್ತು ಕುಶಲ ಕರ್ಮಿಗಳು ರಾಜ್ಯದ ಅಥವಾ ಸಮಾಜದ ಆರ್ಥಿಕ ನೀತಿಗಳಿಗೆ ಒಳಪಟ್ಟಿಲವೆಂದು ತಿಳಿಸಿದ್ದಾರೆ. ವೆಗ್ಗಿಸ್‌ರವರು ರಾಜ್ಯವು ಚರ್ಚ್, ವ್ಯಾಪಾರಿ ಸಂಘಟನೆಗಳ ಸಮುದಾಯ ಗುಂಪುಗಳ ಮತ್ತು ಸಂಸಾರಗಳ ಮೇಲೆ ಹೇರಬಹುದಾದ ನಿಯಂತ್ರಣವನ್ನು ವಿರೋಧಪಡಿಸಿದ್ದಾರೆ. ಬಾರ್ಕರ್‌ರವರು ರಾಜ್ಯವು ಪ್ರತಿಪಾದಿಸಿದ ಯಾವುದೇ ಕಾನೂನಿಗಿಂತ ಮೊದಲು ಇಂತಹ ಸಂಘಟನೆಗಳು ಅಸ್ತಿತ್ವದಲ್ಲಿದ್ದ ಕಾರಣ ಅವುಗಳನ್ನು ನಿಯಂತ್ರಿಸುವ ಕಾರ್ಯವನ್ನು ರಾಜ್ಯವು ಮಾಡಬಾರದೆಂದು ವಿವರಿಸಿದ್ದಾರೆ, ಲಿಂಡಸೀರವರು ಹಲವಾರು ಸಾಮಾಜಿಕ ಸಂಘಟಿತ ಗುಂಪುಗಳು ರಾಜ್ಯದ ಬಗ್ಗೆ ಒಲವನ್ನು ಹೊಂದಿದ್ದರೂ ಸಹ ಅವು ರಾಜ್ಯದ ಹಿಡಿತಕ್ಕೆ ಒಳಪಟ್ಟಿರುವುದಿಲ್ಲವೆಂದು ತಿಳಿಸಿದ್ದಾರೆ. ಈ ನಿಟ್ಟಿನಲ್ಲಿ ಚರ್ಚಿಸುವ ಬಹುತ್ವವಾದಿಗಳೆಲ್ಲರೂ ವಿವಿಧ ಗುಂಪುಗಳ, ಸಂಘಟನೆಗಳ ರಾಜಕೀಯ ಆರ್ಥಿಕ, ಧಾರ್ಮಿಕ ಮತ್ತಿತರ ಸಂಸ್ಥೆಗಳ ಸ್ವಾಯತ್ತತೆ ಬಗ್ಗೆ ಚರ್ಚಿಸಿರುವುದು ರಾಜ್ಯದ ಸರ್ವಾಧಿಕಾರತ್ವದ ಚರ್ಚೆಯನ್ನು ಸೀಮಿತಗೊಳಿಸಿರುವುದನ್ನು ನಾವು ಕಂಡುಕೊಳ್ಳಬಹುದಾಗಿದೆ ಇದೇ ರೀತಿಯಲ್ಲಿ ಕಾನೂನಾತ್ಮಕ ವಿಚಾರಗಳನ್ನು ದಿಷ್ಕಿಸಿ ನೋಡಿದಾಗ ಆಸ್ಟಿನ್‌ರವರು ಪ್ರತಿಪಾದಿಸಿದ ಸರ್ವಾಧಿಕಾರತ್ವವು ಸಹ ಬಹುತ್ವವಾದದ ಪ್ರತಿಪಾದನೆ ಮಾಡುವುದು ಕಂಡುಬರುತ್ತದೆ. ಕ್ರಾಭೆ, ಡ್ಯೂಯಿಲ್, ಇವರು ಕೂಡ ಕಾನೂನೇ ಎಲ್ಲರಿಗಿಂತ ಸರ್ವವ್ಯಾಪಿ 'ಮಿಗಿಲಾದದ್ದು, ಎಂದು ಕೂಡ ವಿವರಿಸಿರುವುದು ಇಲ್ಲಿ ಕಂಡುಬರುತ್ತದೆ ಡ್ಯೂಯಿಟ್ ಇದನ್ನು ವಿವರಿಸುವಲ್ಲಿ ರಾಜ್ಯದ ಕಾನೂನು ಸಾಮಾಜಿಕ ಒಪ್ಪಿಗೆಯ ತಳಹದಿಯಾಗಿ ಹೊಂದಿರುತ್ತದೆ ಎಂದು ವಿವರಿಸಿದ್ದಾರೆ, ಜನರು ಕಾನೂನಿಗೆ ಗೌರವ ನೀಡುವುದು ಇದರಿಂದ ಅವರಿಗೆ ಒಳಿತಾಗುವುದೇ ಹೊರತು ರಾಜ್ಯಕ್ಕೆ ಹೆದರಿ ಅಲ್ಲ ಒಂದರ್ಥದಲ್ಲಿ ರಾಜ್ಯವೂ ಕೂಡ ಕಾನೂನಿಗಿಂತ ಮಿಗಿಲಾದದ್ದಲ್ಲ ಎಂದು ವಿವರಿಸುತ್ತಾರೆ. ಈ ದೃಷ್ಟಿಯಲ್ಲಿ ರಾಜ್ಯವು ಸಮಾಜದ ಹಲವಾರು ಮೂಲಗಳಿಂದ ಹೊರ ಹೊಮ್ಮಿದೆ ಎಂದು ಚರ್ಚಿಸುತ್ತಾರೆ ಇದನ್ನೇ ಕ್ರಾಬೆ ಇಂತಹ ಚರ್ಚೆಗಳನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ಬಿಟ್ಟು ಅಲ್ಲಿಯೂ ಕೂಡ ಸರಿತಪ್ಪುಗಳ ಆಧಾರದ ಮೇಲೆ ಕಾನೂನುಗಳು ರಚಿತವಾಗಿರುತ್ತವೆ ಇದು ಯಾವುದೇ ಒಂದು ರಾಜ್ಯದ ಇಚ್ಛೆಯಾಗಲು ಸಾಧ್ಯವಿಲ್ಲವೆಂದು ವಿವರಣೆ ನೀಡಿದ್ದಾರೆ ಎಲ್ಲ ಸಂದರ್ಭದಲ್ಲಿ ರಾಜ್ಯವು ಆಂತರಿಕ ಮತ್ತು ಬಾಹ್ಯ ಇತಿಮಿತಿಗಳಿಗೆ ಒಳಪಟ್ಟಿರುವುದರಿಂದ ಅಂತಹ ಇತಿಮಿತಿಗಳು ಅಂತರಾಷ್ಟ್ರೀಯ ಕಾನೂನು ಒಪ್ಪಂದ ಸಂಪ್ರದಾಯಗಳಿಗೆ ಬದ್ಧವಾಗಿರುವುದರಿಂದ ಇದು ಅಂತರರಾಷ್ಟ್ರೀಯ ಸಮುದಾಯದಲ್ಲಿ ರೀತಿನೀತಿ ಮತ್ತು ಸಂಘಟಿತವಾಗಿ ವಿಚಾರವು ಮುಂದುವರೆಯಲು ಸಾಧ್ಯವಾಗಿದೆ ಎಂದಿದ್ದಾರೆ.



53

ಮೊದಲನೇ ಮಹಾಯುದ್ಧದ ನಂತರ ಅಸ್ತಿತ್ವಕ್ಕೆ ಬಂದ ರಾಷ್ಟ್ರಗಳ ಒಕ್ಕೂಟ ಹಾಗೂ ಎರಡನೇ ಮಹಾಯುದ್ಧದ ನಂತರ ಅಸ್ತಿತ್ವಕ್ಕೆ ಬಂದ ಸಂಯುಕ್ತ ರಾಷ್ಟ್ರ ಸಂಸ್ಥೆ ಸಹ ಬಹುತ್ವ ಸಂಪ್ರದಾಯದ ಪ್ರತಿಪಾದನೆ ಎಂದು ಇವರು ಚರ್ಚಿಸಿದ್ದಾರೆ.

ಸಂಯುಕ್ತ ಸರ್ಕಾರಗಳ ರಚನೆ ಆದಂದಿನಿಂದ ಏಕಸಾಮಿತ್ವ ಸಾರ್ವಭೌಮತ್ವ ಸಿದ್ಧಾಂತಕ್ಕೆ ಕೆಲವು ಪ್ರಾಯೋಗಿಕ ಸಮಸ್ಯೆಗಳು ಬಂದೊದಗಿದವು ಬಹುತ್ವವಾದಿಗಳು ಒಂದು ಸಂಯುಕ್ತ ರಾಜ್ಯ ವ್ಯವಸ್ಥೆಯಲ್ಲಿ ಆಸ್ಟಿನ್‌ರವರು ಹೇಳಿದ ಏಕಸಾಮಿತ್ವ ಸರ್ವಾಧಿಕಾರದಿಂದ ಅಸ್ತಿತ್ವವಿಲ್ಲವೆಂಬುದನ್ನು ಪ್ರತಿಪಾದಿಸಿದ್ದಾರೆ ಕಾರಣ ಸಂವಿಧಾನಾತ್ಮಕವಾಗಿಯೇ ರಾಜ್ಯ ಮತ್ತು ಕೇಂದ್ರಗಳ ನಡುವೆ ಅಧಿಕಾರಗಳ ವಿಭಜನೆಯಾಗಿದೆ ಎಂದು ತಿಳಿಸಿದ್ದಾರೆ. ಹೀಗೆ ಒಂದು ಉದಾರವಾದ ಪ್ರಜಾಪ್ರಭುತ್ವದ ರಾಜ್ಯದಲ್ಲಿ ಶಾಸನೀಯವಾಗಿ ಸಂಪೂರ್ಣವಾಗಿ ಸಾರ್ವಭೌಮತ್ವದ ಅಸ್ತಿತ್ವದಲ್ಲಿ ಇರಲು ಸಾಧ್ಯವಿಲ್ಲವೆಂಬ ಈ ಚರ್ಚೆ ಮೂಲಕ ನಾವು ಕಂಡುಕೊಳ್ಳಬಹುದಾಗಿದೆ. ಇದೇ ಬಹುತ್ವ ಸಿದ್ಧಾಂತದ ಅಭಿವೃದ್ಧಿಗೆ ಕಾರಣವಾಗಿದೆ.

## 3.4 ಬಹುತ್ವ ಸಿದ್ಧಾಂತವನ್ನು ಬೆಂಬಲಿಸುವ ಚರ್ಚೆಗಳು

ಬಹುತ್ವ ಸಿದ್ಧಾಂತವನ್ನು ಹಲವಾರು ರಾಜಕೀಯ ಚಿಂತಜ್ಞರು ಚರಿತ್ರೆಕಾರರು ಸಮಾಜಶಾಸ್ತ್ರಜ್ಞರು ಸಹ ಬೆಂಬಲಿಸಿದರು ಇಂಗ್ಲೆಂಡ್, ಯುರೋಪ್ ಮತ್ತು ಅಮೇರಿಕೆಗಳಲ್ಲಿ 20ನೇ ಶತಮಾನದ ಮೊದಲಿಗೆ ಇಂಗ್ಲೆಂಡಿನ ಬಹುತ್ವವಾದದ ಚಳುವಳಿಯಾಗಿ ಪರಿವರ್ತನೆ ಹೊಂದೀತು ಇದರ ಮುಖ್ಯ ಬೆಂಬಲಿಗರು ಮೇಟ್‌ಲ್ಯಾಂಡ್, ಹಿಗ್ನಿಸ್, ಲಿಂಡಸೇ, ಬಾರ್ಕ್‌ರ್, ಕೇಲ್, ಗಿರ್ಕ್, ಡ್ಯೂಯಿಟ್, ಕ್ರಾಬೆ ಮತ್ತಿತರರು ವಿಲಿಯಂ ಜೇಮ್ಸ್ ವಿನ್‌ಪಾಲೆ ಮತ್ತು ಮೆಕೈವರ್ ಈ ಚಿಂತಕರಲ್ಲಿ ಅಮೇರಿಕೆಯ ಚಿಂತನೆಗಳನ್ನು ಬೆಳಕಿಗೆ ತಂದಿರುವುದು ಕಂಡು ಬಂದಿದೆ. ಇವರೆಲ್ಲರೂ ಏಕಸಾಮಿತ್ವ ಸರ್ವಾಧಿಕಾರಕ್ಕವು ಅಸಂಪೂರ್ಣವಾದದ್ದು ಎಂದು ಚರ್ಚಿಸಿ ಇಂತಹ ಅಪನಂಬಿಕೆ ಬರಹಗಳು ನಿಜವಾದ ಅಥವಾ ವಾಸ್ತವಿಕ ಸಮಾಜದಲ್ಲಿ ಹಲವಾರು ಸಮಸ್ಯೆಗಳನ್ನು ಒಡ್ಡುತ್ತಿವೆ ಎಂದು ವಿವರಿಸಿದರು ಉದಾ ಲಿಂಡಸೇರವರು ರಾಜ್ಯದ ಸಮಾಜದಲ್ಲಿ ವಿವಿಧ ಸಂಘಟನೆಗಳು ಅಸ್ತಿತ್ವದಲ್ಲಿರುವಂತೆ ಸಮಾಜದಲ್ಲಿನ ಮತ್ತೊಂದು ಸಂಘಟನೆಯೆ ರಾಜ್ಯವೆಂದು ಚರ್ಚಿಸಿದ್ದಾರೆ. ಬಾರ್ಕ್‌ರ್‌ರವರು ಕೂಡ ಇದೇ ರೀತಿ ಚರ್ಚೆ ಮುಂದುವರೆಸಿ ರಾಜ್ಯವು ಸರ್ವಾಧಿಕಾರಿ ಅಲ್ಲಿ ಇತರ ಸಂಘಟನೆಗಳಿಗಿಂತ ಒಂದು ಪರಿಮಿತಿಯಲ್ಲಿ ಕಾರ್ಯನಿರ್ವಹಿಸುವ ಸಂಸ್ಥೆ ಎಂದು ಚರ್ಚಿಸಿದ್ದಾರೆ. ಲಾಸ್ಕಿರವರು ಮುಂದುವರೆಸಿ ಅನಿಯಂತ್ರಿತ ಮತ್ತು ಜವಾಬ್ದಾರಿಯುತ ರಹೀತ ರಾಜ್ಯವು ಮಾನವತೆ ಮತ್ತು ಸರ್ವಾಧಿಕಾರಿ ರಾಜ್ಯದ ಹೆಸರಿನಲ್ಲಿ ವಿವಿಧ ಸಿದ್ಧಾಂತಗಳ ಆಧಾರದ ಮೇಲೆ ಸಮಾಜಕ್ಕೆ ತೊಡಕನ್ನುಂಟು ಮಾಡುತ್ತವೆ ಎಂದಿದ್ದಾರೆ. ಕ್ರಾಬೆಯವರು ನಾಗರಿಕ ಸಮಾಜ ಯಾವುದು ಸಾರ್ವಭೌಮತ್ವ ರಾಷ್ಟ್ರಗಳನ್ನು ಒಪ್ಪುವುದಿಲ್ಲವೆಂದು ಚರ್ಚಿಸಿದ್ದಾರೆ. ಡ್ಯೂಯಿಟ್‌ರವರು ಸರ್ವಾಧಿಕಾರವನ್ನು ಮೌಲ್ಯವಿಲ್ಲದ ಹಾಗೂ ಅಸತ್ಯವಾದ ಒಂದು ಕತೆಯೆಂದು ಗುರುತಿಸಿದ್ದಾರೆ. ಹೀಗೆ ಸರ್ವಾಧಿಕಾರವು ವಿವಿಧ ಚಿಂತಕರ ದೃಷ್ಟಿಯಲ್ಲಿ ತನ್ನ ಏಕಸಾಮಿತ್ವವನ್ನು ಕಳೆದುಕೊಂಡು ಅಸ್ತಿತ್ವದಲ್ಲಿರುವುದು ಕಂಡು ಬರುತ್ತದೆ.

ಹೆರಾಲ್ಡ್ ಲಾಸ್ಕಿಯವರು ಈ ಬಹುತ್ವ ಸಿದ್ಧಾಂತದ ಮುಖ್ಯ ಪ್ರತಿಪಾದಕರಾಗಿದ್ದು ಬಹುತ್ವ ಸಿದ್ಧಾಂತವನ್ನು ರಚಿಸುವಲ್ಲಿ ಪ್ರಮುಖಪಾತ್ರವನ್ನು ವಹಿಸಿ ಏಕಸಾಮಿಪ್ಯ ಸಿದ್ಧಾಂತವನ್ನು ಸಂಪೂರ್ಣವಾಗಿ ಬುಡಮೇಲು ಮಾಡುವಲ್ಲಿ ಗೆಲವನ್ನು ಸಾಧಿಸುತ್ತದೆ ಇವರ ದೃಷ್ಟಿಯಲ್ಲಿ ಒಂದು ನಿರ್ಧರಿತ ಪ್ರದೇಶದಲ್ಲಿ ಎಲ್ಲ ಉದಾರವು ಮತ್ತು ಸಂಘಟನೆಗಳ ಮೇಲೆ ಯಾವುದೇ ಶಾಸನೀಯ ನಿಯಂತ್ರಣವಿಲ್ಲದೇ ಅಧಿಕಾರ ಚಲಾಯಿಸುವ ಸಂಸ್ಥೆಯಿದ್ದರೂ 3 ಹಂತಗಳಲ್ಲಿ ಇಂತಹ ಒಂದು ಏಕಸಾಮಿತ್ವ ಸರ್ವಾಧಿಕಾರವನ್ನು ರಚಿಸುವ ಕಾರ್ಯವು ಸರಿ ಇಲ್ಲ ಎಂಬ ಚರ್ಚೆಯನ್ನು ಮುಂದಿಟ್ಟಿದ್ದರೆ 16ನೇ ಶತಮಾನದ ಧಾರ್ಮಿಕ ಹೋರಾಟಗಳು ಈ ರಾಜ್ಯದ ಸರ್ವಾಧಿಕಾರಿ ಸಿದ್ಧಾಂತಕ್ಕೆ ಕಾರಣವೆಂದು ಗುರುತಿಸಿದ್ದಾರೆ ಇದು ಧರ್ಮವು ರಾಜ್ಯದ ಮೇಲೆ ತನ್ನ ಅಧಿಕಾರವನ್ನು ಸಾಧಿಸಲು ಮಾಡಿದ ಪ್ರಯತ್ನವನ್ನು ವಿರೋಧಿಸುವ ಚಟುವಟಿಕೆಯೆಂದು ಗುರುತಿಸಿದ್ದಾರೆ.

ಬೋಡಿನ್ ಮತ್ತು ಹಾಬ್ಸ್ ರಾಜ್ಯದ ಉಳಿವನ್ನು ಪ್ರತಿಪಾದಿಸುವಲ್ಲಿ ಇಂತಹ ತತ್ವ ಸಿದ್ಧಾಂತವನ್ನು ಪ್ರತಿಪಾದಿಸಿದ್ದಾರೆ ಎಂದೂ ಕೂಡ ಹೇಳಿದ್ದಾರೆ. ಈ ಎಲ್ಲ ಚಿಂತನಗಳ ಸರ್ವಾಧಿಕಾರವೆಂಬುದು ಒಂದು ಚಾರಿತ್ರಿಕ ಹಂತದಲ್ಲಿ ಅಸ್ತಿತ್ವಕ್ಕೆ ಬಂದ ಸಿದ್ಧಾಂತವಲ್ಲವೆಂದು ವಿವರಿಸಿದ್ದಾರೆ ಈ ರೀತಿಯಾಗಿ ಅಸ್ತಿತ್ವಕ್ಕೆ ಬಂದ ಸರ್ವವ್ಯಾಪಿ ರಾಜ್ಯವೆಂದು ಶಾಶ್ವತವಲ್ಲವೆಂದೂ ಸರ್ವಾಧಿಕಾರವೆಂದಿದ್ದರೂ ಚಾರಿತ್ರಿಕವಾಗಿ ಬೆಳೆದರೂ ಅಸ್ತಿತ್ವದಲ್ಲಿರುವ ಸಮಾಜದಲ್ಲಿ ಅದಕ್ಕೆ ಇರುವ ಬೆಂಬಲದಿಂದ ಮಾತ್ರ ಸಾಧ್ಯ ಎಂದು ವಿವರಿಸಿದ್ದಾರೆ ಈ ಕಾರಣದಿಂದ ಶಾಸನೀಯವಾದ ಸರ್ವಾಧಿಕಾರತ್ವವು ಎಂದೂ ಅಸ್ತಿತ್ವದಲ್ಲಿರಲು ಸಾಧ್ಯವಿಲ್ಲವೆಂದು ತಿಳಿಸಿದ್ದಾರೆ.

ಎರಡನೆಯದಾಗಿ ಇದರ ದೃಷ್ಟಿಯಲ್ಲಿ ಕೇವಲ ಶಾಸನಬದ್ಧವಾಗಿ ರಚಿತಗೊಂಡ ವ್ಯವಸ್ಥೆ ಇದರಲ್ಲಿ ನಿಯಂತ್ರಿತವಾದ ನಿರ್ಧರಿತವಾದ ಕಾನೂನು ಅಸ್ತಿತ್ವದಲ್ಲಿರುತ್ತದೆ ಇಂತಹ ರಾಜ್ಯಗಳು ತಮ್ಮ ಕಾರ್ಯ ನಿರ್ವಹಣೆಯನ್ನು ಮುಂದುವರೆಸಿ ನಡೆಯುವುದೇ ಹೊರತು ಇದು ಯಾವ ಕಾರಣಕ್ಕೂ ಕಾನೂನನ್ನು ಇದ್ದ ರೂಪದಲ್ಲಿ ತರಲು ಸಾಧ್ಯವಿಲ್ಲ. ಯಾವ ಸಂದರ್ಭದಲ್ಲಿಯೂ ರಾಜಮಹಾರಾರುಗಳು ಕೂಡ ಸಂಪ್ರದಾಯಕ್ಕೆ ಬದ್ಧವಾಗಿ ನಡೆಯಬೇಕು ಮತ್ತು ಕಾನೂನು ಆ ಸಂಪ್ರದಾಯಗಳನ್ನು ಪ್ರತಿಪಾದಿಸುಸುವಂತದ್ದಾಗಿರಬೇಕು ಯಾವುದೇ ಕಾನೂನು ಎಲ್ಲರಿಗೂ ಸಮಾನವಾಗಿದ್ದು ಅದರಲ್ಲಿ ಅಧಿಕಾರವಾಗಿ ಇರುವಲ್ಲಿ ಸಮಾಜವು ಸಂಘಟಿತವಾದಂತೆ ಸರ್ವಾಧಿಕಾರವು ಕೇವಲ ನಿರ್ಧಾರಗಳನ್ನು ನೊಂದಾಯಿಸಿಕೊಳ್ಳುವ ಯಂತ್ರವಾಗಿದೆ, ಒಂದು ಸಂಯುಕ್ತ ಸರ್ಕಾರದಲ್ಲಿ ಸರ್ವಾಧಿಕಾರವು ಹೇಗೆ ಅಸಾಧ್ಯವೋ ಹಾಗೇ ಆಸ್ಟಿನ್‌ನ ಬರಹದಲ್ಲಿನ ಸರ್ವಾಧಿಕಾರತ್ವವು ಹುಡುಕಲು ಅಸಾಧ್ಯ ಎಂದು ತಿಳಿಸುತ್ತಾ ಲಾಸ್ಕಿರವರು ಒಂದು ಕಾನೂನು ರಾಜ್ಯದ ಜೀವನದಲ್ಲಿ ಪ್ರಮುಖವಾದುದು. ಆದರೆ ಅದು ಆ ಸಮಾಜದ ಪರಿಸರ ಹಾಗೂ ಸಾಮಾಜಿಕ ಸಂಬಂಧಗಳ ಆಧಾರಿತವಾಗಿರುತ್ತದೆ ಎಂದು ವಿವರಣೆ ನೀಡಿದ್ದಾರೆ.

ಮೂರನೆಯದಾಗಿ ಸರ್ವಾಧಿಕಾರತ್ವದ ರಾಜಕೀಯ ಅಂಶಗಳನ್ನು ಚರ್ಚಿಸುವಲ್ಲಿ ಇವರು ರಾಜಕೀಯವಾಗಿ ಸರ್ವಾಧಿಕಾರಿ ಅನಿಯಂತ್ರಿತ ಅಧಿಕಾರ ಅಸ್ತಿತ್ವದಲ್ಲಿರಲು ಸಾಧ್ಯವೇ ಇಲ್ಲ ಹಾಗೂ ಯಾವುದೇ ಅಧಿಕಾರದ ಮೇಲೆ ಹಾಯದು ಈ ರೀತಿಯ ಪ್ರಭಾವಗಳು ಬೀರುವುದರಿಂದ ರಾಜ್ಯಗಳು ತಮ್ಮ ಅಸ್ತಿತ್ವವನ್ನು ಕಂಡುಕೊಳ್ಳಲು ಇತರೇ ರಾಜ್ಯಗಳ ಒಪ್ಪಿಗೆಯನ್ನು ಸಾಧಿಸಿಕೊಳ್ಳಬೇಕಾಗುತ್ತದೆ ಯಾವುದೇ ರಾಜ್ಯ ತನ್ನನ್ನು ರಾಜ್ಯವೆಂದು ಗುರುತಿಸಿಕೊಳ್ಳಬೇಕಾದರೆ ಇತರೇ ರಾಜ್ಯಗಳು ಈ ರಾಜ್ಯವನ್ನು ಗುರುತಿಸಬೇಕು ಇಂತಹ ಸಂದರ್ಭದಲ್ಲಿ ಯಾವುದೇ ರಾಜ್ಯದ ವರ್ತನೆಯು ಇತರೇ ರಾಜ್ಯಗಳಿಗೆ ತೊಂದರೆಕೊಡುವ ವರ್ತನೆಯಾಗಲು ಸಾಧ್ಯವಿತ್ತು ಅಂತೆಯೇ ಆಳಲ್ಪಡುವ ಜನರು ಸಹ ಈ ರಾಜ್ಯದ ಅಸ್ತಿತ್ವವನ್ನು ಕಂಡುಕೊಳ್ಳಬೇಕು ಆದ್ದರಿಂದ ಪ್ರತಿಯೊಂದು ಸರ್ಕಾರವಾಗಲಿ, ರಾಜ್ಯವಾಗಲಿ ತನ್ನ ಅಸ್ತಿತ್ವವನ್ನು ಕಂಡುಕೊಳ್ಳಬೇಕಾದರೆ ಇತರರ ಒಪ್ಪಿಗೆಯನ್ನು ಪಡೆದುಕೊಳ್ಳಬೇಕಾಗುತ್ತದೆ ಎಂದು ಚರ್ಚಿಸಿದ್ದಾರೆ.

ಹೀಗೆ ಪ್ರತಿಯೊಬ್ಬ ಬಹುತ್ವವಾದಿಯು ರಾಜ್ಯ, ಸಮಾಜ ಸಮಾಜದಲ್ಲಿನ ಕಾರ್ಯಗಳು ಸಾಮಾಜಿಕ ಜೀವನ ಒಪ್ಪಂದ ಒಪ್ಪಿಗೆ ಅಧಿಕಾರದ ವಿವಿಧ ಮೂಲಗಳ ಬಗ್ಗೆ ಚರ್ಚಿಸುತ್ತಾ ಸರ್ವಾಧಿಕಾರವೆಂಬ ಏಕಸಾಮಿತ್ವ ಅಧಿಕಾರವನ್ನು ಒಪ್ಪಲು ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಿಲ್ಲ ಹೀಗಾಗಿ ಲಾಸ್ಕಿರವರು ಹೇಳುವಂತೆ ಯಾವುದೇ ರಾಜ್ಯವು ಎಲ್ಲ ಹಂತಗಳಲ್ಲಿ ಮಾನವನ ಎಲ್ಲ ಚಟುವಟಿಕೆಗಳನ್ನು ಪರಿಪೂರ್ಣವಾಗಿ ಬೆಳೆಸಿಕೊಳ್ಳಲು ಸಾಧ್ಯವಿಲ್ಲ ಇದೇ ಮೂಲಭೂತವಾಗಿ ರಾಜ್ಯ ಮತ್ತು ಸಮಾಜದ ನಡುವಿನ ವ್ಯತ್ಯಾಸವನ್ನು ಗುರುತಿಸಲು ಸಹಾಯಕಾರಿಯಾಗಿದೆ ಎಂದು ಗುರುತಿಸಿದ್ದಾರೆ ಅಂತೆಯೇ ಸಮಾಜದೊಳಗೆ ಹಲವಾರು ಚಟುವಟಿಕೆಗಳಿದ್ದು ಆ ಚಟುವಟಿಕೆಗಳು ಪ್ರತಿಯೊಬ್ಬ ಮಾನವನ ಬಯಕೆ ಜೀವನದ ಪರಿಪೂರ್ಣತೆಯ ಹಿನ್ನೆಲೆಯಲ್ಲಿ ಬೆಳಕನ್ನು ಕಂಡುಕೊಳ್ಳುತ್ತವೆ, ಇಂತಹ ವ್ಯಕ್ತಿಗತವಾದ ಇಚ್ಛೆಯ ಅಭಿವ್ಯಕ್ತಿತ್ವದಿಂದ ಮಾತ್ರ ಮಾನವನು ತನ್ನ ಸಂತೃಪ್ತಿಯನ್ನು ಕಂಡುಕೊಳ್ಳಲು ಇರುವ ವ್ಯವಸ್ಥಿತ ಮಾನವನ ಒಟ್ಟುಗೂಡುವಿಕೆ ಎಂದಿದ್ದಾರೆ ಇದು ರಾಜ್ಯದ ಅಧಿಕಾರದ ಮೇಲೆ ಅವಲಂಬಿತವಾಗಿಲ್ಲದಿರುವುದರಿಂದ ರಾಜ್ಯಕ್ಕೆ ಹೇಗೆ ಹಲವು ಕಾರಣಗಳಿಂದ ಮಾನವನು ಗೌರವವನ್ನು ಸೂಚಿಸಲ್ಪಟ್ಟನೆ ಅಂತೆಯೇ ಈ ಸಂಸ್ಥೆಗಳು ವೈಯಕ್ತಿಕವಾಗಿ ತನ್ನ ಇಚ್ಛೆಯನುಸಾರ

ಗೌರವ ಸೂಚಿಸುತ್ತದೆ. ಆದರೆ ಸಾಮಾಜಿಕ ಸಂಸ್ಥೆಗಳು ವ್ಯಕ್ತಿಗಳಿಗೆ ಅಧಿಕಾರ ಚಲಾಯಿಸುವ ಕಾಯವನ್ನೆಸಗುವುದಿಲ್ಲ, ರಾಜ್ಯವು ಈ ಕೆಲಸವನ್ನು ಮಾಡುತ್ತದೆ. ಹೀಗಾಗಿ ರಾಜ್ಯದ ಬಗ್ಗೆ ಮತ್ತು ಇತರ ಸಂಘಟನೆಗಳ ಬಗೆಗೆ ನಾಗರಿಕರ ಗೌರವವು ಒತ್ತಾಯ ಪೂರ್ವಕವಾಗಿರಬಾರದು ಎಂದು ಬಹುತ್ವವಾದ ಸಿದ್ಧಾಂತಗಳು ಚರ್ಚಿಸುತ್ತವೆ.

## 3.5 ಏಕತ್ವ ಸಿದ್ಧಾಂತವನ್ನು ಬೆಂಬಲಿಸುವ ಚರ್ಚೆಗಳು

ಆಸ್ಟಿನ್‌ರವರು 1832ರಲ್ಲಿ ಒಂದು ಗ್ರಂಥವನ್ನು ಪ್ರಕಟಿಸಿ ಅದರಲ್ಲಿ ತಮ್ಮ ಏಕಾತ್ಮಕ ಸಿದ್ಧಾಂತವನ್ನು ಪ್ರತಿಪಾದಿಸಿರುವರು. ಈ ಸಿದ್ಧಾಂತವು ಕಾನೂನಾತ್ಮಕ ಶಾಸನೀಯ ಸರ್ವಾಧಿಕಾರತ್ವದ ಬಗ್ಗೆ ಮಾಡಿರುವ ಚರ್ಚೆಯು ಇತಿಹಾಸದ ಮತ್ತು ನೈತಿಕತೆಯ ಹಿನ್ನೆಲೆಯಲ್ಲಿ ಮೂಡಿ ಬಂದಿಲ್ಲ ಇವರು ನ್ಯಾಯಿಕ ಸಿದ್ಧಾಂತವೆಂಬ ಅಂಶದ ಮೇಲೆ ಮಾನವನು ಕೇವಲ ಅಭ್ಯಾಸ ಬಲದಿಂದ ತನಗಿಂತ ಹಿರಿಯನಾದ ಸರ್ವಾಧಿಕಾರಿಗೆ ಗೌರವವನ್ನು ಸೂಚಿಸುತ್ತಾನೆ. ಮತ್ತು ಕಾನೂನು ಎಂಬುದು ಇಂತಹ ಸರ್ವಾಧಿಕಾರಿಯ ನಿರ್ದೇಶನಗಳಾಗುತ್ತವೆ ಎಂದು ಚರ್ಚಿಸುತ್ತಾರೆ. ಇಂತಹ ಚರ್ಚೆಯನ್ನು ಈ ಕೆಳಕಂಡ ವಿಧಿಸಬಹುದಾಗಿದೆ.

1. ಸರ್ವಾಧಿಕಾರತ್ವವನ್ನು ಗುರುತಿಸುವ ಸಲುವಾಗಿ ನಾವು ಸಮಾಜದಲ್ಲಿನ ಉತ್ತಮೋತ್ತಮನಲ್ಲಿ ಗುರುತಿಸಬೇಕಾಗುತ್ತದೆ. ಇಂತಹ ಸರ್ವಾಧಿಕಾರಿಯನ್ನು ಗುರುತಿಸುವಲ್ಲಿ ಸಾಮಾನ್ಯ ಇಚ್ಛೆಯಲ್ಲಿ ಕಾನೂನಿಗಾಗಲಿ ಯಾವುದೇ ಬೆಲೆ ಇಲ್ಲ. ಕಾರಣ ಸರ್ವಾಧಿಕಾರಿಯಾಗುವವನೊಬ್ಬ ಖಚಿತವಾಗಿದ್ದು ಎಲ್ಲರಿಗೂ ಕಾಣುವಂತವನಾಗಿದ್ದು ಅವನ ಸರ್ವಾಧಿಕಾರವು ಅವನನ್ನ ಕಾಪಾಡುವಂತವನಾಗಿರಬೇಕು ಇವನು ಮಾನವನಾಗಿರಬೇಕು, ದೇವನಾಗಿರಬಾರದು ಇವನ ಅಧಿಕಾರ ರಾಜ್ಯದೊಂದಿಗೆ ಸೇರಿರಬೇಕು ಮತ್ತು ಮಾನವರಿಗಾಗಿ ಮಾಡುವ ಕಾನೂನುಗಳು ರಾಜ್ಯದ ಚಟುವಟಿಕೆಗಳನ್ನು ಅನುಸರಿಸಬೇಕೆಂದರು.

2. ಮಾನವನರಲ್ಲಿ ಉತ್ತಮೋತ್ತನಾದವನ ಎಲ್ಲರಂತೆ ಗೌರವ ನೀಡುವಂತವನಾಗಿರಬಾರದು ಯಾವ ಸಂದರ್ಭದಲ್ಲಿಯೂ ಈ ಸರ್ವಾಧಿಕಾರವನ್ನು ಉಳ್ಳವನ ಬೇರೆಯವರ ನಿರ್ದೇಶನ ಅತವಾ ಅಧಿಕಾರದ ಸಾಮ್ಯಕ್ಕೆ ಒಳಪಡಬಾರದು. ಒಂದು ಸಮಾಜದಲ್ಲಿ ಇವನು ಆಳುವ ಬಹುಸಂಖ್ಯಾತ ಜನರು ಇವನಿಗೆ ಎಲ್ಲ ಕಾಲದಲ್ಲಿಯೂ ಒಂದು ರೀತಿ ಶಾಶ್ವತವಾಗಿ ಗೌರವವನ್ನು ಸೂಚಿಸುವವರಾಗಬೇಕು. ತಾತ್ಕಾಲಿಕವಾಗಿ ಅಧಿಕಾರವನ್ನು ಪಡೆದವರಿಗೆ ಸರ್ವಕಾಲದಲ್ಲಿ ಜನರು ಗೌರವಿಸಿದ ಕಾರಣ ಸರ್ವಾಧಿಕಾರಯು ಶಾಶ್ವತವಾಗಿ ಎಲ್ಲರಿಂದ ಗೌರವ ಪಡೆಯುವಂತನಾಗಿರಬೇಕು ಇಂತಹ ಗೌರವವು ಅಭ್ಯಾಸಬಲದಿಂದ ಶಾಶ್ವತವಾಗಿದ್ದು ಸದಾ ಕಾಲದಲ್ಲಿ ಮುಂದುವರೆಯುವಂತಾಗಬೇಕು.

3. ಸರ್ವಾಧಿಕಾರಿಯು ಶಾಸನಬದ್ಧವಾಗಿ ಅಧಿಕಾರವು ಅನಿಯಂತ್ರಿತವಾಗಿದ್ದು ಯಾರೂ ಕೂಡ ಸರ್ವಾಧಿಕಾರಿಯನ್ನು ಅವರ ಇಚ್ಛೆಯಂತೆ ಆಡಿಸಲು ಸಾಧ್ಯವಿಲ್ಲ. ಆದರೆ ಸರ್ವಾಧಿಕಾರಿಯು ತನ್ನ ಇಚ್ಛೆಯಂತೆ ಚರ್ಚಿಸಬಹುದು ಅವನು ತನಗೆ ಬೇಕಾದ ನಿಯಂತ್ರಣವನ್ನು ಮತ್ತು ನಿಯಮಗಳ ತನಗಾಗಿ ಹಾಕಿಕೊಳ್ಳಬಹುದು.

4. ಸರ್ವಾಧಿಕಾರವು ಒಂದು ಬಲಿಷ್ಠ ಶಕ್ತಿ ಇದು ಅವಿಭಾಜ್ಯವಾದದ್ದು ಸರಿಯಾಗಿ ಬಿಡಿಬಿಡಿಯಾಗಿ ದೊರಕಲು ಸಾಧ್ಯವಿಲ್ಲ ಇದು ತನ್ನ ಇಚ್ಛೆಯ ಆಧಾರವಾಗಿಯೂ ಸಹ ಪಡೆದುಕೊಂಡು ಹೋಗಲು ಸಾಧ್ಯವಿಲ್ಲ ಇಂತಹ ಅಧಿಕಾರವು ಹಂಚಲು ಸಾಧ್ಯವಿಲ್ಲ ನಿಯಂತ್ರಿಸಲು ಸಾಧ್ಯವಿಲ್ಲ ಹೀಗಾಗಿ ಈ ಅಧಿಕಾರವನ್ನು ವಿಭಜಿಸಲು ಪ್ರಯತ್ನಿಸಿದರೆ ಅದು ಸಂಪೂರ್ಣವಾಗಿ ನಾಶವಾಗಿಬಿಡುವುದು.

5. ಈ ಸರ್ವಾಧಿಕಾರಿಯ ನಿರ್ದೇಶನವೇ ಕಾನೂನು ಅವನು ಹೇಳಿದ ರೀತಿಯೇ ಎಲ್ಲರೂ ವರ್ತಿಸಬೇಕು ಅವನ ಇಚ್ಛೆಯನ್ನು ವಿರೋಧಿಸಿದರೆ ಶಿಕ್ಷೆಯ ಸರ್ವಾಧಿಕಾರಿಗೆ ಯಾವುದೇ ಕಾನೂನು ನಿಯಂತ್ರಣ ಒಡ್ಡಲು ಸಾಧ್ಯವಿಲ್ಲ. ಹಾಗೂ ಹಾಬ್ಸ್ ತಿಳಿಸಿದಂತೆ ಇವನ ನಿರ್ದೇಶನಗಳು ಯಾವುದೂ ತಪ್ಪಲ್ಲ ಇವನು ಯಾವುದೇ ಸಂದರ್ಭದಲ್ಲಿ ನಿಯಂತ್ರಣ ಸಾಧ್ಯವಿಲ್ಲ.

ಇಂತಹ ಆಸ್ಟಿನ್‌ನ ಸಿದ್ಧಾಂತವು 3 ಮುಖ್ಯಾಂಶಗಳನ್ನು ಹೊಂದಿದೆ

1. ಇವನ ಪ್ರಕಾರ ರಾಜ್ಯವು ಒಂದು ಶಾಸನಬದ್ಧವಾಗಿ ರಚಿತವಾದ ಸಂಸ್ಥೆಯಾಗಿದ್ದು ಇದು ಅಧಿಕಾರವನ್ನು ನೀಡುವ ಕೊನೆಯ ಶಕ್ತಿಯಾಗಿದೆ.
2. ಇಲ್ಲಿನ ಅಧಿಕಾರವು ಅನಿಯಂತ್ರಿತವಾಗಿದ್ದು ಇದು ಜಾಣತನದಿಂದಾಗಲಿ, ದಡ್ಡತನದಿಂದಾಗಲಿ ಸತ್ಯವಾಗಲಿ ಅಸಾಧ್ಯವಾಗಲಿ, ನೈತಿಕವಾಗಲಿ, ಅನೈತಿಕವಾಗಲಿ ವರ್ತಿಸಬಾರದು ಇಲ್ಲಿ ರಾಜ್ಯದ ಲಕ್ಷಣಗಳನ್ನು ವಿವರಿಸುವಂತಿಲ್ಲ.
3. ಈ ಸರ್ವಾಧಿಕಾರದ ನಿರ್ದೇಶನವೇ ಇವನನ್ನು ಸರ್ವಶಕ್ತನಾಗಿಸುವುದು ಶಾಶ್ವತವಾಗಿಸುವುದು ಅನಿಯಂತ್ರಿಸವಾಗಿಸುವುದು ಅವಿಭಾಜ್ಯವಾಗಿಸುವುದು ಹೀಗೆ ಆಸ್ಟೀನ್ ತನ್ನ ಏಕಸಾಮಿತ್ವ ಸಿದ್ಧಾಂತವನ್ನು ಪ್ರತಿಪಾದಿಸುವುದಿದ್ದು ಇಲ್ಲಿ ಪ್ರಮುಖವಾಗುತ್ತದೆ.

## 3.6 ಏಕಸಾಮಿತ್ವ ಸಿದ್ಧಾಂತದ ಟೀಕೆ

ಶಾಸನೀಯ ದೃಷ್ಟಿಕೋನದಲ್ಲಿ ಆಸ್ಟಿನ್ ಸಿದ್ಧಾಂತವು ಏಕಸಾಮಿತ್ವದ ಬಗ್ಗೆ ಇರುವ ಒಂದು ದೃಷ್ಟಿಕೋನವು ನಿಜಕ್ಕೂ ಸತ್ಯವಾದದ್ದು. ಈ ದೃಷ್ಟಿಕೋನವು ರಾಜ್ಯಕ್ಕೆ ಹೋಲಿಸಿ ನೋಡಿದಾಗ ಈ ಸತ್ಯವು ಅಸಹಜವಾದದ್ದು ಗುರುತಿಸಲು ಸಾಧ್ಯವಾಗುತ್ತದೆ ಇಂತಹ ಆಸ್ಟೀನ್‌ನ ತತ್ವವನ್ನು ಈ ಕೆಳಕಂಡ ಅಂಶಗಳ ಮೇಲೆ ಟೀಕಿಸಬೇಕಾಗಿದೆ.

1. ಬ್ರೈಸ್‌ರವರ ಪ್ರಕಾರ ಆಸ್ಟಿನ್‌ನ ಸರ್ವಾಧಿಕಾರ ಸಿದ್ಧಾಂತವು ಪ್ರಜಾಪ್ರಭುತ್ವದ ಹೋರಾಟಪೂರ್ವದಲ್ಲಿ ಇದ್ದಂತವುದು. ಇಂತಹ ಸರ್ವಾಧಿಕಾರಿ ಪ್ರಾಬಲ್ಯವು ರಷ್ಯಾದ ಜಾರ್ ದೊರೆಗಳ, ಬ್ರಿಟನ್‌ನಲ್ಲಿರುವ ಪಾರ್ಲಿಮೆಂಟ್ ಅಧಿಕಾರ ಕುರಿತು ಹೇಳಬಹುದಾಗಿದೆ. ಯಾವ ಆಧುನಿಕ ಪ್ರಜಾಪ್ರಭುತ್ವಗಳು ಸಂವಿಧಾನದ ಮೂಲಕ ಆಳ್ವಿಕೆಗೆ ಒಳಪಟ್ಟಿದೆಯೋ ಮತ್ತು ಎಲ್ಲ ರಾಜಕೀಯ ಅಧಿಕಾರವು ವಿಕೇಂದ್ರೀಕೃತಗೊಂಡಿದೆಯೋ ಅಲ್ಲಿ ಆಸ್ಟಿನ್‌ನ ಸರ್ವಾಧಿಕಾರಿ ಅಧಿಕಾರಗಳನ್ನು ಗುರುತಿಸಲು ಸಾಧ್ಯವಿಲ್ಲ ಬ್ರಿಟನ್ ಕುರಿತು ಚರ್ಚಿಸುವಾಗಲಾದರೂ ಇಂಗ್ಲೆಂಡಿನ ಪಾರ್ಲಿಮೆಂಟ್‌ನ ಬಗ್ಗೆ ಆಸ್ಟೀನ್ ನೀಡಿದ ವಿಶ್ಲೇಷಣೆಯಲ್ಲಿ ಸರ್ವಾಧಿಕಾರವು ರಾಜತ್ವದ ಅಧಿಕಾರವನ್ನು ಕುರಿತು ಹೇಳುವಂತಾಗಿದೆ. ಅಲ್ಲಿನ ಶಾಸಕಾಂಗದ ಅಂಗಗಳನ್ನು ಕುರಿತು ನೀಡಿದ ಹೇಳಿಕೆಯಾಗಿದೆ. ಆದರೆ ಆಸ್ಟೀನ್ ಜನಸಾಮಾನ್ಯರ ಶಾಸಕಾಂಗಕ್ಕೆ ಹೆಚ್ಚಿನ ಪ್ರಾಮುಖ್ಯತೆ ಕೊಡಲಿಲ್ಲ. ಇದರಂತೆಯೇ ಸಂಯುಕ್ತ ಸರ್ಕಾರಗಳನ್ನು ಹೊಂದಿದ ರಾಜ್ಯಗಳಲ್ಲಿಯೂ ಆಸ್ಟೀನ್‌ನ ಸರ್ವಾಧಿಕಾರ ಅಧಿಕಾರವನ್ನು ಗುರುತಿಸುವುದು ಅಸಾಧ್ಯದ ಕೆಲಸ. ಕಾರಣ ಇಲ್ಲಿ ಸಂವಿಧಾನ ಅಧಿಕಾರ ಕೇಂದ್ರಗಳ ನಡುವಿನ ಸಂಬಂಧಗಳನ್ನು ಬೆಸೆಯುತ್ತಾ ಅಧಿಕಾರವನ್ನು ಹರಡಿರುತ್ತದೆ ಅಮೇರಿಕಾವನ್ನು ಉದಾಹರಣೆಗೆ ತೆಗೆದುಕೊಂಡರೆ ಇದರಲ್ಲಿ ಅಮೇರಿಕಾದ ಅಧ್ಯಕ್ಷನು ಸರ್ವಾಧಿಕಾರಿಯೇ ಅಥವಾ ಅಮೇರಿಕಾದ ಕಾಂಗ್ರೆಸ್ ಹೆಚ್ಚಿನ ಅಧಿಕಾರ ಹೊಂದಿರುವುದೇ ಎಂದು ಚರ್ಚಿಸಲು ಸಾಧ್ಯವಿಲ್ಲ ಕಾರಣ ಇವೆರಡರ ಅಧಿಕಾರವು ಅಮೆರಿಕೆಯ ಸಂವಿಧಾನದಿಂದ ಹೊರಹೊಮ್ಮುತ್ತವೆ. ಈ ಕಾರಣದಿಂದ ಇಂತಹ ಸಂವಿಧಾನವನ್ನು ತಿದ್ದುಪಡಿಮಾಡುವ ಅಧಿಕಾರವನ್ನೆ ನಾವು ಸರ್ವಾಧಿಕಾರವೆಂಧು ಹೇಳಬೇಕಾಗುತ್ತದೆ. ಈ ರೀತಿ ಚರ್ಚಿಸಿದಲ್ಲಿ ಆಸ್ಟಿನ್‌ನ ವಿಚಾರಗಳು ಆಚರಣೆಗೆ ತರಲಾಗದಿದ್ದರೂ ಸರ್ವಾಧಿಕಾರಿಯವರು ಒಪ್ಪಿಸಬೇಕಾದದ್ದೇ ಒಂದಲ್ಲ ಒಂದು ಸಂದರ್ಭದಲ್ಲಿ ಒಬ್ಬ ಸರ್ವಾಧಿಕಾರಿಗಿಂತ ಮಿಗಿಲಾದ ಅಧಿಕಾರ ಇವರ ಕೈಯಲ್ಲಿ ಇಲ್ಲದಿರುವುದು ಕಂಡುಬರುತ್ತದೆ. ಇದೇ ನಿಟ್ಟಿನಲ್ಲಿ ಹೆನ್ನಿವೆನ್‌ರವರ ತಮ್ಮ ಚರ್ಚೆ ಮುಂದುವರೆಸಿ ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿ ಪರರಾಷ್ಟ್ರಗಳಲ್ಲಿ ಕಾನೂನು ಸಂಪೂರ್ಣವಾಗಿ ಪಕ್ವಹೊಂದಿಲ್ಲದ ಕಾರಣ ಆಸ್ಟಿನ್ ತಿಳಿಸುವ ಕಾನೂನು ಸರ್ವಾಧಿಕಾರಿ ಇಚ್ಛೆ ಎಂಬ ಮಾತನ್ನು ಒಪ್ಪಲಾಗುವುದಿಲ್ಲ. ಆದರೂ ಅಭಿವೃದ್ಧಿ ಪರ ರಾಷ್ಟ್ರಗಳಲ್ಲಿ ಸಂಪ್ರದಾಯ ಮತ್ತು ಸಂಸ್ಕೃತಿ ಆಚರಣೆ ಇವುಗಳು ಜನರಲ್ಲಿ ಪ್ರಜ್ಞಾಪೂರಕವಾಗಿ ಹೊಂದಿಕೊಂಡ ಕಾರಣ ಇವುಗಳನ್ನು ಸರ್ವಾಧಿಕಾರಿ ಮನಸೋ ಇಚ್ಚೆ ಬದಲಾಯಿಸಲು ಸಾಧ್ಯವಿಲ್ಲ ಹೀಗಾಗಿ ಆಸ್ಟೀನ್‌ನ ಸಿದ್ಧಾಂತದಲ್ಲಿ ನಾವು ಕೇವಲ ಶಾಸನೀಯವಾದ ಅಧಿಕಾರಗಳನ್ನು

ಕಾಣಬಹುದೇ ಹೊರತು ಅದನ್ನು ರಾಜಕೀಯ ಮತ್ತು ಚಾರಿತ್ರಿಕ ಹಿನ್ನೆಲೆಯಲ್ಲಿ ಅರ್ಥೈಯಿಸಲು ಸಾಧ್ಯವಿಲ್ಲ.

2. ಆಸ್ಟಿನ್ ಸಿದ್ಧಾಂತವನ್ನು ಟೀಕಿಸುವ ಮತ್ತೊಂದು ವಿಚಾರವೆಂದರೆ ಸರ್ವಾಧಿಕಾರವು ಅರಾಜಕತೆಗೆ ಕಾರಣವಾಗಿದೆ ಆಸ್ಟಿನ್ ಸ್ವತಃ ಈ ಬಗ್ಗೆ ಪ್ರಶ್ನೆಯನ್ನು ಹೊಂದಿದ್ದು ಇವನ ದೃಷ್ಟಿಯಲ್ಲಿ ಸರ್ವಾಧಿಕಾರಗಳಲ್ಲಿ ಹಂತಗಳು ಇರಲು ಸಾಧ್ಯವಿಲ್ಲವೆಂದು ಇವನ ಚರ್ಚೆಯಾಗಿತ್ತು. ಕಾನೂನು ಎಲ್ಲರಿಗಿಂತಲೂ ಉಚ್ಛ್ರಾಯ ನೀತಿ ಇರುವುದರಿಂದ ಇವನು ಸಮಾಜವನ್ನು ಸುಧಾರಿಸಲು ಅನವಶ್ಯಕವಾಗಿ ಬೇಕಾಗುವ ಒಂದು ವ್ಯವಸ್ಥೆಯಾಗಿದ್ದು ಇದಕ್ಕೆ ರಾಜ್ಯದ ಅವಶ್ಯಕತೆಯೂ ಇದೆ ಆದರೆ ಕಾನೂನಿನ ಮುಖಾಂತರವೇ ಅರಾಜಕತೆಯನ್ನು ಸ್ಥಾಪಿಸುವುದು ಸಾಧ್ಯವಿಲ್ಲ. ಈ ದೃಷ್ಟಿಯಲ್ಲಿಯೂ ಸಹ ಸಂಪ್ರದಾಯ, ಆಚರಣೆ, ಇವೆಲ್ಲವೂ ಮಾನವ ನಿರ್ಮಿತ ಕಾನೂನುಗಳೇ ಹೊರತು ಸ್ವಾತಂತ್ರ್ಯವಾದುವುಗಳಲ್ಲಿ ಇಂತಹ ಯಾವುದೇ ಕಾನೂನುಗಳಿದ್ದರೂ ಇವು ಸಮಾಜದ ಒಳಿತಿಗಾಗಿ ಇರಬೇಕೇ ಹೊರತು ಅಸ್ಥಿರತೆ ಮತ್ತು ಅರಾಜಕತೆ ಸ್ಥಾಪಿಸಲು ಇರಲು ಸಾಧ್ಯವಿಲ್ಲ ಎಂದಿದ್ದಾರೆ. ಹೀಗಾಗಿ ಆಸ್ಟಿನ್ ಸಹ ಬೆಂಥ್ಯಾಮ್‌ರಂತೆ ಹೆಚ್ಚಿನ ಜನರಿಗೆ ಹೆಚ್ಚಿನ ಸಂತೋಷವನ್ನು ನೀಡುವ ಬಗ್ಗೆ ಚರ್ಚೆ ಮಾಡಿದ್ದಾರೆ.

## 3.7 ವಿವಾದಗಳ ಚರ್ಚೆ

ರಾಜ್ಯ ಮತ್ತು ಸ್ವತಂತ್ರ ಸಂಪ್ರದಾಯಗಳ ಬಗ್ಗೆ ಚರ್ಚೆ ಒಂದು ಸಮಾಜದಲ್ಲಿ ಸಾರ್ವಭೌಮತ್ವದ ಸ್ಥಾನಮಾನವನ್ನು ಕುರಿತು ನಡೆಸಿದ ಚರ್ಚೆಯಾಗಿದೆ ಲಾಸ್ಕಿ ಈ ಚರ್ಚೆ ಮಂಡಿಸುವಾಗ ಸಾರ್ವಭೌಮತ್ವದ ಬದಲು ಅಧಿಕಾರವೆಂಬ ಪದ ಬಳಸಿದ್ದಾನೆ. ಕಾರಣ ಅಧಿಕಾರವನ್ನು ವ್ಯಕ್ತಿ ಅಥವಾ ವ್ಯಕ್ತಿಗಳು ಚಲಾಯಿಸಬಹುದಾಗಿದೆ ಮತ್ತು ಇಂತಹ ಅಧಿಕಾರಿಗಳು ನ್ಯಾಯಯುತವಾಗಿ ಮತ್ತು ಶಾಸನೀಯವಾಗಿ ಹಲವಾರು ಜನರಲ್ಲಿ ಹಂಚಲ್ಪಟ್ಟಿರುತ್ತದೆ ಈ ಕಾರಣದಿಂದ ಶಾಸನೀಯವಾಗಿ ಸರ್ವಾಧಿಕಾರದ ಚರ್ಚೆಯು ಒಂದು ಸಮಾಜದಲ್ಲಿ ಹಂಚಲ್ಪಟ್ಟ ಅಧಿಕಾರದಲ್ಲಿ ಅತ್ಯುನ್ನತ ಅಧಿಕಾರವು ಎಂಬ ಬಗ್ಗೆ ಕೇಂದ್ರೀಕೃತವಾಗುತ್ತದೆ ಲಾಸ್ಕಿರವರ ಪ್ರಕಾರ ಇಂತಹ ಚರ್ಚೆಯು ರಾಜ್ಯವನ್ನು ಕುರಿತದ್ದಾದರೆ ರಾಜ್ಯವು ಹಲವಾರು ತೊಂದರೆ ನೀಡದ ಜನರ ಮತ್ತು ಜನರಿಂದ ಒಪ್ಪಿಗೆಯನ್ನು ಪಡೆದು ಆ ಒಪ್ಪಿಗೆಯ ಬಗ್ಗೆ ಪುನರ್ ಪರಿಶೀಲನೆ ನಡೆಸಿ ಅನುಭವಿಗಳಾಗಿ ಪ್ರಜಾಪ್ರಭುತ್ವದ ಮಾರ್ಗದಲ್ಲಿ ಪ್ರತಿನಿಧಿಗಳ ಮೂಲಕ ಸ್ಥಾಪಿಸಿದ ಅಧಿಕಾರವೇ ರಾಜ್ಯವಾಗಿದೆ ಎಂದಿದ್ದಾರೆ. ಈ ಒಂದು ಹಿನ್ನೆಲೆಯಲ್ಲಿ ಲಾಸ್ಕಿರವರು ಒಂದು ರಾಜ್ಯದಲ್ಲಿನ ಶಾಸನಗಳು ಹಲವಾರು ಜನರ ಪರಿಣಿತ ಜ್ಞಾನಕ್ಕಿಂತ ಅನುಭವ ಜ್ಞಾನದ ಮೇಲೆ ಇರಬೇಕೆಂದಿದ್ದಾರೆ. ಹೀಗಾಗಿ ಕಾನೂನನ್ನು ಯಾವುದೇ ಒಂದು ಮಾರ್ಗವು ರಚಿಸಬಾರದು ಎಲ್ಲ ಹಿತಾಸಕ್ತಿಗಳು ಒಟ್ಟಾರೆ ಸೇರಿ ತಮ್ಮ ಚರ್ಚೆಯ ಮುಖಾಂತರ ತಮ್ಮ ಅನುಭವಗಳನ್ನು ಒಟ್ಟುಗೂಡಿಸಿ ಒಂದು ಸಮಾಜ ಮತ್ತು ರಾಜ್ಯ ರಚನೆಯಾಗುವುದು ಉತ್ತಮವೆಂದಿದ್ದಾರೆ. ಇಂತಹ ಒಂದು ಸಮಾಜದಲ್ಲಿ ಕಾನೂನಿಗೆ ಯಾವ ಒತ್ತಡವಿಲ್ಲದೇ ಗೌರವ ದೊರಕುತ್ತದೆ. ಆದರೆ ಸಾರ್ವಭೌಮತ್ವದ ಹೆಸರಿನಲ್ಲಿ ಇಂತಹ ಅಧಿಕಾರಕ್ಕೆ ಹೆಚ್ಚಿನ ಬೆಲೆ ದೊರಕುವುದಿಲ್ಲ ಮೇಲಿನ ಈ ಕಾರಣಕ್ಕಾಗಿ ಲಾಸ್ಕಿರವರು ಆಡಳಿತದಲ್ಲಿ ಒಂದು ಹಂತದಿಂದ ನಿರ್ಧಾರ ತೆಗೆದುಕೊಳ್ಳುವಿಕೆಯು ವಿಕೇಂದ್ರೀಕರಣಗೊಳ್ಳಬೇಕೇ ಆಗ ಮಾತ್ರ ಹೊಸ ವಿಚಾರಗಳ ಅರಳುವಿಕೆಗೆ ಸಾಧ್ಯವಿದೆ ಎಂದಿದ್ದಾರೆ.

ಲಾಸ್ಕಿರವರ ಪ್ರಕಾರ ಆಧುನಿಕ ಪ್ರಜಾಪ್ರಭುತ್ವ ಸಂಬಂಧಗಳ ಜೊತೆಯಲ್ಲಿಯೇ ಇದರ ಕಾರ್ಯಚರಣೆಯನ್ನು ಎಲ್ಲ ನಾಗರಿಕರು ಒಟ್ಟಾರೆ ಸೇರಿ ಬೆಳೆಸಿದ್ದಾರೆ ಸರ್ಕಾರವೆಂದರೆ ಇದೆಂದು ಪ್ರಜಾಪ್ರಭುತ್ವ ಸರ್ಕಾರ ಅಧಿಕಾರವು ಇಲ್ಲಿ ಅಧಿಕಾರ ಹಂಚಿಕೆಯಾಗಿದ್ದು ಜನರಲ್ಲಿ ಜವಾಬ್ದಾರಿಯನ್ನು ತುಂಬಿರುತ್ತದೆ ಎಂದಿದ್ದಾರೆ. ಇದಕ್ಕೆ ಉದಾಹರಣೆ ನೀಡುತ್ತಾ ಅವರು ಒಂದು ಚಿಕ್ಕ ಪಟ್ಟಣವು ಅವರಿಗೆ ಸಾರ್ವಜನಿಕ ವಾಹನವನ್ನು ಅವಶ್ಯಕತೆ ಇದೆ ಎಂದಿರುವುದನ್ನು ಅವರೇ ನಿರ್ಧರಿಸಬೇಕು ಎಂದಿದ್ದಾರೆ. ಯಾವಾಗ ಕಾರ್ಯ ನಿರ್ವಹಣಾ ಜವಾಬ್ದಾರಿ ವಿಕೇಂದ್ರೀಕರಣಗೊಳ್ಳುತ್ತದೆಯೊ ಜನರೆಲ್ಲರೂ ಒಟ್ಟಾಗಿ ಜವಾಬ್ದಾರಿಯುತವಾಗಿ ದುಡಿಯುತ್ತಾರೆ, ಇದನ್ನೇ ನಾವು ಸ್ವ ಸರ್ಕಾರದಲ್ಲಿ ತರಬೇತಿ ನೀಡುವದೆಂದು ಹೇಳಿದ್ದಾರೆ ಇಂತಹ ಒಂದು ದೃಷ್ಟಿಕೋನದಲ್ಲಿ ರಾಜ್ಯವು ನೈತಿಕ ಅಧಿಕಾರವಾಗಿ ಸರ್ಕಾರದ

ಯಾವುದೇ ಕಾರ್ಯಾಚರಣೆಯು ವಿರೋಧಿಸುವ ಸಂದರ್ಭ ಬಂದರೂ ಒಂದು ನಿರ್ಧರಿತ ಹಂತದಲ್ಲಿ ವಿರೋಧವನ್ನು ನಿರ್ಧರಿಸುವ ಹಕ್ಕು ಇರುತ್ತದೆ ಆದರೆ ಸರ್ಕಾರದಲ್ಲಿಯೇ ವಿರೋಧಿಸುವಂತದ್ದು ಎಲ್ಲ ಕಾಲದಲ್ಲಿ ವಿರೋಧ ವ್ಯಕ್ತಪಡಿಸಿದಲ್ಲಿ ಸಮುದಾಯದ ಯಾವುದೇ ಕಾರ್ಯಾಚರಣೆಯ ಯಶಸ್ಸನ್ನು ಗಳಿಸಲು ಸಾಧ್ಯವಿಲ್ಲ ಕೆಲವೊಂದು ಸಂದರ್ಭದಲ್ಲಿ ರಾಜ್ಯಕ್ಕೆ ಹೆಚ್ಚಿನ ಅಧಿಕಾರವಿದ್ದಲ್ಲಿ ಅದನ್ನು ನಿಯಂತ್ರಿಸುವ ಹಕ್ಕು ಜನರಲ್ಲಿರಬೇಕು ಹಾಗೆಯೇ ಜನರಲ್ಲಿ ಹೆಚ್ಚಿನ ಅಧಿಕಾರವಿದ್ದಲ್ಲಿ ರಾಜ್ಯವು ಜನರ ಅಸಮಂಜಸ ಬೇಡಿಕೆಗಳನ್ನು ತಡೆಹಿಡಿಯುವ ಶಕ್ತಿಯನ್ನು ಹೊಂದಿರಬೇಕು. ಹೀಗೆ ಲಾಸ್ಕಿರವರು ರಾಜ್ಯ ಮತ್ತು ಸರ್ಕಾರದ ನಡುವೆ ಅಧಿಕಾರದ ವಿಭಜನೆ ಮತ್ತು ನಿಯಂತ್ರಣದ ಬಗ್ಗೆ ಚರ್ಚಿಸಿದ್ದಾರೆ. ಇದೇ ಸಾಲಿನಲ್ಲಿ ಸ್ವತಂತ್ರವಾದ ನ್ಯಾಯಾಂಗವು ಇರಬೇಕೆಂದು ಪ್ರತಿಪಾದಿಸಿದ್ದಾರೆ. ಸರ್ಕಾರಗಳ ಈ ಸಂಸ್ಥೆಗಳಿಗೆ ಒಟ್ಟಾಗಿರಬೇಕು ಎಲ್ಲ ನ್ಯಾಯಾಂಗಗಳು ಸ್ವತಂತ್ರವನ್ನು ಕಾಪಾಡುವಷ್ಟು ಎತ್ತರಕ್ಕೆ ಬೆಳೆದಿರುತ್ತವೆಯೋ ಅಲ್ಲಿ ಎಲ್ಲ ರೀತಿಯಲ್ಲಿಯೂ ಅಧಿಕಾರಗಳ ನಿಯಂತ್ರಣವಾಗುತ್ತದೆ ಎಂದಿದ್ದಾರೆ. ಪತ್ರಿಕೋದ್ಯಮ ಸಮೂಹ ಮಾಧ್ಯಮ, ಇವುಗಳು ಸಹ ಅಧಿಕಾರದ ತಪ್ಪನ್ನೆಸಗಿ ಕೂಡಲೇ ಚಕಾರವೆತ್ತಂತಿರಬೇಕು ಎಂದು ಚರ್ಚಿಸುವ ಇವರು ಸಮಾಜದಲ್ಲಿ ಹಂತ ಹಂತಗಳಲ್ಲಿ ಪ್ರತಿಯೊಂದಕ್ಕೆ ನಿಯಂತ್ರಣವಿರುವುದನ್ನು ಇವರು ಪ್ರತಿನಿಧಿಸಿದ್ದಾರೆ. ಇವರ ದೃಷ್ಟಿಯಲ್ಲಿ ರಾಜ್ಯವು ಅಂತ್ಯವಲ್ಲ. ಆದರೆ ಒದು ಸಮಾಜದಲ್ಲಿನ ಸದಸ್ಯರುಗಳಿಗೆ ತಮ್ಮ ಗುರಿಯನ್ನು ತಲುಪಲು ರಾಜ್ಯವು ಒಂದು ಸಾಧನವೆಂದು ಹೇಳಿದ್ದಾರೆ ಇವರ ದೃಷ್ಟಿಯಲ್ಲಿ ಉತ್ತಮ ರಾಜ್ಯವು ತನ್ನ ಅಧಿಕಾರವನ್ನು ಜನರ ಒಳಿತಿಗಾಗಿ ಬಳಸಬೇಕು ಅದು ಸಾಧ್ಯವಾದಷ್ಟು ಮಟ್ಟಿಗೆ ಹಂಚಿಕೆಯಾಗರಬೇಕು ಎಂಬುದಾಗಿದೆ. ಈ ಮೇಲಿನ ಚರ್ಚೆಯು ಸಾರ್ವಭೌಮತ್ವದ ಬಗ್ಗೆ ಸಾಕಷ್ಟು ಬೆಳಕನ್ನು ಚೆಲ್ಲುತ್ತದೆ ಎಂದು ಹೇಳಬಹುದಾಗಿದೆ.

## ನಿಮ್ಮ ಪ್ರಗತಿ ಪರಿಶೀಲನೆ - 1

**ಸೂಚನೆ:** 1. ಈ ಕೆಳಗೆ ಬಿಟ್ಟಿರುವ ಜಾಗವನ್ನು ನಿಮ್ಮ ಉತ್ತರಕ್ಕೆ ಉಪಯೋಗಿಸಿಕೊಳ್ಳಿ.

2. ಈ ಘಟಕದ ಕೊನೆಯಲ್ಲಿ ನೀಡಿರುವ ಉತ್ತರದೊಂದಿಗೆ ನಿಮ್ಮ ಪ್ರಗತಿಯನ್ನು ಪರಿಶೀಲಿಸಿಕೊಳ್ಳಿ.

**1. ಏಕತ್ವ ಹಾಗೂ ಬಹುತ್ವವಾದಗಳ ಉಗಮವನ್ನು ತಿಳಿಸಿ.**

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

**2. ಬಹುತ್ವ ಸಿದ್ಧಾಂತದ ಪರವಾದ ಚರ್ಚೆಗಳನ್ನು ವಿವರಿಸಿ.**

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

**3. ಏಕತ್ವ ಸಿದ್ಧಾಂತದ ಬೆಂಬಲಿತ ಅಭಿಪ್ರಾಯಗಳನ್ನು ಚರ್ಚಿಸಿ.**

........................................................................................................................................

........................................................................................................................................

........................................................................................................................................

........................................................................................................................................

........................................................................................................................................

........................................................................................................................................

**4. ಏಕತ್ವ ಸಿದ್ಧಾಂತದ ಬಗೆಗಿನ ಟೀಕೆಯನ್ನು ವಿವರಿಸಿ.**

........................................................................................................................................

........................................................................................................................................

........................................................................................................................................

........................................................................................................................................

........................................................................................................................................

........................................................................................................................................

## 3.8 ಒಟ್ಟಾರೆ ಅಭಿಪ್ರಾಯ

ಇಲ್ಲಿಯವರೆಗೆ ಏಕಸಾಮಿತ್ವ ಸಾರ್ವಭೌಮತ್ವದ ಹಾಗೂ ಬಹುತ್ವವಾದದ ಸಿದ್ಧಾಂತ ಚರ್ಚೆಯನ್ನು ಗಮನಿಸಿದ್ದೇವೆ. ಈ ಚರ್ಚೆಯಿಂದ ತಿಳಿದುಬರುವುದೇನೆಂದರೆ ರಾಜ್ಯದ ವ್ಯವಸ್ಥೆ ಬದಲಾದಂತೆ ಸಾಮಾಜಿಕ ಚಿಂತನೆ ಬದಲಾಗಿ ಏಕಸಾಮಿತ್ವ ಚರ್ಚೆ ಹಿನ್ನೆಲೆಯಲ್ಲಿ ಬೆಳೆದ ರಾಜತ್ವವು ಬಹುತ್ವದ ಹಿನ್ನೆಲೆಯಲ್ಲಿ ಪ್ರಜಾಪ್ರಭುತ್ವವಾದಿ ಸರ್ಕಾರವಾಗಿ ತನ್ನ ಅಸ್ತಿತ್ವ ಕಂಡುಕೊಂಡಿದೆ ಎಂಬುದಾಗಿದೆ. ಇವೆರಡರ ನಡುವೆ ಬಹುತ್ವ ಸಿದ್ಧಾಂತವೇ ಹೆಚ್ಚು ಉತ್ತಮವೆಂದು ಹೇಳಬೇಕಿಲ್ಲ.

## 3.9 ಕಠಿಣ ಪದಗಳು

ಉತ್ತಮೋತ್ತಮ - ಜನರಲ್ಲೆ ಶ್ರೇಷ್ಠನಾದವರು

ಅವಿಭಾಜ್ಯ - ವಿಭಜಿಸಲು ಸಾಧ್ಯವಿಲ್ಲದ್ದು

ಅನಿಯಂತ್ರಿತ - ನಿಯಂತ್ರಣಕ್ಕೆ ಒಳಪಡದ

## 3.10 ಕೆಲವು ಉಪಯುಕ್ತ ಗ್ರಂಥಗಳು


ಎಫ್.ಡಬ್ಲ್ಯು. ಕೊಕರ್ - ರಿಸೆಂಟ್ ಪೊಲಿಟಿಕಲ್ ಥಾಟ್

ಎಸ್.ಪಿ. ವರ್ಮಾ - ಮಾಡರ್ನ್ ಪೊಲಿಟಿಕಲ್ ಥಿಯರಿ

ಡಾ. ಕೆ.ಜೆ.ಸುರೇಶ್ - ಆಧುನಿಕ ರಾಜಕೀಯ ಸಿದ್ಧಾಂತ

ಡಾ. ಟಿ.ಡಿ.ದೇವೇಗೌಡ - ರಾಜಕೀಯ ಸಿದ್ಧಾಂತ

ಡಾ. ಟಿ.ಡಿ. ದೇವೇಗೌಡ - ರಾಜ್ಯಶಾಸ್ತ್ರದ ಮೂಲ ಪರಿಕಲ್ಪನೆಗಳು

## 3.11 ನಿಮ್ಮ ಪ್ರಗತಿ ಗಮನಿಸಿಕೊಳ್ಳಿ

<u>ನಿಮ್ಮ ಪ್ರಗತಿ ಪರಿಶೀಲನೆ</u> **- 1**

1. ನೋಡಿ ವಿಭಾಗ 3.2 ಮತ್ತು 3.3
2. ನೋಡಿ ವಿಭಾಗ 3.4
3. ನೋಡಿ ವಿಭಾಗ 3.5
3. ನೋಡಿ ವಿಭಾಗ 3.6

# ಘಟಕ 4 ಕಾನೂನು : ಅರ್ಥ ಮತ್ತು ವಿಧಗಳು

## ರಚನೆ

4.0 ಉದ್ದೇಶಗಳು

4.1 ಪೀಠಿಕೆ

4.2 ಕಾನೂನಿನ ತತ್ವ

4.3 ಕಾನೂನಿನ ಮೂಲಗಳು

4.4 ಕಾನೂನಿನ ಅರ್ಥ

4.5 ಕಾನೂನಿನ ವಿಧಗಳು

4.6 ಸಮಾರೋಪ

4.7 ಕಠಿಣ ಪದಗಳು

4.8 ಕೆಲವು ಉಪಯುಕ್ತ ಗ್ರಂಥಗಳು

4.9 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು

## 4.0 ಉದ್ದೇಶಗಳು

ಕಾನೂನು ಎಂಬ ಪದದ ಅರ್ಥ, ತತ್ವ, ವಿಧಗಳು ಮತ್ತು ಇದರ ಮಹತ್ವವನ್ನು ನಿಮಗೆ ತಿಳಿಸಲು ಈ ಅಧ್ಯಾಯವನ್ನು ವಿನ್ಯಾಸಗೊಳಿಸಲಾಗಿದೆ. ಕಾನೂನು ಎಂಬ ಪದವನ್ನು ಹೇಗೆ ವಿವಿಧ ರೂಪದಲ್ಲಿ ಹಾಗೂ ಅರ್ಥಗಳಲ್ಲಿ ಬಳಸಲಾಗಿದೆ ಹಾಗೂ ಇದರ ಪರಿಕಲ್ಪನೆಯೂ ವಿವಿಧ ಮೂಲಗಳಿಂದ ಹುಟ್ಟಿಕೊಂಡು ಮತ್ತು ಬೇರೆ ಬೇರೆ ಚೌಕಟ್ಟಿನಲ್ಲಿ ಬೆಳೆದು ಕಾನೂನು ಎಂಬ ಪದಕ್ಕೆ ಹೇಗೆ ಅರ್ಥರೂಪ ಹಾಗೂ ಅಂಶಗಳನ್ನು ನೀಡಲಾಗಿದೆ ಎಂಬುದನ್ನು ಕೂಡಾ ಇಲ್ಲಿ ನಿಮಗೆ ತಿಳಿಸಲು ಪ್ರಯತ್ನಿಸಲಾಗಿದೆ. ಈ ಪಠ್ಯವನ್ನು ಓದಿದ ನಂತರದಲ್ಲಿ ನೀವು ಕಾನೂನಿನ ಅರ್ಥ, ಮಹತ್ವ ಮೂಲಗಳು ಹಾಗೂ ವಿಧಗಳನ್ನು ತಿಳಿದುಕೊಂಡಿರಲು ಸಾಧ್ಯರಾಗುತ್ತೀರಿ.

## 4.1 ಪೀಠಿಕೆ

ಸಾರ್ವಭೌಮತ್ವ ರಾಜ್ಯದ ಒಂದು ಪ್ರಮುಖ ಲಕ್ಷಣವಾದರೆ, ಕಾನೂನು ಸಾರ್ವಭೌಮಾಧಿಕಾರದ ಪ್ರಮುಖ ಲಕ್ಷಣವಾಗಿದೆ. ನಾವು ಇನ್ನು ಒಂದು ಹೆಜ್ಜೆ ಮುಂದೆ ಹೇಳಬೇಕೆಂದರೆ ನ್ಯಾಯದ ಮೂಲವಾದ ವಿಷಯ ಕಾನೂನು ಆಗಿದೆ.

ಕಾನೂನಿನ ಪದದ ವಿಕಸನವನ್ನು ನಾವು ಎರಡು ವಿಧಗಳಲ್ಲಿ ತಿಳಿದುಕೊಳ್ಳಬಹುದು. ವಿಶಾಲವಾಗಿ ಇದರ ವಿಕಸನವನ್ನು ಹೇಳುವುದಾದರೆ ತತ್ವಶಾಸ್ತ್ರದ ಮೂಲಕ ನೋಡಬಹುದು ಹಾಗೆಯೇ ಸಂಕುಚಿತ ದೃಷ್ಟಿಯಲ್ಲಿ ನ್ಯಾಯದ ಹಾದಿಯಲ್ಲಿ ನೋಡಬಹುದಾಗಿದೆ. ಇಲ್ಲಿ ನಾವು ಇವೆರಡನ್ನೂ ಕೂಡಾ ನೋಡೋಣ.

## 4.2 ಕಾನೂನಿನ ತತ್ವ

ರಾಜಕೀಯ ಸಿದ್ಧಾಂತದಲ್ಲಿ ಕಾನೂನು ಹಾಗೂ ಅದರ ಮಹತ್ವವನ್ನು ರಾಜ್ಯ ಹಾಗೂ ಸಮಾಜ ಹೇಗಿದೆ ಎಂಬುದನ್ನು ಅನಾದಿಕಾಲದಿಂದಲೂ ತತ್ವಜ್ಞಾನಿಗಳೂ ತಮ್ಮ ಬರವಣಿಗೆಯಲ್ಲಿ ತಿಳಿ ಹೇಳಲು ಪ್ರಯತ್ನಿಸಿದ್ದಾರೆ. ಸಾರ್ವಭೌಮತ್ವವು ರಾಜ್ಯದ ಒಂದು ಪ್ರಮುಖ ಲಕ್ಷಣ. ಕಾನೂನು ಅದರ ಸಾರ್ವಭೌಮಾಧಿಕಾರದ ಪ್ರಮುಖ ಲಕ್ಷಣವಾಗಿದೆ. ಪ್ಲೇಟೋವಿನ ಕಾಲದಿಂದಲೂ ರಾಜ್ಯದ ಕಾರ್ಯ ಚಟುವಟಿಕೆಯಲ್ಲಿ ಕಾನೂನಿನ ಮಹತ್ವವು ತತ್ವಜ್ಞಾನಿಗಳಿಗೆ ಒಂದು ಪ್ರಮುಖವಾದ ವಿಷಯವಾಗಿದೆ. ಪ್ರಾರಂಭದಲ್ಲಿ ಪ್ಲೇಟೋ ಕಾನೂನಿನ ಮೂಲಕ ತತ್ವಜ್ಞಾನಿ ಅರಸನ ಆಳ್ವಿಕೆಗೆ ಹೆಚ್ಚಿನ ಮಹತ್ವವನ್ನು ನೀಡಿದ್ದರೆ, ನಂತರದ ಕಾಲದಲ್ಲಿ ಮಹತ್ತರ ಸ್ಥಾನವನ್ನು ಕೊಟ್ಟಿದ್ದಾನೆ. ಅರಿಸ್ಟಾಟಲನೂ ಸಹ ಕಾನೂನಿಗೆ ನೀಡಿರುವ ಮಹತ್ವವನ್ನು ಆತನ ಬರವಣಿಗೆಯಲ್ಲಿಯೇ ಕಾಣಬಹುದು. ರೋಮನ್ನರು ಮತ್ತು ಮಧ್ಯಯುಗದ ಚಿಂತಕರು ಕೂಡಾ ರಾಜ್ಯದ ಆಡಳಿತ ವ್ಯವಹಾರದಲ್ಲಿ ಕಾನೂನಿಗೆ ಪ್ರಥಮ ಆದ್ಯತೆಯನ್ನು ನೀಡಿದ್ದಾರೆ. ಆದರೆ ಇಂದಿನ ದಿನಗಳಲ್ಲಿ ವ್ಯಕ್ತಿಯ ಆಳ್ವಿಕೆಗೆ ಸಂಬಂಧಿಸಿದಂತೆ ಕಾನೂನಿನ ಆಳ್ವಿಕೆಗೆ ಹೆಚ್ಚಿನ ಆದ್ಯತೆಯನ್ನು ನೀಡಲಾಗಿದೆ.

ಓಸ್ಟನಿಯನ್‌ನ ಪುಸ್ತಕವು ಕಾನೂನಿನ ವಿಕಸನಕ್ಕೆ ಮೈಲಿಗಲ್ಲು ಹೇಗೆ ಕಾನೂನಿನ ಪರಿಕಲ್ಪನೆಯ ವಿಕಸನದಲ್ಲಿ ರೋಮನ್ನರು ಕಾನೂನಿಗೆ ಮೂರು ಸಂಬಂಧಿತವಾದ ಪರಿಕಲ್ಪನೆಗಳನ್ನು ಬೆಳಕಿಗೆ ತಂದರು. ಅವುಗಳು ಓಸ್ಮ ನ್ಯಾಚರಲ್ ಲಾ, ನ್ಯಾಚರಲ ಲಾ ಜಸ್ ಜಂಟಿಯಮ್ ಲಾ ಹಾಗೂ ರಾಷ್ಟ್ರಕ್ಕೆ ಸಾಮಾನ್ಯವಾಗಿ ಓಸ್ ಸವಿಲಿ (ಸಿವಿಲ್ ಲಾ) ಆದರೂ, ಸಾಮಾನ್ಯವಾಗಿ ನೈಸರ್ಗಿಕ ಕಾನೂನು ಹಾಗೂ ರಾಷ್ಟ್ರದ ಕಾನೂನುಗಳು ಬೇರೆ ಬೇರೆ ಆಗಿದ್ದು ನಂತರ ಇವುಗಳನ್ನು ಒಂದೆಡೆ ಸೇರಿಸಿ ಅಂತರರಾಷ್ಟ್ರೀಯ ಕಾನೂನನ್ನು ಮಾಡಿದ ಕೀರ್ತಿ ಗ್ರೋಶಿಯಸ್‌ರಿಗೆ ಸೇರುತ್ತದೆ.

ಮಧ್ಯಯುಗದಲ್ಲಿ ಸಾಮಾನ್ಯವಾದ ಕಾನೂನು ಸಾಮಾನ್ಯರಿಗೆ ಚರ್ಚೆಗಳ ಮುಖಾಂತರ ಬೆಳವಣಿಗೆ ಹೊಂದಿತು. ನಂತರ ನೈಸರ್ಗಿಕವಾದ ಕಾನೂನನ್ನು ಚರ್ಚಿನ ಮುಖಾಂತರ ಸಮಾಜದಲ್ಲಿ ಜಾರಿಗೊಳಿಸಲಾಯಿತು. ಹೀಗೆ ಸಮಾಜಶಾಸ್ತ್ರದಲ್ಲಿ ಹಾಗೂ

ಅರ್ಥಶಾಸ್ತ್ರದಲ್ಲಿ ಕಾನೂನಿನ ಅರ್ಥದ ವಿವಿಧ ಮುಖಗಳನ್ನು ಕಾಣುತ್ತೇವೆ. ಅಂದರೆ ಅರ್ಥಶಾಸ್ತ್ರದಲ್ಲಿ ಬೇಡಿಕೆಯ ನಿಯಮ ಪೂರೈಕೆಯ ನಿಯಮ ಮುಂತಾದುವುಗಳನ್ನು ಕಾಣುತ್ತೇವೆ. ರಾಜ್ಯಶಾಸ್ತ್ರದಲ್ಲಿ ರಾಜ್ಯದ ಕಾರ್ಯಕ್ಷೇತ್ರವನ್ನು ಗುರುತಿಸಲು ಹಾಗೂ ವ್ಯಕ್ತಿಯ ವರ್ತನೆಯನ್ನು ನಿಯಂತ್ರಿಸಲು ರಚಿಸಿರುವ ನಿಯಮಗಳೇ ಕಾನೂನುಗಳಾಗಿವೆ.

ಆಧುನಿಕ ಕಾಲದಲ್ಲಿ ಕಾನೂನಿನ ಪದಕ್ಕೆ ಅರ್ಥವನ್ನು ಗ್ರೊಶಿಯಸ್‌ರು (1583-1645) ನೀಡಿರುವುದನ್ನು ನಾವು ಕಾಣಬಹುದು. ಇವರ ಪ್ರಕಾರ ಕಾನೂನು ಅಂದರೆ ಸರಿಯಾದ ಕಾರಣವನ್ನು ಹೇಳುವುದು ಮತ್ತು ಕಾನೂನಿನ ಮೂಲವು ಮಾನವನ ಸ್ವಭಾವ ಎಂದು ಬರೆದಿದ್ದಾರೆ. ಹಾಲೋವೆಲ್‌ರ ಪ್ರಕಾರ ಸರಿಯಾದದ್ದನ್ನು ಬೆಂಬಲಿಸುವಂತಾಗಿದೆ. ಹಾಬ್ಸ್‌ರವರ ಪ್ರಕಾರ ಕಾನೂನು ಎಂದರೆ ಒಂದು ಆಜ್ಞೆ. ಅಲ್ಲಿ ಒಬ್ಬ ವ್ಯಕ್ತಿ ಸರಿಯಾದ ಕಾರಣಕ್ಕೆ ವಿಧೇಯಕನಾಗಿರುತ್ತಾನೆ. ಸ್ವಾಭಾವಿಕವಾದ ಕಾನೂನೇ ಪ್ರಚಲಿತದಲ್ಲಿರುವ ಕಾನೂನಾಗಿದ್ದು ಪರಮಾಧಿಕಾರವನ್ನು ಮಿತಿಯಲ್ಲಿಡುವುದು ಕಾನೂನು ಅಲ್ಲ ಆದರೆ ಅದರ ವಿಷಯಗಳ ಶಕ್ತಿ ಕಾನೂನಿನ ಮಿತಿಯಾಗಿರುತ್ತದೆ. ಜಾನ್‌ಲಾಕ್‌ರವರು ಸ್ವಭಾವಿಕ ಕಾನೂನನ್ನು ನೀತಿಯ ಕಾನೂನಿನಲ್ಲಿ ನೋಡಲು ಪ್ರಯತ್ನಿಸಿದರು. ರಾಜ್ಯದ ಕಾನೂನೆಂದರೆ ರಾಜನು ಪಾರ್ಲಿಮೆಂಟಿನಲ್ಲಿ ಮಾಡಿದ ಕಾನೂನು ಮತ್ತು ಇದರ ವ್ಯಾಪ್ತಿಯೂ ಮಿತಿಯಲ್ಲಿರುತ್ತದೆಂದು ಹೇಳಿರುವರು. ರೂಸೋ ರವರು ಕಾನೂನನ್ನು ಸ್ವಾತಂತ್ರ್ಯವೆಂದು ಹೇಳಿರುವುದು ಕಾನೂನು ಮತ್ತು ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವಕ್ಕೆ ಇವುಗಳೇ ಅಡಿಪಾಯವೆಂದಿರುವುದು ನಿಜವಾದ ಕಾನೂನಿನ ಅರ್ಥವನ್ನು ಇಲ್ಲಿ ತಿಳಿದುಕೊಳ್ಳಬಹುದು.

ಬೆಂಥಾಮರು ಕಾನೂನು ಒಂದು ವಿಷಯ ವಸ್ತು ಇದು ಅಂದರೆ "ಅಧಿಕ ಜನರ ಅಧಿಕ ಸುಖ" ಎಂದು ಹೇಳಿರುವರು. ಇವರ ಪ್ರಕಾರ ಎಲ್ಲ ಕಾನೂನುಗಳು ಜನರ ಒಳಿತಿಗಾಗಿ ಇರುವುದಿಲ್ಲ. ಏಕೆಂದರೆ ಅವುಗಳು ಜನರ ಸ್ವಾತಂತ್ರ್ಯಕ್ಕೆ ಅಡ್ಡಿಯನ್ನುಂಟು ಮಾಡುತ್ತವೆ. ಇದರ ಕಾರಣದಿಂದ ಶಾಸಕಾಂಗ ಅಥವಾ ನ್ಯಾಯವನ್ನು ತೀರ್ಮಾನಿಸುವ ಯಾವುದೇ ತೀರ್ಮಾನವನ್ನು ಕೈಗೊಳ್ಳಬೇಕಾದರೆ ಅದು ಎಲ್ಲರಿಗೂ ಅಧಿಕ ಸುಖವನ್ನು ನೀಡುವ ಅಳತೆಗೋಲಾಗಿರಬೇಕು. ಇವರ ನಂತರ ಜಾನ್ ಆಸ್ಟಿನ್ (1790-1858) ಕಾನೂನನ್ನು ನಿರ್ದಿಷ್ಟ ಶ್ರೇಷ್ಟ ವ್ಯಕ್ತಿಯು ಕನಿಷ್ಠ ವ್ಯಕ್ತಿಗೆ ನೀಡುವ ಆಜ್ಞೆ ಎಂದು ನ್ಯಾಯಶಾಸ್ತ್ರದ ವಿಶ್ಲೇಷಣೆಯ ಶಾಲೆಯನ್ನು ಪ್ರಾರಂಭಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಈ ನ್ಯಾಯದ ಬಗ್ಗೆ ಎಲ್ಲ ಅರ್ಥಗಳ ಹಾಗೂ ಬೇರೆ ಬೇರೆ ವಿವರಣೆಗಳನ್ನು ನೋಡಿದಾಗ ರೂಸೋರವರ ಸಾಂಪ್ರದಾಯವಾದ ಕಾನೂನಿನ ವ್ಯಾಖ್ಯಾ ವಿವರಣೆಯೂ ಮತ್ತು ಟಿ.ಎಚ್ ಗ್ರೀನ್‌ರು ರಾಜ್ಯದಿಂದ ಆದೇಶಿಸಲ್ಪಟ್ಟ ಹಕ್ಕು ಮತ್ತು ಕರ್ತವ್ಯಗಳ ವ್ಯವಸ್ಥೆಯೂ ಕಾನೂನು ಎಂದು ಹೇಳಿರುವುದರಲ್ಲಿ ಕಾನೂನಿನ ಬಗ್ಗೆ ವಿಭಿನ್ನತೆಯು ಕಂಡು ಬರುವುದಿಲ್ಲ. ಇದೇ ರೀತಿಯಾಗಿ ಮ್ಯಾಕ್ ಐವರ್ ಕಾನೂನು ಎಂದರೆ ಆಜ್ಞೆ, ಆಜ್ಞೆ ಇಲ್ಲದೇ ಕಾನೂನಿಲ್ಲ ಅದೇ ಆಜ್ಞೆ ಇಲ್ಲದೇ ಸಮಾಜದಲ್ಲಿ ಜನರ ಸಮುದಾಯವು ಹೇಗೆ ಇರುವುದು ಎಂಬ ಪ್ರಶ್ನೆಯಲ್ಲಿ ಅವರ ಕಾನೂನಿನ ಅರ್ಥ ಹಾಗು ಮಹತ್ವವನ್ನು ಹೇಳಿರುವುದನ್ನು ಅರ್ಥಮಾಡಿಕೊಳ್ಳಬಹುದು.

## 4.3 ಕಾನೂನಿನ ಮೂಲಗಳು

ಕಾನೂನಿನ ಅರ್ಥ ಮತ್ತು ಲಕ್ಷಣಗಳನ್ನು ಪರಿಶೀಲಿಸಿದ ನಂತರ ಕಾನೂನಿನ ಮೂಲಗಳನ್ನು ತಿಳಿಯುವುದು ಸೂಕ್ತ. ಪ್ರೊ ಹಾಲೆಂಡ್‌ರವರ ಪ್ರಕಾರ ಆರು ಕಾನೂನಿನ ಮೂಲಗಳನ್ನು ಈ ಕೆಳಕಂಡಂತೆ ಗುರುತಿಸಲಾಗಿದೆ.

1. **ಸಂಪ್ರದಾಯ:** ರೂಢಿ, ಪದ್ಧತಿ ಸಂಪ್ರದಾಯಗಳು ಕಾನೂನಿನ ಮೊದಲನೆಯ ಮೂಲವಾಗಿದೆ. ಪುರಾತನ ಕಾಲದಲ್ಲಿ ಮಾನವನ ಜೀವನವು ಸಾಂಪ್ರದಾಯಿಕ ನಿಯಮಗಳಿಂದ ನಿಯಂತ್ರಿಸಲ್ಪಟ್ಟಿತ್ತು. ರೂಢಿ ಮತ್ತು ಸಂಪ್ರದಾಯಗಳ ಪಿತಾಮಹರಾರು ಎಂಬುದನ್ನು ಹೇಳುವುದು ಕಷ್ಟವಾದರೂ ಅವುಗಳನ್ನು ಜನಸಾಮಾನ್ಯರು ಚಾಚು ತಪ್ಪದೇ ಪಾಲಿಸುತ್ತಾರೆ. ಅನಾದಿ ಕಾಲದಿಂದಲೂ ಜನರೂ ಅನುಸರಿಸುತ್ತಿರುವಂತಹ ರೂಢಿ ಸಂಪ್ರದಾಯಗಳೆಲ್ಲವೂ ಕಾನೂನಾಗಿ ಮಾರ್ಪಾಡಾಗದಿದ್ದರೂ ಕಾನೂನುಗಳನ್ನು ರಚಿಸುವಲ್ಲಿ

ಅವುಗಳು ಮಹತ್ತರ ಪಾತ್ರವಹಿಸುತ್ತವೆ. ಪುರಾತನ ಮತ್ತು ಮಧ್ಯಯುಗದ ಬಹಳಷ್ಟು ಕಾನೂನುಗಳು ಅನಾದಿ ಕಾಲದಿಂದ ಬೆಳೆದು ಬಂದಿರುವ ರೂಢಿ, ಪದ್ಧತಿ ಮತ್ತು ಸಂಪ್ರದಾಯಗಳ ಆಧಾರದ ಮೇಲೆ ಬರೆಯಲ್ಪಟ್ಟಿವೆ. ಬೇರೆ ಬೇರೆ ಜನರ ಸಮುದಾಯದ ಸಂಪ್ರದಾಯಗಳು ಅಂದರೆ ಉದಾಹರಣೆಗಾಗಿ ಮದುವೆಯ ಪದ್ಧತಿಗಳು ರಾಜ್ಯದ ಮೊದಲೇ ಬೆಳೆದು ಬಂದಹವುಗಳು. ಅಂತೆಯೆ ಆರ್ಥಿಕ ವಿನಿಮಯದ ಪದ್ಧತಿಗಳು ಬೆಳೆದು ಬಂದ ದಾರಿ ಹೇಗೆ ಇಂಗ್ಲೆಂಡಿನ ಶಾಸನಗಳು ಅಂದರೆ ಸಂಪ್ರದಾಯಗಳು. ರೋಮನ್ನರ ಕಾನೂನುಗಳು ಆಯಾ ದೇಶದ ಪದ್ಧತಿಗಳ ಆಧಾರದ ಮೇಲೆ ರಚಿಸಲ್ಪಟ್ಟಿವೆ. ಭಾರತದಲ್ಲಿನ ಸಾಂಪ್ರದಾಯಗಳು ಶಾಸನಗಳು ಕೆಲವು ಪ್ರಮುಖವಾದ ಪದ್ಧತಿಗಳು ಬೆಳೆದು ಬಂದ ದಾರಿಯನ್ನು ಹೇಳುತ್ತವೆ.

ಮೆಕೈವರ್‌ನೂ ಸಹ (ಪದ್ಧತಿ) ಸಂಪ್ರದಾಯವನ್ನು ಕಾನೂನಿನ ಮೂಲವೆಂದು ಪ್ರತಿಪಾದಿಸಿದ್ದಾನೆ ಎಲ್ಲಾ ಪದ್ಧತಿಗಳು ಕಾನೂನಿನ ಮೂಲವಾಗುವುದಿಲ್ಲ. ಅವುಗಳು ರಾಜ್ಯದಿಂದ ಮಾನ್ಯ ಮಾಡಿದ ನಂತರವೇ ಕಾನೂನುಗಳಾಗುತ್ತವೆ.

2. **ಧರ್ಮ:** ಧರ್ಮವು ಕಾನೂನಿನ ವಿಕಾಸ ಪ್ರಕ್ರಿಯೆಯಲ್ಲಿ ಮಹತ್ವದ ಪಾತ್ರವನ್ನು ವಹಿಸದೆ ಪುರಾತನ ಕಾಲದಲ್ಲಿ ಸಮಾಜದ ಧಾರ್ಮಿಕ ಮತ್ತು ಸಾಂಪ್ರದಾಯಿಕ ಕಾನೂನುಗಳು ಆಂತರಿಕ ಸಂಬಂಧವನ್ನು ಹೊಂದಿವೆ. ಮಾಂತ್ರಿಕ ಮತ್ತು ಪುರೋಹಿತ ದೊರೆಗಳ ಸಂಸ್ಥೆಗಳ ಅಸ್ತಿತ್ವವು ಧರ್ಮ ಮತ್ತು ಕಾನೂನುಗಳ ಆಂತರಿಕ ಸಂಬಂಧವನ್ನು ತೋರಿಸುತ್ತದೆ. ಪುರೋಹಿತರು ದೊರೆಗಳಾದ ನಂತರವು ಅವರ ಅಧಿಕಾರವು ದೈವದತ್ತವಾಗಿ ಬಂದಿದೆ ಎಂದು ದೈವಿಕ ಹಕ್ಕುಗಳ ಸಿದ್ಧಾಂತವನ್ನು ಪ್ರತಿಪಾದಿಸಲಾಯಿತು. ರೋಮನ್ನರು ಬಹಳಷ್ಟು ಕಾನೂನುಗಳನ್ನು ಧಾರ್ಮಿಕ ನಿಯಮಗಳು ಧರ್ಮದ ತಳಹದಿಯ ಮೇಲೆ ನಿಂತಿವೆ. ಹಿಂದೂ ಮತ್ತು ಮುಸ್ಲಿಂಮರು ಕ್ರಮವಾಗಿ ಮನು ಮತ್ತು ಶರಿಯತ್ ಶಾಸನಗಳನ್ನು ಅನುಸರಿಸುತ್ತಿದ್ದಾರೆ. ಆದರೆ ಹಲವಾರು ಧರ್ಮಗಳು ಹಲವಾರು ವಿಭಿನ್ನ ಕಾನೂನುಗಳಿಗೆ ದಾರಿ ಮಾಡಿಕೊಡುತ್ತವೆ. ಅದಕ್ಕಾಗಿ ಗಿಲ್‌ಕ್ರಿಸ್ಟ್‌ರವರು ರಾಜ್ಯದೆಡೆಯಲ್ಲಿ ಎಲ್ಲರಿಗೂ ಒಂದೇ ಕಾನೂನು ಇರಬೇಕೆಂದು ಹೇಳಿದ್ದಾರೆ.

3. **ನ್ಯಾಯಾಂಗದ ತೀರ್ಪುಗಳು:** ನ್ಯಾಯಾಂಗ ಕಾನೂನಿನ ಮತ್ತೊಂದು ಮೂಲವಾಗಿವೆ. ಇತ್ತೀಚಿನ ದಿನಗಳಲ್ಲಿ ವ್ಯಾಜ್ಯಗಳನ್ನು ನ್ಯಾಯಾಂಗವು ತೀರ್ಮಾನ ಮಾಡಿದರೆ ಪುರಾತನ ಸಮಾಜದಲ್ಲಿ ವಿವಾದಗಳನ್ನು ಬುಡಕಟ್ಟಿನ ಹಿರಿಯ ವ್ಯಕ್ತಿಗಳ (ಬುದ್ದಿವಂತರ) ಮುಖ್ಯಸ್ಥಿಕೆಯಲ್ಲಿ ನ್ಯಾಯ ತೀರ್ಮಾನ ಮಾಡಲಾಗುತ್ತಿತ್ತು. ಬುಡಕಟ್ಟಿನ ಹಿರಿಯ ವ್ಯಕ್ತಿಗಳ ನ್ಯಾಯ ತೀರ್ಮಾನ ಮಾಡುವಾಗ ಸಾಮಾನ್ಯವಾಗಿ ಜಾರಿಯಲ್ಲಿದ್ದ ರೂಢಿ, ಸಂಪ್ರದಾಯ ಮತ್ತು ವ್ಯವಹಾರ ಜ್ಞಾವನನ್ನು ಉಪಯೋಗಿಸುತ್ತಿದ್ದನು ಮುಂದೆಂದಾದರೂ ಸಂಭವಿಸುವ ವ್ಯಾಖ್ಯೆಗಳ ತೀರ್ಮಾನಕ್ಕಾಗಿ ಅವುಗಳನ್ನು ಆಧಾರವಾಗಿ ಬಳಸುತ್ತಿದ್ದರು. ಕಾಲಕ್ರಮೇಣ ಈ ತೀರ್ಪುಗಳು ಕಾನೂನುಗಳಾಗಿ ಸ್ವೀಕರಿಸಲ್ಪಟ್ಟವು.

ಆಧುನಿಕ ಯುಗದಲ್ಲಿ ಕಾಲಕಾಲಕ್ಕೆ ನ್ಯಾಯಾಂಗವು ನೀಡಿದ ತೀರ್ಪುಗಳು ಕಾನೂನುಗಳ ಹುಟ್ಟು ಮತ್ತು ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿವೆ. ನ್ಯಾಯಾಂಗವು ಕಾನೂನುಗಳನ್ನು ಅರ್ಥೈಸುವಾಗ ತಿಳಿದೊ ಅಥವಾ ತಿಳಿಯದೆಯೋ ಹೊಸ ಕಾನೂನುಗಳನ್ನು ಸೃಷ್ಟಿಸುತ್ತದೆ. ಅಮೇರಿಕಾದ ಸುಪ್ರೀಂಕೋರ್ಟ್ ಕೆಲವು ಕಾನೂನುಗಳನ್ನು ಸೃಷ್ಟಿಸುವುದರಿಂದ ಅದನ್ನು ಅಮೇರಿಕಾ ಕಾಂಗ್ರೆಸ್‌ನ ಮೂರನೆ ಸದನವೆಂದೂ ಪರಿಗಣಿಸಲಾಗಿದೆ.

4. **ವೈಜ್ಞಾನಿಕ ಚರ್ಚೆ:** ಅಸ್ತಿತ್ವದಲ್ಲಿರುವ ರೂಢಿ, ಪದ್ಧತಿ, ಸಂಪ್ರದಾಯ ನಡಾವಳಿ ಮತ್ತು ನ್ಯಾಯಿಕ ನಿರ್ಣಯ ಮುಂತಾದುವುಗಳನ್ನು ಅಧ್ಯಯನ ಮಾಡುವುದರ ಮೂಲಕ ಸಮಾಜದ ಬೇಳವಣಿಗೆಯೊಡನೆ ನ್ಯಾಯಶಾಸ್ತ್ರಜ್ಞರ ಒಂದು ವರ್ಗವೇ ಹುಟ್ಟಿಕೊಂಡಿತು. ಇವರು ಅಸ್ತಿತ್ವದಲ್ಲಿರುವ ನ್ಯಾಯ ವ್ಯವಸ್ಥೆಯ ಸುಧಾರಣೆಗೆ ಮೌಲ್ಯಯುತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಈ ಕಾನೂನು ತಜ್ಞರು ಬರವಣಿಗೆ ಮತ್ತು ಭಾಷಣಗಳು ಬಹಳವಾಗಿ ಗೌರವಿಸಲ್ಪಟ್ಟು ನ್ಯಾಯಾಧೀಶರು ವ್ಯಾಜ್ಯಗಳನ್ನು ತೀರ್ಮಾನಿಸುವಾಗ

ಅವುಗಳನ್ನು ಉಲ್ಲೇಖಿಸುತ್ತಿದರು. ಬ್ರಿಟನ್ನಿನ ಕೋಕ್, ಬ್ಲ್ಯಾಕ್‌ಸ್ಟೋನ್, ಅಮೇರಿಕಾದ ಸ್ಟೋರೆ ಮತ್ತು ಕೆಂಟ, ಭಾರತದಲ್ಲಿ ಮಿತಾಕ್ಷರ ಮತ್ತು ದಯಾಬಾಗರು ಕಾನೂನುಗಳ ರಚನೆಗೆ ಮೂಲವಾದರು.

5. **ನ್ಯಾಯ-ನೀತಿ:** ನ್ಯಾಯನೀತಿಯು ಕಾನೂನಿನ ಮತ್ತೊಂದು ಪ್ರಮುಖವಾದ ಮೂಲವಾಗಿದೆ. ವಿವಾದಗಳನ್ನು ತೀರ್ಮಾನಿಸುವಾಗ ಒಂದು ನಿರ್ಧಿಷ್ಟವಾದ ಅಂಶದ ಬಗ್ಗೆ ಅರ್ಥ ವಿವರಣೆ ನೀಡಲು ಕಾನೂನು ಮೌನವಾದರೆ ನ್ಯಾಯಾಧೀಶನು ನ್ಯಾಯ ನೀತಿ ಅಥವಾ ಧರ್ಮ ನೀತಿಯ ಆಧಾರದ ಮೇಲೆ ನ್ಯಾಯ ನಿರ್ಣಯ ಮಾಡುತ್ತಾನೆ. ಈ ರೀತಿಯ ನಿರ್ಣಯಗಳೇ ಭವಿಷ್ಯದಲ್ಲಿ ಕಾನೂನಿನ ರೂಪದಲ್ಲಿ ಜಾರಿಗೆ ಬರುತ್ತವೆ.

6. **ಶಾಸಕಾಂಗ:** ಪುರಾತನ ಸಮಾಜದಲ್ಲಿ ರೂಢಿ ಸಂಪ್ರದಾಯಗಳು ಕಾನೂನಿನ ಮೂಲವಾಗಿದ್ದರೆ, ಆಧುನಿಕ ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಶಾಸಕಾಂಗಗಳು ಕಾನೂನಿನ ಮೂಲಗಳಾಗಿವೆ. ಶಾಸಕಾಂಗಗಳು ಜನತೆಯ ಆಶೋತ್ತರಗಳಿಗೆ ತಕ್ಕಂತೆ ಹೊಸ ಕಾನೂನುಗಳನ್ನು ರಚಿಸುವ, ಬದಲಾಗುವ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಪರಿಸ್ಥಿತಗಳಿಗೆ ತಕ್ಕಂತೆ ಹಳೆಯ ಕಾನೂನುಗಳನ್ನು ತಿದ್ದುಪಡಿ ಮಾಡುವ ಕಾರ್ಯವನ್ನು ನಿರ್ವಹಿಸುತ್ತವೆ. ಇವುಗಳ ಜೊತೆಗೆ ಕಾರ್ಯಾಂಗ ಮತ್ತು ಸಾರ್ವಜನಿಕ ಅಭಿಪ್ರಾಯವನ್ನು ಕಾನೂನಿನ ಮೂಲವೆಂದು ಪರಿಗಣಿಸಲಾಗಿದೆ.

## 4.4 ಕಾನೂನಿನ ಅರ್ಥ

ಮಾನವನ ಚಟುವಟಿಕೆಗಳನ್ನು ನಿಯಂತ್ರಿಸುವ ಮತ್ತು ಮಾರ್ಗದರ್ಶನ ನೀಡುವ ನಿಯಮಗಳೇ ಕಾನೂನುಗಳು ಎಂದು ಕರೆಯುತ್ತಾರೆ. ಸಮಾಜದಲ್ಲಿ ಎಲ್ಲ ರೀತಿಯಲ್ಲಿ ನಿರ್ಧಿಷ್ಟವಾದ ಕ್ರಮವನ್ನು ಪಾಲನೆ ಮಾಡುವಲ್ಲಿ ಕಾನೂನು ಜವಾಬ್ದಾರಿಯಾಗಿದೆ. ಇದನ್ನು ಅರ್ಥಮಾಡಿಕೊಳ್ಳಲು ಈ ಕೆಳಗಿನವುಗಳ ಅಂತರವನ್ನು ನಾವು ತಿಳಿದುಕೊಳ್ಳುವುದೆ ಅವಶ್ಯಕ. ಮೊದಲನೆಯ ರೀತಿಯ ಕಾನೂನು

1. ವೈಜ್ಞಾನಿಕ ಕಾನೂನು
2. ಆದರ್ಶ ಕಾನೂನು

**1. ವೈಜ್ಞಾನಿಕ ಕಾನೂನು:** ವೈಜ್ಞಾನಿಕ ಕಾನೂನನ್ನು ಅರ್ಥ ಮಾಡಿಕೊಳ್ಳಬೇಕಾದಲ್ಲಿ ನಾವು ತಿಳಿದುಕೊಳ್ಳಬೇಕಾದುದು ಇಷ್ಟೇ. ಜಗತ್ತಿನಲ್ಲಿ ವೈಜ್ಞಾನಿಕ ಕಾನೂನುಗಳು ಅಸ್ತಿತ್ವದಲ್ಲಿದ್ದು, ಅವುಗಳನ್ನು ಚಲಾವಣೆಯಲ್ಲಿಯೂ ಇದ್ದು ಮತ್ತು ಅವುಗಳನ್ನು ನಾವು ಅಧ್ಯಯನ ಮುಖಾಂತರ ಕಂಡುಹಿಡಿಯಬೇಕು. ಇವು ನೈಸರ್ಗಿಕತೆಗೆ ಪೂರ್ವಕವಾಗಿದ್ದು ಅವುಗಳನ್ನು ಬದಲಾಯಿಸಲು, ತಿದ್ದುಪಡಿ ಅಥವಾ ಅವುಗಳಿಂದ ಪಾರಾಗುವ ಹೊಂಚು ಮಾಡುವ ಹಾಗಿಲ್ಲ. ಉದಾಹರಣೆಗಾಗಿ: ಭೌತಶಾಸತ್ರದಲ್ಲಿ ಕಾನೂನನ್ನು ಕಾರಣ ಮತ್ತು ಪರಿಣಾಮವನ್ನು ಸೂಚಿಸಲು ಬಳಸಲಾಗಿದೆ. ಅಂದರೆ ನ್ಯೂಟನ್ನನ ಗುರುತ್ವಾಕರ್ಷಣ ನಿಯಮ ಅಥವಾ ಕಾನೂನು ಎಂದು ತಿಳಿಸಲಾಗಿದೆ. ಅದೇ ರೀತಿಯಲ್ಲಿ ಅರ್ಥಶಾಸ್ತ್ರದಲ್ಲಿ ಬೇಡಿಕೆಯ ನಿಯಮ, ಪೂರೈಕೆಯ ನಿಯಮಗಳನ್ನು ಕಾಣುತ್ತವೆ. ಎರಡನೆಯದಾಗಿ,

**2. ಆದರ್ಶ ಕಾನೂನು:** ಕಾನೂನಿನ ರಚನೆಯಲ್ಲಿ ಒಬ್ಬ ವ್ಯಕ್ತಿಯ ವರ್ತನೆ ಒಂದು ಚೌಕಟ್ಟಿನಲ್ಲಿ ಹೇಗೆ ವರ್ತಿಸಬೇಕು ಎಂಬುದರ ಬಗ್ಗೆ ಇರುತ್ತದೆ. ಉದಾಹರಣೆಗಾಗಿ ಒಂದು ಸಂಸ್ಥೆಯಲ್ಲಿ ಕೆಲಸ ಮಾಡುವ ವ್ಯಕ್ತಿಗಳಿಗೆ ಆ ಸಂಸ್ಥೆಯ ಕಾನೂನುಗಳು ಕಡ್ಡಾಯವಾಗಿ ಅನ್ವಿಯಸುತ್ತವೆ. ಇಲ್ಲಿ ಕಾನೂನಿನ ಅಡಿಯಲ್ಲಿ ಅವುಗಳ ಇತಿಮಿತಿಗಳನ್ನು ಅರ್ಥ ಮಾಡಿಕೊಂಡು ಕೆಲಸಮಾಡಿದಲ್ಲಿ ಕೆಲಸಗಾರರು ಕಾನೂನು ಬಳಕೆಯ ಅರ್ಥದ ಬಗ್ಗೆ ಅರಿವು ಮೂಡುವುದು.

ಅಂದರೆ ಈ ಎರಡನೆಯ ರೀತಿಯ ಕಾನೂನು ಮಾನವರುಗಳು ನಿರ್ಮಿಸಿದವುಗಳು. ಅಂದರೆ ಕಾನೂನುಗಳು ಮಾನವನ ಬಾಹ್ಯ ಚಟುವಟಿಕೆಗಳನ್ನು ಹಾಗೂ ನಡತೆಯನ್ನು ಕಟ್ಟುನಿಟ್ಟಾಗಿ ನಿಯಂತ್ರಿಸುವ ಸಾಮಾಜಿಕ ನಿಯಮಗಳಾಗಿವೆ. ಇವುಗಳನ್ನು ಉಲಂಲಘಿಸಿದರೆ ಶಿಕ್ಷೆಗೆ ಅರ್ಹರಾಗುವರು. ಇವುಗಳನ್ನು ನ್ಯಾಯದ ದೃಷ್ಟ ಅನುಸಾರವಾಗಿ ಬದಲಾಯಿಸುವ ವಿಷಯಕ್ಕೆ ಅರ್ಹವಾಗಿದೆ. ಆದ ಕಾರಣ ಇದರ ಸರಿ ತಪ್ಪಿಗೆ ನೀತಿಯೂ ಮೂಲ ಅಂಶವಾಗಿದೆ.


**ಕಾನೂನಿನ ವ್ಯಾಖ್ಯೆಗಳು:** ಕಾನೂನಿಗೆ ಸಂಬಂಧಿತವಾಗಿ ಹಲವಾರು ವ್ಯಾಖ್ಯೆಗಳಿದ್ದು ಇಲ್ಲಿ ಹಲವಾರು ವ್ಯಾಖ್ಯೆಗಳನ್ನು ನೀಡಲಾಗಿದೆ. ಮಾಂಟೆಸ್ಕೊ ಅವರ ಪ್ರಕಾರ ಕಾನೂನು ಎಂದರೆ ಪರಿಸರದಿಂದ ವಸ್ತುಗಳೊಂದಿಗೆ ಅವಶ್ಯಕವಾದ ಸಂಬಂಧವೆಂದು ಹೇಳಿರುವರು. ವುಡ್ರೋ ವಿಲ್ಸನ್‌ರ ಪ್ರಕಾರ ಕಾನೂನುಗಳು ಆಚಾರ ವಿಚಾರಗಳ ಬಳುವಳಿಯಾಗಿದ್ದು ಸಾಂಪ್ರದಾಯಿಕವಾಗಿ ಅಂಗೀಕೃತವಾದ ಏಕಪ್ರಕಾರದ ನಿಯಮಗಳಾಗಿವೆ. ಇದು ಸರ್ಕಾರದ ಅಧಿಕಾರ ಮತ್ತು ಅಥಾರಿಟಿಯಿಂದ ಬೆಂಬಲಿತವಾಗಿದ್ದುದಾಗಿದೆ.

ಹಾಲೆಂಡ್‌ರ ಪ್ರಕಾರ ಮಾನವನ ಬಾಹ್ಯ ಚಟುವಟಿಕೆಗಳನ್ನು ನಿಯಂತ್ರಿಸುವ ಸಾಮಾನ್ಯ ನಿಯಮಗಳೇ ಕಾನೂನು ಆಗಿದೆ. ಸಾಲ್‌ಮಂಡರ ಪ್ರಕಾರ ರಾಜ್ಯದಿಂದ ಅಂಗೀಕೃತವಾದ ಒಟ್ಟು ನಿಯಮಗಳೇ ಕಾನೂನು.

ಈ ಮೇಲಿನ ವ್ಯಾಖ್ಯೆಗಳಿಂದ ಕಾನೂನು ಎಂದರೆ ಮಾನವನ ಬಾಹ್ಯ ವರ್ತನೆಯನ್ನು ನಿಯಂತ್ರಿಸುವ ಸಾಮಾಜಿಕ ನಿಯಮಗಳೆಂದು ಹೇಳಬಹುದು. ರಾಜ್ಯದಲ್ಲಿನ ಸಮುದಾಯದ ಸ್ಥಿತಿಗತಿಗಳನ್ನು ತಿಳಿಹೇಳುವ ಕನ್ನಡಿಯೂ ಕೂಡಾ ಆಗಿವೆ. ಅದೇ ರೀತಿಯಾಗಿ ಇವುಗಳನ್ನು ಉಲ್ಲಂಘಿಸಿದರೆ ಶಿಕ್ಷೆ ನೀಡುವ ಅಧಿಕಾರ ವ್ಯಾಪ್ತಿಯನ್ನು ಹೊಂದಿದೆ. ಅಂದರೆ ಅವಶ್ಯವೆನಿಸಿದರೆ ಬಲಪ್ರಯೋಗದ ಮೂಲಕ ಅನುಷ್ಠಾನಕ್ಕೆ ಬರತಕ್ಕಂತ ನಿಯಮಗಳು ಅಥವಾ ವಿಧಿನಿಯಮಗಳು ಎನ್ನಬಹುದಾಗಿದೆ.

## 4.5 ಕಾನೂನಿನ ವಿಧಗಳು

ಮ್ಯಾಕ್‌ಐವರ ಪ್ರಕಾರ ಕಾನೂನಿನ ಪ್ರಕಾರಗಳು ಈ ಕೆಳಗಿನಂತಿವೆ.




1. **ಸಂವಿಧಾನಾತ್ಮಕ ಕಾನೂನು:** ಸಂವಿಧಾನಾತ್ಮಕ ಕಾನೂನು ರಾಜ್ಯದ ಮೂಲಭೂತವಾದ ಕಾನೂನಾಗಿದೆ. ಇದು ರಾಜ್ಯ ಸರ್ಕಾರದ ಮೂಲತತ್ವದ ಸಮೂಹವಾಗಿದೆ. ರಾಜ್ಯದಲ್ಲಿನ ಸರ್ಕಾರ ವಿವಿಧ ಅಂಗಗಳಲ್ಲಿ ಅಧಿಕಾರದ ಹಂಚಿಕೆ ಹಾಗೂ ಕರ್ತವ್ಯವನ್ನು ಒಳಗೊಂಡಿರುವುದೇ ಸಂವಿಧಾನಾತ್ಮಕ ಕಾನೂನು. ಈ ಕಾನೂನು ಜನರ ಅಂತಿಮ ಇಚ್ಛೆಯನ್ನು ಪ್ರತಿನಿಧಿಸುತ್ತದೆ. ಈ

ಸಂವಿಧಾನಾತ್ಮಕ ಕಾನೂನು ಲಿಖಿತ ರೂಪದಲ್ಲಿರಬಹುದು ಅಥವಾ ಅಲಿಖಿತ ರೂಪದಲ್ಲಿರಬಹುದು ಅಥವಾ ಐತಿಹಾಸಿಕ ವಿಕಾಸದ ಫಲವಾಗಿರಬಹುದು ಅಥವಾ ವ್ಯಕ್ತಿಯಿಂದ ಮತ್ತು ಸಮಿತಿಯಿಂದ, ಸಂವಿಧಾನ ರಚನಾ ಸಭೆಯಿಂದ ರೂಪಿತವಾಗಿರಬಹುದಾಗಿದೆ. ಈ ಕಾನೂನಿನ ಪ್ರಕಾರವೇ ಸರ್ಕಾರ ತನ್ನ ಅಧಿಕಾರವನ್ನು ಚಲಾಯಿಸುತ್ತದೆ. ಹಾಗೂ ಈ ಸಂವಿಧಾನಾತ್ಮಕ ಕಾನೂನಿಗೆ ಅನುಗುಣವಾಗಿಯೇ ಸಾಮಾನ್ಯ ಕಾನೂನುಗಳನ್ನು ಜಾರಿಗೊಳಿಸಲಾಗುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಸರ್ಕಾರದ ಕಾರ್ಯಗಳನ್ನು ಅರ್ಥೈಸುವ ವ್ಯಕ್ತಪಡಿಸುವ ಮತ್ತು ನಿರ್ಧರಿಸುವ ಕಾನೂನುಗಳೇ ಸಂವಿಧಾನಾತ್ಮಕ ಕಾನೂನುಗಳು.

2. **ಸಾಮಾನ್ಯ ಕಾನೂನು:** ಸಂವಿಧಾನಾತ್ಮಕ ಕಾನೂನಿಗೆ ಅನುಗುಣವಾಗಿ ರಾಜ್ಯದ ಶಾಸಕಾಂಗ ಅಥವಾ ಪಾರ್ಲಿಮೆಂಟ್‌ನಿಂದ ರಚನೆ ಮಾಡಿದ ಕಾನೂನುಗಳೇ ಸಾಮಾನ್ಯ ಕಾನೂನು ಅಥವಾ ಲಿಖಿತ ಶಾಸನ ಕಾನೂನುಗಳಾಗಿವೆ. ಇದು ವ್ಯಕ್ತಿ ಮತ್ತು ವ್ಯಕ್ತಿ, ವ್ಯಕ್ತಿಗಳು ಮತ್ತು ಗುಂಪು ವ್ಯಕ್ತಿಗಳು ಮತ್ತು ರಾಜ್ಯ ಇವುಗಳ ನಡುವಿನ ಸಂಬಂಧವನ್ನು ಕುರಿತಂತೆ ನಿಯಮಗಳನ್ನು ಹೊಂದಿದೆ.

ಇದರಲ್ಲಿ ಎರಡು ರೀತಿಯ ಕಾನೂನುಗಳಿವೆ

ಅ. **ಸಾರ್ವಜನಿಕ ಕಾನೂನು:** ಅಂದರೆ ಇವು ನಾಗರೀಕರು ಮತ್ತು ರಾಜ್ಯದ ನಡುವಿನ ಸಂಬಂಧವನ್ನು ನಿರ್ದರಿಸುತ್ತವೆ. ಸಾರ್ವಜನಿಕ ಕಾನೂನುಗಳಿಗೆ ಸಂಬಂಧಿಸಿದಂತೆ ರಾಜ್ಯವು ಒಂದು ಪಕ್ಷವಾಗಿದ್ದರೂ ನ್ಯಾಯ ತೀರ್ಮಾನ ಮಾಡುವಾಗ ರಾಜ್ಯವೇ ಮಧ್ಯಸ್ಥಗಾರನಾಗಿ ಉಪಸ್ಥಿತವಿರುತ್ತದೆ.

ಅ. **ಖಾಸಗಿ ಕಾನೂನು:** ಅಂದರೆ ಇವು ನಾಗರೀಕರ ನಡುವಿನ ಸಂಬಂಧವನ್ನು ನಿರ್ಧರಿಸುತ್ತವೆ. ಇವುಗಳು ವ್ಯಕ್ತಿಗಳ ನಡುವಿನ ಸಂಬಂಧಗಳನ್ನು ಕ್ರಮಬದ್ಧಗೊಳಿಸುತ್ತದೆ. ಹಾಲೆಂಡರ ಪ್ರಕಾರ ಖಾಸಗೀ ಕಾನೂನುಗಳಲ್ಲಿ ಖಾಸಗೀ ವ್ಯಕ್ತಿಗಳ ನಡುವೆ ಉದ್ಭವಿಸಿದ ವಿವಾದಗಳನ್ನು ರಾಜ್ಯವು ಅವರ ನಡುವಿನ ಮಧ್ಯಸ್ಥಗಾರನಾಗಿ ನ್ಯಾಯ ತೀರ್ಮಾನ ನೀಡುತ್ತದೆ.

3. **ಸಾಧಾರಣ ಕಾನೂನು:** ಈ ಸಾಧಾರಣ ಕಾನೂನು ರೂಢಿ, ಸಂಪ್ರದಾಯ ಪದ್ಧತಿಗಳನ್ನು ಒಳಗೊಂಡಿರುತ್ತದೆ. ಇವುಗಳು ಸಾಮಾನ್ಯವಾಗಿ ಅಲಿಖಿತ ರೂಪದಲ್ಲಿದ್ದು ಇವುಗಳನ್ನು ವಿಧಿಬದ್ಧವಾಗಿ ಅರ್ಥೈಸುವಂತಹ ಯಾವುದೇ ದಾಖಲೆಗಳಾಗಲಿ ಇರುವುದಿಲ್ಲ. ಇಲ್ಲಿ ಲಿಖಿತ ಕಾನೂನುಗಳು ಅತ್ಯಂತ ಕಡಿಮೆ ಇದ್ದು, ಅಲಿಖಿತವಾದ ಕಾನೂನುಗಳ ಸಂಖ್ಯೆಯೇ ವಿಪುಲವಾಗಿದೆ. ಇವನ್ನೇ ಸಾಧಾರಣ ಕಾನೂನು ಎಂದು ಕರೆಯಲಾಗುತ್ತದೆ.

4. **ರಾಷ್ಟ್ರೀಯ ಕಾನೂನುಗಳು:** ಇವು ದೇಶೀಯ ಕಾನೂನುಗಳು ಒಂದು ರಾಜ್ಯದ ಎಲ್ಲೆಯೊಳಗಿನ ಎಲ್ಲಾ ಪ್ರಜೆಗಳ ಮತ್ತು ಸಂಘ ಸಂಸ್ಥೆಗಳಿಗೆ ಅನ್ವಯಿಸುವ ಕಾನೂನುಗಳೆ ರಾಷ್ಟ್ರೀಯ ಅಥವಾ ದೇಶೀಯ ಕಾನೂನುಗಳಾಗಿವೆ. ಇವುಗಳನ್ನು ರಾಜ್ಯದೊಳಗಿನ ಎಲ್ಲಾ ಜನರು ಪಾಲಿಸಬೇಕು. ಇವುಗಳನ್ನು ಉಲ್ಲಂಘಿಸಿದವರು ಶಿಕ್ಷೆಗೆ ಗುರಿಯಾಗುತ್ತಾರೆ.

5. **ಅಂತರರಾಷ್ಟ್ರೀಯ ಕಾನೂನುಗಳು:** ಇದು ರಾಜ್ಯ ರಾಜ್ಯಗಳ ನಡುವಿನ ಸಂಬಂಧ ಮತ್ತು ನಡತೆಯನ್ನು ನಿಯಂತ್ರಿಸುತ್ತದೆ. ಈ ಕಾನೂನಿನ ಹಿಂದೆ ಯಾವುದೇ ಪರಮಾಧಿಕಾರದ ಬೆಂಬಲವಿರುವುದಿಲ್ಲ. ಅಂತರರಾಷ್ಟ್ರೀಯ ಕಾನೂನುಗಳು ಅಂತರರಾಷ್ಟ್ರೀಯ ಕಾಂಗ್ರೆಸ್‌ನಿಂದ ಅಥವಾ ಸಮ್ಮೇಳನಗಳಿಂದ ರೂಪಿತಗೊಂಡಿದ್ದು, ಇದು ಅಂತರರಾಷ್ಟ್ರೀಯ ಒಪ್ಪಂದಗಳು, ಸನ್ನದುಗಳು , ಸಾಂಪ್ರದಾಯಿಕವಾದ ಕಾನೂನುಗಳನ್ನು ಒಳಗೊಂಡಿದೆ. ಈ ಕಾನೂನನ್ನು ರಾಜ್ಯಗಳು ಸ್ವಯಂ ಇಚ್ಛೆಯಿಂದ ಒಪ್ಪಿಕೊಂಡು ಪಾಲಿಸಬೇಕಾಗಿದ್ದು, ರಾಜ್ಯ ರಾಜ್ಯಗಳ ನಡುವೆ ಉಂಟಾಗಬಹುದಾದ ಯಾವುದೇ ಸಮಸ್ಯೆ, ವಿವಾದಗಳನ್ನು ಕಾನೂನಿಗೆ ಅನುಗುಣವಾಗಿ ಮತ್ತು ನ್ಯಾಯಾಲಯದ ತೀರ್ಪಿಗೆ ಬದ್ಧವಾಗಿ ನಡೆಯುವಂತಹ ಸದುದ್ದೇಶವನ್ನು ಹೊಂದಿದೆ.

6. **ಸುಗ್ರೀವಾಜ್ಞೆ :** ಕಾರ್ಯಾಂಗವು ಹೊಗಡಿಸುವ ಆದೇಶ ಅಥವಾ ವಿಧಿಗಳೇ ಆಗಿವೆ. ಈ ಆದೇಶ ಅಥವಾ ಆಜ್ಞೆ ವಿಧಿಯನ್ನು ಶಾಸಕಾಂಗವು ಅಧಿವೇಶನದಲ್ಲಿಲ್ಲದ ಕಾಲದಲ್ಲಿ ಅಥವಾ ತುರ್ತು ಪರಿಸ್ಥಿತಿಯ ಕಾಲದಲ್ಲಿ ಹೊರಡಿಸಲಾಗುತ್ತದೆ. ಇವು ಕಾರ್ಯಾಂಗವು ಹೊರಡಿಸುವ ತಾತ್ಕಾಲಿಕ ಕಾನೂನುಗಳಾಗಿರುತ್ತವೆ. ಇಂಗ್ಲೆಂಡಿನಲ್ಲಿ ಈ ರೀತಿಯ ಆದೇಶ ಅಥವಾ ಆಜ್ಞೆಯನ್ನು ಕೌನ್ಸಿಲ್‌ನ ಆದೇಶ ಎಂದು ಕರೆಯಲಾಗುತ್ತದೆ. ಭಾರತದಲ್ಲಿ ಮಂತ್ರಿಮಂಡಲವು ಅಧ್ಯಕ್ಷನ ಹೆಸರಿನಲ್ಲಿ ಈ ಬಗೆಯ ಆದೇಶ ಅಥವಾ ಆಜ್ಞೆಯನ್ನು ಹೊರಡಿಸುತ್ತದೆ.

7. **ಆಡಳಿತಾತ್ಮಕ ಕಾನೂನುಗಳು:** ಆಡಳಿತಾತ್ಮಕ ಕಾನೂನು ರಾಜ್ಯದ ಸೇವಾ ಸಿಬ್ಬಂದಿ ವರ್ಗದ ಅಧಿಕಾರಿಗಳು ಮತ್ತು ಅವರ ಅಧಿಕಾರ ಮತ್ತು ಕರ್ತವ್ಯಕ್ಕೆ ಸಂಬಂಧಿಸಿದುದಾಗಿದೆ. ಹಾಗೂ ಸಾರ್ವಜನಿಕ ಅಧಿಕಾರಿಗಳು ಮತ್ತು ನಾಗರಿಕರ ಹಕ್ಕು ಮತ್ತು ಕರ್ತವ್ಯಕ್ಕೆ ಸಂಬಂಧಿತವಾಗಿದೆ. ಈ ಆಡಳಿತಾತ್ಮಕ ಕಾನೂನು ಸಾಮಾನ್ಯ ನ್ಯಾಯಾಲಯದ ವ್ಯಾಪ್ತಿಗೆ ಬರದೇ ಆಡಳಿತಾತ್ಮಕ ನ್ಯಾಯಾಲಯದ ಮುಖಾಂತರ (Tribunal Court) ವಾದ ವಿವಾದಗಳನ್ನು ತೀರ್ಮಾನಿಸುತ್ತದೆ. ಈ ನ್ಯಾಯಾಲಯಗಳ ಅಧ್ಯಕ್ಷತೆಯನ್ನು ಆಡಳಿತಾಧಿಕಾರಿ ಅಥವಾ ಕಾರ್ಯಾಂಗದ ಅಧಿಕಾರಿ ವಹಿಸುತ್ತಾನೆ. ಇದು ರಾಜ್ಯದ ಸಿವಿಲ್ ಸಿಬ್ಬಂದಿ ವರ್ಗದ ನಡುವಿನ ವಾದ ವಿವಾದವನ್ನು ಸಾಮಾನ್ಯ ನ್ಯಾಯಾಲಯದ ಮಾದರಿಯಲ್ಲಿಯೇ ಹಾಗೂ ನಿಯಮಾನುಸಾರವಾಗಿ ಕಾರ್ಯ ನಿರ್ವಹಿಸುತ್ತದೆ. ಇಂತಹ ಆಡಳಿತಾತ್ಮಕ ಕಾನೂನು ಮತ್ತು ನ್ಯಾಯಾಲಯವನ್ನು ಎಲ್ಲ ರಾಜ್ಯ (ವಿಶ್ವದ)ಗಳಲ್ಲಿಯೂ ನಾವು ನೋಡಬಹುದು ಅಂದರೆ ಭಾರತ, ಇಂಗ್ಲೆಂಡ್, ಅಮೇರಿಕಾ ದೇಶಗಳ ಆಡಳಿತ ವ್ಯವಸ್ಥೆಯಲ್ಲಿ ಇವುಗಳ ಕಾರ್ಯಚರಣೆಯನ್ನು ಕಾಣಬಹುದು.

**ಕಾನೂನಿನ ಆಳ್ವಿಕೆ (ಆಡಳಿತ):** ಕಾನೂನಿನ ಆಡಳಿತವೆಂದರೆ ಪ್ರತಿಯೊಂದು ರಾಜ್ಯವು ಸರ್ಕಾರವೆಂಬ ಸಾಧನಾ ಯಂತ್ರವನ್ನು ಹೊಂದಿರುತ್ತದೆ. ಈ ಸಾಧನಾ ಯಂತ್ರವಾದ ಸರ್ಕಾರವು ರಾಜ್ಯದ ಇಚ್ಛೆಯನ್ನು ಅರ್ಥೈಸುವ ಮತ್ತು ಕಾರ್ಯರೂಪಕ್ಕೆ ತರುವ ಕಾರ್ಯವನ್ನು ನಿರ್ವಹಿಸುತ್ತದೆ. ಈ ರೀತಿ ರಾಜ್ಯದ ಇಚ್ಛೆಯನ್ನು ಸರ್ಕಾರವು ಕಾನೂನು ಪದಗಳ ಅರ್ಥದಲ್ಲಿ ಅರ್ಥೈಸುತ್ತದೆ ಮತ್ತು ಅನುಷ್ಠಾನಗೊಳಿಸುತ್ತದೆ. ಅಂದರೆ ಕಾನೂನನ್ನು ಪರಮಾಧಿಕಾರದ ಯಂತ್ರವೆಂದು ಹೇಳಬಹುದಾಗಿದೆ. ಕಾನೂನು ಮತ್ತು ಪರಮಾಧಿಕಾರದ ನಡುವೆ ನೇರ ಸಂಪರ್ಕ ಹಾಗೂ ನಿಕಟ ಸಂಪರ್ಕವಿದ್ದು, ಕಾನೂನಿನ ಮುಖಾಂತರವೇ ಪರಮಾಧಿಕಾರವನ್ನು ಗುರುತಿಸಬಹುದಾಗಿದೆ. ಆದ್ದರಿಂದಲೇ ಪರಮಾಧಿಕಾರವನ್ನು ಅಮೂರ್ತವಾದುದೆಂತಲೂ ಕಾನೂನನ್ನು ವಾಸ್ತವಿಕವಾದುದು ಎಂತಲೂ ಕರೆಯಲಾಗುತ್ತದೆ. ಕಾನೂನಿನ ಮುಖಾಂತರ ಪರಮಾಧಿಕಾರ ರಾಜ್ಯದ ಇಚ್ಛೆಯನ್ನು ವ್ಯಕ್ತಪಡಿಸುತ್ತದೆ ಎನ್ನಬಹುದಾಗಿದೆ. ಅಂದರೆ ರಾಜ್ಯದ ಇಚ್ಛೆಯೇ ಕಾನೂನುವಾಗಿದೆ. ಇದೇ ಪರಮಾಧಿಕಾರವನ್ನು ನಡೆಸುವ ಸಾಧನ ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ಪರಮಾಧಿಕಾರ ರಹಿತ ರಾಜ್ಯವನ್ನು ಹಾಗೂ ಕಾನೂನು ರಹಿತ ಪರಮಾಧಿಕಾರವನ್ನು ಕಾಲ್ಪನಿಕವಾಗಿ ಊಹಿಸಬಹುದೇ ಹೊರತು ವಾಸ್ತವ ರೂಪದಲ್ಲಿ ಅಲ್ಲ. ರಾಜ್ಯಕ್ಕೆ ಪರಮಾಧಿಕಾರ ಅನಿವಾರ್ಯವಾಗಿರುವಂತೆ, ಪರಮಾಧಿಕಾರಕ್ಕೆ ಕಾನೂನು ಅನಿವಾರ್ಯವಾಗಿದೆ. ಒಟ್ಟಿನಲ್ಲಿ ಕಾನೂನು, ಪರಮಾಧಿಕಾರ ಮತ್ತು ರಾಜ್ಯಗಳನ್ನು ಬೇರ್ಪಡಿಸಲು ಅಸಾಧ್ಯ.

ಎ.ವಿ. ಡೈಸಿರವರು ತಮ್ಮ ಪುಸ್ತಕದಲ್ಲಿ (Introduction to the Study of the Law of the Constitution 1885). ಬ್ರಿಟಿಷ್ ನ್ಯಾಯಾಧೀಶರಾಗಿ ಕಾನೂನು ಅಂದರೆ ಸಮಾನತೆಯನ್ನು ಕಾಪಾಡುವ ಸಾಧನವಾಗಿದೆ. ಕಾನೂನಿನ ಮುಂದೆ ಎಲ್ಲ ಆಡಳಿತ ವರ್ಗಗಳ ವಿಷಯಗಳು ಕೂಡಾ ಸಮಾನ. ಈ ವಿಷಯವು ಬ್ರಿಟಿಷ್ ಕಾನೂನು ವ್ಯವಸ್ಥೆಯನ್ನು ಫ್ರೆಂಚ್ ಕಾನೂನು ವ್ಯವಸ್ಥೆ ಮತ್ತು ಇತರೇ ದೇಶಗಳ ಕಾನೂನು ವ್ಯವಸ್ಥೆಗಿಂತ ಭಿನ್ನವಾಗಿರಿಸಿವೆ. ಆದರೆ ಅವರು ಇಂಗ್ಲೆಂಡಿನ ಕಾನೂನು ವ್ಯವಸ್ಥೆಯನ್ನು ಟೀಕೆಗೆ ಗುರಿ ಮಾಡಿ ಅಲ್ಲಿನ ಕಾನೂನಿನ ವ್ಯವಸ್ಥೆಯೂ ನಿಯಮಗಳನ್ನು ಕೇವಲ ನಿಯಂತ್ರಣ ಮಾಡುವ ವ್ಯವಸ್ಥೆಯೆಂದು ಹೇಳಿದ್ದಾರೆ. ಮುಂದೆ



TF.20_F.No.54

ಅವರು ತಮ್ಮ ಟೀಕಾತ್ಮಕ ವಾದಕ್ಕೆ ವಿಶ್ಲೇಷಣೆಯನ್ನು ಕೂಡಾ ನೀಡಿದ್ದಾರೆ. ಅಂದರೆ ಇಂಗ್ಲೆಂಡಿನ ಕಾನೂನು ವ್ಯವಸ್ಥೆಯೂ ವ್ಯಕ್ತಿಯ ಹಕ್ಕುಗಳನ್ನು ಕಾಪಾಡುತ್ತದೆ. ಅಂದರೆ ವ್ಯಕ್ತಿಯ ವೈಯಕ್ತಿಕ ಸ್ವಾತಂತ್ರ್ಯದ ಹಕ್ಕು, ಚರ್ಚಿಸುವ ಹಕ್ಕು, ಸಾರ್ವಜನಿಕ ಸಭೆಯಲ್ಲಿ ಭಾಗವಹಿಸುವ ಹಕ್ಕು ಮುಂತಾದವುಗಳು. ಬ್ರಿಟಿಷ್ ಪಾರ್ಲಿಮೆಂಟಿನ ಮಿತಿ ಇಲ್ಲದ ಅಧಿಕಾರವು ಸಂವಿಧಾನಾತ್ಮಕವಾಗಿ ಹಕ್ಕುಗಳನ್ನು ಕಾಪಡುವುದಕ್ಕೆ ವ್ಯಾಪ್ತಿ ಇಲ್ಲದಿರುವುದು ಕೂಡಾ ನಮಗೆ ತಿಳಿದಿರುವ ವಿಷಯವಾಗಿದೆ,

ಕಾನೂನಿನ ಆಡಳಿತವೆಂದರೆ ಆಡಳಿತ ವ್ಯವಸ್ಥೆಯಲ್ಲಿ ಜನರ ಹಕ್ಕುಗಳನ್ನು ರಕ್ಷಿಸುವ ಸಾಧನ ಕಾನೂನು ಇರಬೇಕು ಮತ್ತು ಅವುಗಳ ನಾಗರೀಕ ಹಕ್ಕುಗಳ ರೂಪ ನಾವು ಭಾರತದಲ್ಲಿ ಹಾಗೂ ಅಮೇರಿಕೆಯ ಆಡಳಿತ ವ್ಯವಸ್ಥೆಯಲ್ಲಿ ಕಾಣುತ್ತೇವೆ.

ಒಟ್ಟಾರೆ ಹೇಳಬೇಕಾದರೆ, ಕಾನೂನಿನ ಆಡಳಿತವೆಂದರೆ ಆಡಳಿತ ವ್ಯವಸ್ಥೆಯಲ್ಲಿ ಕಾನೂನು ಪಾರದರ್ಶಕದಂತೆ ಎಲ್ಲ ರೀತಿ ಹಕ್ಕು ಮತ್ತು ಸ್ವಾತಂತ್ರ್ಯಗಳನ್ನು ಎಲ್ಲರಿಗೂ ಸಮಾನವಾಗಿ ಕಲ್ಪಿಸುವಂತೆ ನೋಡಿಕೊಳ್ಳುವ ಸಾಧನವಾಗಿರಬೇಕು.

## ನಿಮ್ಮ ಪ್ರಗತಿ ಪರಿಶೀಲನೆ - 1

**ಸೂಚನೆ:** 1. ಈ ಕೆಳಗೆ ಬಿಟ್ಟಿರುವ ಜಾಗವನ್ನು ನಿಮ್ಮ ಉತ್ತರಕ್ಕೆ ಉಪಯೋಗಿಸಿಕೊಳ್ಳಿ.

2. ಈ ಘಟಕದ ಕೊನೆಯಲ್ಲಿ ನೀಡಿರುವ ಉತ್ತರದೊಂದಿಗೆ ನಿಮ್ಮ ಪ್ರಗತಿಯನ್ನು ಪರಿಶೀಲಿಸಿಕೊಳ್ಳಿ.

**1. ಕಾನೂನಿನ ಅರ್ಥವನ್ನು ಬರೆಯಿರಿ.**

.................................................................................................................................

.................................................................................................................................

.................................................................................................................................

.................................................................................................................................

.................................................................................................................................

.................................................................................................................................

**2. ಕಾನೂನಿನ ತತ್ವದ ಬಗ್ಗೆ ವಿವರಣೆ ನೀಡಿ.**

.................................................................................................................................

.................................................................................................................................

.................................................................................................................................

.................................................................................................................................

.................................................................................................................................

.................................................................................................................................

**3. ಕಾನೂನಿನ ವಿವಿಧ ವಿಧಿಗಳನ್ನು ತಿಳಿಸಿರಿ.**

.................................................................................................................................

.................................................................................................................................

.................................................................................................................................

.................................................................................................................................

.................................................................................................................................

.................................................................................................................................

## 4.6 ಸಮಾರೋಪ

ನಾವು ಕಾನೂನಿನ ಅರ್ಥ ಹಾಗೂ ಕಾನೂನಿನ ವಿಧಗಳನ್ನು ತಿಳಿದ ನಂತರ ಕಾನೂನಿಗೆ ಖಚಿತವಾದ ಕಾರ್ಯ ಆಡಳಿತ ವ್ಯವಸ್ಥೆಯಲ್ಲಿದೆ ಎಂದು ನಿಸಂದೇಹವಾಗಿ ಹೇಳಬಹುದು. ಕಾನೂನು ಸಮಾಜದಲ್ಲಿ ಸ್ಥಿರವಾಗಿ ಕ್ರಮವನ್ನು ಸ್ಥಾಪಿಸಲು ಅವಶ್ಯಕವಾದ ಸಾಧನಗಳಾಗಿವೆ.

ಒಟ್ಟಾರೆ ಹೇಳುವುದಾದರೆ, ಮಾನವ ನಿರ್ಮಿಸಿದ ಸ್ಥಿತಿಗತಿಗಳ ನಾವು ಕಾನೂನುಗಳ ಕಾರ್ಯಾಚರಣೆಯನ್ನು ಕಾಣಬಹುದಾಗಿದೆ. ಮಾನವನ ಸಮಾಜದಲ್ಲಿ ಪರಸ್ಪರ ಸರ್ಕಾರದ ಜೀವನವನ್ನು ನಡೆಸಲು ಕಾನೂನುಗಳು ಸಹಾಯ ಮಾಡುತ್ತವೆ ಮತ್ತು ಇವು ಮಾನವನ ಸಮಾಜ ರೂಢಿ, ಪರಂಪರೆ ಹಾಗೂ ಸಂಪ್ರದಾಯಗಳ ವಿಕಸನ ರೂಪ. ಆದ್ದರಿಂದಲೇ ಅವುಗಳ ಕ್ರಮ ನಮ್ಮ ಜೀವನದಲ್ಲಿ ಹಾಗೂ ಸಮಾಜಕ್ಕೆ ಮಹತ್ವವಾಗಿವೆ ಎಂದು ಹೇಳಬಹುದು.

## 4.7 ಕಠಿಣ ಪದಗಳು

| | | |
|---|---|---|
| ನ್ಯಾಯ-ತೀರ್ಪುಗಳು | - | ಹಿಂದೆ ತೆಗೆದುಕೊಂಡ ಕಾನೂನಿನ ನಿರ್ಣಯಗಳು |
| ಸರ್ವಾಭೌಮತ್ವ | - | ರಾಜ್ಯದ ಪರಮಾಧಿಕಾರ |
| ವಿಕಸನ | - | ಹಂತ ಹಂತದ ಬೆಳವಣಿಗೆ |
| ನ್ಯಾಯಶಾಸ್ತ್ರ | - | ನ್ಯಾಯದ ಬಗ್ಗೆ ಅಧ್ಯಯನ ಮಾಡುವ ವಿಷಯ |

## 4.8 ಕೆಲವು ಉಪಯುಕ್ತ ಗ್ರಂಥಗಳು


| | | |
|---|---|---|
| R.H. Tawney | - | Equality, London, Allien & Unwin 1930. |
| Robert Marlves | - | The Modern state, London, OOP, 1966 |
| ಡಾ.ಕೆ.ಜೆ.ಸುರೇಶ | - | ಆಧುನಿಕ ರಾಜಕೀಯ ಸಿದ್ಧಾಂತ |


## 4.9 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು

<u>ನಿಮ್ಮ ಪ್ರಗತಿ ಪರಿಶೀಲನೆ</u> **- 1**

1. ನೋಡಿ ವಿಭಾಗ 4.3
2. ನೋಡಿ ವಿಭಾಗ 4.1
3. ನೋಡಿ ವಿಭಾಗ 4.4

## ಘಟಕ 5 ಕಾನೂನಿನ ಸಿದ್ಧಾಂತ : ಚಾರಿತ್ರಿಕ ,ವಿಶ್ಲೇಷಣಾತ್ಮಕ, ತಾತ್ವಿಕ, ಹೋಲಿಕಾ, ಹಾಗೂ ಸಮಾಜಶಾಸ್ತ್ರ ಅಧ್ಯಯನ ಮಾರ್ಗಗಳು

ರಚನೆ


5.0 ಉದ್ದೇಶಗಳು

5.1 ಪೀಠಿಕೆ

5.2 ಕಾನೂನಿನ ಸಿದ್ಧಾಂತ : ಕೆಲವು ಚಿಂತನೆಗಳು

5.3 ವಿವಿಧ ಅಧ್ಯಯನ ಮಾರ್ಗಗಳು : ಚಾರಿತ್ರಿಕ, ವಿಶ್ಲೇಷಣಾತ್ಮಕ, ತಾತ್ವಿಕ, ಹೋಲಿಕಾ ಹಾಗೂ ಸಮಾಜಶಾಸ್ತ್ರ

5.4 ಕಾನೂನನ್ನು ಅರ್ಥಮಾಡಿಕೊಳ್ಳುವಲ್ಲಿ ಈ ಅಧ್ಯಯನ ಮಾರ್ಗಗಳ ಪ್ರಾಮುಖ್ಯತೆ

5.5 ಸಮಾರೋಪ

5.6 ಒಟ್ಟಾರೆ ಅಭಿಪ್ರಾಯ

5.7 ಕಠಿಣ ಪದಗಳು

5.8 ಕೆಲವು ಉಪಯುಕ್ತ ಗ್ರಂಥಗಳು

5.9 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು

## 5.0 ಉದ್ದೇಶಗಳು

ಈ ಅಧ್ಯಯನದ ಉದ್ದೇಶ ತಮಗೆ ಕಾನೂನು ಎಂಬ ಪರಿಕಲ್ಪನೆಯನ್ನು ಪರಿಚಯಿಸುವುದಾಗಿದೆ. ಸಮಾಜ ವಿಜ್ಞಾನದಲ್ಲಿ ಯಾವುದೇ ವಿಷಯವನ್ನು ಕುರಿತು ಅರಿತುಕೊಳ್ಳಬೇಕಾದರೆ, ಆ ವಿಷಯಕ್ಕೆ ಸಂಬಂಧಿಸಿದ ಸಿದ್ಧಾಂತದಲ್ಲಿ ನಾವು ಮೊದಲಿಗೆ ಸಂಪೂರ್ಣ ಜ್ಞಾನ ಹೊಂದುವುದು ಅಗತ್ಯವಿದೆ. ಈ ನಿಟ್ಟಿನಲ್ಲಿ ಕಾನೂನು ಸಿದ್ಧಾಂತದ ಅಧ್ಯಯನ ಮಾರ್ಗಗಳು ವಿವಿಧ ದೃಷ್ಟಿಕೋನದಿಂದ ಈ ವಿಷಯ ವಸ್ತುವಿನ ಅರಿವಿಗೆ ಸಹಾಯ ಮಾಡುತ್ತದೆ. ಇದು ವಿದ್ಯಾರ್ಥಿಗೆ ಕೇವಲ ವಿಷಯವೇ ಅಲ್ಲದೆ ಅದರ ವ್ಯಾಪ್ತಿ ಹಾಗೂ ಸಂಪೂರ್ಣ ಪರಿಚಯವಾಗುತ್ತದೆ. ಈ ಅಧ್ಯಯನವನ್ನು ಅಧ್ಯಯಿನಿಸಿದ ನಂತರದಲ್ಲಿ, ನೀವು ಕಾನೂನಿನ ಸಿದ್ಧಾಂತ ಹಾಗೂ ಅದರ ವಿವಿಧ ಅಧ್ಯಯನ ಮಾರ್ಗಗಳ ಬಗ್ಗೆ ಸಾಕಷ್ಟು ಮಾಹಿತಿ ಹೊಂದುವಿರಿ.

## 5.1 ಪೀಠಿಕೆ

ಕಾನೂನು ತಮಗೆ ತಿಳಿದರುವಂತೆ ಸಮಾಜದಲ್ಲಿ ಶಿಸ್ತಿನ ಜೀವನ ನಡೆಸಲು ಅವಶ್ಯಕವಾಗಿ ಬೇಕಾಗಿರುವ ಒಂದು ಸಾಧನವಾಗಿದೆ. ಇದು ಸಾರ್ವಭೌಮತ್ವದ ಕೇಂದ್ರ ಅಧ್ಯಯನ ವಸ್ತುವೂ ಹೌದು. ಕೇವಲ ಕಾನೂನು ಎಂಬ ಸಂಕುಚಿತ ಅಂಶದಿಂದ ಪ್ರಾರಂಭವಾಗಿ ತತ್ವಶಾಸ್ತ್ರ ಅಥವಾ ಕಾನೂನು ಶಾಸ್ತ್ರ ಎಂಬ ಅಧ್ಯಯನ ವಸ್ತುಗಳು ಇಂದಿಗೆ ಸಮಾಜದಲ್ಲಿ ಸಿದ್ಧತೆ ಸ್ಥಾಪಿಸುವಲ್ಲಿ ಅತ್ಯಗತ್ಯ ವಿಷಯ ವಸ್ತುಗಳಾಗಿವೆ. ರೋಮನ್ನರಿಂದ ಚರ್ಚುಗಳ ಪಾದ್ರಿಗಳವರೆವಿಗೂ, ಪ್ರಮುಖ ನಾಗರೀಕತೆಗಳು, ರಾಜಕೀಯ ಹಾಗೂ ಸಾಮಾಜಿಕ ಸಂಸ್ಥೆಗಳು, ಕಾನೂನು ಎಂಬ ಪರಿಕಲ್ಪನೆಗೆ ಸಾಕಷ್ಟು ಕೊಡುಗೆಗಳನ್ನು ನೀಡಿವೆ. ಪಾಶ್ಚಿಮಾತ್ಯ ಪಾಜಕೀಯ ಚಿಂತನೆಯಲ್ಲಿ ಹ್ಯೂಗೊಗ್ರೋಷಿಯಸ್, ಈ ಕಾನೂನು ಪರಿಕಲ್ಪನೆಗೆ ಅತೀ ಹೆಚ್ಚಿನ ಕೊಡುಗೆ ನೀಡಿದ್ದಾರೆ. ಹಾಗಾಗಿ ಈ ಕಾನೂನಿನ ಬಗೆಗೆ ಸ್ವಲ್ಪ ಗಮನ ಹರಿಸುವುದು ಮುಖ್ಯವೆನಿಸುತ್ತದೆ.

## 5.2 ಕಾನೂನಿನ ಸಿದ್ಧಾಂತಗಳು : ಕೆಲವು ಚಿಂತನೆಗಳು

ಕಾನೂನಿನ ಅಧ್ಯಯನ ಕುರಿತಾದ ಅಧ್ಯಯನ ಮಾರ್ಗಗಳಲ್ಲಿ ಮೂರು ಮುಖ್ಯ ಅಧ್ಯಯನ ಮಾರ್ಗಗಳಿವೆ. ಆಸ್ಟೀನ್‌ರವರ ವಿಶ್ಲೇಷಣಾತ್ಮಕ ಅಧ್ಯಯನ ಪಂಥ ಅದನ್ನು ಬಿಟ್ಟಂತೆ ಮೆಕೆವಲ್ಲಿ, ಬೋಡಿನ್, ಹಾಬ್ಸ್, ಹಾಲೆಂಡ್ ಕೂಡಾ ಇದೇ ಮಾರ್ಗ ಅಥವ ಶಾಲೆಗೆ ಸೇರುತ್ತಾರೆ.

ಈ ಮಾರ್ಗದ ಪ್ರಕಾರ ಸರ್ವಾಧಿಕಾರವು ಯಾವುದಾದರೂ ವ್ಯಕ್ತಿಗಳ/ ನಿರ್ಧರಿತ ವ್ಯಕ್ತಿಯ ಹಿಡಿತದಲ್ಲಿದ್ದು, ಕಾನೂನು ಅವರಿಂದ ಹೊರಹೊಮ್ಮುತ್ತದೆ ಎಂಬುದು. ಇಂತಹಾ ಕಾನೂನು ಕೊಡುಗೆದಾರರು ಶಾಸಕಾಂಗವಿರಬಹುದು, ನ್ಯಾಯಾಂಗವಿರಬಹುದು, ಅಥವ ಯಾರೇ ಇರಬಹುದು. ಆದರೆ ಅವರು ಗುರುತಿಸಲು ಸಿಗಬೇಕು ಎಂಬುದು. ಕಾನೂನಿನ ಬದ್ಧತೆಗೆ ಇಲ್ಲಿ ಮೂಲ ಕಾರಣ ಒತ್ತಡ ಹಾಗೂ ನಿರ್ಬಂಧನೆಗಳು.

ಈ ಸಿದ್ಧಾಂತದ ಮುಖ್ಯ ತಪ್ಪುಗಳೆಂದರೆ ಇದು ಕಾನೂನನ್ನು ಬದಲಾಗದ, ಸ್ಥಿರವಾದ, ಚಿಂತನೆಯೆಂದು ಪರಿಗಣಿಸುತ್ತದೆ. ಸರ್ ಹೆನ್ರಿ ಮೇಯಿನ್ ಹಾಗೂ ಸೇವನಿ ಈ ವಿಶ್ಲೇಷಣಾ ಅಧ್ಯಯನ ಶಾಲೆಯ ಚಿಂತನೆಗಳನ್ನು ಪ್ರಶ್ನಿಸಿ ತಮ್ಮ ಚರ್ಚೆಗಳನ್ನು ಮುಂದಿಡುತ್ತಾ ಕಾನೂನು ಒಂದು ಚಾರಿತ್ರಿಕ ಪ್ರಕ್ರಿಯೆಯಿಂದ ಹೊರಹೊಮ್ಮುವ ಪರಿಕಲ್ಪನೆ ಎಂದು ಚರ್ಚಿಸಿದರು.

ಇಂತಹಾ ಚರ್ಚೆಯೇ 'ಕಾನೂನು'ಎಂಬುದರ ಬಗ್ಗೆ ಚಾರಿತ್ರಿಕ ಅಧ್ಯಯನ ಮಾರ್ಗ ಬೆಳೆಯಲು ಕಾರಣವಾಯಿತು. ಇದನ್ನು ಹಾಲೋವೆಲ್‌ರವರು ಈ ಕೆಳಗಿನಂತೆ ಪಟ್ಟಿ ಮಾಡಿ ವಿವರಿಸಿದ್ದಾರೆ.

1. ಕಾನೂನು ಒಂದು ಕಾಲ, ಸ್ಥಾನ, ಹಾಗೂ ನಿರ್ಧರಿತ ಜನಾಂಗಕ್ಕೆ ಸಂಬಂಧಿಸತವಾದದ್ದು

2. ಕಾನೂನು, ವೈಚಾರಿಕತೆ ಅಥವ ಪ್ರಜ್ಞೆಯಲ್ಲಿ ಕಂಡುಬರದೇ ಚಾರಿತ್ರಿಕ ಪ್ರಕ್ರಿಯೆಯಲ್ಲಿ ಕಂಡುಬರುವುದರಿಂದ ವ್ಯಕ್ತಿ ಕಾನೂನು ರೂಪಣೆಯಲ್ಲಿ ಬಹಳಷ್ಟು ಕಡಿಮೆ ಪಾತ್ರ ವಹಿಸಲು ಸಾಧ್ಯವೆಂದು ಇವರು ಅಭಿಪ್ರಾಯ ಪಟ್ಟಿದ್ದಾರೆ.

3. ಇವರ ಪ್ರಕಾರ, ವ್ಯಕ್ತಿಗತವಾದ ನೈಸರ್ಗಿಕ ಹಕ್ಕಿನ ಸ್ಥಾನದಲ್ಲಿ, ಇಂಗ್ಲೀಷ್, ಜರ್ಮನ್, ಹಾಗೂ ಫ್ರೆಂಚ್‌ರ ಚಾರಿತ್ರಿಕ ಹಕ್ಕುಗಳು ಪ್ರಮುಖವೆಂದಿದ್ದಾರೆ.

4. ದೈವತ್ವದ ಚಿಂತನೆ ಹಾಗೂ ಪ್ರೇರಣೆ, ನೈಸರ್ಗಿಕ ವ್ಯವಸ್ಥೆಯನ್ನು ರೂಪಿಸಿದೆ ಎಂಬುದನ್ನು ವಿರೋಧಿಸಿದ ಇವರು ಈ ವ್ಯವಸ್ಥೆ ಚಾರಿತ್ರಿಕ ಬೆಳವಣಿಗೆಯಿಂದ ಅಸ್ಥಿತ್ವಕ್ಕೆ ಬಂದಿದೆ ಎಂದಿದ್ದಾರೆ.

5. ಸುಧಾರಣೆ ಎಂಬುದು ಅಸಾಧ್ಯವಾದುದರಿಂದ, ನಾವು ಚಾರಿತ್ರಿಕ ಘಟನೆಗಳಿಗೆ ತಮ್ಮಷ್ಟಕ್ಕೆ ತಾವೇ ಬದಲಾವಣೆ ತರಲು ಬಿಟ್ಟುಬಿಡಬೇಕೆಂದು ಇವರು ಅಭಿಪ್ರಾಯ ಪಟ್ಟಿದ್ದಾರೆ.

6. ಕಾನೂನಿಗೆ ದೊರಕುವ ಗೌರವ ಅದು ನೀಡುವ ನ್ಯಾಯಿಕವಾದ ತೀರ್ಪಿಗಿಂತಾ ಅದರ ಹಿಂದಿರುವ ಸಾಮಾಜಿಕ ಒತ್ತಡವೆಂದೂ ಇವರು ಅಭಿಪ್ರಾಯ ಪಟ್ಟಿದ್ದಾರೆ.

ಸೇವನೀಯವರ ಪ್ರಕಾರ, ಕಾನೂನೆಂಬುದು, ಜನಪದದ ಚಿಂತನೆ, ಹಾಗೂ ಜನಪದ ಆಲೋಚನೆಗಳಲ್ಲಿ ಮೂಡಿದೆ ಎಂದಿದ್ದಾರೆ. ಇದು ಜನಪದ ಸಂಸ್ಕೃತಿಯಲ್ಲಿ ಮೂಡಿದ್ದು ಇದನ್ನು ರಾಷ್ಟ್ರೀಯತೆಯೊಂದಿಗೆ ಸೇರಿಸಿದ್ದಾರೆ ಎಂದೂ ಈ ರೀತಿ ಚರಿತ್ರೆಯಲ್ಲಿ ಮೂಡಿ ಬಂದ ನಮ್ಮ ಕಾನೂನು ತಮ್ಮ ಹುಟ್ಟು, ಬೆಳವಣಿಗೆ ಹಾಗೂ ನಮ್ಮ ಭವಿಷ್ಯದಲ್ಲಿ ಏನಿದೆ ಎಂಬುದನ್ನು ತಿಳಿಸುತ್ತದೆ ಎಂದಿದ್ದಾರೆ.

ಇದರಂತೆಯೇ ಸಮಾಜಶಾಸ್ತ್ರ ಅಧ್ಯಯನ ಪಂಥಕ್ಕೆ ಸೇರಿದ ಮುಖ್ಯ ಚಿಂತಕರಲ್ಲಿ, ಡೂಯಿಟ್, ಕ್ರಾಬೆ, ಲಾಸ್ಕಿ, ಸೇರಿದ್ದಾರೆ. ಇವರ ಪ್ರಕಾರ ಸಾಂಪ್ರದಾಯಿಕ ಕಾನೂನಿನ ದೃಷ್ಟಿಕೋನ, ನಿಜವಾಗಿಯೂ ಯಾವುದೇ ವಿಚಾರವನ್ನು ಸರಿಯಾಗಿ ಪ್ರತಿಬಿಂಬಿಸುವುದಿಲ್ಲವೆಂಬುದಾಗಿದೆ. ಡೂಯಿಟ್‌ರವರ ಪ್ರಕಾರ, ಕಾನೂನಿಗೆ ಗೌರವ ದೊರಕುವುದು ಅದನ್ನು ಅನುಸರಣೆಗೆ ಹಾಗೂ ಆಚರಣೆಗೆ ತರಲು ಯಾರೋ ಇದ್ದಾರೆ ಎಂಬ ಕಾರಣಕ್ಕಾಗಲ್ಲಾ ಆದರೆ, ಅದು ಸಾಮಾಜಿಕ ಜೀವನಕ್ಕೆ ಅವಶ್ಯಕ ಪರಿಸರವನ್ನು ಒದಗಿಸಿಕೊಡುತ್ತದೆ ಎಂಬ ಕಾರಣಕ್ಕಾಗಿ ಎಂದಿದ್ದಾರೆ. ಸಾಮಾಜಿಕ ಬಿಕ್ಕಟ್ಟು, ಈ ವಿಷಯದ ಮೂಲ ಅಂಶವಾಗಿದ್ದು ಕಾನೂನು ಅದರ ಪರಿಮಿತಿಯಲ್ಲಿ ಬರುವ ಅಂಶವಾಗಿದೆ ಎಂದಿದ್ದಾರೆ. ಇವರ ಪ್ರಾರ ಯಾವ ಸಮಾಜದ ಒಗ್ಗಟ್ಟಿನಿಂದ ಕೆಲವು ತೀರ್ಮಾನ ತೆಗೆದುಕೊಂಡು ಅದರಂತೆ ವರ್ತಿಸುತ್ತದೋ ಅಲ್ಲಿಯೇ ಕಾನೂನು ತನ್ನಷ್ಟಕ್ಕೆ ತಾನೇ ಸೃಷ್ಟಿಗೊಳ್ಳುತ್ತದೆ ಎಂದಿದ್ದಾರೆ. ಇಂತಹಾ ವ್ಯವಸ್ಥೆಯಲ್ಲಿ ವ್ಯಕ್ತಿ ತನ್ನ ಹಿತಾಸಕ್ತಿ ದೃಷ್ಟಿಯಿಂದ ತಾನೇ ಈ ಕಾನೂನಿಗೆ ಗೌರವ ನೀಡುವುದು ಉತ್ತಮವೆಂದು ಇವರು ತಿಳಿಸಿದ್ದಾರೆ.

ಕಾನೂನು ಎಂಬುದು ಸಾಮಾನ್ಯ ಪ್ರಜ್ಞಾ ವಿಚಾರದಲ್ಲಿ ಒಂದು ನಡವಳಿಕೆಯನ್ನು ರೂಢಿಸಿಕೊಳ್ಳುವ ಮೂಲಭೂತ ಅಂಶವಾಗಿದೆ ಎಂದು ತಿಳಿಸಿದ್ದಾರೆ, ಇದನ್ನು ಗೌರವಿಸಬೇಕೆಂಬುದು ಸಾಮಾನ್ಯ ಪ್ರಜ್ಞೆಉಳ್ಳ ಎಲ್ಲಾ ವ್ಯಕ್ತಿಗಳಿಗೆ ಪರಿಚಿತವಿರುತ್ತದೆ. ಇದು ಆ ಸಮಾಜದಲ್ಲಿ ಜೀವಿಸುವ ಎಲ್ಲಾ ಜನರ ಒಳಿತನ್ನು ಹಾಗೂ ಸುಖವನ್ನು ಕಾಪಾಡುವ ವ್ಯವಸ್ಥೆ ಎಂದೂ ಎಲ್ಲರಿಗೂ ತಿಳಿದಿದೆ ಎಂದಿದ್ದಾರೆ.

ಇಂತಹಾ ಕಾನೂನಿನ ಒಪ್ಪಿಗೆ ಮೂಲಭೂತವಾಗಿ ಮಾನಸಿಕವಾಗಿ ಒಪ್ಪಿಗೆ ಪಡೆದಿರಬೇಕು ಪ್ರತೀ ವ್ಯಕ್ತಿ ಒಪ್ಪಿದ ನಂತರ ಸಮಾಜದಲ್ಲಿ ಅದನ್ನು ಗೌರವಿಸದ ಜನರಿಗೆ ಯಾವ ರೀತಿ ಶಿಕ್ಷಿಸಬೇಕೆಂಬುದನ್ನು ಸೇರಿದಂತೆ ಈ ಬಗ್ಗೆ ಒಪ್ಪಿಗೆ ಪಡೆಯಬೇಕೆಂದಿದ್ದಾರೆ.

ಕ್ರಾಬೆಯವರ ಚಿಂತನೆ ಈ ನಿಟ್ಟಿನಲ್ಲಿ ರಾಜ್ಯವನ್ನು ಮೀರಿ ಉತ್ತಮ ಕಾಯಿದೆ ಇದೆ ಎಂಬುದನ್ನು ಆಧರಿಸಿರುವ ಚಿಂತನೆ ಆಗಿದೆ. ಇವರ ಪ್ರಕಾರ ಕಾಯಿದೆ ರಾಜ್ಯ ಅಥವ ವ್ಯಕ್ತಿಯನ್ನು ಅನುಸರಿಸಿಲ್ಲ. ಇದು ಮಾನವನ ಮೌಲ್ಯಗಳ ಮೇಲೆ ಆಧಾರಿತವಾಗಿದೆ. ಸರ್ವರಿಗೂ ಸಮಾನ ಕಾಯ್ದೆ ಎಂಬುದು, ಮಾನವನು 'ನ್ಯಾಯ' ಎಂಬ ಪರಿಕಲ್ಪನೆಯನ್ನು ಯಾವ ರೀತಿಯಲ್ಲಿ ಅನುಸರಿಸಿ ಅರ್ಥೈಸಿಕೊಳ್ಳುತ್ತದೋ ಅದರ ಮೇಲೆ ಆಧಾರಿತವಾಗಿದೆ ಎಂದಿದ್ದಾರೆ. ಹೀಗೆ ಇವರು ಕಾನೂನನ್ನು ವ್ಯಕ್ತಿಯ ಆಂತರಿಕ ಚಿಂತನೆಯ ಹಿನ್ನೆಲೆಯಲ್ಲಿ ಗುರುತಿಸಿದ್ದಾರೆ.

ಈ ಚಿಂತನೆಯನ್ನು ವಿರೋಧಿಸಿ ಹೇಳಿಕೆ ನೀಡುವುದೇ ಆದರೆ, ವ್ಯಕ್ತಿಗತವಾದ ಆಸಕ್ತಿ ಹಾಗೂ ಕಾನೂನಿಗೆ ಗೌರವಿಸುವುದು ಇವೆರಡರ ನಡುವೆ ಕೇವಲ ಸಣ್ಣ ಪದರದ ವ್ಯತ್ಯಾಸವಿದೇ ಎಂಬುದಾಗಿದೆ. 'ಸರಿ' ಎಂಬ ಪರಿಕಲ್ಪನೆ ಹೇಗೆ ಶತಶತಮಾನಗಳಲ್ಲಿ ಬದಲಾವಣೆಯನ್ನು ಕಂಡುಕೊಂಡು ಬೆಳೆದಿದೆ, ಅಂತೆಯೇ, ಕಾನೂನು ಸಹಾ ರಾಷ್ಟ್ರ, ಗುಂಪು, ವ್ಯಕ್ತಿ ವ್ಯಕ್ತಿಗಳ ನಡುವಿನ ಅಂತರ ಹಾಗೂ ಕಾಲವನ್ನು ಅನುಸರಿಸಿಯೇ ನಡೆದುಕೊಂಡು ಮುಂದುವರೆದಿದೆ.

ಒಟ್ಟಿನಲ್ಲಿ, ಈ ಮೇಲಿನ ಚರ್ಚೆಯಲ್ಲಿ ಯಾವ ಚಿಂತನಾ ಶಾಲೆಯೂ, ಸಂಪೂರ್ಣ ಸತ್ಯವನ್ನು ನುಡಿದಿಲ್ಲಾ, ಪ್ರತಿಯೊಬ್ಬರಿಗೂ ಮತ್ತೊಬ್ಬರನ್ನು ಬೆಂಬಲಿಸಿದ್ದಾರೆ, ಅವರ ಬದಲಿಗೆ ಹೆಚ್ಚಿನ ವಿಷಯಗಳನ್ನು ಸೇರಿಸಿದ್ದಾರೆ. ಕಾರಣ ಕಾನೂನು ಕೇವಲಾ ರಾಜ್ಯದ ನಿರ್ದೇಶನವಿಲ್ಲಾ, ಅಥವ ರಾಜ್ಯಾಡಳಿತ ಮಾಡುವ ವ್ಯಕ್ತಿಯ ನೇರ ನಿರ್ದೇಶನವಿಲ್ಲಾ ಇದು ಆ ಸಮಾಜದ, ಜನರ, ಧಾರ್ಮಿಕ, ನೈತಿಕ, ಆರ್ಥಿಕ, ದೃಷ್ಟಿಕೋನವನ್ನು ಅವಲಂಬಿಸಿದ ಪರಿಕಲ್ಪನೆಯಾಗಿದೆ. ಸಮುದಾಯವು ನಿರ್ಧರಿಸುವ ಸರಿ ತಪ್ಪುಗಳನ್ನು ಇವು ಆಧರಿಸಿರುತ್ತವೆ. ಯಾವುದೇ ಕಾನೂನು ಹೇಗೆ ಜನರ ಸಮುದಾಯದ ಒಳಿತು ಕೆಡಕುಗಳನ್ನು ಆಧರಿಸಿ ನಿಲ್ಲದಿದ್ದರೆ ಅಂತಹಾ ಕಾನೂನಿಗೆ ಯಾರೂ ಬೆಲೆ ನೀಡಲಾರರು ಎಂದು ತಿಳಿಸಿದ್ದಾರೆ.

ಆದರೂ ಕಾನೂನು ಎಂಬುದು ಒಂದು ನಿರ್ದೇಶನ, ಕೆಟ್ಟ ಕಾನೂನಾದರೂ ಸಹಾ, ಅದು ಪ್ರಜಾಪ್ರಭುತ್ವಿಕವಾಗಿ ಆಚರಣೆಗೆ ಬಂದಿದ್ದೇ ಆದರೇ ಅದನ್ನು ಗೌರವಿಸಬೇಕಾಗುತ್ತದೆ. ಕೊನೆಗೆ ಅಂತಹಾ ಕಾನೂನುಗಳನ್ನು ಆಚರಣೆಗೆ ತರಲು ಭೌತಿಕ ಒತ್ತಾಯ ಕೂಡಾ ಅವಶ್ಯಕವಾಗುತ್ತದೆ. ಇಂತಹಾ ಒತ್ತಡವಿಲ್ಲದಿದ್ದರೆ, ಬೌದ್ಧಿಕವಾಗಿ ಬೆಳೆಯದಿರುವ ಎಷ್ಟೋ ನಾಗರೀಕರು ಈ ಕಾನೂನಿಗೆ ಗೌರವ ನೀಡದೇ ಹೋಗುತ್ತಾರೆ.

ಈ ಮೇಲಿನ, ತಾತ್ವಿಕ ಚಿಂತನೆಯ ಮೂಲಕ ನಾವೀಗ ಕಾನೂನಿನ ವಿವಿಧ ಅಧ್ಯಯನ ಮಾರ್ಗಗಳನ್ನು ಅರಿತುಕೊಳ್ಳೋಣ.

## 5.3 ವಿವಿಧ ಅಧ್ಯಯನ ಮಾರ್ಗಗಳು: ಚಾರಿತ್ರಿಕ, ವಿಶ್ಲೇಷಣಾತ್ಮಕ, ತಾತ್ವಿಕ, ಹೋಲಿಕಾ ಹಾಗೂ ಸಮಾಜಶಾಸ್ತ್ರ ಅಧ್ಯಯನ ಮಾರ್ಗಗಳು.

ಕಾನೂನಿಗೆ ಸಂಬಂಧಿಸಿದ ಅಧ್ಯಯನ ಮಾರ್ಗಗಳನ್ನು ಮೂಲಭೂತವಾಗಿ ಎರಡು ವಿಭಾಗಗಳಾಗಿ ವಿಂಗಡಿಸಬಹುದಾಗಿದೆ

a) ಮೌಲ್ಯಾಧಾರಿತ

b) ಪ್ರಾಯೋಗಿಕ

ಮೊದಲನೆಯದು ಹೆಚ್ಚಿನಾಂಶ ಮೌಲ್ಯವನ್ನು ಹೊಂದಿದುದಾಗಿದ್ದು, ಎರಡನೆಯದು ಮೌಲ್ಯವನ್ನು ನಿಯಂತ್ರಿಸಿ ಕೇವಲ ಪ್ರಾಯೋಗಿಕವಾದದ್ದು. ಹೀಗಾಗಿ ಈ ವಿಂಗಡನೆಯನ್ನು ವಿಷಯ ವಸ್ತು ಆಧಾರಿತವಾಗಿ ಮಾಡಲಾಗಿದೆ. ಇದರಲ್ಲಿ ಸಾಂಪ್ರದಾಯಿಕವಾದ ಚಿಂತನೆಗಳು ಹೆಚ್ಚಿನ ಮಟ್ಟಿಗೆ ಮೌಲ್ಯಾಧಾರಿತವಾಗಿದ್ದು, ಎರಡನೆಯದ್ದು ಹೆಚ್ಚಾಗಿ, ವಸ್ತುವಿಷಯಗಳನ್ನು ಕುರಿತಾಗಿದ್ದುದಾಗಿದೆ.

ಹಾಗೆಯೇ ಸಾಂಪ್ರದಾಯಿಕ ಚಿಂತನೆಗಳು ಚಾರಿತ್ರಿಕ ಹಾಗೂ ವಿವರಣಾತ್ಮಕವಾಗಿದ್ದು ಹೆಚ್ಚಾಗಿ, ಗುರಿಯನ್ನು ಸೃಷ್ಟಿಸಿ ಮೌಲ್ಯಗಳನ್ನು ರಚಿಸಿದಂತವುಗಳಾಗಿವೆ. ಹೀಗೆ ಈ ಹಿನ್ನೆಲೆಯಲ್ಲಿ ಕೆಳಗಿನ ಅಧ್ಯಯನ ಮಾರ್ಗಗಳ ಚರ್ಚೆಯನ್ನು ಮುಂದುವರಿಸಲಾಗಿದೆ.

**ಚಾರಿತ್ರಿಕ ಅಧ್ಯಯನ ಮಾರ್ಗ:**

ಇದನ್ನು 'ಕಾನೂನಾತ್ಮಕ ವಿಖಸನ' ವಾದ ಎಂತಲೂ ಗುರುತಿಸಲಾಗಿದೆ. ಇದು, ಕಾನೂನಿನ ಬೆಳವಣಿಗೆಯನ್ನು ಗುರುತಿಸಿ ಅದರ ಸ್ವರೂಪವನ್ನು ತಿಳಿಸುವ ಚಿಂತನೆಯಾಗಿದೆ. ಈ ಚಿಂತನೆಯ ಪ್ರಕಾರ ಸಮಾಜದ ವಿವಿಧ ಒತ್ತಡಗಳು ಒಂದನ್ನೊಂದು ಸ್ಪಂದಿಸಿ ವಿಕಸನಗೊಂಡ ಚಿಂತನೆಯೇ ಕಾನೂನಾಗಿದೆ ಎಂಬುದಾಗಿದೆ. ಹೆನ್ರಿ ಮೇಯಿನ್ ಹಾಗೂ ಸೇವನಿ ಇದರ ಪ್ರತಿಪಾದಕರಾಗಿದ್ದಾರೆ.

ಸೇವನಿಯವರು ಈ ಹಿಂದೆಯೇ ಹೇಳಿದಂತೆ ಕಾನೂನನ್ನು ಒಂದು ಸಮಾಜದ ಬೆಳವಣಿಗೆಯ ಹಿನ್ನೆಲೆಯಲ್ಲಿ ಗುರುತಿಸಿ ಆ ಸಮಾಜದ ಜನಾಂಗ, ಸಂಸ್ಕೃತಿ, ಸಂಸ್ಕಾರಗಳ ಒಟ್ಟಾರೆ ಅಭಿಪ್ರಾಯವೇ ಕಾನೂನು ಎಂಬ ಪ್ರತಿವಾದವನ್ನು ಮುಂದಿಟ್ಟಿದ್ದಾರೆ. ಹಾಗಾಗಿ, ಇವರಿಗೆ, ಸಂಸ್ಕೃತಿಯೇ ಕಾನೂನಿನ ಮುಖ್ಯ ಚೌಕಟ್ಟು. ಇವರ ಪ್ರಕಾರ, ಒಂದು ಜನಾಂಗದ ಜೀವನನಾಡಿಯಾದ ಅಸ್ತಿತ್ವಕ್ಕೆ ಬಂದ ಈ ಕಾನೂನು ಆ ಜನಾಂಗದ ಆಸೆ ಆಕಾಂಕ್ಷೆಗಳನ್ನು ಪ್ರತಿಬಿಂಬಿಸುವುದರಿಂದ ಶಾಸನ ಮಾಡುವ ಪ್ರಕ್ರಿಯೆ, ಕೇವಲ, ಜನರ ಆಸೆ ಆಕಾಂಕ್ಷೆಗಳಾಗಿ ರೂಪಿತವಾಗಿರುವ ಸಂಪ್ರದಾಯ ಹಾಗೂ ಸಂಸ್ಕೃತಿಗೆ ಕಾನೂನಿನ ಚೌಕಟ್ಟನ್ನು ನೀಡುವುದೆಂದು ಅಭಿಪ್ರಾಯ ಪಟ್ಟಿದ್ದಾರೆ.

ಹೆನ್ರಿ ಮೇಯಿನ್‌ರವರು ತಮ್ಮ ಎನ್ಸಿಯೆಂಟ್ ಲಾ (1861) ಎಂಬ ಪುಸ್ತಕದಲ್ಲಿ, ಸೇವನಿಯವರ ಚಿಂತನೆಯನ್ನು ದೂರ ತಳ್ಳಿ ಕಾನೂನನ್ನು ಕೇವಲ ಒಂದು 'ಜನಾಂಗದ' ಹಿನ್ನೆಲೆಯಲ್ಲಿ ಗುರುತಿಸುವ ಬದಲು, ಸಂಪೂರ್ಣ ವಿಶ್ವದ ಪರಿಕಲ್ಪನೆಯಡಿಯಲ್ಲಿ ಗುರುತಿಸುವ ಪ್ರಯತ್ನ ಮಾಡಿದ್ದಾರೆ. ಇವರು ವಿವಿಧ ರಾಜಕೀಯ ವ್ಯವಸ್ಥೆಗಳನ್ನು ಅಧ್ಯಯನಿಸಿ ಮಾಡಿರುವ ಚಿಂತನೆಯಲ್ಲಿ ಕಾನೂನು ಒಂದು ಚಳುವಳಿಯಾಗಿ ವಿಕಸನ ಹೊಂದಿ ಇದು ಸ್ಥಿರವಾಗಿರದ, ಒಂದು ಒಪ್ಪಂದದ ರೀತಿಯಲ್ಲಿ ಮುಂದುವರಿದ ಚಿಂತನೆಯಾಗಿದೆ ಎಂದಿದ್ದಾರೆ.

ಈ ಚಾರಿತ್ರಿಕ ಅಧ್ಯಯನದ ಮಾರ್ಗದ ಪ್ರಕಾರ ಕಾನೂನು ಯಾವುದೇ ಕಾಲದಲ್ಲಿ ಸ್ಥಿರ ಚಿಂತನೆಯಾಗದೇ ಆಯಾ ಸಮಾಜಗಳ ಸಂಸ್ಥೆಗಳ ಬೆಳವಣಿಗೆ ವಿಕಸನದೊಂದಿಗೆ ಬೆಳೆದು ಆ ಬದಲಾವಣೆಗಳನ್ನು ಮೈಗೂಡಿಸಿಕೊಂಡು ಬೆಳೆದಿರುವ ಒಂದು ಪ್ರಕ್ರಿಯೆ ಎಂದು ಪರಿಗಣಿಸಿದ್ದಾರೆ.

**ವಿಶ್ಲೇಷಣಾ ಅಧ್ಯಯನ ಮಾರ್ಗ:**

ಈ ಅಧ್ಯಯನ ಮಾರ್ಗವು ಆಂಗ್ಲೋ-ಅಮೆರಿಕನ್ ಚಿಂತನೆಯ ಸಂಪ್ರದಾಯದಲ್ಲಿ ಬೆಳೆದ ಚಿಂತನೆಯಾಗಿದೆ. ಇದು 19ನೇ ಶತಮಾನದಲ್ಲಿ ಬೆಳಕಿಗೆ ಬಂದಿತು. ಇದರ ಪ್ರಕಾರ ಎಲ್ಲಾ ಕಾನೂನುಗಳು ಘನಾತ್ಮಕ (Positive)ಬೆಳವಣಿಗೆ ಎಂದು ಗುರುತಿಸುವುದಾಗಿದೆ. ಇದು ನೇರವಾಗಿ ಶಾಸನೀಯ ಅಧಿಕಾರದಿಂದ ನಿರ್ದೇಶನವಾದದ್ದು ಹಾಗೂ ಆಚರಣೆಗೆ ಬಂದದ್ದು ಎಂದು ಅಭಿಪ್ರಾಯ ಪಟ್ಟಿದ್ದಾರೆ. ಇದು ಕಾನೂನಿನ ಲಕ್ಷಣವನ್ನು ತಾಂತ್ರಿಕ ಅರ್ಥದಲ್ಲಿ ವಿವರಿಸಿ, ಅದನ್ನು ನೈತಿಕ ಅರ್ಥಕ್ಕಿಂತ ವಿಭಿನ್ನರೀತಿಯಲ್ಲಿ ಕಲ್ಪಿಸುತ್ತಾರೆ. ಇವರು ಯಾವ ಕಾನೂನನ್ನು ಅಧಿಕಾರದ ನಿರ್ದೇಶನವಲ್ಲವೆಂದಲ್ಲಿ ಅದನ್ನು ತಿರಸ್ಕರಿಸಿ, ಅಂತಹ ಕಾನೂನನ್ನು ನಾವು ಆಚರಣೆಗೆ ತರಲಾಗುವುದಿಲ್ಲವೆಂದು ಅಭಿಪ್ರಾಯ ಪಡುತ್ತಾರೆ. ಇದಕ್ಕೆ ಅಂತರರಾಷ್ಟ್ರೀಯ ಕಾನೂನನ್ನು ಇವರು ಉದಾಹರಿಸುತ್ತಾರೆ. ಇವರು ನೈಸರ್ಗಿಕ ಕಾನೂನನ್ನು ಅವೈಜ್ಞಾನಿಕ ಹಾಗೂ ಇದು ದೈವಾಂಶ ಚರ್ಚೆಗಳಿಗೆ ಸಂಬಂಧಿಸಿದ್ದು ಎಂದು ಈ ಚಿಂತನೆಗಳು ಕಾನೂನು ಹಾಗೂ ನೈತಿಕತೆಯ ನಡುವೆ, ದ್ವಂದ್ವ ತರುತ್ತವೆ ಎಂದು ತಿಳಿಸಿದ್ದಾರೆ. ಜಾನ್ ಆಸ್ಟೀನ್ (1790-1859) ರವರನ್ನು ಇದರ ಮುಖ್ಯ ಪ್ರತಿಪಾದಕರೆಂದು ಗುರುತಿಸಲಾಗಿದ್ದು, ಇವರ ಚಿಂತನೆಯನ್ನು ಹಾಗೂ ವಿಶ್ಲೇಷಣಾ ಮಾರ್ಗವನ್ನು ಇಲ್ಲಿ ಅಳವಡಿಸಿಕೊಳ್ಳಲಾಗಿದೆ.

ಆಸ್ಟೀನ್‌ರವರು ಕಾನೂನನ್ನು ಸರ್ವಾಧಿಕಾರಿಯ ನಿರ್ದೇಶನವೆಂದು ತಿಳಿಸಿದರು. ಆದರೆ ಈ ಸರ್ವಾಧಿಕಾರ ಒಬ್ಬ ಅಥವ ಹಲವಾರು ಜನರ ಕೈಯಲ್ಲಿ ಇರಬಹುದೆಂದೂ ಸಹಾ ತಿಳಿಸಿದ್ದಾರೆ. ಇಂತಹಾ ಚಿಂತನೆ ಯಾವುದೇ ನಿರ್ಧರಿತ ರಾಜಕೀಯ ಸಮಾಜದಲ್ಲಿ ಅಸ್ತಿತ್ವಕ್ಕೆ ಬಂದದ್ದು ಎಂದೂ ತಿಳಿಸಿದ್ದಾರೆ. 'ಅಂತರರಾಷ್ಟ್ರೀಯ ಕಾನೂನು' ಇಂತಹಾ ಯಾವುದೇ ಒಬ್ಬ ಸರ್ವಾಧಿಕಾರಿಯ ನಿರ್ದೇಶನವಲ್ಲದ್ದರಿಂದ ಅದನ್ನು ಇವರು ಕಾನೂನೆಂದು ಒಪ್ಪುವುದಿಲ್ಲ. ಇದನ್ನು ಕೇವಲ ಋಣಾತ್ಮಕವಾದ ನೈತಿಕ, ಚಿಂತನೆ ಎಂದಷ್ಟೆ ಕರೆಯಬಹುದೆಂದು ಹೇಳಿದ ಇವರು'ಕಾನೂನು' ಎಂಬ ಪದವನ್ನು ಇಲ್ಲಿ ಬಳಸುವುದು ಸರಿಯಲ್ಲಾ ಎಂದು ವಾದಿಸಿದ್ದಾರೆ. ಹ್ಯಾನ್ಸ ಕೆಲ್ಸನ್, ತಮ್ಮ ಗೇಮ್ ಥಿಯರಿ ಆಫ್ ಲಾ ಎಂಡ್ ಸ್ಟೇಟ್ (1961)ಎಂಬ ಗ್ರಂಥದಲ್ಲಿ ಆಸ್ಟಿನ್‌ರವರ ಸಿದ್ಧಾಂತದ ಮೂಲ ಚಿಂತನೆ, ಕಲ್ಪನೆಯನ್ನೇ ಪ್ರಶ್ನಿಸಿದ್ದಾರೆ. ಇವರು, ನೈತಿಕತೆ ಹಾಗೂ ಕಾನೂನನ್ನು ಬೇರೆ ಬೇರೆಯಾಗಿ ಕಂಡುಕೊಂಡಿದ್ದರ ಕಾರಣವಾಗಿ ಇವೆರಡೂ ಒಂದೇ ಅಲ್ಲಾ, ಈ ರೀತಿಯಾಗಿ ಪದಗಳನ್ನು ಬಳಸುವುದೂ ತಪ್ಪು ಎಂದು ಘನಾತ್ಮಕ (positivist) ವಾದಿಗಳಂತೆ ಇವರು ತಮ್ಮ ಚರ್ಚೆ ಮಾಡಿ, ಆಸ್ಟಿನ್‌ರವರಿಗಿಂತ ಸ್ವಲ್ಪ ವಿಭಿನ್ನವಾಗಿ ತಮ್ಮ ವಿಚಾರಗಳನ್ನು ಮಂಡಿಸಿದ್ದಾರೆ.

ಎಚ್.ಎ.ಎಲ್. ಹಾರ್ಟ್, ಈ ನಿಟ್ಟಿನಲ್ಲಿ ಮತ್ತೊಬ್ಬ ಪ್ರಮುಖ ಚಿಂತಕರು, ಕಾನೂನು ಪರಿಕಲ್ಪನೆ ಕುರಿತು 1961ರಲ್ಲಿ ಚರ್ಚಿಸಿ ಆಸ್ಟಿನ್‌ರವರ ಚಿಂತನೆ ಬಹಳ ಸಂಕುಚಿತವಾದದ್ದು, ಆದರೆ, ಇದನ್ನೇ ಸರಿಯಾದ ದೃಷ್ಟಿಯಲ್ಲಿ ಗಮನಿಸಿದರೆ, ಅದು ಕೇವಲ ನಿರ್ದೇಶನವಾಗದೇ ಅದು ಶಿಕ್ಷೆಯಾಗಿ ಕೂಡಾ ಪರಿಗಣಿಸಲ್ಪಡುವುದು. ಅಂದರೆ ಇಂತಹ ಚಿಂತನೆಗಳು ಕ್ರಿಮಿನಲ್ ಕಾನೂನಿನಲ್ಲಿ ಕಂಡು ಬರುವುದರಿಂದ, ಕಾನೂನನ್ನು ಆ ದೃಷ್ಟಿಯಲ್ಲಿ ನೋಡುವುದು ಸರಿಯಲ್ಲ ಎಂದಿದ್ದಾರೆ. ಆ ಕಾರಣಕ್ಕಾಗಿ ಕಾನೂನುಗಳು ವಿಭಿನ್ನವಾಗಿ ವಿಭಿನ್ನ ಕಾರ್ಯಗಳನ್ನು ಎಸಗಲು ನಿರ್ದೇಶನ ನೀಡುವುದು ಸರಿ ಎಂದಿದ್ದಾರೆ. ಹೀಗೆ ಕಾನೂನು ಕೇವಲ ನಿಯಂತ್ರಣವಲ್ಲದೇ ಹಂಚಿಕೆಯ ಕಾರ್ಯದಲ್ಲೂ ಬಳಸಲ್ಪಡುತ್ತದೆ ಎಂದು ತೋರಿಸಿದ್ದಾರೆ.

ಹಾರ್ಟ ಈ ರೀತಿ ಕೆಲ್ಸನ್‌ರವರ ಚಿಂತನೆಗಳನ್ನು ತಿರಸ್ಕರಿಸಿ,, ಯಾವುದೇ ಕಾನೂನುvaccumನಲ್ಲಿ ಇರಲು ಸಾಧ್ಯವಿಲ್ಲಾ ಎಂದಿದ್ದಾರೆ. ಹಾಗೂ ಯಾವುದೇ ಕಾನೂನು ಆಚರಣೆಗೆ ಬರಲು ಸಾಮಾಜಿಕ ಹಾಗೂ ಸಾಮಾಜಿಕವಾಗಿ ಆಚರಣೆಗೆ ಬರಬೇಕಾದ ಕಾನೂನು ಕಾನೂನಾತ್ಮಕವಾಗಿ ಶಾಸನೀಕರಣಗೊಳ್ಳಬೇಕು ಎಂದು ಚರ್ಚಿಸಿದ್ದಾರೆ.

ರೋನಾಲ್ಡ್ ಡೊರ್ಕಿನ್ ಹಾರ್ಟನ ಚಿಂತನೆಗಳನ್ನು ವಿರೋಧಿಸಿ, ಇವರ ಚಿಂತನೆಗಳು ಕಾನೂನನ್ನು ತತ್ವಗಳಂತೆ ಕಾಣಬಯಸುತ್ತಾ ತಮ್ಮ ವಿಚಾರಮಂಡನೆ ಮಾಡುತ್ತವೆ ಇದು ಸರಿಯಲ್ಲವೆಂದಿದ್ದಾರೆ. ಹಕ್ಕನ್ನು ಕುರಿತು ತಾವು ನಡೆಸಿದ ಚರ್ಚೆಯಲ್ಲಿ (1977) ಡ್ವೊರ್ಕಿನ್‌ರವರು, ಹಾರ್ಟ್‌ನ ಮಾದರಿಯ ಚರ್ಚೆಗಳು ಕಾನೂನಿನ ವಿವಿಧ ಮುಖಗಳ ವಿಶ್ಲೇಷಣೆಯಲ್ಲಿ ಬಳಸಲಾಗುದು ಎಂದು ಹೇಳಿದ್ದಾರೆ. ಅಲ್ಲದೇ, ರೂಲ್, ಅಥವಾ ಕಾಯಿದೆಗಳು ಎಲ್ಲಾ ಕಾಲದಲ್ಲೂ ಕಾನೂನು ಮಾಡುವ ಕೆಲಸವನ್ನು ಮಾಡಲಾಗುವುದಿಲ್ಲವೆಂಬುದನ್ನು ಸಹಾ ಇವರು ತೋರಿಸಿದ್ದಾರೆ. ಹಾಗೂ ನ್ಯಾಯವಾದಿಗಳೂ ಸಹಾ ತತ್ವ ಬಳಸಿ ಕೆಲವೊಮ್ಮೆ ಕ್ಲಿಷ್ಟ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾರೆ ಅಂದಾಕ್ಷಣ ತತ್ವ, ಕಾಯಿದೆ, ಕಾನೂನು ಎಲ್ಲವನ್ನು ಒಂದೇ ಅರ್ಥದಲ್ಲಿ ಬಳಸಲು ಸಾಧ್ಯವೇ ಎಂದೂ ಪ್ರಶ್ನಿಸುತ್ತಾರೆ. ಹೀಗೆ ಋಣಾತ್ಮಕವಾದಿಗಳ (positivists) ಚರ್ಚೆ ಇಡೀ ಕಾನೂನನ್ನು ಕೇವಲಾ ಕಾನೂನಿನ ದೃಷ್ಟಿಯಲ್ಲಿಯೇ ಕಂಡುಕೊಳ್ಳಬೇಕೆಂಬುದು ಸರಿಯಾದ ಚರ್ಚೆಯಲ್ಲ ಎಂದಿದ್ದಾರೆ.

ಡ್ವೊರ್ಕಿನ್ ತಮ್ಮ ಚರ್ಚೆಯಲ್ಲಿ ಸ್ಪಷ್ಟಪಡಿಸುವ ಮತ್ತೊಂದು ಚರ್ಚೆಯೆಂದರೆ ಕಾನೂನು, ತತ್ವ ಹಾಗೂ ಕಾಯಿದೆಗಳ ನಡುವಿನ ಅಂತರ, ಅದರ ಬಳಕೆ, ಪರಿಮಿತಿ ಹಾಗೂ ವ್ಯಾಪ್ತಿ.

ಒಟ್ಟಿನಲ್ಲಿ ಹೇಳುವುದಾದರೆ, ಋಣಾತ್ಮಕವಾದಿಗಳು, ಕಾನೂನನ್ನು ಬಹಳ ಸಂಕುಚಿತವಾಗಿ ಕಾಣುತ್ತದೆ ಎಂಬುದು. ಕಾರಣ, ಕಾನೂನು ಎಂಬ ಪರಿಕಲ್ಪನೆ ಬಹಳಷ್ಟು. ಸಂಕೀರ್ಣವಾದದ್ದು, ಆದ್ದರಿಂದ ವಿಶ್ಲೇಷಣಾ ಮಾರ್ಗವೇ ಇದರ ಪೂರ್ಣಪ್ರಜ್ಞೆಗೆ ಸರಿಯಾದ ಮಾರ್ಗವೆಂದು ಇವರು ತಿಳಿಸಿದ್ದಾರೆ.

**ತಾತ್ವಿಕ ಅಧ್ಯಯನ ಮಾರ್ಗ:**

ಕಾನೂನಿನ ಅಧ್ಯಯನಕ್ಕೆ ಇರುವ ಅತ್ಯಂತ ಹಳೆಯ ಅಧ್ಯಯನ ಮಾರ್ಗವೆಂದರೆ, ತಾತ್ವಿಕ ಅಧ್ಯಯನ ಮಾರ್ಗ. ಇದನ್ನು ನೈತಿಕ ಅಧ್ಯಯನ ಮಾರ್ಗವೆಂದೂ ಸಹಾ ಕರೆಯುತ್ತಾರೆ. ಇಲ್ಲಿ ಕಾನೂನನ್ನು ಹಲವು ನೈತಿಕ, ಸತ್ಯ, ಆಳವಾದ ತತ್ವಗಳೊಂದಿಗೆ ಬೆರೆಸಿ ಒಂದು ನಿರ್ಧರಿತ ಗುರಿ ತಲುಪುವಲ್ಲಿ ಗ್ರಹಿಸಲಾಗಿದೆ. ಹೀಗಾಗಿ ಈ ಸಂದರ್ಭದಲ್ಲಿ ಕಾನೂನಿನ ಅಧ್ಯಯನವು ಭವಿಷ್ಯ ನುಡಿಯುವ ಕೆಲವು ಭಾವನೆಗಳನ್ನು ಮೂಡಿಸುತ್ತವೆ. ಕಾರಣ, ತತ್ವಶಾಸ್ತ್ರ ನಿಜಕ್ಕೂ ಚಿಂತನೆಯ ಮೇಲೆ ಮರು ಚಿಂತನೆಯ ಅವಶ್ಯಕತೆಯನ್ನು ಎತ್ತಿ ಹಿಡಿದು ತೋರಿಸುತ್ತಾನೆ. ಹೀಗಾಗಿ ಈ ಮಾರ್ಗವು ಯಾವುದೇ ಪರಿಕಲ್ಪನೆಯನ್ನು ಅದರ ಲಕ್ಷಣ ಹಾಗೂ ವಿಷಯ ಹಾಗೂ ಅದರ ಆಗುಹೋಗುಗಳ ಬಗ್ಗೆ ತಿಳಿಸುವುದಾಗಿದೆ. ಹಾಗೂ ಇಂದು ಭಾಷಾ ವಿಚಾರದಲ್ಲಿ ಸ್ಪಷ್ಟತೆಯನ್ನು ತರಲು ಪ್ರಯತ್ನಿಸುವುದೂ ಆಗಿದೆ. ಕಾರಣ ಬಳಸಿದ ಪದದ ಅರ್ಥ, ಅದರ ನೈಜ ಅರ್ಥ ಹಾಗೂ ಅರ್ಥೈಸಿಕೊಂಡ ಅರ್ಥದಲ್ಲೂ ಬದಲಾವಣೆ ಆಗುವ ಸಾಧ್ಯತೆ ಇದೆ ಎಂದಿದ್ದಾರೆ. ಹೀಗಾಗಿ ಈ ಅಧ್ಯಯನ ಮಾರ್ಗ ಬಳಸುವವರು ರಾಜನ ಆಡಳಿತದಲ್ಲಿ ರಾಜನಿಗೆ ಈ ಅಧ್ಯಯನ ಮಾರ್ಗ ಬಳಸುವವರು ರಾಜನ ಆಡಳಿತದಲ್ಲಿ ರಾಜನಿಗೆ ತಿಳುವಳಿಕೆ ನೀಡುವ ಸ್ಥಾನದಲ್ಲಿದ್ದು ಕಾರ್ಯನಿರ್ವಹಿಸುತ್ತಿದ್ದರು ಎಂದು ಹೇಳಿದ್ದಾರೆ. ಇಂತಹಾ ಮಾರ್ಗದಲ್ಲಿ ಮೌಲ್ಯವು ಪ್ರಾಯೋಗಿಕ ಚಿಂತನೆಗಿಂತಾ ಪ್ರಭುದ್ದವಾಗಿದೆ. ಆದರೆ ಈ ಅಧ್ಯಯನ ಮಾರ್ಗ ಜನಸಾಮಾನ್ಯರಿಗೆ ಸುಲಭದಲ್ಲಿ ಅರ್ಥವಾಗದ ಕಾರಣ ಇದನ್ನು ಭವಿಷ್ಯ ನುಡಿಯುವ ಹಾಗೆ ಎಂದು ಟೀಕಿಸಿದ್ದಾರೆ.

**ಹೋಲಿಕಾ ಅಧ್ಯಯನಾ ಮಾರ್ಗ:**

ಇತ್ತೀಚೆಗೆ ಕಾನೂನು ಅಧ್ಯಯನದಲ್ಲಿ ಕೆಲವು ಹೊಸ ಬೆಳವಣಿಗೆಗಳಾಗಿದ್ದು, ಹೊಸ ಅಧ್ಯಯನ ಮಾರ್ಗಗಳು ಬೆಳೆದ ಕಾರಣ, ಅಂತಹಾ ಚಿಂತನೆಗಳನ್ನು, ಕೂಡಿಸಿ ಹೋಲಿಕಾ ಅಧ್ಯಯನ ಮಾರ್ಗವನ್ನು ಇಲ್ಲಿ ಹಮ್ಮಿಕೊಳ್ಳಲಾಗಿದೆ. ಈ ರೀತಿಯಾಗಿ ಹೋಲಿಕೆ ಮಾಡುವುದರಿಂದ ಬೇರೆ ಬೇರೆ ಚಿಂತನೆಗಳಲ್ಲಿ ಕಾನೂನಿನ ಪರಿಕಲ್ಪನೆಗಳು ಏನಿವೆ ಎಂಬ ಅರಿವು ನಮ್ಮಲ್ಲಿ ಮೂಡುತ್ತದೆ ಎಂಬುದು. ಇದು ಕಾನೂನಿನ ಪರಿಕಲ್ಪನೆ ಅಲ್ಲದೇ ಅದರ ವ್ಯಾಪ್ತಿ ಹಾಗೂ ಪರಿಮಿತಿಗಳ ಸ್ವರೂಪವನ್ನು ತಿಳಿಸುತ್ತದೆ. ಬಹಳಷ್ಟು ಬರಹಗಾರರು, ಈ ಮಾರ್ಗದಲ್ಲಿ ಸಮಾಜಶಾಸ್ತ್ರದಲ್ಲಿ ಬಳಸಲ್ಪಡುವ ಹಲವಾರು ಪರಿಕಲ್ಪನೆಗಳನ್ನೂ, ವೈಜ್ಞಾನಿಕ ಪರಿಕಲ್ಪನೆಗಳನ್ನು ಒಟ್ಟಾಗಿ ಬಳಸಿ ಉಪಯೋಗಿಸಿದ್ದಾರೆ.

ಈ ರೀತಿಯಾಗಿ ವಿವಿಧ ಅಧ್ಯಯನಗಳಿಂದ ಬರಮಾಡಿಕೊಂಡ ಚಿಂತನೆಗಳನ್ನು ಇಲ್ಲಿ ಕಾನೂನಿನ ಉಗಮ, ಹುಟ್ಟು, ಬೆಳವಣಿಗೆ, ಅಭಿವೃದ್ಧಿ, ಬಳಕೆ ಎಲ್ಲಾ ಸಂದರ್ಭದಲ್ಲಿ ಬಳಸಲಾಗಿದೆ ಎಂದೂ ವಾದವಿದೆ. ಹೀಗಾಗಿ ಈಗಾಗಲೇ ಪ್ರಚಲಿತವಿರುವ ಚಿಂತನೆಗಳೊಂದಿಗೆ ಹೊಸ ಚಿಂತನೆಗಳೂ ಸೇರಿದಂತೆ, ಕಾನೂನಿನ ಅಧ್ಯಯನಕ್ಕೆ ಹೊಸ ಆಯಾಮ ಕೂಡಾ ಇದರಲ್ಲಿ ದೊರಕಿದೆ.

ಹೀಗೆ, ಬಹು ಅಧ್ಯಯನ ವಿಷಯ ಮಾರ್ಗವು ಕಾನೂನಿನ ಪರಿಕಲ್ಪನೆಯ ವಿವಿಧ ಆಯಾಮಗಳನ್ನು ಒಂದೇ ಹಂತದಲ್ಲಿ ಅರ್ಥ ಮಾಡಿಕೊಳ್ಳಲು ಸಹಾಯಕಾರಿಯಾಗಿದೆ ಎಂಬುದು ಇಲ್ಲಿ ಗಮನಿಸಬೇಕಾದ ಅಂಶ. ಹೀಗೆ ಈ ಅಧ್ಯಯನವು ಸಾಂಪ್ರದಾಯಿಕ ಹಾಗೂ ಆಧುನಿಕ ಅಧ್ಯಯನ ಮಾರ್ಗಗಳ ನಡುವೆ ಸಂಬಂಧ ಏರ್ಪಡಿಸಿದೆ. ಇದರಿಂದ ಯಾವುದೇ ವಿಷಯದ ಸಿದ್ಧಾಂತ ಬಲಿಷ್ಠವಾಗುವುದರಲ್ಲಿ ತಪ್ಪಿಲ್ಲ ಎಂಬುದೂ ಇಲ್ಲಿ ಗಮನಿಸಬೇಕಾದ ಅಂಶವಾಗಿದೆ.

ಆದರೆ, ಈ ಅಧ್ಯಯನ ಮಾರ್ಗ ಸಮಸ್ಯೆಗಳನ್ನು ಹೊಂದಿಲ್ಲವೆಂದರೆ ತಪ್ಪಾಗುತ್ತದೆ. ಕಾರಣ ಕೆಲವೊಮ್ಮೆ ವೈಜ್ಞಾನಿಕ ವಿಶ್ಲೇಷಣೆಗೆ ಈ ಅಧ್ಯಯನ ಮಾರ್ಗ ಅವಕಾಶ ಮಾಡಿಕೊಡುವುದಿಲ್ಲಾ. ಮೊದಲಿಗೆ ಈ ಅಧ್ಯಯನ ಮಾರ್ಗ ಇನ್ನೂ ಎಲ್ಲೆಡೆಯಲ್ಲೂ ಒಪ್ಪಿಗೆ ಹಾಗೂ ಪ್ರಚಲಿತತೆಯನ್ನು ಪಡೆದುಕೊಂಡಿಲ್ಲಾ. ಪ್ರತೀ ಪ್ರತಿಪಾದಕನೂ ಬೇರೆ ಬೇರೆ ಪರಿಕಲ್ಪನೆ ಬಳಸಿ ಚರ್ಚಿಸುವುದರಿಂದ

ಇವುಗಳಲ್ಲಿ ಸಾಮ್ಯತೆ ಕಂಡುಬರದಿರುವುದು ಮತ್ತೊಂದು ಸಮಸ್ಯೆ ಆಗಿದೆ. ಹೀಗೆ, ಈ ಹೋಲಿಕಾ ಅಧ್ಯಯನ ಸಹಾ ಒಳಿತು ಹಾಗೂ ಕೆಡಕುಗಳನ್ನು ಹೊಂದಿದ ಅಧ್ಯಯನ ಮಾರ್ಗವಾಗಿದೆ.

**ಸಮಾಜಶಾಸ್ತ್ರೀಯ ಅಧ್ಯಯನ ಮಾರ್ಗ**

ಗುಂಪ್ಲೋಮಿಕ್ಸ್, ಅಯಾನ್, ಡೂಯಿಟ್, ಹ್ಯೂಗೋ, ಕ್ರಾಬೆ, ರೂಸ್ಕೊ ಪೌಂಡ್, ಲಾಸ್ಕಿಯಂತಹ ಚಿಂತಕರ ಚಿಂತನೆಯಿಂದ ಮೂಡಿಬಂದಿರುವ ಈ ಚಿಂತನೆ, ವಿಶ್ಲೇಷಣಾ ಮಾರ್ಗದಿಂದ ವಿಭಿನ್ನವಾಗಿದೆ. ಇವರ ಪ್ರಕಾರ ಕಾನೂನು ಹುಟ್ಟಿಗೆ ರಾಜ್ಯ ಕಾರಣವಲ್ಲಾ ಎಂಬುದು. ಇದು ಕೇವಲಾ ಅಸ್ತಿತ್ವದಲ್ಲಿರುವ ಸಂಪ್ರದಾಯ ಹಾಗೂ ಇತರೇ ಸಾಮಾಜಿಕ ಅಂಶಗಳಿಗೆ ಕಾನೂನಾತ್ಮಕ ಬಣ್ಣ ನೀಡುತ್ತದೆ ಎಂದಿದ್ದಾರೆ. ಹೀಗಾಗಿ ಇವರ ಪ್ರಕಾರ ಕಾನೂನು ರಾಜ್ಯಕ್ಕಿಂತಾ ಮೊದಲು ಅಸ್ಥಿತ್ವದಲ್ಲಿತ್ತು ಎಂಬುದು ಇವರ ಚರ್ಚೆ. ಆದರೆ ಕಾನೂನು ಸಮಾಜದಲ್ಲಿನ ಸಮಸ್ಯೆಗಳಿಗೆ ಪರಿಹಾರ ಸೂಚಿಸುವ ಚಿಂತನೆಯಾದ್ದರಿಂದ, ಹಾಗೂ ಆ ಮೂಲಕ ಸಮಾಜ ಅಭಿವೃದ್ಧಿಗೊಳ್ಳುವುದರಿಂದ, ಕಾನೂನು, ಸಮಾಜದಲ್ಲಿ ರಾಜ್ಯದಿಂದ ನಿರ್ದೇಶಿತವಾದದ್ದು ಎಂಬ ಭಾವನೆ ಬಂದಿದೆ ಎಂದು ಇವರುಗಳು ಚರ್ಚಿಸಿದ್ದಾರೆ. ಆದರೆ, ಇಂತಹಾ ಕಾನೂನುಗಳು ಸಮಾಜದಲ್ಲಿ ನಿರಂತರವಾಗಿ ಬರುವ ಸಮಸ್ಯೆಗಳಿಗೆ ಸ್ಪಂದಿಸಬೇಕಾದ್ದರಿಂದ, ಅದು ವಿವಿಧ ತೆರನಾದ ಪುನರ್ ವಿಮರ್ಶೆಗೆ ತೆರೆದಿರಬೇಕು ಎಂದಿದ್ದಾರೆ. ಇದು ನಿರ್ಧರಿತ ಸಮಾಜದಲ್ಲಿ ಬದಲಾದ ಸಾಮಾಜಿಕ ಪ್ರಜ್ಞೆಯನ್ನು ಅವಲಂಬಿಸಿರುತ್ತದೆ ಎಂದೂ ಹೇಳಿದ್ದಾರೆ. ಇದನ್ನೇ ಪೌಂಡ್‌ರವರು ಸಾಮಾಜಿಕ ಅಭಯಂತ್ರಿಕೆ (Social Engineering) ಎಂದು ಕರೆದಿದ್ದಾರೆ.

ಒಟ್ಟಿನಲ್ಲಿ ಹೇಳುವುದಾದರೆ, ಸಾಮಾಜಿಕ ಅವಶ್ಯಕತೆಯ ಆಧಾರದ ಮೇಲೆ ಯಾವ ಕಾನೂನುಗಳು ರಚಿತವಾಗಿ ಕಾರ್ಯೋನ್ಮುಖವಾಗುವುದೋ ಅದೇ ಸರಿಯಾದ ಕಾನೂನು ಎಂಬ ಈ ಅಧ್ಯಯನ ಮಾರ್ಗ, ಕಾನೂನುಗಳನ್ನು ಸಾಮಾಜಿಕ ಕಾರಣಕ್ಕಾಗಿ ಪುನರ್ ರಚಿಸುವ ಬಗ್ಗೆ ಹೇಳಿಕೆ ನೀಡಿದೆ ಎಂದರೆ ತಪ್ಪಾಗಲಾರದು.

## 5.3 ಕಾನೂನನ್ನು ಅರ್ಥಮಾಡಿಕೊಳ್ಳುವಲ್ಲಿ ಈ ಅಧ್ಯಯನ ಮಾರ್ಗಗಳ ಪ್ರಾಮುಖ್ಯತೆ

ಯಾವುದೇ ಅಧ್ಯಯನವು ಸಂಪೂರ್ಣವಾಗಿ ಅರ್ಥವಾಗದ ಕಾರಣ ಅದರಲ್ಲೂ ಸಮಾಜವಿಜ್ಞಾನ ತತ್ವಶಾಸ್ತ್ರದಿಂದ ಹೊರಬಿದ್ದ ಕಾರಣ, ಈ ವಿಷಯ ಅಧ್ಯಯನ ಮಾರ್ಗಗಳ ಪ್ರಾಮುಖ್ಯತೆಯು ಒಂದು ಅಧ್ಯಯನ ವಿಷಯದ ಬೆಳವಣಿಗೆಯನ್ನು ಗ್ರಹಿಸಲು ಹಾಗೂ ಅದರ ಮೇಲಿನ ಪ್ರಭಾವಗಳನ್ನು ಅರ್ಥೈಸಿಕೊಳ್ಳಲು ಸಹಾಯಕಾರಿಯಾಗುತ್ತದೆ. ಚಾರಿತ್ರಿಕ ಮಾರ್ಗ, ಈ ವಿಷಯದ ಮೇಲಿನ ಪ್ರಭಾವಗಳನ್ನು ಗ್ರಹಿಸಲು ಸಾಧ್ಯಮಾಡಿಕೊಟ್ಟರೆ, ವಿಶ್ಲೇಷಣಾ ಮಾರ್ಗ, ಅದರ ಆಂತರಿಕ ಅಧ್ಯಯನಾಂಶಗಳನ್ನು ಅರ್ಥೈಸಿಕೊಡಲು ಸಹಾಯಕಾರಿಯಾಗಿದೆ. ಹಾಗೂ ಇದು ಈ ಅಧ್ಯಯನಕ್ಕೆ ಪೂರಕವಾದ ಅಂಶಗಳನ್ನು ಗುರುತಿಸಿ, ಅವುಗಳು ಎಷ್ಟರಮಟ್ಟಿಗೆ ಈ ಅಧ್ಯಯನದ ರೂಪು ರೇಷೆಗಳನ್ನು ನಿರೂಪಿಸಿದೆ ಎಂದು ತಿಳಿಸಿಕೊಡುತ್ತದೆ. ಹೀಗೆ ಒಂದು ಮಾರ್ಗ ಒಂದೊಂದು ರೀತಿಯಲ್ಲಿ ಈ ವಿಷಯದ ಪರಿಪೂರ್ಣ ಗ್ರಹಿಕೆಗೆ ಬೆಂಬಲಿಸಿ, ಹೆಚ್ಚಿನ ವಿಷಯವಂತಿಕೆಗೆ ಸಹಾಯಕಾರಿಯಾಗಿದೆ ಎಂಬುದು ಇಲ್ಲಿ ಪ್ರಮುಖವಾಗಿ ತಿಳಿದುಕೊಳ್ಳಬೇಕಿದೆ.

## 5.4 ಸಮಾರೋಪ

ಕಾನೂನು ಯಾವುದೇ ನಾಗರೀಕ ಸಮಾಜದ ಬೆನ್ನೆಲುಬು. ಎಲ್ಲಿ ರಚನಾತ್ಮಕತೆ ಶ್ರೇಣಿಯುತ ವ್ಯವಸ್ಥೆ ಇದೆ. ಅಲ್ಲಿ ಸಮಾಜ ಸಂಘಟಿಸಲ್ಪಟ್ಟು ಅಲ್ಲಿ ಕಾನೂನಿನ ಬಳಕೆ ಸಾಧ್ಯವಾಗಿರುತ್ತದೆ. ಹಾಗಾಗಿ ಕಾನೂನನ್ನು ಗ್ರಹಿಸುವ ಮೂಲಕ ಆ ಸಮಾಜದಲ್ಲಿನ ಶಕ್ತಿ ಹಾಗೂ ವೈಶಿಷ್ಟಗಳನ್ನು ಗ್ರಹಿಸಿ ಸಮಾಜದ ಸಂಘಟನಾತ್ಮಕ ಶಕ್ತಿಯನ್ನು ಅಳತೆ ಮಾಡಲು ಸಾಧ್ಯವಾಗುತ್ತದೆ. ಹೀಗಾಗಿ ಯಾವುದೇ

ಅಧ್ಯಯನ ಮಾರ್ಗವಾಗಲೀ ಅದು ಒಂದು ವಿಷಯವನ್ನು ವಿವಿಧ ರೀತಿಯಲ್ಲಿ ಗ್ರಹಿಸಲು ಸಹಾಯ ಮಾಡಿದಂತೆಯೇ ಆ ವಿಷಯ ವಸ್ತುವನ್ನು ಆಳವಾಗಿ ಗ್ರಹಿಸಲು ಅದರ ಮೇಲೆ ಹೆಚ್ಚಿನ ಬೆಳಕನ್ನುಚೆಲ್ಲಲು ಸಹಾಯಕಾರಿಯಾಗಿದೆ ಎಂದು ಹೇಳಬಹುದಾಗಿದೆ.

## ನಿಮ್ಮ ಪ್ರಗತಿ ಪರಿಶೀಲನೆ - 1

**ಸೂಚನೆ:** 1. ಈ ಕೆಳಗೆ ಬಿಟ್ಟಿರುವ ಜಾಗವನ್ನು ನಿಮ್ಮ ಉತ್ತರಕ್ಕೆ ಉಪಯೋಗಿಸಿಕೊಳ್ಳಿ.

2. ಈ ಘಟಕದ ಕೊನೆಯಲ್ಲಿ ನೀಡಿರುವ ಉತ್ತರದೊಂದಿಗೆ ನಿಮ್ಮ ಪ್ರಗತಿಯನ್ನು ಪರಿಶೀಲಿಸಿಕೊಳ್ಳಿ.

**1.ಕಾನೂನಿನ ಅಧ್ಯಯನದ ಪ್ರಾಮುಖ್ಯತೆಯನ್ನು ಚರ್ಚಿಸಿ.**

..............................................................................................................................
..............................................................................................................................
..............................................................................................................................
..............................................................................................................................
..............................................................................................................................
..............................................................................................................................
..............................................................................................................................

**2. ವಿಶ್ಲೇಷಣಾ ಅಧ್ಯಯನ ವಿಧಾನದ ವ್ಯಾಪ್ತಿಯನ್ನು ವಿವರಿಸಿ.**

..............................................................................................................................
..............................................................................................................................
..............................................................................................................................
..............................................................................................................................
..............................................................................................................................
..............................................................................................................................
..............................................................................................................................

## 5.5 ಒಟ್ಟಾರೆ ಅಭಿಪ್ರಾಯ

ಈ ಮೇಲಿನ ಅಧ್ಯಾಯದಲ್ಲಿ ಈ ಕೆಳಗಿನ ವಿಷಯಗಳನ್ನು ನೀವು ಗ್ರಹಿಸಿದ್ದೀರಿ.

1. ಕಾನೂನಿನ ಹುಟ್ಟು

2. ಅದರ ಅಧ್ಯಯನಕ್ಕಿರುವ ವಿವಿಧ ಅಧ್ಯಯನ ಮಾರ್ಗಗಳು

3. ಈ ಅಧ್ಯಯನ ಮಾರ್ಗಗಳ ಪ್ರಾಮುಖ್ಯತೆ ಹಾಗೂ ಅವುಗಳು ಹೇಗೆ ಜ್ಞಾನವೃದ್ಧಿಯಲ್ಲಿ ಸಹಾಯಕಾರಿಯಾಗಿದೆ ಎಂಬುದು ಆಗಿದೆ.

ಒಟ್ಟಿನಲ್ಲಿ ಈ ಅಧ್ಯಯನವು ನಿಮಗೆ ಕಾನೂನಿನ ಬಗ್ಗೆ ಹೆಚ್ಚಿನ ಜ್ಞಾನ ನೀಡುವಲ್ಲಿ ಉಪಯುಕ್ತವಾಗಿದೆ ಎಂಬುದು.

## 5.6 ಕಠಿಣ ಪದಗಳು

ಚಾರಿತ್ರಿಕ - ಐತಿಹಾಸಿಕ

ದ್ವಂದ್ವ - ಭಿನ್ನವಾದ

ಹುಟ್ಟು - ಉಗಮ

## 5.7 ಕೆಲವು ಉಪಯುಕ್ತ ಗ್ರಂಥಗಳು


W. freedman - Law is a changing Socity London, Steven's & sons, 1959

Morris Ginsberg - law and Opinion in England in the 20th Century,Berkely University of California Press 1959

John Horton - Political obligation London, McMillan, 1992

H.W.Friedman - Legal Theory, London, Stevens & Sons, 1967


## 5.8 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು

<u>ನಿಮ್ಮ ಪ್ರಗತಿ ಪರಿಶೀಲನೆ</u> **- 1**

1. ನೋಡಿ ವಿಭಾಗ 5.2 & 5.3
2. ನೋಡಿ ವಿಭಾಗ 5.2

# ಘಟಕ 6 ಸಮಾನತೆಯ ಇತ್ತೀಚಿನ ಸಿದ್ಧಾಂತಗಳು, ನ್ಯಾಯ ಹಾಗೂ ರಾಲ್ಸ್‌ರವರ ನ್ಯಾಯ ಸಿದ್ಧಾಂತ

ರಚನೆ


6.0 ಉದ್ದೇಶಗಳು

6.1 ಪ್ರಸ್ತಾವನೆ

6.2 ಸಮಾನತೆಯ ಚಿಂತನೆ

6.3 ಸಮಾನತೆಯ ವಿವಿಧ ಮುಖಗಳು

6.4 ಸಮಾನತೆಯ ಇತಿಮಿತಿ

6.5 ನ್ಯಾಯದ ಪರಿಕಲ್ಪನೆ

6.6 ನ್ಯಾಯದ ಚಿಂತನೆ

6.7 ನ್ಯಾಯದ ವಿವಿಧ ಮುಖಗಳು

6.8 ನ್ಯಾಯದ ಚರ್ಚೆ

6.9 ರಾಲ್ಸ್‌ರವರ ನ್ಯಾಯ ಸಿದ್ಧಾಂತ

6.10 ಸಮಾರೋಪ

6.11 ಒಟ್ಟಾರೆ ಅಭಿಪ್ರಾಯ

6.12 ಕಠಿಣ ಪದಗಳು

6.13 ಕೆಲವು ಉಪಯುಕ್ತ ಗ್ರಂಥಗಳು

6.14 ನಿಮ್ಮ ಪ್ರಗತಿಯನ್ನು ಪರಿಶೀಲಿಸಿಕೊಳ್ಳಿ

## 6.0 ಉದ್ದೇಶಗಳು

ಪ್ರಿಯ ವಿದ್ಯಾರ್ಥಿಗಳೇ, ಈ ಅಧ್ಯಾಯವನ್ನು ಈ ಕೆಳಗಿನ ಮೂರು ಉದ್ದೇಶಗಳನ್ನು ಇಟ್ಟುಕೊಂಡು ರಚಿಸಲಾಗಿದೆ.

* ನಿಮಗೆ ಸಮಾನತೆಯ ಸಿದ್ಧಾಂತವನ್ನು ಅರ್ಥೈಸಲು
* ರಾಲ್ಸರವರ ನ್ಯಾಯ ಸಿದ್ಧಾಂತದ ಬಗ್ಗೆ ತಮಗೆ ತಿಳುವಳಿಕೆ ನೀಡಲು ಹಾಗೂ
* ಸಮಾನತೆ ಹಾಗೂ ನ್ಯಾಯ ಸಿದ್ಧಾಂತದ ನಡುವಣ ಆಂತರಿಕ ಸಂಬಂಧಗಳನ್ನು ಕುರಿತು ತಿಳುವಳಿಕೆ ನೀಡುವುದೇ ಆಗಿದೆ.

## 6.1 ಪ್ರಸ್ತಾವನೆ

ಇತ್ತೀಚಿನ ದಿನಗಳಲ್ಲಿ ಸಮಾನತೆಯು ಸ್ವಾತಂತ್ರದಂತೆಯೇ ಒಂದು ಪ್ರಮುಖ ಚಿಂತನೆಯಾಗಿದೆ. 1789ರಲ್ಲಿ ಫ್ರೆಂಚ್ ಮಹಾ ಕ್ರಾಂತಿಯ ಸ್ವಾತಂತ್ರ, ಸಮಾನತೆ, ಹಾಗೂ ಭ್ರಾತೃತ್ವಕ್ಕಾಗಿ ಹೋರಾಡಿದ್ದನ್ನು ನಾವಿಲ್ಲಿ ಮರೆಯುವಂತಿಲ್ಲಾ. ಇವು ಇಂದಿಗೂ ಸಾಮಾಜಿಕ ನ್ಯಾಯದ ಮುಖ್ಯ ಕಲ್ಪನೆಗಳೇ ಆಗಿವೆ. ಈ ಅರ್ಥದಲ್ಲಿ ಸ್ವಾತಂತ್ರ ಹಾಗೂ ಸಮಾನತೆ ಒಂದಕ್ಕೊಂದು ಪೂರಕಾಂಶ ವಾದಗಳಾಗಿವೆ. ಬೇರೆ ಸಂದರ್ಭದಲ್ಲಿ ಇವು ಒಂದನ್ನೊಂದು ವಿರೋಧಿಸುವ ಚಿಂತನೆಯಾದರೂ, ಇವೆರಡರ ನಡುವಿನ ಆಂತರ್ಯ ಹಾಗೂ ಆಂತರಿಕ ಸಂಬಂಧ ತಿಳುಯುವುದು ಅತ್ಯಗತ್ಯ. ಹಾಗಾಗಿ ಈ ಅಧ್ಯಾಯ ರಚಿತವಾಗಿದೆ.

## 6.2 ಸಮಾನತೆಯ ಚಿಂತನೆ

ಬಹಳ ಕಾಲದ ಹಿಂದೆಯೇ, ಸಮಾನತೆ, ಅಸಮಾನತೆ ಎಂಬ ಚಿಂತನೆಗಳು ಮೂಡಿ ಬಂದಿದ್ದು, ಅರಿಸ್ಟಾಟಲ್‌ರವರು ಅಸಮಾನತೆಯೇ ಒಂದು ರಾಜ್ಯದಲ್ಲಿ ರಾಜ್ಯವಿರೋಧಿ ಚಟುವಟಿಕೆಗೆ ಕಾರಣವೆಂದು ಗುರುತಿಸಲಾಗಿದ್ದು, ಇವರು ನ್ಯಾಯವೆಂದರೆ ಸಮಾನರನ್ನು ಸಮಾನವಾಗಿಯೂ, ಅಸಮಾನರನ್ನು ಅಸಮಾನವಾಗಿಯೇ ನಡೆಸಿಕೊಳ್ಳುವುದು ಎಂದು ವಿವರಣೆ ನೀಡಿದ್ದಾರೆ. ಈ ಹೇಳಿಕೆಯು ಆ ಸಮಾಜದಲ್ಲಿನ ಅಸಮಾನತೆಯನ್ನು ಎತ್ತಿ ಹಿಡಿಯುವ ಹೇಳಿಕೆಯಾಗಿದ್ದು, ಈ ಹೇಳಿಕೆ ಆಧುನಿಕ 'ಸಮಾನತೆಯ' ಪರಿಕಲ್ಪನೆಗಿಂತಾ ವಿಭಿನ್ನವಾಗಿದೆ. ಇಂದಿನ ಕಲ್ಪನೆ ಅಸಮಾನತೆಯನ್ನು ತೊಡೆದುಹಾಕುವ ಹಾದಿಯಲ್ಲಿದೆ ಎಂದೂ ಇಲ್ಲಿ ವಾದಿಸಲಾಗಿದೆ. ಈ ಹಂತದಲ್ಲಿ, ಆಧುನಿಕ ಸಮಾನತೆಯ ಪರಿಕಲ್ಪನೆಯು ಹಕ್ಕುಗಳ ಚರ್ಚೆಯಿಂದ ಬೆಳೆದು ಬಂದದ್ದು ಎಂಬುದನ್ನು ತಿಳಿಸುತ್ತಾ, ಸಮಾನತೆಯು ಇಲ್ಲಿ ಅಸಮಾನತೆಯ ಸಮಸ್ಯೆಯನ್ನು ಬಗೆಹರಿಸಲು ಇರುವ ದಾರಿ ಎಂಬಂತೆ ಅದನ್ನು ಅರ್ಥೈಸಲಾಗಿದೆ. ಇದಕ್ಕೆ ಕಾರಣ, ಮಾನವನ ಹುಟ್ಟು, ವೈಚಾರಿಕತೆ, ಭಾವನೆ, ಭೌತಿಕ ಲಕ್ಷಣ ಎಲ್ಲವೂ ಒಂದೇ ತೆರನಾಗಿರುವಾಗ, ಎಲ್ಲರಿಗೂ ಸಮಾನ ಹಕ್ಕಿದೆ ಎಂಬುದು ಈ ಚರ್ಚೆಯ ಕೇಂದ್ರಬಿಂದುವಾಗಿದೆ. ಆದರೆ, ಎಲ್ಲ ಮಾನವರೂ ಸಮಾನರು ಎಂದು ಹೇಳುವಾಗ ಈ ಭೌತಿಕ ಲಕ್ಷಣಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ, ಕಾರಣ ಭೌತಿಕ ಲಕ್ಷಣಗಳು ವಿವಿಧ ತೆರನಾಗಿರುತ್ತವೆ. ಹಾಗಾಗಿ ಈ ಚರ್ಚೆ ಸಮಾನತೆಯ ಹಿನ್ನೆಲೆ ಹೊಂದಿದ್ದರೂ ಮೂಲತಃ ಅದು ಸಮಾನ ಹಕ್ಕಿನ ಮೇಲೆ ಆಧಾರಿತವಾಗಿದೆ ಎಂಬುದು.

ಹೀಗೆ ಸಮಾನತೆಯ ಚರ್ಚೆ, ಸ್ವಾತಂತ್ರ ಹಾಗೂ ಹಕ್ಕುಗಳನ್ನು ನಿಷ್ಕ್ರಿಯಗೊಳಿಸಲು ಬಂದಿಲ್ಲಾ, ಆದರೆ ಯಾವುದೇ ಸಮಾಜದಲ್ಲಿ ಕೆಲವರು ಮಾತ್ರ ಹೆಚ್ಚಿನ ಅಧಿಕಾರ, ಹಣ, ಹಾಗೂ ಅಂತಸ್ತು ಪಡೆಯಲು ಅವಕಾಶ ಮಾಡಿಕೊಡದಂತೆ ಮಾತ್ರ ಚರ್ಚಿಸಲಾಗಿದೆ ಎಂಬುದು. ಹೀಗೆ ಮಾಡುವುದರಿಂದ ಶೋಷಣೆ ತಪ್ಪಿ, ಸಮಾಜದಲ್ಲಿಎಲ್ಲಾ ವರ್ಗಗಳಿಗೂ ಸರಿಸಮಾನವಾದ ಅವಕಾಶ ದೊರಕುತ್ತದೆ ಎಂಬುದು ಈ ವಾದದ ತಿರುಳಾಗಿದೆ. ಹೀಗಾಗಿ, ಸ್ವಾತಂತ್ರ್ಯ ಹಾಗೂ ಸಮಾನತೆಯನ್ನು ಮಾನವ ಹಕ್ಕುಗಳಾಗಿ ಪರಿಗಣಿಸಲಾಗಿದೆ. ಸಂಪ್ರಾದಾಯಿಕ ಚಿಂತಕರು ಈ ಅಸಮಾನತೆಯನ್ನು ದೇವರೇ ನಿರ್ಧರಿಸಿದ ವ್ಯವಸ್ಥೆ ಎಂದು ಒಪ್ಪಿಕೊಂಡಿದ್ದರು.

ಹಾಗಾಗಿ ಕರ್ಮ ನಿರ್ಧರಿಸಿದಂತೆ ಮಾನವನು ಆದರ್ಶ ಜೀವನ ನಡೆಸಲು ಸಾಧ್ಯವೆಂದೂ ಅವರು ಭಾವಿಸಿದ್ದರು. ಇಂತಹಾ ಚಿಂತಕರ ಚಿಂತನೆಗಳು ಅಂದಿನ ಊಳಿಗಮಾನ್ಯ ಸಮಾಜಕ್ಕೆ ಹೊಸದೇನಲ್ಲ ಕಾರಣ ಅಲ್ಲಿ ವೈಜ್ಞಾನಿಕ ಚಿಂತನೆಗೆ ಹೆಚ್ಚಿನ ಪ್ರಾಮುಖ್ಯತೆ ಇರಲಿಲ್ಲ. ಅವರು ಸಮಾಜದ ರಚನೆಯನ್ನು ನೈಸರ್ಗಿಕ ರಚನೆಯೆಂದೇ ಭಾವಿಸಿದ್ದರು. ಹಾಗೂ ಮಾನವರು ಅದನ್ನು ಬದಲಾಯಿಸಲು ಸಾಧ್ಯವಿಲ್ಲವೆಂದೂ ತಿಳಿದಿದ್ದರು.

ಆದರೇ ವೈಜ್ಞಾನಿಕ ಯುಗ ಪ್ರಾರಂಭವಾದಂತೆ ಮಾನವರು ನೈಸರ್ಗಿಕ ನೀತಿ ನಿಯಮಗಳನ್ನು ತಮ್ಮ ವೈಚಾರಿಕತೆ ಹಾಗೂ ಪ್ರಾಯೋಗಿಕ ಜ್ಞಾನದಿಂದ ಅರ್ಥೈಸಿಕೊಳ್ಳಲು ಪ್ರಾರಂಭಿಸಿದರು. ಹೀಗೆ ಸಾಮಾಜಿಕ ರಚನೆಯನ್ನು ಅವರು ವೈಚಾರಿಕತೆಯಿಂದ ತಿಳಿದುಕೊಂಡಾಗ, ಬಹಳಷ್ಟು ಚಿಂತಕರು, ಸಾಮಾಜಿಕ ಅಸಮಾನತೆಯ ಮೂಲವನ್ನು ಗ್ರಹಿಸಿದರು. ಇಂತಹಾ ಗ್ರಹಿಕಗೆಳು ಅವರಿಗೆ ಈ ಅಸಮಾನತೆಯನ್ನು ನಿಗ್ರಹಿಸಬಹುದೆಂಬ ವಿಶ್ವಾಸವನ್ನು ನೀಡಿತು.

ಇತ್ತೀಚಿನ ದಿನಗಳಲ್ಲಿ ವೈಜ್ಞಾನಿಕ ಚಿಂತನೆ ಹಾಗೂ ತಾಂತ್ರಿಕತೆ ಬೆಳೆದಂತೆ ಹೆಚ್ಚು ಹೆಚ್ಚಾಗಿ ನೈಸರ್ಗಿಕ ಅಸಮಾನತೆ ಎಂದು ಗ್ರಹಿಸಿದ್ದ ಹಲವಾರು ರೀತಿಯ ಅಸಮಾನತೆಗಳು ಇಂದು ಪೂರ್ಣವಾಗಿ ತೊಡೆದು ಹಾಕಲ್ಪಡುತ್ತಿದೆ. ಮಾನವ ಸಮಾಜದಲ್ಲಿ ಭೌತಿಕ - ಬೌದ್ಧಿಕ ಅಸಮಾನತೆಗಳು ದೈವೀಕವೂ ಅಲ್ಲ ಸ್ವಾಭಾವಿಕವೂ ಅಲ್ಲಾ ಎಂದರಿತ ಈ ಚಿಂತಕರು. ಈ ಅಸಮಾನತೆಗಳನ್ನು ವಿದ್ಯಾಭ್ಯಾಸ, ತರಬೇತಿ, ಆರೋಗ್ಯ, ಶಿಸ್ತಿನ ಮೂಲಕ ಸಹಾ ನಿಗ್ರಹಿಸಬಹುದೆಂಬುದನ್ನು ಪ್ರತಿಪಾದಿಸಿ ತಿಳಿಸಿದ್ದಾರೆ. ಅಸಮಾನತೆ ಈ ರೀತಿಯಾಗಿ ಅನ್ಯಾಯವೆಂಬ ಕಟ್ಟಲೆಯಿಂದ ಹೊರಬರಲೂ ಇದು ಸಾಧ್ಯಮಾಡಿಕೊಟ್ಟಿದೆ ಏದೂ ತಿಳಿಸಬಹುದಾಗಿದೆ. ಸಮಾನತೆ ಬೇಕೆಂದರೆ ಅಸಮಾನತೆಯು ಕಡಿಮೆಗೊಳ್ಳಬೇಕೆಂದೂ ಹೇಳಬೇಕಿಲ್ಲಾ. ಹೀಗಾಗಿ ಅಸಮಾನತೆಯ ಚರ್ಚೆ ಅನ್ಯಾಯವೆಂಬುದಕ್ಕಿಂತಾ ಇದು ವೈಚಾರಿಕವಾಗಿರುವುದು ಎಂಬ ಭಾವನೆ ಬಂದದ್ದೇ ಆದರೆ ಈ ಕಾಲದ ಎಷ್ಟೋ ಅಸಮಾನತೆಗಳನ್ನು ನಾವು ಏಕಮುಖವಾಗಿ ಒಪ್ಪಬಹುದಾಗಿದೆ.

ಅದರಂತೆ, ಮಾರ್ಕ್ಸ್ ಹಾಗೂ ಸಮಾಜವಾದಿ ಚಿಂತನೆ ಬೆಳೆದಂತೆ, ಈ ಅಸಮಾನತೆಯನ್ನು ಅನ್ಯಾಯ ಹಾಗೂ ಶೋಷಿತವೆಂದು ಪರಿಗಣಿಸಲಾಗಿ, ಅವುಗಳನ್ನು ನಿವಾರಿಸುವೆಡೆಗೆ ಚಿಂತನೆ ಮಂಡಿಸಲಾಗಿದೆ. ಮಾರ್ಕ್ಸ್ ಹಾಗೂ ಎಂಗೆಲ್ಸ್, ವರ್ಗರಹಿತ ಸಮಾಜದಲ್ಲಿನ ಅಸಮಾನತೆಗಳನ್ನು ಪ್ರತಿಪಾದಿಸಿ, ಮಾನವನ ಸಂತಸಕ್ಕೆ ಆ ಚಿಂತನೆಗಳು ಯಾವ ರೀತಿಯಲ್ಲಿ ಅಡ್ಡಲಾಗಿವೆ ಎಂಬುದನ್ನು ಚರ್ಚಿಸಿದ್ದಾರೆ. ಹೀಗೆ ಆ ಸಮಾನತೆ, ಸ್ವಾತಂತ್ರ್ಯ ಹಾಗೂ ಭ್ರಾತೃತ್ವದ ಚರ್ಚೆಗಳು, ಸಮಾನತೆಯ ಚಿಂತನೆಗೆ ಪೂರಕವಾಗಿದೆ.

## 6.3 ಸಮಾನತೆಯ ವಿವಿಧ ಮುಖಗಳು

ಈ ಸಮಾನತೆಯನ್ನು ಸಮಾಜದ ಹಲವಾರು ಜೀವನ ರೀತಿನೀತಿಯಲ್ಲಿ ಕಾಣಬಹುದಾಗಿದೆ. ಹಾಗೆಯೇ ಇದರ ಸಾಮಾಜಿಕ, ರಾಜಕೀಯ ಹಾಗೂ ಕಾನೂನಾತ್ಮಕ ಮುಖಗಳ ಪರಿಚಯ ಕೂಡಾ ಮಾಡಿಕೊಳ್ಳಬಹುದಾಗಿದೆ.

**ಕಾನೂನು ಸಮಾನತೆ:**

ವ್ಯಕ್ತಿಯ ಹುಟ್ಟನ್ನು ಪರಿಗಣಿಸದಂತೆ, ಸಮಾನತೆಯ ಮೊದಲ ಚರ್ಚೆ ಪ್ರಾರಂಭವಾಗುವುದು ಕಾನೂನಾತ್ಮಕ ಸಮಾನತೆಯಿಂದ ಎಂದು ಇಲ್ಲಿ ಹೇಳಬಹುದಾಗಿದೆ. ರೂಸೋರವರು ತಮ್ಮ 1762ರಲ್ಲಿ ಬರೆದ ಸಾಮಾಜಿಕ ಒಪ್ಪಂದ ಎಂಬ ಪುಸ್ತಕದಲ್ಲಿ ನಾಗರೀಕ ಸಮಾಜದ ಮೊದಲನೇ ಕರ್ತವ್ಯವೆಂದರೆ ನಾಗರೀಕರೆಲ್ಲರಿಗೂ ಕಾನೂನಾತ್ಮಕ ಸಮಾನತೆ ಒದಗಿಸುವುದು ಎಂದಿದ್ದಾರೆ. ಇದು ಮಾನವ ಜನಾಂಗದಲ್ಲಿ ದೊಡ್ಡ ಹೋರಾಟದ ನಂತರವೇ ದೊರಕಿದೆ ಎಂದೂ ತಿಳಿಸಿದ್ದಾರೆ.

ಪ್ರಾಚೀನ ಸಮಾಜಗಳು ಇಂತಹ ಚಿಂತನೆಗಳನ್ನು ಎಂದೂ ಬರಗೊಡುತ್ತಿರಲಿಲ್ಲಾ ಎಂದೂ ಅವರು ತಿಳಿಸಿದ್ದಾರೆ. ಹಿಂದೂ ಸಂಸ್ಕೃತಿಯಲ್ಲಿ ಒಂದೇ ತೆರನಾದ ತಪ್ಪಿಗೆ ವಿವಿಧ ರೀತಿಯ ಶಿಕ್ಷೆ ಪ್ರತಿಪಾದಿಸಿರುವುದು ಇದಕ್ಕೆ ಉದಾಹರಣೆ ಎಂದಿದ್ದಾರೆ. ಹಾಗೆಯೇ ಇದೇ ತೆರನಾದ ಹಲವಾರು ರೀತಿಯ ವ್ಯತ್ಯಾಸಗಳು ಈ ಕಾಲದಲ್ಲಿ ಕಂಡು ಬಂದಿವೆ ಎಂದೂ ಇವರು ತಿಳಿಸಿದ್ದಾರೆ. ಅರಿಸ್ಟಾಟಲ್, ಗ್ರೀಕನಲ್ಲಿ ವಿವಿಧ ಜನರಿಗೆ ವಿವಿಧ ರೀತಿಯ ಶಿಕ್ಷೆ ಇತ್ತು ಎಂದು ಪ್ರತಿಪಾದಿಸಿದರು ಈ ರೀತಿ ಹೇಳುವಲ್ಲಿ ಇವರು ಗುಲಾಮರು ಶಿಕ್ಷೆಗೆ ಹೆಚ್ಚಿನ ಸ್ಪಂದನೆ ಹೊಂದಿರುವುದಿಲ್ಲವೆಂಬ ದೃಷ್ಟಿಯಲ್ಲಿ ಇದನ್ನು ತಿಳಿಸಿದ್ದಾರೆ. ಆದರೆ, ಇತ್ತೀಚಿಗೆ ಚರ್ಚಿಸುತ್ತಿರುವ ನ್ಯಾಯಾಂಗೀಯ/ ಕಾನೂನಾತ್ಮಕ ಸಮಾನತೆಯು ಸಂಪೂರ್ಣ ನ್ಯಾಯವನ್ನು ಒದಗಿಸಿಕೊಡುವುದಿಲ್ಲವೆಂಬ ಚರ್ಚೆಯನ್ನು ಇವರು ತಿಳಿಸಿದ್ದಾರೆ. ಭಾರತದಂತಹ ರಾಷ್ಟ್ರದಲ್ಲಿ, ಹಣವುಳ್ಳವರೂ ಹಾಗೂ ನಿರ್ಗತಿಕರ ನಡುವಿನ ವ್ಯತ್ಯಾಸಗಳು, ಇಂತಹಾ ಸಮಾನತೆಯಿಂದ ಸರಿ ಹೊಂದುವ ಸಾಧ್ಯತೆಗಳಿಲ್ಲವೆಂದೇ ಇಲ್ಲಿ ಉದಾರಿಸಬಹುದಾಗಿದೆ. ಇಂತಹಾ ಸಂದರ್ಭಗಳಲ್ಲಿ ಸಂಪೂರ್ಣ ನ್ಯಾಯ ದೊರಕಬೇಕಾದರೆ, ನ್ಯಾಯಾಂಗದ ಖರ್ಚು ಕಡಿಮೆಗೊಳ್ಳಬೇಕು, ಎಲ್ಲರೂ ನ್ಯಾಯಾಂಗಕ್ಕೆ ಮೊರೆ ಹೋಗಲು ಸಾಧ್ಯವಾಗಬೇಕು ಎಂಬ ತೆರನಾದ ಚರ್ಚೆಗಳು ಇತ್ತೀಚಿಗೆ ಬೆಳೆಯುತ್ತಿವೆ. ಹೆಚ್ಚಿನ ಜನಸಂಖ್ಯೆ ಇರುವ ರಾಷ್ಟ್ರಗಳಲ್ಲಿ ಇಂತಹಾ ಸಮಸ್ಯೆಗಳಿಗೆ ಸುಲಭದಲ್ಲಿ ಪರಿಹಾರ ದೊರಕುವುದಿಲ್ಲ ಎಂಬುದನ್ನು ಈ ಚರ್ಚೆಯಲ್ಲಿ ತಿಳಿಸಿದ್ದಾರೆ. ಇಂತಹಾ ವ್ಯವಸ್ಥೆಗಳಲ್ಲಿ ಅನೇಕ ರೀತಿಯ ಅನ್ಯಾಯವಾಗುವುದು ತಪ್ಪು ಎಂದು ಹೇಳುವುದರಲ್ಲಿ ಯಾವುದೇ ಚರ್ಚೆಗೆ ಆಸ್ಪದವಿಲ್ಲ.

**ರಾಜಕೀಯ ಸಮಾನತೆ:**

ಇದು ಎಲ್ಲರಿಗೂ ಸಮಾನ ರಾಜಕೀಯ ಹಕ್ಕನ್ನು ನೀಡುವ ಚರ್ಚೆ ಮಾಡುತ್ತದೆ. ನಿರ್ಧಾರ ತೆಗೆದುಕೊಳ್ಳುವ ಸಾಂಸ್ಥಿಕ ವ್ಯವಸ್ಥೆಯಲ್ಲಿ ಎಲ್ಲರಿಗೂ ಸಮಾನ ಅವಕಾಶವನ್ನು ಇದು ಪ್ರತಿಪಾದಿಸುತ್ತದೆ. ಇದು ರಾಜಕೀಯ ಸ್ಥಾನಗಳನ್ನು ಎಲ್ಲರಿಗೂ ಹೊಂದಲು ಸಮಾನ ಅವಕಾಶ ಕಲ್ಪಿಸಿಕೊಡುವ ಚರ್ಚೆಯನ್ನು ಪ್ರತಿಪಾದಿಸುತ್ತದೆ. ಯಾರೂ ಮೇಲು ಕೀಳೆಂಬ ಭಾವನೆಯನ್ನು ಇದು ಒಪ್ಪುವುದಿಲ್ಲಾ. ಇದು ಮಾನವನು ಮೂಲತಃ ಸಮಾನನು ಎಂಬ ಚರ್ಚೆಯಿಂದತಿಳಿದು ಬಂದದ್ದಾಗಿದೆ. ಇಂತಹಾ ಚಿಂತನೆಯಿಂದ ಸಾಮಾನ್ಯ ಒಳಿತಿಗೆ ಹಾಗೂ ಸಾರ್ವಜನಿಕ ನೀತಿ ರೂಪಣೆಯಲ್ಲಿ ಸರ್ವರ ಒಳಿತನ್ನು ಸಾಧಿಸಲು ಸಾಧ್ಯವಾಗುತ್ತದೆ ಎಂಬುದು ಈ ಚಿಂತನೆಯ ಮೂಲಾಂಶವಾಗಿದೆ. ಡಿ. ರಾಫೆಲ್ ರವರ ಪ್ರಕಾರ ಈ ಮೊದಲು ಕಾನೂನಾತ್ಮಕ ಸಮಾನತೆ ಹಾಗೂ ರಾಜಕೀಯ ಸಮಾನತೆಯಲ್ಲಿ ಯಾವುದೇ ವ್ಯತ್ಯಾಸವಿರಲಿಲ್ಲಾ ಎಂಬುದು ಇಲ್ಲಿ ಮುಖ್ಯ. ಫ್ರೆಂಚ್ ಹೋರಾಟದಲ್ಲಿ 'ಸಮಾನತೆ'ಗೆ ನಡೆದ ಹೋರಾಟ ಎಲ್ಲರನ್ನು ಸಮಾನರೆಂದು ಕಾಣಬೇಕೆಂದು ಚರ್ಚೆಗೆ ಪೂರಕವಾದದ್ದು. ಕಾಲ ಬದಲಾದಂತೆ ಇಂತಹಾ ಚರ್ಚೆಗಳು ಪ್ರಜಾಪ್ರಭುತ್ವದ ಚೌಕಟ್ಟಿಗೆ ಸಿಲುಕಿ, ಇದು ರಾಜಕೀಯ ಸಮಾನತೆ ಎಂಬ ಹೆಸರಿನಿಂದ ಪ್ರತಿಪಾದಿಸಲ್ಪಟ್ಟಿತು. ಹೀಗೆ, ರಾಜಕೀಯ ಸಮಾನತೆ ಒಂದು ಉತ್ತಮ ಬದಲಾವಣೆಯೆಡೆಗೆ ತೆರಳಿದ ಚರ್ಚೆಯಾಗಿ, ಪಾಶ್ಚಿಮಾತ್ಯ ರಾಷ್ಟ್ರದಲ್ಲಿ ಒಂದು ಪ್ರಜಾಪ್ರಭುತ್ವದ ಬೆಳವಣಿಗೆಗೆ ನಾಂದಿಯಾಯಿತು. ಈ ರೀತಿ ರಾಜಕೀಯ ಸಮಾನತೆ ಸಾಧಿಸಿದ ನಂತರದಲ್ಲಿ ಸಾಮಾಜಿಕ-ಆರ್ಥಿಕ ಸಮಾನತೆಯು ಪ್ರಶ್ನೆಗಳು ಹುಟ್ಟಿಕೊಂಡವು. ಡೀ. ಟಾಕ್ವಿಲಿಯ ಇವರು ತಿಳಿಸಿದಂತೆ, ರಾಜಕೀಯ ಸಮಾನತೆ ಆರ್ಥಿಕ ಸಮಾನತೆಗೆ ದಾರಿ ಮಾಡಿಕೊಡುತ್ತದೆ. ಹೀಗೆ ಇವರ ಚಿಂತನೆಯು ರಾಜಕೀಯ ಹಾಗೂ ಆರ್ಥಿಕ ಸಮಾನತೆಯೆಡೆಗೆ ಈ ಚರ್ಚೆಯನ್ನು ಒಯ್ಯುತ್ತದೆ.

**ಸಾಮಾಜಿಕ ಹಾಗೂ ಆರ್ಥಿಕ ಸಮಾನತೆ:**

ಹೆಸರೇ ಹೇಳುವಂತೆ ಎರಡೂ ರೀತಿಯ ಸಮಾನತೆಯ ಚರ್ಚೆ ಇಲ್ಲಿ ಕಂಡು ಬರುತ್ತದೆ. ಇವೆರಡೂ ಅತ್ಯಂತ ಹಾಗೂ ಪೂರಕವಾದ ಸಮಾನತೆಯ ಅವಶ್ಯಕತೆಗಳು. ಕಾನೂನಾತ್ಮಕ ಹಾಗೂ ರಾಜಕೀಯ ಸಮಾನತೆಗಳು ಒಂದಿಲ್ಲೊಂದು ರೀತಿಯಲ್ಲಿ ಈ ಸಮಾನತೆಗಳೊಂದಿಗೆ ಆಂತರಿಕ ಸಂಬಂಧ ಹೊಂದಿದೆ. ಮೊದಲೆರಡೂ ಉದಾರವಾದದ ಮೂಲದಿಂದ ಬೆಳೆದು ಬಂದದ್ದಾದರೇ, ಈ



VOP_FL_MA_Pol_Sci_C-8(1-7)_TF.20_F.No.55

55

ಎರಡೂ ಸಮಾನತೆಯ ಚರ್ಚೆ ಸಮಾಜವಾದದ ಚರ್ಚೆಯಿಂದ ಬೆಳೆದ ಚಿಂತನೆಯಾಗಿದೆ.

ರಾಜಕೀಯ ಹಾಗೂ ಕಾನೂನಾತ್ಮಕ ಸಮಾನತೆಗಳು, ಮಧ್ಯಮ ವರ್ಗದ, ವ್ಯಾಪಾರೀ ಜನರ, ರಾಜಕೀಯ ಅಧಿಕಾರದ ಒಲವಿನಿಂದ ಬೆಳೆದರೆ, ಈ ಸಮಾನತೆಗಳು, ಶ್ರಮಿಕ ವರ್ಗದ ನೋವನ್ನು ತಡೆಹಿಡಿಯಲು ಬೆಳೆದ ಚಿಂತನೆಯಾಗಿದೆ. ಹೀಗೆ, ಹಿಂದೆ ಚರ್ಚಿಸಿದ ಸಮಾನತೆಗಳು, ಊಳಿಗಮಾನ್ಯ ಪದ್ಧತಿಯ ನಿರ್ಮೂಲನೆಗೆ ಬೆಳಕಿಗೆ ಬಂದರೆ, ಈ ಸಮಾನತೆಗಳು, ಬಂಡವಾಳಶಾಹಿ ವ್ಯವಸ್ಥೆಯ ತಪ್ಪುಗಳನ್ನು ಸರಿಪಡಿಸಲು ಬೆಳಕಿಗೆ ಬಂದಿವೆ. ಮಾರ್ಕ್ಸ್‌ವಾದದಲ್ಲಿ ಇದು ಮುಖ್ಯ ಗುರಿಯಾಗಿದ್ದು, ಇದು, ಬಂಡವಾಳಶಾಹಿತ್ವದ ಬದಲಿಗೆ, ವರ್ಗರಹಿತ ಸಮಾಜದ ರಚನೆಗಾಗಿ ಕರೆ ನೀಡುತ್ತದೆ. ಇದು ಜನರ, ಸರ್ವೇಸಾಮಾನ್ಯರ ಬದುಕನ್ನು ಹಸನಗೊಳಿಸಲು ಅಸ್ತಿತ್ವಕ್ಕೆ ಬಂದಿದೆ ಎಂಬ ಚರ್ಚೆಗಳು ಇಲ್ಲಿ ಪ್ರಮುಖವಾಗಿವೆ.

ಈ ಕಾರಣಕ್ಕಾಗಿ ಈ ಹಕ್ಕಿಗಾಗಿ, ಮೂಲಭೂತ ಅವಶ್ಯಕತೆಗಳನ್ನು ತೃಪ್ತಿಗೊಳಿಸಲು, ರಾಜ್ಯದ ಮೂಲಕವೇ ಶಿಕ್ಷಣ, ಕೆಲಸ, ಸಾಮಾಜಿಕ ಸೇವೆಗಳಾದ ಟ್ರಾನ್ಸ್‌ಪೋರ್ಟ್, ನ್ಯಾಯಬೆಲೆ ಅಂಗಡಿ, ಸಮುದಾಯ ಭವನ, ಆಸ್ಪತ್ರೆ, ಸಾರ್ವಜನಿಕ ಪಾರ್ಕ್‌ಗಳು, ರಾಜ್ಯ ನಿರ್ದೇಸಿತ ಹಾಗೂ ನಿಯಂತ್ರಿತ ಕೈಗಾರಿಕೆ ಉದ್ಯಮಗಳು ಎಲ್ಲರಿಗೂ ಸರಿಯಾಗಿ ನಿರ್ಧರಿಸಿದ ವೇತನದ ಕೊಡುಗೆ, ಪೆನ್ಷನ್ ಕೊಡುಗೆ, ಈರೀತಿಯಲ್ಲಿ ರಾಜ್ಯದಿಂದಲೇ ದೊರಕುವ ಎಲ್ಲಾ ರೀತಿಯ ಸೌಲಭ್ಯಗಳನ್ನು ನೀಡುವ ವ್ಯವಸ್ಥೆ ಇಲ್ಲಿ ರಚಿತವಾಗುತ್ತದೆ.

ಈ ಎಲ್ಲಾ ಜವಾಬ್ದಾರಿಗಳನ್ನು ನಿಗ್ರಹಿಸಲು, ಹೆಚ್ಚಿನ ತೆರಿಗೆ, ಹಾಕುವುದರೊಂದಿಗೆ ಕಲ್ಯಾಣ ರಾಷ್ಟ್ರದ ಹೆಸರಿನಲ್ಲಿ, ನಾಗರೀಕರಿಗೆ ಕೊಡಲಾಗುವಷ್ಟು ಆದಾಯ ಆಧಾರಿತ ತೆರಿಗೆ ವಸೂಲಾತಿ ಪದ್ಧತಿ ಇಲ್ಲಿ ಅಳವಡಿಸಿಕೊಳ್ಳಲಾಗಿದೆ. ಹೀಗೆ ಈ ಚರ್ಚೆಯು ಸಮಾಜವಾದಿ ಚಿಂತನೆಯಲ್ಲಿನ ಪ್ರಮುಖ ಅಂಶಗಳಾಗಿ ಇಲ್ಲಿ ಕಂಡುಬರುತ್ತದೆ.

**ಸ್ವಾತಂತ್ರ್ಯ ಹಾಗೂ ಸಮಾನತೆ:**

ಆಧುನಿಕ ರಾಜಕೀಯ ಚಿಂತನೆಯಲ್ಲಿ ಇವೆರಡೂ ಪ್ರಮುಕವಾದ ಚಿಂತನೆಗಳಾಗಿವೆ. ಆದರೆ ಇವೆರಡರ ನಡುವಿನ ಸಂಬಂಧ ಸಂಪೂರ್ಣವಾಗಿ ಇನ್ನೂ ವಿವರಣೆ ಪಡೆದುಕೊಂಡಿಲ್ಲ. ಇವೆರಡರ ನಡುವಿನ ಸಂಬಂಧವನ್ನು ಹೇಗೆ ಒಟ್ಟಾಗಿ ಹಾಗೂ ವಿಭಿನ್ನವಾಗಿ ವಿವರಿಸಬಹುದೊ, ಅದೇ ರೀತಿಯಲ್ಲಿ ಇವೆರಡರ ನಡುವಿನ ವ್ಯತ್ಯಾಸಗಳನ್ನು ಹೋಲಿಕಾತ್ಮಕವಾಗಿಯೂ ವಿಭಿನ್ನವಾಗಿಯೂ ವಿವರಿಸಬಹುದಾಗಿದೆ. ಇವುಗಳು ಈ ಎರಡೂ ಚಿಂತನೆಗಳ ಯಾವ ವ್ಯವಸ್ಥೆ ಪದ್ಧತಿ, ಪರಿಸರದಲ್ಲಿ ಕಲ್ಪಿತಗೊಂಡಿದೆಯೋ ಅದರ ಆ ಮೇಲೆ ವಿವರಣೆಯ ಬಣ್ಣವನ್ನು ಪಡೆಯುತ್ತದೆ. ಹಾಗಾಗಿ ಈ ಚಿಂತನೆಯ ವಿವರಣೆ ಹಾಗೂ ವ್ಯಾಖ್ಯಾನದಲ್ಲಿ ಹಲವಾರು ವಿಭಿನ್ನತೆಗಳು ಎತ್ತಿ ಕಾಣುತ್ತವೆ. ಹೀಗಾಗಿ ಇವೆರಡಕ್ಕೆ ಯಾವುದು ಪ್ರಮುಖವೆಂಬ ಚರ್ಚೆ ಕೂಡಾ ಹಲವಾರು ಸಂದರ್ಭದಲ್ಲಿ ಬೆಳಕಿಗೆ ಬರುತ್ತದೆ.

ಲಾಸ್ಕಿಯವರ ಚರ್ಚೆಯಲ್ಲಿ, ಟಾಕ್ವಿಲಿ, ಹಾಗೂ ಎಕ್ಸನ್‌ರ ಚಿಂತನೆಗಳಲ್ಲಿ ಕಂಡಬಂದಂತಹ, ಸ್ವಾತಂತ್ರ್ಯ ಹಾಗೂ ಸಮಾನತೆಯ ನಡುವಿನ ವಿರೋಧಿ ಚಿಂತನೆಗಳು ಹೆಚ್ಚಾಗಿ ಕಂಡುಬರುತ್ತವೆ. ಇವರು ಸಮಾನತೆ-ಸ್ವಾತಂತ್ರ್ಯದ ಶತ್ರು ಎಂಬಂತೆ ಚಿತ್ರಿಸಿದ್ದಾರೆ ತಮ್ಮ ಬರಹಗಳಲ್ಲಿ. ಟಾಕ್ವಿಲಿಯವರ ಬರದಲ್ಲಿ ಕಂಡುಬಂದಂತೆ, ಸಮಾನತೆ ಸಾಧಿಸಿದ ಸಮಾಜದಲ್ಲಿ ಸ್ವಾತಂತ್ರ್ಯಕ್ಕಾಗಿ ಮಾಡಿದ ಎಲ್ಲ ಚರ್ಚೆಗಳು ನೀರಸವಾಗುತ್ತದೆ ಕಾರಣ ಇಲ್ಲಿ ಶ್ರೇಣಿ ಪದ್ಧತಿಯ ರಚನೆ ಇರುವುದಿಲ್ಲ. ಅಲ್ಲದೇ, ರಾಜ್ಯ ಎಲ್ಲಾ ಅಧಿಕಾರವನ್ನು ಹೊಂದಿರುವುದೂ ಇಲ್ಲಾ ಎಂದಿದ್ದಾರೆ. ಹಾಗೆಯೇ ಸಮಾನತೆ ಸಾಧಿಸಿದ ಸಮಾಜದಲ್ಲಿ ಸಾರ್ವಜನಿಕ ಅಭಿಪ್ರಾಯದ ಪ್ರಮುಖ ಪಾತ್ರ ಸದಾ ಬಹಳಷ್ಟು ಸಂಕುಚಿತವಾಗಿರುತ್ತದೆ ಎಂದೂ ಇವರು ತಿಳಿಸಿದ್ದಾರೆ. ಈ ಚರ್ಚೆಯಿಂದ ಹೊರಬರುವ ಚಿಂತನೆ ಎಂದರೆ, ಸ್ವಾತಂತ್ರ್ಯವೆಂಬುದು ವಿಭಿನ್ನವಾದರೂ-ವ್ಯಕ್ತಿಗತವಾದ ಅಭಿಪ್ರಾಯಗಳಿಗೆ ಎಡೆ ಮಾಡಿಕೊಟ್ಟರೆ, ಸಮಾನತೆಯೆಂಬುದು ಅಂತಹ ಅಭಿಪ್ರಾಯಗಳನ್ನು ಒಟ್ಟಾಗಿಸಿ ಏಕರೂಪದ ಅಭಿಪ್ರಾಯ ಕಲ್ಪಿಸುತ್ತದೆ ಎಂಬುದಾಗಿದೆ.

ಎಕೈನ್, ಟಾಕ್ವೆಲಿಯವರ ಈ ಮೇಲಿನ ಚರ್ಚೆಗಳಿಂದ ಪ್ರಭಾವಿತರಾಗಿ ತಮ್ಮ ಚರ್ಚೆಗಳನ್ನು ಸಹಾ ಇದೇ ನಿಟ್ಟಿನಲ್ಲಿ ಇಟ್ಟಿದ್ದಾರೆ. ಅದರಲ್ಲೂ 'ರಾಜಕೀಯ'ದಲ್ಲಿ ಇವೆರಡರ ನಡುವಣ'ವಿರೋಧಿ' ಚಿಂತನೆಗಳನ್ನು ಇವರು ಹೆಚ್ಚಾಗಿ ಚಿತ್ರಿಸಿದ್ದಾರೆ. ಬಹುಶಃ ಈ ವಿರೋಧಿ ನಿಲುವನ್ನು ತಡೆಹಿಡಿಯುವ ಕಾರಣದಿಂದಲೇ ವಿಕೇಂದ್ರೀಕರಣ ಚಿಂತನೆಯನ್ನು ಹಮ್ಮಿಕೊಳ್ಳಲಾಗಿದೆ ಎಂದೂ ಇಲ್ಲಿ ಅಭಿಪ್ರಾಯ ಪಡಲಾಗಿದೆ. ಹಾಗೂ ಇದೇ ಸಂದರ್ಭದಲ್ಲಿ ಸ್ವಯಂ ಸೇವಾ ಸಂಸ್ಥೆಗಳಿಗೇ ಹೆಚ್ಚಿನ ಪ್ರಾಧಾನ್ಯತೆ ದೊರಕಿಸಲಾಗಿದೆ. ಟಾಕ್ವಿಲಿಯು ಇಂತಹ ವಿರೋಧಿ ನಿಲುವುಗಳನ್ನು ತಪ್ಪಿಸಲು ಸ್ವಾತಂತ್ರ್ಯವಾದ ರಾಜಕೀಯ ಪಕ್ಷ, ಹಾಗೂ ಸ್ವತಂತ್ರ ಪತ್ರಿಕೋದ್ಯಮ ಇರಬೇಕೆಂದೂ ಪ್ರತಿಪಾದಿಸಿದ್ದಾರೆ.

ಇದೇ ತೆರನಾಗಿ ಸಾಮಾಜಿಕ ಹಾಗೂ ಆರ್ಥಿಕ ವಿಷಯಗಳಲ್ಲಿ ಸ್ವಾತಂತ್ರ್ಯವು ವ್ಯಕ್ತಿ ಜರ್ಮನಿಗೆ ಅನಿಯಂತ್ರಿತವಾದ ಹಣಸಂಗ್ರಹಣೆಗೆ ಅವಕಾಶ ಮಾಡಿಕೊಡುತ್ತದೆ. ಆದರೆ, ಸಮಾನತೆಯು ಅಂತಹ ಅವಕಾಶವನ್ನು ತಡೆಯುತ್ತದೆ ಎಂಬ ಚರ್ಚೆಯನ್ನು ಪ್ರತಿಬಿಂಬಿಸಿದ್ದಾರೆ ಮತ್ತೆ ಕೆಲವರು ಬಹುಶಃ ಈ ಮೇಲಿನ ಕಾರಣದಿಂದಾಗಿಯೇ, ಸಮಾನತೆಗೆ ಹೆಚ್ಚಿನ ಪ್ರಾಧಾನ್ಯತೆ ನೀಡಲು ಸಾಧ್ಯವಿಲ್ಲವೆಂದಿದ್ದಾರೆ.

ಹೀಗೆ ಸ್ವಾತಂತ್ರ್ಯ ಹಾಗೂ ಸಮಾನತೆಯು ಚರ್ಚೆಗಳೂ ಸಹಾ ವಿವಿಧ ಮುಖಗಳನ್ನು ಹೊಂದಿದ ಚರ್ಚೆಗಳಾಗಿ ಕಾಲಕಾಲಕ್ಕೆ ಹಲವಾರು ಬದಲಾವಣೆಗಳನ್ನು ಕಂಡುಕೊಂಡು ಬೆಳೆದಿರುವುದನ್ನು ಇಲ್ಲಿ ಕಾಣಬಹುದಾಗಿದೆ.

## 6.4 ಸಮಾನತೆಯ ಇತಿಮಿತಿ

ಸಮಾನತೆಯನ್ನು ಕೇವಲ ಕೆಲವೇ ಶೋಷಿತ ಅಥವ ಹಿಂದುಳಿದ ವರ್ಗಗಳನ್ನು ಉದ್ದರಿಸುವುದಕ್ಕಾಗಿ ರಚಿಸಿದ ಚಿಂತನೆ ಎಂಬಂತೆ ಪ್ರತಿಪಾದಿಸಿದ್ದಾರೆ, ಅಂತಹ ಚಿಂತನೆಗೆ ಇಲ್ಲಿ ಹೆಚ್ಚಿನ ಬೆಲೆ ಇಲ್ಲಾ ಎಂದು ಸ್ಪಷ್ಟಪಡಿಸುತ್ತಾ ಇಂತಹಾ ಚಿಂತನೆಗಳು ಹೆಚ್ಚಿನ ಹಾಗೂ ವಿಶಾಲ ಮನೋಭಾವನೆಯನ್ನು ವ್ಯಕ್ತಪಡಿಸಬೇಕೆಂದೂ ಇಲ್ಲಿ ತಿಳಿಸಲಾಗಿದೆ. ಅಮೇರಿಕೆಯಂತಹ ಪ್ರಬಲ ರಾಷ್ಟ್ರದಲ್ಲಿ ಇಂತಹಾ ಚಿಂತನೆಯು ಮೂಲಭೂತವಾಗಿ ಸಮಾಜದಲ್ಲಿ ಅಸಮಾನತೆಗೆ ಎಡೆಮಾಡಿದೆ ಎಂಬ ಚರ್ಚೆಗೆ ಅವಕಾಶ ಮಾಡಿಕೊಟ್ಟು ಚರ್ಚೆ ನಡೆದಿರುವುದನ್ನು ಇಲ್ಲಿ ಗಮನಿಸಬೇಕಿದೆ. ಇಲ್ಲಿ ಸಮಾನತೆಯನ್ನು ಅಸಮಾನತೆ/ಅಸಮಾನ ಅವಕಾಶ/ಅಸಮಾನ ವರ್ತನೆಗಳನ್ನು ತೊಡೆದು ಹಾಕಲು ಇರುವ ಸಾಧನವೆಂದಷ್ಟೇ ಪರಿಗಣಿಸಲಾಗಿದೆ.

ಈ ಚರ್ಚೆಯಲ್ಲಿ, ಅವಕಾಶಗಳು ಕಡಿಮೆ ಇರುವ ಜನರಿಗೆ ಹೆಚ್ಚಿನ ಅವಕಾಶ ಕಲ್ಪಿಸಬೇಕೆಂಬ ಚರ್ಚೆ ಮೂಡಿ ಬಂದು ಅಲ್ಲಿ ಅಸಮಾನ ವರ್ತನೆಗೆ -ಸಮಾನತೆ ಸಾಧಿಸುವ ಗುರಿ ಇರುವುದರಿಂದ ಇದನ್ನು ಸಹಿಸಬಹುದೆಂಬ ಪ್ರತಿಪಾದನೆ ಸಹಾ ಕೇಳಿ ಬರುತ್ತದೆ.

ಹೀಗೆ ಸಮಾನತೆಯು ಒಂದೆಡೆ ಅಸಮಾನ ಸಮಾಜದಲ್ಲಿನ ಆಗು ಹೋಗುಗಳನ್ನು ತಿದ್ದುವ ಘನಾತ್ಮಕ ವ್ಯವಸ್ಥೆ/ಚಿಂತನೆ ಎಂದು ಪರಿಗಣಿಸಿದರೂ ಅದರ ಋಣಾತ್ಮಕ ಚಿಂತನೆಯೂ ಸಹಾ ಸಮಾಜದಲ್ಲಿ ಅವಕಾಶಗಳಿಂದ ವಂಚಿತರಾದವರಿಗೆ ಸಮಾನತೆ ಸಾಧಿಸುವಲ್ಲಿ ಸಹಾಯಕಾರಿಯಾಗಿದೆ ಎಂಬ ಚರ್ಚೆ ಸಹಾ ಇಲ್ಲಿ ಇದೆ.

ಹೀಗೆ ಸಮಾನತೆಯು ಚರ್ಚೆ ಸಮಾನತೆಯು ಇತಿಮಿತಿಗಳನ್ನು ತಿಳಿಸುವ ಚರ್ಚೆ ಸಹಾ ಆಗಿದೆ.

## 6.5 ನ್ಯಾಯದ ಪರಿಕಲ್ಪನೆ

ನ್ಯಾಯವೆಂಬುದು ರಾಜಕೀಯ ಜೀವನದಲ್ಲಿ ಅತ್ಯುತ್ತಮ ಒಳಿತು ಎಂಬ ಕಲ್ಪನೆ ಇದೆ. ಇಂದು ಈ ನಿಟ್ಟಿನಲ್ಲಿ ಅನ್ಯಾಯವು

ರಾಜಕೀಯ ಚರ್ಚೆಗಳಲ್ಲಿ ಅತೀ ಹೆಚ್ಚಿನಾಂಶ ಇದೆ. ಯಾವಾಗಲೂ ನಮಗೆ ಅನ್ಯಾಯದ ಬಗ್ಗೆ ಚರ್ಚಿಸುವುದು, ನ್ಯಾಯದ ವ್ಯಾಖ್ಯೆ ನೀಡುವುದಕ್ಕಿಂತ ಸುಲಭವೆಂಬುದನ್ನು ಇಲ್ಲಿ ಮರೆಯುವಂತಿಲ್ಲಾ. ವಿವಿಧ ಆದರ್ಶದ ಚರ್ಚೆಗಳು ಹೀಗಾಗಿ ವಿವಿಧ ವ್ಯಾಖ್ಯೆಗಳನ್ನು ನ್ಯಾಯದ ಬಗ್ಗೆ ನೀಡಿವೆ. ಹೀಗಾಗಿ ನ್ಯಾಯವು ಒಂದು ಮೌಲ್ಯವಾಗಿ, ರಾಜಕೀಯದಲ್ಲಿ ಹಕ್ಕು, ಸ್ವಾತಂತ್ರ್ಯ, ಸಮಾನತೆ, ಈ ಎಲ್ಲಾ ಚರ್ಚೆಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಹೀಗಾಗಿ ನ್ಯಾಯವೆಂಬ ಪರಿಕಲ್ಪನೆ ವಿವಿಧ ರೀತಿಯ ಒಳಿತನ್ನು ತನ್ನಲ್ಲಿ ಸೇರಿಸಿಕೊಳ್ಳುತ್ತಾ ಗ್ರೀಕರ ಕಾಲದಿಂದ ಇಲ್ಲಿಯವರೆವಿಗೆ ಸಮಾಜ ಜೀವನದ ಹಲವಾರು ಸಂದರ್ಭಗಳನ್ನು ಸೇರಿದಂತೆ, ವಿವಿಧ ತೆರನಾದ ಕಲ್ಪನೆಗೆ ಎಡೆ ಮಾಡಿದೆ.

ಸಮಾನತೆಯ ಆಂತರಿಕ ಅಂಶವಾಗಿ, ಉದಾರವಾದದ ಗುರಿಯಾಗಿ, ಉಪಯುಕ್ತವಾದದ ಚರ್ಚೆಯಾಗಿ, ಕಾನೂನು ಹಾಗೂ ಶಾಂತಿಪಾಲನೆಯ ಗೀಳಾಗಿ, ವ್ಯಕ್ತಿಯ ಹಕ್ಕುಗಳನ್ನು ಕಾಪಾಡುವ ಸಾಂಸ್ಥಿಕ ಹಾಗೂ ಹಕ್ಕುಗಳ ಪರಿಕಲ್ಪನೆಯಾಗಿ, ಇದು ಸಮಾಜವಾದಿ ಚಿಂತನೆಯೂ ಸೇರಿದಂತೆ ವಿಶೇಷ ಸಂದರ್ಭಗಳಲ್ಲಿ ವಿಶೇಷವಾದ ಅರ್ಥನೀಡಿ ತನ್ನ ವ್ಯಾಖ್ಯ ಲಕ್ಷಣದಲ್ಲಿ ಹಲವಾರು ಬದಲಾವಣೆಗಳನ್ನು ತಂದುಕೊಂಡಿದೆ.

ನ್ಯಾಯವೆಂಬುದು ರಾಜಕೀಯವಾಗಿ ನ್ಯಾಯಸಮ್ಮತವಾಗಿ ದೊರಕಬೇಕಾದ್ದನ್ನು ದೊರಕಿಸಿಕೊಡುವುದು ಹಾಗೂ ತಪ್ಪನ್ನು ಸರಿಯಾಗಿ ತಿದ್ದುವುದು ಎಂಬರ್ಥಗಳಲ್ಲಿ ಬಳಸಲಾಗುತ್ತದೆ. ಹೀಗಾಗಿ ಚಾರಿತ್ರಿಕ ಸಂದರ್ಭಗಳನ್ನು ಸೇರಿದಂತೆ ನ್ಯಾಯವೆಂಬ ಪರಿಕಲ್ಪನೆ, ಎಂದೂ ಖಿಡ್ನಾಯವಾಗಿರದೇ ತನ್ನಲ್ಲಿ ಮಾರ್ಪಟುಗಳನ್ನು ತಂದುಕೊಂಡು ಪ್ರಚಲಿತ ಸಂದರ್ಭಕ್ಕೆ ಅನುಗುಣವಾಗಿರುವಂತೆ ಬದಲಾವಣೆಗೊಂಡಿದೆ.

ಸ್ವಾಭಾವಿಕ ನ್ಯಾಯದಿಂದ ಪ್ರಾರಂಭವಾಗಿ, ತಪ್ಪಿಗೆ ಶಿಕ್ಷೆ ನೀಡುವವರೆವಿಗೆ ನ್ಯಾಯದ ಪರಿಕಲ್ಪನೆ/ಸಾಂಸ್ಥಿಕ ರೂಪದಲ್ಲಿ ತನ್ನ ಕಾರ್ಯಚರಣೆ ನಡೆಸಿದೆ. ಡಿ.ಡಿ. ರಾಫೆಲ್‌ರವರ ಪ್ರಕಾರ ನ್ಯಾಯವೆಂಬುದು ದ್ವಿಮುಖ ಹೊಂದಿದ ಕಲ್ಪನೆಯಾಗಿದ್ದು ನ್ಯಾಯಿಕ ಹಾಗೂ ನೈತಿಕವಾದ ತನ್ನ ಎರಡೂ ಮುಖಗಳನ್ನು ಏಕಕಾಲದಲ್ಲಿ ತೋರುತ್ತದೆ ಎಂದಿದ್ದಾರೆ. ಗುರ್‌ವಿಚ್‌ರವರ ಪ್ರಕಾರ, ನ್ಯಾಯವನ್ನು ಎರಡು ಸಂದರ್ಭಗಳಲ್ಲಿ ಬಳಸಬಹುದಾಗಿದೆ. ಪ್ರಸ್ತುತದ ಕಾನೂನಿಗೆ ಬದ್ಧರಾಗಿ ನಡೆದುಕೊಳ್ಳುವುದು ಹಾಗೇ ಈ ಕಾನೂನಿನ ಆದರ್ಶಗಳಿಗೆ ಬಾಗಿ ನಿಲ್ಲುವುದು ಎಂದಿದ್ದಾರೆ.

ಹೀಗೆ ನ್ಯಾಯದ ಪರಿಕಲ್ಪನೆಯು ಚಾರಿತ್ರಿಕ ಕಾಲದಿಂದಲೂ ಚರ್ಚೆಗೆ ಒಳಪಟ್ಟು, ಬದಲಾವಣೆ, ಮಾರ್ಪಾಟುಗಳನ್ನು ಮಾಡಿಕೊಂಡು ಇಂದಿಗೂ ಅರ್ಥಪೂರ್ಣವಾಗಿ ಅಸ್ತಿತ್ವದಲ್ಲಿದೆ.

## 6.6 ನ್ಯಾಯದ ಚಿಂತನೆಗಳು

ನ್ಯಾಯ ಎಂದ ಕೂಡಲೇ ನಮಗೆ ಸರಿ ತಪ್ಪುಗಳ ಪ್ರಶ್ನೆ ಬರುತ್ತದೆ. ಈ ಕಲ್ಪನೆ ಅನ್ಯಾಯವನ್ನು ವಿರೋಧಿಸುವ ಕಲ್ಪನೆ ಎಂದೂ ತಿಳಿದುಬರುತ್ತದೆ. ಹೀಗಾಗಿ ನ್ಯಾಯ ಎಂಬುದು ಮೊದಲಿಗೆ ನೈತಿಕತೆಯ ಪ್ರತೀಕವಾಗಿದ್ದು, ಅದೊಂದು ಆದರ್ಶವಾಗಿ, ತಾತ್ವಿಕ ರೂಪ ಪಡೆದು, ಸಾಮಾಜಿಕ-ಆರ್ಥಿಕ, ಅಭಿವೃದ್ಧಿಪರ ಚಿಂತನೆಗಳೂ ಸೇರಿದಂತೆ ರಾಜಕೀಯವಾಗಿ ಹಾಗೂ ಸಾಂಸ್ಥಿಕವಾಗಿ ಬೇರೆ ರೂಪಗಳನ್ನು ಪಡೆದು ಸಾಮಾಜಿಕ ನೈಜತೆಯನ್ನು ಪರಿಚಯಿಸುತ್ತದೆ. ಹೀಗೆ ನ್ಯಾಯದ ಪರಿಕಲ್ಪನೆ ಬಹುರೂಪಿ ಚಿಂತನೆ ಆಗಿದೆ.

ಪ್ರಾಚೀನ ಹಾಗೂ ಮಧ್ಯಕಾಲೀನ ಯುಗಗಳಲ್ಲಿ ನ್ಯಾಯದ ಕಲ್ಪನೆ:

ಪ್ಲೇಟೋ ತನ್ನ ಬರಹಗಳಲ್ಲಿ ನ್ಯಾಯದ ಪರಿಕಲ್ಪನೆ ಕುರಿತು ತನ್ನದೇ ಆದ ಆದರ್ಶ ಚಿತ್ರವನ್ನು ರೂಪಿಸಿದ್ದಾರೆ. ಇವರ ಪ್ರಕಾರ ನ್ಯಾಯವೆಂಬುದು ಮಾನವನ ಜೀವನದಲ್ಲಿನ ಹಲವಾರು ಪ್ರಮುಖ ಒಳಿತಿನಲ್ಲಿ ಅತ್ಯಂತ ಪ್ರಮುಖವಾದ ಒಳಿತಾಗಿದೆ ಎಂದಿದ್ದಾರೆ.

ಹೀಗೆ ಇವರು ತಮ್ಮ ಚರ್ಚೆಯಲ್ಲಿ 'ಕರ್ಮ' ಎಂಬ ಪದಕ್ಕೆ ಸಮಾನಾಂತರ ಅರ್ಥ ಬರುವಂತೆ ನ್ಯಾಯವನ್ನು 'ಧರ್ಮ' ಹಾಗೂ ವೈಯಕ್ತಿಕ ಕಾರ್ಯ ನಿರ್ವಹಣೆ ಎಂಬ ಅರ್ಥಗಳಲ್ಲಿ ಪ್ರತಿಪಾದನೆ ಮಾಡಿದ್ದಾರೆ. ಪ್ರತೀ ವ್ಯಕ್ತಿಯು ತನ್ನ ಕಾರ್ಯವನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸಿದ್ದೇ ಆದರೆ ಅದೇ ಉತ್ತಮ ರಾಜ್ಯ-ನ್ಯಾಯಯುತ ರಾಜ್ಯದ ಸ್ಥಾಪನೆಗೆ ನಾಂದಿಯಾಗುತ್ತದೆ ಎಂದು ಇವರು ವಿವರಿಸುತ್ತಾರೆ.

ಪ್ಲೇಟೋರವರ ಶಿಷ್ಯರಾದ ಅರಿಸ್ಟಾಟಲ್‌ರವರು ಈ ವಿಷಯ ಕುರಿತು ಚರ್ಚಿಸಿ ನ್ಯಾಯವನ್ನು ಒಂದರ್ಥದಲ್ಲಿ 'ಸಮಾನತೆ' ಎಂಬ ಪದಕ್ಕೆ ಸಮಾನಾಂತರವಾಗಿ ಬಳಸುತ್ತಾರೆ. ಈ ರೀತಿಯ ಸಮಾನತೆ, ವ್ಯಕ್ತಿಯ 'ಗುರುತು' ಅಥವ ನಡೆಸಿಕೊಳ್ಳುವುದರ ಮೇಲೆ ಹಾಗೂ ಅವನಿಗೆ ದೊರಕುವ 'ಅವಕಾಶ'ದ ಮೇಲೆ ಆಧಾರಿತವಾಗಿರುತ್ತದೆ ಎಂದಿದ್ದಾರೆ. ಇಲ್ಲಿ ಇವರು ಕಾರ್ಯೋನ್ಮುಖ ನ್ಯಾಯ ಹಾಗೂ ಹಂಚಿಕೆಯ ನ್ಯಾಯ ಎರಡನ್ನು ಚರ್ಚಿಸುತ್ತಾರೆ. ಹೀಗೆ ಇವರ ಪ್ರಕಾರ ನ್ಯಾಯವೆಂಬುದು, ಸಮಾಜದ ಬೇಡಿಕೆಗಳನ್ನು ಕಡೆಗಣಿಸದೇ ಅವುಗಳು ಎಲ್ಲರಿಗೂ ಒಪ್ಪುವಂತೆ ಪೂರೈಸುವುದು ಎಂಬ ಅರ್ಥದಲ್ಲಿಯೂ ವಿವರಿಸಿದ್ದಾರೆ.

**ಸ್ಟಾಯಿಕ್ ಹಾಗೂ ರೋಮನ್ನರ ನ್ಯಾಯ ಕಲ್ಪನೆಗಳು:**

ಸ್ಟಾಯಿಕ್‌ರವರುಗಳಿಗೆ ನ್ಯಾಯವನ್ನು ವೈಚಾರಿಕತೆಯಿಂದ ಕಂಡುಕೊಳ್ಳಬಹುದೆಂಬ ಹಾಗೂ ಇದು ಘನಾತ್ಮಕ ಮತ್ತು ಸಾಂಪ್ರದಾಯಿಕವಾದ ಕಲ್ಪನೆಯಾಗಿತ್ತು. ಇವರಿಗೆ ಈ ಕಲ್ಪನೆಯು ಮಾನವನ ನಡತೆಯನ್ನು ನಿಯಂತ್ರಿಸುವ ಕಲ್ಪನೆಯಾಗಿತ್ತು. ಇದು ದೈವಾಂಶ ಸಂಭೂತವಾಗಿದ್ದು, ಎಲ್ಲಾ ಮಾನವರಿಗೂ ಇದು ಸಮಾನವಾಗಿದ್ದು ಎಲ್ಲರೂ ಇದಕ್ಕೆ ಬದ್ಧರಾಗಿರಬೇಕೆಂಬುದು ಇವರ ಚಿಂತನೆಯಾಗಿತ್ತು. ಇದು ಮಾನವನ ಗುಣವನ್ನು ಅವಲಂಬಿಸಿದ್ದಾಗಿದ್ದು, ಅವರ ನೈಸರ್ಗಿಕ ಪರಿಸರದಲ್ಲಿಯೇ ದೊರಕುವಂತಹುದಾಗಿತ್ತು.

ರೋಮನ್ನರಿಗೆ, ಇದು ಕಾನೂನಾತ್ಮಕವಾಗಿದ್ದು, ಇಲ್ಲಿ ವೈಚಾರಿಕತೆಯ ಹಾಗೂ ಎಲ್ಲರಿಗಾಗಿ ರಚಿಸಿದ ಕಾನೂನಿನ ನಡುವೆ ವ್ಯತ್ಯಾಸವಿತ್ತು. ಇದರ ಪ್ರಕಾರ ನ್ಯಾಯವೆಂಬುದು, ಕಾನೂನಾತ್ಮಕವಾಗಿ ರಚಿಸಿದ ಕಾನೂನಿನ ಒಂದು ಒಟ್ಟಾರೆ ಅಂಶವಾಗಿದ್ದು ಇದು ಸಮಾಜವನ್ನು ರಚನಾತ್ಮಕವಾಗಿ ಶ್ರೇಣಿ ಮೂಲಕ ರಚಿಸಲು ಮಾಡಿಕೊಟ್ಟ ವ್ಯವಸ್ಥೆ.

ಎರಡನೆಯದಾಗಿ ಇದರ ಪ್ರಕಾರ, ಪ್ರತಿಯೊಬ್ಬನೂ ತನ್ನ ಬದುಕನ್ನು ತನ್ನ ಸ್ಥಾನದಲ್ಲಿ ಸರಿಯಾದ ರೀತಿಯಾಗಿ ಕಳೆಯಲು ಹಾಗೂ ಮತ್ತೊಬ್ಬರಿಗೆ ನೋವನ್ನು ನೀಡದಂತೆ ವರ್ತಿಸಲು, ಇರುವ ವ್ಯವಸ್ಥೆ.

ಮೂರನೆಯದಾಗಿ, ಮತ್ತೊಬ್ಬರ ಹಕ್ಕು ಹಾಗೂ ಸ್ಥಾನಮಾನ ಗೌರವಿಸುವ ವ್ಯವಸ್ಥೆ ಎಂದಿದ್ದಾರೆ.

ಇಂತಹಾ ಚಿಂತನೆಗಳು ಮುಂದಿನ ಕಾಲದಲ್ಲಿ ಕ್ರೈಸ್ತ ಧರ್ಮಕ್ಕೆ ಸೇರಿ ಅವರ ನ್ಯಾಯ ಕಲ್ಪನೆಗಳಲ್ಲಿ ಕಂಡುಬರುತ್ತದೆ.

**ಕ್ರೈಸ್ತರ ನ್ಯಾಯದ ಪರಿಕಲ್ಪನೆ:**

ಇವರ ನ್ಯಾಯ ಕಲ್ಪನೆಯು, ಪ್ರೀತಿ, ವಿಶ್ವಾಸಗಳ ಮೇಲೆ ಆಧರಿತವಾಗಿತ್ತು. ಇಲ್ಲಿ ನ್ಯಾಯ ಕೇವಲಾ ಧಾರ್ಮಿಕ ಚಿಂತನೆಯಾಗಿ ಪರಿವರ್ತಿತಗೊಂಡಿತು. ಇದನ್ನು ದೇವರ ಲೋಕದಿಂದ ಮಾತ್ರಾ ಕಂಡುಕೊಳ್ಳಲು ಸಾಧ್ಯ ಎಂದು ಪ್ರಚಲಿತಗೊಳಿಸಲಾಗಿತ್ತು. ಇದಕ್ಕೆ ಚರ್ಚುಗಳೇ ಮುಖ್ಯ ಸ್ಥಾನವಾಗಿತ್ತು. ಇದೇ ಭೂಮಿಯಲ್ಲಿ ಈ ನ್ಯಾಯದ ಪ್ರಜ್ಞೆಗೆ ದಾರಿ ಎಂದೇ ಹೇಳಲಾಗಿತ್ತು. ರಾಜ್ಯ ಇಂತಹಾ ಚರ್ಚುಗಳ ಮೇಲೆ ಅವಲಂಬಿತವಾಗಿದ್ದು, ರಾಜ್ಯ ನೇರವಾಗಿ ನ್ಯಾಯಕ್ಕೆ ಯಾವ ರೀತಿಯಲ್ಲೂ ಸಂಬಂಧಿತವಾಗಿರಲಿಲ್ಲ ಎಂದು ಇವರು ತಿಳಿಸಿದ್ದಾರೆ.

**ನ್ಯಾಯದ ಸಮಾಜವಾದಿ ಕಲ್ಪನೆ:**

19ನೇ ಶತಮಾನದ ಸಮಾಜವಾದಿ ಬರಹಗಳೂ, ಅಂದಿನ ಆರ್ಥಿಕ ಅಸಮಾನತೆಯನ್ನು ನ್ಯಾಯದ ಹಿನ್ನೆಲೆಯಲ್ಲಿ ಟೀಕಿಸಿದರು. ಆದರೆ ಈ ಟೀಕೆ ಕೇವಲ, ಆರ್ಥಿಕ ಅಸಮಾನತೆಯನ್ನು ಟೀಕಿಸುವುದೇ ಆಗಿರದೆ, ಹೆಚ್ಚಿನ ನ್ಯಾಯವನ್ನು ಸಮಾಜಕ್ಕೆ ಒದಗಿಸಿಕೊಡಬೇಕೆಂಬ ದೃಷ್ಟಿಕೋನವನ್ನು ಹೊಂದಿತ್ತು. ಈ ನಿಟ್ಟಿನಲ್ಲಿ ಪ್ರೌಧಾನ್‌ರವರ 'ದಿ ಜಸ್ಟಿಸ್' ಎಂಬ ಮೂರು ಭಾಗದ ಬರಹ ಪ್ರಮುಖವಾದದ್ದು. ಇವರ ಪ್ರಕಾರ ನ್ಯಾಯವೆಂಬುದು ಬಯಸುವ ಸಾಂಸ್ಥಿಕ ವ್ಯವಸ್ಥೆ ಸಮಾಜವಾದಿ ವ್ಯವಸ್ಥೆಯಾಗಲೀ ಅಥವಾ, ಅರಾಜಕತೆಯ ವ್ಯವಸ್ಥೆಯನ್ನು ಬಯಸುವುದಿಲ್ಲಾ. ಆದರೇ, ಈ ವ್ಯವಸ್ಥೆ ಸಾಂಸ್ಥಿಕ ಬದಲಾವಣೆಗಳೊಂದಿಗೆ, ನ್ಯಾಯಸಮ್ಮತವಾಗಿ ಎಲ್ಲರಿಗೂ ದೊರಕಬೇಕಾದನ್ನು ಒದಗಿಸಲು ಎಚ್ಚೆತ್ತಿರಬೇಕೆಂಬುದಾಗಿದೆ.

ಯುಟೋಪಿಯನ್ ಸಮಾಜವಾದಿಗಳಿಗಿಂತಾ ವಿಭಿನ್ನವಾಗಿ, ಮಾರ್ಕ್ಸ್ ಹಾಗೂ ಎಂಗಿಲ್ಸ್, ಬಂಡವಾಳಶಾಹಿತ್ವದಲ್ಲಿ 'ನ್ಯಾಯದ'ವಿಶ್ಲೇಷಣೆ ಮಾಡಿದ್ದಾರೆ. ಇವರ ಪ್ರಕಾರ, ಬಂಡವಾಳ ಶಾಹಿತ್ವವು ಮೂಲತಃ ಶೋಷಣೆ ಹಾಗೂ ಲಾಭದಲ್ಲಿ ನಂಬಿಕೆ ಹೊಂದಿರುವುದರಿಂದ, ಈ ವ್ಯವಸ್ಥೆ ಅಸಮಾನ ಸಮಾಜಿಕ ವ್ಯವಸ್ಥೆ ಹಾಗೂ ಆರ್ಥಿಕ ವ್ಯವಸ್ಥೆಯನ್ನು ರೂಪಿಸುತ್ತದೆ ಎಂದಿದ್ದಾರೆ. ಮುಂದುವರೆದು ಇವರು ಇಂತಹ ಅಸಮಾನ ಸಮಾಜದಲ್ಲಿ ಸಮಾನತೆ ಸಾಧಿಸಲು, ಹಾಗೂ ನ್ಯಾಯ ದೊರಕಿಸಲು, ವರ್ಗಕಲಹದ ಅವಶ್ಯಕತೆಯನ್ನು ಪ್ರತಿಪಾದಿಸಿದ್ದಾರೆ. ಹೀಗೆ ಇವರ ದೃಷ್ಟಿಯಲ್ಲಿ ನ್ಯಾಯವೆಂಬುದು ಎಲ್ಲರಿಗೂ ದೊರಕುವ, ಎಟಕುವ ವ್ಯವಸ್ಥಿತವಾದ, ಕಲ್ಪನೆಯಾಗಿತ್ತು.

**ನ್ಯಾಯದ ಆಧುನಿಕ ಕಲ್ಪನೆ**

ನ್ಯಾಯವು ಎಲ್ಲರಿಗೂ ದೊರಕುವಂತಾಗುವಲ್ಲಿ, ಸುಧಾರಣೆ, ಪುನರುತ್ಥಾನ, ಕೈಗಾರಿಕಾ ಕ್ರಾಂತಿ ಎಲ್ಲವೂ ತಮ್ಮದೇ ಆದ ಪಾತ್ರವನ್ನು ಹೊಂದಿವೆ. ಗ್ರೋಷಿಯಸ್, ಹಾಬ್ಸ್, ಲಾಕ್, ರೂಸೋ, ಎಲ್ಲರೂ ಸೇರಿದಂತೆ, ನ್ಯಾಯದ ಪರಿಕಲ್ಪನೆಗೆ ಇವರೆಲ್ಲರೂ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಇವರೆಲ್ಲರೂ ಅಂದಿನ ಸಮಾಜಗಳಲ್ಲಿ ಯಾವ ರೀತಿಯಲ್ಲಿ ವ್ಯವಸ್ಥೆ ಇದ್ದಿತೋ ಅದನ್ನು ಹೊಂದಿಕೊಂಡಂತೆ ನ್ಯಾಯದ ಕಲ್ಪನೆಯನ್ನು ರಚಿಸಿದ್ದಾರೆ.

ಡೇವಿಡ್ ಹ್ಯೂಮ್, ಬೆಂಥಾಮ್, ಮಿಲ್, ಇವರುಗಳು ಉಪಯುಕ್ತತಾ ವಾದವನ್ನು ಪ್ರತಿಪಾದಿಸಿ, ಅದರ ಮೂಲಕ ನ್ಯಾಯದ ಕಲ್ಪನೆಯನ್ನು ಆಚರಣೆಗೆ ತರಲು ಯತ್ನಿಸಿದರು. ಹ್ಯೂಮ್ ಸಾರ್ವಜನಿಕ ಬಳಕೆಯೇ, ನ್ಯಾಯದ ಆಧಾರವಾಗಿರಬೇಕೆಂದು ಚರ್ಚಿಸಿದರು. ಬೆಂಥಾಮ್ ಇದನ್ನು ಬಹುಸಂಖ್ಯಾತರ ಸಂತೋಷ ಹಾಗೂ ಬಹು ಸಂತೋಷ ಎಂಬ ಚೌಕಟ್ಟಿನಲ್ಲಿಟ್ಟು, ನ್ಯಾಯದ ಚರ್ಚೆಗೆ, ಸಂಖ್ಯಾಧಾರಿತ ಚೌಕಟ್ಟನ್ನು ನೀಡಿದರು. ಮಿಲ್‌ರವರು ಇದೇ ವಾದವನ್ನು ಮುಂದುವರೆಸಿ, ಒಳಿತು ಕೆಡುಕುಗಳನ್ನು ಗುರುತಿಸಲು ಒಂದು ಲೌಕಿಕವಾದ ಅಳತೆಗೋಲಿರಬೇಕೆಂದು ತಿಳಿಸಿ, ನ್ಯಾಯವನ್ನೇ ಈ ಅಳತೆಗೋಲಾಗಿ ಪ್ರಮಾಣಿಸುವ ಯತ್ನ ಮಾಡಿದರು. ಇವರ ಪ್ರಕಾರ ನ್ಯಾಯವು ಮಾನವನ ನೋವು ನಲಿವಿಗೆ ಸಂಬಂಧಿಸಿದ್ದು, ನ್ಯಾಯದ ಮೂಲಕ ನಾವು ನೋವನ್ನು ಕಡಿಮೆಗೊಳಿಸುವ ಮಿಲ್‌ರವರು ನ್ಯಾಯವನ್ನು ಹಕ್ಕಿನ ಜೊತೆಗೆ ಸೇರಿಸಿ ಚರ್ಚಿಸಿರುವುದು ಇಲ್ಲಿ ಕಂಡು ಬರುತ್ತದೆ.

ಹೀಗೆ ನ್ಯಾಯದ ಕಲ್ಪನೆಗಳು ವಿವಿಧ ಚಿಂತನೆ, ಆದರ್ಶ, ಹಾಗೂ ಚಾರಿತ್ರಿಕ ಹಿನ್ನೆಲೆಯಲ್ಲಿ ರೂಪಿತಗೊಂಡಿರುವುದನ್ನು ನಾವಿಲ್ಲಿ ಕಾಣಬಹುದಾಗಿದೆ.

## 6.7 ನ್ಯಾಯದ ವಿವಿಧ ಮುಖಗಳು

ಈ ಭಾಗದಲ್ಲಿ ಸಾಂಪ್ರದಾಯಿಕ ಹಾಗೂ ಆಧುನಿಕವಾದ ನ್ಯಾಯದ ಕಲ್ಪನೆಗಳ ವಿವಿಧ ಮುಖಗಳನ್ನು ಇಲ್ಲಿ ಹೊರತರಲಾಗಿದೆ. ಮೊದಲಿಗೆ, ಸಂಪ್ರದಾಯವಾದಿ ಚರ್ಚೆಯಲ್ಲಿ, ನ್ಯಾಯವು ನೈತಿಕ ಅಂಶಗಳಿಗೆ ಸ್ಪಂದಿಸಿತ್ತು. ಇಲ್ಲಿ ಕರ್ಮ, ಕಾರ್ಯಗಳಿಗೆ ಸಂಬಂಧಿಸಿದಂತೆ, ನ್ಯಾಯವು ಧರ್ಮವೆಂಬ ನಿಟ್ಟಿನಲ್ಲಿ ಚರ್ಚಿಸಲ್ಪಡುತ್ತಿತ್ತು. ಪ್ಲೇಟೋ ರವರ ಬರಹದಲ್ಲಿ ಸಮಾಜದಲ್ಲಿ ಹೇಗೆ ವ್ಯಕ್ತಿಗಳಿಗೆ, ಗುಂಪುಗಳಿಗೆ ವಿವಿಧ ರೀತಿಯಲ್ಲಿ ತಮ್ಮ ತಮ್ಮ ಕಾರ್ಯವೆಸಗುವುದೇ ನ್ಯಾಯವೆಂಬಂತೆ ಚರ್ಚೆಗಳಿದ್ದದ್ದು ಇಲ್ಲಿ ಮನಗೊಳ್ಳಬೇಕಾಗಿದೆ. ಇದನ್ನೇ ಅವರು ಸರಿಯಾದ ಸಾಮಾಜಿಕ ರಚನೆ ಎಂದೇ ವಿವರಿಸಿದ್ದರು. ಇಲ್ಲಿ ಇವರು ಮಾನವ ಹಾಗೂ ಸಮಾಜ ಎರಡಲ್ಲೂ, ವೈಚಾರಿಕತೆ ಇರಬೇಕೆಂಬುದನ್ನು ಇಲ್ಲಿ ಪ್ರತಿಪಾದಿಸಿದ್ದಾರೆ. ಹೀಗಾಗಿ ಇವರ ಆದರ್ಶರಾಜ್ಯ, ತಾತ್ವಿಕ ರಾಜನ ಕೈಯಲ್ಲಿ ಇರಬೇಕೆಂಬ ಚರ್ಚೆಗೆ ಹೊಂದಿಕೆಯಾಗುತ್ತದೆ.

ಆಧುನಿಕ ಯುಗದಲ್ಲಿ ಇದೇ ಚರ್ಚೆ, ಮನುಷ್ಯನನ್ನು ಅಭಿವೃದ್ಧಿ ಪರನಾಗಿಸಿ ನೋಡುವ ದೃಷ್ಟಿಕೋನ ಹೊಂದಿದೆ. ಇಲ್ಲಿ ಸಮಾಜ ಹಾಗೂ ರಾಜ್ಯಗಳೆರಡೂ - ಮಾನವ ಸಮಾಜವನ್ನೇ, ಬದಲಿಸಿ ಅವರಲ್ಲಿ, ಮೌಲ್ಯಗಳನ್ನು ತುಂಬುವ ಚಿಂತನೆ ಹೊಂದಿದೆ.

ಡಿ.ಡಿ. ರಾಫೆಲ್‌ರವರು ತಮ್ಮ 'ರಾಜಕೀಯ ತತ್ವಶಾಸ್ತ್ರದಲ್ಲಿನ ಸಮಸ್ಯೆಗಳು", ಎಂಬ ಬರಹದಲ್ಲಿ ಸಮಾಜದ ಸುಧಾರಕರಿಂದ ಸಮಾಜಿಕ ನ್ಯಾಯವೆಂಬ ಪದದ ಬಳಕೆಯಾದಲ್ಲಿ ಆ ಬಗ್ಗೆ ನಾವು ಎಚ್ಚರಿಕೆ ವಹಿಸಬೇಕೆಂದಿದ್ದಾರೆ. ಕಾರಣ, ಈ ಪದದ ಬಳಕೆ ಸಮಾಜದ ಸಂಪೂರ್ಣ ಬದಲಾವಣೆಯನ್ನು ಬಯಸದೇ ಇದು ಕೇವಲ ಕೆಲವರಿಗೆ ನ್ಯಾಯ ಒದಗಿಸಿ ಕೊಡುವಂತಹಾ ಚಿತ್ರಣವನ್ನು ಇದು ನೀಡುತ್ತದೆ ಎಂದಿದ್ದಾರೆ.

ಹೀಗೆ, ಆಧುನಿಕ ಯುಗದಲ್ಲಿ ನ್ಯಾಯದ ಪರಿಕಲ್ಪನೆ, ಕೇವಲ ಸಾಂಸ್ಥಿಕ ನ್ಯಾಯ, ಆರ್ಥಿಕ ಅಸಮಾನತೆ ತೊಡೆಯಲು ಇಂದೇ - ಸಮಾಜದಲ್ಲಿ ಒಟ್ಟಾರೆ ನ್ಯಾಯ ಕಲ್ಪಿಸಲು ಸಹಾಯಕಾರಿಯಾಗುವಂತಹಾ ಚಿಂತನೆಗಳನ್ನು ಪ್ರತಿಪಾದಿಸಿರುವುದು ಇಲ್ಲಿ ಗಮನಿಸಬೇಕಾಗಿದೆ. ಹೀಗೆ, ಈ ಆಧುನಿಕ ನ್ಯಾಯ ಪರಿಕಲ್ಪನೆಯನ್ನು ನಾವಿಲ್ಲಿ ಚರ್ಚಿಸಿದಾಗ, ನ್ಯಾಯಿಕ, ರಾಜಕೀಯ, ಸಾಮಾಜಿಕ, ಆರ್ಥಿಕ, ನ್ಯಾಯ ಪರಿಕಲ್ಪನೆಗಳನ್ನು ನಾವಿಲ್ಲಿ ಪರಿಗಣನೆಗೆ ತೆಗೆದುಕೊಳ್ಳಬೇಕಾಗಿದೆ.

ಕಾನೂನಾತ್ಮಕ ನ್ಯಾಯ

ಇದನ್ನು ಕಾನೂನಾತ್ಮಕ ನ್ಯಾಯವೆಂದೇ ಕರೆಯಬಹುದಾಗಿದೆ. ಇದರ ಪ್ರಕಾರ, ಯಾರಿಗಾದರೊ ಅನ್ಯಾಯವಾದಲ್ಲಿ ಅವರು ಕಾನೂನಾತ್ಮಕವಾಗಿ ನ್ಯಾಯ ಪಡೆಯಲು ಸಾಧ್ಯತೆಗಳಿಲ್ಲಿವೆ. ಇಲ್ಲಿ ನಾವು ನ್ಯಾಯದ ಮೂಲ ರೂಪವನ್ನು ಗುರುತಿಸುವ ಪ್ರಯತ್ನ ಮಾಡಬಹುದಾಗಿದೆ.

ಆಲ್ಬರಾಸ್ ಎಂಬುವರು, ತಮ್ಮ ಬರಹವಾದ ಕಾನೂನು ಹಾಗೂ ನ್ಯಾಯವೆಂಬ ಪುಸ್ತಕದಲ್ಲಿ, ಕಾನೂನಿನ ಕಾರ್ಯಕ್ರಮತೆಯನ್ನು ನಾವು ಕಣ್ಣಿಗೆ ಕಾಣದ ಮೌಲ್ಯದಿಂದ ಅಳೆಯುವ ಬದಲು, ಅದನ್ನು ನೇರವಾಗಿ ಒಂದು ಕಾರ್ಯದಲ್ಲಿ ಅನ್ಯಾಯವನ್ನು ಹೇಗೆ ಸರಿಪಡಿಸುತ್ತದೆಂಬ ಕಾನೂನಿನ ಪರೀಕ್ಷೆಯಿಂದ ಗುರುತಿಸಬಹುದೆಂದು ಇವರು ತಿಳಿಸಿದ್ದಾರೆ. ಇಲ್ಲಿ ಈ ಕಾನೂನು, ತನ್ನ ಗುರಿ ತಲುಪಿದಲ್ಲಿ, ನಾವು ಕಾನೂನಿನ ಕ್ರಮತೆಯನ್ನು ನ್ಯಾಯದ ಪರಿಕಲ್ಪನೆಯನ್ನೂ ಅರಿಯಬಹುದಾಗಿದೆ ಎಂದಿದ್ದಾರೆ. ಅರ್ನೆಸ್ಟ ಬಾರ್ಕರ್ ಇದೇ ವಿಚಾರವನ್ನು ತಿರುಗಿಸಿ - ಉತ್ತಮ ನ್ಯಾಯ ವ್ಯವಸ್ಥೆ - ಉತ್ತಮ ಕಾನೂನು ವ್ಯವಸ್ಥೆಯನ್ನು ರೂಢಿಸುತ್ತದೆ ಎಂದಿದ್ದಾರೆ. ಇವರ ಪ್ರಕಾರ ಕಾನೂನಿಗೆ ಶಾಸನೀಯ ಒಪ್ಪಿಗೆ ಹಾಗೇ ಮೌಲ್ಯ ಇರಬೇಕೆಂಬುದಾಗಿದೆ.

**ರಾಜಕೀಯ ನ್ಯಾಯ**

ಇದು ಮೂಲತಃ ಒಂದು ಸಮಾಜದ ಸಂಪೂರ್ಣ ಪುನರ್ ರಚನೆಯನ್ನು ಅವಲಂಬಿಸಿದಂತಹ ಚಿಂತನೆಯಾಗಿದೆ. ಗಾಡ್‌ವಿನ್ ಈ ಬಗ್ಗೆ ತಮ್ಮ ಬರಹದಲ್ಲಿ, ಇದೊಂದು ಸಾಮಾನ್ಯ ಒಳಿತನ್ನು ಸಾಧಿಸುವ ವ್ಯವಸ್ಥೆ ಎಂದು ಗುರುತಿಸಿದ್ದಾರೆ. ಆಟ್ಟೊ ಕಿರ್ಚಐಮರ್‌ರವರು, ತಮ್ಮ ರಾಜಕೀಯ ನ್ಯಾಯವೆಂಬ ಪುಸ್ತಕದಲ್ಲಿ, ರಾಜಕೀಯ ನ್ಯಾಯವನ್ನು ಎಲ್ಲರೂ ಒಪ್ಪುವ ಒಂದು ಸಾರ್ವತ್ರಿಕ ಆದರ್ಶವೆಂದೂ ಕರೆದಿದ್ದಾರೆ. ಹಾಗೂ ಇವರು, ಈ ಆದರ್ಶ ರಾಜ್ಯಕ್ಕೆ ಪೂರ್ಣಪ್ರಮಾಣದ ನೈತಿಕ ಮಟ್ಟ ಸಾಧಿಸಲು ಅವಕಾಶ ಮಾಡಿಕೊಡಬೇಕೆಂದೇ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಇದಕ್ಕಿಂತಲೂ ಅರ್ಥಗರ್ಭಿತವಾಗಿ ಬಳಸಲ್ಪಡುವ ಈ ಪದದ ಬಳಕೆಯನ್ನು ರಾಜಕೀಯ ಸಂಸ್ಥೆಗಳ ಪೂರ್ಣಪ್ರಮಾಣದ ಬದಲಾವಣೆಗಳಿಗಾಗಿ, ರಾಜಕೀಯ ಪ್ರಕ್ರಿಯೆಯಲ್ಲಿ ಬಳಸಲಾಗುತ್ತದೆ. ಇಲ್ಲಿ ರಾಜಕೀಯ ನ್ಯಾಯವೆಂಬ ಪದ ಪೂರ್ಣಪ್ರಮಾಣದ ಪ್ರಜಾಪ್ರಭುತ್ವ ಕುರಿತಾಗಿದ್ದು ಇದು, ಇಡೀ ಸಮಾಜದ ಒಳಿತಿಗಾಗಿ ಬಳಸಲ್ಪಡುವ ವಿಷಯವಾಗುತ್ತದೆ. ಸಂವಿಧಾನ, ಸಂವಿಧಾನಿಕ ವ್ಯವಸ್ಥೆ, ಶಾಸನಗಳಲ್ಲಿ, ಕಾನೂನಿನ ಮುಂದೆ ಎಲ್ಲರೂ ಸಮಾನರು, ಎಂಬೆಲ್ಲಾ ಚರ್ಚೆಗಳು ಸಹಾ ಈ ಸಂದರ್ಭಗಳಲ್ಲಿ ರಾಜಕೀಯ ನ್ಯಾಯವ್ವನು ಗುರುತು ಮಾಡುವ ಒಂದು ಚಿಂತನೆಯ ಆಧಾರಿದ ಮೇಲೆ ರಚಿತವಾಗಿದೆ ಎಂಬುದು ಇಲ್ಲಿನ ಚರ್ಚೆ.

ಇಂತಹಾ ರಾಜಕೀಯ ನ್ಯಾಯ ಚರ್ಚೆ ಸಂಪೂರ್ಣ ಸ್ವತಂತ್ರ್ಯವನ್ನು ವ್ಯಕ್ತಿಗೆ ನೀಡುವಲ್ಲಿ ತನ್ನ ಮೂಲತೆರನಾದ ಚಿಂತನೆ ಹೊಂದಿರುತ್ತದೆ ಎಂಬುದು ಈ ಚರ್ಚೆಯಲ್ಲಿ ಪ್ರಮುಖವಾಗಿ ಗಮನಿಸಬೇಕಾಗಿದೆ.

**ಸಾಮಾಜಿಕ - ಆರ್ಥಿಕ ನ್ಯಾಯ**

ಸಾಮಾಜಿಕ ನ್ಯಾಯದ ಸ್ಥಾಪನೆಯಲ್ಲಿ ಮುಖ್ಯವಾದ ಅಂಶಗಳೆಂದರೆ - ಸಾ - ಆ ನ್ಯಾಯವೇ ಆಗಿದೆ. ಇದು ವ್ಯಕ್ತಿಯ ಸಮಾಜ - ಸಮುದಾಯ ಜೀವನ - ಖಾಸಗೀ ಹಾಗೂ ಆರ್ಥಿಕ ಸಂಬಂಧಗಳನ್ನು ಸುಧಾರಿಸಿ - ಅವನ ಘನತೆ, ಸ್ಥಾನ ಮಾನಗಳನ್ನು ಹೆಚ್ಚಿಸಿ - ನಿರ್ಧಾರಿತ ಸಮಾಜದಲ್ಲಿ ಅವನಿಗೆ ಗೌರವ ದಕ್ಕಿಸಿಕೊಡುವ ಪ್ರಮುಖ ವ್ಯವಸ್ಥೆ ಆಗಿದೆ. ಚಾರಿತ್ರಿಕವಾಗಿ ಕೂಡಾ ವ್ಯಕ್ತಿಯ ಆರ್ಥಿಕ ಪರಿಸ್ಥಿತಿಗಳು ಅವರ ಸಾಮಾಜಿಕ ಸ್ಥಾನಮಾನಗಳನ್ನು ನಿರ್ಧರಿಸುವುದನ್ನು ಇಲ್ಲಿ ಗಣನೆಗೆ ತೆಗೆದುಕೊಳ್ಳಬೇಕಾಗಿದೆ.

ಈ ಚಿಂತನೆಯ ಮುಖ್ಯ ಉದ್ದೇಶ, ಯಾವುದೇ ಆರ್ಥಿಕ ಬೆಳವಣಿಗೆಯ ಅಭಿವೃದ್ಧಿ ಏಕಮುಖವಾಗಿರದೇ, ಅದು ಸಮಾಜದ ಹೆಚ್ಚಿನ ಜನತೆಗೆ ದೊರಕುವಂತಾಗಬೇಕು ಎಂಬುದಾಗಿದೆ. ಇದು ಒಂದರ್ಥದಲ್ಲಿ ಪುನರ್ ಹಂಚಿಕೆಯನ್ನು ಕುರಿತದ್ದಾಗಿದೆ. ಭಾರತದ ಸಂವಿಧಾನದಲ್ಲಿ, ಅದರಲ್ಲೂ ಅದರ ಪೀಠಿಕೆಯ ಭಾಗದಲ್ಲಿ, ರಾಜ್ಯ ನಿರ್ದೇಶನಾ ತತ್ವದಲ್ಲಿ, ಈ ಸಾಮಾಜಿಕ-ಆರ್ಥಿಕ ನ್ಯಾಯದ ಚರ್ಚೆಗಳು ಮೂಡಿ ಬರುವುದನ್ನು ಇಲ್ಲಿ ಗಮನಕ್ಕೆ ತೆಗೆದುಕೊಳ್ಳಬೇಕಾಗಿದೆ.

ಹೀಗೆ ಸಾಮಾಜಿಕ-ಆರ್ಥಿಕ ನ್ಯಾಯವೆಂಬುದು, ವಿಶಾಲ ದೃಷ್ಟಿಕೋನದಲ್ಲಿ ಕಂಡುಕೊಂಡಿದ್ದೇ ಆದರೆ ಇದು ಕೇವಲ ವ್ಯಕ್ತಿಗತವಾಗಿರದೇ ಇಡೀ ಸಮಾಜವನ್ನೇ ಪುನರ್ ರಚಿಸುವ ಹಂತದವರೆವಿಗೂ ತನ್ನ ಚಿಂತನೆ ಹೊಂದಿದೆ.

ವ್ಯಕ್ತಿಗೆ ಗೌರವ, ಘನತೆಗಳನ್ನು ತರುವಲ್ಲಿ ಇದರ ಪಾತ್ರ ಪ್ರಮುಖವಾದದ್ದು ಎಂದೂ ಕೂಡ ಇಲ್ಲಿ ತಿಳಿಸಬಹುದಾಗಿದೆ.

ಹೀಗೆ ನ್ಯಾಯದ ವಿವಿಧ ಚರ್ಚೆಗಳು ಇದರ ವಿಭಿನ್ನ ಮುಖಗಳ ಪರಿಚಯ ಮಾಡಿಕೊಡುತ್ತವೆ.

## 6.8 ನ್ಯಾಯದ ಚರ್ಚೆ

ಪ್ರಚಲಿತದಲ್ಲಿನ 'ನ್ಯಾಯ' ಕುರಿತಾದ ಚರ್ಚೆಯಲ್ಲಿ ಈ ಮೇಲಿನ ಎರಡೂ ರೀತಿಯ ಚರ್ಚೆಯನ್ನು ನಾವಿಲ್ಲಿ ಪುನರ್ ಅಧ್ಯಯನಿಸಬೇಕಾಗುತ್ತದೆ.

ರಾಲ್ಸ್‌ರವರ ನ್ಯಾಯ ಸಿದ್ಧಾಂತವನ್ನು ಅರ್ಥಮಾಡಿಕೊಳ್ಳುವ ಮೊದಲು ಈ ಚರ್ಚೆ ಅತ್ಯಗತ್ಯವಾಗಿದೆ.

ಪ್ರೊಸೀಜರಲ್ ಅಥವಾ ಕಾರ್ಯರೂಪಿಣಿ ನ್ಯಾಯದ ಚಿಂತಕರು, ಸಮಾಜದಲ್ಲಿ ಯಾವುದೇ ಸಾಮಾಜಿಕ ಉಪಯುಕ್ತ ಅಂಶಗಳನ್ನು ಹಂಚಿಕೆ ಮಾಡುವುದೇ ಆದಲ್ಲಿ, ಅದಕ್ಕೆ ನಿರ್ಧರಿತವಾದ ಒಂದು ಕಾರ್ಯ ಶೈಲಿ ಇರಬೇಕೆಂದಿದ್ದಾರೆ. ಇದು ವಸ್ತುಗಳಾಗಲಿ, ಸೇವೆಗಳಾಗಲಿ, ಅವಕಾಶಗಳಾಗಲೀ, ಅಧಿಕಾರವಾಗಲೀ, ಬಿರುದುಗಳಾಗಲೀ, ಯಾವುದೇ ಇರಲಿ, ಹಾಗಾದಾಗ ಮಾತ್ರ ಸಮಾಜದಲ್ಲಿ ಎಲ್ಲವೂ ನ್ಯಾಯಯುತವಾಗಿ ಕಾರ್ಯನಿರ್ವಹಿಸಲು ಸಾಧ್ಯ ಎಂದಿದ್ದಾರೆ. ಇದನ್ನೇ ಬೇರೆಯ ಮಾತುಗಳಲ್ಲಿ ಹೇಳುವುದೇ ಆದರೆ, ನ್ಯಾಯಯುತವಾದ ಕಾರ್ಯರೂಪವು ನ್ಯಾಯವನ್ನೇ ಕಂಡುಕೊಳ್ಳುತ್ತದೆ ಎಂಬುದಾಗಿದೆ.

ಇದೇ ನಿಟ್ಟಿನಲ್ಲಿ ಚರ್ಚಿಸುವ ಸಾಮಾಜಿಕ ನ್ಯಾಯದ ಚರ್ಚೆ ಮಾಡುವ ಚಿಂತಕರು, ಇದೇ ಸಾಮಾಜಿಕವಾಗಿ ಉಪಯುಕ್ತ ಅಂಶಗಳ ಹಂಚಿಕೆಯನ್ನು ನ್ಯಾಯಯುತವಾದ ಹಂಚಿಕೆಯ ತತ್ವದ ಆಧಾರಿತವಾಗಿ ನಡೆಸಿಕೊಡಬೇಕೆಂದೊ ಚರ್ಚಿಸುತ್ತಾರೆ. ಈ ಹಂಚಿಕೆಯೇ ನ್ಯಾಯಯುತವಾಗಿಲ್ಲದಿದ್ದಲ್ಲಿ ಅದಕ್ಕೆ ಬಳಸುವ ಕಾರ್ಯರೂಪ ಕೈಪಿಡಿ ಎಷ್ಟೇ ನ್ಯಾಯಯುತವಿದ್ದರೇನು ಪ್ರಯೋಜನವೆಂಬುದು ಇವರ ಚರ್ಚೆ.

ನ್ಯಾಯ ಹಂಚಿಕೆಯ ಕಾರ್ಯ ಕೈಪಿಡಿಯು ಸಾಂಪ್ರಾದಾಯಿಕವಾಗಿ, ಉದಾರವಾದೀ ಸಂಪ್ರದಾಯಕ್ಕೆ ಸೇರಿದ್ದು, ಈ ಪ್ರಕಾರ ನ್ಯಾಯದ ಕೆಲಸವು ಒಂದು ಸಮಾಜದಲ್ಲಿ, ವ್ಯಕ್ತಿ ಹಾಗೂ ಗುಂಪಿನ ನಡುವೆ ಪರಸ್ಪರ ಸಂಬಂಧವನ್ನು ನಿಯಂತ್ರಿಸುವುದು ಎಂದಿದ್ದಾರೆ. ಹಾಗಾಗಿ ಇಲ್ಲಿ ನ್ಯಾಯದ ಕಲ್ಪನೆಯನ್ನು ಆಚರಣೆಯಲ್ಲಿ ಯಾವುದೇ ವ್ಯಕ್ತಿಯು ಗುಂಪಿನ ಪರ ವಿರೋಧವೆನ್ನದೇ ಸರಿಸಮಾನವಾಗಿ ಎಲ್ಲರಿಗೂ ದೊರಕುವಂತೆ ಮಾಡುವುದು ಎಂಬ ಅರ್ಥವನ್ನು ನೀಡುತ್ತದೆ. ಕೆಲಸಕ್ಕೆ ಕಾಂಟ್ರಾಕ್ಟ್ (ಒಪ್ಪಂದ) ಮೂಲಕ ನಿರ್ಧಾರ ತೆಗೆದುಕೊಂಡು ಕಾರ್ಯ ನಿರ್ವಹಿಸುವುದು ಈ ನ್ಯಾಯ ವ್ಯವಸ್ಥೆಯ ಒಂದು ಉದಾಹರಣೆ. ಇಲ್ಲಿ ಯಾವ ವ್ಯಕ್ತಿ ಯಾ ಗುಂಪು ಮತ್ತೊಬ್ಬರನ್ನು ಶೋಷಿಸದಂತೆ ನೋಡಿಕೊಳ್ಳುವುದು ಇದರ ಅರ್ಥವಾಗುತ್ತದೆ. ಇಲ್ಲಿ ಪ್ರೊಸೀಜರ್ ಎಂಬ ಪದ ಕಾನೂನು ಎಂಬ ಅರ್ಥವನ್ನು ಸೂಚಿಸುತ್ತದೆ.

ಇದಕ್ಕೆ ವ್ಯತಿರುಕ್ತವೆಂಬಂತೆ, ಸಬ್‌ಸ್ಟಾನ್‌ಟೀವ್ ಯಾ ಸಾಮಾಜಿಕ ನ್ಯಾಯವು, ಸಮಾಜವಾದಿ ಚಿಂತನೆಗೆ ಸ್ಪಂದಿಸುವಂತಹಾ ಚಿಂತನೆಯಾಗಿದ್ದು, ಇಲ್ಲಿ ಬಡವ ಹಾಗೂ ಅವಕಾಶಗಳಿಂದ ವಂಚಿತರಾದವರಿಗೆ ಎಲ್ಲರಂತೆ ಅವಕಾಶ ದೊರಕಿ ಅವರೂ ತಮ್ಮ ಪರಿಸ್ಥಿತಿಯನ್ನು ಉದ್ಧರಿಸಿಕೊಳ್ಳಲು ಸಾಧ್ಯ ಮಾಡಿಕೊಡುವುದೇ ಆಗಿದೆ. ಇಲ್ಲಿ ಸ್ವಅಭಿವೃದ್ಧಿಗೆ ಬೇಕಾದ ಅವಕಾಶವನ್ನು ಹೆಚ್ಚು ಹೆಚ್ಚಾಗಿ ಬಡವ ಹಾಗೂ ಕಡಿಮೆ ಅವಕಾಶ ದೊರಕಿದ್ದ ಜನರಿಗೆ ಒದಗಿಸಿ ಅಭಿವೃದ್ಧಿ ಹೊಂದಿದವರನ್ನು - ಹೊಂದದವರನ್ನು ಒಂದೇ ಮಟ್ಟಕ್ಕೆ ತಂದು ಅಭಿವೃದ್ಧಿಗೊಳಿಸುವ ಚರ್ಚೆ ಇದೆ.

## 6.9 ರಾಲ್ಸ್‌ರವರ ನ್ಯಾಯ ಸಿದ್ಧಾಂತ

1971ರಲ್ಲಿ ರಾಲ್ಸ್‌ರವರು ಬರೆದ ನ್ಯಾಯದ ಒಂದು ಸಿದ್ಧಾಂತವೆಂಬ ಬರಹದಿಂದ ಈ ಚರ್ಚೆಯನ್ನು ಆಯ್ದು ಇಲ್ಲಿ ವಿವರಿಸಲಾಗಿದೆ. ಇವರ ಪ್ರಕಾರ ಒಂದು ಉತ್ತಮ ಸಮಾಜ ಹಲವಾರು ಉತ್ತಮ ಗುಣಗಳನ್ನು ಹೊಂದಿರುತ್ತದೆ. ಅದರಲ್ಲಿ

ಪ್ರಮುಖವಾದದ್ದೇ ನ್ಯಾಯ ಎಂಬುದು. ಆದರೆ ನ್ಯಾಯ ಎಂಬುದು ಹಲವಾರು ಉತ್ತಮ ಗುಣಗಳಲ್ಲಿ ಒಂದೇ ಹೊರತು ಅದೊಂದೇ ಉತ್ತಮ ಸಮಾಜವನ್ನು ಸೃಷ್ಟಿಸಲು ಸಾಧ್ಯವಿಲ್ಲಾ ಎಂದಿದ್ದಾರೆ. ಇಲ್ಲಿ ಯಾರಾದರೂ ಸಾಮಾಜಿಕ ಅಭಿವೃದ್ಧಿಯಲ್ಲಿ ನ್ಯಾಯದ ಪಾತ್ರವನ್ನು ಅಲ್ಲಗಳೆದರೆ ಅವರು, ಆ ಸಮಾಜದ ನೈತಿಕತೆಯನ್ನೇ ಹಾಳು ಮಾಡುತ್ತಿದ್ದಾರೆಂದರೂ ತಪ್ಪಾಗಲಾರದು ಎಂದು ಪ್ರಾರಂಭಿಸುತ್ತಾರೆ.

ರಾಲ್ಸರವರ ಪ್ರಕಾರ, ನ್ಯಾಯದ ಸಮಸ್ಯೆ ಎಂದರೆ, ಸಮಾಜದಲ್ಲಿನ ಹಂಚಿಕೆಯ ವ್ಯವಸ್ಥೆಯನ್ನು ಕೇವಲ ಕಾನೂನಾತ್ಮಕವಾಗಿ ಮಾಡುವುದೇ ಆಗಿದೆ. ಇವರ ಪ್ರಕಾರ, ಸಮಾಜದಲ್ಲಿ ಸೇವೆ, ಹಕ್ಕು, ಸ್ವಾತಂತ್ರ್ಯ, ಅಧಿಕಾರ, ಅವಕಾಶ, ಆದಾಯ, ಯಾವುದನ್ನೇ ಆಗಲೀ, ಕೇವಲ ಕಾನೂನಾತ್ಮಕ ಹಂಚಿಕೆ, ಸರಿಯಲ್ಲಾ ಎಂಬುದು. ಕಾರಣ, ಈ ರೀತಿ ನಿರ್ಧರಿತ ಹಂಚಿಕೆ, ಸಮಾಜದಲ್ಲಿನ ಸ್ಥಿತಿಗತಿಗಳನ್ನು ಯಥಾವತ್ತಾಗಿ ಒಪ್ಪಿಕೊಂಡಂತೆ ಪ್ರತಿಪಾದಿಸುತ್ತದೆ ಎಂಬುದು. ಇಲ್ಲಿ ವ್ಯಕ್ತಿ ಯಾ ಸಮುದಾಯಗಳ ಸ್ಥಿತಿ-ಗತಿಗಳನ್ನು ಅಲ್ಲಗೆಳೆಯುವ ಸಾಧ್ಯತೆ ಇದೆ ಎಂದು ಇವರು ಅಭಿಪ್ರಾಯಪಟ್ಟಿದ್ದಾರೆ. ಈ ಕಾರಣದಿಂದ ಇಲ್ಲಿ ನೈತಿಕವಾಗಿ ವ್ಯಕ್ತಿ ಯಾ ಗುಂಪಿಗೆ ಮೌಲ್ಯ ದೊರಕದಿರಬಹುದೆಂಬ ಅನುಮಾನ ಸಹಾ ಇವರು ವ್ಯಕ್ತಪಡಿಸಿದ್ದಾರೆ. ಈ ನಿಟ್ಟಿನಲ್ಲಿ ಉಪಯುಕ್ತತಾ ವಾದಿಗಳ ಸಂಖ್ಯೆ ಆಧಾರಿತ ಸಂತೋಷದ ಹಂಚಿಕೆ ತತ್ವವನ್ನು ಇವರು ಟೀಕಿಸಿದ್ದಾರೆ. ಇಲ್ಲಿ ವ್ಯಕ್ತಿಗತವಾದ ಬೆಲೆ ಸಿಕ್ಕಿಲ್ಲ ಎಂಬುದು ಇವರ ಚರ್ಚೆ.

ಈ ಕಾರಣಕ್ಕಾಗಿ ರಾಲ್ಸ ತಮ್ಮದೇ ಆದ ಚಿಂತನೆಯೊಂದನ್ನು ಮಾರ್ಗೋಪಾಯವಾಗಿ ತಿಳಿಸಿದ್ದಾರೆ. ಇಲ್ಲಿ ಸಾಮಾಜಿಕ ಒಪ್ಪಂದದ ಮಾರ್ಗದಲ್ಲಿಯೇ ಇವರು ತಮ್ಮ ಚರ್ಚೆಯನ್ನು ಸಹಾ ಬೆಳೆಸಿದ್ದಾರೆ. ಈ ಸಂದರ್ಭದಲ್ಲಿ ಇವರು, ನಾಗರೀಕ ಸಮಾಜವನ್ನು ಕ್ಷಣಕಾಲ ಸ್ವಾಭಾವಿಕ (ಪರಿಸ್ಥಿತಿಯಲ್ಲಿ) ಪರಿಸರದಲ್ಲಿ ಇರಿಸಿ ಆ ಪರಿಸರದಲ್ಲಿ ಈ ಜನರಿಗೆ ಯಾವುದೇ ಬೇಕು ಬೇಡವಿಲ್ಲದ ಮನಃ ಸ್ಥಿತಿಯನ್ನು ನೀಡಿ ಯಾವ ರೀತಿಯ ಭೇದವೂ ಈ ಭಾಗದಲ್ಲಿರುವಂತೆ ಮಾಡಿ ಅಲ್ಲಿ ಇವರ 'ನ್ಯಾಯದ' ಪರಿಕಲ್ಪನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ವಿವರಣೆ ನೀಡಿದ್ದಾರೆ.

ಈ ಪರಿಸ್ಥಿತಿಯಲ್ಲಿ ಪ್ರತೀ ವ್ಯಕ್ತಿಯು ನ್ಯಾಯಯುತವಾಗಿ ತನ್ನ ಸ್ಥಿತಿಯನ್ನು ಉತ್ತಮಗೊಳಿಸಿಕೊಳ್ಳಲು ಯತ್ನಿಸಿದರೂ ಅದು ಮತ್ತೊಬ್ಬರಿಗೆ ತೊಂದರೆ ನೀಡದಂತೆ ನೋಡಿಕೊಳ್ಳುತ್ತಾನೆ. ಇವರಿಗೆ ಈ ಸಂದರ್ಭದಲ್ಲಿ ತನ್ನತ್ವ ಇದ್ದರೂ ನಾನತ್ವ ಇಲ್ಲ ಇವರು ಯಾವುದೇ ಕಾರಣಕ್ಕೂ risk ತೆಗೆದುಕೊಳ್ಳಲು ತಯಾರಿಗಿರುವುದಿಲ್ಲಾ. ಇವರು ತಮ್ಮ ನಡುವೆ ಯಾವುದೇ ರೀತಿಯ ಸಣ್ಣ ಅಪಾಯವೂ ಆಗದಂತೆ ಪರಸ್ಪರ ವರ್ತಿಸುತ್ತಾರೆ, ಅಂದರೆ, ಪ್ರತೀ ಒಬ್ಬರೂ ಈ ಪರಿಸ್ಥಿತಿಯಲ್ಲಿ ತಮಗೆ ಬೇಕಾದ್ದನೆಲ್ಲಾ, ಅತ್ಯಂತ ಕಡಿಮೆ ಮಟ್ಟದಲ್ಲಿ ಅವಶ್ಯಕತೆಗಳನ್ನು ನಿರ್ಧರಿಸಿ ಪಡೆಯುತ್ತಾರೆ ಹಾಗಾಗಿ ಎಲ್ಲರೂ ಒಂದೇ ತೆರನಾದ benifitನ್ನು ಪಡೆದುಕೊಳ್ಳುತ್ತಾರೆ ಎಂದು ವಿವರಿಸಿದ್ದಾರೆ.

ಹೀಗೆ ಮಾಡುವುದರಿಂದ ಮೂರು ಮುಖ್ಯವಾದ ನಾಯಾಂಶಗಳು ಹೊರಬೀಳುತ್ತದೆ. ಅವುಗಳೆಂದರೆ

1. ಸಮಾನ ಸ್ವಾತಂತ್ರ್ಯ ಅಂದರೆ ಹೋಲಿಕೆ ಮಾಡಿದಾಗ್ಯೂ ಇಬ್ಬರ ನಡುವಿನ ಸ್ವಾತಂತ್ರ್ಯ ಒಂದೇ ತೆರನಾಗಿರುವುದು ಎಂಬುದಾಗಿದೆ. ಹೀಗಾಗಿ ಯಾರೂ ಹೆಚ್ಚು ಸ್ವಾತಂತ್ರ್ಯ ಪಡೆಯದೇ ಇದರಿಂದ ಮತ್ತೊಬ್ಬರಿಗೆ ಹಾನಿಯಾಗದಂತೆ ನೋಡಿಕೊಳ್ಳುತ್ತಾರೆ.
2. ಎಲ್ಲರಿಗೂ ಸಮಾನ ಅವಕಾಶ ದೊರಕಿಸಿಕೊಡುವುದು ಅದರಲ್ಲೂ ಅಧಿಕಾರ ಪಡೆಯುವಲ್ಲಿ, ಇದರ ಪ್ರಾಮುಖ್ಯತೆಯನ್ನು ಗಮನದಲ್ಲಿಡುವುದು.
3. ವ್ಯತ್ಯಾಸ ತತ್ವವನ್ನು 'ಸಮಾನ' ವೆಂಬ ತತ್ವದಂತೆ ಪರಿಪಾಲಿಸುವುದು. ಅಂದರೇ, ಸಮಾಜದ ಅವಶ್ಯಕ ಅಂಶಗಳ ಹಂಚಿಕೆಯಲ್ಲಿ ಯಾರಿಗೆ ಈ ಅವಕಾಶಗಳು ದೊರಕಿರುವುದೇ ಇಲ್ಲವೋ ಅವರಿಗೆ ಹೆಚ್ಚಿನ ಅವಕಾಶ ದೊರಕಿಸಿ, ಯಾರು ಈ ಅವಕಾಶಗಳನ್ನು ಈಗಾಗಲೇ ಪಡೆದಿರುತ್ತಾರೊ ಅವರು ಅಂತಹ ಅವಕಾಶಗಳನ್ನು ಕಡಿಮೆ ಪಡೆದು ಸಮಾನತೆಯನ್ನು ಸಂಧಿಸುವುದು ಎಂಬುದಾಗಿದೆ.

ಒಮ್ಮೆ ಈ ಸಮಾನತೆಯನ್ನು ಸಂಧಿಸಿದ್ದೇ ಆದರೆ ಉಳಿದೆಲ್ಲಾ ನಿರ್ಧರಿತ ಕಾನೂನಾಂಶಗಳನ್ನು ಸಮಾನವಾಗಿಯೇ ಎಲ್ಲರಿಗೂ ಅನ್ವಯ ಮಾಡುವುದೇ ಆಗಿದೆ.

ಈ ಮೇಲಿನ ರಾಲ್ಸರವರ ಮೂರು ತತ್ವಗಳು ಒಂದನ್ನೊಂದು ಆಧರಿಸಿ ನಿಂತಿರುವುದರಿಂದ ಇದನ್ನು ಸರಪಳಿಯಂತೆ ಹೊಂದಿಕೊಂಡ ಚಿಂತನೆ ಎಂದೂ ಗುರುತಿಸಿದ್ದಾರೆ. ಇಲ್ಲಿ ನಾರ್ಮನ್ ಬ್ಯಾರಿಯವರು ತಿಳಿಸಿದಂತೆ ರಾಲ್ಸರವರು ಉತ್ತಮವಾದ ಹಾಗೂ ಅನುಪಯುಕ್ತವಾದ ಎರಡರ ನಡುವೆ ಸರಪಳಿ ಸಂಬಂಧ ಏರ್ಪಡಿಸಿ ಅನುಪಯುಕ್ತವಾದುದರ ದೌರ್ಬಲ್ಯಗಳನ್ನು ಉತ್ತಮವಾದುದು ತುಂಬಿಕೊಡುತ್ತದೆ ಎಂದು ಹೇಳಿ ವಿವರಣೆ ನೀಡಿದ್ದಾರೆ. ಜೆ. ಸ್ವಾಮ್ಯುಯಲ್ ಎಂಬುವರು ರಾಲ್ಸರವರ ಈ ಚಿಂತನೆಯನ್ನು ಕುರಿತು ರಾಲ್ಸ ಒಬ್ಬ ಪುನರ್ ಹಂಚಿಕಾವಾದಿ ಎಂದು ತಿಳಿಸಿದ್ದಾರೆ.

## ನಿಮ್ಮ ಪ್ರಗತಿ ಪರಿಶೀಲನೆ - 1

**ಸೂಚನೆ:** 1. ಈ ಕೆಳಗೆ ಬಿಟ್ಟಿರುವ ಜಾಗವನ್ನು ನಿಮ್ಮ ಉತ್ತರಕ್ಕೆ ಉಪಯೋಗಿಸಿಕೊಳ್ಳಿ.

2. ಈ ಘಟಕದ ಕೊನೆಯಲ್ಲಿ ನೀಡಿರುವ ಉತ್ತರದೊಂದಿಗೆ ನಿಮ್ಮ ಪ್ರಗತಿಯನ್ನು ಪರಿಶೀಲಿಸಿಕೊಳ್ಳಿ.

**1. ಸಮಾನತೆ ಎಂದರೇನು? ವಿವರಿಸಿ.**

**2. ಸಮಾನತೆಯ ವಿವಿಧ ಮುಖಗಳನ್ನು ವಿಮರ್ಶಿಸಿ.**

**3. ನ್ಯಾಯದ ಬಗೆಗಿನ ವಿವಿಧ ಕಲ್ಪನೆಗಳನ್ನು ವಿಮರ್ಶಿಸಿ.**

**4.** ರಾಲ್ಸ್‌ರವರ ನ್ಯಾಯ ಸಿದ್ಧಾಂತವನ್ನು ಪರಿಶೀಲಿಸಿ.

.............................................................................................................................................

.............................................................................................................................................

.............................................................................................................................................

.............................................................................................................................................

.............................................................................................................................................

.............................................................................................................................................

.............................................................................................................................................

.............................................................................................................................................

## 6.10 ಸಮಾರೋಪ

ಈ ಮೇಲಿನ ಸಮಾನತೆ ಹಾಗೂ ರಾಲ್ಸರವರ ನ್ಯಾಯ ಸಿದ್ಧಾಂತಗಳು, ಪ್ರಚಲಿತ ರಾಜಕೀಯ ಸಿದ್ಧಾಂತದ ಮುಖ್ಯ ಕೇಂದ್ರ ಬಿಂದುಗಳಾಗಿವೆ. 20ನೇ ಶತಮಾನದ ಈ ಚರ್ಚೆಗಳು, ಈ ಚಿಂತನೆಗಳಿಗೆ ಹೊಸ ಆಯಾಮ ನೀಡಿ ಈ ಬಗ್ಗೆ ಹೆಚ್ಚಿನ ಸಂಶೋಧನೆಗೆ ಎಡೆ ಮಾಡಿಕೊಟ್ಟಿವೆ.

ಆದರೂ ಇವುಗಳ ಟೀಕಾಕಾರರು ಈ ಚಿಂತನೆಗಳು ಬಂಡವಾಳಶಾಹಿ ಚಿಂತನೆಗಳೆಂದೇ ಪರಿಗಣಿಸಿ ಇವು ಶೋಷಣೆಯನ್ನು ಕಡಿಮೆಗೊಳಿಸಬಹುದೇ ಹೊರತು ತೊಡೆದು ಹಾಕಲು ಸಾಧ್ಯವಿಲ್ಲಾ ಎಂಬ ಚರ್ಚೆಗಳಿಗೆ ಆಸ್ಪದ ನೀಡಿದ್ದಾರೆ.

ಈ ಮೇಲಿನ ಎರಡೂ ಚಿಂತನೆಗಳು ನೈತಿಕವಾದ, ತತ್ವಜ್ಞಾನ ಸಂಬಂಧಿತ ಚರ್ಚೆಗಳಾಗಿದ್ದು , ಇವು ಸಾರ್ವಜನಿತ ನೀತಿನಿರೂಪಣೆಗೆ ಸಹಾಯಕಾರಿಯಾಗಿವೆ ಎಂದಿದ್ದಾರೆ.

## 6.11 ಒಟ್ಟಾರೆ ಅಭಿಪ್ರಾಯ

ಪ್ರಿಯ ವಿದ್ಯಾರ್ಥಿಗಳೇ, ತಾವು ಈ ಅಧ್ಯಯನದಲ್ಲಿ ಸಮಾನತೆ ಹಾಗೂ ರಾಲ್ಸರವರ ನ್ಯಾಯ ಸಿದ್ಧಾಂತಗಳನ್ನು ಅಭ್ಯಸಿಸಿದ್ದೀರಿ.

ಇವುಗಳನ್ನು ಪ್ರಾಯೋಗಿಕವಾಗಿ ಆಚರಣೆಗೆ ತರಲು ಕಷ್ಟವಾಗಬಹುದು. ಆದರೆ ಒಂದು ಚಿಂತನೆಯಾಗಿ ಇದು ಸಮಾಜದಲ್ಲಿನ ನೋವಿನ ನಿವಾರಣೆಗೆ ಮದ್ದಾಗಿ, ಉತ್ತಮ ಸಮಾಜದ ರಚನೆಗೆ ಸಹಾಯಕಾರಿಯಾಗುವುದರಲ್ಲಿ ಸಂದೇಹವಿಲ್ಲಾ.

## 6.12 ಕಠಿಣ ಪದಗಳು

ಅನ್ಯಾಯ - ನ್ಯಾಯಯುತವಾಗಿಲ್ಲದಿರುವುದು

ಸಮಾನತೆ - ಎಲ್ಲಾ ಕ್ಷೇತ್ರಗಳಲ್ಲೂ ಎಲ್ಲರಿಗೂ ಮುಕ್ತ ಅವಕಾಶವಿರುವುದು

ಅಸಮಾನತೆ - ಅವಕಾಶದಿಂದ ವಂಚಿತವಾಗಿರುವುದು

## 6.13 ಕೆಲವು ಉಪಯುಕ್ತ ಪುಸ್ತಕಗಳು


| | | |
|---|---|---|
| Rawls John | : | A theory of Justice |
| Paul Miller & Paul (Ed) | : | Liberty and Equality |
| Goffman | : | Liberal Equality |
| Doctor Adi H | : | Issues in Political theory |


## 6.14 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು

<u>ನಿಮ್ಮ ಪ್ರಗತಿ ಪರಿಶೀಲನೆ</u> **- 1**

1. ನೋಡಿ ವಿಭಾಗ 6.2
2. ನೋಡಿ ವಿಭಾಗ 6.3
3. ನೋಡಿ ವಿಭಾಗ 6.5 & 6.6
4. ನೋಡಿ ವಿಭಾಗ 6.9

# ಘಟಕ 7 ಕಾನೂನು ಹಾಗೂ ನೈತಿಕತೆ, ಕಾನೂನು ಮತ್ತು ಸ್ವಾತಂತ್ರ, ಕಾನೂನು ಮತ್ತು ಸಮಾನತೆ

<u>ರಚನೆ</u>


7.0 ಉದ್ದೇಶಗಳು

7.1 ಪ್ರಸ್ತಾವನೆ

7.2 ಕಾನೂನು ಹಾಗೂ ಇತರ ಪರಿಕಲ್ಪನೆಗಳೊಂದಿಗೆ ಅದರ ಸಂಬಂಧ

7.3 ಕಾನೂನು ಹಾಗೂ ನೈತಿಕತೆ

7.4 ಕಾನೂನು ಹಾಗೂ ಸ್ವಾತಂತ್ರ

7.5 ಕಾನೂನು ಹಾಗೂ ಸಮಾನತೆ

7.6 ಸಮಾರೋಪ

7.7 ಒಟ್ಟಾರೆ ಅಭಿಪ್ರಾಯ

7.8 ಕಠಿಣ ಪದಗಳು

7.9 ಕೆಲವು ಉಪಯುಕ್ತ ಪುಸ್ತಕಗಳು

7.8 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು

## 7.0 ಉದ್ದೇಶಗಳು

ಪ್ರಿಯ ವಿದ್ಯಾರ್ಥಿ, ಈ ಅಧ್ಯಾಯದ ಉದ್ದೇಶ, ತಮಗೆ ಕಾನೂನು ಹಾಗೂ ಇತರೇ ಪರಿಕಲ್ಪನೆಗಳೊಂದಿಗೆ ಅದರ ಸಂಬಂಧವನ್ನು ಪರಿಚಯಿಸುವುದೇ ಆಗಿದೆ. ಅವುಗಳು ವಿಶಾಲದೃಷ್ಟಿಯಲ್ಲಿ ಗಮನಿಸಿದರೆ, ಒಂದರ ಮೇಲೊಂದು ಪರಾವಲಂಬಿಗಳಾಗಿಯೂ, ಪರಸ್ಪರ ಪೂರಕವಾಗಿಯೂ ಇರುವುದು ಕಂಡು ಬರುತ್ತದೆ. ಈ ಅಧ್ಯಾಯ ಓದಿದ ನಂತರ ತಮಗೆ ಕಾನೂನು, ಚಾರಿತ್ರಿಕ ಬೆಳವಣಿಗೆಯ ಕೊಡುಗೆ ಎಂತಲೂ ಹಾಗೂ ಇದು ಕಾಲಾನುಕ್ರಮಕ್ಕೆ ಸ್ಪಂದಿಸಿ ಅಸ್ತಿತ್ವ ಪಡೆದ ಚಿಂತನೆ ಎಂದೂ ಪರಿಚಯವಾಗುತ್ತದೆ. ಅಲ್ಲದೇ ಇಂತಹಾ ಕಾನೂನಿನ ಅಧ್ಯಯನವನ್ನು ವಿವಿಧ ಚಿಂತನಾ ಶಾಲೆಗಳು ನಡೆಸಿರುವುದೂ ಸಹಾ ತಮಗೆ ಇದರಿಂದ ಅರಿವಾಗುತ್ತದೆ. ಇದಲ್ಲದೆ, ಕಾನೂನು ಕೂಡಾ ಕೆಲವೊಮ್ಮೆ ತಾತ್ವಿಕ ಅಂಶಗಳಿಂದ ಒಳಗೊಂಡಿದ ಅಧ್ಯಯನವೆಂದೂ ಪರಿಚಯವಾಗುತ್ತದೆ. ಹಾಗಾಗಿ ತಾವು ಈ ಅಧ್ಯಾಯವನ್ನು ಅಭ್ಯಸಿಸಿದ ನಂತರದಲ್ಲಿ ತಮಗೆ ಕಾನೂನು ಹಾಗೂ ಇತರೆ ಪರಿಕಲ್ಪನೆಗಳ ನಡುವಿನ ಸಂಬಂಧದ ಪೂರ್ಣ ಅರಿವಾಗುತ್ತದೆ.

## 7.1 ಪ್ರಸ್ತಾವನೆ

ಕಾನೂನು ಎಂಬುದು ಒಂದು ಪರಿಸ್ಥಿತಿ. ಈ ಪರಿಸ್ಥಿತಿಯಲ್ಲಿ ವ್ಯಕ್ತಿಯ ಸಮಾನವಾಗಿ ಸಮಾಜದಲ್ಲಿ ಎಲ್ಲರೊಂದಿಗೆ ವರ್ತಿಸುತ್ತಾನೆ, ಹಾಗೆಯೇ ಇದು ಸಮಾಜದಲ್ಲಿ ಸರ್ವರನ್ನು ನಿಯಂತ್ರಿಸಿ ರಚನಾತ್ಮಕ ಕಾರ್ಯ ನಿರ್ವಹಿಸಲು ಅವಕಾಶ ಮಾಡಿಕೊಡುತ್ತದೆ. ಈ ಕಾರಣದಿಂದ ಕಾನೂನನ್ನು ಅರ್ಥಮಾಡಿಕೊಳ್ಳುವ ಮುನ್ನವೇ, ಈ ಕಾನೂನಿನಲ್ಲಿರುವ ವಿವಿಧತೆಗಳನ್ನು ಅರ್ಥಮಾಡಿಕೊಳ್ಳುವುದು ಅವಶ್ಯಕವಾಗುತ್ತದೆ. ಅವುಗಳೆಂದರೆ

1. ವಿವರಣಾತ್ಮಕ (ವೈಜ್ಞಾನಿಕ) ಕಾನೂನು

2. ಸೂಚನಾತ್ಮಕ ಕಾನೂನು ಎಂಬುದಾಗಿದೆ.

ಮೊದಲನೆಯದಾದ ವಿವರಣಾತ್ಮಕ ಕಾನೂನು, ಭೂಮಂಡಲದಲ್ಲಿ ಆಚರಣೆಯಲ್ಲಿದ್ದು ಯಾವ ನಿಯಂತ್ರಣಕ್ಕೂ ಒಳಪಡದೆ, ಕಾರ್ಯಗೊಳ್ಳುತ್ತದೆ. ಇದನ್ನು ಗುರುತಿಸಬಹುದೇ ಹೊರತು, ಇದರಿಂದ ತಪ್ಪಿಸಿಕೊಳ್ಳಲು ಇದನ್ನು ಬದಲಾಯಿಸಲು ಸಾಧ್ಯವಿಲ್ಲ. ಹಾಗೆಯೇ ಇದನ್ನು ಆಚರಣೆಗೊಳಿಸಲು ಯಾವುದೇ ರೀತಿಯ ಶಕ್ತಿಯ ಅವಶ್ಯಕತೆ ಇಲ್ಲಾ. ಇದೊಂದು ಅನಿಯಂತ್ರಿತ ವಾದ ಶಕ್ತಿ ಎಂದಿದ್ದಾರೆ. ಹೀಗಾಗಿ ಇದರಲ್ಲಿ ಸರಿತಪ್ಪು, ಸತ್ಯ ಅಸತ್ಯದ ಪ್ರಶ್ನೆಗಳು ಉದ್ಭವಿಸುವುದಿಲ್ಲ. ಆದರೆ ಜ್ಞಾನದ ಬಳಕೆಯಿಂದ ಇದರ ಅನುಕೂಲಗಳನ್ನು ನಾವು ಪಡೆಯಬಹುದಾಗಿದೆ. ಗುರುತ್ವಾಕರ್ಷಣ ಶಕ್ತಿ ಎಂಬುದು ಇದಕ್ಕೆ ಉದಾಹರಣೆ ಆಗಿದೆ.

ಆದರೆ, ಎರಡನೆಯದಾದ ಸೂಚನಾತ್ಮಕ ಕಾನೂನು, ವ್ಯಕ್ತಿ ಓರ್ವನು ಏನನ್ನು ಮಾಡಬಹುದು, ಮಾಡಲಾಗುವುದಿಲ್ಲ, ಯಾವ ರೀತಿ ವರ್ತಿಸಬೇಕು ಎಂಬ ಇತರೇ ಚಿಂತನೆಗಳನ್ನು ಚರ್ಚಿಸುತ್ತದೆ. ಪ್ರತೀ ಸಂಘಟನೆಯೂ ಸಹಾ ಈ ರೀತಿಯ ಸೂಚನಾತ್ಮಕ ಕಾನೂನುಗಳನ್ನು ರಚಿಸಿಕೊಳ್ಳುತ್ತವೆ. ಈ ಕಾನೂನು ಆ ಸಂಘಟನೆಯಲ್ಲಿ ಶ್ರಮಿಸುವ ವರ್ಗದ ಮೇಲೆ ಹೇರಲ್ಪಡುತ್ತದೆ. ಇದನ್ನು ಯಾರಾದರೂ, ಕಾರ್ಯರೂಪಗೊಳಿಸದಿದ್ದರೆ, ಅಥವಾ ಗೌರವಿಸದಿದ್ದರೆ ಅವರು ಶಿಕ್ಷೆಗೆ ಗುರಿಯಾಗುತ್ತಾರೆ. ಹೀಗೆ, ಸಂಘಟನೆ ಹೊರಗೆ, ಒಳಗೆ, ಇರುವ ಕಾನೂನುಗಳೇ ಸೂಚನಾತ್ಮಕ ಕಾನೂನು ಎನಿಸಿದೆ.

ಈ ಸೂಚನಾತ್ಮಕ ಕಾನೂನುಗಳು, ಮಾನವ ನಿರ್ಮಿತವಾದದ್ದು, ಹಾಗೂ ಮಾನವ ಸಮಾಜ ಇದನ್ನು ಒಪ್ಪಿಕೊಂಡಂತಹದ್ದೂ ಕೂಡಾ. ಇದರಿಂದ ಮಾನವರ ನಡತೆಯ ನಿಯಂತ್ರಣ ಸಹಾ ಕೆಲವೊಮ್ಮೆ ಇದರ ಮೇಲೆ ನಿರ್ಧರಿತವಾಗಿರುತ್ತದೆ. ಇಂತಹಾ ಕಾನೂನುಗಳು, ಆ ಸಮಾಜದಲ್ಲಿನ ಸಂಸ್ಕೃತಿ, ಪ್ರಜ್ಞೆ, ಅಭಿಪ್ರಾಯ, ಸಂಪ್ರದಾಯ ಇವುಗಳ ಮೇಲೆ ಅವಲಂಬಿತವಾಗಿದ್ದು ಇವುಗಳು ಬದಲಾವಣೆಗೆ ಸಿಲುಕುತ್ತದೆ. ನ್ಯಾಯಾಧಾರಿತವಾಗಿಯೂ ನಾವು ಕಾನೂನುಗಳ ರಚನೆ ಮಾಡುವುದರಿಂದಲೂ ಇದರಲ್ಲಿ ಸರಿ ತಪ್ಪು, ಸತ್ಯ-ಅಸತ್ಯಗಲ

ಪರಿಚಯ ಸಾಧ್ಯ. ಆದರೆ, ಇದನ್ನು ಯಾವುದೇ ಪೂರ್ವಾಗ್ರಹವಿಲ್ಲದೇ ಆಚರಣೆಗೆ ತಂದದ್ದೇ ಆದರೆ, ಇದು ಯಾವುದೇ ತೆರನಾದ ಗೊಂದಲಕ್ಕೆ ಎಡೆಮಾಡದಂತೆ ಕಾರ್ಯನಿರ್ವಹಿಸುತ್ತದೆ.

ರಾಜ್ಯಶಾಸ್ತ್ರದಲ್ಲಿ ಹಾಗೂ ಇತರೇ ಸಮಾಜಶಾಸ್ತ್ರದಲ್ಲಿ, ಹಾಗೂ ಕಾನೂನುಶಾಸ್ತ್ರದಲ್ಲಿ, ಈ ಕಾನೂನನ್ನು ಸೂಚನಾತ್ಮಕ ಕಾನೂನು ಎಂಬ ಅರ್ಥದಲ್ಲಿಯೇ ಚರ್ಚೆಗೆ ಗುರಿಪಡಿಸಲಾಗಿದೆ.

## 7.2 ಕಾನೂನು ಹಾಗೂ ಇತರೇ ಪರಿಕಲ್ಪನೆಗಳು : ಇವುಗಳ ನಡುವಿನ ಸಂಬಂಧ

ಕಾನೂನು ಯಾವುದೇ ಸಮಾಜದ ಕೇಂದ್ರಬಿಂದು. ಎಲ್ಲ ಕಾಲದಲ್ಲೂ ರಾಜ್ಯಶಾಸ್ತ್ರ ಚಿಂತಕರು ಇದರ ಚರ್ಚೆಯನ್ನು ಈ ಕಾನೂನಿನ ಕಾರ್ಯಾಚರಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡೇ ನಡೆಸಿದ್ದಾರೆ, ಹಾಗಾಗಿ ಈ ಚರ್ಚೆಗಳು ಒಂದಲ್ಲೊಂದು ರೀತಿಯಲ್ಲಿ ವಿವಿಧ ಪರಿಕಲ್ಪನೆಗಳನ್ನು ದೃಷ್ಠಗೆ ತೆಗೆದುಕೊಳ್ಳಲೇಬೇಕಾದ ಪ್ರಸಂಗವಿದೆ. ಪ್ಲೇಟೋರವರ ಕಾಲದಿಂದ ಪ್ರಾರಂಭವಾಗಿ ಜಾನ್‌ರಾಲ್ಸ್‌ರವರ ಕಾಲದವರೆವಿಗೆ, ಕಾನೂನು ಚರ್ಚೆಗಳು ಸೈದಾಂತಿಕ ಹಾಗೂ ಪ್ರಾಯೋಗಿಕ ಚರ್ಚೆಗಳನ್ನು ಒಳಗೊಂಡಿದೆ. ಕಾನೂನಿನ ಉಗಮವನ್ನು ಅಧ್ಯಯನಿಸಿದರೆ ಇದು ಸತ್ಯವೆಂಬುದು ಅರಿವಾಗುತ್ತದೆ. ಆದರೆ ಹೆಚ್ಚಿನ ಜನರು ಕಾನೂನು, ಚಾರಿತ್ರಿಕವಾಗಿ ಬೆಳೆದದ್ದು ಎಂಬ ಚರ್ಚೆ ಮಾಡುವುದರಿಂದ ಇದರೊಂದಿಗೆ ಇತರ ಪರಿಕಲ್ಪನೆಗಳ ಸಂಬಂಧ ಸ್ವಾಭಾವಿಕವಾದದ್ದೆಂದು ಇವರುಗಳು ಅಭಿಪ್ರಾಯ ಪಡುತ್ತಾರೆ. ಹೀಗಾಗಿ ಲಾಸ್ಕಿಯವರ ಬರಹದಲ್ಲಿ ಸಮಾಜಿಕಾಂಶ ಆಧಾರಿತವಾದ ಕಾನೂನಿನ ಚರ್ಚೆ ಇವೆ, ಹಾಗೂ ಇದೇ ರೀತಿಯಲ್ಲಿ ನೈಸರ್ಗಿಕ ಕಾನೂನಿನ ಚರ್ಚೆ ಬಂದಾಗ ನೈತಿಕತೆಯ ಪ್ರಶ್ನೆ ಬೆಳಕಿಗೆ ಬರುತ್ತದೆ. ಆಸ್ಟಿನ್‌ರವರ ಚಿಂತನೆಗಳಲ್ಲಿಯೂ ಸಹಾ ಇದೇ ಕಸಿಯ ಅಉಭವವಾಗುತ್ತದೆ.

ಅಲ್ಲದೇ ಕಾನೂನಿನ ಆಚರಣೆಯ ಹಂತದಲ್ಲಿ, ಕಾನೂನು ಒಂದು ಸಮಾಜದ ಸಂಸ್ಕೃತಿ, ಎಲ್ಲವನ್ನು ಅನುಸರಿಸಿ ರಚಿಸಲ್ಪಡುತ್ತದೆ. ಹಾಗಾಗಿ ಕಾನೂನಿನ ಚೌಕಟ್ಟಿನ ಸಂಪೂರ್ಣ ಅರಿವಾಗಬೇಕಾದರೆ, ಇತರೇ ಪರಿಕಲ್ಪನೆಗಳ ಅವಶ್ಯಕತೆ ಕೂಡಾ ಇದೆ ಎಂಬುದು ಇಲ್ಲಿ ಗಮನಕ್ಕೆ ತಂದುಕೊಳ್ಳಬೇಕಾಗಿದೆ.

## 7.3 ಕಾನೂನು ಹಾಗೂ ನೈತಿಕತೆ

ತಾಂತ್ರಿಕವಾಗಿ ನೋಡಿದರೆ, ಕಾನೂನನ್ನು ರಚನಾತ್ಮಕ ದೃಷ್ಟಿಕೋನದಿಂದ ಮಾತ್ರ ನೋಡಿ ಕಾರ್ಯಚರಣಾಶೀಲತೆಯನ್ನು ಇದರ ಮುಖ್ಯ ಅಂಶವೆಂದು ಕಂಡುಕೊಳ್ಳಬಹುದಾಗಿದೆ. ನೈತಿಕತೆಯು, ನ್ಯಾಯ ಹಾಗೂ ಸರಿ-ತಪ್ಪುಗಳ ಹಿನ್ನೆಲೆಯಲ್ಲಿ ವಿವರಣೆಗೊಂಡಿದೆ. ಆದರೆ, ಕಾನೂನು ಎಂಬುದು ನೈತಿಕವಾಗಿರಬೇಕೆಂದು ತಿಳಿಸಿದಲ್ಲಿ ಅದು ಆದರ್ಶವೆನಿಸುವುದು. ಆದರೆ ಇವೇ, ಆಚರಣೆಯಲ್ಲಿ ವಿಭಿನ್ನ ರಸ್ತೆಯಲ್ಲಿ ಪ್ರತಿಪಾದಿಸಲ್ಪಡುತ್ತವೆ ಎಂಬುದು ಈ ಚರ್ಚೆಯ ಮೊದಲಿಗೆ ಗಮನಕ್ಕೆ ತಂದುಕೊಳ್ಳಬೇಕಿದೆ. ಆದರೆ ಕಾನೂನು ಯಾರನ್ನಾದರೂ, ಒಂದು ರೀತಿಯಲ್ಲಿಯೇ ನಡೆದುಕೊಳ್ಳಬೇಕೆಂದು ಒತ್ತಾಯಿಸಿದರೆ, ಅದು ನೈತಿಕವಾಗಿ ತಪ್ಪು ಎನಿಸುತ್ತದೆ.

ಹೀಗೆ ಕಾನೂನು, ಮಾನವನ ಹೊರವಲಯದ ಚಟುವಟಿಕೆಗಳಿಗೆ ಸಂಬಂಧಿಸಿದ ಚಟುವಟಿಕೆ ಆಗಿದ್ದು, ನೈತಿಕತೆ ಎಂಬುದು ಅವನ ಆಂತರ್ಯದಿಂದ ಹೊರಬಿದ್ದ ಚಿಂತನೆಯಾಗುತ್ತದೆ. ಹಾಗಾಗಿ ಯಾವುದೇ ವ್ಯಕ್ತಿ ತನ್ನಲ್ಲಿ ಕೆಟ್ಟ ಭಾವನೆಗಳಿಗೆ ಅವಕಾಶ ಮಾಡಿಕೊಟ್ಟರೆ, ಅದನ್ನು ಅನೈತಿಕವೆಂದು ಪರಿಗಣಿಸುತ್ತೇವೆ. ನೈತಿಕತೆಯು ಈ ನಿಟ್ಟಿನಲ್ಲಿ ಮಾನವ ಮತ್ತೊಬ್ಬ ಮಾನವನೆಡೆಗೆ ಹೊಂದಿರಬೇಕಾದ ಭಾವನೆಯ ಬಗ್ಗೆ ತಿಳಿಸುತ್ತದೆ. ಕಾನೂನು ಈ ನಿಟ್ಟಿನಲ್ಲಿ ಅನೈತಿಕ ಮಾರ್ಗಕ್ಕೆ ಹೋಗದಂತೆ ನಮ್ಮನ್ನು ತಡೆಯಬಲ್ಲುದಾಗಿದೆ. ನೈತಿಕತೆ, ವಿದ್ಯಾಭ್ಯಾಸದಿಂದ ಬೆಳಕನ್ನು ಕಂಡರೆ, ಸಂಸ್ಕೃತಿಯಿಂದ ಮೆರಗು ಪಡೆದರೆ, ಇದೇ ಕಾನೂನಿನ ಪರಿಪಾಲನೆ ಮಾಡಲು ನಾಗರೀಕರಿಗೆ ಸ್ಫೂರ್ತಿ ನೀಡುವುದು.

ನೈತಿಕವಾಗಿ ಕಾನೂನಿನ ಪರಿಪಾಲನೆಯನ್ನು ಮಾಡದಿದ್ದಲ್ಲಿ ಶಿಕ್ಷೆಯು ಕಾನೂನಿನ ಪರಿಪಾಲನೆಗೆ ಒತ್ತಾಯಿಸುತ್ತದೆ. ಭಯ ಕಾನೂನಿನ ಬೆಂಬಲವಾಗಿರುವ ಕಾರಣ, ಅದನ್ನು ಪರಿಪಾಲಿಸದಿದ್ದಾಗ ನಾಗರೀಕನು ಶಿಕ್ಷೆಗೆ ಒಳಗಾಗುತ್ತಾನೆ, ಆದರೆ ಅನೈತಿಕವಾಗಿ ನಡೆದುಕೊಂಡರೆ ಅದು ಮಾನವನ ಪ್ರಜ್ಞೆಗೆ ನೋವನ್ನು ಉಂಟು ಮಾಡಿ ಅವನಿಗೆ ಪರಿತಪಿಸುವಂತೆ ಮಾಡುತ್ತದೆ.

ಹೀಗಾಗಿ ನೈತಿಕತೆಗೆ ಭದ್ರ ಬುನಾದಿ ಇಲ್ಲದೆ ಚರ್ಚೆಗೆ ಆಸ್ಪದ ದೊರಕಬಹುದಾದರೂ, ಕಾನೂನಿಗೆ ಇಂತಹ ಆಸ್ಪದವಿಲ್ಲ. ಸಂಪ್ರದಾಯ, ಮೂಢನಂಬಿಕೆ ಇವು ನೈತಿಕತೆಗೆ ಆಧಾರವಾದರೂ, ಕಾನೂನು ಅದರ ಸುಧಾರಣೆಗೆ ಸಹಾಯಕಾರಿಯಾಗಿದೆ. ಮಕ್ಕಳ ಮದುವೆ, ಧೂಮಪಾನ ನಿಷೇಧ, ಇತ್ತೀಚಿನ ಕಾನೂನುಗಳು ಇದಕ್ಕೆ ಉತ್ತಮ ಉದಾಹರಣೆಯಾಗಿದೆ.

ಕೆಲವು ಕಾನೂನುಗಳು ನೈತಿಕವಾಗಿ ತಟಸ್ಥವಾಗಿರುತ್ತವೆ. ಆದರೆ ಇವುಗಳನ್ನು ಕೇವಲ ಸಮಾಜದಲ್ಲಿ ಅರಾಜಕತೆ ತಪ್ಪಿಸಲು ಬಳಸಲಾಗುತ್ತದೆ. ಟ್ರಾಫಿಕ್ ಕಾಯ್ದೆ, ಕೇವಲ ಕಾನೂನು ಎಂಬುದಕ್ಕೆ ಉದಾಹರಣೆಯಾಗಿದೆ. ಹೀಗಾಗಿ, ನಮ್ಮ ಸಾಮಾಜಿಕ ಜೀವನ ಎಲ್ಲೆಡೆಯಲ್ಲೂ ಕಾನೂನುಮಯವಾದ ಕಾರಣ ಇವು ಸಹಾ ನಮ್ಮ ನೈತಿಕ ಪ್ರಜ್ಞೆಯೊಂದಿಗೆ ಬದಲಾಗುತ್ತಿವೆ. ಇಲ್ಲದಿದ್ದರೆ ಕಾನೂನುಗಳು ಸಹಾ ಶೋಷಿತ ವ್ಯವಸ್ಥೆಗೆ ಉಪಯುಕ್ತ ಸಾಧನವಾಗುತ್ತಿತ್ತು.

**ಕಾನೂನಿನ ಆಡಳಿತ**

ಈ ಆಡಳಿತ ಈ ಕೆಳಕಂಡ ಕೆಲವು ಅಂಶಗಳನ್ನು ಒಳಗೊಂಡಿವೆ.

1. ಭೂ ಪ್ರದೇಶದ ಕಾನೂನಿನ ಬಗ್ಗೆ ಸಂಪೂರ್ಣ ಮಾಹಿತಿ ಇರಬೇಕು. ಆ ಬಗ್ಗೆ ಎಲ್ಲರಿಗೂ ತಿಳಿಯುವಂತೆ ವ್ಯವಸ್ಥೆ ಆಗಿರಬೇಕು. ಹಾಗೂ ಯಾವ ಕಾನೂನು ಯಾರ ಮೇಲೆ ಯಾವ ಪರಿಣಾಮ ಬೀರುತ್ತದೆ ಎಂಬ ಬಗ್ಗೆ ಮಾಹಿತಿ ಇರಬೇಕು.
2. ಕಾನೂನು ಎಲ್ಲರಿಗೂ ಸಮಾನವಾದವುಗಳಾಗಿದ್ದು ಯಾರಿಗಾಗಿಯೂ ವಿಶೇಷ ಕಾನೂನು ಇರಕೂಡದು.
3. ಯಾವುದೇ ಕಾನೂನನ್ನು ಹಿಂದಿನ ದಿನದಿಂದ ಆಚರಣೆಗೆ ತರದೆ ಅದನ್ನು ರಚಿಸಿದ ಮುಂದಿನ ದಿನದಿಂದಲೇ ಅದು ಆಚರಣೆಗೆ ಬರಬೇಕು.
4. ಅಧಿಕಾರವನ್ನು ಚಲಾಯಿಸುವಲ್ಲಿ ಕಾನೂನಿನ ಚೌಕಟ್ಟು ಹಾಗೂ ಅದಕ್ಕಾಗಿ ರಚಿತವಾದ ಕಾರ್ಯರೂಪದಲ್ಲಿಯೇ ಆಚರಣೆಗೆ ತರಬೇಕು ಎಂಬುದಾಗಿದೆ.

ಈ ಚರ್ಚೆಯು ಮುಖ್ಯ ಉದ್ದೇಶ, ಯಾವ ಕಾನೂನು ಸಹ ಏಕಮುಖನಾಗಿ, ಸಾರ್ವಭೌಮತ್ವದ ರೂಪ ಹೊಂದಿರದೇ ಶಾಸನಬದ್ಧಾಗಿರಬೇಕೆಂಬುದೇ ಆಗಿದೆ. ಕಾನೂನನ್ನು ಪರಿಪಾಲಿಸದಿದ್ದರೆ ಮಾತ್ರ ಶಿಕ್ಷೆ ಆಗಬೇಕೆಂದೂ ಅವರು ತಿಳಿಸಿದ್ದಾರೆ. ಯಾವ ವ್ಯಕ್ತಿ ಏನೇ ಇರಲಿ, ಕಾನೂನಿಗೆ ವಿರೋಧವಾಗಿ ನಡೆದು ಹೋದಲ್ಲಿ ಶಿಕ್ಷೆಗೆ ಆತ ಅರ್ಹ. ಅವರ ಸ್ಥಾನಮಾನಗಳು ಶಿಕ್ಷೆಯನ್ನು ತಪ್ಪಿಸಲಾರದು ಎಂದೂ ತಿಳಿಸಿದ್ದಾರೆ. ಎ.ವಿ.ಡೈಸಿರವರು ಈ ಕಾನೂನಿನ ಮಾದರಿಯನ್ನೇ ಕಾನೂನಿನ ಆಡಳಿತವೆಂದು ಕರೆದು ಬ್ರಿಟೀಷ್ ಸಂವಿಧಾನದಲ್ಲಿ ಇದೇ ತತ್ವವನ್ನು ಅಳವಡಿಸಲು ಸಹಾಯಕಾರಿಯಾಗಿದ್ದರು. ಹೀಗೆ ಬ್ರಿಟನ್‌ನಲ್ಲಿ ಇದೇ ಮಾದರಿ ಕಾನೂನು ಈಗಲೂ ಇದೆ. ಆದರೆ ಫ್ರಾನ್ಸ್‌ನಲ್ಲಿ ಹಾಗಿಲ್ಲಾ.

ಇಂಗ್ಲೆಂಡ್‌ನಲ್ಲಿನ ಕಾನೂನು ಆಡಳಿತ ಇಂದಿಗೂ ಅಲ್ಲಿನ ಸಂವಿಧಾನರಹಿತ ಆಡಳಿತಕ್ಕೆ ನಾಂದಿಯಾಗಿದೆ. ಹಾಗಾಗಿ ಕಾನೂನಾತ್ಮಕ ಆಡಳಿತದಲ್ಲಿ ಬ್ರಿಟನ್ ಯಾವುದೇ ರೀತಿಯಲ್ಲಿ ಅಪಾರ್ಥಗಳು ಬಾರದಂತೆ ಇಂದಿಗೂ ಕಾರ್ಯನಿರ್ವಹಿಸಿ A.V.ಡೈಸಿಯವರ ಚಿಂತನೆಗೆ ಬೆಂಬಲ ಸೂಚಿಸಿದೆ. ಹೀಗಾಗಿ ಈ ದೇಶದಲ್ಲಿ ನಾಗರೀಕರ ಹಕ್ಕುಗಳು ಲಿಖಿತ ರೂಪದಲ್ಲಿ ಇರದಿದ್ದರೂ,



VOP_FL_MA_Pol_Sci_C-8(1-7)_TF.20_F.No.56
56

ರಾಜ್ಯದ ಚಟುವಟಿಕೆಗೆ, ಹಾಗೂ ಅಧಿಕಾರದ ಪಾನಮತ್ತತೆಗೆ ಅವಕಾಶವಾಗದಂತೆ ಈ ಕಾನೂನಿನ ಆಡಳಿತ ನಡೆದಿದೆ. ಹಾಗೂ ನಾಗರೀಕರನ್ನು ಕಾಪಾಡಿದೆ.

ಈ ಕಾನೂನಾತ್ಮಕ ಆಡಳಿತದಲ್ಲಿ ಯಾವುದೇ ತಪ್ಪು ಅರ್ಥಗಳಿಗೆ ಅವಕಾಶವಿಲ್ಲದಂತೆ ಶಾಸನಗಳು ರೂಪಗೊಂಡಿರುವುದು, ಎಲ್ಲರಿಗೂ ಸಮಾನವಾದ ಕಾಯ್ದೆಗಳಿರುವುದು ಈ ವ್ಯವಸ್ಥೆಗೆ ಮೆರಗು ನೀಡಿದೆ.

## 7.4 ಕಾನೂನು ಹಾಗೂ ಸ್ವಾತಂತ್ರ

ಸ್ವಾತಂತ್ರ್ಯವನ್ನು ಯಾವುದೇ ನಿಯಂತ್ರಣವಿಲ್ಲವೆಂದೂ ವಿವರಿಸಲಾಗಿದೆ. ಆದರೆ ಕಾನೂನು ವ್ಯಕ್ತಿಗತ ಸ್ವಾತಂತ್ರ್ಯವನ್ನು ನಿಯಂತ್ರಿಸುತ್ತದೆ. ಹಾಗೆಂದಾಕ್ಷಣ ಇದು ಸ್ವಾತಂತ್ರ್ಯಕ್ಕೆ ಅಡ್ಡಲಾಗುತ್ತದೆ ಎಂದು ಹೇಳಲಾಗುವುದೇ? ಪ್ರಜಾಪ್ರಭುತ್ವದಲ್ಲಿ ಕಾನೂನು ಕಲ್ಯಾಣರಾಷ್ಟ್ರ ಸ್ಥಾಪನೆಯಲ್ಲಿ ಸಹಾಯಕಾರಿಯಾಗಿದ್ದು, ವ್ಯಕ್ತಿಗತವಾದ ಹಕ್ಕುಗಳನ್ನು ರಕ್ಷಿಸುತ್ತದೆ.

ಸ್ವಾತಂತ್ರ್ಯವನ್ನು ವಿಶ್ವದಾದ್ಯಂತ ಒಪ್ಪಿಕೊಂಡ ಮೇಲೆ ವ್ಯಕ್ತಿ ಓರ್ವನ ಸ್ವಾತಂತ್ರ್ಯದಿಂದ ಮತ್ತೊಬ್ಬನ ಸ್ವಾತಂತ್ರ್ಯಕ್ಕೆ ಧಕ್ಕೆ ಬಾರದಂತೆ ನೋಡಿಕೊಳ್ಳುವ ಅವಶ್ಯಕತೆ ಇಲ್ಲಾ. ಆದರೂ ಈ ಬಗ್ಗೆ, ಕಾನೂನಿನ ಅವಶ್ಯಕತೆ ಇದೆ. ಈ ಬಗ್ಗೆ D.D.ರ್‍ಯಾಫಲ್ ತಮ್ಮ ಬರಹದಲ್ಲಿ ಈ ಬಗ್ಗೆ ತಿಳಿಸುತ್ತಾ, ಸ್ವತಂತ್ರ್ಯನಾದ ವ್ಯಕ್ತಿ ಇಚ್ಛೆ ಪಡದ ಕೆಲವು ಕಾರ್ಯಗಳನ್ನು ರಾಜ್ಯದಲ್ಲಿ ಕೈಗೊಳ್ಳಬೇಕಾದಾಗ ಕಾನೂನು ಅವಶ್ಯಕವಾಗಿ ಬೇಕಾಗುತ್ತದೆ ಎನ್ನುವ ಮೂಲಕ ಕಾನೂನಿನ ಆಚರಣಾ ಕ್ರಮದ ಬಗ್ಗೆ ತಿಳಿಸಿದ್ದಾರೆ.

ಇದು ಕೇವಲ ವ್ಯಕ್ತಿಗತವಾದ ಸ್ವಾತಂತ್ರ್ಯವಲ್ಲ, ಸಮಾಜದಲ್ಲಿ ರಚನಾತ್ಮಕ ಸ್ವಾತಂತ್ರ್ಯದ ಉಳಿವಿಗಾಗಿ ಬಳಸುವ ಅಸ್ತ್ರವಾಗುತ್ತದೆ ಎಂದಿದ್ದಾರೆ. ಇದಕ್ಕೆ ಉದಾಹರಣೆಯಾಗಿ ಅವರು, ಆರ್ಥಿಕ ಕಾನೂನುಗಳು, ಸಾಮಾಜಿಕ ಕಲ್ಯಾಣ ಯೋಜನೆಯ ಕಾನೂನುಗಳು, ಇವೇ ಮುಂತಾದುವುಗಳನ್ನು ನೀಡಿದ್ದಾರೆ.

ಅಪರಾಧ ಕ್ಷೇತ್ರದಲ್ಲಿ ಇದರ ಬಳಕೆ ವ್ಯಕ್ತಿಗತ ಸ್ವಾತಂತ್ರ್ಯಕ್ಕೆ ಅಡ್ಡಿ ಬರುವುದರಿಂದ, ಯಾವ ವ್ಯಕ್ತಿ ತನ್ನ ಸ್ವಾತಂತ್ರ್ಯವನ್ನು ಇತರರ ಸ್ವಾತಂತ್ರ್ಯಕ್ಕೆ ಧಕ್ಕೆ ಬರುವಂತೆ ನಡೆದುಕೊಂಡಲ್ಲಿ ಅದಕ್ಕೆ ಶಿಕ್ಷೆಯ ಮೂಲಕ ಕಡಿವಾಣ ಹಾಕಲ್ಪಡುತ್ತದೆ. ಅಂತಹಾ ಕಾನೂನಿಗೆ ಕ್ರಿಮಿನಲ್ ಕಾನೂನು ಎಂದೂ ಕರೆಯಲಾಗಿದೆ.

ನಾಗರೀಕ ಚಟುವಟಿಕೆಗಳನ್ನು ನಿರ್ವಹಿಸುವ ಸಂದರ್ಭದಲ್ಲಿ ಆಸ್ತಿಗಾಗಿ ಗಂಡಹೆಂಡಿರ ಜಗಳದ ಸಂದರ್ಭದಲ್ಲಿ ಆಸ್ತಿಯನ್ನು ಸರ್ಕಾರದ ವಶಕ್ಕೆ ತೆಗೆದುಕೊಂಡಾಗ, ಇವೇ ಮುಂತಾದ ಸಂದರ್ಭಗಳಲ್ಲಿ ಈ ನಾಗರೀಕ ಹಕ್ಕು ಹಾಗೂ ಸ್ವಾತಂತ್ರ್ಯದ ಮೇಲೆ ಸರ್ಕಾರಗಳು ನಿಯಂತ್ರಣವನ್ನು ಕಾನೂನಿನ ಮೂಲಕ ಹೊರಿಸಿ ವ್ಯಕ್ತಿ ವ್ಯಕ್ತಿಯ ನಡುವಿನ ಸ್ವಾತಂತ್ರ್ಯ ಹಾಗೂ ಸಂಬಂಧಗಳನ್ನು ನಿಯಂತ್ರಿಸಿ ಸಮಾಜದಲ್ಲಿ ಅರಾಜಕತೆ ಉಂಟಾಗದಂತೆ ಎಚ್ಚರಿಕೆವಹಿಸುತ್ತದೆ.

ಆರ್ಥಿಕ ನಿಯಂತ್ರಣದ ವಿಚಾರದಲ್ಲೂ ಕಾನೂನು ಹಾಗೂ ಸ್ವಾತಂತ್ರ್ಯದ ನಡುವೆ ಹಲವಾರು ತಾಕಲಾಟಗಳಿವೆ. ಕಾರ್ಮಿಕರಿಗೆ ನೀಡುವ ವೇತನದ ಬಗ್ಗೆ ಸರ್ಕಾರ ನಿರ್ಧರಿತ ಕಾನೂನುಗಳನ್ನು ಮಾಡುವುದರಿಂದ ಬಂಡವಾಳಶಾಹಿಗಳು ಶೋಷಣೆ ಮಾಡದಂತೆ ಅವರ ಮೇಲೆ ಒತ್ತಡ ಹೇರಲಾಗುತ್ತದೆ. ಹಾಗೆಯೇ ಉತ್ಪಾದನೆಗೆ ಸಂಬಂಧಿಸಿದಂತೆ ಹಲವಾರು ಕಾನೂನುಗಳು, ಆರ್ಥಿಕ ಚಟುವಟಿಕೆಯ ಮೇಲೆ ನಿಯಂತ್ರಣ ಹೇರಿ, ಬಂಡವಾಳಶಾಹಿ, ಕಾರ್ಮಿಕ, ಉತ್ಪಾದನೆ, ಕ್ವಾಲಿಟಿ ನಿಯಂತ್ರಣ, ವೇತನ, ಕೂಲಿ ಹೀಗೆ ಹಲವಾರು ವಿಚಾರಗಳಲ್ಲಿ ಕಾನೂನು, ಸ್ವಾತಂತ್ರ್ಯವನ್ನು ನಿಯಂತ್ರಿಸುತ್ತದೆ.

ಸಾಮಾಜಿಕ ಕಲ್ಯಾಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಲ್ಲಿ ಕಾನೂನಿನ ಚಟುವಟಿಕೆಗಳನ್ನು ನಾವು ಪಟ್ಟಿ ಮಾಡಬಹುದಾಗಿದೆ. ತೆರಿಗೆ, ಹಾಕುವುದು, ಹಾಗೂ ಪಡೆದುಕೊಳ್ಳುವುದು, ಶಾಲೆ, ಕಾಲೇಜು, ಆಸ್ಪತ್ರೆ, ಸಾರಿಗೆ ವ್ಯವಸ್ಥೆ, ರಸ್ತೆ ದುರಸ್ತಿ, ಹಿಂದುಳಿದ ಪ್ರದೇಶದ ಅಭಿವೃದ್ಧಿಗೆ ಶ್ರಮಿಸುವುದು, ಸಾಮಾಜಿಕ ನ್ಯಾಯ ಸ್ಥಾಪನೆ ಇವೇ ಮುಂತಾದ ಸಂದರ್ಭಗಳಲ್ಲಿ ಕಾನೂನು ಹಾಗೂ ಸ್ವಾತಂತ್ರ್ಯದ ನಡುವೆ ತಾಕಲಾಟ ಭಿನ್ನಾಭಿಪ್ರಾಯ ಬರುತ್ತದೆ. ಇದೇ ಸಂದರ್ಭದಲ್ಲಿ ಇವೆರಡರ ನಡುವಿನ ಸಂಬಂಧದ ಬಗ್ಗೆ ನಮಗೆ ಮಾಹಿತಿ ದೊರಕುತ್ತದೆ.

ಹೀಗೆ ಕಾನೂನು ಹಾಗೂ ಸ್ವಾತಂತ್ರ್ಯದ ನಡುವಿನ ಸಂಬಂಧ ಕೆಲವೊಮ್ಮೆ ಒಂದಕ್ಕೊಂದು ಪೂರಕವಾಗಿಯೂ, ಕೆಲವೊಮ್ಮೆ ವ್ಯತಿರಿಕ್ತವಾಗಿಯೂ ಕಂಡುಬಂದರೂ ಅವೆರಡರ ನಡುವೆ ಇರಬೇಕಾದ ಹೊಂದಾಣಿಕೆಯು ಸಮಾಜದಲ್ಲಿ ಅರಾಜಕತೆ ಉಂಟಾಗದಂತೆ ನೋಡಿಕೊಳ್ಳಲು ಅತ್ಯವಶ್ಯಕವೆಂದೂ ಇಲ್ಲಿ ತಿಳಿಸಬಹುದಾಗಿದೆ.

## 7.5 ಕಾನೂನು ಹಾಗೂ ಸಮಾನತೆ

ಭೂ ಒಡೆತನದ ಸಂದರ್ಭದಲ್ಲಿ (ಊಳಿಗಮಾನ ಪದ್ಧತಿಯು) ಕಾನೂನಾತ್ಮಕವಾಗಿ ಮಾನವ ಸಮಾಜದಲ್ಲಿ ಉಳ್ಳವನು (ಭೂ ಮಾಲೀಕ) ಹಾಗೂ ಉಳ್ಳದವನು (ಭೂ ಕಾರ್ಮಿಕ) ಎಂಬ ವಿಂಗಡಣೆಯು ಅಸ್ತಿತ್ವದಲ್ಲಿದ್ದಿತು. ಆಧುನಿಕ ಸಮಾಜಗಳಲ್ಲಿ ಈ ರೀತಿ ಕಾನೂನಾತ್ಮಕ ವಿಂಗಡಣೆಯ ಅವಶ್ಯಕತೆಯು ಕಂಡು ಬಂದಿದ್ದ ಕಾರಣ ಈ ಸಮಾಜದಲ್ಲಿ ಅಂತಹ ವಿಂಗಡಣೆಗಳಿಗೆ ಹೆಚ್ಚಿನ ಪ್ರಾಮುಖ್ಯತೆಯು ದೊರೆಯಲಿಲ್ಲಾ.

ಅದರಲ್ಲೂ ಉದಾರವಾದಿ ಸಮಾಜಗಳಲ್ಲಿ ಕಾನೂನಿನ ಮುಂದೆ, ಎಲ್ಲರೂ ಸಮಾನರೆಂಬ ಪ್ರಜ್ಞೆ ಬೆಳೆಸಿದ ಕಾರಣ, ಎಲ್ಲರೂ, ಅನ್ಯಾಯವಾದಲ್ಲಿ ಕಾನೂನು ಕ್ರಮ ಕೈಗೊಂಡು ಎಲ್ಲ ರೀತಿಯ ಅನ್ಯಾಯಕ್ಕೆ ಉತ್ತರವಾಗಿ ನ್ಯಾಯಯುತವಾಗಿ ಶ್ರೀಮಂತ ಹಾಗೂ ಬಲ್ಲಿದನೆನ್ನದೇ ನ್ಯಾಯ ದೊರಕಿಸಿಕೊಳ್ಳುವ ವ್ಯವಸ್ಥೆ ಇಂದು ಬಂದೊದಗಿದೆ.

ಉಳಿಗಮಾನ ಪದ್ಧತಿಯಲ್ಲಿ ಇದ್ದಂತ ಕಾನೂನಾತ್ಮಕ ವಿಂಗಡಣೆಯಿಂದಾಗಿ ಉಳ್ಳವರು ತಮಗೆ ಅವಶ್ಯವಿದ್ದಂತಹ ಭೂಒಡೆತನ, ಹಾಗೂ ಇತರೇ ಸವಲತ್ತುಗಳನ್ನು ಅನುಭವಿಸುತ್ತಿದ್ದು, ಸಾಮಾನ್ಯ ಜನರಿಂದ ತಾವು ವಿಭಿನ್ನವಾಗಿದ್ದನ್ನು ಗುರುತಿಸಿಕೊಳ್ಳುತ್ತಿದ್ದರು. ಆದರೆ, ಇಂತಹ ವಿಶೇಷ ಸವಲತ್ತುಗಳನ್ನು ಆಧುನಿಕ ಸಮಾಜಗಳಲ್ಲಿ ಯಾರೂ ಪಡೆಯಲು ಸಾಧ್ಯವಿಲ್ಲದ್ದರಿಂದ ಯಾರೂ ಕೂಡಾ ಅಸಮಾನ ಕಾನೂನುಗಳನ್ನು ರಚಿಸಿ ಅದರಿಂದ ಹೆಚ್ಚಿನ ಲಾಭ ಪಡೆಯಲು ಅಥವ, ಸಮಾಜದಲ್ಲಿ ಭೇದ ಭಾವ ರೂಪಿಸಿಕೊಳ್ಳಲು ಸಾಧ್ಯವಿಲ್ಲಾ.

ಇದೇ ರೀತಿಯಲ್ಲಿ ಸ್ತ್ರೀಯರೂ ಸೇರಿದಂತೆ ಹಿಂದಿನ ಕಾಲದಲ್ಲಿ ಸ್ತ್ರೀಗೆ ದೊರಕದ ಕೆಲವು ಹಕ್ಕು ಸೌಲಭ್ಯಗಳಿದ್ದು ಸ್ತ್ರೀಯನ್ನು ಅಸ್ತಿತ್ವದಲ್ಲಿದ್ದ ಸಮಾಜಕ್ಕೆ ಸೇರದಂತೆ ನೋಡಿಕೊಳ್ಳುತ್ತಿದ್ದರು.

ಆಧುನಿಕ ಉದಾರವಾದಿ ಸಮಾಜದಲ್ಲಿ ಅಂತಹ ಭೇದ ಭಾವಗಳಿಗೆ ಯಾವುದೇ ಅವಕಾಶವಿಲ್ಲದ ಹಿನ್ನೆಲೆಯಲ್ಲಿ ಸ್ತ್ರೀ ಪುರುಷರೆಂಬ ಭೇದವನ್ನು ಸಮಾಜದಲ್ಲಿ ಅಥವ ರಾಜಕೀಯ ಯಾ ಆರ್ಥಿಕ ಕ್ಷೇತ್ರದಲ್ಲಿ ಒಪ್ಪುವುದಿಲ್ಲ.

ಈ ಆಧುನಿಕ ಸಮಾಜಗಳ ಕಾನೂನಿನ ದೃಷ್ಟಿಯಲ್ಲಿ ಸ್ತ್ರೀಪುರುಷರ ನಡುವೆ ಯಾವುದೇ ವ್ಯತ್ಯಾಸ ಇರುವುದಿಲ್ಲಾ ಹಾಗೆಯೇ ಕಾನೂನಿನ ದೃಷ್ಟಿಯಲ್ಲಿ ಸಹಾ ಇವರೀರ್ವರ ನಡುವೆ ಯಾವುದೇ ಭೇದ ಭಾವವನ್ನು ಕಾನೂನು ಒಪ್ಪುವುದಿಲ್ಲ. ಹಕ್ಕು ಹಾಗೂ ಸ್ವಾತಂತ್ರ್ಯಗಳನ್ನು ನೀಡುವಾಗ ಇಂತಹಾ ಭೆದ ಭಾವಗಳನ್ನಾವುದನ್ನು ಗಣನೆಗೆ ತೆಗೆದುಕೊಳ್ಳದೆ ಇಂದಿನ ಸಮಾಜಗಳು ಕಾರ್ಯವಹಿಸುತ್ತವೆ.

ಹಿಂದಿನ ಕಾಲದಲ್ಲಿ ಸ್ತ್ರೀ ಎಂಬ ಕಾರಣದಿಂದ ಆಕೆಗೆ ಕಾನೂನಾತ್ಮಕವಾಗಿ ಆಸ್ತಿಯ ಹಕ್ಕಾಗಲೀ ಇನ್ನಾವುದೇ ಹಕ್ಕಾಗಲೀ ಇರಲಿಲ್ಲಾ. ಮತ ಚಲಾವಣೆಯ ಹಕ್ಕು ಇರಲಿಲ್ಲವೆಂಬುದು ಇಲ್ಲಿ ಗಮನಿಸಬೇಕಾದ ಅಂಶ. ಆದರೆ ಇಂದು ಅಂತಹ ಬರ್ಬರ ಕಾಯಿದೆಗಳು, ಅಸ್ತಿತ್ವದಲ್ಲಿರದೆ ಸಮಾಜದಲ್ಲಿ ಸ್ತ್ರೀ ಪುರುಷರಿಬ್ಬರೂ ಒಂದೇ ನಾಣ್ಯದ ಎರಡು ಮುಖಗಳೆಂದು ಗುರುತಿಸಿ ಕಾನೂನುಗಳನ್ನು ಸ್ವಾತಂತ್ರ್ಯವನ್ನು ವೈಚಾರಿಕತೆಯಿಂದ ರಚಿಸಲಾಗಿದೆ.

ಬೆನ್ ಹಾಗೂ ಪೀಟರ್ಸ್ ವಿವರಿಸುವಂತೆ, ನಾವು ಹಕ್ಕು/ಸ್ವಾತಂತ್ರ್ಯ/ಕಾನೂನಿನ ನಡುವೆ, ಹಲವಾರು ಹೊಂದಾಣಿಕೆ ಮಾಡಿಕೊಳ್ಳುವ ಅಂಶಗಳಿದ್ದರೂ, ಅವುಗಳನ್ನು ತೀಕ್ಷ್ಣವಾಗಿ ಪರಿಶೀಲಿಸಿದಾಗ ಈ ಎಲ್ಲದರಲ್ಲೂ ಹಲವಾರು ವ್ಯತ್ಯಾಸಗಳನ್ನು ಕಂಡುಕೊಳ್ಳುತ್ತೇವೆ.

ಉದಾ: ಹಕ್ಕು ಹಾಗೂ ಕರ್ತವ್ಯ ಇವೆರಡರ ನಡುವೆ, ಹಲವಾರು ಸಂದರ್ಭಗಳಲ್ಲಿ ಯಾವುದು ಮೊದಲು, ಯಾವುದು ನಂತರವೆಂಬ ಚರ್ಚೆ ಅನಿವಾರ್ಯವಾಗಿ ಮೈಗೊಳ್ಳುತ್ತದೆ. ಇವರ (ಬೆನ್-ಪೀಟರ್ಸ್) ಪ್ರಕಾರ ಕಾನೂನು ಯಾವ ರೀತಿಯಲ್ಲಿ ಚರ್ಚಿಸಿದರೂ ಸಹ ತಿಳಿದೊ ತಿಳಿಯದೆಯೋ ಕೆಲವು ಸಂದರ್ಭಗಳಲ್ಲಿ, ವರ್ಗಗಳನ್ನು ರಚಿಸಿ, ವಿಶೇಷವಾದ ಹಕ್ಕು ಹಾಗೂdutyಗಳನ್ನು ಅವರ ಮೇಲೆ ಹೇರುತ್ತದೆ.

ಉದಾ: ಭೂ ಒಡೆಯರಿಗೆ ಇರುವ ಹಕ್ಕುಗಳಿಗೇ, ಭೂ ಬಾಡಿಗೆದಾರರಿಗೂ ಇರುವ ಹಕ್ಕುಗಳಿಗೆ ವ್ಯತ್ಯಾಸ ಇದೆ. ಹಾಗೆಯೇ, ಪೋಲಿಸ್‌ಗಳಿಗೆ ಇರುವ ಹಕ್ಕು ಹಾಗೂ ಜಲಮಂಡಳಿಯ ಇನ್ಸಪೆಕ್ಟರ್‌ಗಳಿಗೂ ಇರುವ ಹಕ್ಕಿನಲ್ಲಿ ವ್ಯತ್ಯಾಸವಿದೆ. ಹಾಗೆಯೇ, ಜನ ಪ್ರತಿನಿಧಿಗಳಾದ ಎಂ.ಪಿ. ಹಾಗೂ ನ್ಯಾಯಾಂಗದಲ್ಲಿನ ನ್ಯಾಯಾಧೀಶರೂ ತಮ್ಮದೇ ಆದ ಹಕ್ಕುಗಳನ್ನು ಹೊಂದಿದ್ದಾರೆ. ಇಂತಹ ವಿಶೇಷ ರೀತಿಯ ಆದ ಹಕ್ಕುಗಳನ್ನು ಹೊಂದಿದ್ದಾರೆ, ಇಂತಹ ವಿಶೇಷ ರೀತಿಯ ರಿಯಾಯಿತಿಗಳು ಸಾಕಷ್ಟು ಇರುವುದರಿಂದ ಕಾನೂನು ಎಲ್ಲರಿಗೂ ಒಂದೇ ರೀತಿಯ ಕಾನೂನು ಜಾರಿಗೆ ತಂದರೂ ಅದರೊಳಗಿನ ಹಲವಾರು ವಿವಿಧತೆಗಳು ಇವುಗಳನ್ನು ಬೆಳಕಿಗೆ ತಂದು ಇವುಗಳಲ್ಲಿ ಇರುವ ವ್ಯತ್ಯಾಸಗಳನ್ನು ಬೆಳಕಿಗೆ ತರುತ್ತದೆ.

ಒಂದರ್ಥದಲ್ಲಿ ಈ ವ್ಯತ್ಯಾಸಗಳನ್ನು ನಾವು ತಪ್ಪಿಸಲಾರವು ಎಂದು ಒಪ್ಪಿಕೊಳ್ಳುವುದು ಸರಿಯೇ ಎನಿಸುತ್ತದೆ. ಇಂತಹಾ ವಿಭಜಿತ ಸಮಾಜದಲ್ಲಿ 'ಸಮಾನತೆ' ಸಾಧ್ಯ ಎಂಬುದು ಕನಸುಕಂಡಂತೆ.

ಬಾರ್ಕರ್‌ರವರು ಇಂತಹ ವಿಚಾರಗಳನ್ನು ಚರ್ಚಿಸುವ ಸಲುವಾಗಿ ನ್ಯಾಯಾಂಗೀಯ ಅಥವ ಕಾನೂನಿನ ದೃಷ್ಟಿಯಲ್ಲಿ 'ಸಮಾನತೆ' ಏನೆಂಬುದನ್ನು ಚರ್ಚಿಸ ಬಯಸಿದ್ದಾರೆ. ಇಲ್ಲಿ ಇವರು ಈ 'ಸಮಾನತೆ' ಎಂಬ ಪದವನ್ನು ಯಾವುದೇ ತಾಂತ್ರಿಕವಾಗಿ ಅರ್ಥಗಳಿಲ್ಲದೇ ಬಳಸಬೇಕೆಂದು ತಿಳಿಸುತ್ತಾರೆ. ಇವರ ಪ್ರಕಾರ ವ್ಯಕ್ತಿಗೆ ಕಾನೂನಾತ್ಮಕ ಹಕ್ಕುಗಳು ಯಾವುದೇ ಪೂರ್ವ ಚಿಂತನೆ ಇಲ್ಲದೇ ನೀಡಲ್ಪಟ್ಟಿದೆ. ಆದರೆ ಅವನ ಕಾರ್ಯ, ಅವನ ಸಾಮಾಜಿಕ ಪರಿಸರದಲ್ಲಿ ಅವನ ಕರ್ತವ್ಯ ಇವುಗಳನ್ನಾಧಾರಿತವಾಗಿ ಈ ಕಾನೂನಿನ 'ಸಮಾನತೆ'ಯು ತನ್ನಷ್ಟಕ್ಕೆ ತಾನೂ ರೂಪುಗೊಂಡು ಅದಕ್ಕೆ ಅರ್ಥ ಕಲ್ಪಿಸುತ್ತೆತ್ತದೆ ಎಂದಿದ್ದಾರೆ. ಗುಲಾಮನಿಗೆ ಇವರ ಪ್ರಕಾರ ಯಾವುದೇ ಕಾನೂನಾತ್ಮಕ ವ್ಯಕ್ತಿತ್ವ ಇಲ್ಲಾ. ಹಾಗಾಗಿ ಇವನಿಗೆ ಸಮಾನತೆಯ ಕಾನೂನಾತ್ಮಕ ಅರ್ಥ ಯಾವುದೇ ರೀತಿಯಲ್ಲಿ ಸಂಪೂರ್ಣವಾದ ಸಮಾನತೆ ನೀಡಲು ಸಾಧ್ಯವಿಲ್ಲಾ ಎಂದಿದ್ದಾರೆ. ಬೆನ್ ಹಾಗೂ ಪೀಟರ್ಸ್ ಸಹಾ ಇಂತಹ ವಿಶ್ಲೇಷಣೆಯನ್ನು ಸರಿ ಎಂದು ಒಪ್ಪಿಗೆ ಸೂಚಿಸಿದ್ದಾರೆ.

ಹಾಬ್‌ಹೇಸ್ ಸಹಾ ಕಾನೂನಿನ ದೃಷ್ಟಿಯಲ್ಲಿ ಸಮಾನತೆಯನ್ನು ಸಮಾನ ಹಕ್ಕೆಂದು ಪ್ರತಿವಾದಿಸಿದ್ದಾರೆ. ಆದರೆ, ಇವರು ಇದರ ವಿಶ್ಲೇಷಣೆಯನ್ನು ಆಳವಾಗಿ ಮಾಡಿದ್ದಾದರೆ, ಅಲ್ಲಿ ಈ ಕಾನೂನು ವಿವಿಧ ಹಾಗೂ ವಿಶೇಷವಾದ ಹಕ್ಕು ಹಾಗೂ ಭಾದ್ಯತೆಯನ್ನು ರೂಪಿಸುತ್ತದೆ ಎಂದಿದ್ದಾರೆ. ಆದರೂ ಇವರು ವಿಶ್ವವ್ಯಾಪಿಯಾದ ಕಾನೂನು ರಚನೆಗೆ ಕರೆ ನೀಡಿದ್ದಾರೆ.

ಉದಾ: ಆಧುನಿಕ ಕಾನೂನಿನಲ್ಲಿ ನಾವು ಕೊಲೆಗಾರನನ್ನು ಗುರುತಿಸುವಾಗ ಅವನ ಜಾತಿ, ವರ್ಗ, ಲಿಂಗ, ರಾಷ್ಟ್ರೀಯತೆಯ ಮೇಲೆ ಅವನನ್ನು ಗುರುತಿಸುತ್ತೇವೆ. ಆದರೂ ಕಾನೂನಿನ ಪ್ರಕಾರ ಇದನ್ನು ನಾವು 'ಸಮಾನ'ವೆಂದೂ ಕರೆಯುತ್ತೇವೆ. ಬೆನ್, ಪೀಠರ್ಸ್ ಈ ಚಿಂತನೆಯನ್ನು ಒಪ್ಪುತ್ತಾರೆ. ಕಾರಣ ಇವರು ಕಾನೂನಿನ ಮುಂದೆ, ಸರ್ವರು ಸಮಾನರೆಂಬ ಚರ್ಚೆಯನ್ನು ಕೇವಲ ಒಂದು ಆದರ್ಶವೆಂದು ಗುರುತಿಸಿದ್ದಾರೆ.

ಹೀಗಾಗಿ ಬೆನ್ ಪೀಠರ್ಸ್‌ರವರು ಕಾನೂನು ಯಾವುದೇ ಪೂರ್ವಾಗ್ರಹ ಪೀಡಿತವಿರುವುದಿಲ್ಲವೆಂದರೆ ಅದು ಯಾವುದೇ ಬಣ್ಣ, ಅಥವ ವ್ಯಕ್ತಿಗತ ಲಕ್ಷಣಗಳನ್ನು ಅನುಸರಿಸಿದರೆ ಅವನಿಂದ ಎಸಗಲ್ಪಟ್ಟ ಅಪರಾಧಿಗಷ್ಟೆ ಸಂಬಂಧಪಟ್ಟಿರುತ್ತದೆ ಎಂದು ವಿವರಿಸುತ್ತಾರೆ.

## ನಿಮ್ಮ ಪ್ರಗತಿ ಪರಿಶೀಲನೆ - 1

**ಸೂಚನೆ:** 1. ಈ ಕೆಳಗೆ ಬಿಟ್ಟಿರುವ ಜಾಗವನ್ನು ನಿಮ್ಮ ಉತ್ತರಕ್ಕೆ ಉಪಯೋಗಿಸಿಕೊಳ್ಳಿ.

2. ಈ ಘಟಕದ ಕೊನೆಯಲ್ಲಿ ನೀಡಿರುವ ಉತ್ತರದೊಂದಿಗೆ ನಿಮ್ಮ ಪ್ರಗತಿಯನ್ನು ಪರಿಶೀಲಿಸಿಕೊಳ್ಳಿ.

**1. ಕಾನೂನು ಹಾಗೂ ನೈತಿಕತೆಯ ಸಂಬಂಧವನ್ನು ವಿವರಿಸಿ.**

..........................................................................................................................

..........................................................................................................................

..........................................................................................................................

..........................................................................................................................

..........................................................................................................................

..........................................................................................................................

..........................................................................................................................

**2. ಕಾನೂನು ಹಾಗೂ ಸ್ವಾತಂತ್ರ್ಯದ ನಡುವಿನ ಪ್ರಾಮುಖ್ಯತೆಯನ್ನು ಚರ್ಚಿಸಿ.**

..........................................................................................................................

..........................................................................................................................

..........................................................................................................................

..........................................................................................................................

..........................................................................................................................

..........................................................................................................................

..........................................................................................................................

**3. ಕಾನೂನು ಹಾಗೂ ಸಮಾನತೆಗಳ ನಡುವಿನ ಚರ್ಚೆಯನ್ನು ವಿಮರ್ಶಿಸಿ.**

..........................................................................................................................

..........................................................................................................................

..........................................................................................................................

..........................................................................................................................

..........................................................................................................................

..........................................................................................................................

## 7.6 ಸಮಾರೋಪ

ಕಾನೂನು, ಹೀಗೆ, ವಿವಿಧ ಪರಿಕಲ್ಪನೆಗಳೊಂದಿಗೆ ಸೇರಿಸಿ ಅಭ್ಯಸಿಸಿದಾಗ ವಿವಿಧ ಚರ್ಚೆಗಳಿಗೆ ಆಸ್ಪದ ನೀಡುವುದು ಸಹಜ. ಇದು ಈ ಅಧ್ಯಯನ ಶಾಲೆಗಳು, ಕಾನೂನನ್ನು ಗಮನಿಸಿ, ವಿಶ್ಲೇಷಿಸುವ ಮೂಲತಃ ಚಿಂತನೆಯನ್ನು ಆಧಾರಿತವಾಗಿ ಇರಿಸಿಕೊಂಡಿರುವುದರಿಂದ ಇದರಲ್ಲಿ ವ್ಯತ್ಯಾಸಗಳು ಕಂಡು ಬರುವುದು ಸಹಜ. ನ್ಯಾಯ, ನೀತಿ, ಧರ್ಮ, ಸಂಸ್ಕೃತಿ, ವ್ಯವಸ್ಥೆ, ಆಡಳಿತ ಹೀಗೆ ಹಲವಾರು ವಿಷಯಗಳನ್ನು ಆಧಾರಿತವಾಗಿಟ್ಟುಕೊಂಡು ರಚಿಸಲ್ಪಟ್ಟಿರುವ ಈ ಕಾನೂನಿನ ಚಿಂತನೆ ರೋಮನ್ ಕಾಲದಿಂದ ರಾಲ್ಸರವರ ಕಾಲದವರೆವಿಗೆ ವಿವಿಧ ರೀತಿಯಲ್ಲಿ ಪ್ರತಿಬಿಂಬಸ್ಪಟ್ಟಿದೆ. ಮಾನವ ಹಕ್ಕು ಎಂಬ ಇತ್ತೀಚಿನ ಕೂಗಿನ ಹಿನ್ನೆಲೆಯಲ್ಲಿ ಈ ಕಾನೂನುಗಳು ಕಾರ್ಯವೈಖರಿ ಮತಷ್ಟು ತೀಕ್ಷ್ಣವಾಗಿ ಅಧ್ಯಯಿಸಲ್ಪಡುತ್ತದೆ. ಹೀಗೆ ಕಾನೂನಿನ ಅಧ್ಯಯನ ದಿನೇ ದಿನೇ ಹೆಚ್ಚು ಆಸಕ್ತಿಯಿಂದ ಕೂಡಿದೆ.

## 7.7 ಒಟ್ಟಾರೆ ಅಭಿಪ್ರಾಯ

ಒಟ್ಟಾರೆ ಹೇಳಬೇಕೆಂದರೆ ಈ ಅಧ್ಯಾಯ ಚಿಕ್ಕದಾದರೂ ಪ್ರಮುಖವಾದದ್ದು. ಇಲ್ಲಿ ಕಾನೂನು ಹಾಗೂ ಅದರೊಂದಿಗೆ ಸಂಬಂಧವಿರುವ ಇತರೆ ಪರಿಕಲ್ಪನೆಗಳ ಅಧ್ಯಯನ ಇಲ್ಲಿ ಮಾಡಲಾಗಿದ್ದು ಚರ್ಚೆ ಆಕರ್ಷಿತವಾಗಿ ಮೂಡಿಬಂದಿದೆ. ಇದು ಕಾನೂನಿನ ಹಾಗೂ ಅದರ ಆಚರಣೆಯ ಬಗ್ಗೆ ಹೆಚ್ಚು ಬೆಳಕು ಚೆಲ್ಲುತ್ತದೆ ಎಂಬುದರಲ್ಲಿ ಸಂಶಯವಿಲ್ಲಾ.

## 7.8 ಕಠಿಣ ಪದಗಳು

ಉಳಿಗಮಾನ - ಜಮೀನ್ದಾರಿ ಪದ್ಧತಿ

ಉಳ್ಳವನು - ಶ್ರೀಮಂತ

ಉಳ್ಳದವನು - ಬಡವ ಅಥವಾ ಕಾರ್ಮಿಕ

ಕಾನೂನಿನ ಆಡಳಿತ - ಕಾನೂನಿನ ಅಡಿಯಲ್ಲಿ ಪ್ರತಿಯೊಬ್ಬರು ಸಮಾನವಾಗಿರುವುದು

## 7.9 ಕೆಲವು ಉಪಯುಕ್ತ ಪುಸ್ತಕಗಳು


Mill John Stuart : on Liberty, 1948

Paul Miller & Paul : Liberty & Equality, 1985

Twaner R.H : Equality, 1931

Rawls John : A Theory of Justice, 1972


## 7.10 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು

<u>ನಿಮ್ಮ ಪ್ರಗತಿ ಪರಿಶೀಲನೆ</u> - 1

1. ನೋಡಿ ವಿಭಾಗ 7.3
2. ನೋಡಿ ವಿಭಾಗ 7.4
3. ನೋಡಿ ವಿಭಾಗ 7.5

# ಘಟಕ 8 ಉದಾರವಾದದ ಅರ್ಥ ಮತ್ತು ಸಾಂಪ್ರದಾಯಿಕ ಉದಾರವಾದದ ಬೆಳವಣಿಗೆ

ರಚನೆ


8.0 ಉದ್ದೇಶಗಳು

8.1 ಪ್ರಸ್ತಾವನೆ

8.2 ಉದಾರವಾದ : ಅರ್ಥ

8.3 ಉದಾರವಾದ: ಲಕ್ಷಣಗಳು

8.4 ಉದಾರವಾದ: ಪ್ರಕಾರಗಳು

8.5 ಉದಾರವಾದ: ಸಾಂಪ್ರದಾಯಿಕ ಉದಾರವಾದದ ಬೆಳವಣಿಗೆ

8.6 ಟೀಕಾತ್ಮಕ ಮೌಲ್ಯಮಾಪನ

8.7 ಒಟ್ಟಾರೆ ಅಭಿಪ್ರಾಯ

8.8 ಕಠಿಣ ಪದಗಳು

8.9 ಕೆಲವು ಉಪಯುಕ್ತ ಗ್ರಂಥಗಳು

8.10 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು

## 8.0 ಉದ್ದೇಶಗಳು

ಪ್ರಿಯ ವಿದ್ಯಾರ್ಥಿಗಳೇ ಉದಾರವಾದವು ರಾಜಕೀಯ ಸಿದ್ಧಾಂತದಲ್ಲಿ ಒಂದು ಪ್ರಮುಖವಾದ ಸ್ಥಾನವನ್ನು ಪಡೆದಿದೆ. ಇಂತಹ ವಸ್ತುವಿಷಯದ ಬಗ್ಗೆ ತಮಗೆ ಸ್ವಲ್ಪ ವಿಚಾರವನ್ನು ತಿಳಿಸಿ ಈ ಬಗ್ಗೆ ತಮ್ಮಲ್ಲಿ ಹೆಚ್ಚಿನ ಆಸಕ್ತಿಯನ್ನು ಉಂಟು ಮಾಡಲು ಈ ಬರಹವನ್ನು ರಚಿಸಲಾಗಿದೆ. ಇದನ್ನು ಅಧ್ಯಯಿಸುವ ಮೊದಲು ಇದರ ಕೆಲವು ಹಂತಗಳು ಸರಿಯಾದ ಚೌಕಟ್ಟು, ಚಾರಿತ್ರಿಕ ಹಿನ್ನೆಲೆ ಇವುಗಳ ಅರಿವು ಮುಖ್ಯವಾದವು. ಈ ಅಧ್ಯಯನದಲ್ಲಿ ಕೇವಲ ಸಾಂಪ್ರದಾಯಿಕ ಉದಾರವಾದದ ಚರ್ಚೆಯನ್ನು ಮಾಡುವುದರಿಂದ ಯಾವುದೇ ಗೊಂದಲವಿಲ್ಲದೆ ನೀವು ಅರ್ಥೈಸಿಕೊಳ್ಳಬೇಕು.

## 8.1 ಪ್ರಸ್ತಾವನೆ

ಉದಾರವಾದವು ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಅತ್ಯಂತ ಪ್ರಮುಖವಾದ ಸಿದ್ಧಾಂತವಾಗಿದೆ. ಕಳೆದ 300 ವರ್ಷಗಳಲ್ಲಿ ಇಂಗ್ಲೆಂಡ್, ಯುರೋಪ್ ಮತ್ತು ಅಮೇರಿಕಾ ದೇಶಗಳಲ್ಲಿ ಆಯಾ ದೇಶದ ಚರಿತ್ರೆಯನ್ನು ಅನುಸರಿಸಿ ಉದಾರವಾದದ ಬೆಳವಣಿಗೆ ಕಂಡುಕೊಳ್ಳಬಹುದಾಗಿದೆ ಸುಧಾರಣೆ ಮತ್ತು ಪುನರುತ್ಥಾನ ಕಾಲದಲ್ಲಿ ಬೆಳೆದ ಈ ವಾದವು ಒಂದು ಜೀವನದ ಅಂಗವಾಗಿ ಸಾಮಾಜಿಕ ಆರ್ಥಿಕ ಹಾಗೂ ರಾಜಕೀಯ ಆಕಾಂಕ್ಷೆಗಳನ್ನು ಮಧ್ಯಮ ವರ್ಗದ ಜನರಲ್ಲಿ ಹೆಚ್ಚಿಸುತ್ತಾ ಬೆಳೆದು ಬಂದಿದೆ 16 ಮತ್ತು 17ನೇ ಶತಮಾನದಲ್ಲಿ ಊಳಿಗಮಾನ್ಯ ಪದ್ಧತಿ ಕ್ಷೀಣಿಸುತ್ತಿರುವ ಸಂದರ್ಭದಲ್ಲಿ ಇಂಗ್ಲೆಂಡ್ ಮತ್ತು ಯುರೋಪ್‌ನಲ್ಲಿ ರಾಜತ್ವವು ಪ್ರಬಲಗೊಂಡಿತು. ಇದರಿಂದಾಗಿ ಶ್ರೇಣಿಯುತ (ವರ್ಗ) ಸಮಾಜ ಹಾಗೂ ಕೆಲವರಿಗೆ ಮಾತ್ರ ಅವಕಾಶ ದೊರೆಯುತ್ತಿದ್ದು ಇದನ್ನು ವಿರೋಧಿಸುವ ವ್ಯವಸ್ಥೆಯಾಗಿ ಉದಾರವಾದಿ ಆಲೋಚನೆಗೆ ಬೆಳೆಯತೊಡಗಿದವು. ವ್ಯಕ್ತಿಯನ್ನು ರಾಜ್ಯದ ಸಂಕೋಲೆಗಳಿಂದ ಬಿಡಿಸುವ ಪ್ರಯತ್ನದಿಂದ ಪ್ರಾರಂಭವಾಗಿ ಈ ಉದಾರವಾದವು ಬೌದ್ಧಿಕ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ, ರಾಜಕೀಯ ಹಾಗೂ ಆರ್ಥಿಕ ಅಂಶಗಳಲ್ಲಿಯೂ ವ್ಯಕ್ತಿಗತ ಸ್ವಾತಂತ್ರ್ಯವನ್ನು ಬಯಸಿ ರಾಜ್ಯ ಮತ್ತು ವ್ಯಕ್ತಿಗಳ ನಡುವಿನ ಸಂಬಂಧದ ಬಗ್ಗೆ ಚರ್ಚಿಸುವ ಸಿದ್ಧಾಂತವಾಗಿದೆ.

## 8.2 ಉದಾರವಾದ:ಅರ್ಥ

ಉದಾರವಾದವು ನಾವು ಯಾವುದೇ ಹಂತದಲ್ಲಿ ಕೆಲವು ಪದಗಳಲ್ಲಿ ವ್ಯಾಖ್ಯಾನಿಸಲು ಸಾಧ್ಯವಿಲ್ಲ. ಇದು ತೀವ್ರ ತರವಾದ ಬದಲಾವಣೆಯನ್ನು ತನ್ನಲ್ಲಿ ತಂದುಕೊಳ್ಳುವ ಶಕ್ತಿಯನ್ನು ಹೊಂದಿರುವ ಕಾರಣ ಈ ಬಗ್ಗೆ ಒಂದು ನಿರ್ಧರಿತವಾದ ಅಂತಿಮವಾದ ನಿರ್ಣಾಯಕವಾದ ವ್ಯಾಖ್ಯಾನವನ್ನು ನೀಡಲು ಸಾಧ್ಯವಿಲ್ಲ. ಒಂದು ಚಾರಿತ್ರಿಕ ಹಿನ್ನೆಲೆಯಲ್ಲಿ ಬೆಳೆದು ಬಂದ ಈ ಸಿದ್ಧಾಂತವು ವಿಶೇಷವಾಗಿ ಬದಲಾಗುತ್ತಿರುವ ಕಾಲದೊಂದಿಗೆ ವಿಶಿಷ್ಟವಾಗಿ ವಿಶ್ಲೇಷಣೆ ಹೊಂದುತ್ತ ಇದು ಬೆಳೆದಿದೆ. ಇದೇ ತೆರನಾಗಿ ಲಾಸ್ಕಿಯವರು ಬರೆಯುತ್ತಾ ಉದಾರವನ್ನು ಸುಲಭದಲ್ಲಿ ವಿವರಿಸಲು ಸಾಧ್ಯವಿಲ್ಲ. ಇದು ಕಟ್ಟಳೆಗಳ ಬಂಧನವಲ್ಲ. ದಿನಚರಿಯಲ್ಲಿ ಪ್ರಾಯೋಗಿಕವಾಗಿ ಬಳಸುವ ಆಚರಿಸುವ ಚಿಂತನೆ ಎಂದಿದ್ದಾರೆ. ಇದನ್ನು ಅರ್ಥೈಸುವಾಗ ವ್ಯಕ್ತಿಗತ ದೃಷ್ಟಿಕೋನ, ರಾಜ್ಯದ ದೃಷ್ಟಿಕೋನ ರಾಜ್ಯ ಹಾಗೂ ವ್ಯಕ್ತಿಗಳ ನಡುವಿನ ದೃಷ್ಟಿಕೋನ ಹೀಗೆ ಹಲವಾರು ದೃಷ್ಟಿಕೋನಗಳನ್ನು ವಿವರಿಸುತ್ತಾ ಇದನ್ನು ಅರ್ಥೈಸಬಹುದಾಗಿದೆ. ಗ್ರೈಮ್ಸ್‌ರವರು ಈ ಕಾರಣಕ್ಕಾಗಿಯೇ ಉದಾರವಾದವು ಮೂಢ ನಂಬಿಕೆಯಲ್ಲ ಆದರೆ ಬದಲಾಗುತ್ತಿರುವ ಸಾಮಾಜಿಕ ಪರಿಸ್ಥಿತಿಯನ್ನು ವೈಚಾರಿಕತೆಯಿಂದ ವಿವರಿಸುವ ಅಧ್ಯಯನ ಮಾರ್ಗ ಎಂದಿದ್ದಾರೆ. ಹೀಗೆ ಸುಮಾರು 300ವರ್ಷಗಳಿಂದ ಉದಾರವಾದವು. ಅಸ್ತಿತ್ವದಲ್ಲಿ ಇದ್ದರೂ ಸಹ ಇದನ್ನು ವಿವರಿಸುವಾಗ ಅಥವಾ ವ್ಯಾಖ್ಯಾನಿಸುವಾಗ ಉದಾರವಾದವು ಯಾವ ಅಂಶವನ್ನು ಗುರಿಯಾಗಿ ಹೊಂದಿದೆ ಎಂಬುದನ್ನು ಹಿಡಿದು ಸಾರ್ಥಕವಾಗಿದೇ ಹೊರತು ಅದನ್ನು ಸಂಪೂರ್ಣವಾಗಿ ತೀಡಲು

ಸಾಧ್ಯವಿಲ್ಲ. ರಿಚರ್ಡ್ ವಿಲ್ಹೆಮ್ ಪ್ರಕಾರ ಉದಾರವಾದವು ವ್ಯಕ್ತಿ ಸ್ವಾತಂತ್ರ್ಯದ ಬಗ್ಗೆ ಇರುವ ಒಂದು ನಂಬಿಕೆ, ಹಾಗೂ ಮೌಲ್ಯ ಎಂದಿದ್ದಾರೆ. ಸಾರ್ಟೋರಿಯವರ ಪ್ರಕಾರ ವ್ಯಕ್ತಿಗತ ಸ್ವಾತಂತ್ರ್ಯ ಸೈದ್ಧಾಂತಿಕವಾಗಿ ಮತ್ತು ಪ್ರಾಯೋಗಿಕವಾದಿ ಎಂದಿದ್ದಾರೆ. ಪಾಲ್‌ರವರ ಪ್ರಕಾರ ಇದು ಸ್ವಾತಂತ್ರ್ಯ ಮತ್ತು ವೈಚಾರಿಕತೆಯ ಮೇಲೆ ಆಧಾರವಾಗಿರುವ ಸಿದ್ಧಾಂತ ಎಂದಿದ್ದಾರೆ. ಗ್ರೈಮ್‌ರವರು ಬಹುತ್ವ ಸಮಾಜದ ಗುರಿಸಾಧಿಸಲು ವಿವಿಧ ಚಿಂತನೆಗಳಿಗೆ ಗೌರವ ದೊರಕಿಸಿಕೊಡುವ ಹಾಗೂ ರಾಜಕೀಯ, ಆರ್ಥಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಜೀವನದ ವಿವಿಧತೆಗಳನ್ನು ಪ್ರತಿನಿಧಿಸುವ ಚಿಂತನೆ ಇದಾಗಿದೆ ಎಂದಿದ್ದಾರೆ. ಇಂತಹ ಉದಾರವಾದವನ್ನು ಅತ್ಯಂತ ಸುಲಭವಾಗಿ ವಿವರಿಸುವುದೇ ಆದಲ್ಲಿ ವ್ಯಕ್ತಿ ಸ್ವಾತಂತ್ರ್ಯ ಕುರಿತಾದ ಸಿದ್ಧಾಂತ ಎನ್ನಬಹುದು. ಕಾರಣ ಇದು ಎಲ್ಲಾ ಕಾಲದಲ್ಲಿಯೂ ವ್ಯಕ್ತಿಯ ಸ್ವಾತಂತ್ರ್ಯವನ್ನು ಹೆಚ್ಚಿಸಲು ಹಾಗೂ ಅವನಿಗೆ ಅಭಿವೃದ್ಧಿ ಹೊಂದಲು ಅವಕಾಶಗಳನ್ನು ಕಲ್ಪಿಸಿಕೊಡುವ ಬಗ್ಗೆ ಚಿಂತಿಸುತ್ತದೆ. ಇದನ್ನೆ ಲಾಸ್ಕಿಯವರು ಮೋಹ ಅಥವಾ ಸೆಳೆತ ಎಂದು ಕರೆದಿದ್ದಾರೆ. ಹೀಗೆ ವ್ಯಕ್ತಿ ಕೇಂದ್ರವಾದ ಈ ಸಿದ್ಧಾಂತವನ್ನು ವ್ಯಕ್ತಿಯ ದೈನಂದಿನ ಚಟುವಟಿಕೆಯಲ್ಲಿ ಅವನುಸ್ಪಂದಿಸುವ ಹಲವಾರು ಸಂಘ ಸಂಸ್ಥೆಗಳು ಇನ್ನಿತರೇ ಸಂಘಟಕಗಳು ಹಿನ್ನೆಲೆಯಲ್ಲಿ ಅವನ ನಡತೆ, ವರ್ತನೆ, ಚಿಂತನೆ ಈ ಬಗ್ಗೆ ಚರ್ಚಿಸುವುದೇ ಉದಾರವಾದವಾಗಿದೆ. ಹ್ಯಾಲೋಬಲ್‌ರವರು ವ್ಯಕ್ತಿಗೆ ಜೀವನದ ಎಲ್ಲಡೆ ಸ್ವಾತಂತ್ರ್ಯ ದೊರಕಿಸಿಕೊಡುವುದು ಉದಾರವಾಗಿದೆ ಎಂದಿದ್ದಾರೆ ಕಾತಿರೋರವರ ಜೀವನದೆಡೆಗಿನ ಒಂದು ದೃಷ್ಟಿಕೋನವೇ ಉದಾರವಾದವೆಂದಿದ್ದಾರೆ, ಕೋರ್ಣರು ಉದಾರವಾದವು ವ್ಯಕ್ತಿಗತ ಸ್ವಾತಂತ್ರ್ಯವನ್ನು ಮುಂದಿಟ್ಟುಕೊಂಡಿದೆ ಅದನ್ನು ಮುಂದುವರೆಸಿಕೊಂಡು ಹೋಗಿದೆ. ಹೀಗೆ ಉದಾರವಾದದ ಅರ್ಥವು ಹಲವಾರು ಅಂಶಗಳನ್ನು ಅವಲಂಬಿಸಿದೆ ಎಂದಿದ್ದಾರೆ.

## 8.3 ಉದಾರವಾದ ಲಕ್ಷಣಗಳು

ಉದಾರವಾದವು ಕೇವಲ ಒಂದು ರಾಜಕೀಯ ಸಿದ್ಧಾಂತವಲ್ಲ ಇದೊಂದು ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ನೈತಿಕ ಪರಿಕಲ್ಪನೆಯಾಗಿದೆ. ಇದನ್ನು ಅರ್ಥೈಸಬೇಕಾದರೆ ಅದರ ಮೂಲ ಲಕ್ಷಣಗಳ ಬಗ್ಗೆ ಪರಿಜ್ಞಾನವಿರಬೇಕು, ಹಾಲೋವಿನ್‌ರವರು ಸುಮಾರು 300 ವರ್ಷಗಳಿಗಿಂತ ಹೆಚ್ಚಿನ ಕಾಲಮಾನದಲ್ಲಿ ಬೆಳೆದು ಬಂದಿರುವ ಈ ಉದಾರವಾದವನ್ನು ಈ ಕೆಳಕಂಡ ಅಂಶಗಳ ಮೇಲೆ ವಿವರಿಸುವ ಪ್ರಯತ್ನ ಮಾಡಿದ್ದಾರೆ. ಆ ಮೂಲಕ ಉದಾರವಾದದ ಲಕ್ಷಣಗಳನ್ನು ಈ ಕೆಳಕಂಡಂತೆ ತಿಳಿಸಿದ್ದಾರೆ.

1. ಉದಾರವಾದವು ವ್ಯಕ್ತಿಯ ಪರಿಪೂರ್ಣ ಸ್ವಾತಂತ್ರ್ಯದ ಪ್ರತಿಪಾದಕ ಚಿಂತನೆ ಇಲ್ಲಿ ವ್ಯಕ್ತಿಯ ಧಾರ್ಮಿಕ ಚಿಂತನೆಗಳು ಸೇರಿವೆ ಎಂದಿದ್ದಾರೆ.
2. ಉದಾರವಾದದ ಮತ್ತೊಂದು ಲಕ್ಷಣವೆಂದರೆ ವ್ಯಕ್ತಿಯ ಇಚ್ಛೆಯ ಬಗೆಗೆ ಇದು ಹೊಂದಿರುವ ನಂಬಿಕೆ ಮತ್ತು ಸ್ವಾಯತ್ತತೆ
3. ಇದು ಮಾನವನ ಉತ್ತಮ ಗುಣಗಳ ಹಾಗೂ ಅವನ ವೈಚಾರಿಕತೆಯ ಬಗೆಗೆ ನಂಬಿಕೆ ಹೊಂದಿದೆ
4. ಇದು ಮಾನವನ ಜೀವ ಸ್ವತಂತ್ರ ಮತ್ತು ಆಸ್ತಿಯನ್ನು ಸೇರಿದಂತೆ ಕೆಲವು ಮೂಲಭೂತ ಹಕ್ಕುಗಳ ಬಗ್ಗೆ ನಂಬಿಕೆಯನ್ನು ಹೊಂದಿದೆ ಎಂದಿದ್ದಾರೆ.

ಇಂತಹುದೇ ಲಕ್ಷಣಗಳನ್ನು ಗುರುತಿಸುತ್ತ ಹ್ಯಾಂಡ್ರೂಲಾಕ್‌ರು ರಾಜಕೀಯ ಸಿದ್ಧಾಂತದ ಸುಸ್ತರದಲ್ಲಿ ಉದಾರವಾದದ ಮೂಲಭೂತ ಲಕ್ಷಣಗಳನ್ನು ಗುರುತಿಸಿ ನಾಲ್ಕು ತರವಾದ ಉದಾರವಾದಗಳನ್ನು ನಮ್ಮ ಮುಂದಿಟ್ಟಿದ್ದಾರೆ. ಅವುಗಳೆಂದರೆ

1. ಯುರೋಪಿಯನ್ ಉದಾರವಾದ,

2. ಸ್ವತಂತ್ರ ಮಾರುಕಟ್ಟೆಯ ಉದಾರವಾದ,

3. ಪ್ರಜಾಪ್ರಭುತ್ವ ಉದಾರವಾದ,

4. ಸುಧಾರಣಾವಾದ

ಉದಾಹರಣಾವಾದ ಇವರ ದೃಷ್ಟಿಯಲ್ಲಿ ಉದಾರವಾದ ರಾಜಕೀಯವನ್ನು ಅನುಸರಿಸಿದಾಗ ಸ್ವತಂತ್ರ ಜೀವನವನ್ನು ಬಯಸುತ್ತದೆ. ರಾಜ್ಯವು ಅಧಿಕಾರವನ್ನು ಚಲಾಯಿಸುವುದಕ್ಕಿಂತ ಸ್ವತಂತ್ರ ಜೀವನ ನೀಡಲು ಬಯಸುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಬಾರಬರಾ ಗುಡಬಿನ್‌ರವರು ಕೆಲವು ಉದಾರವಾದದ ಲಕ್ಷಣಗಳನ್ನು ಗುರುತಿಸಿರುವರು. ಅವುಗಳೆಂದರೆ

1. ಇದು ಮಾನವ ಸ್ವತಂತ್ರ ಜೀವಿ, ವೈಚಾರಿಕತೆ ಹೊಂದಿರುವವನು ಸ್ವಾಯತ್ತತೆಯ ಬಯಸುವುದು ಎಂಬ ಅಂಶಗಳನ್ನು ನಂಬಿಕೆಯನ್ನು ಹೊಂದಿದೆ ಎಂದಿದ್ದಾರೆ.
2. ಸರ್ಕಾರಗಳು ಒಪ್ಪಿಗೆ ಮತ್ತು ಒಪ್ಪಂದದಿಂದ ರಚಿಸಲ್ಪಡುತ್ತದೆ ಎಂಬ ಬಗ್ಗೆ ಸಹ ನಂಬಿಕೆ ಹೊಂದಿದೆ.
3. ಉದಾರವಾದವು ಸಂವಿಧಾನತ್ವ ಹಾಗೂ ಸಮಾನ ಕಾನೂನಿನಲ್ಲಿ ನಂಬಿಕೆಯುಳ್ಳದ್ದಾಗಿದೆ
4. ಇವರ ಪ್ರಕಾರ ಸರ್ಕಾರಗಳನ್ನು ರಚಿಸುವಾಗ ಪ್ರತಿನಿಧಿಗಳನ್ನು ಆಯ್ಕೆ ಮಾಡುವಾಗ ಜನರು ಸ್ವತಂತ್ರರಾಗಿರುತ್ತಾರೆ ಎಂಬುದಾಗಿದೆ

5. ಉದಾರವಾದದ ಲಕ್ಷಣಗಳಲ್ಲಿ ಸಮಾನತೆ, ಸಂಯಮ, ಹಾಗೂ ಸಾಮಾಜಿಕ ನ್ಯಾಯದ ನಂಬಿಕೆ ಹೊಂದಿದೆ ಎಂದಿದ್ದಾರೆ.

ಹೀಗೆ ಉದಾರವಾದವು ಮಾನವನ ಘನತೆ, ಸ್ವಾತಂತ್ರ್ಯ, ವೈಚಾರಿಕತೆ, ಹಕ್ಕುಗಳಲ್ಲಿ ನಂಬಿಕೆಯಿಟ್ಟ ಒಂದು ಪ್ರಮುಖ ಚಿಂತನೆಯಾಗಿದೆ ಎಂಬುದು ನಾಲು ಕಂಡುಕೊಳ್ಳಬಹುದು.

## 8.4 ಉದಾರವಾದ ಪ್ರಕಾರಗಳು

ಉದಾರವಾದವನ್ನು ನಾವು ಕೇವಲ ಏಕಮುಖವಾದ ಚಿಂತನೆಯೆಂದು ಅರ್ಥೈಸಿಕೊಳ್ಳಬಾರದು ಕಾರಣ ಚಾರಿತ್ರಿಕ ಹಿನ್ನೆಲೆಯಲ್ಲಿ ಬೆಳೆದ ಈ ಚರ್ಚೆಯು ತನ್ನ ಬೆಳವಣಿಗೆಯ ನಿಟ್ಟಿನಲ್ಲಿ ಕೇವಲ ಋಣಾತ್ಮಕವಾಗಿ ಅಲ್ಲದೇ ಧನಾತ್ಮಕವಾಗಿಯೂ ಪರಿಣಾಮ ಬೀರಿದೆ. ಈ ಪ್ರಮುಖ ಅಂಶಗಳು ಅಧ್ಯಯನಿಸುವುದೇ ಈ ಭಾಗದ ಕಾರ್ಯವಾಗಿದೆ.

### ಧನಾತ್ಮಕ ಉದಾರವಾದ

ಕೈಗಾರಿಕಾ ಕ್ರಾಂತಿ ಮತ್ತು ಪುನರುತ್ಥಾನ ಕಾಲದಲ್ಲೂ ಬೌದ್ಧಿಕ ಚಿಂತನೆಯಾಗಿ ಬೆಳೆದ ಈ ಉದಾರವಾದ ಹಾಬ್ಸ್, ಲಾಕ್, ಆಡಮ್ ಸ್ಮಿತ್, ಮಾಲ್ಥಸ್, ಬೆಂಥ್ಯಾಮ್, ಜೇಮ್ಸ್‌ಮಿಲ್, ಸ್ಪೆನ್ಸರ್, ಥಾಮಸ್ ಸೇನ್ ಮೊದಲಾದ ಬರಹಗಾರರ ಬರಹಗಳಲ್ಲಿ ಅಸ್ತಿತ್ವಕ್ಕೆ ಕಂಡುಕೊಂಡಿದೆ. ಇದನ್ನೇ ಸಾಂಪ್ರದಾಯಿಕ ಉದಾರವಾದವೆಂದು ನಾವು ಗುರುತಿಸುತ್ತೇವೆ. ಇದು ಲೆಸೇಫೇರ್ ಉದಾರವಾದ, ಮುಕ್ತ ಮಾರುಕಟ್ಟೆ ಉದಾರವಾದ, ವ್ಯಕ್ತಿಗತ ಉದಾರವಾದ ಎಂಬ ಹಲವಾರು ಹೆಸರುಗಳಿಂದ ಪ್ರಚಲಿತವಾಗಿದೆ. ಮುಖ್ಯವಾಗಿ ಇದು ಯುರೋಪಿನ ಮಧ್ಯಮಕಾಲಿನ ಪರಿಸ್ಥಿತಿಯ ಸಾಮಾಜಿಕ ಮತ್ತು ರಾಜಕೀಯ, ಆರ್ಥಿಕ

ಹಾಗೂ ಸಾಂಸ್ಕೃತಿಕ ಅಂಶಗಳನ್ನು ಬೆಂಬಲಿಸಿ ರಾಜ್ಯದಿಂದ ವ್ಯಕ್ತಿಯನ್ನು ಮುಕ್ತಗೊಳಿಸುವ ಚಿಂತನೆಯೊಂದಿಗೆ ಬೆಳೆದು ಬಂದ ವೈಚಾರಿಕ ಚಿಂತನೆಯಾಗಿದೆ. ಇದರ ಮುಖ್ಯ ಲಕ್ಷಣಗಳೆಂದರೆ

1. ವ್ಯಕ್ತಿವಾದದಲ್ಲಿ ಸಂಪೂರ್ಣ ನಂಬಿಕೆ
2. ಯಾವ ತೆರನಾದ ನಿಯಂತ್ರಣವಿಲ್ಲದ ಸ್ವಾಯತ್ತ ವ್ಯಕ್ತಿತ್ವದ ವಿಕಸನಕ್ಕೆ ಬೆಂಬಲಿಸುವ ನಂಬಿಕೆ
3. ಸ್ವತಂತ್ರವೆಂದರೆ ಯಾವುದೇ ಅಡಚಣೆ ಇಲ್ಲದಂತಹ ವ್ಯವಸ್ಥೆಯಲ್ಲಿ ನಂಬಿಕೆ ಹೊಂದಿರುವುದು
4. ವ್ಯಕ್ತಿಯ ಜೀವನ ಸ್ವತಂತ್ರ ಮತ್ತು ಆಸ್ತಿಯ ಹಕ್ಕನ್ನು ಯಾರಿಂದಲೂ ಕಸಿದುಕೊಳ್ಳದ ಹಕ್ಕು ಎಂದಿದ್ದಾರೆ.
5. ಸ್ವತಂತ್ರ ಅನಿಯಂತ್ರಿತ - ಆರ್ಥಿಕವಾಗಿ ಮುಕ್ತ ವ್ಯಾಪಾರ, ಕಾರ್ಮಿಕರಿಗೆ ಸ್ವಾತಂತ್ರ್ಯ, ಒಪ್ಪಂದ ಹಾಗೂ ಸ್ಪರ್ಧಾತ್ಮಕ ಸಮಾಜ ಮತ್ತು ಆರ್ಥಿಕ ವ್ಯವಸ್ಥೆಯಲ್ಲಿ ನಂಬಿಕೆ.
6. ರಾಜ್ಯವು ಒಂದು ಕೃತಕ ವ್ಯವಸ್ಥೆ ಇದು ವ್ಯಕ್ತಿಗತ ಸ್ವಾತಂತ್ರ್ಯ ವಿರೋಧಿಸಿದಲ್ಲಿ ವ್ಯಕ್ತಿಗಳು ಕ್ರಾಂತಿಕಾರರಾಗಬಹುದು ಎಂಬ ಬಗ್ಗೆ ಇರುವ ನಂಬಿಕೆ.
7. ರಾಜ್ಯದ ಚಟುವಟಿಕೆಗಳು ವ್ಯಕ್ತಿ ಸ್ವಾತಂತ್ರ್ಯದ ವಿರೋಧಿ ಚಟುವಟಿಕೆಗಳಾಗಿರುತ್ತವೆ ಎಂಬ ನಂಬಿಕೆ ಇದು ಧನಾತ್ಮಕ ಉದಾರವಾದದ ಲಕ್ಷಣಗಳು

## ಋಣಾತ್ಮಕ ಉದಾರವಾದ

ಜೆ.ಎಸ್.ಮಿಲ್‌ರವರ ಪ್ರತಿಪಾದನೆಯೊಂದಿಗೆ ಈ ಉದಾರವಾದದ ಅಸ್ತಿತ್ವವಿದೆ. ಇದು ಉದಾರವಾದದ ಬೆಳವಣಿಗೆಯಲ್ಲಿ 2ನೇ ಹಂತವಾಗಿದೆ. ಮೂಲಭೂತವಾಗಿ ಇದು ಅನಿಯಂತ್ರಿತ ಕೈಗಾರಿಕಾ ಮತ್ತು ಬಂಡವಾಳಶಾಹಿತ್ವದ ಹಾಗೂ ಶ್ರಮಿಕ ವರ್ಗವನ್ನು ಕುರಿತ ಚಿಂತನೆಗಳಿಂದ ರೂಪಿತವಾದ ಚರ್ಚೆಯಾಗದೆ. ಮಿಲ್‌ರವರು ಈ ಉದಾರವಾದದ ಮುಖ್ಯ ಚಿಂತಕರಾಗಿ ಬಂಡವಾಳಶಾಹಿತ್ವ ಅನಿಯಂತ್ರಿತವಾಗಿ ಬೆಳೆದಲ್ಲಿ ಇದು ಶೋಷಣೆಗೆ ಒಳಗಾದ ಸಮಾಜವು ಉದಾರವಾದವನ್ನು ಪ್ರತಿಪಾದಿಸುತ್ತಾ ನಡೆಯಲು ಸಾಧ್ಯವಿಲ್ಲ ಎಂಬ ಚಿಂತನೆಯೊಂದಿಗೆ ತಮ್ಮ ಸಿದ್ಧಾಂತ ಬೆಳೆಸಿದ್ದಾರೆ. ಯಾವುದೇ ಸಿದ್ಧಾಂತ ಇವರ ದೃಷ್ಟಿಯಲ್ಲಿ ಒಂದೆಡೆ ಸ್ವತಂತ್ರವನ್ನು ಮತ್ತೊಂದೆಡೆ ಶೋಷಣೆ ಬಯಸುವಂತಾಗಿರಬಾರದು ಎಂಬ ಚರ್ಚೆಯನ್ನು ಬೆಳೆಸಿ ನಡೆದ ಇವರ ಈ ಸಿದ್ಧಾಂತವು ಋಣಾತ್ಮಕ ಸಿದ್ಧಾಂತವೆಂದು ಪ್ರಚಲಿತವಾಗಿದೆ.

ಈ ಸಿದ್ಧಾಂತದ ಉತ್ತರಾರ್ಧದಲ್ಲಿ ಉದಾರವಾದವು ವ್ಯಕ್ತಿಗತವಾದ ಚರ್ಚೆಯನ್ನು ಬಯಸಿದರೂ ಇದು ಒಬ್ಬ ಸಾಮಾಜಿಕ ಜೀವಿಯಾದ ವ್ಯಕ್ತಿಯನ್ನು ಅವಲಂಬಿತವಾಗಿರುವುದರಿಂದ ಇವನ ಸ್ವತಂತ್ರದ ವ್ಯಾಪ್ತಿಯು ಇವನಂತೆಯೇ ಸಮಾಜದಲ್ಲಿರುವ ಇತರರಿಗೆ ಅಡಚಣೆಯಾಗಬಾರದು ಎಂದಿದ್ದಾರೆ. ಇಂತಹ ಚಿಂತನೆಯನ್ನು ಬೊಸಾಂತ್ಸೆ ಕೂಡ ಬೆಂಬಲಿಸಿದ್ದಾರೆ ಯಾವುದೇ ಸಂದರ್ಭದಲ್ಲಿ ವ್ಯಕ್ತಿಗತವಾದ ಸ್ವಾತಂತ್ರ್ಯವು ಮತ್ತೊಬ್ಬರ ಸ್ವಾತಂತ್ರಕ್ಕೆ ಅಡಚಣೆಯುಂಟಾಗುವುದೇ ಆದಲ್ಲಿ ರಾಜ್ಯವು ಈ ಬಗ್ಗೆ ಗಮನಹರಿಸಬೇಕು. ಕಾರಣ ಸಮಾಜದಲ್ಲಿ ಜನರ ಒಳಿತನ್ನು ಕಾಪಾಡುವುದೇ ರಾಜ್ಯದ ಮುಖ್ಯ ಕೆಲಸ ಎಂದಿದ್ದಾರೆ. ಹೀಗೆ ಋಣಾತ್ಮಕ ಉದಾರವಾದ ಚಿಂತನೆಯು ರಾಜ್ಯದ ಕಾರ್ಯದಲ್ಲಿ ಕೆಲವು ನಿಯಂತ್ರಣಗಳನ್ನು ಅಳವಡಿಸಿ ವ್ಯಕ್ತಿ ಸ್ವಾತಂತ್ರ್ಯದಲ್ಲೂ ಕೆಲವು ನಿಯಂತ್ರಕಗಳು ಅವಶ್ಯಕವೆಂದು ಪ್ರತಿಪಾದಿಸಿದ್ದಾರೆ.

ಪ್ರಜಾಪ್ರಭುತ್ವ ಕಲ್ಯಾಣ ರಾಷ್ಟ್ರಗಳಲ್ಲಿ ಉದಾರವಾದ

20ನೇ ಶತಮಾನದಲ್ಲಿ ಬೆಳಕಿಗೆ ಬಂದ ಉದಾರವಾದವನ್ನೇ ಪ್ರಜಾಪ್ರಭುತ್ವದ ಕಲ್ಯಾಣ ರಾಷ್ಟ್ರ ಸಿದ್ಧಾಂತ ಅಳವಡಿಸಿಕೊಂಡಿದ್ದರೂ ಸಹ 20ನೇ ಶತಮಾನದ ಮೊದಲಿನಲ್ಲಿ ಬಂಡವಾಳ ಶಾಹಿತ್ವದ ಲಕ್ಷಣಗಳಲ್ಲಿ ಆದ ಬದಲಾವಣೆಗಳು ಮಾನವನ ಗುಣ ಮತ್ತು ಸಾಮಾಜಿಕ ಒಳಿತಿನ ಬಗ್ಗೆ ಅವನ ನಂಬಿಕೆಗಳು ಬದಲಾಯಿಸಿದವು. ಕಲ್ಯಾಣ ರಾಜ್ಯವು ವ್ಯಕ್ತಿ ಮತ್ತು ಸಮಾಜದ ನಡುವಿನ ಹಿತಾಸಕ್ತಿಗಳನ್ನು ಮಿಶ್ರಿತಗೊಳಿಸಿ ಯಾರಿಂದಲೂ ಮತ್ತೊಬ್ಬರಿಗೆ ಅನ್ಯಾಯವಾಗದಂತೆ ಹಾಗೂ ರಾಜ್ಯವು ಇಂತಹ ಅನ್ಯಾಯಗಳನ್ನು ಮಾಡದಂತೆ ತಡೆಯುವ ಮತ್ತು ಆದ ಅನ್ಯಾಯಗಳಿಗೆ ನ್ಯಾಯವಾದ ತೀರ್ಪನ್ನು ಕೊಡುವ ಸಾಮಾಜಿಕ ಪ್ರಕ್ರಿಯೆಯನ್ನು ಕಂಡುಕೊಂಡ ಸಂದರ್ಭದಿಂದ ಕಲ್ಯಾಣ ರಾಷ್ಟ್ರದ ವ್ಯವಸ್ಥೆಯು ಅಸ್ತಿತ್ವಕ್ಕೆ ಬಂದಿವೆ. ಇವು ಮೊದಲಿಗೆ ಮೂರು ಹಂತಗಳಲ್ಲಿ ಉದಾರವಾದ ಚಿಂತನೆಗಳಲ್ಲಿ ಬದಲಾವಣೆಯನ್ನು ತಂದಿವೆ.

1. ವ್ಯಕ್ತಿ ಮತ್ತು ಸಂಸಾರಗಳಿಗೆ ನಿಗದಿತ ಆದಾಯವನ್ನು ಒದಗಿಸುವುದು
2. ಸಾಧ್ಯವಾದಷ್ಟು ಮಟ್ಟಿಗೆ ನಿರುದ್ಯೋಗಗಳಿಗೆ ಅನಾರೋಗ್ಯವಂತರಿಗೆ ಮತ್ತು ವಯೋವೃದ್ಧರಿಗೆ ಯಾವುದೇ ತೆರನಾದ ಅಭದ್ರತೆಯನ್ನು ಕಡಿಮೆ ಮಾಡುವುದು
3. ಯಾವುದೇ ವ್ಯತ್ಯಾಸವಿಲ್ಲದೆ ಎಲ್ಲ ನಾಗರಿಕರಿಗೂ ಒಂದೇ ತೆರನಾದ ಸೇವೆ ಒದಗಿಸುವುದು.

ಹೀಗೆ ಮಾಡುವುದರಿಂದ ಸಮುದಾಯದ ಜವಾಬ್ದಾರಿ ರಾಜ್ಯದ ಮೇಲೂ, ರಾಜ್ಯದ ಜವಾಬ್ದಾರಿ ಸಮುದಾಯದ ಮೇಲೂ ಇರುವುದರೊಂದಿಗೆ ಸಮಾಜದಲ್ಲಿ ಎಲ್ಲರೂ ಸಹ ಒಂದು ಸಾಧಾರಣ ಮಟ್ಟದಲ್ಲಿ ಬದುಕುವುದು ಸಾಧ್ಯವಾಗುತ್ತದೆ ಎಂಬುದು. ಇಂತಹ ಕಲ್ಯಾಣ ರಾಷ್ಟ್ರದ ಮುಖ್ಯ ಲಕ್ಷಣವೆಂದರೆ

1. ಇದು ಧಾನಾತ್ಮಕ ರಾಜ್ಯವಾಗಿದ್ದು, ಇದೊಂದು ಅವಶ್ಯಕ ಸಂಸ್ಥೆಯಾಗುತ್ತದೆ ಇಲ್ಲಿ ಪ್ರಜಾಪ್ರಭುತ್ವದ ಮನೋಭಾವನೆ ಇರುವುದರಿಂದ ರಾಜ್ಯವು ಜನರ ಸೇವೆಗ್ಯೆದು ಅವರ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತದೆ.
2. ಇದು ಪ್ರಜಾಪ್ರಭುತ್ವದ ವ್ಯವಸ್ಥೆಯಾಗಿದ್ದು ತನ್ನಲ್ಲಿರುವ ಎಲ್ಲ ಸಂಘ ಸಂಸ್ಥೆಗಳು ಪ್ರಜಾಪ್ರಭುತ್ವಕವಾಗಿಯೇ ಕಾರ್ಯನಿರ್ವಹಿಸಬೇಕೆಂದೆ ವ್ಯವಸ್ಥಿತ ಕಟ್ಟಳೆಗಳಿರುತ್ತವೆ.
3. ಈ ವ್ಯವಸ್ಥೆಯಲ್ಲಿ ಮಿಶ್ರಿತ ಆರ್ಥಿಕ ವ್ಯವಸ್ಥೆ ಇದ್ದು, ಉತ್ಪಾದನಾ ಮೂಲಗಳು ಬಂಡವಾಳಶಾಹಿಗಳ ಹಿಡಿತದಲ್ಲಿದ್ದರೂ ವ್ಯಕ್ತಿಗಳು ಶೋಷಣೆ ಒಳಗಾಗುವುದಿಲ್ಲ. ಕಾರಣ ಇಲ್ಲಿನ ಉತ್ಪಾದನಾ ಕಾರ್ಯಚರಣೆಗಳು ಸಾಕಷ್ಟು ಮಟ್ಟಿಗೆ ರಾಜ್ಯದ ಹಿಡಿತದಲ್ಲಿರುತ್ತದೆ
4. ಇಲ್ಲಿ ರಾಜ್ಯವು ಶಾಶ್ವತ ಸಂಸ್ಥೆಯಾಗಿದ್ದು ರಾಜ್ಯವು ನಿಷ್ಪಕ್ಷಪಾತವಾಗಿ ಕಾರ್ಯನಿರ್ವಹಿಸುತ್ತದೆ ಇದು ಕೇವಲ ಒಳಿತನ್ನು ಮಾತ್ರ ಬಯಸುವ ಸಂಸ್ಥೆಯಾಗಿದೆ.

ಹೀಗೆ ಉದಾರವಾದಿ ಚಿಂತನೆಯಲ್ಲಿ ಹಲವಾರು ಪ್ರಕಾರಗಳು ನಮಗೆ ಕಂಡು ಬರುತ್ತವೆ.

## 8.5 ಉದಾರವಾದ: ಸಾಂಪ್ರದಾಯಿಕ ಉದಾರವಾದದ ಬೆಳವಣಿಗೆ

ಸಾಂಪ್ರದಾಯಿಕ ಉದಾರವಾದವು ಉದಾರವಾದದ ಬೆಳವಣಿಗೆಯಲ್ಲಿ ಮೊದಲನೇ ಹಂತವಾಗಿದೆ. ಇದನ್ನು ಧನಾತ್ಮಕ

ಉದಾರವಾದವೆಂತಲೂ ಕರೆದಿದ್ದಾರೆ. ಇದು ರಾಜ್ಯಕ್ಕೆ ನಿಯಮಿತ ಚಟುವಟಿಕೆಯನ್ನು ನಿರ್ಧರಿಸಿದ್ದ ವ್ಯಕ್ತಿಗತವಾದ ಚಟುವಟಿಕೆಗೆ ರಾಜ್ಯವು ತಲೆಹಾಕಬಾರದು ಎಂಬ ಕಟ್ಟಳೆಯನ್ನು ಹಾಕಿತ್ತು. ನೂರಾರು ವರ್ಷಗಳ ಕಾಲ ಈ ಚಟುವಟಿಕೆಯಿಂದ ಧನಾತ್ಮಕವಾದುದಲ್ಲದೆ ಸಮಾಜದ ಅಭಿವೃದ್ಧಿಗೂ ಹಾನಿಕಾರಕವಾಗುವ ಚಟುವಟಿಕೆಗಳುಇದರ ಹೆಸರಿನಲ್ಲಿ ನಡೆದಿದ್ದವು. ಮಾನವನ ಅಭಿವೃದ್ಧಿಯ ಹಿನ್ನೆಲೆಯಲ್ಲಿ ತೊಡಕುಗಳನ್ನು ತಡೆದುಹಾಕುವ ಹೆಸರಿನಲ್ಲಿ ಶೋಷಣೆ ಮತ್ತು ಅಭಿಮಾನವೀಯ ಬಂಡವಾಳಶಾಹಿ ಬೆಳವಣಿಗೆಗೆ ಇದು ಅವಕಾಶ ಮಾಡಿಕೊಟ್ಟಿತ್ತು ಎಂದು ಫೀಟರ್ ಹೆಚ್. ಮರ್ಕಲ್ ತಿಳಿಸಿದ್ದಾರೆ. ಧಾರ್ಮಿಕ ಚಟುವಟಿಕೆಗಳು ಚರ್ಚುಗಳ ಅಧಿಕಾರವನ್ನು ವಿರೋಧಿಸುವ ನಿಟ್ಟಿನಲ್ಲಿ ಪ್ರಾರಂಭವಾಗಿ ಕ್ಯಾಥೋಲಿಕ್ ಚರ್ಚುಗಳನ್ನು ವಿರೋಧಿಸಿ ಕಾರ್ಮಿಕರ ನಡುವೆ ಧಾರ್ಮಿಕ ಸ್ವತಂತ್ರಕ್ಕಾಗಿ ಹೋರಾಟಗಳನ್ನು ಮಾಡಿ ಕೊನೆಗೆ ಧರ್ಮನಿರಪೇಕ್ಷ ಚಿಂತನೆಯನ್ನು ಇದು ಪ್ರತಿಪಾದಿಸಿತ್ತು. ವಿಜ್ಞಾನ ಕಣ್ಣಿಗೆ ಕಾಣುವ ಸತ್ಯವನ್ನು ಮಾತ್ರ ನಂಬಬೇಕು ಎಂಬ ಚರ್ಚೆಗಳೊಂದಿಗೆ ಧರ್ಮವನ್ನು ವ್ಯಕ್ತಿಯ ಆಂತರಿಕ ಚಟುವಟಿಕೆಯಿಂದಾಗಿ ಪರಿಗಣನೆಗೆ ಸರ್ಕಾರದ ಚಟುವಟಿಕೆಗಳಲ್ಲಿ ಧರ್ಮದ ಭಾಗವಹಿಸುವಿಕೆ ತಡೆದವು.

ಈ ಸಂಪ್ರದಾಯಿಕ ಉದಾರವಾದದ ಕೊಡುಗೆಗಳೆಂದರೆ ಆರ್ಥಿಕ ಜಗತ್ತಿನಲ್ಲಿ ಕಂಡು ಬರುವ ವಿಚಾರಗಳು. 18ಮತ್ತು 19 ನೇ ಶತಮಾನದ ಮುಖ್ಯ ಅರ್ತಸಾಸ್ತ್ರಜ್ಞರುಗಳಾದ ಆಡಮ್‌ಸ್ಮಿಥ್ ತಮ್ಮ ಬರಹಗಳಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ತನ್ನದೇಯಾದ ಜೀವನವನ್ನು ನಡೆಸಬೇಕು ತನ್ನ ಆಸಕ್ತಿಗಳನ್ನು ಪೂರೈಸುವ ದಿಕ್ಕಿನಲ್ಲಿ ರಾಜ್ಯವಾಗಲಿ ಧರ್ಮವಾಗಲಿ ಅಡಚಣೆಯನ್ನುಂಟು ಮಾಡಬಾರದು ಎಂಬ ಚರ್ಚೆಗಳನ್ನು ಪ್ರತಿಪಾದಿಸಿದವು ಇದನ್ನು ಬಹಳಷ್ಟು ಬಂಡವಾಳಶಾಹಿಗಳು ಮತ್ತು ಕೈಗಾರಿಕೋದ್ಯಮಗಳು, ವ್ಯಾಪಾರೊದ್ಯಮಿಗಳು ಬೆಂಬಲವನ್ನು ನೀಡಿದರು. ಇದೇ ಚಿಂತನೆಯನ್ನು ಮತ್ತಷ್ಟು ವಿಶಾಲಗೊಳಿಸಿದವರು ಡೇವಿಡ್ ರಾಕಾರ್ಡ್, ಥಾಮಸ್ ರಾಬರ್ಟ್ ಮಾಲ್ಥಸ್. ಇವರುಗಳು ತಮ್ಮ ಬರಹಗಳಲ್ಲಿ ಸ್ವನಿಯಂತ್ರಿತ ಮಾರುಕಟ್ಟೆಗಾಗಿ ಚರ್ಚಿಸಿದರು. ವ್ಯಕ್ತಿ ತಾನು ಬಯಸಿದ ಕಾರ್ಯಕ್ಷೇತ್ರದಲ್ಲಿ ದುಡಿಮೆ ಮಾಡುವುದು ಒಪ್ಪಂದದಷ್ಟು ಕಾಲ ಶ್ರಮಿಸುವುದು ಮುಕ್ತ ಸ್ಪರ್ಧೆ, ಮುಕ್ತ ಮಾರುಕಟ್ಟೆ, ಮುಕ್ತ ಬ್ಯಾಂಕ್, ಮುಕ್ತವಾದ ಬಡ್ಡಿ ಹೀಗೆ ಇವರ ಚರ್ಚೆಗಳು ಸ್ಪರ್ಧಾತ್ಮಕವಾಗಿ ವ್ಯಾಪಾರವನ್ನು ಮಾಡುವ ಮತ್ತು ಬೆಲೆಗಳನ್ನು ಹತೋಟಿಗೆ ತರುವ ಇದರಿಂದ ರಾಷ್ಟ್ರದ ಅಭಿವೃದ್ಧಿಗೆ ಸಹಾಯವೆಸಗುವ ಚಿಂತನೆಗಳಿದ್ದವು. ಹೀಗೆ ಬಂಡವಾಲಶಾಹಿತ್ವದಿಂದ ಸಮಾಜಕ್ಕೆ ಒಳಿತಾಗುವುದು ರೈತರಿಗೆ ಮತ್ತು ಶ್ರಮಿಕ ವರ್ಗಕ್ಕೆ ಹೆಚ್ಚಿನ ಆದಾಯ ದೊರಕುವುದು ಎಂದಿದ್ದರು. ಆದರೆ ಹಾಗಾಗಲಿಲ್ಲ. ಇಲ್ಲಿ ಕಾರ್ಮಿಕನಿಗೆ ಶ್ರಮಕ್ಕೆ ತಕ್ಕ ಫಲ ದೊರಕಲಿಲ್ಲ. ಕೂಲಿ ಮತ್ತು ಲಾಭದ ನಡುವಿನ ಸಂಬಂಧದಿಂದ ವ್ಯಾಪಾರದಲ್ಲಿ ಹೆಚ್ಚಿನ ಬಂಡವಾಳ ಹೂಡಿಕೆಗೆ ಅನವಶ್ಯಕವಾಯಿತು. ಇಂತಹ ಚಿಂತನೆಗಳನ್ನು ಮಾಲ್ಥೂಸ್‌ತನ್ನ ಜನಸಂಖ್ಯಾ ನೀತಿಯ ಬಗ್ಗೆ ಬರೆಯುತ್ತಾ ಜನಸಂಖ್ಯೆ ಹೆಚ್ಚಾದಂತೆ ಆಹಾರ ಸರಬರಾಜು ಕಡಿಮೆಗೊಳ್ಳುತ್ತದೆ ಎಂದು ಚರ್ಚಿಸಿದರು. ಇದರಿಂದ ರೈತವರ್ಗವು ಬರಗಾಲಕ್ಕೆ ತುತ್ತಾಗಿ ನಗರಗಳಿಗೆ ಬಂದು ದುಡಿಮೆಗಾಗಿ ನಡೆಸುವ ಪ್ರಯತ್ನದಿಂದ ಅವರುಗಳಿಗೆ ಕಡಿಮೆ ಕೂಲಿ ದೊರಕುತ್ತದೆ. ಇದು ಹೆಚ್ಚಿನ ಬಡತನಕ್ಕೆ ಕಾರಣವಾಗುತ್ತವೆ ಎಂದು ಚರ್ಚಿಸಿದರು.

ಜರ್ಮಿ ಬೆಂಥ್ಯಾಮ್ ಮತ್ತು ಮಿಲ್‌ರಂತಹ ಇಂಗ್ಲಿಷ್ ಅಥವಾ ಆಂಗ್ಲ ಉಪಯುಕ್ತತಾವಾದಿಗಳು ಮಾರುಕಟ್ಟೆ ಆರ್ಥಿಕ ನೀತಿಯನ್ನು ಒಪ್ಪಿದರೂ ಅದರ ಉಪಯುಕ್ತತೆಯನ್ನು ಚರ್ಚಿಸಿ ಸಂವಿಧಾನಾತ್ಮಕವಾಗಿ ಮಾರುಕಟ್ಟೆಗಳನ್ನು ನಿಯಂತ್ರಿಸುವ ಚರ್ಚೆಯನ್ನು ಪ್ರತಿಪಾದಿಸಿದರು. ಇವರ ಪ್ರಕಾರ ಅತಿ ಹೆಚ್ಚು ಜನರು, ಅತಿ ಹೆಚ್ಚಿನ ಸಂತಸವನ್ನು ಪಡಬೇಕು ಎಂಬ ಚರ್ಚೆ ಮಾನವನನ್ನು ಅವನ ನೋವು ನಲಿವಿನ ಬಗ್ಗೆ ಪ್ರಜ್ಞೆ ಹೊಂದಿದವನೆಂದು ಪರಿಗಣಿಸಿ ವ್ಯಕ್ತಿ ತನ್ನ ಸುಖವನ್ನು ಯಾವ ರೀತಿಯಲ್ಲಿ ಬಯಸುತ್ತಾನೋ ಅದಕ್ಕೆ ಅವಕಾಶ ಮಾಡಿಕೊಡುವುದೇ ಉತ್ತಮ ಸರ್ಕಾರದ ಕೆಲಸವೆಂದು ಚರ್ಚಿಸಿದರು. ಹೀಗೆ ರಾಜಕೀಯದಲ್ಲಿ ಸಾಂಪ್ರದಾಯಿಕ ಉದಾರವಾದವು ರಾಜ್ಯದ ಸ್ವೇಚ್ಛಾ ಶಕ್ತಿಯನ್ನು ತಡೆದು ಸಂವಿಧಾನಿಕ ನಿಯಂತ್ರಣಕ್ಕೆ ಒಳಪಡಿಸಿತು. 17ನೇ

ಶತಮಾನದಲ್ಲಿ ಹೋರಾಟವೇ ಬ್ರಿಟೀಷಿನ ಸಂಸತ್ತು ಆ ರಾಜ್ಯದ ರಾಜತ್ವಕ್ಕಿಂತ ವಿಜಯಿಯಾಯಿತು .1688ರ ಈ ಒಂದು ಹೋರಾಟವನ್ನೇ ಲೋರಿಯಸ್ ಕ್ರಾಂತಿ ಎಂದು ಕರೆಯುತ್ತಾರೆ. ಇದೇ ಉದಾರವಾದದ ಮೊದಲನೇ ಕ್ರಾಂತಿ ಕೂಡ. ಇದು ರಾಜಕೀಯ ಉದಾರವಾದದ ಮೂಲವಾಗಿದ್ದು ರಾಜತ್ವ ಕೊನೆಗಾಣಿಸಿದ್ದು ಇದರ ವಿಜಯೋತ್ಸವವಾಗಿದೆ. ತದನಂತರದಲ್ಲಿ ಪ್ರಜಾಪ್ರಭುತ್ವ ಬೆಳೆದು ಎಲ್ಲರಿಗೂ ಓಟಿನ ಹಕ್ಕು ದೊರಕಿದ್ದನ್ನು ಇಲ್ಲಿ ನೆನೆಯಬಹುದಾಗಿದೆ.

ಜಾನ್‌ಲಾಕ್‌ರವರನ್ನು ರಾಜಕೀಯ ಉದಾರವಾದದ ಪ್ರತಿಪಾದಕನೆಂದು ಕರೆಯಬಹುದಾಗಿದೆ. ಇವರು ಮೊಟ್ಟ ಮೊದಲಿಗೆ ಸಂವಿಧಾನ ಸರ್ಕಾರದ ಬಗ್ಗೆ ಚರ್ಚಿಸಿದವರಾಗಿದ್ದಾರೆ. ಇವರು ನೈಸರ್ಗಿಕವಾಗಿ ರಾಜ್ಯವು ಅಸ್ತಿತ್ವಕ್ಕೆ ಬಂದಿಲ್ಲ. ಜನರು ತಮ್ಮ ಆಸ್ತಿಯನ್ನು ಕಾಪಾಡಿಕೊಳ್ಳುವ ಸಲುವಾಗಿ ರಾಜ್ಯವನ್ನು ಸೃಷ್ಟಿಸಿದ್ದಾರೆ. ಹೀಗಾಗಿ, ರಾಜ್ಯದ ಮುಖ್ಯ ಕೆಲಸವೆಂದರೆ ವ್ಯಕ್ತಿಗತ ಜೀವನ ಆಸ್ತಿ ಸ್ವಾತಂತ್ರ್ಯಗಳನ್ನು ಕಾಪಾಡುವುದಾಗಿದೆ. ಅಂತಹ ಕೆಲಸವನ್ನು ರಾಜ್ಯವು ಮೊದಲು ಸಾಧ್ಯವಾಗದೇ ಇದ್ದಲ್ಲಿ ಅಂತಹ ರಾಜ್ಯವು ಅಸ್ತಿತ್ವದಲ್ಲಿಡಲು ಬಿಡಬಾರದೆಂದಿದ್ದಾರೆ. ವೈಚಾರಿಕತೆಯುಳ್ಳ ವ್ಯಕ್ತಿ ರಾಜ್ಯವು ಯಾವ ಕೆಲಸಗಳನ್ನು ಮಾಡಬೇಕೆಂಬುದನ್ನು ನಿರ್ಣಯಿಸಬೇಕು. ಆದರೆ ರಾಜ್ಯವೇ ವೈಚಾರಿಕತೆಯೊಳ ವ್ಯವಸ್ಥೆ ಎಂದಿದ್ದಾರೆ. ರಾಜ್ಯ ಅಸ್ತಿತ್ವಕ್ಕೆ ಬಂದಿದ್ದ ಕಾರಣ ಇದು ಹೆಚ್ಚಿನ ಅಧಿಕಾರವನ್ನು ತನ್ನದಾಗಿಸಿಕೊಳ್ಳಲು ಸಾಧ್ಯವಿಲ್ಲ. ರಾಜ್ಯದ ಕಾನೂನುಗಳು ಈ ಕಾರಣದಿಂದ ನೈಸರ್ಗಿಕ ಕಾನೂನುಗಳಿಗೆ ಹತ್ತಿರವಾಗಿರಬೇಕು ಎಂಬುದು ಇವರ ಸಿದ್ಧಾಂತವಾಗಿದೆ.

ಸಾಮಾಜಿಕ ವಿಚಾರಗಳಲ್ಲಿ ಸಾಂಪ್ರದಾಯಿಕ ಉದಾರವಾದವು ವರ್ಗ ರಚನೆಯನ್ನು ತೊಡೆದು ಹಾಕುವ ಚರ್ಚೆಗಳನ್ನು ಪ್ರತಿಪಾದಿಸಿದೆ. ಜಾತಿ, ಮತ, ಧರ್ಮ, ಹಾಗೂ ವರ್ಣ ಹೀಗೆ ಯಾವುದೇ ಕಾರಣಕ್ಕಾಗಿ ವ್ಯಕ್ತಿಗಳ ನಡುವೆ ವ್ಯತ್ಯಾಸಗಳನ್ನು ಇದು ಒಪ್ಪಲಿಲ್ಲ. ಹೀಗೆ ಸಾಂಪ್ರದಾಯಿಕ ಉದಾರವಾದವು ರಾಜಕೀಯ, ಸಾಮಾಜಿಕ, ಮತ್ತು ಆರ್ಥಿಕ ಚಿಂತನೆಗಳ ಮುಖಾಂತರ ಸಮಾಜದಲ್ಲಿ ಬದಲಾವಣೆ ತರುವ ಪ್ರಯತ್ನ ಮಾಡಿತು.

## 8.6 ಟೀಕಾತ್ಮಕ ಮೌಲ್ಯಮಾಪನ

ಉದಾರವಾದವು ಒಂದು ಅಭಿವೃದ್ಧಿಪರ ಹಾಗೂ ಬದಲಾವಣೆಗೆ ಹೊಂದಿಕೊಳ್ಳುವಂತ ಚಿಂತನೆಯಾಗಿದೆ. ಸುಮಾರು 400 ವರ್ಷಗಳಿಗಿಂತ ಹೆಚ್ಚು ಕಾಲದಲ್ಲಿ ಇದು ಚಾರಿತ್ರಿಕ ಘಟನೆಗಳನ್ನು ತನ್ನ ಚಿಂತನೆಗಳೊಂದಿಗೆ ಬೆರೆಸಿಕೊಂಡು ಬದಲಾವಣೆಗೆ ಪೂರಕವಾಗಿ ಮುನ್ನಡೆದಿದೆ. ನೈಸರ್ಗಿಕ ಹಕ್ಕುಗಳಿಂದ ಪ್ರಾರಂಭವಾಗಿ ಸಮಾಜ ಸುಧಾರಣೆ, ಸಮಾಜ ಕಲ್ಯಾಣ ಇವುಗಳೆಡೆಗೆ ತಮ್ಮ ಚಿಂತನೆಗಳನ್ನು ಹರಿಸಿ ಸ್ವತಂತ್ರ ಸಮಾನತೆ, ಭ್ರಾತೃತ್ವ, ಪ್ರಜಾಪ್ರಭುತ್ವ ಇವೆ ಮುಂತಾದ ಉತ್ತಮ ಚಿಂತನೆಯನ್ನು ಟೀಕೆ ಮಾಡುತ್ತಾ ಬಾಟಮ್‌ಮೋರ್ ಹೀಗೆ ಬರೆದಿದ್ದಾರೆ. ಒಬ್ಬರು ಉದಾರಿಯಾದಾಗ ಮಾತ್ರ ಮತ್ತೊಬ್ಬರು ಉದಾರಿಯಾಗಬಹುದು. ಹೀಗೆ ಉದಾರವಾದದ ಬಗ್ಗೆ ಶ್ರಮಿಕ ವರ್ಗದ ದೃಷ್ಟಿಯಿಂದ ರೈತವರ್ಗದಿಂದ, ಹಾಗೂ ಸೈನಿಕ ವರ್ಗದಿಂದ, ಟೀಕೆಗಳು ಕಂಡು ಬಂದಿವೆ. ಆದರೆ ಉದಾರವಾದವು ಎಲ್ಲೆಡೆಯಲ್ಲೂ ಒಂದೇ ತೆರನಾಗಿ ಇರಲು ಸಾಧ್ಯವಾಗದೆ ಇರುವುದರಿಂದ ಹಾಗೂ ಸಾಂಪ್ರದಾಯಿಕ ಉದಾರವಾದಿ ಚರ್ಚೆಗಳಲ್ಲಿ ಬರುವ ಎಲ್ಲ ಅಂಶಗಳನ್ನು ಒಂದೆಡೆಗೆ ಆತರಣೆಗೆ ತರಲು ಸಾಧ್ಯವಿಲ್ಲದೇ ಇರುವುದರಿಂದ ಈ ಉದಾರವಾದವನ್ನು ಹೊಗಳಲು ಸಾಧ್ಯವಿಲ್ಲ.

## ನಿಮ್ಮ ಪ್ರಗತಿ ಪರಿಶೀಲನೆ - 1

ಸೂಚನೆ: 1. ಈ ಕೆಳಗೆ ಬಿಟ್ಟಿರುವ ಜಾಗವನ್ನು ನಿಮ್ಮ ಉತ್ತರಕ್ಕೆ ಉಪಯೋಗಿಸಿಕೊಳ್ಳಿ.

2. ಈ ಘಟಕದ ಕೊನೆಯಲ್ಲಿ ನೀಡಿರುವ ಉತ್ತರದೊಂದಿಗೆ ನಿಮ್ಮ ಪ್ರಗತಿಯನ್ನು ಪರಿಶೀಲಿಸಿಕೊಳ್ಳಿ.

**1. ಉದಾರವಾದದ ಅರ್ಥವನ್ನು ವಿವರಿಸಿ.**

**2. ಉದಾರವಾದದ ಲಕ್ಷಣಗಳನ್ನು ಚರ್ಚಿಸಿ.**

**3. ಉದಾರವಾದದ ಪ್ರಕಾರಗಳನ್ನು ಗುರುತಿಸಿ.**

**4. ಸಾಂಪ್ರದಾಯಿಕ ಉದಾರವಾದ ಬೆಳವಣಿಗೆಯನ್ನು ವಿಮರ್ಶಿಸಿ.**

## 8.7 ಒಟ್ಟಾರೆ ಅಭಿಪ್ರಾಯ

ಉದಾರವಾದವು ಮಾನವ ಅಭಿವೃದ್ಧಿಯನ್ನು ಅನುಸರಿಸಿ ಬೆಳೆದ ಚಿಂತನೆಯಾದರೂ ಸಹ ಇದು ಸಂಪೂರ್ಣವಾಗಿ ಋಣಾತ್ಮಕವಾಗಿ ಪ್ರಕಟಗೊಳ್ಳದಿದ್ದರೂ ಹಂತಹಂತಗಳಲ್ಲಿ ಮಾರ್ಪಾಟುಗಳನ್ನು ಮಾಡಿಕೊಳ್ಳುತ್ತಾ ಇದು ಧನಾತ್ಮಕ ಬೆಳವಣಿಗೆ ಕಂಡುಕೊಂಡಿತು. ಹೀಗೆ ಬೆಳೆದ ಉದಾರವಾದವು ಕಾಲಾನುಕ್ರಮೇಣ ತನ್ನಲ್ಲಿ ತಂದುಕೊಂಡ ಮಾರ್ಪಾಟಿನಿಂದ ವ್ಯಕ್ತಿ, ರಾಜ ಮತ್ತು ಸಮಾಜದ ನಡುವಿನ ಸುಸಂಬಂಧವನ್ನುಬಲಿಷ್ಟಗೊಳಿಸಲು ಪ್ರಯತ್ನಿಸಿತು. ಹೀಗೆ ಉದಾರವಾದವು ಕಾಲಕ್ಕೆ ತಕ್ಕಂತೆ ಬದಲಾವಣೆಗಳನ್ನು ತಂದುಕೊಂಡು ಇಂದಿಗೂ ಮುಂದುವರೆದಿದೆ.

## 8.8 ಕಠಿಣ ಪದಗಳು

| | |
|---|---|
| ವೈಚಾರಿಕತೆ | ಒಂದು ವಿಚಾರದ ಬಗೆಗಿನ ಅರಿವು |
| ಸ್ವಾಯತ್ತತೆ | ಸ್ವತಂತ್ರವಾಗಿರುವುದು |
| ಚಾರಿತ್ರಿಕ | ಐತಿಹಾಸಿಕ |
| ಶ್ರಮಿಕ | ದುಡಿಮೆಗಾರ |

## 8.9 ಕೆಲವು ಉಪಯುಕ್ತ ಗ್ರಂಥಗಳು


| | |
|---|---|
| ಎಫ್.ಡಬ್ಲ್ಯೂ ಕಾಕರ್ | ರೀಸೆಂಟ್ ಪೊಲಿಟಿಕಲ್ ಥಿಯರಿ |
| ಎಸ್.ಪಿ. ವರ್ಮಾ | ಮಾಡರ್ನ್ ಪೊಲಿಟಿಕಲ್ ಥಿಯರಿ |
| ಬಿ. ರಾಬರ್ಟ್ | ಥಿಯರೀಸ್ ಆಫ್ ಪೊಲಿಟಿಕಲ್ ಸಿಸ್ಟಮ್ಸ್ |
| ಡಾ. ಕೆ.ಜೆ. ಸುರೇಶ್ | ಆಧುನಿಕ ರಾಜಕೀಯ ಸಿದ್ಧಾಂತ |


## 8.10 ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ

**ನಿಮ್ಮ ಪ್ರಗತಿ ಪರಿಶೀಲನೆ - 1**

1. ನೋಡಿ ವಿಭಾಗ 8.2
2. ನೋಡಿ ವಿಭಾಗ 8.3
3. ನೋಡಿ ವಿಭಾಗ 8.4
4. ನೋಡಿ ವಿಭಾಗ 8.5

# ಘಟಕ 9 ಹೊಸ ಉದಾರವಾದ

## ರಚನೆ


9.0 ಉದ್ದೇಶಗಳು

9.1 ಪ್ರಸ್ತಾವನೆ

9.2 ಉದಾರವಾದದ ಬೆಳವಣಿಗೆ

9.3 ಹೊಸ ಉದಾರವಾದ

9.4 ಪ್ರಚಲಿತ ಚರ್ಚೆ

9.5 ಕೆಲವು ಟೀಕೆಗಳು

9.6 ಒಟ್ಟಾರೆ ಅಭಿಪ್ರಾಯ

9.7 ಕೆಲವು ಉಪಯುಕ್ತ ಗ್ರಂಥಗಳು

9.8 ಕಠಿಣ ಪದಗಳು

9.9 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು


VOP_FL_MA_Pol_Sci_C-8(1-7)_TF.20_F.No.57

57

## 9.0 ಉದ್ದೇಶಗಳು

ಈ ಬರಹದ ಉದ್ದೇಶವು ಉದಾರವಾದಿ ಸಿದ್ಧಾಂತದ ಇತ್ತೀಚಿನ ಬೆಳವಣಿಗೆಗಳನ್ನು ನಿಮಗೆ ಪರಿಚಯಿಸುವುದಾಗಿದೆ. ಇದನ್ನು ಆಧುನಿಕ ಉದಾರವಾದವೆಂದು ಕರೆಯುತ್ತಾರೆ. ಮೂಲತಃ ಹೊಸ ಉದಾರವಾದಿ ಚರ್ಚೆಯು ಉದಾರವಾದಕ್ಕೆ ಸ್ವತಂತ್ರ ಮಾರುಕಟ್ಟೆಯ ಧನಾತ್ಮಕ ಚಿಂತನೆಯನ್ನು ತಳಹದಿಯಾಗಿ ನೀಡುವುದೇ ಆಗಿದೆ. ಈ ಪಾಠವನ್ನು ಓದಿದ ನಂತರ ತಾವು ಉದಾರವಾದದ ಬೆಳವಣಿಗೆ, ಹೊಸ ಉದಾರವಾದದ ಸ್ಪಂದನೆ ಹಾಗೂ ಪ್ರಚಲಿತದಲ್ಲಿ ಈ ಉದಾರವಾದಿ ಚಿಂತನೆಗೆ ಪೂರಕವಾದ ಚರ್ಚೆಗಳೇನು ಎಂಬುದನ್ನು ಪರಿಚಯಿಸುತ್ತದೆ. ಇಂತಹ ಪರಿಚಯವು ರಾಜಕೀಯ ಸಿದ್ಧಾಂತದಲ್ಲಿ ತಮ್ಮ ಆಸಕ್ತಿಯನ್ನು ಹೆಚ್ಚಿಸುತ್ತದೆ ಎಂದು ಭಾವಿಸುತ್ತೇನೆ.

## 9.1 ಪ್ರಸ್ತಾವನೆ

ಉದಾರಾವದವು ಒಟ್ಟಾರೆ ಒಂದು ಧೀರ್ಘವಾದ ಚಳುವಳಿಯಾಗಿ ಇದು ಒಮ್ಮೆಗೆ ಪಾಶ್ಚಿಮಾತ್ಯ ಯುರೋಪ್ ಮತ್ತು ಅಮೇರಿಕೆಯಲ್ಲಿ ತನ್ನ ಅಸ್ತಿತ್ವವನ್ನು ಕಂಡುಕೊಂಡರೂ ಇದು ಮೂಲಭೂತವಾದ ಲಕ್ಷಣಗಳ ಬೆಳವಣಿಗೆಯು ಮೊದಲಿಗೆ ಇಂಗ್ಲೆಂಡಿನಲ್ಲಿ ಪ್ರಾರಂಭವಾಯಿತು. ಹಾಲೆಂಡ್ ಮತ್ತು ಸ್ಪೇನ್‌ನಲ್ಲಿಯೂ ಇದು ಬಲಿಷ್ಠವಾಗಿತ್ತು. ಜರ್ಮನಿಯಲ್ಲಿ ಇದು ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದಿತು. ಫ್ರಾನ್ಸ್‌ನಲ್ಲಿ ಇದೊಂದು ವರ್ಗ ಸಂಬಂಧಿತ ಚರ್ಚೆಯಾಗಿ ಪರಿವರ್ತನೆ ಹೊಂದಿತು. ಅದರಲ್ಲಿ ಸಾಮಾನ್ಯ ಜನರನ್ನು ಟೀಕಿಸುವುದರಲ್ಲಿ ಮುಂಚೂಣಿಯಲ್ಲಿ ಇದ್ದಂತೆ ಕಂಡು ಬರುತ್ತಿತ್ತು. ಹೀಗಾಗಿ ಒಂದು ರಾಜಕೀಯ ಉದಾರವಾದಿ ತನ್ನ ಅಸ್ತಿತ್ವವನ್ನು ಕಂಡುಕೊಂಡ ಈ ಚಿಂತನೆಯ ಶೋಷಣೆಯ ವಿರುದ್ಧದ ಧ್ವನಿಯಾಗಿ ಕಾರ್ಮಿಕರ ವರ್ಗ ಹೋರಾಟವಾಗಿ ಹಾಗೂ ಸಮಾಜವಾದಿ ಚಿಂತನೆಯಾಗಿ ಮಾರ್ಕ್ಸ್‌ವಾದವನ್ನು ತನ್ನೊಡಗೂಡಿಸಿಕೊಂಡು ಫ್ರಾನ್ಸ್‌ನಲ್ಲಿ ಬೆಳೆಯಿತು. 19ನೇ ಶತಮಾನದಲ್ಲಿ ಹೆಚ್ಚು ಕೈಗಾರಿಕೆಗಳನ್ನು ಹೊಂದಿದ್ದ ಇಂಗ್ಲೆಂಡ್‌ನಲ್ಲಿ ಈ ವಾದವು ಒಂದು ರಾಷ್ಟ್ರೀಯ ಸಿದ್ಧಾಂತವಾಗಿ ರಾಷ್ಟ್ರೀಯ ನೀತಿಯಾಗಿ ಬೆಳೆಯಿತು. ಶಾಂತತೆಯಿಂದ ರಚನಾತ್ಮಕವಾಗಿ ಸಮಾಜಗಳ ಪರಿವರ್ತನೆಗಳಲ್ಲಿ ಪಾತ್ರವಹಿಸಿದ ಈ ಚಿಂತನೆಯು ಇದು ಮೊಟ್ಟಮೊದಲಿಗೆ ಕೈಗಾರಿಕಾ ಸ್ವಾತಂತ್ರ್ಯವನ್ನು ನೀಡಿ ಮಧ್ಯಮ ವರ್ಗಕ್ಕೆ ಹಾಗೂ ಕಾರ್ಮಿಕ ವರ್ಗಕ್ಕೆ ಮತದಾನದ ಹಕ್ಕನ್ನು ನೀಡಿ ಅವರ ಬದುಕಿಗೆ ಕೈಗಾರಿಕೋದ್ಯಮದಿಂದ ಆಗಬಹುದಾದ ಅನಾನುಕೂಲತೆಗಳನ್ನು ತಡೆಯುವ ಶಕ್ತಿಯನ್ನು ನೀಡಿತು. ಇಂತಹ ಘನಾತ್ಮಕ ಮತ್ತು ಋಣಾತ್ಮಕ ಉದಾರವಾದಿ ಚಿಂತನೆಗಳನ್ನು ಚರಿತ್ರೆಯ ಹಿನ್ನೆಲೆಯಲ್ಲಿ ನಾವಿಲ್ಲಿ ಅಧ್ಯಯನಿಸಬಹುದಾಗಿದೆ. ಇಂತಹ ವಿಭಜನೆಯು ಉದಾರವಾದದ ಅರ್ಥವನ್ನು ತಿಳಿದುಕೊಳ್ಳುವ ಪ್ರಾರಂಭದಲ್ಲಿ ಅವಶ್ಯಕವಾಗಿದ್ದು ಇದು ಒಂದು ರಾಷ್ಟ್ರೀಯ ಸಮುದಾಯದ ಆದರ್ಶವಾಗಿ ಬೆಳೆದು ಎಲ್ಲ ವರ್ಗಗಳ ಹಿತಾಸಕ್ತಿಯನ್ನು ಕಾಪಾಡುವ ಚಿಂತನೆಯಾಗಿ ಪ್ರಭುದ್ಧತೆಯನ್ನು ಇಂದು ಪಡೆದಿದೆ. ಈ ಮೊದಲು ಬೆಳೆದ ಉದಾರವಾದವು (ಋಣಾತ್ಮಕ) ಒಂದು ಕ್ರಾಂತಿಯ ಕಾಲದಲ್ಲಿ ಬೆಳೆದದ್ದು ತದನಂತರದಲ್ಲಿ ಇದು ವೈಯಕ್ತಿಕವಾಗಿ ಪರಿವರ್ತನೆ ಹೊಂದಿ ಇಂದು ವ್ಯಕ್ತಿಗತವಾಗಿ ವ್ಯಕ್ತಿಯ ಹಿತಾಸಕ್ತಿಗಳನ್ನು ಕಾಪಾಡುವ ಹಾಗೂ ಒಟ್ಟಾರೆ ಸಮಾಜದ ಒಳಿತನ್ನು ಸಾಂತ್ವಾನಗೊಳಿಸುವ ಅಂಶವಾಗಿ ಬೆಳೆದು ನಿಂತಿದೆ. ಹೀಗೆ ಒಂದೆಡೆ ಧನಾತ್ಮಕವಾಗಿಯೂ ಮತ್ತೊಂದೆಡೆ ಋಣಾತ್ಮಕವಾಗಿ ಈ ಉದಾರವಾದವು ಬದಲಾಗುತ್ತಿರುವ ಕಾಲದೊಂದಿಗೆ ಪ್ರಗತಿಪೂರಕವಾದ ಬದಲಾವಣೆ ಹೊಂದಿ ಮುಂದುವರೆದಿದೆ ಇದೇ ಈ ಚಿಂತನೆಯ ಪ್ರಮುಖ ಅಂಶವಾಗಿದೆ.

## 3.2 ಉದಾರವಾದದ ಬೆಳವಣಿಗೆ

ಉದಾರವಾದದ ಸಿದ್ಧಾಂತವು ಆಧುನಿಕ ವಿಶ್ವದಲ್ಲಿ ರಾಜ್ಯಶಾಸ್ತ್ರಜ್ಞರ ಕೈಯಲ್ಲಿ ಸಿಲುಕಿ ಸಂಪ್ರಾದಾಯಿಕ ಉದಾರವಾದವಾಗಿ

ಬೆಳೆದು ನಿಂತಿದೆ. ಆದರೂ ಈ ಸಂಪ್ರದಾಯಿಕ ಉದಾರವಾದವು ಆಧುನಿಕ ರಾಜಕೀಯ ಸಿದ್ಧಾಂತದ ಅವಿಭಾಜ್ಯ ಅಂಗವೆಂದರೆ ತಪ್ಪಾಗಲಾರದು. ಉದಾರವಾದ ಎಂಬ ಪದವು ಇತ್ತೀಚಿನ ದಿನಗಳಲ್ಲಿ 20ನೇ ಶತಮಾನದ ಮೊದಲ ಭಾಗದಲ್ಲಿ ಬೆಳಕಿಗೆ ಬಂದಿತು. ಆದರೂ ಇದರ ಹಿನ್ನೆಲೆ ಬಹಳಷ್ಟು ಆಳವಾಗಿದ್ದು ಒಂದು ಸ್ಪಾನಿಷ್ ರಾಜಕೀಯ ಪಕ್ಷದ ಹೆಸರಾಗಿ ಉದಾರವಾದ ಪರಿಚಯವಿತ್ತು. ಈ ಪಕ್ಷದ ಸದಸ್ಯರನ್ನು ಉದಾರವಾದಿಗಳೆಂದು ಗುರುತಿಸಿ ಇವರು ಸಂವಿಧಾನಿಕ ಸರ್ಕಾರವನ್ನು ಬಯಸುವವರೆಂದು ಸ್ಪೇನಿನಲ್ಲಿ ಗುರುತಿಸಲಾಗಿತ್ತು. ತದನಂತರದಲ್ಲಿ ಇತರೇ ರಾಷ್ಟ್ರಗಳು ಈ ಪದವನ್ನು ಅಳವಡಿಸಿಕೊಳ್ಳುವಲ್ಲಿ ಒಂದು ಪಕ್ಷ ಸರ್ಕಾರಿ ವ್ಯವಸ್ಥೆಯು ಒಂದು ನೀತಿ ಅಥವಾ ಒಂದು ಅಭಿಪ್ರಾಯವು ಸ್ವತಂತ್ರ ಪೂರಕವಾಗಿದ್ದಲ್ಲಿ ಅದನ್ನ ಅಥವಾ ಅವರನ್ನ ಉದಾರವಾದಿಗಳೆಂದು ಪರಿಗಣಿಸುತ್ತಿತ್ತು.

ಉದಾರವಾದಿ ಚಿಂತನೆಯು ಈ ರೀತಿಯಾಗಿ ಲ್ಯಾಟಿನ್ ಪದದ ಲೈಬರ್ ಎಂದರೆ ಸ್ವತಂತ್ರ ಎಂಬ ಪದದಿಂದ ಹುಟ್ಟಿಕೊಂಡಿತು. ಉದಾರವಾದಿ ಮತ್ತು ಸ್ವತಂತ್ರವೆಂಬ ಪದಗಳು ಹಾಗಾಗಿ ಒಂದೇ ಪದದಿಂದ ಅಸ್ತಿತ್ವವನ್ನು ಪಡೆದ ಪದಗಳಾಗಿವೆ ಹೀಗಾಗಿ ಈ ಪದಗಳ ಮೂಲ ಅರ್ಥ ಸ್ವಾತಂತ್ರ್ಯವೆಂಬುದೇ ಆಗಿದೆ ಡೇವಿಡ್ ಸ್ಮೀಲ್‌ರವರ ಪದಗಳಲ್ಲಿ ವಿಚಾರವಾದವೆಂಬುದು ಕೆಲವು ನಿರ್ಧರಿತ ಸ್ಥಾನಗಳ ನೀತಿಗಳನ್ನು ಅವಲಂಬಿತವಾಗಿದ್ದು, ಒಂದೇ ಗುರಿಯನ್ನು ಹೊಂದಿದ್ದ ವ್ಯಕ್ತಿಗಳಿಗೆ ಹೆಚ್ಚಿನ ಸ್ವಾತಂತ್ರ್ಯವನ್ನು ನೀಡುವಂತಹುಗಳಾಗಿವೆ ಅಂತರರಾಷ್ಟ್ರೀಯ ಸಮಾಜ ವಿಜ್ಞಾನ ಜ್ಞಾನಕೋಶವು ಉದಾರವಾದಿ ಚಿಂತನೆ ಕುರಿತಂತೆ ಈ ಮೂರು ಅರ್ಥಗಳನ್ನು ಹೊಂದಿದೆ

1. ವ್ಯಕ್ತಿಯ ಸ್ವಂತವಾದ ವಿಚಾರಗಳನ್ನು ಹೊರಡಿಸುವ ಮಾಧ್ಯಮ
2. ನಂಬಿಕೆಗಳಿಗೆ ಅರ್ಥಪೂರ್ಣವಾಗಿ ವಿವರಣೆ ನೀಡಿ ಅದರಿಂದ ಸಮಾಜ ಹಾಗೂ ವ್ಯಕ್ತಿಗತವಾದ ಒಳಿತನ್ನು ಕಂಡುಕೊಳ್ಳುವುದಾಗಿದೆ.
3. ಸ್ವತಂತ್ರವಾದ ಹೇಳಿಕೆಗಳನ್ನು ಹಾಗೂ ಸ್ವಾತಂತ್ರ್ಯದಲ್ಲಿ ಸಂಪೂರ್ಣ ನಂಬಿಕೆ ಹೊಂದಿದ ನೀತಿ ಮತ್ತು ಸಂಸ್ಥೆಗಳನ್ನು ಕಾಪಾಡುವುದು ಎಂದಿದ್ದಾರೆ.

ಹೀಗೆ ಕೆಲವು ಚಿಂತಕರು ತಿಳಿಸಿರುವಂತೆ ವಿಚಾರವು ವ್ಯಕ್ತಿಗತವಾಗಿರದೇ ಸ್ವಾತಂತ್ರ್ಯವಾದ ಅಭಿವೃದ್ಧಿ ವ್ಯಕ್ತಿಯ ಸರ್ವತೋಮುಖ ಬೆಳವಣಿಗೆ ಅವನಿಂದ ನಿರ್ಮಿತವಾದ ಸಂಘ ಸಂಸ್ಥೆಗಳ ಉತ್ತಮ, ರಚನಾತ್ಮಕ, ಚಿಂತನೆಗಳನ್ನು ಉದಾರವಾದಿ ಚಿಂತನೆಯ ಅಭಿವೃದ್ಧಿ ಎಂದು ಗುರುತಿಸಬಹುದಾಗಿದೆ.

## 9.3 ಹೊಸ (ನವ್ಯ) ಉದಾರವಾದ

19ನೇ ಶತಮಾನದ ಕೊನೆಯಲ್ಲಿ ಹಾಗೂ 20ನೇ ಶತಮಾನದ ಮೊದಲಲ್ಲಿ ಸಂಪ್ರದಾಯಿಕ ಉದಾರವಾದದ ಕೆಲವು ಚಿಂತನೆಗಳು ಮತ್ತು ನೀತಿಗಳು ಅಭಿವೃದ್ಧಿಪರ ನಿಟ್ಟಿನಲ್ಲಿ ಕೆಲವು ಮಾರ್ಪಾಟುಗಳನ್ನು ಮಾಡಿಕೊಂಡವು ಈ ರೀತಿಯಾಗಿ ಅಸ್ತಿತ್ವಕ್ಕೆ ಬಂದ ಉದಾರವಾದವು ಆ ಕಾಲದಲ್ಲಿ ಆಧುನಿಕ ಉದಾರವಾದವೆಂದು ಪರಿಗಣಿಸಲ್ಪಟ್ಟಿತು. ಇದನ್ನು ಗನಾತ್ಮಕ ಉದಾರವಾದವೆಂದು ಗುರುತಿಸಲಾಯಿತು. ಈ ರೀತಿಯಾಗಿ ಗುರುತಿಸಿದ ಉದಾರವಾದವು ಸಂಪ್ರದಾಯಿಕ ಕಾಲದ ಋಣಾತ್ಮಕ ಉದಾರವಾದದಿಂದ ವಿಭಿನ್ನವಾದುದು ಎಂದು ಸಹ ಈ ಬಗ್ಗೆ ತಿಳುವಳಿಕೆ ನೀಡಲಾಯಿತು. ಈ ರೀತಿಯಾಗಿ ಬೆಳೆದು ಬಂದ ಹೊಸ ಉದಾರವಾದವು ಕೇವಲ ನಿರ್ಬಂಧಿತ ವ್ಯವಸ್ಥೆಯೇ ಉದಾರೀವ್ಯವಸ್ಥೆ ಎನ್ನುವುದಕ್ಕಿಂತ ಬದಲಾಗಿ ವ್ಯಕ್ತಿಯೋರ್ವನು ತಾನು ಗುರುತಿಸಿಕೊಂಡ ಗುರಿ ತಲುಪುವ ಹಾಗೂ ಅವಕಾಶವನ್ನು ಬೆಳೆಸಿಕೊಂಡು ಪರಿಣಾಮಾತ್ಮಕವಾಗಿ ಬೆಳೆಯುವುದು ಎಂಬ ವಿವರಣೆಯನ್ನು

ನೀಡುವುದರೊಂದಿಗೆ ತನ್ನ ಹೊಸ ಮೌಲ್ಯವನ್ನು ಗುರುತಿಸಿಕೊಂಡಿತು.

ಈ ಹೊತ್ತಿಗಾಗಲೆ ರಾಜಕೀಯ ಹಕ್ಕುಗಳು ಆರ್ಥಿಕ ಸ್ವಾತಂತ್ರ್ಯ ಎಂಬ ಕೂಗುಗಳನ್ನು ಈ ಸಂಪ್ರಾದಾಯಿಕ ಉದಾರವಾದವು ಹೊಸ ಮಧ್ಯಮ ವರ್ಗದ ಬೇಡಿಕೆಗಳನ್ನಾಗಿ ಪೂರೈಸಿತ್ತು. ಮತಚಲಾಯಿಸುವ ಹಕ್ಕು ವ್ಯಕ್ತಿಗತವಾದ ಸ್ವತಂತ್ರವನ್ನು ನಿಭಾಯಿಸಲು ಕಾರ್ಯವನ್ನೆಸಗಿತ್ತು. ಆದರೆ ನಿಜವಾದ ಶ್ರಮಿಕ ವರ್ಗವು ಯಾವುದೇ ಹೋರಾಟದಿಂದ ಏನನ್ನೂ ಸಾಧಿಸಿಕೊಳ್ಳಲಾಗದೇ ಇದ್ದ ಕಾರಣ ಅವರುಗಳು ಸ್ವತಂತ್ರ ದೊರಕಿದರೂ ಸ್ಪರ್ಧಾತ್ಮಕ ಮಾರುಕಟ್ಟೆಯೇ ಆರ್ಥಿಕತೆಯ ನೀಟಿನಲ್ಲಿ ಏನನ್ನೂ ಸಾಧಿಸಲಾರದೇ ಕ್ಲಿಷ್ಟ ಪರಿಸ್ಥಿತಿಯಲ್ಲಿ ಸಿಲುಕಿದರು. ಸಾಂಪ್ರದಾಯಿಕ ಉದಾರವಾದವು ಈ ಶ್ರಮಿಕ ವರ್ಗಕ್ಕೆ ಕಾರ್ಯನಿರ್ವಹಣೆಯಲ್ಲಿ ಯಾವುದೇ ರೀತಿಯ ಒಪ್ಪಂದವನ್ನು ಮಾಡಿಕೊಂಡಾಗ್ಯೂ ಉಳ್ಳವರಿಗೆ ಇದು ಯಾವ ರೀತಿಯ ಸಹಾಯವನ್ನು ಒದಗಿಸಲಿಲ್ಲ ಹೀಗೆ ರೈತರು ಕಾರ್ಮಿಕರು ರಾಜ್ಯದ ತಾಟಸ್ಥ ನೀತಿಯಿಂದ ಹೆಚ್ಚಿನ ನಷ್ಟವನ್ನು ಅನುಭವಿಸಿದ ಬಡವ ಬಲ್ಲಿದರ ದೃಷ್ಟಿಯಲ್ಲಿ ರಾಜ್ಯದ ಕಾರ್ಯಚಟುವಟಿಕೆಯು ಈ ಜನರು ಹೆಚ್ಚು ಸ್ವಾತಂತ್ರ್ಯವನ್ನನುಭವಿಸಿರಲು ಪೂರಕವಾಗಿತ್ತು. ಇದೇ ಅಂಶವನ್ನು ಮಾರ್ಕ್ಸ್ ಮತ್ತು ಸಮತಾವಾದಿ ಪ್ರತಿಪಾದಕರು ಸುಧೀರ್ಘವಾಗಿ ಚರ್ಚಿಸಿದ್ದರು, ಹೀಗೆ ಸ್ವಾತಂತ್ರ್ಯ ಮತ್ತು ಹಕ್ಕುಗಳ ಚರ್ಚೆಯು ಉದಾರವಾದಿ ಚೌಕಟ್ಟಿನಲ್ಲಿ ಹೇಳಿದಷ್ಟು ಸುಲಭವಾಗಿ ಗುರಿಸಾಧಿಸಲು ಸಾಧ್ಯವಾಗಲಿಲ್ಲವೆಂದು ಡೆವಿಡ್‌ಸ್ಮಿಥ್‌ರು ತಿಳಿಸಿದ್ದಾರೆ. ಹೆಚ್ಚಿನ ಮಟ್ಟ ಅಥವಾ ಭಾಗ ಈ ಮೊದಲಿನ ಉದಾರವಾದಿ ಚಿಂತನೆಯು ವೈಯಕ್ತಿಕವಾದ ಚಿಂತನೆಯಾಗಿದ್ದು ನಗರಗಳ ಬೆಳವಣಿಗೆ ಕೈಗಾರಿಕೆಗಳ ಬೆಳವಣಿಗೆಯಿಂದು ಈ ಚಿಂತನೆಯನ್ನು ಸುಳ್ಳು ಮಾಡಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ಕೈಗಾರಿಕೆಗಳ ಬೆಳವಣಿಗೆಗೆ ಹೆಚ್ಚಿನ ಸಹಾಯವನ್ನು ಮಾಡಿಗದೆ.

ಉದಾರವಾದದ ಮಾದರಿಯು ಮೊದಲಿಗೆ ವ್ಯಕ್ತಿಗತವಾಗಿ ಬೆಳವಣಿಗೆಯನ್ನು ಕಂಡುಕೊಂಡಿದ್ದ, ತದನಂತರ ಬೆಳವಣಿಗೆಯಲ್ಲಿ ನಗರದ ಅಭಿವೃದ್ಧಿ, ಕೈಗಾರಿಕೆ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ವ್ಯಾಪಾರ ವಹಿವಾಟುಗಳ ಕಾರಣದಿಂದ ತನ್ನ ಮೂಲ ಚಿಂತನೆಗಳಲ್ಲಿ ಬದಲಾವಣೆಯನ್ನು ಕಂಡುಕೊಂಡಿತು. ಇವು ವ್ಯಕ್ತಿಯೋರ್ವನ ಸ್ವತಂತ್ರ ಮಾರುಕಟ್ಟೆಯ ಆರ್ಥಿಕ ನೀತಿಯಿಂದ ಹೇಗೆ ಅಸಾಹಯಕನಾಗುತ್ತಾನೆ ಎಂಬುದನ್ನು ತಿಳಿಸಿತು. ಸ್ಮಿಥ್ ಅವರು ಈಬಗ್ಗೆ ವಿವರಿಸಿದಂತೆ ಬಂಡವಾಳಸಾಹಿತ್ವ ಬೆಳೆದಷ್ಟು ಹೆಚ್ಚಿನ ಕಾರ್ಮಿಕರು ಹೆಚ್ಚಿನ ಬಡತನದಲ್ಲಿದ್ದು ಶ್ರೀಮಂತ ರಾಷ್ಟ್ರಗಳಾದ ಇಂಗ್ಲೆಂಡ್, ಫ್ರಾನ್ಸ್ ಮತ್ತು ಜರ್ಮನಿಯಲ್ಲಿಯೂ ಪರಿಸ್ಥಿತಿ ಸುಧಾರಿಸಲಿಲ್ಲ. ಬಡತನಕ್ಕಿಂತ ಮಿಗಿಲಾಗಿ ಈ ರಾಷ್ಟ್ರಗಳಲ್ಲಿ ಅನಾರೋಗ್ಯ ಇಳಿವಯಸ್ಸಿನಲ್ಲಿ ಬದುಕುವ ದಾರಿಯಿಲ್ಲದಿರುವರು ಹಾಗೂ ನಿರುದ್ಯೋಗ ಸಮಸ್ಯೆಯು ಜನರಲ್ಲಿ ಅಭದ್ರತೆಯನ್ನುಂಟು ಮಾಡಿ ಅವರಿಗೆ ನೀಡಿದ ಹಕ್ಕುಗಳನ್ನೆಲ್ಲ ಅರ್ಥಹೀನಗೊಳಿಸುವಂತೆ ಮಾಡಿತು.

## ಕಲ್ಯಾಣ ರಾಷ್ಟ್ರದ ಬುನಾದಿಗಳು

ಕಾರ್ಮಿಕ ವರ್ಗದ ಒತ್ತಡವು ಹೆಚ್ಚಿದಂತೆ ಬಂಡವಾಳಶಾಹಿ ರಾಜ್ಯವು ತನ್ನ ಆರ್ಥಿಕ ಮತ್ತು ಸಾಮಾಜಿಕ ನೀತಿಯನ್ನು ಬದಲಿಸಿತು. ಆಧುನಿಕ ಹಂತದಲ್ಲಿ ಉದಾರವಾದವು ಈ ಕಾರಣದಿಂದ ತನ್ನ ಚಿಂತನೆ ತಳಹದಿಯನ್ನು ವಿಶಾಲಗೊಳಿಸಿಕೊಂಡು ಕೆಳವರ್ಗಗಳ ಹಿತಾಸಕ್ತಿಗಳನ್ನು ಒಳಗೊಂಡಂತೆ ಕಾರ್ಯನಿರ್ವಹಿಸುವ ನಿಟ್ಟಿನಲ್ಲಿ ಬದಲಾವಣೆಗಳನ್ನು ತಂದುಕೊಂಡಿತು. ಈ ಕಾರಣದಿಂದಾಗಿ ಅವು ಸ್ವತಂತ್ರ ಮಾರುಕಟ್ಟೆ ಆರ್ಥಿಕ ನೀತಿಯನ್ನು ಕೈ ಬಿಡಬೇಕಾಗಿ ಬಂದಿತು. ಈ ಕಾರಣದಿಂದ ಕಲ್ಯಾಣ ರಾಜ್ಯದ ಚಿಂತನೆಗೆ ಹೆಚ್ಚಿನ ಮಹತ್ವ ದೊರೆಯಿತು. ಮೊದಲನೇ ಮಹಾಯುದ್ಧದ ಕೊನೆಯಿಂದ ಪ್ರಾರಂಭವಾಗಿ 20ನೇ ಶತಮಾನದ ಮಧ್ಯಭಾಗದವರೆಗೆ ಎಲ್ಲ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಕಲ್ಯಾಣ ರಾಷ್ಟ್ರವು ಅಸ್ತಿತ್ವಕ್ಕೆ ಬಂದಿತು. ಈ ಕಲ್ಯಾಣ ರಾಷ್ಟ್ರಗಳಲ್ಲಿ ರಾಜಕೀಯ ಸಮಾನತೆ ಸಾಧಿಸಲ್ಪಟ್ಟು ಆರ್ಥಿಕ ಸಮಾನತೆಯ ಕಾರ್ಯ ಸಾಧನೆ ಪ್ರಮುಖವಾಗಿತ್ತು. ಆರ್ಥಿಕ ಸಮಾನತೆ ಎಂದಾಕ್ಷಣ ಸಂಪತ್ತನ್ನು

ಎಲ್ಲರಿಗೂ ಸಮಾನವಾಗಿ ಹಂಚುವುದು ಎಂದರ್ಥವಲ್ಲ. ಆದರೆ ಇದು ರಾಷ್ಟ್ರೀಯ ಲಾಭಾಂಶವನ್ನು ಹೆಚ್ಚಿನ ಕೂಲಿಯನ್ನು ನೀಡುವುದರ ಮೂಲಕ ಸಮಾನ ಹಂಚಿಕೆಯನ್ನು ಮಾಡುತ್ತಾ ಸಮಾಜದಲ್ಲಿ ಜನರಿಗೆ ಸಾಮಾಜಿಕ ಸೌಲಭ್ಯಗಳನ್ನು ಮತ್ತು ಸೇವೆಗಳನ್ನು ಹೆಚ್ಚಿನ ತೆರಿಗೆ ಮುಖಾಂತರ ಶ್ರೀಮಂತರು ಹಾಗೂ ಕಾರ್ಪೋರೇಶನ್‌ಗಳಿಂದ ವಸೂಲಾತಿ ಮಾಡಿ ಪುನರ್ ಹಂಚಿಕೆ ಮಾಡುವುದು ಎಂದು ವಿವರಿಸಿದ್ದಾರೆ. ಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರು ಈ ಕಾರಣದಿಂದ ಹೆಚ್ಚು ಸಂಪತ್ತನ್ನು ಉತ್ಪಾದಿಸುವವರು ಆರ್ಥಿಕ ಅಭದ್ರತೆಯನ್ನು ಎದುರಿಸುವ ಸಲುವಾಗಿ ಸಂಪತ್ತಿನ ಕ್ರೋಢೀಕರಣ ಮಾಡಿ ಯಾವತ್ತೂ ಭಯ ಅಥವಾ ಭೀತಿ ಇಲ್ಲದೆ ಬದುಕುವೆಡೆಗೆ ಪ್ರಯತ್ನ ಮಾಡುತ್ತಾನೆ. ಈ ಎಲ್ಲಾ ಕಾರಣಗಳನ್ನು ಗಮನಿಸಿ ಆಧುನಿಕ ಉದಾರವಾದವು ಕಾರ್ಮಿಕ ವರ್ಗದ ಅಭದ್ರತೆ ಯಾವ ಕಾಲದಲ್ಲಿಯೇ ಆಗಲಿ ಅಮಾನವೀಯವಾದದ್ದು ಮತ್ತು ಇದು ಸಾಮಾಜಿಕ ಭದ್ರತೆಗೆ ಅಡ್ಡಿಯನ್ನುಂಟು ಮಾಡುವುದು ಎಂದು ತಿಳಿಸಿದ್ದಾರೆ.

ಬ್ರಿಟಿಷ್ ಅರ್ಥಶಾಸ್ತ್ರಜ್ಞರಾದ ಜಾನ್ ಎಮ್‌ಕೀನ್ಸ್ ಮತ್ತು ವಿಲಿಯಂ ಡೇವರಿಸ್ ಇವರುಗಳು ಒತ್ತಾಸೆ ನೀಡಿದಂತೆ ಇಂತಹ ಪರಿಸ್ಥಿತಿಗಳಲ್ಲಿ ಶಾಸನದ ಮೂಲಕ ಜನರಿಗೆ ಸಂಪೂರ್ಣ ಉದ್ಯೋಗ, ಹೆಚ್ಚಿನ ಕೂಲಿ, ಉತ್ಪಾದನೆಯಲ್ಲಿ ಹೆಚ್ಚಳ ಮತ್ತು ಸಾಮಾಜಿಕ ಸುಧಾರಣೆಗಳನ್ನು ತರುವಂತ ಮೂಲಕ ಆರ್ಥಿಕ ಭದ್ರತೆಯನ್ನು ಕಂಡುಕೊಳ್ಳಬಹುದೆಂದಿದ್ದಾರೆ. ಈ ಕಾರಣದ ಕಲ್ಯಾಣ ರಾಷ್ಟ್ರಗಳಲ್ಲಿನ ಶಾಸನಗಳು ದುಡಿಯುವವರಿಗೆ ನಿರ್ಧರಿತ ದುಡಿಮೆಯ ಕಾಲಾವಧಿ ಇಳಿವಯಸ್ಸಿನಲ್ಲಿ ಸಾಮಾಜಿಕ ಭದ್ರತೆ, ಊನಗೊಂಡವರಿಗೆ ಬದುಕಲು ಅವಕಾಶ ಕಲ್ಪಿಸಿಕೊಡುವುದು, ದುಡಿಯುವವರು ತೀರಿಕೊಂಡಾಗ ಅವರ ಬದಲು ಕೆಲಸವನ್ನು ಮಾಡಲು ಅವರ ಮನೆಯವರಿಗೆ ಅವಕಾಶ ಒದಗಿಸಿಕೊಡುವುದು ಇಂತಹ ಕಾನೂನುಗಳನ್ನು ರಚಿಸಿಕೊಳ್ಳಬೇಕೆಂದಿದ್ದಾರೆ. ಈ ಕಾರಣಕ್ಕಾಗಿ ರಾಷ್ಟ್ರೀಕರಣಗೊಳಿಸಿ ಸಾರ್ವಜನಿಕ ಸೇವೆಗಳನ್ನು ಬೇಡಿಕೆಗೆ ತಕ್ಕ ಫಲ ಮಟ್ಟಿಗೆ ಪೂರೈಸುವ ಅವಕಾಶಗಳನ್ನು ಮಾಡಿಕೊಡುವುದರ ಮೂಲಕ ಲಾಭಾಂಶದ ಮೇಲೆ ನಿಯಂತ್ರಣವನ್ನು ತಂದು ಸ್ಪರ್ಧಾತ್ಮಕ ಆರ್ಥಿಕಾಂಶಗಳನ್ನು ಜಾರಿಗೆ ತರಬೇಕೆಂದಿದ್ದಾರೆ.

ಒಟ್ಟಿನಲ್ಲಿ ಬಂಡವಾಳಶಾಹಿ ತಳಹದಿಯನ್ನು ತೊರೆಯದೆ ಕಲ್ಯಾಣ ರಾಷ್ಟ್ರದ ಪ್ರತಿಪಾದಕರು ಹೊಸ ಉದಾರವಾದಿ ಚಿಂತನೆಯನ್ನು ಬಂಡವಾಳಶಾಹಿತ್ವದಿಂದ ಸಮಾಜದ ಮೇಲಾಗುವ ಪರಿಣಾಮವನ್ನು ಬೆಳಕಿಗೆ ತರುವ ಪ್ರಯತ್ನ ಎಸಗಿದ್ದಾರೆ ಎನ್ನಬಹುದು.

## 9.4 ಪ್ರಚಲಿತ ಚರ್ಚೆಗಳು

ಉದಾರವಾದಿ ಪರಿಕಲ್ಪನೆಯು ಬಹಳಷ್ಟು ಮಟ್ಟಿಗೆ ಬದಲಾವಣೆಗೆ ಪೂರಕವಾಗಿದ್ದು, ಕಾಲದಲ್ಲಾದ ಬದಲಾವಣೆಯೊಂದಿಗೆ ಇದು ಹೊಂದಾಣಿಕೆ ಮಾಡಿಕೊಳ್ಳುವ ಚಾಣಕ್ಯತೆ ಹೊಂದಿದೆ ಎಂದಿದ್ದಾರೆ. ಬದಲಾಗುತ್ತಿರುವ ಸಮಾಜದಲ್ಲಿ ಹೊಸ ವಿಚಾರಗಳು ಅರಳಬೇಕಾದಲ್ಲಿ ಚಿಂತನೆಯ ಮೂಲಭೂತ ಅಂಶಗಳೂ ಸಹ ಪರಿವರ್ತನೆಗೊಳ್ಳಬೇಕು. ಈ ನಿಟ್ಟಿನಲ್ಲಿ ಉದಾರವಾದದ ಮುಖ್ಯ ಚಿಂತನೆಗಳನ್ನು ವಿಶಾಲವಾಗಿ ಗ್ರಹಿಸಿದಲ್ಲಿ ಅವುಗಳನ್ನು ವ್ಯಕ್ತಿವಾದ, ಉಪಯುಕ್ತತವಾದ, ಉದಾರವಾದಿತ್ವ ಹಾಗೂ ಸಮುದಾಯಿತ್ವದವಾದವೆಂದು ಗುರುತಿಸಬಹುದು. ಇವೆಲ್ಲವೂ ಉದಾರವಾದದೊಡನೆ ಇದ್ದರೂ ಕಾಲಕಾಲಕ್ಕೆ ತಮ್ಮಲ್ಲಿಯೇ ಬದಲಾವಣೆಯನ್ನು ತಂದುಕೊಂಡು ಮೂಲಭೂತ ಉದಾರವಾದದ ಚರ್ಚೆಗೆ ಬೆಂಬಲವಾಗಿ ಬೆಳೆದು ಹೊಸ ಉದಾರವಾದವಾಗಿ ಬೆಳೆದಿದೆ.

## ವ್ಯಕ್ತಿಗತವಾದ

ವ್ಯಕ್ತಿವಾದವು ಸಹ ಉದಾರವಾದದಂತೆ ವೇದನಾ ಹೇಳಿಕೆಯಾಗಿದೆ ಎಂದು ಪ್ರಚಲಿತವಿದೆ. ಈ ದೃಷ್ಟಿಕೋನದಲ್ಲಿ ಸಮಾಜದ ನೀತಿ ರೂಪಣೆ, ಮತ್ತು ಸಮಾಜದ ಸಂಘಟನೆಯ ಕೇಂದ್ರ ಬಿಂದುವಾಗಿ ಎಲ್ಲ ಕಾಲ್ಲದಲ್ಲೂ ವ್ಯಕ್ತಿಯೇ ಇರುವನೆಂಬ ಪರಿಕಲ್ಪನೆ ಇದೆ. ಉದಾರವಾದದ ಬೆಳವಣಿಗೆಯ ಮೊದಲು ಅಂದರೆ 7ನೇ ಶತಮಾನದವರೆಗೆ ಬೆನ್ ಮತ್ತು ಪೀಟರ್ಸ್ ತಿಳಿಸಿದ್ದಾರೆ. ಇವರು ವಿಚಾರದಲ್ಲಿ ವ್ಯಕ್ತಿಯೋರ್ವನು ತನ್ನ ಜೀವನದ ವಿವಿಧ ಹಂತಗಳಲ್ಲಿನ ಪಾತ್ರಗಳ ಕಾನೂನು ಮತ್ತು ನಿಯಂತ್ರಣವು ಈ ಸಂಪ್ರಾದಾಯಗಳ ಮೂಲಕ ಕಾಲಾನುಕ್ರಮವಾಗಿ ಬಂದಿತ್ತು ಎಂದಿದ್ದಾರೆ. ಆದರೆ 14ಮತ್ತು 15ನೇ ಶತಮಾನದಿಂದಾಚೆಗೆ ಅಂತರರಾಷ್ಟ್ರೀಯ ವ್ಯಾಪಾರ ವಹಿವಾಟುಗಳು ಹಾಗೂ ವಿಜ್ಞನಾ ತಂತ್ರಜ್ಞಾನದ ಬೆಳವಣಿಗೆಯಾಗಿ ಮುದ್ರಣ ಮಾಧ್ಯಮಗಳ ಕಂಡುಕೊಳ್ಳುವಿಕೆಯಿಂದ ಒಂದು ಹೊಸ ವ್ಯಕ್ತಿಗತ ಸಮಾಜ ಅಸ್ತಿತ್ವಕ್ಕೆ ಬಂದಿತು. ಸಾಮಾಜಿಕ ಜೀವನ ಇದರಿಂದಾಗಿ ಹೆಚ್ಚು ಆಸ್ತಿಗಳಿಸುವಿಕೆ, ಅಧಿಕಾರ ಪಡೆಯುವಿಕೆ, ಗೌರವಗಳ ಗಳಿಸುವಿಕೆಯ ಕಾರಣಗಳನ್ನು ಸಾಂಪ್ರದಾಯಿಕವಾಗಿ ನಿಯಂತ್ರಣ ಒಡ್ಡುತ್ತಿದ್ದ ಎಲ್ಲ ಕಾನೂನುಗಳನ್ನು ಮುರಿದು ತನ್ನ ಶಕ್ತಿ, ಜಾಣತನ ಹಾಗೂ ಕಾರ್ಯ ಚಟುವಟಿಕೆಯ ಮೂಲಕ ಹೆಚ್ಚಿನ ಸಂಪಾದನೆಯೆಡೆಗೆ ವ್ಯಕ್ತಿಗಳು ಮುನ್ನುಗ್ಗಿದರು. ಈ ಕಾರಣದಿಂದ ವ್ಯಕ್ತಿ ವಿಕಸನ ಸಂಬಂಧಿತವಾಗಿ ಪ್ರಯತ್ನ ಮಾಡಿದ ಯಾವುದೇ ಸರ್ಕಾರಿ ನಿಯಂತ್ರಣಗಳನ್ನು ವ್ಯಕ್ತಿತ್ವವಾದಿಗಳು ವಿರೋಧಿಸಿದವು. ಇಂತಹ ಚಿಂತಕರು ವ್ಯಕ್ತಿಗತವಾದ ಸ್ವಾತಂತ್ರ್ಯವನ್ನು ತಮ್ಮ ಮಂತ್ರವಾಗಿಸಿಕೊಂಡರು. ಈ ರೀತಿಯಾಗಿ ಸಾಂಪ್ರದಾಯವಾದಿ ಮತ್ತು ಉದಾರವಾದೀಗಳು ಸ್ವತಂತ್ರ್ಯವನ್ನು ಯಾವುದೇ ನಿಯಂತ್ರಣವಿಲ್ಲದ ವ್ಯವಸ್ಥೆಯೆಂದು ಚರ್ಚಿಸತೊಡಗಿತು. ಅಂದರೆ ಇವರು ರಾಜ್ಯವು ವ್ಯಕ್ತಿಗತ ಪ್ರಯತ್ನಗಳಾದ ವ್ಯಾಪಾರ ಮತ್ತು ಕೈಗಾರಿಕೆಗಳಲ್ಲಿ ಹಸ್ತಕ್ಷೇಪ ಮಾಡಬಾರದೆಂಬ ಚರ್ಚೆಗಳನ್ನು ಮುಂದಿಟ್ಟಿತು. ಸಂಪ್ರದಾಯ ಉದಾರವಾದಿ ಅರ್ಥಶಾಸ್ತ್ರಜ್ಞರು ಹೆಚ್ಚಾನು ಹೆಚ್ಚು ಸ್ವಾಭಾವಿಕ ಕಾನೂನುಗಳಲ್ಲಿ ನಂಬಿಕೆಯಿಟ್ಟವರಾಗಿದ್ದು ನಿಯಂತ್ರಿತ ಆರ್ಥಿಕ ವಹಿವಾಟುಗಳು ಸಮಾಜದ ಎಲ್ಲ ವರ್ಗಗಳ ಅನುಕೂಲಕ್ಕೆ ಬರುವರೆಂಬ ವಾದವನ್ನು ನಂಬಲಿಲ್ಲ. 18ನೇ ಶತಮಾನದ ಫ್ರೆಂಚ್ ಅರ್ಥಶಾಸ್ತ್ರಜ್ಞರ ಸಿಜಿಯೋಕ್ರಾಟ್ಸ್ ಎಂಬುವರು ರೂಸೋವಿನ ಚಿಂತನೆಗಳಿಂದ ಪ್ರೇರಿತರಾಗಿ ಮಾನವನ ಅಭಿವೃದ್ಧಿಗೆ ನಿಸರ್ಗದ ಕೊಡುಗೆಯನ್ನು ಅಭಿನಂದಿಸಿದ ಇವರು ನಿಸರ್ಗದಲ್ಲಿ ವಿವಿಧತೆಗಳು ಅಸ್ತಿತ್ವದಲ್ಲಿರುವಂತೆ ಮಾನವ ಸಮಾಜವು ಎಲ್ಲಿಯವರೆಗೆ ತಮ್ಮ ತಮ್ಮ ನಡುವೆ ಯಾವುದೇ ಹೋರಾಟವಿಲ್ಲದೆ ಅಸ್ತಿತ್ವದಲ್ಲಿರುವುದಿಲ್ಲವೋ ಅಲ್ಲಿಯವರೆಗೆ ಸರ್ಕಾರಗಳು ಇಂತಹ ಸಮಾಜಗಳನ್ನು ನಿಯಂತ್ರಿಸದೆ ಆ ಸಮಾಜಗಳು ಗುರಿಯನ್ನು ಸಾಧಿಸಿಕೊಳ್ಳಲು ಅವಕಾಶ ಮಾಡಿಕೊಡಬೇಕೆಂದು ಚರ್ಚಿಸಿತು. ಈ ಕಾರಣದಿಂದ ಸಂಪ್ರಾದಾಯವಾದಿ ಅರ್ಥಶಾಸ್ತ್ರಜ್ಞರುಗಳು ಬೇಡಿಕೆ ಮತ್ತು ಪೂರೈಕೆಯ ಆಧಾರದ ಮೇಲೆ ಉತ್ಪಾದಿತ ವಸ್ತುಗಳ ಮೌಲ್ಯ ನಿರ್ಧರಿತವಾಗಬೇಕೆಂದು ಚರ್ಚಿಸಿತು. ಹೀಗೆ ಋಣಾತ್ಮಕ ಸ್ವತಂತ್ರ್ಯವು ವ್ಯಕ್ತಿಯನ್ನು ಕೇಂದ್ರವಾಗಿಟ್ಟುಕೊಂಡ ಸಾಂಪ್ರದಾಯಿಕವಾದಿ ದಿನಗಳಲ್ಲಿ ಚರ್ಚೆಗೆ ಬಂದಿತು.

ಈ ಚರ್ಚೆಯ ಪ್ರಮುಖ ಅಂಗವಾಗಿ ತಿಳಿಸಬೇಕಾದ ಮತ್ತೊಂದು ಅಂಶವೆದಂರೆ, ವ್ಯಕ್ತವಾದವೂ ಸಹ ಆಧುನಿಕ ರೀತಿಯ ಚಿಂತನೆಯ ಒಂದು ಫಲಿತಾಂಶವಾಗಿದೆ, ಎಲ್ಲಿಯವರೆಗೆ ಮನುಷ್ಯನು ಪ್ರಾಯೋಗಿಕವಾಗಿ ಅರ್ಥೈಸಿಕೊಳ್ಳಲಾಗದ ಗುರಿಗಳನ್ನು ಜೀವನ ಗುರಿಯನ್ನಾಗಿಸಿಕೊಂಡು ಧರ್ಮದ ಮೂಲಕ ಅವುಗಳನ್ನು ತಲುಪುವ ಯತ್ನ ಮಾಡುತ್ತಿದ್ದಾನೋ ಅಲ್ಲಿಯವರೆಗೆ ವ್ಯಕ್ತಿ ತನ್ನ ಹಿತವನ ಅರಿತುಕೊಳ್ಳುವಲ್ಲಿ ಅಂತ್ಯವೆನಿಸಿದ್ದನು. ಆದರೆ ವ್ಯಕ್ತಿ ಮತ್ತೊಬ್ಬ ವ್ಯಕ್ತಿಯೊಂದಿಗೆ ಒಪ್ಪಂದಕ್ಕೊಳಗಾಗಿ ರಾಜ್ಯದ ಮೂಲಕ ತನ್ನ ಗುರಿಸಾಧಿಸಿಕೊಳ್ಳಬೇಕೆಂಬ ಸಾಮಾಜಿಕ ಚಿಂತನೆಯನ್ನು ಬೆಳೆಸಿಕೊಂಡ ನಂತರದಲ್ಲಿ ಋಣಾತ್ಮಕ ಸ್ವಾತಂತ್ರವಾದ ಚಿಂತನೆಗಳು ಬೆಳೆದವು. ಹರ್ಬರ್ಟ್ ಸ್ಪೆನ್ಸರ್ ನಂತಹ ಆಂಗ್ಲ ಚಿಂತಕರುಗಳಿಗೆ ವ್ಯಕ್ತಿಯೇ ತನ್ನ

ಗುರಿ ಸಾಧನೆಯಲ್ಲಿ ಅಂತ್ಯ ಕಂಡುಕೊಳ್ಳುತ್ತಾನೆ ಎಂಬ ಚಿಂತನೆಗೆ ಒಳಪಟ್ಟು ನಂತರದಲ್ಲಿ ರಾಜ್ಯದ ಪಾತ್ರಕ್ಕೆ ಕಡಿವಾಣ ಬಿದ್ದಂತಾಯಿತು. ಸ್ಪೆನ್ಸರ್ ರಾಜ್ಯವನ್ನು ವ್ಯಕ್ತಿಗಳ ನಡುವಿನ ಒಪ್ಪಂದವನ್ನು ಪೂರೈಸಲು ಇರುವ ಸಂಸ್ಥೆ ಎಂದು ಗುರುತಿಸಿದನು. ಹೀಗೆ ಚರ್ಚಿಸಿದ ಸ್ಪೆನ್ಸರ್ ರಾಜ್ಯವು ಇನ್ನಾವುದೇ ಕೆಲಸಗಳನ್ನು ಹಮ್ಮಿಕೊಳ್ಳಬಾರದು. ಹಾಗೂ ನೈಸರ್ಗಿಕ ವಿಕಸನದಲ್ಲಿ ಅಡಚಣೆಗಳನ್ನು ಎಸಗಬಾರದೆಂದು ತಿಳಿಸುತ್ತಾ ಸಾರ್ವಜನಿಕ ಆರೋಗ್ಯ ನೀತಿಯಲ್ಲಿ ರಾಜ್ಯ ಭಾಗವಹಿಸಬಾರದು, ಬಡವರಿಗೆ ಯಾವರೀತಿಯಲ್ಲಿಯೂ ಸಹಾಯವನ್ನು ಎಸಗಬಾರದೆಂದು ತಿಳಿಸುತ್ತಾ ಸಾರ್ವಜನಿಕ ಆರೋಗ್ಯ ನೀತಿಯಲ್ಲಿ ರಾಜ್ಯ ಭಾಗವಹಿಸಬಾರದು, ಬಡವರಿಗೆ ಯಾವ ರೀತಿಯಲ್ಲಿಯೂ ಸಹಾಯವನ್ನು ಎಸಗಬಾರದೆಂದು ತಿಳಿಸುತ್ತಾ ಈ ರೀತಿ ಅವರಿಗೆ ಸಹಾಯವನ್ನು ಮಾಡಿದರೆ ಅದನ್ನು ನಿಸರ್ಗದ ವಿರೋಧಿ ನೀತಿಯಾಗುತ್ತದೆ ಎಂದು ತಿಳಿಸಿದನು. ಇವನ ದೃಷ್ಟಿಯಲ್ಲಿ ಬದುಕಲು ಹೋರಾಟ ಮಾಡುವುದು ಹಾಗೂ ಬಲಿಷ್ಠನ ಉಳಿವೇ ಸತ್ಯವಾದದ್ದು ಎಂಬ ಸತ್ಯಗಳು ಅರ್ಥಪೂರ್ಣವಾದುದು. ಹೀಗೆ ಕಾಲದಲ್ಲಿ ಋಣಾತ್ಮಕ ಸ್ವಾತಂತ್ರ್ಯವಾದದ ಚಿಂತನೆ ಮಿತಿಮೀರಿ ಬೆಳೆಯಿತು.

ಜರ್ಮಿಬೆಂಥ್‌ಹ್ಯಾಮರವರು ಪ್ರತಿಪಾದಿಸಿದ ಉಪಯುಕ್ತತಾ ವಾದದೊಂದಿಗೆ ವ್ಯಕ್ತಿವಾದವು ತನ್ನ ಅಸ್ತಿತ್ವವನ್ನು ಉದಾರವಾದದ ಚರ್ಚೆಗಳಲ್ಲಿ ಕಳೆದುಕೊಳ್ಳುವಂತಾಯಿತು. ವ್ಯಕ್ತಿವಾದ ಉಪಯುಕ್ತವಾದದ ಆಧಾರದ ಮೇಲೆ ಪ್ರಾರಂಭವಾದರೂ ಸಾಮಾಜಿಕ ಒಳಿತನು ಗುರಿಯಾಗಿಸಿಕೊಂಡಿತು. ಈ ನಿಟ್ಟಿನಲ್ಲಿ ಅತ್ಯಂತ ಹೆಚ್ಚಿನ ಜನರ ಅತೀವ ಸಂತೋಷವೆಂಬ ಉಪಯುಕ್ತತಾವಾದದ ಹೇಳಿಕೆಯು ವ್ಯಕ್ತಿಗತವಾದ ಚರ್ಚೆಗೆ ಅವಕಾಶ ಮಾಡದೇ ಸಮುದಾಯದ ಒಟ್ಟಾರೆ ಸಂತೋಷಕ್ಕೆ ಪ್ರಾಮುಖ್ಯತೆ ನೀಡಿತು. ಮಿಲ್‌ರವರ ಕಾಲದಲ್ಲಿ ಮತ್ತೊಮ್ಮೆ ಉಪಯುಕ್ತವಾದದ ಚರ್ಚೆಯನ್ನು ಪರಿಷ್ಕರಿಸಿದ ಮಿಲ್‌ಅವರು ತಮ್ಮ ಚರ್ಚೆಯಲ್ಲಿ ವ್ಯಕ್ತಿವಾದಕ್ಕೆ ಪ್ರಾಮುಖ್ಯತೆಯನ್ನು ನೀಡಿರುವುದನ್ನು ಗಮನಿಸಬಹುದು. ಮೊದಲನೇ ಹಂತದಲ್ಲಿ ಇವರು ವ್ಯಕ್ತಿಗತವಾದ ಆಶಯಗಳು ಹಾಗೂ ವ್ಯಕ್ತಿಗತವಾದ ನೈತಿಕ ಮೌಲ್ಯಗಳ ಬಗ್ಗೆ ಚರ್ಚಿಸಿ ಎರಡನೇ ಹಂತದಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಅಭಿಪ್ರಾಯಕ್ಕೆ ಬೆಲೆ ಇರಬೇಕೆಂಬ ಚರ್ಚೆಯನ್ನು ಮುಂದಿಟ್ಟಿದ್ದರೆ ಹೀಗೆ ಸಮಕಾಲೀನ ರಾಜಕೀಯ ತತ್ವಶಾಸ್ತ್ರದಲ್ಲಿ ಫ್ರಾನ್ಸ್‌ರವರು ಸೇರಿದಂತೆ ಈ ಚರ್ಚೆ ಮುಂದುವರೆದಿದೆ.

ಸಮಕಾಲೀನ ರಾಜಕೀಯ ಚಿಂತನೆಯಲ್ಲಿ ಹೀಗೆ ವ್ಯಕ್ತಿ ನೈತಿಕವಾಗಿ ಸಾಧನಾತ್ಮಕವಾಗಿ ಹಾಗೂ ವ್ಯಕ್ತಿಗತವಾದ ವ್ಯಕ್ತಿತ್ವವೆಂಬ ವಿವಿಧ ವಿವರಣೆಗಳೊಂದಿಗೆ ಉದಾರವಾದಿ ಚರ್ಚೆಯಲ್ಲಿ ಅವಿಭಾಜ್ಯ ಅಂಗವಾಗಿದ್ದಾನೆ. ಹೀಗೆ ವ್ಯಕ್ತಿ ಮತ್ತು ಸಮಾಜದ ನಡುವೆ ವಿಭಜನೆಗಳು ಕಂಡುಕೊಂಡು ಈ ಎರಡನ್ನೂ ಸರಿಸಮಾನವಾಗಿ ಚರ್ಚೆಹೊಳಪಟ್ಟರು ಸಮಾಜವಾದದಲ್ಲಿ ಇನ್ನು ಕಂಡುಬಂದಂತೆ ಕಾಣುವುದಿಲ್ಲ. ಹೀಗೆ ಸಾಮಾಜಿಕ ಬದಲಾವಣೆಗೆ ವ್ಯಕ್ತಿ ಸಾಧನವೆಂದಾದರೆ ಕಾರ್ಲ್‌ಪಾಪರ್ ರವರ ಬರಹಗಳು ಆದರ್ಶದ ಚಿತ್ರಣಗಳಾದ ಪ್ಲೇಟೋರವರ ಚಿಂತನೆಗಳ ಕೆಲವು ಬಿಡಿಭಾಗಗಳನ್ನು ಚರ್ಚಿಸಿ ಉದಹರಿಸಿ ಸಾಮಾಜಿಕ ಪುನರ್‌ರಚನೆಗೆ ವೈಚಾರಿಕವಾದ ರಾಜಕೀಯ ಚಟುವಟಿಕೆ ಅವಶ್ಯಕವೆಂಬ ವಿಚಾರಗಳನ್ನು ಮಂಡಿಸಿದ್ದಾರೆ. ಹೀಗಾಗಿ ಯಾವುದೇ ಸಾಮಾಜಿಕ ಸುಧಾರಣೆಯಾಗಬೇಕಾದರೆ ಅದು ಒಂದೇ ಬಾರಿಗೆ ಬದಲಾವಣೆಯಾಗದೇ ಹಂತಹಂತವಾಗಿ ಬದಲಾವಣೆಗೊಳ್ಳಬೇಕಾಗುತ್ತದೆ. ಕಾರಣ ಸಮಾಜದಲ್ಲಿ ಸಣ್ಣಪುಟ್ಟ ಬದಲಾವಣೆಗಳಿಗೆ ದೊರಕುವಷ್ಟು ಬೆಂಬಲ ಮೂಲಭೂತ ಬದಲಾವಣೆಗಳಿಗೆ ದೊರಕುವುದಿಲ್ಲ. ಹೀಗಾಗಿ ಮೂಲಭೂತ ಬದಲಾವಣೆಗಳನ್ನು ತರುವಲ್ಲಿ ಕ್ರಾಂತಿ ಹಾಗೂ ಹಿಂಸಾ ಮಾರ್ಗ ಅತ್ಯವಶ್ಯಕವಾಗುತ್ತದೆ. ಈ ನಿಟ್ಟಿನಲ್ಲಿ ಇಮ್ಯಾನ್ಯುವೇಲ್ ಕಾಂಟ್ ಅವರ ಬರಹಗಳು ನೈತಿಕ ವ್ಯಕ್ತಿತ್ವವನ್ನು ಪ್ರತಿಪಾದಿಸಿ ಮಾನವನಲ್ಲಿನ ಮೌಲ್ಯಗಳು ಹಾಗೂ ಮಾನವನಿಗೆ ದೊರೆಯಬೇಕಾದ ಗನತೆಯ ವಿಶ್ಲೇಷಣಾ ಚರ್ಚೆಯನ್ನು ಉದಾರವಾದಿ ಮಾರುಕಟ್ಟೆಯ ಆರ್ಥಿಕ ನೀತಿಯ ಹಿನ್ನೆಲೆಯಲ್ಲಿ ಕಂಡುಕೊಳ್ಳಬಹುದಾಗಿದೆ. ಇವರ ದೃಷ್ಟಿಯಲ್ಲಿ ಮಾರುಕಟ್ಟೆಗೆ ಮಾರಲ್ಪಡುವ

ವಸ್ತುಗಳಿಗೆ ಕೇವಲ ಮೌಲ್ಯವಿರುತ್ತದೆ. ಇದು ಅಂದಿನ ಮಾರುಕಟ್ಟೆಗೆ ಸಂಬಂಧಿಸಿದ ಮೌಲ್ಯವಾಗಿರುತ್ತದೆ. ಇದರಿಂದ ಕಾಂಟ್‌ರವರ ಪ್ರಕಾರ ಮಾನವನನ್ನು ಸಾಧನವೆಂದು ಗುರುತಿಸುವುದಕ್ಕಿಂತ ಅಂತ್ಯವೆಂದು ಗುರುತಿಸುವುದು ಮೇಲು. ಹೀಗೆ ಮಾಡುವುದರಿಂದ ವ್ಯಕ್ತಿ ಮತ್ತು ವ್ಯಕ್ತಿಗಳ ನಡುವೆ ಸಹಜವಾಗಿಯೇ ಅಸಮಾನತೆಯು ತೊಡೆಯಲ್ಪಟ್ಟಿರುತ್ತದೆ ಎಂದು ಇವರು ಅಭಿಪ್ರಾಯ ಪಡುತ್ತಾರೆ. ಹೀಗೆ ವ್ಯಕ್ತಿವಾದ ಚರ್ಚೆಯು ವ್ಯಕ್ತಿಗಳ ನಡುವೆ ಹಾಗೂ ವ್ಯಕ್ತಿ ಮತ್ತು ಸಮಾಜದ ನಡುವಿನ ಸಮಾನತೆ ಮತ್ತು ವಿಭಿನ್ನತೆಯ ಬಗ್ಗೆ ಚರ್ಚೆಗಳನ್ನು ಮುಂದುವರಿಸಲು ಹೊಸ ಉದಾರವಾದವು ಅವಕಾಶ ಮಾಡಿಕೊಟ್ಟಿರುತ್ತದೆ.

## ಉಪಯುಕ್ತತಾ ವಾದ

ಸಾಂಪ್ರದಾಯಿಕ ಉದಾರವಾದದ ಮತ್ತೊಂದು ಮುಖವಾಗಿ ಬೆಳೆದ ಈ ಉಪಯುಕ್ತವಾದದಲ್ಲಿ ಡೇವಿಡ್ ಹ್ಯೂಮ್‌ರವರ ಚಿಂತನೆಗಳು ಕಂಡು ಬಂದರೂ ಒಂದು ಪದ್ಧತಿಯನುಸಾರವಾಗಿ ಜರ್ಮಿ ಬೆಂಥ್‌ಹ್ಯಾಮ್ ಜೇಮ್ಸ್‌ಮಿಲ್, ಜಾನ್‌ಸ್ಟುವರ್ಟ್‌ಮಿಲ್, ಹೆನ್ರಿ ಸಿಡ್‌ವಿಕ್, ಮತ್ತು ಜಾನ್ ಲಾಕ್‌ರವರನ್ನು ಕುರಿತಾದ ಟೀಕೆಗಳಲ್ಲಿ ಕಂಡು ಬರುತ್ತದೆ. ಒಟ್ಟಿನಲ್ಲಿ ಹೇಳುವುದಾದರೆ ಇವರ ಪ್ರಕಾರ ಸಮಾಜದ ಮತ್ತು ವ್ಯಕ್ತಿಗತವಾದ ಎಲ್ಲ ಚಟುವಟಿಕೆಗಳು ಪ್ರಾಯೋಗಿಕವಾದ ವೈಚಾರಿಕತೆಯನ್ನು ಆಧರಿಸಿ ಅವುಗಳ ಉಪಯುಕ್ತತೆಯನ್ನು ಅನುಸರಿಸಿ ನೋವು ಮತ್ತು ನಲಿವುಗಳನ್ನು ಆಧರಿಸಿ ಇರಬೇಕೆಂಬುದಾಗಿದೆ. ಇವರ ದೃಷ್ಟಿಯಲ್ಲಿ ಒಳಿತು, ಹಕ್ಕು, ಸರಿಯಾದ ಕಾನೂನು, ಸರಿಯಾದ ನೀತಿ ಎಂಬ ಎಲ್ಲ ಅಂಶಗಳು ಉಪಯುಕ್ತತೆಯನ್ನು ವೈಶಾಲ್ಯಗೊಳಿಸುತ್ತದೆ ಎಂಬುದು ಹಾಗಾಗಿ ಯಾವುದೇ ಸಾರ್ವಜನಿಕ ನೀತಿ ಬೆಂಥ್ಯಾಮ್‌ರವರು ತಿಳಿಸಿರುವಂತೆ ಆ ನೀತಿ ಹೊಂದಿರುವ ಗುರಿಯ ಮೇಲೆ ನಿರ್ಧಾರಿತವಾಗಿರಬೇಕು. ಇಲ್ಲಿ ವ್ಯಕ್ತಿಗತವಾದ ತೃಪ್ತಿ ಬಳಕೆಯಾಧಾರಿತವಾದರೆ ಸರ್ಕಾರದ ನಿರ್ಧಾರಗಳು ಹೆಚ್ಚು ಜನರಿಗೆ ಹೆಚ್ಚು ಸಂತೋಷವನ್ನು ತಂದುಕೊಡುವಂತಾಗಿರಬೇಕು ಬೆಂಥ್ಯಾಮ್ ಈ ನಿಟ್ಟಿನಲ್ಲಿ ಗ್ರೀಕ್ ತತ್ವಜ್ಞಾನಿಗಳಾದ ಎಪಿಕ್ಯೂಸ್ ಅವರ ಚರ್ಚೆಯಾದ ಮಾನವನ ನಡತೆಯು ನೋವನ್ನು ತಪ್ಪಿಸಿ ಸುಖವನ್ನು ಹೆಚ್ಚಿಸುವುದಾಗಬೇಕು ಎನ್ನುತ್ತಾರೆ. ನಿಸರ್ಗವು ನೋವು ಮತ್ತು ನಲಿವು ಎಂಬ ಎರಡು ಸಾರ್ವಭೌಮರನ್ನು ಮಾನವನ ಹಿಡಿಯಲ್ಲಿ ಇಟ್ಟಿದ್ದಾನೆ ಎಂದು ತಿಳಿಸುತ್ತಾರೆ. ಜೇಮ್ಸ್ ಮಿಲ್ ಕೂಡ ಇದೇ ವಿಷಯವನ್ನು ಪ್ರತಿಪಾದಿಸಿ ತಮ್ಮ ಬೇಡಿಕೆಗಳನ್ನು ಮುಂದಿಡುತ್ತಾರೆ. ಆದರೆ ಇವರು ಸುಖದಲ್ಲಿಯೂ ವಿವಿಧತೆಯನ್ನು ಗುರುತಿಸುತ್ತಾರೆ. ಹಾಗಾಗಿ ಇವರ ಚರ್ಚೆಯಲ್ಲಿಯ ಸದೃಶಗಳನ್ನು ಓದುವುದಕ್ಕಾಗಿ ಊಟ ಮಾಡುವುದಕ್ಕೂ ಇರುವ ಕಾಲಮಿತಿ ಮತ್ತು ಇತರೇ ಸುಖದ ಮೌಲ್ಯಾಂಶದ ಚರ್ಚೆಗಳನ್ನು ಮುಂದಿಡುತ್ತಾರೆ.

ಬೆಂಥ್ಯಾಮ್‌ರವರು ಮುಂದುವರೆದು ಸಾರ್ವಜನಿಕ ನೀತಿ ರೂಪಣೆಯಲ್ಲಿ ಎಲ್ಲರಿಗೂ ಒಂದೇ ತೆರನಾದ ಮನ್ನಣೆ ಇರಬೇಕು ಮತ್ತು ಪ್ರತಿಯೊಬ್ಬರು ಒಂದೇ ಎಂಬ ಮನೋಭಾವನೆ ಇರಬೇಕು ಇದು ಸಮಾನತೆಯ ಚರ್ಚೆಗೆ ಪೂರಕವಾದ ಚರ್ಚೆಗಳಾಗಿವೆ. ಉತ್ತಮ ಸರ್ಕಾರವೆಂದರೆ ಇವರ ಪ್ರಕಾರ ವ್ಯಕ್ತಿಗತವಾದ ಅಭಿಲಾಷೆಗೆ ಅವಕಾಶ ಇರಬೇಕು ಕಾರಣ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಸುಖದ ನಿರ್ಧಾರವನ್ನು ತೆಗೆದುಕೊಳ್ಳುವಲ್ಲಿ ನ್ಯಾಯಿಕವಾಗಿರುತ್ತಾನೆ ಎಂಬುದಾಗಿದೆ. ಈ ಚರ್ಚೆಯ ಅಂತರಾಳದಲ್ಲಿ ಇವರು ಸಾಂಸ್ಥಿತ ಅಡಚಣೆಗಳನ್ನು ವ್ಯಕ್ತಿಯ ಬೆಳವಣಿಗೆಯ ನಿಟ್ಟಿನಲ್ಲಿ ತರಬಾರದೆಂಬಂತೆ ಬಯಸುವ ದೃಷ್ಟಿಯಿದೆ.

ಆದರೆ ಜೆ.ಎಸ್.ಮಿಲ್‌ರವರು ಈ ಚರ್ಚೆಯನ್ನು ಮತ್ತಷ್ಟು ಸುಸಂಸ್ಕೃತ ಮಟ್ಟಕ್ಕೆ ಒಯ್ದು ಮಾನವನ ಸುಖ ಕೇವಲ ಬೌದ್ಧಿಕ ಸುಖವಲ್ಲ ಅದು ಬೌದ್ಧಿಕ ನೈತಿಕವೂ ಆಗಿರುವುದರಿಂದ ಯಾವ ಚಟುವಟಿಕೆ ತೃಪ್ತಿ ತರುವುದೋ ಸಾಮಾಜಿಕ ಒಳಿತನ್ನು ಬಯಸುವುದೋ ಅವುಗಳನ್ನು ನಾವು ಸುಖವೆಂದು ಪರಿಗಣಿಸಬೇಕೆಂದಿದ್ದರೆ ಹೀಗೆ ಮಿಲ್‌ರವರು ತೃಪ್ತಿ ಇರುವ ಪ್ರಾಣಿಗಿಂತ ಅತೃಪ್ತನಾದ ಮಾನವನ ಜೀವನದ ಬಗ್ಗೆ ಚರ್ಚೆಯನ್ನು ಮಂಡಿಸಿ ರಾಜ್ಯವು ಒಬ್ಬ ವ್ಯಕ್ತಿಯಿಂದ ಅಹಿತವಾಗುವುದಾದರೆ ಅವನಿಗೆ

ಉದಾರವಾಗಿ ದೃಷ್ಟಿಯಲ್ಲಿ ಅಡಚಣೆ ಒಡ್ಡದಿರುವುದನ್ನು ಅಲ್ಲಗಳೆದು ಅಂತಹ ವ್ಯಕ್ತಿಯ ಮೇಲೆ ಸರ್ಕಾರ ನಿಯಂತ್ರಣ ಹೊಂದಬೇಕೆಂದು ಚರ್ಚಿಸಿದ್ದಾರೆ.

ಮ್ಯಾಕ್‌ಪರ್ಸನ್ ಎಂಬ ಚಿಂತಕರು ಈ ಉಪಯುಕ್ತವಾದವನ್ನು ಟೀಕಿಸಿದ್ದು ಜೇಮ್ಸ್‌ಮಿಲ್ ಅವರ ಚರ್ಚೆಗೆ ತಕ್ಕಮಟ್ಟಿಗೆ ಅವರ ಚಿಂತನೆಗಳಿಗೆ ತಮ್ಮ ಒಪ್ಪಿಗೆಯನ್ನು ಸೂಚಿದರು. ಆದರೆ ಮಿಲ್ ಮತ್ತು ಬೆಂಥ್ಯಾಮ್‌ರವರ ಈ ನಿಟ್ಟಿನ ಚಿಂತನೆಗಳನ್ನು ಅವರು ಟೀಕಿಸಿ ಇವು ಬಂಡವಾಳಶಾಹಿ ಪರವಾದ ವಾದಗಳೆಂದು ಅಭಿಪ್ರಾಯ ಪಟ್ಟಿದ್ದಾರೆ. ಇದೇ ರೀತಿ ಜಾನ್‌ರಾಲ್ಸ್‌ವರು ಉಪಯುಕ್ತವಾದವನ್ನು ನೈತಿಕ ಚರ್ಚೆಯ ಆಧಾರದ ಮೇಲೆ ತಿರಸ್ಕರಿಸಿ ಒಟ್ಟಾರೆ ಸುಖವನ್ನು ಬಯಸುವ ಈ ಚರ್ಚೆಗಳು ವೈಯಕ್ತಿಕವಾದಗಳ ಬಗ್ಗೆ ಗಮನಹಿಸುವುದಿಲ್ಲ ಎಂಬ ಚರ್ಚೆಯನ್ನು ಮುಂದಿಟ್ಟಿದ್ದಾರೆ.

## ಸ್ವತಂತ್ರವಾದ (Liberteriasim)

ರಾಜನೀತಿಯ ಸಿದ್ಧಾಂತದಲ್ಲಿ ಈ ಚಿಂತನೆಯು ಉದಾರವಾದದ ಒಂದು ತೀವ್ರತರವಾದವೆಂದು ಗುರುತಿಸಿದ್ದಾರೆ. ಜಾನ್‌ಲಾಕ್‌ನ ರಾಜಕೀಯ ಚಿಂತನೆಯ ಮೂಲಕ ಸ್ವತಂತ್ರವನ್ನು ಕೇಂದ್ರವಾಗಿಟ್ಟುಕೊಂಡು ಬೆಳೆದ ಈ ಚರ್ಚೆಯನ್ನು 18ನೇ ಶತಮಾನದ ಮಧ್ಯಭಾಗದಲ್ಲಿ ಆಡಮ್ ಸ್ಮಿಥ್‌ರವರ ಚರ್ಚೆಗಳ ಫಲವಾಗಿ ಆರ್ಥಿಕ ಉದಾರತ್ವ ಬೆಳವಣಿಗೆಯನ್ನು ಕಂಡುಕೊಂಡು ಲೆಜೆಫೇರ್ ಚರ್ಚೆಯ ಮುಖಾಂತರ ಮಾನವರ ಆರ್ಥಿಕ ಚಟುವಟಿಕೆಯಲ್ಲಿ ರಾಜ್ಯ ಭಾಗವಹಿಸಬಾರದೆಂಬ ಕಟ್ಟುನಿಟ್ಟು ಕ್ರಮಗಲನ್ನು ಪ್ರತಿಪಾದಿಸಿದ್ದರು. ಇದು ಬಂಡವಾಳಶಾಹಿತ್ವದ ಬೆಳವಣಿಗೆಗೆ ಅನುಕೂಲ ಮಾಡಿಕೊಟ್ಟಿತು. 19ನೇ ಶತಮಾನದೆಡೆಗೆ ಉದಾರವಾದವು ಸಮಾಜವಾದ, ಆದರ್ಶವಾದ ಇವುಗಳನ್ನು ಕಲ್ಯಾಣ ರಾಜ್ಯದ ಹೆಸರಿನಲ್ಲಿ ಹೊಂದಾಣಿಕೆ ಮಾಡಿಕೊಂಡಿತು. ಟಿ.ಹೆಚ್. ಗ್ರೀನ್, ಹಾಬ್‌ಹೌಸ್, ಲಾಸ್ಕಿ ಇವರುಗಳು ರಾಜ್ಯವು ಸಮಾಜದಲ್ಲಿ ಆರ್ಥಿಕ ಚಟುವಟಿಕೆಗಳನ್ನು ನಿಯಂತ್ರಿಸಬೇಕೆಂಬ ಚರ್ಚೆಗೆ ತಮ್ಮ ಒಪ್ಪಿಗೆ ನೀಡಿದರು. ಇದು ಬಂಡವಾಳಶಾಹಿತ್ವದ ತಳಹದಿಯನ್ನು ಉದಾರವಾದಿ ಮತ್ತು ಸಮಾಜವಾದಿ ನೆಲೆಯಲ್ಲಿ ಹಾಕಿಕೊಟ್ಟಿತು.19ನೇ ಶತಮಾನದ ಅಂಚಿನಲ್ಲಿ ಮತ್ತು 20ನೇ ಶತಮಾನದ ಮೊದಲಿನಲ್ಲಿ ಉದಾರವಾದವು ಕೆಲವು ಸಮಾಜವಾದಿಗೆ ಆದರ್ಶವಾದಿ ಚಿಂತನೆಗಳನ್ನು ತನ್ನೆಡೆಗೆ ಸೇರಿಸಿಕೊಂಡಿತು. ಗ್ರೀಸ್, ಹಾಬ್ಸ್ ಇವರುಗಳ ಚಿಂತನೆಯಂತೆ ಈ ಉದಾರವಾದಿ ರಾಜ್ಯವು ಕಲ್ಯಾಣ ರಾಷ್ಟ್ರದ ಚಿಂತನೆಯೊಂದಿಗೆ ಸೇರಿ ಹೊರತಂದ ಚಿಂತನೆಯನ್ನು ಲಿಬರ್‌ನೇಟೆರಿಯನಿಸಂ ಎಂದು ಕರೆಯಲ್ಲಿಕ್ಕೆ ಒಟ್ಟಿನಲ್ಲಿ ಇದು ವ್ಯಕ್ತಿಯ ಸ್ವತಂತ್ರ ಹಾಗೂ ಸ್ವಾಯತ್ತತೆಯನ್ನು ಎತ್ತಿ ಹಿಡಿದು ಅವನ ಸುತ್ತಮುತ್ತಲಿನ ಸಮಾಜಕ್ಕೆ ಸಂಸ್ಥೆಗಳಿಗೆ ಸಂಪ್ರದಾಯಗಳಿಗೆ ಅವನನ್ನು ಬದ್ಧವಾಗಿಸುತ್ತದೆ. ಇದು ಮಾನವನನ್ನು ತನ್ನ ವಿಧಿ ಹೋದಲ್ಲಿಗೆ ಕರೆದೊಯ್ಯುವ ಬದಲು ವಿಧಿಯನ್ನು ನಿರ್ಮಿಸುವ ವ್ಯಕ್ತಿಯನ್ನಾಗಿಸುತ್ತದೆ ಹೀಗೆ ಮಾನವನ ಆರ್ಥಿಕ ಚಟುವಟಿಕೆಯು ನಿಜವಾದ ಅಭಿವೃದ್ಧಿಗೆ ಬೆಂಬಲವಾಗಿದೆ ಎಂದು ತಿಳಿಸುತ್ತದೆ.

ಲಾಕ್‌ನ ನೈಸರ್ಗಿಕ ಹಕ್ಕುಗಳ ಸಿದ್ಧಾಂತದಿಂದ ಪ್ರಭಾವಿತಗೊಂಡ ಈ ಲಿಬರ್ಟೆನಿಯನಿಸಂ, ವ್ಯಕ್ತಿ ಕೆಲವು ಹಕ್ಕುಗಳನ್ನು ಹೊಂದಿದ್ದು ಅದು ಅವನ ರಾಜಕೀಯ ಜೀವನಕ್ಕಿಂತ ಮೊದಲಿನಿಂದಲೂ ಅವನೊಂದಿಗಿರುತ್ತವೆ. ಇವನ್ನು ವ್ಯಕ್ತಿ ಸಮಾಜದ ಕಾರಣಕ್ಕಾಗಿ ಕಳೆದುಕೊಳ್ಳಬೇಕಿಲ್ಲ ಎಂದು ತಿಳಿಸಿದ್ದರೆ ಆಸ್ತಿಯ ಹಕ್ಕು, ಒಪ್ಪಂದ ಹಕ್ಕು ಇವು ರಾಜ್ಯಕ್ಕೆ ಸಂಬಂಧಿತವಾಗಿಲ್ಲದಿರುವುದರಿಂದ ರಾಜ್ಯವು ಈ ವಿಚಾರಗಳಲ್ಲಿ ಅಡ್ಡಿ ಒಡ್ಡಬಾರದು ಎಂದಿದ್ದಾರೆ. ತೆರಿಗೆ ಹಾಕುವುದನ್ನು ನಿಷೇಧಿಸುವ ಇವರು ತೆರಿಗೆಯು ಬೇರೊಬ್ಬರ ಶ್ರಮವನ್ನು ಮತ್ತೊಬ್ಬರಿಗೆ ಹಂಚುವುದು ಎಂದು ಟೀಕಿಸಿದ್ದಾರೆ ರಾಜ್ಯಗಳು ಎಲ್ಲರಿಗೂ ಸ್ವಾತಂತ್ರ್ಯವನ್ನು ನೀಡಿದ್ದಲ್ಲಿ ಪ್ರತಿಯೊಬ್ಬರು ತಮ್ಮ ಶಕ್ತಿ ಮೀರಿ ದುಡಿದು ಸಮಾಜದ ಒಳಿತಿಗಾಗಿ ಶ್ರಮಿಸುತ್ತಾರೆ ಎಂದಿದ್ದಾರೆ.

ಈ ಮೇಲಿನ ಚರ್ಚೆಗಳು ಕೆಲವೊಮ್ಮೆ ಲಿಬರ್ಟ್‌ರೆನಿಯಂ ಚಿಂತನೆಗಳನ್ನು ಅರಾಜಕತವಾದಕ್ಕೆ ಹೋಲಿಸಿ ಪ್ರಯತ್ನಿಸಿದ್ದಾರೆ. ಆದರೆ ಈ ಚಿಂತನೆಯಲ್ಲಿ ರಾಜ್ಯದ ಚಟುವಟಿಕೆಗಳನ್ನು ನಿಯಂತ್ರಿಸಿ ಖಾಸಗೀ ಚಟುವಟಿಕೆಗಳಿಗೆ ಪ್ರೇರೇಪಿಸಿರುವುದು ಮತ್ತು ರಾಜ್ಯವು ಖಾಸಗೀ ಆಸ್ತಿಗೆ ಭದ್ರತೆ ನೀಡುವ ಕೆಲಸಗಳನ್ನ ಮಾಡುವ ಕೆಲಸ ಅದಕ್ಕೆ ಸರಿಯಾದವು ಎಂದು ಹೇಳುವ ಮಾತುಗಳು ಟೀಕೆಗೆ ಈಡಾಗಿವೆ. ಈ ಚಿಂತನೆಯ ಮುಖ್ಯ ಚಿಂತನಕಾರರೆಂದರೆ ಬರ್ಲಿನ್, ಮಿಲ್ಟನ್, ಫ್ರೀಡ್‌ಮನ್, ನಾಜಿಕ್, ಇತರರು ನಾಸಿಕ್‌ರವರು ತಮ್ಮ ಪುಸ್ತಕಗಳಲ್ಲಿ ವ್ಯಕ್ತಿಗೆ ನೈಸರ್ಗಿಕವಾಗಿ ಕೆಲವು ಹಕ್ಕುಗಳು ದೊರಕಿವೆ ಈ ಹಕ್ಕುಗಳಿಂದ ಆತ ತನ್ನ ಶ್ರಮವನ್ನು ವಹಿಸಿ ಸಂಪಾದಿಸಿರುವ ಆಸ್ತಿಯನ್ನು ರಾಜ್ಯವು ಕಾಪಾಡಬೇಕೆಂದಿದ್ದೇನೆ. ಈ ಕೆಲಸಕ್ಕಿಂತ ರಾಜ್ಯಕ್ಕೆ ಇನ್ನಾವುದೇ ನೈತಿಕ ಹಕ್ಕಿಲ್ಲವೆಂದು ಚರ್ಚಿಸಿದ್ದಾರೆ. ಈ ಚರ್ಚೆ ಮೂಲಭೂತವಾಗಿ ರಾಜ್ಯವು ಪ್ರತಿನಿಧಿಸುವ ಕಲ್ಯಾಣ ರಾಷ್ಟ್ರದ ವಿರೋಧವಾಗಿದೆ ಎಲ್ಲಿ ಅಸಮಾನತೆ ಇರುವುದೋ ಅಲ್ಲಿ ಉಳ್ಳವರು ತಮ್ಮ ಸ್ವಂತ ಮನಸ್ಸಿನಿಂದ ಅಸಮಾನತೆಯನ್ನು ತೊಡೆದು ಹಾಕಬಹುದು ಎಂದು ಚರ್ಚಿಸಲು ಇವರು ರಾಜ್ಯ ಹಿಡಿತದಿಂದ ಸಮಾಜದಿಂದ ಪಾರು ಮಾಡುವ ಚರ್ಚೆಯನ್ನು ಮಂಡಿಸಿದ್ದಾರೆ.

ಸಮುದಾಯತ್ವ

ಇದು ಉದಾರವಾದದ ಮತ್ತೊಂದು ರೂಪವಾಗಿದ್ದು ಸಾಂಪ್ರದಾಯಿಕವಾಗಿ ಕಂಡು ಬರುತ್ತದೆ ಇಲ್ಲಿ ವ್ಯಕ್ತಿಯನ್ನು ಸರ್ವ ಅಸ್ತಿತ್ವದ ಕೇಂದ್ರಬಿಂದುವಾಗಿ ಕಂಡು ಆತ ಸಮಾಜಕ್ಕಾಗಿ ಏನನ್ನ ನೀಡಬೇಕೆಂಬ ಚರ್ಚೆ ಒಂದು ತೆರನಾಗಿ ವ್ಯಕ್ತಿ ವ್ಯಕ್ತಿಗೆ ಯಾವ ತೆರನಾದ ಸಂಬಂಧ ಹೊಂದುತ್ತವೆಂದು ತಿಳಿಸುತ್ತದೆ. ಗುರಿಗಿಂತ ತನ್ನತನ ಅಥವ ಸ್ವಂತಿಕೆ ಪ್ರಮುಖವೆಂದು ಹೇಳುವ ಈ ಚರ್ಚೆ ವ್ಯಕ್ತಿ ತನಗೆ ಬೇಕಾದ ನಿರ್ಧಾರ ತೆಗೆದುಕೊಳ್ಳಬಹುದು ತನ್ನ ಇಚ್ಛೆಯನುಸಾರ ಗುರಿ ತಲುಪಲು ಪ್ರಯತ್ನಿಸಬಹುದು ಎಂಬ ಚರ್ಚೆಗಳನ್ನು ಒಳಗೊಂಡಿದೆ ಸಮುದಾಯತ್ವವು ಈ ನಿಟ್ಟಿನಲ್ಲಿ ವ್ಯಕ್ತಿಯನ್ನು ಅವನತನವನ್ನು ಬಿಡದಂತೆ ಸಮಾಜದಲ್ಲಿ ಅವನ ಪಾತ್ರ ಪರಿಸರ ಮತ್ತು ನಡೆದು ಬಂದ ದಾರಿ ಇವುಗಳನ್ನು ಅನುಸರಿಸಿ ಒಟ್ಟಾರೆ ಸಮುದಾಯತ್ವವು ಈತನ ಸ್ವಂತ ಕೊಡುಗೆಗೆ ಉಪಕಾರಿಯಾಗಿದೆ ಎಂಬುದನ್ನು ಚರ್ಚಿಸುತ್ತದೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ ಸ್ವತಂತ್ರ್ಯವು ವ್ಯಕ್ತಿಗತವಾಗಿದ್ದು ಅವನ ಆಸಕ್ತಿ ಮತ್ತು ಹಕ್ಕುಗಳನ್ನು ಪ್ರತಿಪಾದಿಸಿದರೆ ಸಮುದಾಯತ್ವವು ಅವನ ಸಾಮಾಜಿಕ, ಗುರುತನ್ನು ಆಧರಿಸಿಟ್ಟು ಸಮಾಜದ ಹಿತಾಸಕ್ತಿಯಿಂದ ಆತ ಎಲ್ಲರೊಡಗೂಡಿ ಬದುಕುತ್ತಾರೆ ಎಂಬ ಚರ್ಚೆಯನ್ನು ತಿಳಿಸುತ್ತವೆ ಇದು ಹೊಸ ಉದಾರವಾದ ಚರ್ಚೆಗಳಾಗಿವೆ.

## 9.5 ಕೆಲವು ಟೀಕೆಗಳು

ಉದಾರವಾದವು ಈಗಾಗಲೇ ಚರ್ಚಿಸಿರುವಂತೆ ಒಂದು ಬಲಿಷ್ಠ ರಾಜಕೀಯ ಚಿಂತನೆ ಇದು ಕಾಲಕ್ಕೆ ತಕ್ಕಂತೆಬದಲಾಗುತ್ತ ಬೆಳೆದು ಆದರ್ಶವಾಗಿ ಮಾನವನ ಸಮಸ್ಯೆಗಳಿಗೆ ಸ್ಪಂದಿಸುವ ಚಿಂತನೆ ಎನಿಸಿದ್ದರೂ ಮಾನವನ ಸಮಸ್ಯೆಗಳು ಸಾವಕಾಶವಾಗಿ ಬಗೆಹರಿಯದ ಕಾರಣ ಇದು ಕೂಡ ಬಂಡವಾಳಸಾಹಿತ್ಯದ ಕಡೆಗೆ ತನ್ನ ಒಲವನ್ನು ಮೂಡಿಸಿ ಉಳಿದಿದೆ.

ಇದು ಊಳಿಗಮಾನ್ಯ ಪದ್ಧತಿಯ ಆಸಕ್ತಿಯನ್ನು ಉಳಿಸಿಕೊಂಡಿದೆ ಕಾರಣ ಉದಾರವಾದವು ರಾಜ್ಯದ ಅಧಿಕಾರವನ್ನು ನಿಯಂತ್ರಣವನ್ನು ತಪ್ಪಿಸುವ ಬಗ್ಗೆ ಹೆಚ್ಚಿನ ಚರ್ಚೆ ಮಾಡುತ್ತದೆ. ಆಸ್ತಿಯ ಹಕ್ಕಿನ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿದ ಈ ಚಿಂತನೆ ಕೆಲವೊಮ್ಮೆ ನ್ಯಾಯವನ್ನು ಒದಗಿಸಿಕೊಡುವುದರಲ್ಲಿ ಸೋಲನ್ನು ಅನುಭವಿಸುತ್ತದೆ.

ಫ್ರೆಂಚ್ ಮಹಾಕ್ರಾಂತಿಯ ನಂತರದ ಈ ಚಿಂತನೆಯು ಬದಲಾವಣೆಗಳನ್ನು ತರಲುಸಾಧ್ಯವಾಗದೇ ಉದಾರವಾದಿ

ಚಿಂತನೆ ಸಮಾಜವಾದಿ ಚಿಂತನೆಯೊಂದಿಗೆ ಬೆರೆತು ಕಲ್ಯಾಣ ರಾಷ್ಟ್ರಗಳ ಸ್ಥಾಪನೆ ಕಡೆಗೆ ಬೆಳೆದಿದೆ. ಹೀಗೆ ಆಂತರಿಕವಾಗಿ ಬಂಡವಾಳಶಾಹಿ ಪದ್ಧತಿಯನ್ನು ಪ್ರತಿಪಾದಿಸುವ ಈ ಚಿಂತನೆ ಕೆಲವೊಮ್ಮೆ ತೀವ್ರವಾಗಿ ಸಾಂಪ್ರದಾಯಿಕವಾಗಿ ಕಂಡು ಬರುತ್ತದೆ ಇಂತಹ ಏರಿಳಿತಗಳನ್ನು ಒಳಗೊಂಡ ಇದು ಯಾವ ಹಂತದಲ್ಲಿಯೂ ಸಂಪೂರ್ಣವಾಗಿ ತನ್ನ ಸಾಧನೆಯನ್ನು ಪರಿಪೂರ್ಣಗೊಳಿಸಿಲ್ಲ. ಸಮಕಾಲೀನ ಉದಾರವಾದವು ಪ್ರತಿನಿಧಿ ಪ್ರಜಾಪ್ರಭುತ್ವವನ್ನು ಬೆಂಬಲಿಸಿದರೆ ರಾಜ್ಯವು ಎಲ್ಲರ ಹಿತಾಸಕ್ತಿಯನ್ನು ಕಾಪಾಡುವುದೇ ಆಗಿದ್ದರೆ ಅದರಲ್ಲಿ ಅಭಿವೃದ್ಧಿಪರ ರಾಷ್ಟ್ರಗಳಲ್ಲಿ ಇಂತಹ ಚಟುವಟಿಕೆಗಳಿಗೆ ಪ್ರೋತ್ಸಾಹವನ್ನು ನೀಡಿ ಸಮಾಜವನ್ನು ಸುಧಾರಿಸಬಹುದಿತ್ತು ಆದರೆ ಇಂದು ನಾವು ಇಂತಹ ಯಾವುದೇ ಚಟುವಟಿಕೆಯನ್ನು ಕೈಗೆ ತೆಗೆದುಕೊಳ್ಳಲಾರದೇ ಇರುವುದು ಈ ನವ ಉದಾರವಾದದ ಮುಖ್ಯ ಲಕ್ಷಣಗಳಾಗಿವೆ.

## ನಿಮ್ಮ ಪ್ರಗತಿ ಪರಿಶೀಲನೆ - 1

**ಸೂಚನೆ:** 1. ಈ ಕೆಳಗೆ ಬಿಟ್ಟಿರುವ ಜಾಗವನ್ನು ನಿಮ್ಮ ಉತ್ತರಕ್ಕೆ ಉಪಯೋಗಿಸಿಕೊಳ್ಳಿ.

2. ಈ ಘಟಕದ ಕೊನೆಯಲ್ಲಿ ನೀಡಿರುವ ಉತ್ತರದೊಂದಿಗೆ ನಿಮ್ಮ ಪ್ರಗತಿಯನ್ನು ಪರಿಶೀಲಿಸಿಕೊಳ್ಳಿ.

**1. ಹೊಸ (ನವ್ಯ) ಉದಾರವಾದ ಎಂದರೇನು ವಿವರಿಸಿ ?**

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

**2. ಉದಾರವಾದದ ಬಗೆಗಿನ ಚರ್ಚೆಗಳನ್ನು ವಿಮರ್ಶಿಸಿ ?**

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

## 9.6 ಒಟ್ಟಾರೆ ಅಭಿಪ್ರಾಯ

ವಿದ್ಯಾರ್ಥಿಗಳೇ ನಾವು ಈಗಾಗಲೇ ಈ ಹೊಸ ಉದಾವಾದದ ಚರ್ಚೆಯನ್ನು ಅಧ್ಯಯನಿಸಿದ್ದಲ್ಲಿ ಇಲ್ಲಿ ಉದಾರವಾದ ಬೆಳವಣಿಗೆ ಅಭಿವೃದ್ಧಿ ವೈವಿಧ್ಯತೆ ಮತ್ತು ಇತರೇ ಋಣಾತ್ಮಕ..............................ಅಂಶಗಳನ್ನು ಮತ್ತು ಮಾನವತಾವಾದಿ ಅಂಶಗಳನ್ನು ಚರ್ಚಿಸಲಾಗಿದೆ. ಅಂದರೆ ಇದೊಂದು ಸಾಂಸ್ಕೃತಿಕವಾದ ಸಾಂಪ್ರದಾಯಿಕವಾದವಾಗಿದ್ದು ಬೆಳೆಯುತ್ತಿರುವ ಕೈಗಾರಿಕೋದ್ಯಮದ ಚಿಂತನೆಗಳನ್ನು ಸಂಪೂರ್ಣವಾಗಿ ಗ್ರಹಿಸಿ ಇದು ಸಂಪ್ರದಾಯ ಉದಾರವಾದಿ ಚಿಂತನೆಗಿಂತ ಮುಂದುವರೆದ ಚಿಂತನೆಯಾಗಿ ಉದಾರವಾದ ಮುಖ್ಯವನ್ನು ಹೊಂದಿದೆ.

## 9.7 ಕಠಿಣ ಪದಗಳು

ಲೈಬರ್ ಲ್ಯಾಟಿನ್‌ಪದ, ಇದರ ಅರ್ಥ ಸ್ವಾತಂತ್ರ್ಯ

ಲೆಜಫೇರ್ ನಿರ್ಬಂಧ ಇಲ್ಲದಿರುವುದು, ಮುಕ್ತವಾಗಿ ಬಿಡುವುದು

ಊಳಿಗಮಾನ್ಯ ಪದ್ಧತಿ ಜಮೀನ್ದಾರಿ ವ್ಯವಸ್ಥೆ

## 9.8 ಕೆಲವು ಉಪಯುಕ್ತ ಗ್ರಂಥಗಳು


ಎಫ್.ಡಬ್ಲ್ಯೂ ಕಾಕರ್ ರೀಸೆಂಟ್ ಪೊಲಿಟಿಕಲ್ ಥಿಯರಿ

ಎಸ್.ಪಿ. ವರ್ಮಾ ಮಾಡರ್ನ್ ಪೊಲಿಟಿಕಲ್ ಥಿಯರಿ

ಬಿ. ರಾಬರ್ಟ್ ಥಿಯರೀಸ್ ಆಫ್ ಪೊಲಿಟಿಕಲ್ ಸಿಸ್ಟಮ್ಸ್

ಡಾ. ಕೆ.ಜೆ. ಸುರೇಶ್ ಆಧುನಿಕ ರಾಜಕೀಯ ಸಿದ್ಧಾಂತ


## 9.9 ನಿಮ್ಮ ಬೆಳವಣಿಗೆಯನ್ನು ಗುರುತಿಸಿಕೊಳ್ಳಿರಿ.

ನಿಮ್ಮ ಪ್ರಗತಿ ಪರಿಶೀಲನೆ - 1


1. ನೋಡಿ ವಿಭಾಗ 9.3
2. ನೋಡಿ ವಿಭಾಗ 9.4

## ಘಟಕ 10 ಉದಾರವಾದದ ಪುನರ್ ನವೀಕರಣ

### ರಚನೆ

10.0 ಉದ್ದೇಶಗಳು

10.1 ಪ್ರಸ್ತಾವನೆ

10.2 ಉದಾರವಾದ ಮುಖ್ಯ ಸಾಧನೆಗಳು

10.3 ಉದಾರವಾದ ಪುನರ್ ನವೀಕರಣ : ಕೆಲವು ವಿಚಾರಗಳು

10.4 ಉದಾರವಾದ ಪುನರ್ ನವೀಕರಣ ಪ್ರಮುಖ ಚರ್ಚೆಗಳು

10.5 ಒಟ್ಟಾರೆ ಅಭಿಪ್ರಾಯ

10.6 ಕೆಲವು ಉಪಯುಕ್ತ ಪುಸ್ತಕಗಳು

10.7 ಕಠಿಣ ಪದಗಳು

10.8 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು

## 10.0 ಉದ್ದೇಶಗಳು

ಉದಾರವಾದವನ್ನು ವ್ಯಾಖ್ಯಾನಿಸುವುದು ಅಷ್ಟು ಸುಲಭವಲ್ಲ ಕಾರಣ ಇದು ಯಾವುದೇ ಒಂದು ಸಿದ್ಧಾಂತವನ್ನು ಸಂಪೂರ್ಣವಾಗಿ ಪ್ರತಿನಿಧಿಸುವುದಿಲ್ಲ. ಕಾಲಕಾಲಕ್ಕೆ ಚಾರಿತ್ರಿಕ ಬೆಳವಣಿಗೆಯ ಹಿನ್ನೆಲೆಯಲ್ಲಿ ಆದ ಬದಲಾವಣೆಗಳನ್ನು ಮೈಗೂಡಿಸಿಕೊಂಡ ಈ ಸಿದ್ಧಾಂತವು ಕೆಲವೇ ರಾಷ್ಟ್ರಗಳಲ್ಲಿ ಪ್ರಚಲಿತವಾಗಿತ್ತು. ಹೀಗಾಗಿ ಈ ಚಿಂತನೆಯನ್ನು ಯಾವುದೇ ಯೋಜನೆ ಅಥವಾ ಪಕ್ಷದ ಚಿಂತನೆಯಾಗಿ ಕಂಡುಕೊಳ್ಳುವುದು ತಪ್ಪಾಗುತ್ತದೆ. ಅಲ್ಲದೆ ಉದಾರವಾದದ ಚಿಂತನೆಗಳು ಯಾವ ಅಂಶಗಳನ್ನು ಆಧರಿಸಿ ಬೆಳಕನ್ನು ಕಂಡಿದೆಯೋ ಆ ಸಿದ್ಧಾಂತಗಳು ಕೂಡ ಕಾಲಾನುಕ್ರಮೇಣ ಬದಲಾವಣೆ ಹೊಂದಿವೆ. ಉದಾರವಾದಿ ಚಿಂತನೆಗೆ ಬೆಂಬಲಿಸಿದಂತೆ ಈ ವಾದದ ಬಗ್ಗೆ ಸಂಪೂರ್ಣ ನಂಬಿಕೆಯನ್ನು ಹೊಂದಿಲ್ಲ. ಹೀಗೆ ಉದಾರವಾದವು ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಅಂಶಗಳಿಗೆ ಸೇರಿದಂತೆ ಬಹಳಷ್ಟು ಬದಲಾವಣೆ ಕಂಡುಕೊಂಡಿದೆ.

## 10.1 ಪ್ರಸ್ತಾವನೆ

ಈ ಸಿದ್ಧಾಂತದ ಉತ್ತರಾರ್ಧದಲ್ಲಿ ಉದಾರವಾದವು ವ್ಯಕ್ತಿವಾದ ಚರ್ಚೆಯನ್ನು ಬಯಸಿದರೂ ಇದು ಒಬ್ಬ ಸಾಮಾಜಿಕ ಜೀವಿಯಾದ ವ್ಯಕ್ತಿಯನ್ನು ಅವಲಂಬಿತವಾಗಿರುವುದರಿಂದ ಅದು ಸ್ವಾತಂತ್ರ್ಯದ ವ್ಯಾಪ್ತಿಯು ಇವನಂತೆಯು ಸಮಾಜದಲ್ಲಿರುವ ಇತರರಿಗೆ ಅಡಚಣೆಯಾಗಬಾರದು ಎಂದಿದ್ದಾರೆ. ಇಂತಹ ಚಿಂತನೆಯನ್ನು ಭೊಸಾಂಕ್ವೆ ಕೂಡ ಬೆಂಬಲಿಸಿದ್ದಾರೆ. ಯಾವುದೇ ಸಂದರ್ಭದಲ್ಲಿ ವ್ಯಕ್ತಿಗತವಾದ ಸ್ವಾತಂತ್ರ್ಯವು ಮತ್ತೊಬ್ಬರ ಸ್ವತಂತ್ರಕ್ಕೆ ಅಡಚಣೆಯುಂಟಾಗುವುದೇ ಆದಲ್ಲಿ ರಾಜ್ಯವು ಈ ಬಗ್ಗೆ ಗಮನಹರಿಸಬೇಕು. ಕಾರಣ ಸಮಾಜದಲ್ಲಿ ಜನರು ಒಳಿತನ್ನು ಕಾಪಾಡುವುದೇ ರಾಜ್ಯದ ಮುಖ್ಯ ಕೆಲಸ ಎಂದಿದ್ದಾರೆ. ಹೀಗೆ ಋಣಾತ್ಮಕ ಉದಾರವಾದ ಚಿಂತನೆಯು ರಾಜ್ಯದ ಕಾರ್ಯದಲ್ಲಿ ಕೆಲವು ನಿಯಂತ್ರಣಗಳನ್ನು ಅಳವಡಿಸಿ ವ್ಯಕ್ತಿ ಸ್ವಾತಂತ್ರ್ಯದಲ್ಲಿ ಕೆಲವು ನಿಯಂತ್ರಣಗಲು ಅವಶ್ಯಕವೆಂದು ಪ್ರತಿಪಾದಿಸಿದ್ದಾರೆ.

## 10.2 ಉದಾರವಾದದ ಪ್ರಮುಖ ಸಾಧನೆಗಳು

ಉದಾರವಾದದ ಮುಖ್ಯ ಲಕ್ಷಣವೆಂದರೆ ಇದು ಸಾಂಪ್ರದಾಯವಾಗಿದ್ದ ಈ ಚಿಂತನೆಯನ್ನು ಆಧುನಿಕ ವೈಚಾರಿಕತೆ ದೃಷ್ಟಿಯಲ್ಲಿ ವಿವರಿಸಿ ವಿವಿಧ ಪದಗಳಲ್ಲಿ ಹೇಳುವುದಾದರೆ ಇದು ಸಮಾಜದಲ್ಲಿ ಮನುಷ್ಯರ ಸಾಮಾಜಿಕ ಮತ್ತು ಆರ್ಥಿಕ ಸಂಬಂಧಗಳನ್ನು ಪುನರುಚ್ಚರಿಸಿತು. ಇವುಗಳು ಇಲ್ಲಿಯವರೆಗೆ ಸಂಪ್ರದಾಯದ ಮೇಲೆ ಅವಲಂಬಿತವಾಗಿದ್ದು, ಅವುಗಳನ್ನು ಬದಲಾಯಿಸುವ ಸಾಧ್ಯತೆಗಳು ಕಂಡು ಬಂದಿರಲಿಲ್ಲ. ಮಧ್ಯಕಾಲದಲ್ಲಿ ನವಮಧ್ಯಮವರ್ಗವು ತುಂಬಿಕೊಂಡಿದ್ದ ವ್ಯಾಪಾರಸ್ಥರು ಕೈಗಾರಿಕೋದ್ಯಮಿಗಳು ಊಳಿಗಮಾನ್ಯ ಪದ್ಧತಿಯು ಮುರಿದು ಬಿದ್ದುದರ ಲಾಭ ಪಡೆದು ತಮ್ಮ ಆರ್ಥಿಕ ಚಟುವಟಿಕೆಗಳನ್ನು ಮುಂದುವರೆಸಿಕೊಂಡರು. ಅಂತೆಯೇ ಇವರಲ್ಲಿ ಕೆಲವರು ರಾಜಕೀಯದ ಕಡೆಗೂ ಮುನ್ನಡೆದರು ಹೀಗಾಗಿ ಶ್ರಮಿಕ ವರ್ಗವು ಸಾಂಪ್ರದಾಯವಾದ ಉದಾರವಾದದ ಸಂದರ್ಭದಲ್ಲಿ ಕೆಲವು ಕೆಟ್ಟ ಪರಿಸ್ಥಿತಿಗಳನ್ನು ಎದುರಿಸಬೇಕಾಯಿತು. ಆದರೆ ಇಂತಹಗ ಸಂಬಂಧಗಳನ್ನು ವೈಚಾರಿಕವಾಗಿ ಚರ್ಚಿಸಿದ ನಂತರದಲ್ಲಿ ಯಾವುದೇ ನವಚಿಂತನೆಗಳು ಇದರ ಅಭಿವೃದ್ಧಿ ತಡೆಯಲು ಸಾಧ್ಯವಾಗಲಿಲ್ಲ. ಸಮಾಜವಾದವು ಮೊದಲಿಗೆ ಶ್ರಮಿಕವರ್ಗಕ್ಕೆ ಸ್ಪಂದಿಸಿದರೂ ಉದಾರವಾದವು ವೈಚಾರಿಕವಾಗಿ ಸಮಾಜದ ಮೇಲೆ ಪ್ರಭಾವ ಬೀರಲು ಸಾಧ್ಯವಾಗಿರಲಿಲ್ಲ. ಆದರೆ ಉದಾರವಾದವು ಇದೇ ಸಮಾಜವಾದದ ಹಿನ್ನೆಲೆಯಲ್ಲಿ ಬದಲಾವಣೆಯನ್ನು ಕಂಡುಕೊಂಡು ಸಮಾಜವಾದದ ಸವಾಲುಗಳನ್ನು ತನ್ನಲ್ಲಿ ಮೈಗೂಡಿಸಿಕೊಂಡ ಹೊಸ ಚಿಂತನೆಗಳಾದ ಸ್ವಾತಂತ್ರ್ಯ ಸಮಾನತೆ, ನ್ಯಾಯ, ಪ್ರಜಾಪ್ರಭುತ್ವ, ಅಭಿವೃದ್ಧಿ ಮತ್ತು ಇತರೆ ಮಾನವ ಮೌಲ್ಯಗಳನ್ನು ಬೆರೆಸಿತು. ಹೀಗೆ ಬೆಳೆದ ಉದಾರವಾದವು

ಒಂದೆಡೆ ಬಂಡವಾಳಶಾಹಿ ಸಿದ್ಧಾಂತವಾಗಿ ಮತ್ತೊಂದೆಡೆ ಸಂವಿಧಾನಾತ್ಮಕ ಸಿದ್ಧಾಂತವಾಗಿ ಬೆಳೆದು ಆರ್ಥಿಕ ಮತ್ತು ಬಂಡವಾಳಶಾಹಿತ್ವದ ನಡುವೆ ಉತ್ತಮ ಸಂಬಂಧವನ್ನು ಏರ್ಪಡಿಸಿ ಎರಡೂ ಚಿಂತನೆಗಳಲ್ಲಿ ಆಂತರಿಕವಾಗಿದ್ದ ದೌರ್ಬಲ್ಯಗಳನ್ನು ಬೆಳಕಿಗೆ ತಂದಿತು. ಒಂದೆಡೆ ಸಂವಿಧಾನಾತ್ಮಕವಾಗಿ ವ್ಯಕ್ತಿಯ ಸ್ವಾತಂತ್ರ್ಯವು ಸಂವಿಧಾನದ ಮೇಲೆ ಅವಲಂಬಿತವಾಗಿದ್ದು ರಾಜಕೀಯ ಅಧಿಕಾರವು ಹೆಚ್ಚಿನ ಮೌಲ್ಯಗಳು ಪ್ರತಿಪಾದಿಸಿತು. ಹೀಗೆ ಉದಾರವಾದವು ಬಂಡವಾಳಶಾಹಿತ್ವ ಮತ್ತು ಸಂವಿಧಾನಾತ್ಮಕವಾದ ಸೇರಿ ಸಂಪೂರ್ಣವಾದ ಬೆಳವಣಿಗೆ ಕಂಡುಕೊಂಡಿತು. ಹೀಗೆ ಉದಾರವಾದದ ಪ್ರಮುಖ ಸ್ಪಂದನೆಯು ಬಂಡವಾಳಶಾಹಿತ್ವ ಮತ್ತು ಸಂವಿಧಾನಾತ್ಮಕ ಸಮ್ಮಿಳನದ ಮೂಲಕ ವ್ಯಕ್ತಿ ಸ್ವಾತಂತ್ರ ಹಾಗೂ ಸರ್ವತೋಮುಖ ವಾದ ಬೆಳವಣಿಗೆಗೆ ಸಹಾಯಕಾರಿಯಾಗಿದೆ.

## 10.3 ಉದಾರವಾದದ ಪುನರ್ ನವೀಕರಣದ ಕೆಲವು ವಿಚಾರಗಳು: ಸ್ಥೂಲ ಹಿನ್ನೆಲೆ

ಉದಾರವಾದವು ಮೊದಲಿಗೆ ಮಧ್ಯಕಾಲೀನ ಜನರ ಊಳಿಗಮಾನ್ಯ ವರ್ಗದ ಪ್ರಮುಖ ಚಿಂತನೆಯಾಗಿ ಬೆಳೆಯಿತು. ಸಬೈನ್‌ರವರು ಉದಾರವಾದಿ ಚಿಂತಕರಾದ ಜಾನ್‌ಲಾಕ್‌ನಿಂದ ಪ್ರಾರಂಭವಾಗಿ ಆಡಮ್‌ಸ್ಮಿಥ್‌ರವರೆಗೆ ಹಲವಾರು ತಾರ್ಕಿಕ ವ್ಯತ್ಯಾಸಗಳನ್ನು ಅವರ ಚಿಂತನೆಗಳಲ್ಲಿ ಹೊಂದಿದ್ದಾರೆ ಎಂದು ತಿಳಿಸಿದ್ದಾರೆ. ಆದರೆ ಇಂತಹ ಚಿಂತನೆಗಳನ್ನು ಪ್ರತಿಪಾದಿಸಿದವೋ ಆ ವರ್ಗಗಳಲ್ಲಿನ ಅಸಮತೋಲನ ಚಿಂತನೆಗಳನ್ನು ಈ ಸಿದ್ಧಾಂತಗಳಲ್ಲಿ ನಾವು ಕಾಣಬಹುದೆಂದಿದ್ದಾರೆ. ಹೀಗೆ ಪ್ರತಿಪಾದಕರಿಂದ ವ್ಯಾಖ್ಯಾನಿಸಲ್ಪಟ್ಟು, ಈ ಉದಾರವಾದವು ಕ್ರಿಶ್ಚಿಯನ್‌ರ ರಾಜತ್ವದಲ್ಲಿ ನಂಬಿಕೆಯಿಟ್ಟವರ ಶ್ರೀಮಂತ ವರ್ಗದವರ, ಆದರ್ಶವರ್ಗದವರ, ಉಪಯುಕ್ತತಾವಾದಿಗಳ, ವೈಚಾರಿಕ ವಾದಿಗಳ, ವ್ಯಕ್ತಿವಾದಿಗಳ ಚಿಂತನೆಗಳಿಂದಾಗಿ ಆಂತರಿಕವಾದ ಭದ್ರತೆ ಕಳೆದುಕೊಂಡಿತು. ಈ ರೀತಿಯ ಆಂತರಿಕ ಭದ್ರತೆ ಕಳೆದುಕೊಂಡ ಕಾರಣ ಇದು ಸಾಮಾಜಿಕ ವಿಕಸನದ ಹಂತದಲ್ಲಿ ಒಂದು ವರ್ಗದ ಹಿಡಿತಕ್ಕೆ ಸಿಲುಕಿದೆ. ಆ ವರ್ಗವೇ ಬಂಡವಾಳಶಾಹಿ ವರ್ಗ ಈ ಬಂಡವಾಳಶಾಹಿಯು ಉದಾರವಾದಿ ಚಿಂತನೆಗಳನ್ನು ಊಳಿಗಮಾನ ವಿರುದ್ಧ ಬಳಸಿ ತದನಂತರದಲ್ಲಿ ಕೂಲಿ ಕಾರ್ಮಿಕರ ಹಾಗೂ ಬಂಡವಾಳಶಾಹಿಗಳ ನಡುವಿನ ವಿರೋಧಿ ಚಿಂತನೆಯಾಗಿ ಪರಿವರ್ತಿಸಿ ಕೈಗಾರಿಕಾ ಕ್ರಾಂತಿಯ ನಂತರದಲ್ಲಿ ಶ್ರಮಿಕ ವರ್ಗದ ಮತ್ತು ಬಂಡವಾಳಶಾಹಿಯ ಚಿಂತನೆಯಾಗಿ ಬೆಳೆಸಿ ಕೊನೆಯ ಹಂತದಲ್ಲಿ ಸಂಪ್ರದಾಯವಾದಿಗಳ ಆದರ್ಶವಾಗಿ ಬೆಳೆದು ನಿಂತಿದೆ. ಹೀಗೆ ಚಾರಿತ್ರಿಕ ಹಿನ್ನೆಲೆಯಲ್ಲಿ ಒತ್ತಡಗಳಿಗೆ ಮಣಿದು ಬೆಳೆದ ಈ ಬೌದ್ಧಿಕ ಚಿಂತನೆಯ ಉದಾರವಾದಿ ಸಿದ್ಧಾಂತವು ಪುನರುತ್ಥಾನ ಮತ್ತು ರಷ್ಯನ್ ಮಹಾಕ್ರಾಂತಿ ನಡುವಿನ ಕಾಲದಲ್ಲಿ ಅತೀ ಹೆಚ್ಚಿನ ಪ್ರಭಾವಗಳಿಗೆ ಒಳಗಾಗಿತ್ತು. ಲಾಸ್ಕಿ ಇಂತಹ ಉದಾರವಾದಿ ಚಿಂತನೆಯನ್ನು ಬೆಳೆಸಿ ಪ್ರಚೋದಿಸಿದ ಎಷ್ಟೋ ಚಿಂತಕರು ಈ ಬಗ್ಗೆ ಹೆಚ್ಚಿನ ಮಾಹಿತಿ ಹೊಂದಿರಲಿಲ್ಲ ಎಂದು ಟೀಕೆಯನ್ನು ಮಾಡಿದ್ದಾರೆ. ಅಲ್ಲದೆ ಉದಾರವಾದವು ರಾಜಕೀಯ ಚಿಂತನೆಯಾಗಿ ಒಂದೇ ದೃಷ್ಟಿಕೋನ ಹೊಂದಿರಲಿಲ್ಲ. ಹಾಗಾಗಿ ಇದಕ್ಕೆ ನಿಖರತೆ ಇರಲಿಲ್ಲ ಎಂಬ ಸಬೈನ್‌ರವರ ಮಾತುಗಳನ್ನು ಪುನರುಚ್ಚರಿಸಿದ್ದಾರೆ. ಮುಂದುವರೆದು ಬಹಳಷ್ಟು ಉದಾರವಾದಿ ವಿರೋಧಿಗಳೂ ಸಹ ಈ ಚಿಂತನೆ ಬಗ್ಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿ ಇದರ ಬೆಳವಣಿಗೆಗೆ ಕಾರಣರಾಗಿದ್ದಾರೆ ಎಂದು ತಿಳಿಸಿದ್ದಾರೆ. ಮೆಕೈವಲ್ಲಿ, ಕೆಲ್ವಿನ್, ಲೂಥರ್, ಕೋಪರ್ನಿಸ್, 8ನೇ ಹೆನ್ರಿ, ಥಾಮಸ್‌ಮೋಡ್, ಹಾಬ್ಸ್ ಹೀಗೆ ಹಲವಾರು ಚಿಂತಕರು ಪಾಶ್ಚಿಮಾತ್ಯ ಯುರೋಪಿನಲ್ಲಿ ಸಮಾಜದೊಂದಿಗೆ ತಮ್ಮ ವಿಶೇಷ ಪರಿಣಿತಿಯ ಕೊಡುಗೆಗಳನ್ನು ಉದಾರವಾದ ಬೆಳವಣಿಗೆಗೆ ನೀಡಿದ್ದಾರೆ ಎಂದಿದ್ದಾರೆ. ಸಮಾಜದಲ್ಲಿ ಬೆಳೆದ ಹೊಸ ವರ್ಗಗಳು ರಾಜಕೀಯ ಅಧಿಕಾರ ಹಿಡಿಯುವ ಸಲುವಾಗಿ ಕೆಲವು ತೀವ್ರತರದ ಹೊಂದಾಣಿಕೆ ಮಾಡಿಕೊಂಡು ಮಧ್ಯಮ ವರ್ಗವು ರಾಜ್ಯದ ಚುಕ್ಕಾಣಿ ಹಿಡಿಯುವಲ್ಲಿ ತಮ್ಮ ಬೆಂಬಲ ಸೂಚಿಸಿದ್ದಾರೆ. ಇದು ಉದಾರವಾದವು ಬೆಳೆದು ಬಂದ ಚಿಂತನಾ ಪರಿಕಲ್ಪನೆಯ ವರದಿಯನ್ನು ಮುರಿದು ಹೊರಬಂದ ಚಿಂತನೆಯಾಗಿದೆ. ಧಾರ್ಮಿಕ ಅಧ್ಯಯನ ನೀತಿ, ರಾಜಕೀಯ ವಿಜ್ಞಾನ ಎಂಬ ಸಮ್ಮಿಶ್ರ

ಚಿಂತನೆಗಳು ಒಟ್ಟುಗೂಡಿ ಉದಾರವಾದದ ಹೆಸರಲ್ಲಿ ಹೊಸ ಸಂಘಟನೆಗಳು ಅಸ್ತಿತ್ವಕ್ಕೆ ಬಂದವು.

ಈ ರೀತಿಯಾಗಿ ಮುರಿದು ಬಿದ್ದು ಮಧ್ಯಕಾಲೀನ ಸಮಾಜ ಸ್ಥಿತಿಗತಿಗಳು ಉದಾರವಾಗಿ ಬಂಡವಾಳಶಾಹಿತ್ವ ರಾಜ್ಯ ಸಿದ್ಧಾಂತದ ಉಗಮಕ್ಕೆ ಕಾರಣವಾಗಿದೆ. ಆದರೆ ಇದು ಶಾಂತಿ ಅಲ್ಲದೆ ಕ್ರಾಂತಿಯಿಂದ ಆಗಿತ್ತು, 1884ರ ಈ ಕ್ರಾಂತಿಯು ವ್ಯಕ್ತಿಗತವಾದ ಉದಾರವಾದಿ ಹೋರಾಟದ ಪ್ರಮುಖ ಹೆಜ್ಜೆಯಾಗಿತ್ತು. ಯಾವುದೇ ಸಂಪ್ರದಾಯವು ಈ ಹೋರಾಟಕ್ಕೆ ಸವಾಲಾಗಿ ನಿಲ್ಲಲು ಸಾಧ್ಯವಿರಲಿಲ್ಲ. ಆದರೆ ಈ ಉದಾರವಾದಿ ಋಣಾತ್ಮಕ ಚಟುವಟಿಕೆ ಅದರ ಘನಾತ್ಮಕ ಚಟುವಟಿಕೆಯಷ್ಟೆ ಪ್ರಚಲಿತವಾಗಿತ್ತು.

16ನೇ ಶತಮಾನದ ಉದಾರವಾದಿ ರಾಜ್ಯವು ತನ್ನ ಬೆಳವಣಿಗೆಯೊಂದಿಗೆ ರಾಜತ್ವಕ್ಕೆ ಬದ್ಧವಾಗಿದ್ದ. ವ್ಯಾಪಾರಿ ಮತ್ತು ಕೈಗಾರಿಕಾ ವರ್ಗಗಳನ್ನು ಸೇರಿಸಿಕೊಂಡಂತೆ ಧರ್ಮಾಧಿಕಾರಿಗಳಿಂದ ಹಾಗೂ ರಾಜತ್ವದಿಂದ ಹೊರಬಿದ್ದು ವ್ಯಾಪಾರಸ್ಥರಿಗೆ ಹೆಚ್ಚಿನ ಬೆಂಬಲವನ್ನು ನೀಡಿತು. ಮೆಕಿವೆಲ್ಲಿಯ ಚಿಂತನೆಯಲ್ಲಿ ಈ ಮಧ್ಯಮ ವರ್ಗದ ಆಶೆ ಆಕಾಂಕ್ಷೆಗಳಿಗೆ ನಿಲುವು ಸಿಕ್ಕಂತಾಯಿತು. ಈ ಧರ್ಮ ನಿರಪೇಕ್ಷ ಮೆಕಿವಲ್ಲಿ ಚಿಂತನೆಯನ್ನು ಮುಂದೆ ಉದಾರವಾದ ಚಿಂತನೆಗಳಲ್ಲಿ ಪ್ರಮುಖವೆನಿಸಿತು. ಆದರೂ ಧರ್ಮ ಇಂದಿಗೂ ರಾಜಕೀಯದಲ್ಲಿ ವಹಿಸಿದೆ ಎಂಬುದನ್ನು ಮರೆಯಲಾಗುವುದಿಲ್ಲ.

ಪುನರುತ್ಥಾನ ಸುಧಾರಣೆಯಿಂದ ಕೂಡ ಉದಾರವಾದವು ಪರೋಕ್ಷವಾಗಿ ಸಾಕಷ್ಟು ಬೆಂಬಲ ಪಡೆದಿದೆ.ಮಾರ್ಕ್ಸ್ ವೆಬ್ಬರ್ ಅವರ ಪ್ರಕಾರ ಕ್ರೈಸ್ತರ ಪ್ರೊಟೆಸ್ಟಂಟ್ ಚಿಂತನೆಗಳಿಂದ ಉದಾರವಾದಕ್ಕೆ ಅನೇಕ ಕೊಡುಗೆಗಳು ದೊರೆತಿವೆ ಎಂಬುದು ಮರೆಯುವಂತಿಲ್ಲ. ಆದರೆ ಉದಾರವಾದ ಮತ್ತು ಪ್ರೊಟೆಸ್ಟೆಂಟ್ ನಡುವಿನ ಸಂಬಂಧವು ಪ್ರಜ್ಞಾಪೂರಕವಾಗಿ ಬೆಳೆದ ಚಿಂತನೆಯಲ್ಲ ಎಂಬುದು ಮರೆಯುವಂತಿರಲಿಲ್ಲ. ಅಂತೆಯೇ ಕ್ಯಾಥೋಲಿಕ್ ಸಂಪ್ರದಾಯಗಳಲ್ಲಿ ಧಾರ್ಮಿಕವಾದ ಹಲವಾರು ಅಂಶಗಳು ಸಹ ಉದಾರವಾದವನ್ನು ಬೆಂಬಲಿಸುವ ಮತ್ತು ವಿರೋಧಿಸುವ ಅಂಶಗಳನ್ನು ಹೊಂದಿದೆ. ಮಾರ್ಕ್ಸ್‌ವಾದದ ಬೆಳವಣಿಗೆ ನಂತರ ಸಮಾಜ ಸುಧಾರಣ ಸಾಧಾರಣ ಎಲ್ಲ ಚಿಂತನ ಶಾಸ್ತ್ರಗಳಲ್ಲಿ ಕಂಡು ಬಂದಿದೆ. ಉದಾರವಾದವೂ ಸಹ ಈ ನಿಟ್ಟಿನಲ್ಲಿ ಮೊದಲಿಗೆ ಕ್ರಾಂತಿಕಾರಕ ರೂಪ ಪಡೆದುಕೊಂಡರೂ ಇದು ತನ್ನ ಚಿಂತನೆಗಳನ್ನು ಸಮಕಾಲೀನ ಧಾರ್ಮಿಕ ರಾಜಕೀಯ ಆರ್ಥಿಕ ಚಿಂತನೆಗಳೊಂದಿಗೆ ಸಮ್ಮಿಳನಗೊಳ್ಳದೆ ಬೆಳೆಸಿದುದು ಇದರ ಉತ್ತಮ ಕೊಡುಗೆಯಾಗಿದೆ. 13ನೇ ಶತಮಾನದಲ್ಲಿ ಇದು ಉತ್ತುಂಗದ ಮಟ್ಟದಲ್ಲಿದ್ದು, ಬಂಡವಾಳಶಾಹಿ ಮತ್ತು ಕೈಗಾರಿಕಾ ವರ್ಗ ಹಿಡಿತದಲ್ಲಿ ರಾಜ್ಯದ ಅಧಿಕಾರವನ್ನಿರಿಸಿತು. ಆರ್ಥಿಕ ತಳಹದಿಯನ್ನು ಹೊಂದಿದ ಈ ಉದಾರವಾದಿ ಚಿಂತನೆಯು ಶ್ರಮಿಕ ವರ್ಗದ ಬೆಂಬಲಕ್ಕೆ ಬಾರದ ಕಾರಣ ಇದು ಅವರ ದೀನ ಪರಿಸ್ಥಿತಿಗೆ ಕಾರಣವಾಯಿತು. ಮಾರ್ಕ್ಸ್‌ವಾದಕ್ಕೂ ಈ ನಿಟ್ಟಿನಲ್ಲಿ ಉದಾರವಾದವು ಸವಾಲಾಗಿ ನಿಂತಿತು. ಮಾರ್ಕ್ಸ್‌ನ ಕಾರ್ಮಿಕ ಕ್ರಾಂತಿ ಮತ್ತು ವರ್ಗರಹಿತ ಚಿಂತನೆಗಳನ್ನು ಸವಾಲಾಗಿ ತೆಗೆದುಕೊಂಡ ಉದಾರವಾದ ಚಿಂತನೆಯು 19ಮತ್ತು 20ನೇ ಶತಮಾನದಲ್ಲಿ ಕಾರ್ಮಿಕ ಕ್ರಾಂತಿ ತಪ್ಪಿಸಲು ಹಂತಹಂತವಾಗಿ ಉದಾರವಾದಿ ಚಿಂತನೆಯಲ್ಲಿ ಬದಲಾವಣೆ ತೆಗೆದುಕೊಂಡಿತು. 20ನೇ ಶತಮಾನದಲ್ಲಿ ಸಮಾಜದ ಬದಲಾವಣೆಯೇ ಪ್ರಮುಖವೆಂದು ಚರ್ಚಿಸಿದ ಉದಾರವಾದವು ಎಲ್ಲ ವರ್ಗಗಳ ನಡುವೆ ಸಮಾನವಾಗಿ ಕಾರ್ಯಕ್ಷಮತೆ ಹರಡಬೇಕು ಕಲಹಗಳು ವರ್ಗಗಳಲ್ಲಿ ನಡೆಯದಂತೆ ನೋಡಿಕೊಳ್ಳಬೇಕೆಂಬ ಸುಧಾರಣಾ ಹಾದಿಯನ್ನು ತನ್ನದಾಗಿಸಿಕೊಂಡಿತು. ಇದೇ ಕಾಲದಲ್ಲಿ ಉದಾರವಾದಿ ಸಮಾಜಶಾಸ್ತ್ರಜ್ಞರಾದ ಟಾಲ್‌ಕಾರ್ಟ್ ಪಾರ್ಸನ್, ಡರ್ಕನ್,ಇವರುಗಳು ಉದಾರವಾದಿ ಸಾಮಾಜಿಕ ನೀತಿಯ ಬಗ್ಗೆ ಚರ್ಚಿಸಿದರು. ಇವರ ಪ್ರಕಾರ ಸಮಾಜದಲ್ಲಿನ ಬದಲಾವಣೆಗಳು ಒಪ್ಪಿಗೆಯನ್ನು ಆಧರಿಸಿಕೊಂಡಿರಬೇಕು. ಇವು ಹೋರಾಟದ ಮುಖಾಂತರ ತೀರ್ಮಾನವಾಗಬಾರದು ಎಂದಿದ್ದಾರೆ. ಮುಂದುವರೆದು ವರ್ಗಗಳ ಕಲಹವನ್ನು ಒಪ್ಪಂದದ ಮೂಲಕ ತೀರ್ಮಾನಿಸುವುದೇ ಆದರೆ ಅಂತಹ ಸಮಾಜಗಳಲ್ಲಿ ರಾಜ್ಯವು ಪ್ರಮುಖ

ಪಾತ್ರವಹಿಸಬಹುದು ಎಂದಿದ್ದಾರೆ. ಹೀಗೆ ಉದಾರವಾದವು ಕ್ರಾಂತಿ ಮೂಲಕ ಬದಲಾವಣೆ ಬಯಸಿದ್ದ ಸಂದರ್ಭದಲ್ಲಿಯೂ ಇದು ಸುಧಾರಣಾ ಹಾದಿಯನ್ನು ಬಯಸುತ್ತದೆ ಎಂಬ ಭಾವನೆಯನ್ನು ಇವರು ವ್ಯಕ್ತಪಡಿಸಿದ್ದಾರೆ. ಹೀಗೆ ಸಾಮಾಜಿಕ ಬದಲಾವಣೆ ತರುವಲ್ಲಿ ಶಾಸಕಾಂಗ, ತೆರಿಗೆನೀತಿ, ಆದಾಯ ಹಂಚಿಕೆ, ಶ್ರೀಮಂತ ಮತ್ತು ಬಡವರ ವ್ಯತ್ಯಾಸಗಳನ್ನು ಕಡಿಮೆ ಮಾಡುವುದು ಎಂಬೆಲ್ಲ ಚಿಂತನೆಗಳನ್ನು ಈ ಉದಾರವಾದದ ಪುನರಾವಲೋಕನದಲ್ಲಿ ಕಾಣಬಹುದಾಗಿದೆ. ಕಾರ್ಲ್‌ಪಾಮರ್‌ರವರು ತಮ್ಮ ಪುಸ್ತಕವಾದ ತೆರೆದ ಸಮಾಜ ಮತ್ತು ಅದರ ಶತೃಗಳು ಎಂಬ ಪುಸ್ತಕದಲ್ಲಿ ಬಹಳಷ್ಟು ಸುಧಾರಣಾ ಮಾಧ್ಯಮದ ಬಗ್ಗೆ ಚರ್ಚಿಸಿದ್ದರೆ ಹೀಗೆ ಸಮಾಜ ಸುಧಾರಣೆಯು ಇವರ ಪ್ರಕಾರ ಹಂತಹಂತವಾಗಿಯೇ ಇರಬೇಕು ಇದರಿಂದ ತೆಗೆದುಕೊಂಡ ನಿರ್ಧಾರಗಳ ಒಳಿತು ಹಾಗೂ ಕೆಡಕುಗಳ ಅರಿವಾಗುತ್ತದೆ ಎಂದು ತಿಳಿಸಿದ್ದಾರೆ. ಆದರೆ ಇವರು ಕ್ರಾಂತಿಯ ಮುಖಾಂತರ ಸಮಾಜದ ಸುಧಾರಣೆಯಾಗುತ್ತದೆಂಬುದನ್ನು ಒಪ್ಪುವುದಿಲ್ಲ. ಹೀಗೆ ಮಾರ್ಕ್ಸ್‌ವಾದವನ್ನು ವಿರೋಧಿಸಿ, ಕ್ರಾಂತಿವಾದವನ್ನು ವಿರೋಧಿಸಿ ಈ ಕೆಳಕಂಡ ಕಾರಣಗಳನ್ನು ತಮ್ಮ ವಾದದಲ್ಲಿ ಉಚ್ಚರಿಸಿದ್ದಾರೆ.

1. ಸಮಾಜವನ್ನು ಒಮ್ಮಿಂದೊಮ್ಮೆಗೆ ಕ್ರಾಂತಿ ಮೂಲಕವಾಗಿ ಪುನರಚಿಸಲು ಸಾಧ್ಯವಿಲ್ಲ
2. ಯಾವುದೇ ಸಮಾಜವನ್ನು ಸಂಪೂರ್ಣವಾಗಿ ರಚಿಸುವುದರಿಂದ ಸಾಮಾಜಿಕ ಕೆಡಕುಗಳು ತೊಡೆಯುವುದು ಅಸಾಧ್ಯವೆಂದಿದ್ದಾರೆ.
3. ಕನಸು ಕಾಣುವ ಚಿಂತಕರು ಕಣ್ಣಿಗೆ ಕಾಣದ ಒಳಿತನ್ನು ಸಾಧಿಸುವಲ್ಲಿ ಅವರ ಮೂಗಿನ ಅಡಿಯಲ್ಲಿಯೇ ಇರುವ ಕೆಡಕುಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ ಎಂಬುದು ಇವರ ಮತ್ತೊಂದು ವಾದ.

ಹೀಗೆ ಮ್ಯಾಕ್ ಪರ್ಸನ್, ಗಾಲ್‌ಬ್ರೆತ್, ರೈಲ್‌ಮಿಲ್ಸ್ ಇವರುಗಳ ಈ ಚರ್ಚೆಗಳು ಸಮಾಜವನ್ನು ಸುಧಾರಿಸುವಲ್ಲಿ ಹಂತ ಹಂತವಾದ ಬದಲಾವಣೆಗಳು ಸರಿಯಾದ ಮಾರ್ಗವೆಂದು ಪ್ರತಿಪಾದಿಸಿರುವುದು ಕಂಡು ಬರುತ್ತದೆ.

## 10.4 ಉದಾರವಾದದ ಪುನರಾವಲೋಕನದ ಪ್ರಮುಖ ಚರ್ಚೆಗಳು

ಕಲ್ಯಾಣ ರಾಷ್ಟ್ರಗಳ ಮೂಲ ಚಿಂತನೆಯಾದ ಋಣಾತ್ಮಕ ಉದಾರವಾದವು ತನ್ನ ಕಾರ್ಯದಲ್ಲಿ ಹತ್ತಾರುಪಟ್ಟು ಶ್ರಮವನ್ನು ವಹಿಸಿ ಈರೀತಿ ಸುಧಾರಣೆಯಾಗುವ ಸಂದರ್ಭದಲ್ಲಿ ರಾಜ್ಯವು ಪರಿಪೂರ್ಣವಾದ ಮತ್ತು ಎಲ್ಲ ಸಂದರ್ಭದಲ್ಲಿ ಅವಶ್ಯಕವೆನಿಸುವ ಸ್ಥಾನಮಾನ ಪಡೆದುಕೊಂಡಿತು. ಸಂಪ್ರದಾಯವಾದ ಉದಾರವಾದವು 2ನೇ ಮಹಾಯುದ್ಧ ನಂತರದಲ್ಲಿ ಪ್ರಮುಖ ಕೊಡುಗೆ ನೀಡುತ್ತಾ ಕೆಲವು ಬದಲಾವಣೆ ಹಮ್ಮಿಕೊಂಡಿತು ಹೈಯರ್, ಕಾರ್ಲ್‌ಪಾಪರ್, ಆಲ್ಟೋ, ಮಿಲ್ಟನ್, ರಾಬರ್ಟ್‌ನಾಝಿರ, ಜಾನ್‌ರಾಲ್ಸ್, ವಿಸಯಾ ಬಗ್ಲಿನ್ ಇವರುಗಳು ಈ ಉದಾರವಾದ ಚಿಂತನೆಗೆ ಪ್ರಮುಖ ಕೊಡುಗೆಯನ್ನು ನೀಡಿದ್ದಾರೆ. ಹೈಯರ್‌ರವರು ತಮ್ಮ ಬರಹಗಳಲ್ಲಿ ಕಲ್ಯಾಣ ರಾಷ್ಟ್ರ ಸಮಾಜಪಾದ ಚಿಂತನೆಗಳು ಟೋಟಲಿಟೇರಿಯನ್ ಸರ್ಕಾರಗಳನ್ನು ಅಸ್ತಿತ್ವಕ್ಕೆ ತರುತ್ತದೆಯೆಂದು ಚರ್ಚಿಸಿದರು. ಹೈಯರ್‌ಕೂಡ ಮೊದಲಿನ ಉದಾರವಾದಿಗಳಂತೆ ರಾಜ್ಯವು ವ್ಯಕ್ತಿಗತ ಸ್ವಾತಂತ್ರ್ಯ ವಿರೋಧಿ ಎಂಬ ಚರ್ಚೆಯನ್ನು ಪ್ರತಿಪಾದಿಸಿದ್ದರು. ಕಾರ್ಲ್‌ಪಾಪರ್ ತಮ್ಮ ಬರಹಗಳಲ್ಲಿ ಪಾಶ್ಚಿಮಾತ್ಯ ಸಂಪ್ರದಾಯವೂ ಉದಾರವಾದಿ ಚಿಂತನೆಗೆ ವಿರೋಧಿ ಚಿಂತನೆಯಾಗಿತ್ತು ಎಂದು ಟೀಕಿಸಿದ್ದಾರೆ. ಬ್ರಿಟನ್ ಫ್ರಿಡ್‌ಮ್ಯಾನ್‌ರು ಸ್ಪರ್ಧಾತ್ಮಕ ಬಂಡವಾಲಶಾಹಿತ್ವವು ರಾಜಕೀಯ ಸ್ವತಂತ್ರ ಅಭಿವೃದ್ಧಿಪಡಿಸುತ್ತದೆ ಎಂಬ ಚರ್ಚೆಯ ಸ್ಪರ್ಧಾತ್ಮಕ ಚರ್ಚೆಯು ರಾಜಕೀಯ ಅಧಿಕಾರವನ್ನು ಆರ್ಥಿಕ ಅಧಿಕಾರದಿಂದ ವಿಭಿನ್ನಗೊಳಿಸುತ್ತದೆ ಎಂದಿದ್ದಾರೆ. ಹೀಗೆ ವ್ಯಕ್ತಿಗತವಾದ ಸಮಾಜಕ್ಕೆ ಹೆಚ್ಚಿನ ಸ್ವಾತಂತ್ರ್ಯಕ್ಕೆ ಪ್ರಾಮುಖ್ಯತೆ ನೀಡುತ್ತಾ ಮಿಲ್ ಮತ್ತಿತರ ಚಿಂತಕರು ಮಾನವ ತನ್ನ ಸಂಘ ಜೀವನದಲ್ಲಿ ಆರ್ಥಿಕ ಮತ್ತು ರಾಜಕೀಯ



VOP_FL_MA_Pol_Sci_C-8(1-7)_TF.20_F.No.58
58

ಸ್ವಾತಂತ್ರ್ಯದಿಂದ ಸಾಮಾಜಿಕ ಒಲಿತನ್ನೂ ತರುತ್ತಾರೆ ಎಂಬ ಚರ್ಚೆಯನ್ನು ಮಾಡಿದ್ದಾರೆ. 1970ರ ದಶಕದಲ್ಲಿ ರಾಲ್ಸ್ ಅವರ ಬರಹದಿಂದ ಉದಾರವಾದ ಚಿಂತನೆಗೆ ಮತ್ತಷ್ಟು ಪ್ರಖರತೆ ಬಂದಿತು. ರಾಜ್ಯಶಾಸ್ತ್ರಜ್ಞರು ಅರ್ಥಶಾಸ್ತ್ರಜ್ಞರು, ಕಾನೂನುಶಾಸ್ತ್ರಜ್ಞರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ರಾಲ್ಸ್‌ರು ತಮ್ಮ ಸಿದ್ಧಾಂತದಲ್ಲಿ ಸಮಾನತೆಗಿಂತ ಪ್ರಮುಖವಾಗಿ ಸ್ವಾತಂತ್ರ್ಯಕ್ಕೆ ಪ್ರಾಮುಖ್ಯತೆ ನೀಡಿದ್ದಾರೆ. ಆದರೆ ಇದರ ಟೀಕಾಕಾರರು ರಾಲ್ಸ್‌ರ ಬರಹಗಳನ್ನು 18ನೇ ಶತಮಾನದ ಚಿಂತನೆಗಳಿಗೆ ಹೋಲಿಸಿದ್ದಾರೆ. ರಾಬರ್ಟ್ ನಾಝಿಕ್‌ರು 1974ರಲ್ಲಿ ಬರೆದ 'ರಾಜ್ಯ ಮತ್ತು ಯುಟೋಪಿಯಾ' ಎಂಬ ಪುಸ್ತಕದಲ್ಲಿ ರಾಲ್ಸರಂತೆ ಸಮಾನತೆಗಿಂತ ಸ್ವಾತಂತ್ರ್ಯಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ಬಯಸಿದ್ದಾರೆ. ಇವರು ಸಹ ತಮ್ಮ ಚರ್ಚೆಗಳಲ್ಲಿ ಸಾಮಾಜಿಕ ನ್ಯಾಯದ ನಿಲುವನ್ನು ಪ್ರಶ್ನಿಸಿ ಆರ್ತಿಕ ಸಮಾನತೆ ಮತ್ತು ಆರ್ಥಿಕ ಪುನರ್ ಹಂಚಿಕೆ ಮಾತ್ರ ಸಮಾಜವನ್ನು ಪುನರ್ ಸಂಘಟಿಸಬಹುದು ಎಂಬ ಚರ್ಚೆಯನ್ನು ಒಪ್ಪುವುದಿಲ್ಲ. ಹೀಗಾಗಿ ಮಾನವರ ಕೇಂದ್ರೀಕೃತವಾದ ಮತ್ತು ವ್ಯಕ್ತಿ ಸ್ವಾತಂತ್ರ್ಯವನ್ನೇ ಕೇಂದ್ರಬಿಂದುವಾಗಿರಿಸಿಕೊಂಡ ಉದಾರವಾದಿ ಚರ್ಚೆಯು ಇಂದು ರಾಜ್ಯದ ನಿಯಮಿತ ಚಟುವಟಿಕೆಗಳಲ್ಲಿ ಗುರುತಿಸಬಹುದಾಗಿದೆ. ಮಾರ್ಗ್ರೆರ್ ಥ್ಯಾಚರ್, ರೋನಾಲ್ಡ್, ರೀಗನ್ ಹಾಗೂ ಇತರೇ ರಾಜ್ಯಶಾಸ್ತ್ರ ಚಿಂತಕರ ಮತ್ತು ರಾಜಕಾರಿಣಿಗಳ ಹಿನ್ನೆಲೆಯಲ್ಲಿ ವಿನೂತನ ಚರ್ಚೆಗಳಿಗೆ ಎಡೆಮಾಡಿಕೊಟ್ಟಿದೆ.

## ನಿಮ್ಮ ಪ್ರಗತಿ ಪರಿಶೀಲನೆ - 1

**ಸೂಚನೆ:** 1. ಈ ಕೆಳಗೆ ಬಿಟ್ಟಿರುವ ಜಾಗವನ್ನು ನಿಮ್ಮ ಉತ್ತರಕ್ಕೆ ಉಪಯೋಗಿಸಿಕೊಳ್ಳಿ.

2. ಈ ಘಟಕದ ಕೊನೆಯಲ್ಲಿ ನೀಡಿರುವ ಉತ್ತರದೊಂದಿಗೆ ನಿಮ್ಮ ಪ್ರಗತಿಯನ್ನು ಪರಿಶೀಲಿಸಿಕೊಳ್ಳಿ.

**1. ಉದಾರವಾದದ ಸಾಧನೆಗಳನ್ನು ಪಟ್ಟಿಮಾಡಿ.**

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

**2. ಉದಾರವಾದದ ಪುನರ್ ನವೀಕರಣದ ವಿಚಾರಗಳನ್ನು ವಿಮರ್ಶಿಸಿ.**

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

## 10.5 ಒಟ್ಟಾರೆ ಅಭಿಪ್ರಾಯ

ಹೀಗೆ ಉದಾರವಾದಿ ಚರ್ಚೆ ತನ್ನ ಪ್ರಾಥಮಿಕ ಹಂತದಿಂದ ಇಂದಿನವರೆಗೆ ಹಲವಾರು ವೈವಿಧ್ಯತೆಯಿಂದ ಕೂಡಿದ ಚರ್ಚೆಗಳಿಗೆ ಒಳಪಟ್ಟು ತಮ್ಮಲ್ಲಿ ಅಸಮತೋಲನವನ್ನು ಹಾಗೂ ತಮ್ಮ ಚಾರಿತ್ರಿಕವಾದ ಕಹಿ ಘಟನೆಗಳನ್ನು ತನ್ನಲ್ಲಿ

ಅರಗಿಸಿಕೊಂಡು ಈ ಮೂಲಕ ಬೆಳೆದ ಗಹನವಾದ ಚರ್ಚೆಗಳನ್ನು ತನ್ನದಾಗಿಸಿಕೊಂಡ ಪ್ರಮುಖ ರಾಜಕೀಯ ಚಿಂತನೆಗಳಲ್ಲಿ ಒಂದಾಗಿ ಇದರ ಪುನರಾವಲೋಕನ ಮತ್ತು ಪ್ರಬಂಧ ಮತ್ತು ಚರ್ಚೆಗಳು ವ್ಯಕ್ತಿ ಸ್ವಾತಂತ್ರ ಹಾಗೂ ರಾಜ್ಯದ ಚಟುವಟಿಕೆಗಳಿಗೆ ನಿರ್ಬಂಧನೆಗಳು ಸಂಪ್ರದಾಯವಾದಿ ಚಿಂತನೆಗಳು, ನ್ಯಾಯ ಸಿದ್ಧಾಂತ ಹಾಗೂ ಆರ್ಥಿಕ ಮರುಹಂಚಿಕೆ, ಸ್ವಾತಂತ್ರ್ಯ ಮತ್ತು ಸಮಾನತೆಯ ನಡುವಿನ ಸಂಬಂಧ ಮತ್ತು ಚರ್ಚೆಗಳು ಎಂಬೆಲ್ಲ ಗಹನವಾದ ಸಮಕಾಲೀನ ಚರ್ಚೆಗಳೊಂದಿಗೆ ಹೊಂದಿಕೊಂಡು ಇಂದಿನ ಸಮಾಜಕ್ಕೂ ನಿರ್ದೇಶನ ನೀಡುವ ಸ್ಥಾನದಲ್ಲಿದೆ ಹೀಗಾಗಿ ಇದೊಂದು ಪ್ರಮುಖ ಸಿದ್ಧಾಂತವೆನಿಸಿದೆ.

## 10.7 ಕೆಲವು ಉಪಯುಕ್ತ ಪುಸ್ತಕಗಳು

| | |
|---|---|
| ಎಫ್.ಡಬ್ಲ್ಯೂ ಕಾಕರ್ | ರೀಸೆಂಟ್ ಪೊಲಿಟಿಕಲ್ ಥಿಯರಿ |
| ಎಸ್.ಪಿ. ವರ್ಮಾ | ಮಾಡರ್ನ್ ಪೊಲಿಟಿಕಲ್ ಥಿಯರಿ |
| ಬಿ. ರಾಬರ್ಟ್ | ಥಿಯರೀಸ್ ಆಫ್ ಪೊಲಿಟಿಕಲ್ ಸಿಸ್ಟಮ್ಸ್ |
| ಡಾ. ಕೆ.ಜೆ. ಸುರೇಶ್ | ಆಧುನಿಕ ರಾಜಕೀಯ ಸಿದ್ಧಾಂತ |

## 10.6 ಕಠಿಣ ಪದಗಳು

| | |
|---|---|
| ಶ್ರಮಿಕವರ್ಗ | ದುಡಿಮೆಗಾರರು ಕಾರ್ಮಿಕ ವರ್ಗ |
| ಪ್ರೊಟೆಸ್ಟೆಂಟ್ | ಕ್ರಿಶ್ಚಿಯನ್ ಧರ್ಮದ ಒಂದು ವಿಭಾಗ |
| ಸಮ್ಮಿಳನ | ಒಗ್ಗೂಡಿಕೆ |
| ಟೋಟಲಿಟರೇನಿಯಮ್ | ಸಮಷ್ಟೀ ಸರ್ಕಾರ |

## 10.9 ನಿಮ್ಮ ಅಭಿವೃದ್ದಿಯನ್ನು ಗಮನಿಸಿಕೊಳ್ಳಿ

<u>ನಿಮ್ಮ ಪ್ರಗತಿ ಪರಿಶೀಲನೆ</u> - 1

1. ನೋಡಿ ವಿಭಾಗ 10.2
2. ನೋಡಿ ವಿಭಾಗ 10.3

## ಘಟಕ 11 ಉದಾರವಾದದ ಅವನತಿ

<u>ರಚನೆ</u>


11.1 ಉದ್ದೇಶ

11.2 ಪೀಠಿಕೆ

11.3 ಉದಾರವಾದದ : ಬೆಳವಣಿಗೆ ಹಾಗೂ ಅಭಿವೃದ್ಧಿ

11.4 ಉದಾರವಾದದ : ಮುಖ್ಯ ವಿಚಾರಗಳು

11.5 ಉದಾರವಾದದ ಅವನತಿ

11.6 ಉದಾರವಾದದ : ಮೌಲ್ಯಮಾಪನ

11.7 ಒಟ್ಟಾರೆ ಅಭಿಪ್ರಾಯ

11.8 ಕೆಲವು ಉಪಯುಕ್ತ ಗ್ರಂಥಗಳು

11.9 ಕಠಿಣ ಪದಗಳು

11.10 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು

## 11.1 ಉದ್ದೇಶ

ವಿದ್ಯಾರ್ಥಿಗಳೆ ಈ ಅಧ್ಯಯನದ ಉದ್ದೇಶ ನಿಮ್ಮೊಂದಿಗೆ ಉದಾರವಾದದ ಬೆಳವಣಿಗೆಯನ್ನು ಅದರ ಆಗುಹೋಗುಗಳನ್ನು ಹಂಚಿಕೊಳ್ಳುವುದಾಗಿದೆ. ಇದು ಚಾರಿತ್ರಿಕ ಹಿನ್ನೆಲೆಯನ್ನು ಹೊಂದಿದ್ದು, ಕಾಲಕಾಲದಲ್ಲಿ ತನ್ನ ಮುಖ್ಯ ವಿಚಾರ ಧಾರೆಯನ್ನು ಅಂದಿನ ಸಾಮಾಜಿಕ ಆರ್ಥಿಕ ವಿಷಯಗಳಿಗೆ ಹೊಂದಿಸಿಕೊಂಡು, ಸ್ಪಂದಿಸಿ, ತನ್ನತನವನ್ನು ಗುರುತಿಸಿಕೊಂಡು ಬೆಳೆದಿರುವ ಈ ಚಿಂತನೆಯು ಈ ಹಿಂದೆ ತಮಗೆ ತಿಳಿಸಿಕೊಟ್ಟಂತೆ ವಿವಿಧ ಹಂತಗಳಲ್ಲಿ ಅದರ ಬೆಳವಣಿಗೆಯನ್ನು ಈ ಭಾಗದಲ್ಲಿ ಗುರುತಿಸಲಾಗಿದೆ. ಅವನತಿ ಎಂಬ ಪದವನ್ನು ಈ ಸಂದರ್ಭದಲ್ಲಿ ಬಳಸಲಾಗಿದ್ದರೂ ಅದನ್ನು ಈ ಉದಾರವಾದದ ಅವನತಿ ಎಂದು ಬಳಸುವಲ್ಲಿ ಇದು ನಿಜಕ್ಕೂ ಸರಿಯೇ ಎಂಬ ಪ್ರಶ್ನೆ ಕಾಡುತ್ತದೆ. ತನ್ನ ಮೂಲ ಸ್ವರೂಪವನ್ನು ಕಳೆದುಕೊಂಡು ವಿವಿಧ ತೆರನಾದ ಸ್ವರೂಪಗಳನ್ನು ಹೊಂದಿದ್ದು, ಲೆಜೆಫೇರ್‌ನಿಂದ ಬಂಡವಾಳಶಾಹಿ, ಸಾಮ್ರಾಜ್ಯಶಾಹಿತ್ವದ ರೂಪಗಳನ್ನು ಹೊಂದಿರುವ ಈ ಚಿಂತನೆ ಇನ್ನೂ ಬೆಳೆಯುತ್ತಿರುವ ಹಿನ್ನೆಲೆಯಲ್ಲಿ ಈ ಚಿಂತನೆಯ ಅವನತಿಯೆಂಬುದು ಕೇವಲ ವಿದ್ಯಾರ್ಥಿಗಳಿಗೆ ಈ ಬಗ್ಗೆ ಚಿಂತನೆಗೆ ಅವಕಾಶ ಮಾಡಿಕೊಡುವುದಷ್ಟೇ ಈ ಅಧ್ಯಯನದ ಉದ್ದೇಶವಾಗಿದೆ. ಈ ಕಾರ್ಯವನ್ನು ಈ ಅಧ್ಯಾಯದಲ್ಲಿ ಚಾರಿತ್ರಿಕ ಹಿನ್ನೆಲೆಯಲ್ಲಿ ರಚಿಸಲಾಗಿದೆ.

## 11.2 ಪೀಠಿಕೆ

ಮಾನವನ ಹಾಗೇ ಸಮಾಜವು ಉದಾರವಾಗಿ ಆಲೋಚನೆಗಳನ್ನು ಎಲ್ಲ ಕಾಲದಲ್ಲಿಯೂ ಟೀಕಿಸಿರುವುದು ಕಂಡುಬರುತ್ತದೆ. ಇಂತಹಾ ಮನೋಭಾವನೆ, ಮಾನವನನ್ನು ಕುರಿತಾಗಿ 20ನೇ ಶತಮಾನದಲ್ಲಿಬದಲಾಗಿದ್ದರೂ, ಮಾನವನು ಇಂದಿಗೂ ಒಂಟಿ, ತನ್ನತನ, ಸ್ವಂತಿಕೆ, ಸ್ವಹಿತ, ಸಮಾಜದಿಂದ ದೂರವಿರುವ ಗುಣದಂತಹ ಕೆಲವು ದುರ್ಬುದ್ಧಿಯನ್ನು ಇನ್ನೂ ಹೊಂದಿದವನಾಗಿದ್ದಾನೆ. ಇಂತಹವರೇ ಸೇರಿರುವ ಒಂದು ವ್ಯವಸ್ಥೆಯೇ ಸಮಾಜವೆನಿಸಿರುವ ಸಂದರ್ಭದಲ್ಲಿ ಇಲ್ಲಿ ಯಾವುದೇ ತೆರನಾಗಿ ಜೈವಿಕ ಸಂಬಂಧಗಳಿಗೆ ಅವಕಾಶವಿಲ್ಲ. ರಾಜಕೀಯಕ್ಕೆ ಈ ಕಾರಣದಿಂದ ವ್ಯಕ್ತಿ ಹಾಗೂ ಸಮಾಜಗಳ ನಡುವಿನ ಘರ್ಷಣೆಯನ್ನು ಸಹಕಾರ ಭಾವನೆಗೆ ಪರಿವರ್ತಿಸುವ ಕೆಲಸವಿದೆ. ಇಲ್ಲಿ ಸಂಯಮ ಹಾಗೂ ಒಗ್ಗಟ್ಟಿಗೆ ಬೆಲೆಯಿದೆ. ಇದು ಈ ಸಮಾಜವನ್ನು ಮಾನವರೂಪದ ಪ್ರಾಣಿಗಳಂತೆ ಪರಿವರ್ತಿಸಿ ಸಮಾಜವನ್ನು ಕಾಡಿಗೆ ಹೋಲಿಸುವಂತೆ ಮಾಡಿದೆ. ಸಮಾಜವಾದವು ಇಂತಹಾ ಪರಿಕಲ್ಪನೆಯನ್ನು ಸಂಪೂರ್ಣವಾಗಿ ಅಲ್ಲಗಳೆದು, ಮಾನವನು ಪರಾವಲಂಬಿ, ಕೇವಲ ವಸ್ತುವಿಗಾಗಿ ಅಲ್ಲದೇ, ಮಾನವನು ತನ್ನ ಸಾಂಸ್ಕೃತಿಕ ಹಾಗೂ ದೈವದ ಕಾರಣಗಳಿಗಾಗಿ ಪರಾವಲಂಬಿಯಾಗಿದ್ದಾನೆ ಎಂದೂ ತಿಳಿಸಿದ್ದಾರೆ. ಇವರ ದೃಷ್ಟಿಯಲ್ಲಿ ಮಾನವನು, ಸಮಾಜಜೀವಿ, ಹೊಂದಾಣಿಕೆಉಳ್ಳವನು ಹಾಗೂ ಇವನ ಗುಣವನ್ನು ಅರ್ಥೈಸಿಕೊಳ್ಳಲು ಅವನನ್ನು ಅವನ ಸಮಾಜದ ಹಿನ್ನೆಲೆಯಲ್ಲಿಯೇ ಅಧ್ಯಯನಿಸಬೇಕೆಂದು ತಿಳಿಸಿದರು. ಇವರು ಮಾನವನ ಸ್ವಾರ್ಥತೆಯನ್ನು ತಪ್ಪುದಾರಿಯಲ್ಲಿರುವ ಮಾನವನ ಗುಣವೆಂದು ಪರಿಗಣಿಸಿದ್ದಾರೆ. ಇದನ್ನು ಓವನ್‌ರವರು ಅನೈತಿಕವೆಂತಲೂ ಬಾಕ್ಸ್ ಇದನ್ನೇ ನೈಸರ್ಗಿಕವಾದುದೆಂತಲೂ ಮಾರ್ಕ್ಸ್ ಇದು ಪ್ರಾಣಿಯ ಸ್ವಭಾವವೆಂತಲೂ ಮಾವೊ ಇದನ್ನು ವಿಧವೆಂತಲೂ ಕರೆದಿದ್ದಾರೆ. ಹೀಗಾಗಿ, ಉದಾರವಾದದಲ್ಲಿನ ಮಾನವನ ಗುಣಕ್ಕೂ ಸಮಾಜವಾದ ಗುರುತಿಸುವ ಮಾನವನ ಗುಣಕ್ಕೂ ಬಹಳಷ್ಟು ವ್ಯತ್ಯಾಸವಿದೆ. ಹೀಗೆ, ಉದಾರವಾದದಲ್ಲಿ ಸಮಾಜಿಕ ರಚನೆಯ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲ. ಆದರೆ ಇಲ್ಲಿ ವ್ಯಕ್ತಿಗಳೆಲ್ಲರೂ ಸಮಾಜದ ಒಳಿತಿಗಾಗಿ ಶ್ರಮಿಸುತ್ತಾರೆ ಎಂಬ ಭಾವನೆ ಇದೆ. ಆದರೆ, ಇದಕ್ಕೆ ಯಾವುದೇ ಚಾರಿತ್ರಿಕವಾದ ಹಿನ್ನೆಲೆಯ ಭಾವನೆಗಳಿಲ್ಲ.

## 11.3 ಉದಾರವಾದ : ಬೆಳವಣಿಗೆ ಹಾಗೂ ಅಭಿವೃದ್ಧಿ

ಪೀಟರ್ ಮರ್ಕೆಲ್‌ರವರ ಪ್ರಕಾರ, ಉದಾರವಾದವು ಸಾರ್ವಭೌಮತ್ವ ವಿರೋಧಿ ಚಿಂತನೆಯಾಗಿ ಬೆಳಕನ್ನು ಕಂಡಿದೆ ಎಂದಿದ್ದಾರೆ. ಇಂತಹಾ ಸಮಾಜದಲ್ಲಿ ಧರ್ಮವು ಹಾಗೂ ಧರ್ಮದ ಮೂಲಕ ಸಮಾಜದ ಚಟುವಟಿಕೆಯ ಮೇಲೆ ನಿಯಂತ್ರಣವೇಸಗುವ ವ್ಯವಸ್ಥೆ

ಇದ್ದು, ಅದು ಸರ್ವಾಧಿಕಾರಿ ಚಿಂತನೆಯಾಗಿದ್ದಿತ್ತು ಎಂದಿದ್ದಾರೆ. ಹೀಗಾಗಿ ಯುರೋಪಿನಲ್ಲಿ ಉದಾರವಾದವು ಒಂದು ವಿಚಿತ್ರ ಚಾರಿತ್ರಿಕ ಹಿನ್ನೆಲೆಯಲ್ಲಿ ಬೆಳಕನ್ನು ಕಂಡಿತು ಎಂದು ವಿವರಣೆ ನೀಡಿದ್ದಾರೆ. ಪುನರೋಥ್ಥಾನದ ಹಾಗೂ ಸುಧಾರಣೆಯ ಹಿನ್ನೆಲೆಯಲ್ಲಿ ವೈಜ್ಞಾನಿಕ ಕ್ರಾಂತಿಯ ಬೆಳಕಿನಲ್ಲಿ ಅಂದಿನ ರಾಜಕೀಯ ಹಾಗೂ ಆರ್ಥಿಕ ತಳಹದಿಯಲ್ಲಿ, ಕೈಗಾರಿಕಾ ಕ್ರಾಂತಿಯ ಹಿನ್ನೆಲೆಯಲ್ಲಿ ಉದಾರವಾದವು ಬೆಳಕನ್ನು ಕಂಡಿತು.

ಪುನರೋತ್ಥಾನ ಕಾಲವು ಯುರೋಪಿನ ಚರಿತ್ರೆಯಲ್ಲಿ ಅಲ್ಲಿನ ಸಂಸ್ಕೃತಿಯನ್ನು ಜಾಗೃತಿಗೊಳಿಸಿ, ಸಾಂಪ್ರದಾಯಿಕ ಮಾಜರಿ ಚಿಂತನೆಗಳ ಬೆಳಕಿಗೆ ಸಹಾಯಕಾರಿಯಾಗಿತ್ತು. 14ನೇ ಶತಮಾನದಲ್ಲಿ ಇಟಲಿಯಲ್ಲಿ ಪ್ರಾರಂಭವಾದ ಈ ಪುನರೋತ್ಥಾನವು, ಫ್ರಾನ್ಸ್, ಜರ್ಮನಿ, ಸ್ಪೇಯಿನ್ ಹಾಗೂ ಉತ್ತರ ಯುರೋಪಿನ ಕಡೆಗೂ ವಿವಿಧ ರೀತಿಯಲ್ಲಿ ಹರಿದು, ಮಾನವನು ಮೂಲಭೂತವಾಗಿ ಜೀವನವನ್ನು ನೋಡುವ ಶೈಲಿಯನ್ನೇ ಸಂಪೂರ್ಣವಾಗಿ ಬದಲಿಸಿ ಅದನ್ನು ತಾತ್ವಿಕ, ವೈಜ್ಞಾನಿಕ, ಆರ್ಥಿಕ, ತಾಂತ್ರಿಕ ರೀತಿಯಲ್ಲಿಯೂ ನೋಡುವಂತಾಗಿಸಿತು. ಕಾನ್‌ಸ್ಟೆಂಟಿನೋಪಲ್ ಶಿಥಿಲತೆಯಿಂದ ಪ್ರಾರಂಭವಾಗಿ ಮುದ್ರಣ ತಂತ್ರಜ್ಞಾನ, ಅಮೆರಿಕಾ ಖಂಡದ ಪತ್ತೆ ಹೀಗೆ ಹಲವಾರು ಚಾರಿತ್ರಿಕಾಂಶಗಳು ಸಹ ಈ ಪುನರೋತ್ಥಾನದೊಂದಿಗೆ ಸೇರಿ ಬೆಳೆದವು. ಈ ಕಾರಣಗಳಿಂಗ ಹೊಸ ಆಲೋಚನೆ, ಚಿಂತನೆಗಳಿಗೆ ಹೆಚ್ಚು ಪ್ರಚೋದನೆ ದೊರಕಿ, ಮಧ್ಯಕಾಲೀನ ಯುರೋಪ್, ಇಂತಹಾ ಚಿಂತನೆಗಳಿಗೆ ಕೇಂದ್ರವಾಗಿ ಬೆಳೆಯಿತು. ಆದರೆ, ಈ ಚಿಂತನೆಗಳಿಗೆಲ್ಲಾ ಮೂಲವಾಗಿದ್ದು ಆ ಕಾಲದಲ್ಲಿ ಬೆಳೆದ ಹೊಸ ವ್ಯಾಪಾರಿ ವರ್ಗ. ಈ ವರ್ಗವು ತನ್ನ ಆರ್ಥಿಕಾಂಶ ಆಧಾರಿತವಾದ ದೃಷ್ಟಿಕೋನದಿಂದಾಗಿ ವ್ಯಕ್ತಿಗತವಾದ ಹಾಗೂ ಮಾನವತಾವಾದಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಿದವು. ರಾಜತ್ವವನ್ನು ಬದಿಗೊತ್ತಿ, ಧರ್ಮ ಸಂಸ್ಥಾಪಕರನ್ನು ಧಾರ್ಮಿಕ ಅಂಶಗಳಿಗೆ ಮೀಸಲಾಗಿಸಿ ಮುಂದೆ, ಭೌದ್ಧಿಕ ಚಟುವಟಿಕೆಗಳನ್ನು ಪ್ರಚೋದಿಸಿ, ಪ್ರೇರೇಪಿಸಿ, ಅದಕ್ಕೇ ಅನುಕೂಲಕರ ವಾತಾವರಣ ಸೃಷ್ಟಿಸಿ, ಸಹಾಯ ಮಾಡಿದ ಹೊಸ ವರ್ಗವೇ ಈ ವ್ಯಾಪಾರಿ ವರ್ಗವಾಗಿತ್ತು. ಹೀಗೆ ಸ್ವತಂತ್ರದಲ್ಲಿ ನಂಬಿಕೆಯಿಟ್ಟು, ವ್ಯಕ್ತಿಯನ್ನು ಯಾವುದೇ ಕಟ್ಟಲೆಯಲ್ಲಿ ಸಿಲುಕದಂತೆ ಕಾಪಾಡಿದ ಕಾರಣ ಅವನ ಚಿಂತನೆಗಳಿಗೆ ಹೊಸ ಆಯಾಮ ದೊರಕಿದ್ದು ಈ ಕಾಲದಲ್ಲಿಯೇ. ಧರ್ಮದ ಹಿಡಿತದಿಂದ ಪಾರಾದ ಎಲ್ಲರೂ ತಮ್ಮ ಕ್ರಿಯಾಶೀಲತೆಯನ್ನು ಸ್ವತಂತ್ರವಾಗಿ ವ್ಯಕ್ತಪಡಿಸಲು ಇದು ಅವಕಾಶ ಮಾಡಿಕೊಟ್ಟಿತು. ಹೀಗೆ ಪುನರೋಥ್ಥಾನವು ಭೂಮಿಯ ಮೇಲೆ ಹೊಸ ಜೀವನ ನಡೆಸಲು ಸಹಾಯಕಾರಿಯಾಯಿತು.

16ನೇ ಶತಮಾನದ ಸುಧಾರಣೆಯು ಯುರೋಪಿನಲ್ಲಿ ಧಾರ್ಮಿಕ ಚಳುವಳಿಯ ಹೋರಾಟವಾಗಿದ್ದು, ಪ್ರಾಟೆಸ್ಟೆಂಟ್ ಬೆಳವಣಿಗೆಗೆ ಕಾರಣವಾಯಿತು. ಇದೇ ಚಳುವಳಿಯು ಜರ್ಮನಿ ಮತ್ತು ಸ್ವಿಟ್ಜರ್ಲೆಂಡಿಗಳಲ್ಲಿ, ಇಂಗ್ಲೆಂಡ್, ಸ್ಕಾಟ್ಲೆಂಡ್‌ಗಳಲ್ಲಿ, ಸ್ಕಾಂಡಿನೇವಿಯಾ ರಾಷ್ಟ್ರಗಳಲ್ಲಿ ಹರಡಿ ಬೈಬಲ್ ಅಧ್ಯಯನದಲ್ಲಿ ಖಾಸಗೀ ಚಿಂತನೆಗೆ ಅವಕಾಶ ಮಾಡಿಕೊಟ್ಟಿತು. ಇದೂ ಸಹ ವ್ಯಕ್ತಿಗತವಾಗಿ ಚಿಂತನೆ ಬೆಳೆಯಲು ಸಹಾಯಕಾರಿಯಾಯಿತು. ಕ್ಯಾಥೋಲಿಕ್ ಚರ್ಚ್‌ಗಲ ಪ್ರಭುದ್ಧತೆಯನ್ನು ಪ್ರಶ್ನಿಸಿ, ಪ್ರಾಟೆಸ್ಟೆಂಟರು ವ್ಯಕ್ತಿ ಹಾಗೂ ದೇವರ ನಡುವೆ ಮಧ್ಯವರ್ತಿ ಅವಶ್ಯಕತೆ ಇಲ್ಲವೆಂದು ಚರ್ಚಿಸಿದರು. ಇದು ಮನುಷ್ಯನ ವೈಚಾರಿಕೆಯಿಂದ ಆದ ಬೆಳವಣಿಗೆಯಾಗಿದ್ದು ಸತ್ಯವನ್ನು ಸ್ವತಂತ್ರವಾಗಿ ಕಂಡುಕೊಳ್ಳಬಹುದೆಂದು ಇಲ್ಲಿ ಪ್ರಸ್ತಾವನೆ ಮಾಡಲಾಯಿತು. ಇದೇ ಮುಂದೆ ಉದಾರವಾದದ ಚಿಂತನೆಯಾಗಿ ಬೆಳೆಯಿತು.

16-17ನೇ ಶತಮಾನದ ಕೈಗಾರಿಕಾ ಕ್ರಾಂತಿಯು ವಿಶ್ವದಲ್ಲಿ ಪ್ರಚಲಿತವಿದ್ದ ಹಾಗೂ ದಾರ್ಮಿಕವಾಗಿ ವ್ಯವಹರಿಸಲ್ಪಡುತ್ತಿದ್ದ ಚಿಂತನೆಗಳಿಗೆ ವೈಜ್ಞಾನಿಕ ತಳಹದಿಯನ್ನು ನೀಡುವುದರ ಮೂಲಕ ಹೊಸ ಸತ್ಯದ ಅರಿವನ್ನು ಮೂಡಿಸಿದವು. ಇದೂ ಸಹ ಉದಾರವಾದದ ಬೆಳವಣಿಗೆಯಲ್ಲಿ ಮತ್ತೊಂದು ಮುಖ್ಯ ಹಂತವಾಗಿದೆ.

18ನೇ ಶತಮಾನದಲ್ಲಿ ಭೌದ್ಧಿಕ ಕ್ರಾಂತಿಯಾಗಿ ವೈಚಾರಿಕತೆಕಾಲ ಪ್ರಾರಂಭವಾಯಿತು. ಇದು ಪಾಶ್ಚಿಮಾತ್ಯ ಪ್ರಪಂಚವನ್ನು ಆವರಿಸಿದ್ದು, ಈ ಕಾಲದಲ್ಲಿ ಹೆಸರಾಂತ ಚಿಂತಕರಾದ ವಾಲ್ಟೇರ್, ರೂಸೂ, ಡಿಡ್ಡೆರಾಟ್, ಮಾಂಟೆಸ್ಕ್ಯೂ, ಫ್ರಾನ್ಸ್‌ನಿಂದಲೂ ಲಾಕ್,

ಹ್ಯೂಂ, ಆಡಂಸ್ಮಿತ್ ಚಿಂತಕರು ಬ್ರಿಟನ್ನಿನಿಂದಲೂ, ಗೋಥೆ ಮತ್ತು ಕಾಂಟ್ ಜರ್ಮನಿಯಲ್ಲೂ ವಿಕೋ ಮತ್ತು ಬೆಕಾರಿಯೋ ಇಟಲಿಯಿಂದಲೂ, ಜಫರ್‌ಸನ್ ಫ್ರಾಂಕ್ಲಿನ್, ಪೇಯಿನ್ ಅಮೇರಿಕಾದಲ್ಲೂ ಬದಲಾವಣೆಗೆ ಅವಶ್ಯಕವಾ ಮೂಲಭೂತ ಚಿಂತನೆಗಳನ್ನು ಆ ಕಾಲದಲ್ಲಿ ಪ್ರತಿಪಾದಿಸಿದರು. ಈ ಚಿಂತಕರು ವೈಚಾರಿಕತೆಯು ಸತ್ಯವನ್ನು ಗುರುತಿಸುವಲ್ಲಿ ಅತ್ಯಂತ ಉತ್ತಮ ಸಾಧನ ಎಂದು ಹೇಳಿಕೆ ನೀಡಿ, ಜೀವನದಲ್ಲಿ ಎಲ್ಲಾ ಕಾಲದಲ್ಲೂ ಸತ್ಯವನ್ನು ಹುಡುಕಲು ವೈಚಾರಿಕತೆಯ ಅವಶ್ಯಕತೆ ಇದೆ ಎಂದರು. ಇವರು ತಮ್ಮ ಬರಹದಲ್ಲಿ ಸಾಮಾಜಿಕ ಮತ್ತು ರಾಜಕೀಯ ಸಮಸ್ಯೆಗಳನ್ನು ವೈಜ್ಞಾನಿಕವಾಗಿ ಗುರುತಿಸಿಕೊಂಡು ವಿಶ್ವವ್ಯಾಪಿಯಾದ ಸಿದ್ಧಾಂತಗಳನ್ನು ರಚಿಸಿ, ಸಿದ್ಧಾಂತಗಳ ತಳಹದಿಯಲ್ಲಿ ಸಮಸ್ಯೆಗಳಿಗೆ ಉತ್ತರ ದೊರಕಿಸಿಕೊಳ್ಳಬೇಕು ಎಂದಿದ್ದಾರೆ. ಈ ಎಲ್ಲಾ ಚಿಂತನೆಗಳು ಉದಾರವಾದಿ ಆಲೋಚನೆಯ ತಳಹದಿಯಾಗಿ ಬೆಳೆಯತೊಡಗಿದವು.

ಕೈಗಾರಿಕಾ ಕ್ರಾಂತಿ ಒಂದು ಸ್ವಾಭಾವಿಕ ಕ್ರಾಂತಿಯಾಗಿದ್ದು ಆರ್ಥಿಕತೆಗೆ ವೈಜ್ಞಾನಿಕ ತಳಹದಿಯನ್ನು ಇದು ನೀಡಿದೆ. ಹೊಸ ಯಂತ್ರಗಳ ಸೃಷ್ಟಿ ವ್ಯವಸಾಯ ಮತ್ತು ಕೈಗಾರಿಕೆಯ ಉತ್ಪದನಾ ಮೂಲದಲ್ಲಿ ಬದಲಾವಣೆಗೆ ಎಡೆ ಮಾಡಿಕೊಟ್ಟಿದ್ದು ಇದು ವ್ಯವಸಾಯದ ಬದಲು ಕೈಗಾರಿಕೆಯ ಆಧಾರದ ಮೇಲೆ ಹೊಸ ಆರ್ಥಿಕ ನೀತಿಯನ್ನು ರೂಪಿಸಿತು. ಕೈಗಾರಿಕಾ ಉತ್ಪಾದನೆಯು ಹೆಚ್ಚಿನ ಶ್ರೀಮಂತಿಕೆಯನ್ನು, ಸೃಷ್ಟಿಸುವುದಲ್ಲಿ ಕಾರಣವಾಗಿದ್ದು, ಭೂಮಾಲೀಕರ ಬದಲಿಗೆ ಬಂಡವಾಳಶಾಹಿಗಳನ್ನು ಸೃಷ್ಟಿಸಿತು. ಹೀಗೆ ಊಳಿಗ ಮಾನ್ಯ ಪದ್ಧತಿಯಿಂದ ಬಂಡವಾಳಶಾಹಿ ಕಡೆಗೆ ಮಧ್ಯಕಾಲದಲ್ಲಿ ಬದಲಾವಣೆಗಳು ಕಂಡು ಬಂದವು.

ಉತ್ಪಾದನಾ ಮೂಲದಲ್ಲಿ ಆದ ಈ ಬದಲಾವಣೆಗಳಿಗೆ ಹೊಸ ಆಲೋಚನೆಗಳು, ಶ್ರೀಮಂತಿಕೆಯನ್ನು ಸೃಷ್ಟಿಸುವ ಜ್ಞಾನಾಧಾರಿತ ಆಯಾಮಗಳಾದವು. ಕೈಗಾರಿಕೆಗಳು ಹೊಸ ಹೊಸ ವಸ್ತುಗಳನ್ನು ಉತ್ಪಾದಿಸಿ, ಮಾರುಕಟ್ಟೆಗಳನ್ನು ಸೃಷ್ಟಿಸಿ, ಹಂಚಿಕೆಯನ್ನು ಮಾಡಿ, ವ್ಯಾಪಾರ ವಹಿವಾಟುಗಳಿಗೆ ಹೊಸ ಆಯಾಮಗಳನ್ನು ನೀಡಿತು. ಈ ಎಲ್ಲಾ ಸಂದರ್ಭಗಳಲ್ಲೂ ಹೊಸ ಆಲೋಚನೆಗಳಿಗೆ ಹೆಚ್ಚಿನ ವರ್ಧನೆ ದೊರಕಿ, ಬಂಡವಾಳವನ್ನು ಒಂದಕ್ಕೆ ಎರಡರಷ್ಟನ್ನು ಸೃಷ್ಟಿಸುವ ಬೆಲೆ ದೊರಕಿ ವ್ಯಾಪಾರಿ ವರ್ಗಗಳು ಆರ್ಥಿಕ ಸಾಮರ್ಥ್ಯವನ್ನು ಪಡೆದು ಹೆಚ್ಚಿನ ರಾಜಕೀಯ ಅಧಿಕಾರಕ್ಕೆ ಒಲವನ್ನು ತೋರಿದವು. ಹೆರಾಲ್ಡ್ ಜೆ ಲಾಸ್ಕಿಯವರು ಈ ಕುರಿತು ಹಲವಾರು ನಿವರಣೆಗಳನ್ನು ನೀಡಿ, ಉದಾರವಾದಿ ಚಿಂತನೆಗಳನ್ನು ಆರ್ಥಿಕ ಅಧಿಕಾರದ ಮೂಲಕ ವಿವರಿಸಬಹುದೆಂದು ಅಭಿಪ್ರಾಯ ಪಟ್ಟಿದ್ದಾರೆ. ಹೀಗೆ ಭೂ ಒಡೆತನದಲ್ಲಿ ಆದ ಬದಲಾವಣೆ ವ್ಯಾಪಾರಿ ವರ್ಗದ ಸೃಷ್ಟಿ ರಾಜ್ಯದ ಅಧಿಕಾರದಲ್ಲಿನ ಹೆಚ್ಚಿನ ಬೇಡಿಕೆ ಇವು ಎಲ್ಲವೂ ಮಾನವನ ಉತ್ತಮ ಜೀವನದ ಸಾಕಾರಕ್ಕಾಗಿ ಎಂಬ ಕಾರಣದಿಂದ ಉದಾರವಾದವು ತನ್ನ ಬೆಳವಣಿಗೆಯಲ್ಲಿ ಹೆಚ್ಚಿನ ವರ್ಗಗಳನ್ನು ತನ್ನೊಂದಿಗೆ ಸೇರಿಸಿಕೊಂಡಿತು. ಹೀಗೆ ಒಂದು ಮಧ್ಯಮ ಹಾಗೂ ವ್ಯಾಪಾರಿ ಸಮುದಾಯಗಳ ಸಿದ್ಧಾಂತವಾಗಿ ಉದಾರವಾದವು, ಯುರೋಪಿನ ಪುನಃ ರುತ್ಥಾನ ಹಾಗೂ ಸುಧಾರಣ ಕಾಲದಲ್ಲಿ ಬೆಳೆದು ಒಂದು ಜೀವನದ ಶೈಲಿಯಾಗಿ ಅಂದಿನ ರಾಜಕೀಯ, ಆರ್ಥಿಕ, ಸಾಮಾಜಿಕ ಆಕಾಂಕ್ಷೆಗಳ ಪ್ರತಿಬಿಂಬವಾಗಿ ಕೈಗಾರಿಕಾ ಕ್ರಾಂತಿಗೆ ಹಾಗೂ ಬಂಡವಾಳ ಶಾಹಿಯ ಉಗಮಕ್ಕೆ ಕಾರಣವಾಯಿತು.

ವ್ಯಕ್ತಿ ಸ್ವಾತಂತ್ರ್ಯ ಹಾಗೂ ಸರ್ವಾಧಿಕಾರಿ ವಿರೋಧಿ ಚಿಂತನೆಯಾಗಿ ಉದಾರವಾದವು ರಾಜ್ಯ, ವ್ಯಕ್ತಿ ನಡುವಿನ ಸಂಬಂಧವನ್ನು ಪುನರುಚ್ಚರಿಸಿತು. ಹೀಗೆ ಉದಾರವಾದಿ ಸಿದ್ಧಾಂತವು ಕಾಲದ ಚಾರಿತ್ರಿಕ ಘಟನೆಗಳೊಂದಿಗೆ ಸ್ಪಂದಿಸಿ, ರಾಜವನ್ನು ಕುರಿತಾದ ಅಸ್ತಿತ್ವದಲ್ಲಿದ್ದ ಸಿದ್ಧಾಂತಗಳನ್ನು ತಿರಸ್ಕರಿಸಿ, ತನ್ನದೆ ಆದ ಸಿದ್ಧಾಂತಗಳನ್ನು ರಚಿಸಿತು.

## 11.4 ಉದಾರವಾದ : ಮುಖ್ಯ ವಿಚಾರಗಳು

ಉದಾರವಾದವು ಒಂದು ಪ್ರಮುಖ ಚಿಂತನೆಯಾಗಿ ಪೂರ್ವ ಯುರೋಪಿನಲ್ಲಿ ಬೆಳೆದು ಅಮೇರಿಕಾ ಸೇರಿದಂತೆ ಎಲ್ಲ ರಾಷ್ಟ್ರಗಳಲ್ಲಿಯೂ ಪಸರಿಸಿ ಇಂಗ್ಲೆಂಡ್‌ನಲ್ಲಿ ಮೂಲಭೂತವಾಗಿ ಬೆಳೆಯಿತು. ಹಾಲೆಂಡ್ ಹಾಗೂ ಸ್ಪೇಯಿನ್‌ನಲ್ಲಿ ಪ್ರಮುಖವಾಗಿ

ಇದು ಬೆಳೆದು ಜರ್ಮನಿಯೂ ಸೇರಿದಂತೆ ಈ ರಾಷ್ಟ್ರಗಳಲ್ಲಿ ಇದೊಂದು ಬೌದ್ಧಿಕ ಚಿಂತನೆಯಾಗಿ ಹರಡಿತು. ಫ್ರಾನ್ಸ್‌ನಲ್ಲಿ ಉದಾರವಾದವು ಇಂಗ್ಲೆಂಡ್‌ಗಿಂತಾ ಹೆಚ್ಚಾಗಿ ಪ್ರಚಾರದಲ್ಲಿದ್ದು, ಒಂದು ವರ್ಗದ ಸಾಮಾಜಿಕ ಸಿದ್ಧಾಂತವಾಗಿ ಇದು ಶ್ರೀಮಂತ ವರ್ಗದ ಒಂದು ಪ್ರತಿಬಿಂಬವಾಗಿತ್ತು. ಹೀಗಾಗಿ ಇದನ್ನು ಒಂದು ಸಾಮಾಜಿಕ ಸಿದ್ಧಾಂತವಾಗಿ ಪರಿಗಣನೆಗೆ ತೆಗೆದುಕೊಳ್ಳಲಾಗಲಿಲ್ಲ. ರಾಜಕೀಯ ಉದಾರವಾದವು ಈ ಹಂತದಲ್ಲಿ, ಶ್ರಮಿಕ ವರ್ಗದ ಶೋಷಿತರ ವಿರುದ್ಧದ ದನಿಯಾಗಿ, ಬೆಳೆದು ಸಮಾಜವಾದದ ಮುಖವನ್ನು ಹೊಂದಿ, ಮಾರ್ಕ್ಸ್‌ವಾದದ ವರ್ಗಚಳುವಳಿಯ ಸ್ವರೂಪವನ್ನು ಹೊಂದಿತ್ತು. ಕೇವಲಾ ಬ್ರಿಟನ್‌ನಲ್ಲಿ ಮಾತ್ರ ಈ ಸಿದ್ಧಾಂತವು ರಾಷ್ಟ್ರೀಯ ನೀತಿ ಹಾಗೂ ತತ್ವವಾಗಿ ಆಚರಣೆಯಲ್ಲಿದ್ದು 19ನೇ ಶತಮಾನದ ಔದ್ಯೋಗಿಕರಣಗೊಂಡ ಸಮಾಜದಲ್ಲಿ ತನ್ನ ಅರ್ಥದ ಪೂರ್ಣಕಲ್ಪನೆಯನ್ನು ಕಂಡುಕೊಂಡಿತು. ಇದೇ ಸಂದರ್ಭದಲ್ಲಿ ಔದ್ಯೋಗೀಕರಣದ ಹಾಗೂ ಕೈಗಾರಿಕೆಗಳಿಗೆ ಸಂಪೂರ್ಣ ಸ್ವಾತಂತ್ರ ದೊರಕಿ ಮಧ್ಯಮ ಹಾಗೂ ಶ್ರಮಿಕ ವರ್ಗಕ್ಕೆ ಸಂಪೂರ್ಣ ಬೆಂಬಲ ಧೊರಕಿತು. ಅದರಲ್ಲೂ ಕೈಗಾರಿಕೆಯಲ್ಲಿ ದುಡಿಮೆ ಮಾಡುತ್ತಿದ್ದ ಜನರಿಗೆ ಸರಿಯಾದ ಸ್ಥಿತಿಗತಿಗಳನ್ನು ಒದಗಿಸಿಕೊಡುವಲ್ಲಿ ಈ ಉದಾರವಾದವು ಸಾಕಷ್ಟು ಶ್ರಮವಹಿಸಿತ್ತು. ಇಂತಹಾ ಉದಾರವಾದದ ಸರಿಯಾದ ಅಧ್ಯಯನವನ್ನು ಮಾಡುವಲ್ಲಿ ಅದನ್ನು ಋಣಾತ್ಮಕ ಹಾಗೂ ಘನಾತ್ಮಕ ಉದಾರವಾದವೆಂದು ವಿಂಗಡಿಸಿ ಅಧ್ಯಯನ ಮಾಡುವುದು ಸಂದರ್ಭಚಿತವಾದದ್ದು. ಮೊದಲಿಗೆ ಇಂತಹಾ ವಾದವು ಕೇವಲಾ ಬಂಡವಾಳಶಾಹಿ ಚಿಂತನೆಯಾಗಿ ಬೆಳೆದು ತದ ನಂತರದಲ್ಲಿ ಇದು ಇಡೀ ಸಮುದಾಯದ ಕಲ್ಯಾಣಸಾಧನೆಗಾಗಿ ಇರುವ ಚಿಂತನೆಯಾಗಿ ಪರಿಣಮಿಸಿತು. ಈ ಕಾರಣದಿಂದ ಎಲ್ಲಾ ವರ್ಗಗಳ ಹಿತಾಸಕ್ತಿಯನ್ನು ಸಹಾ ಇದು ಕಾಪಾಡುವ ಒಂದು ಚಿಂತನೆಯಾಗಿ ಬೆಳೆಯಿತು. ಘನಾತ್ಮಕ ಉದಾರವಾದ-ಕ್ರಾಂತಿಯ ಹಿನ್ನೆಲೆಯಲ್ಲಿ ಬೆಳೆದರೆ ಋಣಾತ್ಮಕ ಉದಾರವಾದವು ಊಳಿಗಮಾನ ಹಾಗೂ ಸರ್ವಾಧಿಕಾರಿ ರಾಜ ವ್ಯವಸ್ಥೆಯಡಿಯಲ್ಲಿ ಬೆಳಕಿಗೆ ಬಂದದ್ದು ಎಂಬುದನ್ನು ಈ ಸಂದರ್ಭದಲ್ಲಿ ಮರೆಯುವಂತಿಲ್ಲಾ. ಹೀಗೆ ಉದಾರವಾದವು ಚರಿತ್ರೆಯ ಹಿನ್ನೆಲೆಯಲ್ಲಿನ ಸಮಗ್ರ ಅಂಶಗಳನ್ನು ತನ್ನೊಂದಿಗೆ ಸೇರಿಸಿಕೊಂಡು ಒಂದೆಡೆ ವ್ಯಕ್ತಿವಾದದ ಮಟ್ಟಿಗೆ, ಮತ್ತೊಂದೆಡೆ ಸಮಾಜದ ಹಿತಾಸಕ್ತಿ ಎಡೆಗೆ ಶ್ರಮಿಸುವ ಸಿದ್ಧಾಂತವಾಗಿ ತನ್ನಲ್ಲಿಯ ದ್ವಂದ್ವವನ್ನು ಬೆಳಕಿಗೆ ತಂದಿತು. ಈ ಕಾರಣದಿಂದ ರಾಜಕೀಯವಾಗಿ ವ್ಯಕ್ತಿಗೆ ಸ್ವಾತಂತ್ರ ಹಾಗೂ ಸಾಮಾಜಿಕ ಹಕ್ಕುಗಳನ್ನು ಇದು ಸಾಧಿಸಿದರೂ, ಮತ್ತೊಂದೆಡೆ ಕೈಗಾರಿಕೀಕರಣ ಹಾಗೂ ರಾಷ್ಟ್ರೀಯತೆಗೂ ಇದು ಬೆಂಬಲ ನೀಡಿ ತನ್ನ ಸಿದ್ಧಾಂತದಲ್ಲಿನ ದ್ವಂದ್ವಗಳನ್ನು ರಾಜಕೀಯವಾಗಿ ಬೆರೆಸುವ ಪ್ರಯತ್ನದಲ್ಲಿ ಮುನ್ನಡೆದಿತ್ತು.

ಊಳಿಗಮಾನ ಪದ್ಧತಿಯ ಮೇಲೆ ರಚಿತವಾಗಿದ್ದ ಮಧ್ಯಕಾಲೀನ ಸಮಾಜವು ಶ್ರೇಣಿಯುತ ಸಮಾಜವಾಗಿದ್ದು, ಪ್ರತಿಯೊಬ್ಬರೂ ಮತ್ತೊಬ್ಬರಿಗೆ ನಾಯಕರಾಗಿ ಮೇಲ್ಪಟ್ಟದವರಾಗಿದ್ದರು. ಉಳುವವನಿಗೆ ಭೂಮಾಲೀಕ, ಭೂಮಾಲೀಕನಿಗೆ ರಾಜ ರಾಜನಿಗೆ ಪೋಪ್, ಪೋಪ್‌ಗೆ ಕ್ರೈಸ್ತ, ಹಾಗೆ ಒಬ್ಬರಿಗೊಬ್ಬರು ಅಧಿಕಾರಿಗಳಿದ್ದ ಸಂದರ್ಭದಲ್ಲಿ ಈ ಮಧ್ಯಕಾಲೀನ ಸುಧಾರಣೆಯ ಹೋರಾಟ ಈ ಅದಿಕಾರವನ್ನು ಮುರಿದು ವ್ಯಾಪಾರ ವಹಿವಾಟು ಹೊಸ ಆರ್ಥಿಕತೆಯನ್ನು ಸೃಷ್ಟಿಸಿತು. ಇದು ರಾಜಕೀಯ ಹಾಗೂ ಸಾಮಾಜಿಕ ಜೀವನದಲ್ಲಿಯೂ ಸುಧಾರಣೆ ತಂದುದರ ಪಲವಾಗಿ, 'ಸ್ವಾತಂತ್ರ' ಎಂಬ ಗೀಳು ಎಲ್ಲರಲ್ಲಿಯೂ ಮಾಡಿತು. ಇದರ ಹಿನ್ನೆಲೆಯಲ್ಲಿ ಹಕ್ಕು, ಸಮಾನತೆ, ಸ್ವಾತಂತ್ರದ ವಿವಿಧ ರೂಪಗಳು ಬೆಳೆದು ಅಧಿಕಾರವನ್ನು ವಿರೋಧಿಸತೊಡಗಿದವು. ಈ ವಿರೋದವು ಸಮಾಜದಲ್ಲಿನ ರೀತಿನೀತಿಗಳನ್ನು ಪುನಃರಚಿಸಲು ಒತ್ತಾಸೆ ನೀಡಿ ಹೊಸ ವೈಚಾರಿಕತೆಯ ಬೆಳವಣಿಗೆಗೆ ದಾರಿ ಮಾಡಿದವು. ಆರ್ಥಿಕವಾಗಂತೂ ಈ ಬದಲಾವಣೆಗಳು ಬಂಡವಾಳಶಾಹಿ ಹಾಗೂ ಅದರ ಇತರೇ ಸ್ವರೂಪಕ್ಕೆ ಬೆಂಬಲ ನೀಡಿ, ಸರ್ಕಾರಗಳೇ ಸೇರಿದಂತೆ ಅಧಿಕಾರದ ಬದಲು ಇಚ್ಛೆಯ ಆಧಾರವಾಗಿರಬೇಕೆಂಬ ಚರ್ಚೆಗಳು ಕೇಳತೊಡಗಿದವು.

ಹೀಗೆ ಉದಾರವಾದವು ಅಭಿವೃದ್ಧಿ, ಬೆಳವಣಿಗೆಯ ಚಿಂತನೆಗಳಾಗಿ ಗುರ್ತಿಸಲ್ಪಟ್ಟು ಸಾಂಪ್ರದಾಯಿಕ ಶ್ರೇಣಿಗಳನ್ನು ತೊಡೆದು ಹಾಕುವಲ್ಲಿ ಕಾರ್ಯ ಕೈಗೊಂಡವು. ಉದಾರವಾದವು ಈ ಹಂತದಲ್ಲಿ ಆಧುನಿಕತೆಯ ಒಂದು ಮುಖವಾಗಿ ಪರಿಚಯಗೊಂಡಿತು.

ಹೀಗೆ, ಉದಾರವಾದದ ಫಲವಾಗಿ ಸಾಂಪ್ರದಾಯಿಕ, ಧರ್ಮ ಹಾಗೂ ಅಧಿಕಾರದಿಂದ ಮಾನವನ ವ್ಯಕ್ತಿತ್ವಕ್ಕೆ ಆಗಿದ್ದ ನಷ್ಟವು ಮತ್ತೊಮ್ಮೆ ಬದಲಾವಣೆಗೊಂಡು ವ್ಯಕ್ತಿಯ ಘನತೆ, ಬುದ್ಧಿ, ಜಾಣತನಕ್ಕೆ ಪ್ರಾಮುಖ್ಯತೆ ದೊರಕಿ ಸ್ಪರ್ಧಾತ್ಮಕ ವ್ಯವಸ್ಥೆ ಹಾಗೂ ಹೊಸ ಆರ್ಥಿಕನೀತಿಯ ಬೆಳವಣಿಗೆಎ ದಾರಿ ಮಾಡಿತು. ವೈಚಾರಿಕತೆಗೂ ಇಲ್ಲಿ ಹೆಚ್ಚಿನ ಔರವದೊರಕಿ, ಸಮುದಾಯಗಳು ಕೇವಲ ಸಾಂಪ್ರದಾಯಿಕ ಸ್ಥಾನಗಳಲ್ಲಿ ಸಿಲುಕಿಕೊಳ್ಳದೇ ಸ್ಥಾನಪಲ್ಲಟಗೊಳ್ಳಲು ಪ್ರಾರಂಬಿಸಿದವು.

ಇಂತಹಾ ಉದಾರವಾದವು ವ್ಯಕ್ತಿಗೆ ಯಾವುದೇ ಅಧಿಕಾರದ ಹಿಡಿತವಿಲ್ಲದೇ ಇರುವುದನ್ನು ಪ್ರತಿಪಾದಿಸಿ, ಮಾನವನು ತನ್ನ ಎಲ್ಲಾ ಘನಾತ್ಮಕಾಂಶಗಳೊಂದಿಗೆ ವೈಚಾರಿಕತೆಯನ್ನು ಹೊಂದಿದವನಾಗಿದ್ದಾನೆ ಎಂದು ನಂಬಿಕೆ ಹೊಂದಿತು. ಹೀಗೆ ವ್ಯಕ್ತಿ ಈ ಸಂದರ್ಭದಲ್ಲಿಯೂ, ಇಡೀ ಸಮಾಜವೇ ಪರಿಗಣನೆಗೆ ತೆಗೆದುಕೊಳ್ಳಲೇಬೇಕಾದ ಒಂದು ಮುಖ್ಯಾಂಶವೆಂದು ತಿಳಿಸಿತು.

ಋಣಾತ್ಮಕ ಉದಾರವಾದದ ಗುರಿ ವ್ಯಕ್ತಿಗೆ ಎಲ್ಲ ತೆರನಾದ ಅಧಿಕಾರದ ಹಿಡಿತದಿಂದ ಮುಕ್ತಿಗೊಳಿಸುವುದು ಆಗಿತ್ತು. ಈ ರೀತಿಯ ಸಾಧನೆಯಲ್ಲಿ, ವ್ಯಕ್ತಿಗೆ ಯಾವುದೇ ಅಡಚಣೆ ಇಲ್ಲದ ಸ್ವಾತಂತ್ರ ನೀಡುವುದು ಸರಿಯ್ಲಲವೆಂದು ಈ ಉದಾರವಾದದ ಕೆಲವು ಪ್ರತಿಪಾದಕರು ಚರ್ಚಿಸಿದ ಕಾರಣ, ಆಸ್ತಿಉಳ್ಳವರಿಗೆ ಮೊದಲಿಗೆ ಸ್ವಾತಂತ್ರ್ಯ ನೀಡಲಾಯಿತು. ಇವರು ನೈಸರ್ಗಿಕ ಹಕ್ಕಿನಲ್ಲಿ ನಂಬಿಕೆ ಉಳ್ಳವರಾದ್ದರಿಂದ, ಇವರು ಆಸ್ತಿ ಹಾಗೂ ಬದುಕಿನ ಹಕ್ಕುಗಳನ್ನು ನೈಸರ್ಗಿಕವೆಂದು ಭಾವಿಸಿ ಇವು ಮಾನವನ ಸರ್ವತೋಮುಖಾಭಿವೃದ್ಧಿಗೆ ಸಹಾಯಕಾರಿಯಾಗಿದೆ ಎಂದು ಹೇಳಿದರು. ಪ್ರತೀ ಸಮಾಜವು ಒಂದು ಅಣುವಿನಂತಹ ಹಲವಾರು ಮಾನವರ ಹಿತಾಸಕ್ತಿ ಹಾಗೂ ಆಕಾಂಕ್ಷೆಗಳ ಒಂದು ಮಹಾಪೂರವೇ ಆಗಿದೆ ಎಂದು ಹೇಳಿದ ಈ ಸಿದ್ಧಾಂತ ರಾಜ್ಯದ ನಿಯಂತ್ರಣಕ್ಕೆ ತಮ್ಮ ಒಲವು ತೋರಿದರು. ರಾಜ್ಯ ಕೇವಲ ಒಂದು ನಕಲಿ ಸಂಸ್ಥೆ, ಇದು ಮಾನವನ ಹಿತಾಸಕ್ತಿಗಾಗಿ ಶ್ರಮಿಸಬೇಕೆಂದು ಇವರು ಅಭಿಪ್ರಾಯಪಟ್ಟರು. ಉತ್ತಮ ಸಮಾಜವೆಂದರೆ ಅದು ಮಾನವನ ಸ್ವಾತಂತ್ರ್ಯವನ್ನು ಕಾಪಾಡಿ, ಅದನ್ನು ದ್ವಿಗುಣಗೊಳಿಸುವುದಾಗಿದೆ ಎಂದು ಇವರು ಇಲ್ಲಿ ಮಾರುಕಟ್ಟೆ ವ್ಯವಸ್ಥೆ ಇದ್ದು ಪ್ರತಿಯೊಬ್ಬರೂ ತಮಗೆ ಬೇಕಾದ ವಹಿವಾಟು, ಕಾಂಟ್ರಾಕ್ಟ್ ಮಾಡಿಕೊಳ್ಳಲು ಅವಕಾಶವಿದೆ ಎಂದು ತಿಳಿಸಿದ್ದಾರೆ. ಇಂತಹಾ ಚಿಂತನೆಗಳೇ ಈ ಋಣಾತ್ಮಕ ಉದಾರವಾದದ ಅಡಿಪಾಯವಾಗಿದೆ. ಇಂತಹ ಚಿಂತನೆಯ ಪ್ರತಿಪಾದಕರು, ಆಡಂ ಸ್ಮಿತ್, ಡೇವಿಡ್ ರಿಕಾರ್ಡೋ, ಮಾಲ್ತೂಸ್, ಬೆಂಥಾಮ್, ಜೇಮ್ಸ್ ಮಿಲ್ ಇತರರು. ಖಾಸಗಿ ಆಸ್ತಿ ಈ ವಾದದ ಕೇಂದ್ರ ಚಿಂತನೆಯಾಗಿತ್ತು. ಇವರ ಪ್ರಕಾರ ರಾಜಕೀಯ ಹಾಗೂ ಆರ್ಥಿಕತೆ ಒಂದನ್ನೊಂದು ಅವಲಂಬಿಸಿದ ಚಿಂತನೆಗಳಾಗಿದೆ ಎಂಬುದು.

ಮಾರುಕಟ್ಟೆ ಆರ್ಥಿಕ ನೀತಿಯನ್ನು ಬೆಂಬಲಿಸಿದ ಈ ಚಿಂತಕರು ಸ್ವತಂತ್ರ ಮಾರುಕಟ್ಟೆ ಮಾನವನ ಎಲ್ಲ ಸಮಸ್ಯೆಗಳನ್ನು ಬಗೆಹರಿಸುವುದೆಂಬ ಭಾವನೆ ಹೊಂದಿದಂತೆ ಇಲ್ಲಿ ಕಂಡು ಬರುತ್ತದೆ. ಆಸ್ತಿಯನ್ನು ಕೇಂದ್ರವಾಗಿಟ್ಟುಕೊಂಡು ಕೊಳ್ಳುವುದು ಮಾರುವುದು ಅದರಿಂದ ಪಡೆಯುವ ಲಾಭ ನಷ್ಟಗಳಿಗೆ ವ್ಯಕ್ತಿಯೇ ಜವಾಬ್ದಾರಿ ಎಂಬ ಚಿಂತನೆಗಳು, ಇವರು ಬಯಸಿದ ರಾಜ್ಯಕ್ಕೆ ಯಾವುದೇ ರೀತಿಯ ಸರ್ವಾಧಿಕಾರಕ್ಕೆ ಅವಕಾಶ ಕೊಡದ ರೀತಿಯಲ್ಲಿ ರಚಿಸಿದ್ದರು. ಸ್ಪರ್ಧೆಯಿಂದ ಮೊದಲ್ಗೊಂಡು ಈ ವ್ಯವಸ್ಥೆ ಅನಿಯಂತ್ರಿತ ಆರ್ಥಿಕ ಸ್ವಾತಂತ್ರ ಸಾಧಿಸುವ ಹಾಗೂ ಅದರ ಮೂಲಕ ರಾಜಕೀಯ ಸಾಧನೆ ಹಾಗೂ ವ್ಯಕ್ತಿಯ ಪರಿಪೂರ್ಣ ಬೆಳವಣಿಗೆಯನ್ನು ಸಾಧಿಸುವ ಚಿಂತನೆಯಾಗಿತ್ತು.

ಇಲ್ಲಿ ರಾಜಕೀಯವಾಗಿ ರಾಜ್ಯವು ಕೇವಲಾ ವ್ಯಕ್ತಿಯ ಹಿತಾಸಕ್ತಿಯನ್ನು ಮಾತ್ರ ದೃಷ್ಟಿಯಲ್ಲಿಟ್ಟುಕೊಂಡು ಶ್ರಮಿಸಬೇಕೇ ಹೊರತು ಸಮಾಜದ ಒಳಿತಿಗಾಗಿ ಅಲ್ಲವೆಂದು ಸ್ಪಷ್ಟಪಡಿಸಿದ್ದರು. ಇಂತಹ ಚರ್ಚೆ ರಾಜ್ಯ ಕುರಿತಾಗಿ ಈ ಕೆಳಗಿನ ಅಂಶಗಳನ್ನು ಸ್ಪಷ್ಟವಾಗಿ ತಿಳಿಸಿತ್ತು.

a) ರಾಜ್ಯ ದೇವರು ಸೃಷ್ಟಿಸಿದ ವ್ಯವಸ್ಥೆ ಅಲ್ಲ ಅದು ಮಾನವ ನಿರ್ಮಿತವಾದದ್ದು.

b) ಇದು ನೈಸರ್ಗಿಕವಾದ ಸಂಸ್ಥೆ ಅಲ್ಲಾ ಇದು ನಕಲಿ ಸಂಸ್ಥೆ.

c) ರಾಜ್ಯದ ಉಗಮ ವ್ಯಕ್ತಿಗತವಾದ ರಾಜಕೀಯ ಬಾದ್ಯತೆಯಾಗಿದೆ. ಇದಕ್ಕೆ ವ್ಯಕ್ತಿಗತವಾದ ಒಪ್ಪಂದದ ಅವಶ್ಯಕತೆ ಇದೆ ಎಂಬುದು.

ಇದಕ್ಕೆ ಮೊದಲು ಉದಾರವಾದದ ಉಗಮ ಕಾಲದಲ್ಲಿ ರಾಜ್ಯವನ್ನು ತಪ್ಪಿಸಿಕೊಳ್ಳಲಾರದ ಒಂದು ಕೆಡಕು ಸಂಸ್ಥೆ ಎಂದು ಪರಿಗಣಿಸಿದ್ದ ಈ ಉದಾರವಾದವು ರಾಜ್ಯವು ಮಾನವನ ಸ್ವತಂತ್ರದ ವಿರೋಧಿ ಎಂದು ಪರಿಗಣಿಸಿತ್ತು. ಹೀಗಾಗಿ ರಾಜ್ಯಕ್ಕೆ ಈ ವಾದದಲ್ಲಿ ಮೊದಲಿನಿಂದಲೂ ಹೆಚ್ಚಿನ ಪ್ರಾಮುಖ್ಯತೆ ಇರಲಿಲ್ಲ. ರಾಜ್ಯಕ್ಕೆ ಕೇವಲಾ ಋಣಾತ್ಮಕ ಕಾರ್ಯಗಳಿವೆ ಎಂದು ಚರ್ಚಿಸಿದ್ದ ಈ ಪ್ರತಿಪಾದಕರು ಯಾವ ಸರ್ಕಾರ ಅತ್ಯಂತ ಕಡಿಮೆ ಆಳ್ವಿಕೆ ನಡೆಸುವುದೂ ಅದೇ ಅತ್ಯಂತ ಉತ್ತಮ ಸರ್ಕಾರ ಎಂದು ಚರ್ಚಿಸಿದ್ದರು. ರಾಜ್ಯದ ಈ ಕಾರ್ಯವು ಕಾನೂನಿನ ಮೂಲಕವೇ ನಡೆಯುವುದರಿಂದ ಈ ಕಾನೂನು ಕೂಡಾ ವ್ಯಕ್ತಿಯ ಇಚ್ಛೆ ಹಾಗೂ ವೈಚಾರಿಕತೆಯಿಂದ ಹೊರಬಿದ್ದ ಚಿಂತನೆ ಎಂದು ಇವರು ಚರ್ಚಿಸಿದ್ದರು.

ಒಂದು ರಾಜಕೀಯ ಸಿದ್ಧಾಂತವಾಗಿ ಉದಾರವಾದವು ಹಾಬ್ಸರವರ ಬರಹಗಳಲ್ಲಿ ಬೆಳಕಿಗೆ ಬಂದರೂ ಇದಕ್ಕೆ ಸರಿಯಾದ ಒತ್ತು ನೀಡಿದವರು ಲಾಕ್. ಇವರು ಯಾರೂ ಮತ್ತೊಬ್ಬರನ್ನು ಅವರ ಇಚ್ಛೆ ಇಲ್ಲದೇ ರಾಜಕೀಯ ಅಧಿಕಾರದ ಹಿಡಿತಕ್ಕೆ ಒಳಪಡಿಸುವಂತಿಲ್ಲಾ ಎಂದು ಹೇಳಿಕೆ ನೀಡಿದರು. ಇವರಿಗೆ ಸ್ವತಂತ್ರವೆಂಬುದು ರಾಜ್ಯದಿಂದ ದೊರಕುವ ಅನಿಯಂತ್ರಿತ ಸ್ವಾತಂತ್ರ್ಯವೇ ಆಗಿತ್ತು. ಇವರ ದೃಷ್ಟಿಯಲ್ಲಿ ವ್ಯಕ್ತಿಗತ ಸ್ವಾತಂತ್ರ, ಜೀವನ ಹಕ್ಕು ಹಾಗೂ ಆಸ್ತಿಯ ಹಕ್ಕುಗಳನ್ನು ಕಾಪಾಡಲು ಮಾತ್ರಾ ರಾಜ್ಯ ಅಸ್ತಿತ್ವಕ್ಕೆ ಬರಬೇಕು ಎಂಬುದು. ಹಕ್ಕುಗಳು ರಾಜ್ಯದ ಉಗಮಕ್ಕಿಂತ ಮೊದಲು ವ್ಯಕ್ತಿಗೆ ದೊರೆತಾದ್ದರಿಂದ ಪ್ರಾಶಸ್ತ್ಯ ಅದಕ್ಕೆ ದೊರಕಬೇಕೆಂಬುದು ಇವರ ಚರ್ಚೆ. ಯಾವ ರಾಜ್ಯ ಇವುಗಳನ್ನು ಕಾಪಾಡಲು ಸಾಧ್ಯವಿಲ್ಲವೋ ಅಂತಹ ರಾಜ್ಯಗಳು ಒಪ್ಪಿಗೆಯನ್ನು ಮುರಿದಂತೆ ಎಂದು ಇವರು ಅಭಿಪ್ರಾಯ ಪಟ್ಟಿದ್ದರು. ಹೀಗೆ ರಾಜ್ಯವನ್ನು ವ್ಯಕ್ತಿ ಹಾಗೂ ಸಮಾಜದ ಹಿಡಿತಕ್ಕೆ ಒಳಪಡಿಸಿದ್ದ ಈ ಚಿಂತನೆಗಳು ಹೆಚ್ಚಿನ ಮಟ್ಟಿಗೆ ಅಮೇರಿಕಾ ಹಾಗೂ ಫ್ರಾನ್ಸ್‌ನ ಮಹಾಕ್ರಾಂತಿಗೆ ನಾಂದಿಯಾಗಿದ್ದವು ಎಂದೇ ಹೇಳಲಾಗಿದೆ.

ಜಾನ್‌ಲಾಕ್‌ರವರಂತೆ ಥಾಮಸ್ ಪೇಯಿನ್ ಕೊಡಂ, ರಾಜ್ಯಕ್ಕೆ ಹೆಚ್ಚಿನ ಧಿಕಾರ ನೀಡುವುದನ್ನು ವಿರೋಧಿಸಿದವರಲ್ಲಿ ಒಬ್ಬರು. ಸಮುದಾಯದ ರಾಜಕೀಯ ಸ್ವಾತಂತ್ರ್ಯಕ್ಕೆ ಹೆಚ್ಚಿನ ಬೆಲೆ ನೀಡಿದ ಇವರು ಸಹಾ ರಾಜ್ಯದ ಸರ್ವಾಧಿಕಾರಿ ಚಟುವಟಿಕೆಯನ್ನು ವಿರೋಧಿಸಿದರು. ಮಾಂಟೆಸ್ಕೊ ಕೂಡಾ ಇದೇ ಚಿಂತನೆಯನ್ನು ಹೊಂದಿದ ಮತ್ತೊಬ್ಬ ಚಿಂತಕರು. ಇವರು ಈ ಕಾರಣಕ್ಕಾಗಿಯೇ ರಾಜ್ಯದ ಅಧಿಕಾರವನ್ನು ವಿಭಜಿಸಿದರು.

ಇದೇ ಚಿಂತನೆಯನ್ನು 19ನೇ ಶತಮಾನದಲ್ಲಿ ಮುಂದುವರಿಸಿದವರಲ್ಲಿ ಉಪಯುಕ್ತತಾವಾದಿಗಳು. ಇವರು ಉದಾರವಾದಕ್ಕೆ ಒಂದು ಹೊಸ ಆಯಾಮ ನೀಡಿದವರಾಗಿದ್ದಾರೆ. ಇವರೂ ವ್ಯಕ್ತಿ ಸ್ವಾತಂತ್ರದ ಹೆಸರಿನಲ್ಲಿ ಲೆಜಿಫೇರ್ ಮುಕ್ತ ಮಾರುಕಟ್ಟೆಗಾಗಿ ಪ್ರತಿಪಾದಿಸಿದವರು. ಇವರೂ ಸಹಾ ರಾಜ್ಯ ವ್ಯಕ್ತಿಯ ಸುಖ ಸಂತೋಷಗಳನ್ನು ಹೆಚ್ಚಿಸುವ ವ್ಯವಸ್ಥೆ ಆಗಬೇಕೆಂದು ಹೇಳುತ್ತಾ ರಾಜ್ಯ ವ್ಯಕ್ತಿಯ ಇಚ್ಛೆಯ ಅಡಿಯಲ್ಲಿ ಶ್ರಮಿಸಬೇಕೆಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಹೀಗೆ ಉದಾರವಾದದ ಹೆಚ್ಚಿನ ಚರ್ಚೆಗಳು ವ್ಯಕ್ತಿಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳುವ ದಿಕ್ಕಿನಲ್ಲಿದ್ದು, ಇವು 19ನೇ ಶತಮಾನದಲ್ಲಿ ರಾಜ್ಯದ ಹೆಚ್ಚಿನ ಅಧಿಕಾರಗಳನ್ನು ವ್ಯಕ್ತಿಗತ ಸ್ವಾತಂತ್ರ್ಯವನ್ನು ಬದಿಗೊತ್ತುವಷ್ಟು ಬೆಳೆಯದಂತೆ ತಡೆದವರು.

## 11.5 ಉದಾರವಾದದ ಅವನತಿ

ಉದಾರವಾದದ ಅವನತಿಯನ್ನು ಅರ್ಥಮಾಡಿಕೊಳ್ಳುವ ಮೊದಲು ಆ ಕಾಲದ ಚಾರಿತ್ರಿಕ ಘಟನೆಗಳನ್ನು ಮನಸ್ಸಿನಲ್ಲಿ ಮೂಡಿಸಿಕೊಳ್ಳುವುದು ಅವಶ್ಯಕ. ಈ ಸಂದರ್ಭದಲ್ಲಿ ರಾಜ್ಯಕ್ಕೆ ಎಷ್ಟೇ ನಿಯಂತ್ರಿತ ಅಧಿಕಾರ ಕೊಡುವ ಪ್ರಯತ್ನ ಮಾಡಿದರೂ ಇದು ತನ್ನ ಬೂರ್ಜ್ವಾ ಲಕ್ಷಣ ಹಾಗೇ ಶೋಷಣೆ ಮಾಡುವ ಲಕ್ಷಣಗಳು ಕಡಿಮೆ ಆಗಲಿಲ್ಲ. ನಗರದ ಮಧ್ಯಮ ವರ್ಗದ ಹಿಡಿತಕ್ಕೆ ಸಿಕ್ಕಿ ರಾಜ್ಯದ ಅನಿಯಂತ್ರಿತ ವ್ಯವಸ್ಥೆಯಲ್ಲಿ ಬಂಡವಾಳಶಾಹಿಗಳಾಗಿ ಪರಿವರ್ತನೆ ಹೊಂದಿದ ಈ ಜನರು ರಾಜ್ಯವನ್ನು ಬಂಡವಾಳಶಾಹಿಗಳ ಹಿತಾಸಕ್ತಿಯನ್ನು ಕಾಪಾಡುವ ಒಂದು ಆರ್ಥಿಕ ಚಟುವಟಿಕೆಯನ್ನು ಬೆಂಬಲಿಸುವ ಸಂಸ್ಥೆಯಾಗಿ ನೋಡತೊಡಗಿದರು. ಇಂತಹಾ ಉದಾರವಾದವು ಲಾಸ್ಕಿಯವರು ಹೇಳಿದಂತೆ ಬಡವರು ತಮ್ಮ ಚಟುವಟಿಕೆಗಳಿಂದಲೇ ಬಡವನಾಗಿದ್ದಾನೆಯೋ ಎಂಬಂತೆ ಅವರನ್ನು ದೃಷ್ಟಿಸುತಿತ್ತು. ಅಂತೆಯೇ, ಈ ಚಿಂತನೆ, ಖಾಸಗೀ ಆಸ್ತಿಗೆ ಬೆಂಬಲ ನೀಡಿ ಖಾಸಗೀ ಆಸ್ತಿಯಿಂದ ಆಗಬಹುದಾದ ಶೋಷಣೆಯನ್ನು ಬದಿಗೊತ್ತಿ ಕೆವಲಾ ಖಾಸಗೀ ಆಸ್ತಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿತ್ತು. ಹೀಗೆ ಇಂತಹಾ ಹಕ್ಕುಗಳ ಕೇವಲಾ ಅಲ್ಪಜನರಿಗೇ ಉಪಯುಕ್ತಕಾರಿಯಾಗಿದ್ದು ಈ ಉದಾರವಾದದ ಕೆಲವು ಚಟುವಟಿಕೆಗಳು ಬಡವರ, ಶ್ರಮಿಕವರ್ಗದ, ವಿದ್ಯೆ, ಆರೋಗ್ಯ ಸೂರು ಕಟ್ಟುವ ಸಾಮಾಜಿಕ ಭದ್ರತೆ ಸಾಧಿಸುವ ವಿಚಾರಗಳಲ್ಲಿ ಯಾವುದೇ ಕಾಳಜೀ ವಹಿಸಲಿಲ್ಲ. ಲಾಭಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಿದ ಈ ಚಿಂತನೆ, ನಷ್ಟ ಹಾಗೂ ಶೋಷಣೆಯ ಬಗ್ಗೆ ಗಮನ ಹರಿಸಲಿಲ್ಲ. ಹೀಗಾಗಿ ಲಾಸ್ಕಿಯವರು ಅಭಿಪ್ರಾಯ ಪಟ್ಟಂತೆ, ಉದಾರವಾದವು ಈ ಹಿರಿಯ ಚಿಂತಕರು ಭವಿಷ್ಯದಲ್ಲಿ ಉದಾರವಾದವು ಬೆಳೆಯಬೇಕಾದ ಹಾದಿಯಲ್ಲಿ ಬೆಳೆಯದೇ ಒಂದು ಶೋಷಣೆಗೆ ಎಡೆಮಾಡಿಕೊಟ್ಟ ವ್ಯವಸ್ಥೆಯಾಗಿ ಬೆಳೆಯಿತೆಂದು ಅಭಿಪ್ರಾಯಪಟ್ಟರು. ಇದಕ್ಕೆ ಮುಖ್ಯಕಾರಣ ರಾಜ್ಯ ಹಾಗೂ ಉದಾರವಾದದ ಚಿಂತನೆ ಕೇವಲಾ ಕೆಲವರಲ್ಲಿ ಉಳಿದು, ಈ ಚಿಂತನೆಯ ಅವನತಿಗೆ ನಾಂದಿಯಾಯಿತು.

19ನೇ ಹಾಗೂ 20ನೇ ಶತಮಾನದಲ್ಲಿ ಉದಾರವಾದವು ಬೆಳೆಯುತ್ತಿದ್ದ ರಾಜ್ಯದ ಅಧಿಕಾರದೊಂದಿಗೆ ತನ್ನ ಒಪ್ಪಂದವನ್ನು ಮಾಡಿಕೊಂಡು ರಾಜ್ಯದ ಹೆಚ್ಚಿನ ಅಧಿಕಾರಕ್ಕೆ ಸಹಾಯ ಮಾಡಿತು. ಈ ಕಾರಣದಿಂದ ಉದಾರವಾದವನ್ನು ಟೀಕಾಕಾರರು, ಸಮುದಾಯದ ಬೆಂಬಲಕ್ಕಾಗಿ ನಿಲ್ಲುವ ಬದಲು ಉದಾರವಾದ ಸಮುದಾಯದ ನಿಯಂತ್ರಣದ ಕಡೆಗೆ ಚಲಿಸಿತು ಎಂದು ಇದೊಂದು ಉದಾರವಾದದ ತಪ್ಪು ಕಲ್ಪನೆ ಎಂದೇ ಚರ್ಚಿಸಿದರು. ಹೀಗಾಗಿ ರಾಜ್ಯವು ಸಮುದಾಯಕ್ಕೆ ಉತ್ತಮ ಜೀವನ ನಡೆಸಲು ಅವಕಾಶ ಕೊಡಲು ಸೋತು, ಅಸಮಾನತೆಯನ್ನು ತೊಡೆದು ಹಾಕುವಲ್ಲಿ ಸೋಲನ್ನು ಕಂಡು ವ್ಯಕ್ತಿಗತವಾದ ಆಸ್ತಿಯ ಹಕ್ಕನ್ನು ಕಾಪಾಡುವಲ್ಲಿ ಸಂಪೂರ್ಣ ಸೋಲನ್ನು ಅನುಭವಿಸಿತು. ಈ ಕಾರಣದಿಂದ ಯಾವ ಚಾರಿತ್ರಿಕ ಹಿನ್ನೆಲೆಯಲ್ಲಿ ಮಾನವನ ಒಳಿತಿಗಾಗಿ ಜನ್ಮ ಪಡೆದ ಈ ಚಿಂತನೆ ಆ ಸಮಾಜದಲ್ಲಿಯೇ ಶೋಷಣೆಗೆ ಒಂದು ಮಾರ್ಗವಾಗಿ ಪರಿಣಮಿಸಿ ತನ್ನ ಸೋಲನ್ನು ತಾನೇ ಕಂಡುಕೊಂಡಿತು. ಕೊನೆಗೆ ಇದು ಮಧ್ಯಮವರ್ಗದ ಶೋಷಿತರ ಧ್ವನಿಯಾಗಿ ಉಳಿದುಕೊಂಡಿತು.

ಉದಾರವಾದ ಮೂಲತಃ ವ್ಯಕ್ತಿ ಸ್ವಾತಂತ್ರ ಹಾಗೂ ಸಮುದಾಯದ ಏಳಿಗೆಯನ್ನು ಬಯಸಿದರೂ ಅದರ ಬಳಕೆ ಹಾಗೂ ಅದರ ದುರ್ಬಳಕೆ ಉದಾರವಾದವನ್ನೇ ಬಂಡವಾಳಶಾಹಿತ್ವದ ನಿರ್ಮಾಣಕ್ಕಾಗಿ, ಶೋಷಿತ ಸಮಾಜದ ಕಾರಣವಾಗಿ, ಸಮುದಾಯದ ಸಮಸ್ಯೆಗಳಿಗೆ ಕಾರಣವಾಗಿ ಪರಿಣಮಿಸಿ ಉಳ್ಳವರ ಪಾಲಿಗೆ ಅದೃಷ್ಟವಾಗಿ ಪರಿಣಮಿಸಿತು.

ಬಡವ-ಶ್ರೀಮಂತರ ನಡುವಿನ ವ್ಯತ್ಯಾಸ ಕಡಿಮೆಗೊಳಿಸುವ ಬದಲು ಹೆಚ್ಚು ಮಾಡುತ್ತಾ ಶ್ರಮಿಕ ವರ್ಗಕ್ಕೆ ಹೆಚ್ಚಿನ ಅನಾನುಕೂಲ ಮಾಡುತ್ತಾ, ರಾಜ್ಯಕ್ಕೆ ಹೆಚ್ಚಿನ ಅಧಿಕಾರ ನೀಡುತ್ತಾ ಈ ವ್ಯವಸ್ಥೆ ಇದರ ಪ್ರತಿಪಾದಕರು ಬಯಸಿದ ವಿರುದ್ಧ ದಿಕ್ಕಿನಲ್ಲಿ ಚಲಿಸಿ ಸಂಪೂರ್ಣವಾಗಿ ತನ್ನ ಸೋಲಿಗೆ, ಅವನತಿಗೆ ತಾನೇ ಕಾರಣವಾಯಿತು.

ಈ ಚಿಂತನೆಯ ಬಯಸಿದ್ದ ಸ್ವತಂತ್ರ ಮಾರುಕಟ್ಟೆ ಮಾನವನ ಬದುಕನ್ನು ಮಾರುಕಟ್ಟೆಯಲ್ಲಿ ಮಾರುವ ವಸ್ತುವಾಗಿಸಿ ಮಾನವನ ಘನತೆ ಗೌರವಗಳನ್ನು ಕಾಪಾಡುವ ಬದಲು ಅದನ್ನು ಕುಗ್ಗಿಸಿ, ಮಾನವತೆಗೆ ಅಪಮಾನ ಮಾಡುವಂತಹ ವ್ಯವಸ್ಥೆ ಸಿದ್ಧಾಂತವಾಯಿತು. ಹೀಗೆ ಉದಾರವಾದವು 20ನೇ ಸತಮಾನದಲ್ಲಿ ತನ್ನ ಅವನತಿಗೆ ತಾನೇ ಕಾರಣವಾಯಿತು.

## 11.6 ಉದಾರವಾದ : ಒಂದು ಮೌಲ್ಯಮಾಪನ

ಲೆಜಿಫೇರ್‌ನ ಮುಕ್ತ ಮಾರುಕಟ್ಟೆ ಕಲ್ಪನೆಯ ಹೊಸ ಸಂಪ್ರದಾಯಿಕ ಉದಾರವಾದದ ಹೆಸರಿನಲ್ಲಿ ಅಸ್ತಿತ್ವ ಕಂಡುಕೊಂಡ ನಂತರ ಉದಾರವಾದದ ಚಿಂತನೆಯ ವಿರುದ್ಧದ ದಿಕ್ಕಿನಲ್ಲಿ ನಡೆಯಿತು. ಆದಾಗ್ಯೂ ಕೆಲವು ಉದಾರವಾದಿಗಳು ಈ ಮುಕ್ತ ಮಾರುಕಟ್ಟೆಯ ತತ್ವವನ್ನು ಬೆಂಬಲಿಸಿದರು. ಕಲ್ಯಾಣರಾಷ್ಟ್ರದ ಹೆಸರಿನಲ್ಲಿ ಈ ಜನರು ರಾಜ್ಯಕ್ಕೆ ಹೆಚ್ಚಿನ ಸ್ವಾತಂತ್ರ್ಯ ನೀಡಿ, ವ್ಯಕ್ತಿಗಳ ಹಕ್ಕನ್ನು ತುಳಿದು ಬದಿಗೊತ್ತಿದ್ದರು. ಆರ್ಥಿಕತೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿದ್ದ ಈ ಜನರು, ಜನರ ದೈನಂದಿನ ಚಟುವಟಿಕೆಗಳಿಗೆ ಯಾವುದೇ ಪ್ರಾಧಾನ್ಯತೆ ನೀಡಲಿಲ್ಲ. ಹೀಗಾಗಿ ಉದಾರವಾದದ ಕೆಲವು ಮುಖ್ಯಾಂಶಗಳನ್ನು ಗೌರವಿಸಿದಾಗ್ಯೂ, ಶೂಪಿಟರ್, ರಾಲ್ಸ್, ಹೈಯಕ್, ನಾಜಿಕ್ ಹಾಗೂ ಇತರರು ಉದಾರವಾದದ ಶೋಷಿತ ಗುಣಗಳನ್ನು ವಿರೋಧಿಸಿ ಈ ವಾದವು ರಾಜ್ಯಕ್ಕೆ ಹೆಚ್ಚಿನ ಅಧಿಕಾರವನ್ನು ನೀಡದೇ ಹೋಗುವ ಹಾದಿಯಲ್ಲಿ ರಾಜ್ಯಕ್ಕೆ ಶೋಷಿತರ ಬೆಂಬಲ ನೀಡುವಂತೆ ಮಾಡಿ ಮತ್ತೊಂದು ಶೋಷಣಾ ಸಂಸ್ಥೆಯಾಗಿ ರಾಜ್ಯವನ್ನು ಪರಿಗಣಿಸಿದೆ ಎಂದು ತಿಳಿಸಿದರು.

ಈ ಚರ್ಚೆಗಳಿಂದ ಉದಾರವಾದಿಗಳಲ್ಲಿ ಮತ್ತೊಂದು ಶಾಖೆ ಬೆಳೆದು ಕೆಲವರು ವ್ಯಕ್ತಿಗತ ಉದಾರವಾದಿಗಳಾದರೆ ಮತ್ತೆ ಕಲವರು ಸಮಾಜದ ಪರ ಉದಾರವಾದಿಗಳೆನಿಸಿದರು. ಹೀಗೆ ಉದಾರವಾದವು ಸಮಾಜ, ವ್ಯಕ್ತಿಯ ಒಳಿತಿನ ಹೆಸರಿನಲ್ಲಿ ವಿವಿಧ ಮುಖಗಳನ್ನು ಹೊಂದಿ ತನ್ನ ಸಂವರೂಪದಲ್ಲಿ ಮತ್ತಷ್ಟು ಬದಲಾವಣೆ ಪಡೆಯಿತು.

ಹೀಗೆ, ಪ್ರತೀಕಾಲದಲ್ಲಿಯೂ ಚಿಂತಕರ ಪ್ರತಿಪಾದನೆಗೆ ಸಿಕ್ಕಿ ತನ್ನ ಸ್ವರೂಪದಲ್ಲಿ ಬದಲಾವಣೆ ಪಡೆದು ಹೊರಟ ಈ ಚಿಂತನೆ, ಮೂಲಭೂತವಾದ ಯಾವುದೇ ಚಿಂತನೆಗೆ ಬದ್ಧವಾಗಿರದೇ ಎಲ್ಲರೂ ಹಾಕಿಕೊಂಡ ಟೊಪ್ಪಿಗೆ ತನ್ನ ಸ್ವರೂಪವನ್ನೇ ಕಳೆದುಕೊಂಡಿತು.

### ನಿಮ್ಮ ಪ್ರಗತಿ ಪರಿಶೀಲನೆ - 1

**ಸೂಚನೆ:** 1. ಈ ಕೆಳಗೆ ಬಿಟ್ಟಿರುವ ಜಾಗವನ್ನು ನಿಮ್ಮ ಉತ್ತರಕ್ಕೆ ಉಪಯೋಗಿಸಿಕೊಳ್ಳಿ.

2. ಈ ಘಟಕದ ಕೊನೆಯಲ್ಲಿ ನೀಡಿರುವ ಉತ್ತರದೊಂದಿಗೆ ನಿಮ್ಮ ಪ್ರಗತಿಯನ್ನು ಪರಿಶೀಲಿಸಿಕೊಳ್ಳಿ.

**1. ಉದಾರವಾದದ ಮುಖ್ಯ ವಿಚಾರಗಳನ್ನು ಕುರಿತು ಒಂದು ಪ್ರಬಂಧ ಬರೆಯಿರಿ.**

..............................................................................................................................

..............................................................................................................................

..............................................................................................................................

..............................................................................................................................

..............................................................................................................................

..............................................................................................................................

..............................................................................................................................

..............................................................................................................................

2. ಉದಾರವಾದದ ಅವನತಿಗೆ ಕಾರಣಗಳನ್ನು ನೀಡಿ

.......................................................................................................................................

.......................................................................................................................................

.......................................................................................................................................

.......................................................................................................................................

.......................................................................................................................................

.......................................................................................................................................

## 11.7 ಒಟ್ಟಾರೆ ಅಭಿಪ್ರಾಯ

ಉದಾರವಾದವು ಯಾವುದೇ ಕಾರಣಗಳಿಂದ ಸೋಲನ್ನು ಅನುಭವಿಸಿದರೂ ಇದು ಮುಂದಿನ ಪೀಳಿಗೆಗೆ ಹೊಸ ಸ್ವರೂಪದೊಂದಿಗೆ ಮತ್ತೊಮ್ಮೆ ಬೆಳಕಿಗೆ ಬರುವಲ್ಲಿ ಆಶ್ಚರ್ಯವೇನಿಲ್ಲಾ. ಎಲ್ಲಿಯವರೆವಿಗೆ ರಾಜ್ಯ ಹಾಗೂ ವ್ಯಕ್ತಿಗಳ ನಡುವಿನ ಸ್ವಾತಂತ್ರ್ಯದ ಚರ್ಚೆ ಬೆಳೆಯುತ್ತದೋ ಅಲ್ಲಿಯವರೆವಿಗೆ ಉದಾರವಾದದ ಬೆಳವಣಿಗೆಯನ್ನು ತಡೆಯಲು ಸಾಧ್ಯವಿಲ್ಲಾ. ಶೋಷಣೆ ಯಾರ ಹೊಣೆಯಾಗುತ್ತದೊ ಅಲ್ಲಿಯವರೆವಿಗೂ ಉದಾರವಾದದ ಸಂಪೂರ್ಣ ಬೆಳವಣಿಗೆಯಾಗಿಲ್ಲಾ ಎಂದು ಹೇಳಬೇಕಿಲ್ಲವಾದರೂ ಮೂಲಭೂತವಾಗಿ ಶೋಷಣೆಯನ್ನೇ ತೊಡೆದು ಹಾಕುವ ಮೂಲೊದ್ದೇಶ ಉದಾರವಾದದ್ದು ಎಂಬ ಚರ್ಚೆ ಮುಂದುವರಿಯುತ್ತದೆ. ಈ ಎಲ್ಲ ಚರ್ಚೆಯಲ್ಲಿ ಮುಖ್ಯಾಂಶವೆಂದರೆ ಹೊಸ ಆಲೋಚನೆಗಳು. ಇದು ಉದಾರವಾಗಿ ವ್ಯವಸ್ಥೆಯಲ್ಲಿ ಮಾತ್ರಾ ಸಾಧ್ಯ ಎಂಬುದಷ್ಟೆ ಇಲ್ಲಿ ಗಮನಿಸಬೇಕಾದ ಅಂಶ.

## 11.8 ಕಠಿಣ ಪದಗಳು

| | |
|---|---|
| ಲೆಜೆಫೆರ್ | ವ್ಯಕ್ತಿಯ ಮೇಲೆ ನಿಯಂತ್ರಣವಿಲ್ಲದ್ದು |
| ಮಧ್ಯಕಾಲೀನ | ಮಧ್ಯಯುಗ |
| ಶಿಥಿಲತೆ | ಅವನತಿ |
| ಔದ್ಯೋಗೀಕರಣ | ಕೈಗಾರಿಕೀಕರಣ |

## 11.9 ಕೆಲವು ಉಪಯುಕ್ತ ಪುಸ್ತಕಗಳು


| | |
|---|---|
| ಎಫ್.ಡಬ್ಲ್ಯೂ ಕಾಕರ್ | ರೀಸೆಂಟ್ ಪೊಲಿಟಿಕಲ್ ಥಿಯರಿ |
| ಎಸ್.ಪಿ. ವರ್ಮಾ | ಮಾಡರ್ನ್ ಪೊಲಿಟಿಕಲ್ ಥಿಯರಿ |
| ಬಿ. ರಾಬರ್ಟ್ | ಥಿಯರೀಸ್ ಆಫ್ ಪೊಲಿಟಿಕಲ್ ಸಿಸ್ಟಮ್ಸ್ |
| ಡಾ. ಕೆ.ಜೆ. ಸುರೇಶ್ | ಆಧುನಿಕ ರಾಜಕೀಯ ಸಿದ್ಧಾಂತ |


## 11.10 ನಿಮ್ಮ ಪ್ರಗತಿಯನ್ನು ನೀವೇ ಪರೀಕ್ಷಿಸಿಕೊಳ್ಳಿ

<u>ನಿಮ್ಮ ಪ್ರಗತಿ ಪರಿಶೀಲನೆ</u> - 1

1.ನೋಡಿ11.3 ಹಾಗೂ 11.4

2. ನೋಡಿ ವಿಭಾಗ 11.5

# ಘಟಕ 12 ಸಮಾಜವಾದ ಅರ್ಥ ಹಾಗೂ ಬೆಳವಣಿಗೆ

<u>ರಚನೆ</u>


12.0 ಉದ್ದೇಶಗಳು

12.1 ಪ್ರಸ್ತಾವನೆ

12.2 ಸಮಾಜವಾದದ ಪರಿಕಲ್ಪನೆ ಹಾಗು ವಿಶ್ಲೇಷಣೆ

12.3 ಸಮಾಜವಾದದ ಅರ್ಥ

12.4 ಸಮಾಜವಾದದ ಬೆಳವಣಿಗೆ

12.5 ಸಮಾಜವಾದ ಪುನರ್‌ಚಿಂತನೆ

12.6 ಸಮಾರೋಪ

12.7 ಒಟ್ಟಾರೆ ಅಭಿಪ್ರಾಯ

12.8 ಕಠಿಣ ಪದಗಳು

12.9 ಕೆಲವು ಉಪಯುಕ್ತ ಗ್ರಂಥಗಳು

12.10 ನಿಮ್ಮ ಪ್ರಗತಿಯನ್ನು ಪರಿಶೀಲಿಸಿಕೊಳ್ಳಿ

## 12.0 ಉದ್ದೇಶಗಳು

ಪ್ರಿಯ ವಿದ್ಯಾರ್ಥಿಯೇ, ಈ ಅಧ್ಯಯನದ ಗುರಿಯು ಬಹಳಷ್ಟು ಚರ್ಚೆಗೆ ಒಳಗಾಗಿರುವ ಈ ಸಮಾಜವಾದದ ಬಗ್ಗೆ ಪರಿಚಯಿಸುವುದೇ ಆಗಿದೆ. 19ನೇ ಶತಮಾನದ ಅಂಚಿನಲ್ಲಿ ಬಹಳಷ್ಟು ಪರಾಕಾಷ್ಠತೆ ತಲುಪಿದ್ದ ಈ ಬಗೆಗಿನ ಚರ್ಚೆಯು ರಾಜಕೀಯ ಸಿದ್ಧಾಂತದ ಅಧ್ಯಯನದಲ್ಲಿ ಪ್ರಮುಖವೆನಿಸಿಕೊಂಡಿದೆ. ಈ ಅಧ್ಯಯನ ಮಾಡಿದ ನಂತರದಲ್ಲಿ ತಾವು ಈ ಚಿಂತನೆಯ ಬಗ್ಗೆ ತಮ್ಮದೇ ಆದ ಅಭಿಪ್ರಾಯ ತಾಳಲು ಸಾಧ್ಯವಾಗುವುದೆಂದು ನಾನಾದರೂ ಭಾವಿಸುತ್ತೇನೆ. ಈಗ ನಾವು ಈ ಚಿಂತನೆಯ ಅರ್ಥ, ಬೆಳವಣಿಗೆಯನ್ನು ಅಧ್ಯಯನಿಸೋಣ.

## 12.1 ಪ್ರಸ್ತಾವನೆ

ವ್ಯಕ್ತಿವಾದವನ್ನು ತಿರಸ್ಕಿರಸುತ್ತಾ ಬೆಳೆದ ಈ ಚಿಂತನೆಯು ಉತ್ಪಾದನಾ ಮೂಲಗಳ ಮೇಲೆ ಹಾಗೂ ಹಂಚಿಕೆಯ ವ್ಯವಸ್ಥೆಯ ಮೇಲೆ ರಾಜ್ಯದ ನಿಯಂತ್ರಣವಿರಬೇಕೆಂದು ಪ್ರತಿಪಾದಿಸುತ್ತದೆ. ಈ ಚಿಂತನೆಯು ಆರ್ಥಿಕ ಚಟುವಟಿಕೆಗಳನ್ನು ವೃದ್ಧಿಸುವುದರ ಜೊತೆಗೆ, ಸರ್ಕಾರದ ಚಟುವಟಿಕೆಗಳನ್ನು ಹೆಚ್ಚಿಸಿ, ಆರ್ಥಿಕ ಚಟುವಟಿಕೆಗಳನ್ನು ವ್ಯಕ್ತಿ, ಸಮುದಾಯ ಹಾಗು ಕಾರ್ಪೋರೇಷನ್‌ಗಳ ಹಿಡಿತದಲ್ಲಿರಿಸಿ ಅಭಿವೃದ್ಧಿಗೊಳಿಸಬೇಕೆಂದು ಪ್ರತಿಪಾದಿಸಿದೆ.

ಸಮಾಜವಾದವು ಹೀಗೆ ಬಹುಮುಖ್ಯ ಆರ್ಥಿಕ ನೀತಿಯಾಗಿದ್ದು, ಇದು ತನ್ನ ಚಿಂತನೆಯಿಂದ ರಾಜಕೀಯದ ಮೇಲೂ ಪ್ರಭಾವ ಬೀರಿದೆ ಎಂದರೆ ತಪ್ಪಾಗಲಾರದು. ಒಂದು ಆರ್ಥಿಕ ನೀತಿಯ ಪುನರ್ ರಚನಾ ಸಿದ್ಧಾಂತವಾಗಿ ಇದನ್ನು ಹಳೆಯ ಸಿದ್ಧಾಂತವೆಂದು ಗುರುತಿಸಿದ್ದರೂ, ಇದೊಂದು ರಾಜಕೀಯ ಸಿದ್ಧಾಂತವಾಗಿ ಬೆಳಕನ್ನು ಕಂಡದ್ದು ಇತ್ತೀಚೆಗೆ ಎಂಬುದನ್ನು ಮರೆಯುವಂತಿಲ್ಲ. ಇದು ಕೈಗಾರಿಕೀಕರಣದ ಕೊಡುಗೆಯೂ ಹೌದು, 19ನೇ ಶತಮಾನದಲ್ಲಿ ರಾಬರ್ಟ್ ಓವನ್, ಥಾಮ್‌ಸನ್, ಸೇಂಟ್ ಸೈಮನ್, ಫೌರಿಯರ್, ಕ್ಯಾಬೆ, ಬ್ಲೇರ್ ಇವರೆಲ್ಲರೂ ಸಮಾಜ ಹಾಗು ಆರ್ಥಿಕ ನೀತಿಗಳ ಪುನರ್ ರಚನೆಗಾಗಿ ಹಾಕಿದ ಚಿಂತನಾಶೀಲ ಚಟುವಟಿಕೆಗಳು ರಾಜಕೀಯದ ಮೇಲೆ ಪರಿಣಾಮ ಬೀರಿತು. ಆದರೆ ಇವರೆಲ್ಲರ ಚಿಂತನೆಯು ಕನಸಿನ ರಾಜ್ಯದ ಚಿಂತನೆಗಳಾಗಿದ್ದವೆಂದರೆ ತಪ್ಪಾಗಲಾರದು.

ಓವನ್, ಆ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ಸ್ಪರ್ಧಾತ್ಮಕ ಚಟುವಟಿಕೆಯನ್ನು ತೊಡೆದು ಹಾಕಿ, ಸಹಕಾರಿ ಚಿಂತನೆಯನ್ನು ಆಚರಣೆಗೆ ತರಬೇಕೆಂದು ಚರ್ಚಿಸಿದನು. ಇವನ ಪ್ರಕಾರ ಇದರಿಂದ ನ್ಯಾಯ ಹಾಗು ಸಮಾಜದಲ್ಲಿ ಸೌಹಾರ್ದತೆ ಸಿಗುವುದೆಂಬ ನಂಬಿಕೆ.

ಸೇಂಟ್ ಸೈಮನ್ ಈ ಬಗ್ಗೆ ಚರ್ಚಿಸಿ, ಊಳಿಗ ಮಾನ್ಯಪದ್ಧತಿ ಹಾಗೂ ಪುರೋಹಿತಶಾಹಿ ವ್ಯವಸ್ಥೆಯನ್ನು ತೆಗೆದುಹಾಕಿ, ಕೈಗಾರಿಕಾ ರಾಜ್ಯ ಸ್ಥಾಪಿಸಬೇಕೆಂದು ಕರೆ ನೀಡಿದನು. ಇಲ್ಲಿ ಈತ ಊಳಿಗ ಮಾನ್ಯ ಪದ್ಧತಿಯ ಬದಲು ಬೌದ್ಧಿಕ ಜೀವಿಗಳಾದ ಕಾರ್ಮಿಕ ವ್ಯವಸ್ಥೆಯನ್ನು ತರಬಯಸಿದ್ದನು.

ಚಾರ್ಲ್‌ಫೌರಿಯರ್, ಸಮಾಜವನ್ನು ಸ್ವಾತಂತ್ರ್ಯ ಗುಂಪುಗಳ ಮೇಲೆ ಪುನರ್ ರಚಿಸಬೇಕೆಂದು ಚರ್ಚಿಸಿದ್ದನು. ಪ್ರತಿ ಗುಂಪಿನಲ್ಲಿ 1620 ಜನರಿರಬೇಕು ಅದಕ್ಕೆ ಫೆಲನಾಕ್ಸ್ ಎಂದು ಕರೆಯಬೇಕೆಂದೂ ಕರೆ ನೀಡಿದನು. ಈ ಗುಂಪಿನ ಜನರು, ತಮಗೆ ಅತ್ಯುನ್ನತವಾಗಿ ಸಾಧ್ಯವಾದ ಕೆಲಸ ಮಾಡಲು ಅವಕಾಶ ಕೊಡಬೇಕೆಂಬುದು ಇವರ ಚರ್ಚೆ. ಇಂತಹ ವ್ಯವಸ್ಥೆಯಲ್ಲಿ ಸರ್ಕಾರಕ್ಕೆ ಅವಕಾಶವಿಲ್ಲ ಆದರೆ, ಫೆಲನಾಕ್ಸ್‌ಗಳು ಕಾರ್ಯೋನ್ಮುಖವಾದ ನಂತರ ರಾಜ್ಯವು ಮರೆಯಾಗಿ ಹೋಗಬೇಕೆಂದೇ ಚರ್ಚಿಸಿದನು.

ಕ್ಯಾಬೆ, ಪ್ರಸಕ್ತ ಸಮಾಜದ ಕೇಡು ಉಂಟು ಅಂಶಗಳನ್ನು ವಿರೋಧಿಸಿದನು. ಹಾಗೂ ಇವನ ಪ್ರಕಾರ ಸಮಾಜದಲ್ಲಿ ಸಂಸಾರವನ್ನು ಹೊರತುಪಡಿಸಿ ಉಳಿದ ಎಲ್ಲವೂ ರಾಷ್ಟ್ರೀಕರಣಗೊಂಡಿರಬೇಕೆಂಬುದು.

ಈ ಮೇಲೆ ಹೇಳಿದ ಚಿಂತಕರ ಈ ಅಭಿಪ್ರಾಯಗಳು ಜ್ಞಾನವನ್ನು ಸಂಪಾದಿಸುವ ಸಲುವಾಗಿ ಸರಿಯೆನಿಸಿದರೂ, ಆಚರಣೆಯ ದೃಷ್ಟಿಯಲ್ಲಿ ಇದು ಅಸಾಧ್ಯವಾದುದರಿಂದ ಇದನ್ನು ಕನಸಿನ ಚಿಂತನೆಗಳೆಂದು ಪರಿಗಣಿಸಲಾಯಿತು. ಈ ಚಿಂತನೆಗಳು ಅರಾಜಕತೆಗೆ ಹೇಗೆ ವಿಭಿನ್ನವೆಂದು ಈ ಚಿಂತಕರು ವಿವರಿಸಲಾಗಲಿಲ್ಲ. ಆದರೆ, ಇವರ ಮೂಲಾಲೋಚನೆಗಳು ಈ ನಿಟ್ಟಿನಲ್ಲಿ ಸಮತಾವಾದಿ ಸಮಾಜದ ರಚನೆಯೆಡೆಗೆ ನಡೆದಿದ್ದವೆಂದರೆ ತಪ್ಪಾಗಲಾರದು.

ಇಂತಹುದೇ ಇನ್ನೊಂದು ಚಿಂತನೆಯೆಂದರೆ ಕ್ರಿಶ್ಚಿಯನ್ ಸಮಾಜವಾದ. ಡಿ.ಲೆಮನಿಯಸೀಸ್ ಎಂಬ ಬರಹಗಾರರು ಈ ಚಿಂತನೆಯ ಪ್ರತಿಪಾದಕರು. ಇವರು ಫ್ರಾನ್ಸ್ ದೇಶಕ್ಕೆ ಸೇರಿದವರಾಗಿದ್ದರು. ಇವರ ಚಿಂತನೆಯು ರಾಜತ್ವವನ್ನು ವಿರೋಧಿಸಿ ಚರ್ಚ್ ಹಾಗೂ ಜನಸಾಮಾನ್ಯರ ನಡುವೆ ಬಾಂಧವ್ಯ ಮೂಡಿಸುವುದಾಗಿತ್ತು ಇವರ ದೃಷ್ಟಿಯಲ್ಲಿ ರಾಜನು ಶೋಷಣೆಗೆ ಸಹಾಯಕಾರಿಯಾಗಿದ್ದ ವ್ಯವಸ್ಥೆಯ ಒಡೆಯನೆಂಬುದು. ಚರ್ಚ್ ಇವರ ಚಿಂತನೆಯಲ್ಲಿ, ಎರಡು ಹಂತದ ಪಾತ್ರವಹಿಸಬೇಕೆಂಬುದು. ಚರ್ಚ್ ಧಾರ್ಮಿಕ ಹಾಗು ಆರ್ಥಿಕವಾಗಿ ಚಟುವಟಿಕೆಯನ್ನು ನಿರ್ವಹಿಸಬೇಕೆಂದೇ ಇವರು ಪ್ರತಿಪಾದಿಸಿದ್ದಾರೆ. ಇದಕ್ಕೆ ಚರ್ಚ್ ಸಹಕಾರಿ ಶ್ರಮಿಕ ಸಂಘಟನೆಗಳ ಸ್ಥಾಪಕರಾಗಿರಬೇಕೆಂದೇ ಇವರು ತಿಳಿಸಿದ್ದಾರೆ. ಬಂಡವಾಳಶಾಹಿ ಹಾಗು ರಾಜತ್ವವು ಇವರ ಪ್ರಕಾರ ಮಾನವನ ಸಮಸ್ಯೆಗಳಿಗೆ ಕಾರಣವೆಂದಿದ್ದಾರೆ.

ಇಂಗ್ಲೆಂಡ್‌ನ ಕ್ರಿಶ್ಚಿಯನ್ ಸಮಾಜವಾದಿಗಳ ನಿಟ್ಟಿನಲ್ಲಿ ಮಾರಿಸನ್‌ರವರು ಓವನ್ ಚಿಂತನೆಗಳನ್ನು ಅನುಕರಿಸಿದವರಾಗಿದ್ದು, ಜನರ ಸರ್ವಾಧಿಕಾರವು ರಾಜತ್ವದ ವಿರುದ್ಧ ಇರುವುದನ್ನು ವಿರೋಧಿಸಿದ್ದಾರೆ. ಕಿಂಗ್ಲೆಕೋಡಂ ಇದೇ ರೀತಿಯ ಚಿಂತಕರಾಗಿದ್ದು, ಇವರೀರ್ವರು ಕ್ರಿಶ್ಚಿಯನ್ ಧಾರ್ಮಿಕ ಚಿಂತನೆಗೆ ರಾಜಕೀಯ ಆರ್ಥಿಕ ಅಂಶಗಳಿಗೆ ಯಾವುದೇ ಸಂಬಂಧವಿಲ್ಲವೆಂದು ಚರ್ಚಿಸಿದ್ದಾರೆ.

ಮಾರಿಸನ್‌ರವರ ಪ್ರಕಾರ, ಸಮಾನತೆ, ಐಕ್ಯತೆ, ಸ್ವಾತಂತ್ರ, ಭ್ರಾತೃತ್ವಯೆಂಬುವ ಚಿಂತನೆಗಳು, ಸಮಾಜವಾದಿ ಆಲೋಚನೆಗಳಲ್ಲ, ಇವು ನಿಜಕ್ಕೂ ಚರ್ಚಿನ ಚಿಂತನೆಗಳೆಂದು ತಿಳಿಸಿದ್ದಾರೆ. ಇದು ಚರ್ಚಿನ ಸಿದ್ಧಾಂತದಲ್ಲಿ ಪ್ರತಿ ವ್ಯಕ್ತಿಯೂ ತನ್ನ ಶಕ್ತಿಯಾನುಸಾರ ಶ್ರಮಿಸಿ ಬೆಳೆಯಲು ಅವರಿಗೆ ಎಲ್ಲರಂತೆ ಅವಕಾಶ ಕಲ್ಪಿಸಿಕೊಡಬೇಕೆಂಬ ಚಿಂತನೆಯಿಂದ ಬೆಳೆದ ತತ್ವ ಎಂದಿದ್ದಾರೆ.

ಕ್ರಿಶ್ಚಿಯನ್ ಸಮಾಜವಾದಿಗಳು ಸಾಮಾನ್ಯ ಚಳುವಳಿಗಳನ್ನು ಸಹಕಾರ ಸಂಘಗಳ ರಚನೆಗಾಗಿ, ಸಂಘಟಿಸುವಲ್ಲಿ ಶ್ರಮಿಸಿ ಅದಕ್ಕಾಗಿ ಕಾನೂನುಗಳನ್ನು ಸಹಾ ರಚಿಸಲು ಮುಂದಾಳತ್ವ ವಹಿಸಿದ್ದರು. ಆದರೂ ಅವರಿಗೆ ಯಾವುದೇ ರಾಜಕೀಯ ಪ್ರಶ್ನೆಗಳು ಅಡಚಣೆಯಾಗದೆ, ಚರ್ಚಿನ ಗೌರವವನ್ನು ಹೆಚ್ಚು ಮಾಡುವಲ್ಲಿ ಅವರು ಯಶಸ್ವಿಯಾದರು. ಆದರೆ ಅವರ ಸಂಘಟನೆಗಳು ಹಾಗು ಅವರ ಪತ್ರಿಕೆಗಳು ಬಹುಬೇಗ ಸೋಲನ್ನು ಕಂಡವು.

1848ರಲ್ಲಿ ಮಾರ್ಕ್ಸ್ ಹಾಗೂ ಎಂಜಲ್ಸ್, ಸಮಾಜವಾದಕ್ಕೆ ವೈಜ್ಞಾನಿಕ ಹಾಗು ಜನಪ್ರಿಯತೆಯ ತಳಹದಿ ನೀಡಿದರು. ಇವರ ಕಮ್ಯೂನಿಸ್ಟ್ ಮ್ಯಾನಿಫೆಸ್ಟ್ ಬರಹವು ಈ ವಾದವನ್ನು ಕ್ರಾಂತಿಕಾರಿಗೊಳಿಸಿತು ಹಾಗು ರಾಜಕಾರಣ ವಿಷಯವಾಗಿ ಸಿದ್ಧಾಂತವಾಗಿ ಅನುವು ಮಾಡಿತು. ಆ ಕಾಲದಿಂದಾಚೆಗೆ ಈ ಸಮಾಜವಾದವು ವಿವಿಧ ರಾಷ್ಟ್ರಗಳಲ್ಲಿ ಬೇರೆಬೇರೆ ಸಿದ್ಧಾಂತಗಳಾಗಿ ಮಾರ್ಪಾಡುಗೊಂಡು ಪ್ರಚಲಿತದಲ್ಲಿದೆ.

ಹೀಗಾಗಿ, ಇಂದು ಸಮಾಜವಾದಕ್ಕೆ ನಿರ್ಧಿಷ್ಟವಾದ ಯಾವುದೇ ವ್ಯಾಖ್ಯೆ ನೀಡಿ ಉತ್ತರಿಸುವಂತಿಲ್ಲ. ಯಾರನ್ನಾದರೂ ನೀವು ಸಮಾಜವಾದಗಳೇ ಎಂದು ಪ್ರಶ್ನಿಸಿದಲ್ಲಿ ಅದು ಯಾವ ಸಮಾಜವಾದ ಎಂಬ ಹೇಳಿಕೆ ನೀಡದೇ ವಿಷಯ ವಿವರಿಸಬೇಕಾದ ಸಂದರ್ಭವಿದೆ. ಡಾ. ಶಾಡ್‌ವೆಲ್ ಅದಕ್ಕಾಗಿಯೇ ಸಮಾಜವಾದವು ಅತ್ಯಂತ ಕ್ಲಿಷ್ಟಕರವಾದ ಚಿಂತನೆ ಎಂತಲೂ, ರಾಮಸೆ ಮಯೂರ್ ಇದನ್ನು ಉಸರವಳ್ಳಿಯಂತೆ ಎಂತಲೂ ವಿವರಣೆ ನೀಡಿದ್ದಾರೆ. ಒಂದು ರಸ್ತೆಬದಿಯ ಚಿಂತನೆಯಿಂದ ಪ್ರಾರಂಭವಾಗಿ ಅಂತರರಾಷ್ಟ್ರೀಯ ಮಟ್ಟದವರೆವಿಗೆ ವಿವಿಧ ಜನರಿಗೆ ವಿವಿಧಾರ್ಥ ನೀಡುವಂತಹುದೇ ಸಮಾಜವಾದವೆಂದಿದ್ದಾರೆ.

## 12.2 ಸಮಾಜವಾದ: ಪರಿಕಲ್ಪನೆ ಹಾಗು ವಿಶ್ಲೇಷಣೆ

ಸಮಾಜವಾದವು ಸಿದ್ಧಾಂತವಾಗಿ ಬೇಡವಾದ ಸ್ಪರ್ಧಾತ್ಮಕತೆಯನ್ನು ತೊಡೆದು ಹಾಕುವ ಹಾಗೂ ಬಂಡವಾಳಶಾಹಿತ್ವವನ್ನು ತೊಡೆದು ಹಾಕುವ ಚಿಂತನೆಯಾಗಿದೆ. ಇದು ಆರ್ಥಿಕ ಅಸಮಾನತೆಯನ್ನು ತೊಡೆದುಹಾಕಿ, ಉತ್ತಮ ಸಮಾಜದ ರಚನೆಗೆ ಸಹಾಯಕಾರಿಯಾಗಿದೆ. ಬಂಡವಾಳಶಾಹಿತ್ವ ಮಾನವ ಮೌಲ್ಯಗಳನ್ನು ಕುಂಠಿತಗೊಳಿಸಿದರೆ, ಸಮಾಜವಾದವು ಈ ಮೌಲ್ಯಗಳನ್ನು ವೃದ್ಧಿಸುತ್ತದೆ. ಸರ್ವೇ ಜನೋ ಸುಖಿನೋ ಭವಂತು ಎಂಬಂತೆ ಎಲ್ಲರ ಸುಖ, ಒಳಿತನ್ನು ಬಯಸುತ್ತದೆ ಇದು ರಾಜಕೀಯ ಪ್ರಜಾಪ್ರಭುತ್ವಕ್ಕಿಂತ ಆರ್ಥಿಕ ಪ್ರಜಾಪ್ರಭುತ್ವಕ್ಕಾಗಿ ಹೋರಾಟ ಮಾಡುತ್ತಾರೆ.

ಸಮಾಜವಾದವು ಈ ನಿಟ್ಟಿನಲ್ಲಿ ಒಂದು ಉತ್ತಮ ಚಿಂತನೆಯಾಗಿದ್ದರೂ ಟೀಕಾಕಾರರು ಇದೊಂದು ಸರ್ವಾಧಿಕಾರಿ ಚಿಂತನೆಯೆಂದು ಇದರಲ್ಲಿ ನೌಕರಶಾಹಿಯ ನಿಯಂತ್ರಣವಿದೆ ಎಂದೂ ಟೀಕಿಸಿದ್ದಾರೆ. ಈ ವ್ಯವಸ್ಥೆಯು ನೌಕರಶಾಹಿಯನ್ನು ಹೆಚ್ಚಿಸುತ್ತದೆ. ಇದು ಭ್ರಷ್ಟಾಚಾರ ಹಾಗೂ ಅಧಿಕಾರದಲ್ಲಿ ವ್ಯಕ್ತಿಗತ ಬೆಳವಣಿಗೆಗೆ ಹೆಚ್ಚಿನ ಅವಶ್ಯಕತೆ ನೀಡುತ್ತದೆ ಎಂದಿದ್ದಾರೆ. ಸ್ವಜನಪಕ್ಷಪಾತಕ್ಕೆ ಹೆಚ್ಚಿನ ಅವಕಾಶವಾಗಿ ಸಾರ್ವಜನಿಕ ಉದ್ದಿಮೆಗಳಲ್ಲಿ ಅನ್ಯಾಯ ಹೆಚ್ಚಬಹುದು ಎಂದೂ ಟೀಕಿಸಿದ್ದಾರೆ. ಇದು ಪ್ರಜಾಪ್ರಭುತ್ವಕ್ಕಿಂತಾ ಹೆಚ್ಚಾಗಿ ಅಧಿಕಾರಶಾಹಿ /ಸರ್ವಾಧಿಕಾರಿ ಅಧಿಕಾರವಾಗುತ್ತದೆ ಎಂದೂ ಟೀಕಿಸಿದ್ದಾರೆ. ಈ ರೀತಿ ಹೆಚ್ಚಿನ ಅಧಿಕಾರ ಪಡೆದ ರಾಜ್ಯವ್ಯವಸ್ಥೆ ತನ್ನನ್ನು ತಾನೇ ಉಳಿಸಿಕೊಳ್ಳುವ ಪ್ರಯತ್ನದಿಂದ ಹೆಚ್ಚು ಅಧಿಕಾರ ಗ್ರಹಿಸಿ ತನ್ನ ಜವಾಬ್ದಾರಿಯನ್ನು ಅಧಿಕಾರ, ಭಯದ, ಹಾಗೂ ಶಕ್ತಿಯ ಬಳಕೆಯಿಂದ ನಡೆಯುವುದರಿಂದ ಇದು ಬಹಳ ಬೇಗ ಸೋಲನ್ನು ಅನುಭವಿಸುತ್ತದೆ ಎಂದಿದ್ದಾರೆ.

ಶ್ರಮಿಕ ವರ್ಗಕ್ಕೆ, ಶಾಶ್ವತವಾಗಿ ಅಧಿಕಾರ ದೊರೆತಲ್ಲಿ ಆ ಅಧಿಕಾರ ದುರುಪಯೋಗ ಮಾಡಿಕೊಂಡು ಸೋಮಾರಿತನದಿಂದ ವರ್ತಿಸುತ್ತಾರೆ. ಅನಾಸಕ್ತಿಯಿಂದ ಕೂಡಿದ ಇವರು ರಾಜ್ಯದ ಒಳಿತಿಗಾಗಿ ಶ್ರಮಿಸುವುದಿಲ್ಲ. ಇದರಿಂದ ಉತ್ಪಾದನೆಯು, ಖಾಸಗಿ ವ್ಯವಸ್ಥೆಯಂತೆ ಅಭಿವೃದ್ಧಿ ಆಗದೆ ಅನಭಿವೃದ್ಧಿಯಾಗಿ, ಉತ್ಪಾದನೆಯ ಇಳಿಮುಖ ಖಂಡಿತವೆಂದಿದ್ದಾರೆ. ಇದರಿಂದ ಆರ್ಥಿಕವಾಗಿ ಉನ್ನತವಾಗಿ ಬೆಳೆಯಬೇಕಾದ ಈ ವ್ಯವಸ್ಥೆ ಬಹುಬೇಗ ಕುಸಿಯಬಹುದೆಂದು ಅನುಮಾನಿಸಿದ್ದಾರೆ. ಪ್ರಾಯೋಗಿಕವಾಗಿಯೂ ಕೂಡ ಇಂತಹ ವ್ಯವಸ್ಥೆಯಲ್ಲಿ ನಿಧಾನತೆ ಹಾಗು ಕಾರ್ಯ ಕುಂಠಿತಗೊಳ್ಳುವಲ್ಲಿ ಅನುಮಾನವಿಲ್ಲಾ ಎಂದಿದ್ದಾರೆ. ಇವೇ ಅಲ್ಲದೆ ಮೂಲಭೂತವಾಗಿ ಈ ಸಮಾಜವಾದಿ ಚಿಂತನೆಯು ವ್ಯಕ್ತಿಯ ಮೂಲ ಲಕ್ಷಣಗಳಿಗೆ ವಿರೋಧವಾದ ಚಿಂತನೆಯಾಗಿದ್ದು ಆತ ಈ ಸಮಾಜವಾದಿ ಚಿಂತನೆಯ ಸಿದ್ಧಾಂತಗಳಿಗೆ ಬದ್ಧನಾಗಿ ಶ್ರಮಿಸುವುದು ತೀರಾ ಅಸ್ವಾಭಾವಿಕವೆಂದಿದ್ದಾರೆ. ಹೀಗಾಗಿ ಇದರ ಯಶಸ್ಸು ಬಹಳಷ್ಟು ದಿನಗಳಿರುವುದಿಲ್ಲಾ ಎಂದೇ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಹೀಗೆ ಅನೇಕ ಟೀಕೆಗಳಿದ್ದರೂ ಸಹಾ ಸಮಾಜವಾದವು ಕೇವಲ ಟೀಕೆಗಳಿಂದ ಮಾತ್ರವಲ್ಲದೆ ಒಂದು ಚಳುವಳಿಯೆಂಬ ಕಾರಣದಿಂದಲೂ ತನ್ನ ಸೋಲನ್ನು ಮರೆಮಾಚಿ ನಿಲ್ಲಬಹುದಾಗಿದೆ. ಇಂತಹಾ ಒಂದು ಚಿಂತನೆಯು ಸಾಮಾಜಿಕ ಶಾಸನಗಳ ರಚನೆಯಲ್ಲಿ ಹೆಚ್ಚಿನ ಬದಲಾವಣೆಗೆ ನಿಜಕ್ಕೂ ಸಹಾಯಕಾರಿಯಾಗಿದೆ. ಉದಾ: ಶ್ರಮಿಕ ವರ್ಗದ ದಿನಗೂಲಿಯಲ್ಲಿ ಹೆಚ್ಚಳ, ದುಡಿಯುವ ಕಾಲದ ಮಿತಿಯನ್ನು ನಿರ್ಧರಿಸಿರುವುದು, ಬೆಲೆಗೆ ನಿಯಂತ್ರಣ ನೀಡಿರುವುದು, ಆಸ್ತಿಯ ಮೇಲೆ ನಿಯಂತ್ರಣ ಒಡ್ಡಿರುವುದು, ಇವೆಲ್ಲವೂ ನೇರವಾಗಿ ಹಾಗು ಪರೋಕ್ಷವಾಗಿ ಸಮಾಜವಾದದಿಂದಲೇ ಬಂದಂತಹ ಚಿಂತನೆಯಾಗಿದೆ. ಹೀಗಾಗಿ ಇಂದು ಹಲವಾರು ರಾಷ್ಟ್ರಗಳು ಈ ಸಮಾಜವಾದಿ ಚಿಂತನೆಯನ್ನು ಇಂದಿಗೂ ಆಚರಣೆಯಲ್ಲಿಟ್ಟುಕೊಂಡಿವೆ. ಅಲ್ಲದೆ ಈ ಚಿಂತನೆಯು ಆರ್ಥಿಕ ಪ್ರಜಾಪ್ರಭುತ್ವವಿಲ್ಲದ ರಾಜಕೀಯ ಪ್ರಜಾಪ್ರಭುತ್ವವು ಯಾತಕ್ಕೂ ಪ್ರಯೋಜನವಿಲ್ಲವೆಂಬುದನ್ನು ಸಾರಿದೆ.



VOP_FL_MA_Pol_Sci_C-8(1-7)_TF.20_F.No.59
59

## 12.3 ಸಮಾಜವಾದದ ಅರ್ಥ

ಸಮಾಜವಾದ ಎಂದರೇನು ಎಂಬುದಕ್ಕೆ ನಿಖರವಾದ ಹಾಗೂ ಸ್ಪಷ್ಟವಾದ ಅರ್ಥವನ್ನು ನೀಡುವುದು ಕಷ್ಟ ಸಾಧ್ಯವಾದುದು. ಇದರ ಅರ್ಥವು ಈ ಕೆಳಗಿನ ಅಂಶಗಳನ್ನು ಆಧರಿಸಿಕೊಂಡಿದೆ ಅವುಗಳೆಂದರೆ,

1. ಸಮಾಜವಾದವು ಒಂದು ನೀತಿಯಾಗಿ ಕೇಂದ್ರ ಪ್ರಜಾಪ್ರಭುತ್ವ ಅಧಿಕಾರವನ್ನು ಬಲಪಡಿಸಿ ಉತ್ತಮ ಹಂಚಿಕೆ, ಉತ್ಪಾದನೆ ಹಾಗೂ ಹೆಚ್ಚಿನ ಸಾರ್ವಜನಿಕ ಆಸ್ತಿಯ ರಚನೆಗೆ ಸಹಾಯಕಾರಿಯಾಗಿದೆ.
2. ಸಮಾಜವಾದವು ಒಂದು ರಾಜಕೀಯ ಚಳುವಳಿಯಾಗಿದ್ದು, ಕಾರ್ಮಿಕ ವರ್ಗದ ಬೆಂಬಲದೊಂದಿಗೆ ಇದು ವರ್ಗರಹಿತ ಸಮಾಜದ ಸ್ಥಾಪನೆಗೆ ಸಾರ್ವಜನಿಕ ಒಡೆತನವನ್ನು ಬಯಸಿ ಪ್ರಜಾಪ್ರಭುತ್ವಿಕ ನಿರ್ವಹಣೆಯ ಮಂತ್ರವನ್ನು ಅನುಸರಿಸಿ ಉತ್ಪಾದನೆ ಹಾಗು ಹಂಚಿಕೆಯನ್ನು ನಿಯಂತ್ರಿಸುತ್ತದೆ.
3. ಇದೊಂದು ಪ್ರಜಾಪ್ರಭುತ್ವ ಹೋರಾಟವೆನಿಸಿ ಆರ್ಥಿಕವಾಗಿ ಸಮಾಜವನ್ನು ಸಂಘಟಿಸಿ ಹೆಚ್ಚಿನ ನ್ಯಾಯ ಹಾಗು ಸ್ವಾತಂತ್ರ್ಯವನ್ನು ಎಲ್ಲರಿಗೂ ಒದಗಿಸಿಕೊಡುವ ಚಿಂತನೆಯಾಗಿದೆ.
4. ಇದು ಸರ್ವಾಜನಿಕರು ಉತ್ಪಾದನಾ ಮೂಲದ ಮೇಲೆ ನಿಯಂತ್ರಣ ಸಾಧಿಸುವ ಹಾಗೂ ಎಲ್ಲರಿಗೂ ಸಮಾನ ಹಂಚಿಕೆ ಮಾಡುವ ವ್ಯವಸ್ಥೆಯಾಗಿದೆ ಎಂದಿದ್ದಾರೆ.
5. ಸಮಾಜವಾದವೆಂದರೆ ಸಮಾನ ಆದಾಯ ಎಂಬುದಾಗಿದೆ.
6. ಇದೊಂದು ಆರ್ಥಿಕವಾದವಾಗಿದ್ದು ಸಮಾಜವನ್ನು ಆರ್ಥಿಕವಾದದ ಆಧಾರದ ಮೇಲೆ ಪುನರ್‌ರಚಿಸುವ ವ್ಯವಸ್ಥೆ ಆಗಿದೆ ಎಂದಿದ್ದಾರೆ.
7. ಖಾಸಗೀ ಬಂಡವಾಳವನ್ನು ಸಾರ್ವಜನಿಕ ಸ್ವತ್ತಾಗಿ ಪರಿವರ್ತಿಸುವುದೇ ಸಮಾಜವಾದವಾಗಿದೆ.
8. ಸಂಘಟಿತ ಸಮಾಜದಲ್ಲಿ ರಾಜ್ಯಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಿ ಹೆಚ್ಚು ನಿಖರವಾದ ಹಂಚಿಕೆ ಹಾಗೂ ಉತ್ಪಾದನೆಯನ್ನು ಮಾಡುವುದೇ ಸಮಾಜವಾದವೆಂಬುದಾಗಿದೆ.
9. ಸಮಾಜವಾದವೆಂದರೆ ಮಾನವ ಸಹಭಾಗಿತ್ವ, ಇಲ್ಲಿ ವರ್ಣಬೇದವಿಲ್ಲದ ವ್ಯವಸ್ಥೆ ಇರುತ್ತದೆ. ಯಾರಲ್ಲೂ ಶ್ರೀಮಂತರೂ ಬಡವರೆಂಬ ವ್ಯತ್ಯಾಸ ಇರುವುದಿಲ್ಲ. ಸಮುದಾಯದ ಒಡೆತನ ಉತ್ಪಾದನ ಮೂಲದ ಮೇಲೆ ಇರುತ್ತದೆ. ವ್ಯಕ್ತಿ ವ್ಯಕ್ತಿಗೆ ಸಮಾಜದಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಸಹಾಯ ಮಾಡುವುದೇ ಇದರ ಮೂಲ ಉದ್ದೇಶವಾಗಿದೆ.

ಹೀಗೆ ಹಲವಾರು ಮೂಲಗಳಿಂದ ಬಂದಂತಹ ವ್ಯಾಖ್ಯಾನಗಳೇ ಸಮಾಜವಾದದ ಅರ್ಥದ ವ್ಯಾಪ್ತಿಯನ್ನು ಹೆಚ್ಚಿಸಿದೆ.

## 12.4 ಸಮಾಜವಾದದ ಬೆಳವಣಿಗೆ

19ನೇ ಶತಮಾನದಿಂದೀಚೆಗೆ ಮಾರ್ಕ್ಸ್‌ವಾದವೇ ಸಮಾಜವಾದದ ಅತ್ಯಂತ ಪ್ರಮುಖ ಚಿಂತನಾಶಾಹಿಯೆನಿಸಿದ್ದೂ ಇದು ತನ್ನ ನಿಕಟವರ್ತಿಗಳಿಂದ ಟೀಕೆ ಹಾಗು ಬೆಂಬಲವನ್ನು ಎದುರಿಸಿತ್ತು. ಆದರೂ ಇತರೇ ಚಿಂತನೆಗಳೂ ಸಹಾ ಈ ಸಮಾಜವಾದವನ್ನು ಬಲಪಡಿಸುವಲ್ಲಿ ಸಹಾಯಕಾರಿಯಾಗಿ ವರ್ತಿಸಿವೆ. ಈ ಎಲ್ಲಾ ಪ್ರಯತ್ನಗಳಲ್ಲಿ ಕೆಲವರು ಮಾರ್ಕ್ಸ್‌ವಾದವನ್ನು ಬಲಪಡಿಸಿದರೆ ಮತ್ತೆ ಕೆಲವರು ಮಾರ್ಕ್ಸ್‌ವಾದಕ್ಕೆ ಹೊಸ ಆಯಾಮ ನೀಡುವ ಪ್ರಯತ್ನ ಮಾಡಿದ್ದರು. ಕೆಲವರು ಮಾರ್ಕ್ಸ್‌ವಾದವನ್ನು ಕ್ರಾಂತಿಕಾರಕ ಚಿಂತನೆಯೆಂದು ಕರೆಯಬಯಸಿದರೆ, ಮತ್ತೆ ಕೆಲವರು ಇದನ್ನು ವೈಜ್ಞಾನಿಕವಾದವೆಂದು ಕರೆದರು. ಹೀಗೆ ಮಾರ್ಕ್ಸ್‌ರವರ ಅಂತ್ಯದ

ನಂತರದಲ್ಲಿ ಸಮಾಜವಾದವು ಮಾರ್ಕ್ಸ್‌ವಾದದ ಹೆಸರಿನಲ್ಲಿ ಹೆಚ್ಚು ಪ್ರಚಲಿತಗೊಂಡು ವಿರೋಧಿ ಹಾಗು ಪರ ಬಣಗಳೊಂದಿಗೆ ಇದು ಮತ್ತಷ್ಟು ಚಿಂತನೆಗೆ ಎಡೆಮಾಡಿತು. ಅದರಲ್ಲೂ ಕೆಲವು ಪ್ರಮುಖ ಚರ್ಚೆಗಳು, ಸಮಾಜವಾದದ ಸ್ಥಾಪನೆಗೆ ಯಾವ ತಂತ್ರಗಳನ್ನು ಪಾಲಿಸಬೇಕೆಂಬೆಡೆಗೆ ಒಲವನ್ನು ಹೊಂದಿದ್ದವು. ಆದರೆ ಇಂತಹ ಕಾರ್ಯವಿಸಗುವಲ್ಲಿ ಬಹಳಷ್ಟು ಚಿಂತಕರು ತಾವೇ ಮಾರ್ಕ್ಸ್‌ವಾದಿಗಳೆಂಬ ಸ್ವಪ್ರತಿಷ್ಠೆ ತೋರುತ್ತಾ ಈ ವಾದದ ಬೆಳವಣಿಗೆಗೆ ಅಡಚಣೆ ಉಂಟು ಮಾಡಿದರು. ಈ ಸಂದರ್ಭದಲ್ಲಿ ಬೆಳಕಿಗೆ ಬಂದ ವಿಕಾಸವಾದ ಮಾರ್ಕ್ಸ್‌ವಾದ ಕುರಿತು ಇಲ್ಲಿ ಚರ್ಚಿಸುವುದು ಅವಶ್ಯಕವಾಗಿದೆ.

ಹತ್ತೊಂಬತ್ತನೇ ಶತಮಾನದಂಚಿನಲ್ಲಿ ಸಮಾಜವಾದಿ ಚಳುವಳಿಯು ಎರಡು ಮುಖ್ಯ ಬಣಗಳಾಗಿ ವಿಂಗಡಣೆ ಹೊಂದಿದವು. ಒಂದು ಕ್ರಾಂತಿಕಾರಿ ಮಾರ್ಕ್ಸ್‌ವಾದವಾದರೆ ಮತ್ತೊಂದು ವಿಕಾಸವಾದಿ ಮಾರ್ಕ್ಸ್‌ವಾದ. ಕ್ರಾಂತಿಕಾರಕ ಮಾರ್ಕ್ಸವಾದವು ಕ್ರಾಂತಿಯ ಮೂಲಕ ಬಂಡವಾಳಶಾಹಿಯಗಳನ್ನು ಕಿತ್ತೊಗೆದು, ಅಲ್ಲಿ ಕಾರ್ಮಿಕ ಸರ್ವಾಧಿಕಾರ ಸ್ಥಾಪಿಸಬೇಕೆಂದು ಚರ್ಚಿಸಿದರು. ಇವರಿಗೆ ಬಂಡವಾಳಶಾಹಿಯಿಂದ ಬಂಡವಾಳ ಕಸಿದುಕೊಳ್ಳುವ ಕಕ್ಷಣದಲ್ಲಿಯೇ ಆಗಬೇಕೆಂದು ಅದು ಸಂಪೂರ್ಣವಾಗಲು ಕ್ರಾಂತಿಯೇ ದಾರಿಯೆಂಬುದು ಮೂಲಭೂತ ಚರ್ಚೆಯಾಗಿತ್ತು. ವಿಖಸನವಾದಿಗಳು ಇದೇ ತೆರನಾದ ಬದಲಾವಣೆಯನ್ನು ಶಾಂತಿಪೂರ್ಣವಾಗಿ ತರಬಯಸಿದ್ದರು. ಆದರೆ ಈ ರೀತಿ ಶ್ರಮಿಸುವಲ್ಲಿ ಇವರು ಬಂಡವಾಳಶಾಹಿಗಳನ್ನು ಕಿತ್ತೊಗೆಯುವುದಕ್ಕಿಂತಾ, ಉದಾರವಾದಿ ಚಿಂತನೆಯ ಹಿನ್ನೆಲೆಯಲ್ಲಿಯೇ ಇಂತಹಾ ಸಮಾಜವಾದಿ ಬದಲಾವಣೆ ರೂಪಿಸಲು, ಆಚರಣೆಗೆ ತರಲು ಸಾಧ್ಯವೆಂದು ಅಭಿಪ್ರಾಯಪಟ್ಟಿದ್ದರು. ಇದಕ್ಕೆ ಪ್ರಜಾಪ್ರಭುತವ ಹಾಗು ಸಂವಿಧಾನಿಕ ಮಾರ್ಗಗಳೇ ಸರಿಯಾದ ಮಾರ್ಗವೆಂದು ಇವರು ಪರಿಗಣಿಸಿದ್ದರು. ಇಂತಹ ಬದಲಾವಣೆ ತರುವಲ್ಲಿ ಜನರ ಸಮ್ಮತಿ ಅವಶ್ಯಕವೆಂದೂ ಇವರು ಭಾವಿಸಿದ್ದರು. ರಾಜ್ಯವನ್ನು ಈ ವಿಖಸನ ವಾದಿಗಳು ಬದಲಾವಣೆಗೆ ಅಗತ್ಯವಾದ ಸಂಸ್ಥೆ ಎಂದು ಪರಿಗಣಿಸಿದ್ದಾರೇ ಹೊರತು ಕ್ರಾಂತಿಕಾರಿಗಳಂತೆ ಇದೊಂದು ವರ್ಗಕಲಹ ಉಂಟುಮಾಡುವ ಸಂಸ್ಥೆ ಎಂದು ತಿಳಿದಿರಲಿಲ್ಲಾ. ಹೀಗೆ ವಿಖಸನವಾದಿ ಹಾಗು ಕ್ರಾಂತಿಕಾರಿ ಮಾರ್ಕ್ಸ್‌ವಾದಿಗಳ ನಡುವೆ ಚಿಂತನೆಯಲ್ಲಿ ಬಹುತೇಕ ವ್ಯತ್ಯಾಸಗಳಿತ್ತೆಂದು ತಿಳಿದುಕೊಳ್ಳಬಹುದಾಗಿದೆ. ಚಾರಿತ್ರಿಕವಾಗಿ ಇದೇ ವಿಖಸನವಾದಿ ಚಳುವಳಿಗೆ ರಿವಿಜನಿಸಂ ಸಮಾಜವಾದ, ಫೇಬಿಯನಿಸಂ ಸಮಾಜವಾದ, ಪ್ರಜಾಸತ್ತಾತ್ಮಕ ಸಮಾಜವಾದ, ಸಂಸದೀಯ ಸಮಾಜವಾದ ಹಾಗೂ ಸೋಷಿಯಲಿಸ್ಟ್ ಸಮಾಜವಾದವೆಂದೂ ಕರೆಯಲಾಗಿದೆ.

## ರಿವಿಜನಿಸಂ ಸಮಾಜವಾದ

ಜರ್ಮನಿಯಲ್ಲಿ ಕ್ರಾಂತಿಕಾರಿ ಮಾರ್ಕ್ಸ್‌ವಾದದ ವಿರೋಧಿ ಬಣವಾಗಿ ಬೆಳೆದ ಚಿಂತನೆಯೇ ರಿವಿಜನಿಸಂ. ಯೆರ್‌ಫುಟ್ ಕಾರ್ಯಕ್ರಮದ ನಂತರದಲ್ಲಿ ಬೆಳೆದ ಈ ಚಿಂತನೆಯೇ ಈ ಹೆಸರಿನಿಂದ ಗುರುತಿಸಲ್ಪಡುತ್ತಿದೆ. ಇವರಿಗೆ ಸಂಬಂಧಿಸಿದಂತೆ ಸಂಪ್ರಾದಾಯಿಕ ಮಾರ್ಕ್ಸ್‌ವಾದಿಗಳೂ ಸಹಾ ಇದೇ ಕಾಲದಲ್ಲಿ ಬೆಳೆದವರಾಗಿದ್ದಾರೆ. ಇವರಲ್ಲಿ ಪ್ರಮುಖರಾದವರು, ಎಡ್ವರ್ಡ್ ಬರ್ನ್‌ಸ್ಟೈನ್ ಎಂಬುವರು. (1850-1932). 1872 ರಲ್ಲಿ ಇವರು ಜರ್ಮನಿಯ ಸಮಾಜವಾದಿ ಪ್ರಜಾಪ್ರಭುತ್ವಪಕ್ಷವನ್ನು ಸೇರಿದರು. 1878ರಲ್ಲಿ ಜರ್ಮನಿಯನ್ನು ಬಿಟ್ಟು ಸುಮಾರು 22 ವರ್ಷ ಹೊರಗಿದ್ದರು. ಇದಕ್ಕೆ ಕಾರಣ ಜರ್ಮನಿಯಲ್ಲಿ ಸಮಾಜವಾದಿ ವಿರೋಧಿ ಕಾನೂನಿನ ರಚನೆಯಾಗಿತ್ತು. ಜೂರಿಕ್‌ನ ಸಂಪಾದಕರಾಗಿ ಇವರು ಸಮಾಜವಾದಿ ಪ್ರಜಾಪ್ರಭುತ್ವ ಕುರಿತಾದ ಪತ್ರಿಕೆಯನ್ನು 1878ರಿಂದ ಹೊರಡಿಸಿ ಜರ್ಮನಿಯ ಓದುಗರಿಗೆ ತಲುಪಿಸುತ್ತಿದ್ದರು. ಇದೇ ಕಾಲದಲ್ಲಿ ಇವರು ಲಂಡನ್ನಿಗೆ ಬಂದು ಸೇರಿದರು. ಒಬ್ಬ ಚರಿತ್ರೆಕಾರನಾಗಿ, ಸಿದ್ಧಾಂತಿಯಾಗಿ, ಸಮಾಜವಾದಿ ಚಳುವಳಿಯನ್ನು ಇವರು ನಿರ್ದೇಶಿಸಿದರು. ಇಂಗ್ಲೆಂಡ್‌ನಲ್ಲಿ ಇವರು ಬ್ರಿಟೀಷ್ ಸಮಾಜವಾದಿ ಚಳುವಳಿಗಾರರನ್ನು ಭೇಟಿಯಾದರು. ಅವರೊಂದಿಗೆ ಎಂಜಲ್ಸ್‌ರವರೂ ಇದ್ದರು. ಇದೇ ಕಾಲದಲ್ಲಿ ಇವರು ಫೆಬಿಯನ್ ಸಮಾಜವಾದದಿಂದಲೂ ಪ್ರಭಾವಗೊಂಡರು.

ಮಾರ್ಕ್ಸ್ ಕೂಡಾ ಲಂಡನ್ನಿನಲ್ಲಿಯೇ ತನ್ನ ಮಾರ್ಕ್ಸ್‌ವಾದಿ ಚಿಂತನೆಗಳನ್ನು ವಿಷದೀಕರಿಸಿದ್ದಲ್ಲ. ಬರ್ನ್‌ಸ್ಟೈನ್ ಅಲ್ಲಿ ಈ

ವಾದದ ಟೀಕೆಗಳನ್ನು ಬರೆದರು. ಈ ಟೀಕೆಗಳು ಪ್ರಕಟಗೊಂಡ ನಂತರದಲ್ಲಿ ಜರ್ಮನಿಯಲ್ಲಿ ಸಮಾಜವಾದಿ ಪ್ರಜಾಪ್ರಭುತ್ವವಾದಿಗಳಲ್ಲಿ ಚರ್ಚೆ ಗೊಂದಲ ಪ್ರಾರಂಭವಾಯಿತು. 1879ರಲ್ಲಿ ಬರ್ನ್‌ಸ್ಟೈನ್ ತಮ್ಮ ಚಿಂತನೆಗಳನ್ನು ಸರಿಯಾಗಿ ತಮ್ಮ 'ವಿಖಸನ ಸಮಾಜವಾದ' ಎಂಬ ಪುಸ್ತಕದಲ್ಲಿ ಬರೆದು ತಿಳಿಸಿದರು. ಹೀಗೆ ರಿವಿಜನಿಸಂ ಚಿಂತನೆಯ ಪ್ರತಿಪಾದಕರಾಗಿ ಇವರು ಬೆಳೆದು ನಿಂತರು.

ಈ ಚಿಂತನೆಯ ಪ್ರಮುಖಾಂಶಗಳು ಹೀಗಿವೆ.

1. ಬಂಡವಾಳಶಾಹಿ ಬಯಸಿದಂತೆ ಈ ಸಿದ್ಧಾಂತವು ಕುಸಿದು ಬೀಳುವುದಿಲ್ಲ. ಆದ ಕಾರಣ ಆ ನಿಟ್ಟಿನಲ್ಲಿ ಚಿಂತಿಸಿ ಪಕ್ಷಗಳು ತಮ್ಮ ಆಲೋಚನೆಗಳನ್ನು ರೂಪಿಸಿಕೊಳ್ಳುವುದು ತಪ್ಪು.
2. ಕಮ್ಯೂನಿಸ್ಟ್ ಮ್ಯಾನಿಫೆಸ್ಟೋನಲ್ಲಿ ನೀಡಿರುವ ಸಾಮಾಜಿಕ ವಿಖಸನ ಸರಿಯಾಗಿದ್ದು, ಆದರೆ ಅದರ ಅಭಿವೃದ್ಧಿಗೆ ನಿರ್ಧರಿಸಿರುವ ಕಾಲದ ಮಿತಿ ತಪ್ಪು. ಇದನ್ನು ಎಂಗೆಲ್ಸ್ ಕೂಡಾ ಒಪ್ಪುತ್ತಾರೆ ಎಂಬುದು.
3. ಮ್ಯಾನಿಫೆಸ್ಟೋನಲ್ಲಿ ತಿಳಿಸಿರುವಂತಹಾ ಸಮಾಜವಾದಕ್ಕೆ ಪ್ರಬಲವಾದ ಸಂಧಿಗ್ಧತೆ ಇನ್ನು ಬಂದಿಲ್ಲ. ಬಂಡವಾಳಶಾಹಿಗಳ ಸಂಖ್ಯೆ ಕಡಿಮೆ ಯಾಗಿಲ್ಲಾ. ಮಧ್ಯವರ್ಗ ತನ್ನ ಗುಣದಲ್ಲಿ ಬದಲಾವಣೆ ಕಂಡುಕೊಂಡಿಲ್ಲಾ.
4. ಉತ್ಪಾದನಾ ಕೈಗಾರಿಕೆಗಳು ಇನ್ನು ಸಂಪೂರ್ಣವಾಗಿ ಬೆಳೆದಿಲ್ಲ.
5. ದುಡಿಯುವ ವರ್ಗ ಕೇವಲ ಪ್ರಚೋದನೆಯಿಂದ ಬಂಡವಾಳಶಾಹಿಗಳು ತಮ್ಮನ್ನು ಶೋಷಣೆಗೆ ಒಳಪಡಿಸಿದ್ದಾರೆ ಎಂದಿದ್ದಾರೆ ಇದು ಸರಿಯಲ್ಲಾ. ಈಗಲೂ ಇವರಿಗೆ ಸಾಕಷ್ಟು ಸ್ವಾತಂತ್ರ್ಯವಿದೆ ಎಂದಿದ್ದಾರೆ.
6. ನಾವು ಗುರಿ ಸಾಧನೆಗೆ ನಿಧಾನವಾಗಿ ಚಲಿಸುವುದೇ ಉತ್ತಮ ಹೊರತು ವೇಗದಿಂದ ನಡೆದು ಮುರಿದು ಬೀಳುವುದು ಸರಿಯಿಲ್ಲವೇ.

ಹೀಗೆಲ್ಲಾ ತಮ್ಮ ಚರ್ಚೆಗಳನ್ನು ಮುಂದಿಟ್ಟಿದ್ದ ಬರ್ನ್‌ಸ್ಟೈನ್, ಕೇವಲ ಆರ್ಥಿಕ ಅಂಶಗಳಿಂದ ಬದಲಾವಣೆ ಸಾಧ್ಯವಿಲ್ಲಾ. ಇದಕ್ಕೆ ಸಾಮಾಜಿಕ ಚಿಂತನೆಯ ಅಗತ್ಯತೆಯೂ ಇದೆ ಎಂದು ಸಾರಿದ್ದಾರೆ. ಬಂಡವಾಳಶಾಹಿಗಳು ಈಗ ವೃದ್ಧಿಸುತ್ತಿದ್ದಾರೆಯೇ ಹೊರತು ಕಡಿಮೆಯಾಗಿಲ್ಲ ಎಂದೂ ಕೂಡಾ ಇವರು ತಿಳಿಸಿದ್ದರು.

ವ್ಯಾಪಾರಿ ಸಂಘಟನೆಗಳಿಗೆ ಈ ನಿಟ್ಟಿನಲ್ಲಿ ಹೆಚ್ಚಿನ ಜವಾಬ್ದಾರಿಯಿದೆ ಎಂದು ತಿಳಿಸಿದ್ದ ಇವರು, ಸರ್ವಾಧಿಕಾರದ ಮೂಲಕ ಸಮಾಜವಾದದ ಸ್ಥಾಪನೆಗೆ ತಮ್ಮ ಆಸಕ್ತಿ ವ್ಯಕ್ತಪಡಿಸಿರಲಿಲ್ಲಾ. ಇಂತಹಾ ಹೋರಾಟಗಳು ಮಾನವನ ಪ್ರಗತಿಗೆ ಕುಂಠಿತವಾಗುತ್ತದೆ ಎಂದೂ ಸಹ ಇವರು ತಿಳಿಸಿದ್ದರು. ಸಾಮಾಜಿಕ ಬದಲಾವಣೆಗೆ ಒಮ್ಮೆಲೆ ಬರಲಾರದು ಇದಕ್ಕೆ ವಿಖಸನ ಮಾರ್ಗವೇ ಸರಿಯಾದದ್ದು ಎಂದೂ ಇವರು ಅಭಿಪ್ರಾಯ ಪಟ್ಟಿದ್ದಾರೆ. ಶಾಸನ ರಚಿಸುವಿಕೆಯೇ ಇದಕ್ಕೆ ಮಾರ್ಗವೇ ಹೊರತು ಹಿಂಸೆ, ಕ್ರಾಂತಿಗಳಲ್ಲಾ ಎಂದಿದ್ದಾರೆ.

ಬೌದ್ಧಿಕ ಚಟುವಟಿಕೆಯಿಂದ ಶಾಸನಗಳನ್ನು ಮಾಡಿ ಜಾಣತನದಿಂದ ಸಮಾಜದ ಸೃಷ್ಟಿಗೆ ನಾವು ಶ್ರಮಿಸಬೇಕು. ಕ್ರಾಂತಿಯಿಂದ ನಾವು ನಮ್ಮ ಆಸ್ತಿಯನ್ನೇ ಹಾಳುಗೆಡಹುತ್ತೇವೆ ಎಂದೂ ತಿಳಿಸಿದ್ದಾರೆ.

ಒಟ್ಟಿನಲ್ಲಿ ಬರ್ನ್‌ಸ್ಟೈನ್ ಮೆಟೀರಿಯಲ್ ಇಂಟರ್‌ಪ್ರಿಟೇಷನ್ ಆಫ್ ಹಿಸ್ಟರಿ, ಆರ್ಥಿಕ ಅಂಶವೇ ಎಲ್ಲವನ್ನು ನಿರ್ಧರಿಸುವುದು, ವರ್ಗಕಲಹ, ಇವೇ ಮುಂತಾದ ಮಾರ್ಕ್ಸ್‌ವಾದಗಳನ್ನು ನೇರವಾಗಿ ಒಪ್ಪಿಕೊಳ್ಳದೇ ಪರೋಕ್ಷವಾಗಿ ಈ ಬಗ್ಗೆ ತಮ್ಮ ಚಿಂತನೆಗಳನ್ನು ವ್ಯಕ್ತಪಡಿಸಿದ್ದಾರೆ.

ಹೀಗೆ ಮಾರ್ಕ್ಸ್‌ವಾದಿ ಸಮಾಜವಾದಿಗಳಲ್ಲಿಯೇ ಭಿನ್ನಾಭಿಪ್ರಾಯಗಳು ಬಂದೊದಗಿ ಈಗ ಇದರಿಂದ ಬೆಳೆದ ಹಲವಾರು ಮಾರ್ಕ್ಸ್‌ವಾದಿ ಚಿಂತಕರು ತಮ್ಮದೇ ಆದ ಹೊಸ ಚಿಂತನೆಯನ್ನು ಈಗಾಗಲೇ ಬೆಳಕಿಗೆ ತಂದಿದ್ದಾರೆ. ವಿಕಸನ ಸಮಾಜವಾದವೂ ಕೂಡ ಇದರಲ್ಲಿ ಒಂದಾಗಿದೆ.

## 12.5 ಸಮಾಜವಾದ ಪುನರ್‌ಸಮಾಲೋಚನೆ

ಸುಧಾರಣಾವಾದಿಗಳ ಆದರ್ಶವಾಗಿ, ಸಮಾಜವಾದದ ಮೂಲ ಚಿಂತನೆಗಳು ಮೊದಲಲ್ಲಿ ಬದಲಾವಣೆ ಕಂಡು ಬೆಳಕಿಗೆ ಬಂದದ್ದು ಫ್ರಾಂಕ್‌ಫುಟ್ ಸಮ್ಮೇಳನದಲ್ಲಿ. ಇದನ್ನು ಈ ಕೆಳಕಂಡ ವಿಚಾರಗಳಲ್ಲಿ ಚರ್ಚಿಸಬಹುದು.

1. ಸಮಾಜವಾದವು ಅಂತರರಾಷ್ಟ್ರೀಯ ಚಳುವಳಿ. ಇದಕ್ಕೆ ಒಂದೇ ತೆರನಾದ ಚಳುವಳಿಯ ಅವಶ್ಯಕತೆ ಇದೆ. ಮಾರ್ಕ್ಸ್‌ವಾದವೇ ಆಗಲೀ ಬೇರೆ ವಾದವೇ ಆಗಲಿ ಇದಕ್ಕೆ ಒಂದು ಮಾಧ್ಯಮವಷ್ಟೇ. ಇವರೆಲ್ಲರೂ ಒಂದೇ ಗುರಿಗಾಗಿ ಪ್ರಯತ್ನಿಸುತ್ತಾರೆ. ಇದು ಸಾಮಾಜಿಕ ನ್ಯಾಯ, ಉತ್ತಮ ಜೀವನ, ಸ್ವಾತಂತ್ರ್ಯ ಹಾಗು ವಿಶ್ವಶಾಂತಿ.
2. ಸ್ವಾತಂತ್ರ್ಯವಿಲ್ಲದೇ ಸಮಾಜವಾದವಲ್ಲಾ ಸಮಾಜವಾದ ಪ್ರಜಾಪ್ರಭುತ್ವದ ಮೂಲಕವೇ ಸಾಧ್ಯವೆಂಬುದು ಹಾಗೆಯೇ ಪ್ರಜಾಪ್ರಭುತ್ವ ಕೂಡ.
3. ಸಮಾಜವಾದವು ಬಂಡವಾಳಶಾಹಿತ್ವವನ್ನು ತೊಡೆದುಹಾಕಿ ಎಲ್ಲರಿಗೆ ಶ್ರಮಜೀವನ ಸಾಧ್ಯವಾಗುವಂತಹ ವ್ಯವಸ್ಥೆ ರೂಪಿಸಲು ಸಾಧ್ಯವಾಗುತ್ತದೆ. ಉತ್ಪಾದನೆ ಹೆಚ್ಚಿಸಲು, ಬದುಕನ್ನು ಉತ್ತಮಗೊಳಿಸಲು, ಸಾಮಾಜಿಕ ಭದ್ರತೆ ಸ್ಥಾಪಿಸಲು, ಆಸ್ತಿ ಹಾಗೂ ಆದಾಯದ ಹಂಚಿಕೆ ಮಾಡಲು ಇದು ಉತ್ತಮ ವ್ಯವಸ್ಥೆ ಎಂದಿದ್ದಾರೆ.
4. ರಾಷ್ಟ್ರೀಕರಣದ ರೂಪವನ್ನು ಸಾರ್ವಜನಿಕ ಒಡೆತನ ನೀಡುವ ಮೂಲಕ ಮಾಡಬಹುದು. ಇದು ಸಮುದಾಯದ ಒಳಿತಿಗೆ ಇರುವ ಉತ್ತಮ ಮಾರ್ಗವೆಂದೂ ಇವರು ತಿಳಿಸಿದ್ದಾರೆ.
5. ವ್ಯಾಪಾರಸ್ಥರ ಹಾಗೂ ಉತ್ಪಾದಕರ ಸಂಘಟನೆಗಳು ಪ್ರಜಾಪ್ರಭುತವದಲ್ಲಿ ಅವಶ್ಯಕವೆಂದೂ ಇವರು ಹೇಳಿದ್ದಾರೆ.
6. ಸಮಾಜಿಕಾವಾದ ಎಂದರೆ ಉತ್ಪಾದನೆಯ ಮೂಲಗಳೆಲ್ಲಾ ಸರ್ಕಾರದ ಒಡೆತನದಲ್ಲಿರಬೇಕೆಂಬುದಲ್ಲಾ, ಆರ್ಥಿಕ ಅಧಿಕಾರವು ವಿಕೇಂದ್ರೀಕೃತಗೊಳ್ಳಬೇಕು.
7. ವ್ಯಕ್ತಿಗತವಾಗಿ ಅವರ ಶಕ್ತಿಯಾನುಸಾರ ಅವರಿಗೆ ಶ್ರಮಕ್ಕೆ ತಕ್ಕ ಫಲ ಸಮಾಜವಾದ ನೀಡುತ್ತದೆ ಎಂಬುದು.
8. ಈ ವ್ಯವಸ್ಥೆಯಲ್ಲಿ ಯಾವ ವಿಧವಾದ ವ್ಯತ್ಯಾಸಗಳು ಇರಲಿಲ್ಲ.
9. ಈ ಪ್ರಜಾಪ್ರಭುತ್ವ ಸಮಾಜವಾದದಲ್ಲಿ ಎಲ್ಲ ರೀತಿಯ ಸಾಮ್ರಾಜ್ಯಶಾಹಿತ್ವವನ್ನು ವಿರೋಧಿಸಲಾಗುತ್ತದೆ.
10. ಸ್ವಾತಂತ್ರ್ಯದೊಂದಿಗೆ ಶಾಂತಿಗಾಗಿ ಹೋರಾಟವಿರುತ್ತದೆ ಎಂಬುದು.

## ನಿಮ್ಮ ಪ್ರಗತಿ ಪರಿಶೀಲನೆ - 1

**ಸೂಚನೆ:** 1. ಈ ಕೆಳಗೆ ಬಿಟ್ಟಿರುವ ಜಾಗವನ್ನು ನಿಮ್ಮ ಉತ್ತರಕ್ಕೆ ಉಪಯೋಗಿಸಿಕೊಳ್ಳಿ.

2. ಈ ಘಟಕದ ಕೊನೆಯಲ್ಲಿ ನೀಡಿರುವ ಉತ್ತರದೊಂದಿಗೆ ನಿಮ್ಮ ಪ್ರಗತಿಯನ್ನು ಪರಿಶೀಲಿಸಿಕೊಳ್ಳಿ.

**1.ಸಮಾಜವಾದ ಎಂದರೇನು? ವಿವರಿಸಿ.**

........................................................................................................................................

........................................................................................................................................

........................................................................................................................................

........................................................................................................................................

........................................................................................................................................

........................................................................................................................................

**2. ಸಮಾಜವಾದದ ಬೆಳವಣಿಗೆಯನ್ನು ಚರ್ಚಿಸಿ.**

........................................................................................................................................

........................................................................................................................................

........................................................................................................................................

........................................................................................................................................

........................................................................................................................................

........................................................................................................................................

**3. ಸಮಾಜವಾದದ ಪುನರ್ ಸಮಾಲೋಚನೆಯನ್ನು ವಿಮರ್ಶಿಸಿ.**

........................................................................................................................................

........................................................................................................................................

........................................................................................................................................

........................................................................................................................................

........................................................................................................................................

........................................................................................................................................

## 12.6 ಸಮಾರೋಪ

ಈ ರೀತಿಯಾಗಿ ಸಮಾಜವಾದದ ಅರ್ಥ ಮತ್ತು ಬೆಳವಣಿಗೆಯೂ ರಾಜ್ಯಶಾಸ್ತ್ರದ ಚಿಂತನೆಯಲ್ಲಿ ಮತ್ತೊಂದು ತೆರನಾದ ರಾಜಕೀಯ ಆದರ್ಶದ ಚಿಂತನೆಯನ್ನು ಬೆಳೆಸಲು ಸಹಾಯಕಾರಿಯಾಯಿತು. ಒಂದೆಡೆ ಮುಕ್ತ ಮಾರುಕಟ್ಟೆಯ ಆರ್ಥಿಕ ಅಂಶವಿದ್ದರೆ ಮತ್ತೊಂದೆಡೆ ರಾಜಕೀಯ ಉದಾರವಾದವಿದೆ. ರಾಜಕೀಯ ಉದಾರವಾದವನ್ನು ರಾಜ್ಯವು ತನ್ನ ಹಿಡಿತದಲ್ಲಿ ಇಟ್ಟಿರುವ ಹಿನ್ನೆಲೆಯಲ್ಲಿ ಸಮಾಜವಾದವನ್ನು ಅರ್ಥೈಸಿಕೊಳ್ಳುವಲ್ಲಿ ಇದು ಸಹಾಯಕಾರಿಯಾಗುತ್ತದೆ.

## 12.7 ಒಟ್ಟಾರೆ ಅಭಿಪ್ರಾಯ

ಈ ಅಧ್ಯಾಯವನ್ನು ಓದಿದ ನಂತರ ಮತ್ತು ಸಮಾಜವಾದದ ವ್ಯಾಖ್ಯೆಗಳನ್ನು ಅರ್ಥೈಸಿಕೊಂಡ ನಂತರದಲ್ಲಿ ಸಮಾಜವಾದದ ಬಗ್ಗೆ ಎಲ್ಲ ತಪ್ಪು ಗ್ರಹಿಕೆಗಳನ್ನು ಬದಿಗೊತ್ತಿ ಸಮಾಜವಾದದ ನಂಬಿಕೆಗಳ ಬಗ್ಗೆ ಗಮನವಿಡುವುದು ಉತ್ತಮ.

## 12.8 ಕಠಿಣ ಪದಗಳು

ಊಳಿಗಮಾನ್ಯ : ಜಮೀನ್ದಾರಿ ಪದ್ಧತಿ

ಕೇಡು : ಕೆಟ್ಟದ್ದು

ಶ್ರಮಿಕವರ್ಗ : ಕಾರ್ಮಿಕ ವರ್ಗ

ಊಸರವಳ್ಳಿ : ಸಂದರ್ಭಾನುಸಾರ ಬಣ್ಣ ಬದಲಾಯಿಸುವ ಪ್ರಾಣಿ

## 12.9 ಕೆಲವು ಉಪಯುಕ್ತ ಗ್ರಂಥಗಳು


ಎಫ್.ಡಬ್ಲ್ಯೂ ಕಾಕರ್ : ರೀಸೆಂಟ್ ಪೊಲಿಟಿಕಲ್ ಥಾಟ್

ಎಸ್.ಪಿ. ವರ್ಮಾ : ಮಾಡರ್ನ್ ಪೊಲಿಟಿಕಲ್ ಥಿಯರಿ

ಡಾ. ಕೆ.ಜೆ. ಸುರೇಶ್ : ಆಧುನಿಕ ಸಿದ್ಧಾಂತಗಳು


## 12.10 ನಿಮ್ಮ ಪ್ರಗತಿ ಪರಿಶೀಲಿಸಿಕೊಳ್ಳಿ

ನಿಮ್ಮ ಪ್ರಗತಿ ಪರಿಶೀಲನೆ - 1

1. ನೋಡಿ ವಿಭಾಗ 12.3
2. ನೋಡಿ ವಿಭಾಗ 12.4
3. ನೋಡಿ ವಿಭಾಗ 12.5

## ಘಟಕ 13 ಸಮಾಜವಾದದ ಬಗೆಗಳು

**ರಚನೆ**

13.0 ಉದ್ದೇಶಗಳು

13.1 ಪ್ರಸ್ತಾವನೆ

13.2 ಸಮಾಜವಾದ ಅರ್ಥ ಮತ್ತು ತತ್ವಗಳು

13.3 ಸಮಾಜವಾದದ ವಿಧಗಳು

13.4 ಸಮಾಜವಾದದ ಮೌಲ್ಯಮಾಪನ

13.5 ಸಮಾರೋಪ

13.6 ಒಟ್ಟಾರೆ ಅಭಿಪ್ರಾಯ

13.7 ಕಠಿಣ ಪದಗಳು

13.8 ಕೆಲವು ಉಪಯುಕ್ತ ಗ್ರಂಥಗಳು

13.9 ನಿಮ್ಮ ಪ್ರಗತಿಯನ್ನು ಪರಿಶೀಲಿಸಿಕೊಳ್ಳಿ

## 13.0 ಉದ್ದೇಶಗಳು

ಈ ಪಠ್ಯಕ್ರಮದ ಉದ್ದೇಶವು ಸಮಾಜವಾದದಲ್ಲಿನ ವಿವಿಧತೆಗಳನ್ನು ಹೊರತರುವುದಾಗಿದೆ. ಇದು ಈ ಆದರ್ಶದ ಬದಲಾಗುತ್ತಿರುವ ಮುಖಗಳನ್ನು ಪ್ರಸ್ತುತ ಚಿಂತನೆಗೆ ಮಾಡಿಕೊಳ್ಳುತ್ತಿರುವ ಹೊಂದಾಣಿಕೆಯನ್ನು ಹಾಗೂ ಸಮಾಜದ ಆಗುಹೋಗುಗಳ ಪುನರ್ ವಿಮರ್ಶೆಗೂ ಸಹಾಯಕಾರಿಯಾಗಿದೆ. ಈ ಅಧ್ಯಯನವನ್ನು ಓದಿದ ನಂತರ ಇದರ ಕೆಲವು ಆಂತರಿಕ ಅಂಶಗಳ ಬಗ್ಗೆ ತಮಗೆ ಅರಿವಾಗುತ್ತದೆ.

## 13.1 ಪ್ರಸ್ತಾವನೆ

ಸಮಾಜವಾದ ಎಂಬ ಪದವು ವಿವಿಧ ಚಿಂತಕರಿಂದ ಬೇರೆ ಬೇರೆ ತೆರನಾಗಿ ವ್ಯಾಖ್ಯಾನಿಸಲ್ಪಟ್ಟಿದೆ. ಹೆಚ್ಚಿನ ಚಿಂತಕರು ಈ ಸಮಸ್ಯೆಯನ್ನೇ ಬದಿಗೊತ್ತಿ ವ್ಯಾಖ್ಯಾನಿಸುವುದನ್ನು ಬಿಟ್ಟಿದ್ದಾರೆ. ಆದರೂ ಇದನ್ನು ಅರ್ಥಮಾಡಿಕೊಳ್ಳಲು ಒಂದು ಚೌಕಟ್ಟಿನ ಅವಶ್ಯಕತೆ ಇದೆ. ಆಕ್ಸ್‌ಫರ್ಡ್ ಪದಕೋಶದ ಪ್ರಕಾರ ಸಮಾಜವಾದವು ಉತ್ಪಾದನಾ ಮೂಲಗಳನ್ನು ಇಡೀ ಸಮುದಾಯವೇ ಹೊಂದುವುದು ಎಂಬ ಅಭಿಪ್ರಾಯವನ್ನೇ ತಿಳಿಸುತ್ತದೆ. ಹೀಗಾಗಿ ಇಡೀ ಸಮುದಾಯವೇ ಉತ್ಪಾದನೆಯ ಮೇಲೆ ನಿಯಂತ್ರಣ ಹೊಂದುವುದೇ ಸಮಾಜವಾದ ಎನಿಸಿದೆ. ಈ ವ್ಯಾಕ್ಯೆಯೂ ಸಮಾಜವಾದದ ಪರಿಪೂರ್ಣ ಚಿಂತನೆಗಳನ್ನು ಪ್ರತಿಪಾದಿಸದಿದ್ದರೂ ಸಮಾಜವಾದವು ಜನರಲ್ಲಿ ಇಟ್ಟಿರುವ ನಂಬಿಕೆ ಹಾಗೂ ಅದನ್ನು ಅನುಸರಿಸುವ ಮಾರ್ಗ ಮತ್ತು ಗುರಿಯನ್ನು ತಿಳಿಸುತ್ತದೆ. ಈ ಬಗ್ಗೆ ಇರುವ ಹೆಚ್ಚಿನ ವ್ಯಾಖ್ಯೆಗಳನ್ನು ಸಮಾಜವಾದವನ್ನು ಕುರಿತಂತೆ ಇಂತಹುದೇ ಹೇಳಿಕೆಗಳನ್ನು ನೀಡಿದ್ದಾರೆ.

ಸಂಕ್ಷಿಪ್ತಾವಾಗಿ ಸಮಾಜವಾದವು ಆರ್ಥಿಕ ಸಂಘಟನೆ ಸಾಮಾಜಿಕ ಪುನರ್‌ರಚನೆಯನ್ನು ಸರಿಯಾದ ರಾಜಕೀಯ ವ್ಯವಸ್ಥೆಯ ಮೂಲಕ ತನ್ನ ಮುಂದೆ ಇರುವ ಅತ್ಯಂತ ಹಿರಿದಾದ ಉತ್ಪಾದನಾ ಮೂಲಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಬರೆಯಲಾಗಿದೆ. ಸಾರ್ವಜನಿಕ ಹಿತಾಸಕ್ತಿಯನ್ನು ಕಾಪಾಡುವುದು ಸಮಾಜವಾದದ ಮುಖ್ಯ ಕಾರ್ಯವಾಗಿದೆ. ಇದೇ ಕಾರಣಕ್ಕಾಗಿ ಸ್ವಾತಂತ್ರ್ಯ ಮತ್ತು ಸಮಾನತೆಗಳನ್ನು ಪ್ರತಿಪಾದಿಸುವ ಈ ಚಿಂತನೆಯೂ ಬಹಳ ಬೇಗನೆ ಬರಿದಾದ ಆದರ್ಶವಾಗಿದೆ. ಮತ್ತು ತನ್ನ ಚಿಂತನೆಯ ಮೂಲಕ ಇದು ಸಮಾಜದ ಆರ್ಥಿಕ ಹಾಗೂ ಸಾಮಾಜಿಕ ಜೀವನದ ಪರಿವರ್ತನೆಗೆ ಪ್ರಯತ್ನಿಸಿದೆ.

ಇಂತಹುದೇ ಪ್ರಶ್ನೆಯನ್ನು ಕೇಂದ್ರವಾಗಿರಿಸಿಕೊಂಡು ಈ ಸಮಾಜವಾದಗಳಿಂದ ವೈವಿಧ್ಯತೆಯಿಂದ ಕೂಡಿದ್ದು ಈ ವಿವಿಧತೆಗಳನ್ನು ಅರ್ಥಮಾಡಿಕೊಳ್ಳುವುದರ ಮೂಲಕ ಸಮಾಜವಾದದ ಮೂಲಾರ್ಥವನ್ನು ನಾವೀಗ ಅರ್ಥೈಸಿಕೊಳ್ಳಬೇಕಾಗಿದೆ.

## 13.2 ಸಮಾಜವಾದ: ಅರ್ಥ ಹಾಗೂ ತತ್ವಗಳು

ವ್ಯಕ್ತಿವಾದದ ವಿರೋಧಿಯಾಗಿ ಬೆಳೆದ ಈ ತತ್ವವು ಉತ್ಪಾದನಾ ಮೂಲಗಳನ್ನು ರಾಜ್ಯದ ನಿಯಂತ್ರಣದಡಿಯಲ್ಲಿ ಇರಿಸುವಲ್ಲಿ ನಂಬಿಕೆ ಹೊಂದಿದೆ. ಈ ನಿಯಂತ್ರಿತ ಉತ್ಪಾದನೆ ಹಾಗೂ ಹಂಚಿಕೆಯನ್ನೇ ಸಮಾಜವಾದವೆಂದು ಕರೆಯುತ್ತಾರೆ. ಹೀಗೆ ಆರ್ಥಿಕ ಚಟುವಟಿಕೆಗಳನ್ನು ವ್ಯಕ್ತಿಗತವಾದ ನಿಯಂತ್ರಣದಿಂದ ಹೊರತಾಗಿಸಿ ಅದನ್ನು ವಿವಿಧ ಆರ್ಥಿಕ ಗುಂಪುಗಳ ಹಿಡಿತದಲ್ಲಿ ನೀಡುತ್ತಾರೆ. ಇಂತಹ ತತ್ವವು ಸಾಧಾರಣವಾಗಿ ಹೆಚ್ಚಿನಂಶ ಅರ್ಥಶಾಸ್ತ್ರದಿಂದ ರಾಜಕೀಯ ಚಿಂತನೆಯೆಡೆಗೆ ತನ್ನ ಪ್ರಭಾವವನ್ನು ಬೀರುತ್ತದೆ. ಒಂದು ಆರ್ಥಿಕ ಪುನರ್ ರಚನಾ ಚಿಂತನೆಯಾಗಿ ಸಮಾಜವಾದವು ಹಳೆಯ ಚಿಂತನೆಯಾಗಿದ್ದರೂ ರಾಜಕೀಯವಾಗಿ ಇದೊಂದು ಹೊಸ ಚಿಂತನೆಯಾಗಿದೆ ಮತ್ತು ಕೈಗಾರಿಕಾ ಕ್ರಾಂತಿಯ ಹಿನ್ನೆಲೆಯಲ್ಲಿ ಬೆಳಕಿಗೆ ಬಂದಿದೆ. 19ನೇ ಶತಮಾನದ ಚಿಂತಕರಾದ ರಾಬರ್ಟ್ ಓವನ್, ಥಾಮಸನ್, ಸೇಂಟ್ ಸೈಮನ್ ಪೌರಿಯರ್, ಕ್ಯಾಬೆ, ಬ್ಲೇರ್ ಇವರುಗಳು ಈ ಚಿಂತನೆಯನ್ನು ಕುರಿತು ಹಲವಾರು ಆದರ್ಶ

ಚಿಂತನೆಗಳನ್ನು ಪ್ರತಿಪಾದಿಸಿದ್ದಾರೆ. ಆದರೆ ಈ ಚಿಂತನೆಗಳು ಈ ತತ್ವದ ಅಭಿವೃದ್ಧಿಗೆ ಪೂರಕವಾಗಿದ್ದು ದೂರದೃಷ್ಟಿ ಹೊಂದಿದವುಗಳಾಗಿವೆ. ಓವನ್ ಸ್ಪರ್ಧಾತ್ಮಕ ಪದ್ಧತಿಯನ್ನು ತೊರೆದು ಸಹಕಾರಾತ್ಮಕ ಪದ್ಧತಿಯನ್ನು ತರಲು ಪ್ರಯತ್ನಿಸಿದರೆ ಸೇಂಟ್ ಸೈಮನ್ ಊಳಿಗಮಾನ್ಯ ಮತ್ತು ಪುರೋಹಿತಶಾಹಿ ವರ್ಗವನ್ನು ತೊಡೆದುಹಾಕಿ ಕೈಗಾರಿಕಾ ರಾಜ್ಯವನ್ನು ಹುಟ್ಟುಹಾಕಲು ಪ್ರಯತ್ನಿಸಿದರು. ಈತ ಊಳಿಗಮಾನ್ಯ ಶ್ರೀಮಂತರನ್ನು ತೊಡೆದು ಪ್ರಜ್ಞಾವಂತ ದುಡಿಮೆಗಾರರ ಸರ್ಕಾರದ ರಚನೆಗೆ ಪ್ರಯತ್ನಿಸಿದನು. ಫೌರಿಯರ್ ಸಮಾಜವನ್ನು ಸ್ವತಂತ್ರ ಗುಂಪುಗಳ ಆಧಾರದ ಮೇಲೆ ರಚಿಸಿ ಒಂದೊಂದು ಗುಂಪಿನಲ್ಲಿ 1620 ಜನರಷ್ಟೇ ಇರಬೇಕು ಇದಕ್ಕೆ ಫೆಲ್‌ನಾಕ್ಸ್ ಗುಂಪುಗಳೆಂದು ಕರೆಯಬೇಕು ಮತ್ತು ಈ ಗುಂಪಿನಲ್ಲಿ ಇರುವವರು ತಮಗೆ ಇಷ್ಟವುಳ್ಳ ಕೆಲಸವನ್ನು ಮಾಡಬೇಕೆಂದು ಕರೆ ನೀಡಿದನು. ಇಂತಹ ಗುಂಪುಗಳು ಕಾರ್ಯವೆಸಗುವಲ್ಲಿ ಯಾವುದೇ ಸರ್ಕಾರವು ಇರುವುದಿಲ್ಲ ಮತ್ತು ರಾಜ್ಯವು ತೊಡೆದು ಹಾಕಲ್ಪಟ್ಟಿದ್ದು ಅಲ್ಲಿ ಫೆಲಿನಾಕ್ಸ್‌ಗಳು ಅಸ್ತಿತ್ವಕ್ಕೆ ಬಂದಿರುತ್ತವೆ. ಕ್ಯಾಬೆ ಪ್ರಕಾರ ಎಲ್ಲ ಸಾಮಾಜಿಕ ಸಂಘ ಸಂಸ್ಥೆಗಳು ಸಂಸಾರ ಹೊರತಾದಂತೆ ರಾಷ್ಟ್ರೀಕರಣವಾಗಿರಬೇಕು ಮತ್ತು ಎಲ್ಲರು ಒಪ್ಪುವಂತ ಚಿಂತನೆಯ ಮೇಲೆ ಸರ್ಕಾರ ತನ್ನ ಕಾರ್ಯವನ್ನು ಎಸಗಬೇಕು ಎಂದಿದ್ದಾರೆ.

ಈ ಚಿಂತಕರು ಹೇಗೆ ತಿಳಿಸದ ಆಲೋಚನೆಗಳು ವಾಸ್ತವಿಕ ಅಸ್ತಿತ್ವದಲ್ಲಿ ತರಲು ಸಾಧ್ಯವಿಲ್ಲದಿದ್ದುದರಿಂದ ಇವು ಅರಾಜಕತಾವಾದದಂತೆ ಕಂಡು ಬಂದವು. ಹೀಗೆ ಇವರು ಪ್ರತಿಪಾದಿಸಿದ ಸಮತಾವಾದವು ಸಮಾಜವಾದಿ ಚಿಂತನೆಯ ಲಕ್ಷಣಗಳನ್ನು ಹೊಂದಿತ್ತು. ಇಂತಹುದೇ ಚಿಂತಕರ ಮತ್ತೊಂದು ಗುಂಪು ಕ್ರಿಶ್ಚಿಯನ್ ಸಮಾಜವಾದಿಗಳೆನಿಸಿ ಪ್ರಚಲಿತಗೊಂಡರು. ಇವರಲ್ಲಿ ಪ್ರಮುಖರೆಂದರೆ ಡೇಲೇಮಿನಿಯಾ ಸಿಸ್, (ಫ್ರಾನ್ಸ್) ಕಿಂಗ್‌ಸ್ಲೇ ಮತ್ತು ಮಾರಿಸ್ (ಇಂಗ್ಲೆಂಡ್) ಲೇಮೇನಾಸಸ್ ಚರ್ಚ್ ಮತ್ತು ರಾಜತ್ವದ ನಡುವೆ ಹೊಂದಾಣಿಕೆ ತರಬೇಕು ಆದರೆ ರಾಜತ್ವಕ್ಕೆ ಚರ್ಚ್ ಮೂಲಕ ಸವಾಲುಗಳನ್ನು ಎಸೆದು ಮುಂಬರಬೇಕೆಂದು ಕರೆ ನೀಡಿದರು. ರಾಜತ್ವ ಇವನ ಪ್ರಕಾರ ಒಂದು ಶೋಷಿತ ವ್ಯವಸ್ಥೆ ಆದರೆ ಧಾರ್ಮಿಕ ಪಾತ್ರ ವಹಿಸುವವರು ಆರ್ಥಿಕ ಮತ್ತು ರಾಜಕೀಯದ ಬಗ್ಗೆ ಪ್ರಜ್ಞೆಯುಳ್ಳವರಾಗಿ ಧಾರ್ಮಿಕ ಅಂಶಗಳ ಮುಖಾಂತರ ಸಹಕಾರಿ ಮನೋಭಾವನೆಯನ್ನು ಏರ್ಪಡಿಸಬೇಕೆಂದಿದ್ದರು. ಇವರು ಜನಸಾಮಾನ್ಯರ ಸಮಸ್ಯೆಗಳು ರಾಜತ್ವ ಮತ್ತು ಬಂಡವಾಳಶಾಹಿತ್ವದ ಕಾರಣಗಳಿಗಾಗಿ ಬರುತ್ತದೆಂದು ಹೇಳಿದರು. ಕ್ರಿಶ್ಚಿಯನ್ ಚರ್ಚೆಗಳನ್ನು ಕುರಿತು ಇವರು ಅವು ಸಮಾಜದಲ್ಲಿ ದ್ವಿಪಾತ್ರ ವಹಿಸುತ್ತದೆ. ಒಂದೆಡೆ ಧಾರ್ಮಿಕ ವಿಷಯಗಳನ್ನು ಇವು ಚರ್ಚಿಸಿದರೆ ಮತ್ತೊಂದೆಡೆ ಇವು ಆರ್ಥಿಕ ಅಂಶಗಳನ್ನು ಪ್ರತಿಪಾದಿಸುತ್ತವೆ ಎಂದಿದ್ದಾರೆ. ಇವರ ಪ್ರಕಾರ ಕಾರ್ಮಿಕ ವರ್ಗದಲ್ಲಿ ಸಹಕಾರ ಸಂಘಟನೆಗಳನ್ನು ರಚಿಸುವುದು ಚರ್ಚ್‌ನ ಕೆಲಸವಾಗಿದ್ದು ಇವು ಜನರ ಸಮಸ್ಯೆಗಳನ್ನು ಬಂಡವಾಳಶಾಹಿಗಳಿಗೆ ಮತ್ತು ಆಳುವ ವರ್ಗಗಳಿಗೆ ತಿಳಿಸುತ್ತದೆ ಎಂದಿದ್ದಾರೆ. ಹೀಗೆ ಇಂಗ್ಲೆಂಡಿನ ಕ್ರಿಶ್ಚಿಯನ್ ಸಮಾಜವಾದಿಗಳು ಓವನ್‌ರವರ ಚಿಂತನಾ ಹಾದಿಯಲ್ಲಿ ತಮ್ಮ ಚರ್ಚೆಗಳನ್ನು ಮುಂದುವರೆಸಿದ್ದರು. ಆದರೆ, ಜನರ ಸರ್ವಾಧಿಕಾರಕ್ಕೆ ಇಲ್ಲಿ ಹೆಚ್ಚಿನ ಬೆಲೆ ಇರಲಿಲ್ಲ. ಕಿಂಗ್‌ಸ್ಲೇ ಈ ಚಿಂತಕರೊಂದಿಗೆ ಇದ್ದ ತೀವ್ರಗಾಮಿ ಚಿಂತಕನಾಗಿದ್ದರೂ ಮೌರಿಸ್‌ನೊಂದಿಗೆ ಸೇರಿ ಕ್ರಿಶ್ಚಿಯನ್ ಧಾರ್ಮಿಕತೆಗೆ ನೇರವಾಗಿ ರಾಜಕೀಯ ಆರ್ಥಿಕ ಪ್ರಶ್ನೆಗಳು ಸಂಬಂಧವಿರುವುದಿಲ್ಲ ಆದರೂ ಜನರ ಉತ್ತಮ ಜೀವನಕ್ಕಾಗಿ ಇವರು ಈ ಚಿಂತನೆಗಳಿಗೂ ಪ್ರಾಮುಖ್ಯತೆಯನ್ನು ನೀಡುತ್ತಾರೆ ಎಂದಿದ್ದಾರೆ. ಆದರಿಂದ ಇವರ ಚರ್ಚೆಗಳಾದ ಸ್ವಾತಂತ್ರ, ಭ್ರಾತೃತ್ವ ಸಮಾನತೆ ಇವುಗಳು ಬಹುತೇಕ ಆಧ್ಯಾತ್ಮಿಕ ಚಿಂತನೆಗಳಾಗಿದ್ದ ಪ್ರತಿಯೊಬ್ಬ ವ್ಯಕ್ತಿಗೂ ಅಭಿವೃದ್ಧಿ ಹೊಂದಲು ಅವಕಾಶವನ್ನು ಇದು ನೀಡುತ್ತದೆ ಎಂದಿದ್ದಾರೆ.

ಕ್ರಿಶ್ಚಿಯನ್ ಸಮಾಜವಾದಿಗಳು ಈ ರೀತಿಯಾಗಿ ಜನರಲ್ಲಿ ಸಾಮಾನ್ಯ ಚಳುವಳಿ ಸಹಕಾರ ಮನೋಭಾವನೆ, ಕಾರ್ಮಿಕ ಹೊಂದಾಣಿಕೆ ಇವುಗಳೆಲ್ಲವೂ ಸಹಕಾರ ಸಂಘಟನೆಗಳ ನಿಯಂತ್ರಿಸುವ ಕಾನೂನುಗಳನ್ನು ಪ್ರತಿಪಾದಿಸಲು ಸಹಾಯಕಾರಿಯಾಗಿದ್ದು ಮಾನವನು ಉತ್ತಮ ಜೀವನ ನಡೆಸುವಲ್ಲಿ ಚರ್ಚುಗಳು ಸಹಾಯವಾಗುತ್ತದೆಂದು ಗುರುತಿಸಿದ್ದಾರೆ. ಹೀಗೆ ಚರ್ಚುಗಳ ಮತ್ತು ಕ್ರಿಶ್ಚಿಯನ್ ಸಮಾಜವಾದಿ ಪತ್ರಿಕೆಗಳ ಮುಖಾಂತರ ಇದರ ಸದಸ್ಯತ್ವದ ಬೆಳವಣಿಗೆಗೆ ಇವರು ಪ್ರಯತ್ನಿಸಿದರು. 1848ರಲ್ಲಿ

ಕಾರ್ಲ್‌ಮಾರ್ಕ್ಸ್ ಮತ್ತು ಎಂಗೆಲ್ಸ್ ತಮ್ಮ ಬರಹಗಳಿಂದ ಸಮಾಜವಾದಿ ಸಿದ್ಧಾಂತಕ್ಕೆ ವೈಜ್ಞಾನಿಕ ಮತ್ತು ಜನಪ್ರಿಯ ತಳಹದಿಗಳನ್ನು ನೀಡಿದರು. ಈ ಚಿಂತನೆಗಳು ಇಂದು ವೈವಿಧ್ಯತೆಯಿಂದ ಕೂಡಿದ್ದರೂ ಸಹಾ ಸಮಾಜವಾದಿ ಎಂಬ ಮೂಲ ಆಲೋಚನೆಯೂ ಫೇಬಿಯಾನಿಸಮ್, ಗಿಲ್ಡ್ ಸಮಾಜವಾದ, ಕಲೆಕ್ಟಿವಿಸಂ, ಮಾರ್ಕ್ಸ್ ಸಮಾಜವಾದ, ಸಮಾಜವಾದ ಎಂಬ ವಿವಿಧ ಹೆಸರುಗಳಿಂದ ಪ್ರಚಲಿತವೂ ಆಗಿದ್ದೂ ಕ್ಲಿಷ್ಟತೆಗೂ ಕಾರಣವಾಗಿದೆ. ಇದಕ್ಕಾಗಿಯೇ ಸಿ.ಎಂ.ಬೋಡ್‌ರವರು ಸಮಾಜವಾದವು ನೂರಾರು ಜನರು ಬಳಸಿದ ಟೊಪ್ಪಿಗೆಯಾಗಿ ಇಂದು ತನ್ನ ಆಕಾರವನ್ನು ಕಳೆದುಕೊಂಡಿದೆ ಎಂದಿದ್ದಾರೆ.

ಸಮಾಜವಾದವನ್ನು ನಿಖರವಾಗಿ ವ್ಯಾಖ್ಯಾನಿಸುವುದು ಕಷ್ಟಸಾಧ್ಯವೆಂದು ವರದಿ ಮಾಡಲಾಗಿದೆ. ಈ ಬಗ್ಗೆ ಯಾವುದೇ ನಿಶ್ಚಿತ ಅಭಿಪ್ರಾಯ ತಿಳಿಸಲಾಗಿಲ್ಲ. ಸಮಾಜವಾದವನ್ನು ಯಾರು ಹೇಗೆ ಅರ್ಥೈಸಿಕೊಳ್ಳುವರೋ ಅದರಂತೆ ಅದನ್ನು ತಿಳಿದುಕೊಳ್ಳಬಹುದಾಗಿದೆ ಎಂದಿದ್ದಾರೆ. ಹೀಗೆ ಸಮಾಜವಾದದ ನಿಖರತೆಯ ಪ್ರಶ್ನೆಯು ಅದನ್ನು ವ್ಯಾಖ್ಯಾನಿಸುವಲ್ಲಿ ಬಹಳಷ್ಟು ಸಮಸ್ಯೆಗೆ ಈಡು ಮಾಡಿದೆ. ಹೀಗಾಗಿ ಈ ಕೆಳಕಂಡ ಕೆಲವು ವ್ಯಾಖ್ಯಾನಗಳು ಸಮಾಜವಾದವನ್ನು ತಿಳಿಸುವಲ್ಲಿ ಸಹಾಯಕಾರಿಯಾಗಿದೆ.

1. ಸಮಾಜವಾದವು ವ್ಯಕ್ತಿಗಿಂತಾ ಹೆಚ್ಚಾಗಿ, ಸಮಾಜಕ್ಕೆ ಪ್ರಾಮುಖ್ಯತೆ ನೀಡಿದೆ ಎಂಬುದು. ಫ್ರೆಡ್ ಬ್ರೆಮ್ಲಿಯವರ ಪ್ರಕಾರ, ವ್ಯಕ್ತಿಗೆ ಸಮಾಜದಲ್ಲಿನ ಆಸಕ್ತಿಯೇ ಸಮಾಜವಾದವೆಂಬುದು. ಇಲ್ಲಿ ಸಮಾಜದ ಒಳಿತೇ ಹೊರತು ಲಾಭವು ಪ್ರಮುಖವಲ್ಲ ಎಂದಿದ್ದಾರೆ.

2. ಸಮಾಜವಾದವು ಬಂಡವಾಳಶಾಹಿತ್ವವನ್ನು ತೊಡೆದು ಹಾಕುತ್ತದೆ ಎಂಬುದು. ಇವರು ಬಂಡವಾಳಶಾಹಿಯನ್ನು ಸಮಾಜದ ಶತ್ರುಗಳೆಂದು ಪರಿಗಣಿಸುತ್ತಾರೆ. ಇದು ಅಸಮಾನ ಸಮಾಜಕ್ಕೆ ಎಡೆ ಮಾಡಿದೆ ಎಂಬುದು.

3. ಸಮಾಜವಾದವು ಅಸಮಾನವಾದ ಸ್ಪರ್ಧೆಯನ್ನು ತೊಡೆದು ಹಾಕುವುದು ದುಂದುವೆಚ್ಚವನ್ನು ತಡೆಯುವುದು, ಆದಾಯದಲ್ಲಿನ ವ್ಯತ್ಯಾಸಗಳನ್ನು ಮೊಟಕುಗೊಳಿಸುವುದು, ಹಾಗು ಸ್ಪರ್ಧೆಯ ಬದಲು, ಸಹಕಾರವನ್ನು ಹೆಚ್ಚು ಮಾಡುವುದೆಂದು ತಿಳಿಸಿದ್ದಾರೆ.

4. ಸಮಾಜವಾದವು ಎಲ್ಲರಿಗೂ ಸಮಾನತೆ ಸಾಧಿಸಲು ಸಹಾಯಕಾರಿಯಾಗುವುದೆಂದು ತಿಳಿಸಿದೆ. ಸಮಾನತೆ ಆರ್ಥಿಕವಾಗಿದ್ದು ಎಲ್ಲ ಜನರ ನಡುವೆ ಸಮಾನತೆ ಅಭಿವೃದ್ಧಿಗೊಳಿಸಬಹುದಾಗಿದೆ ಎಂದೂ ಇವರು ತಿಳಿಸಿದ್ದಾರೆ.

5. ಸಮಾಜವಾದವು ಉತ್ಪಾದನಾ ಮೂಲಗಳನ್ನು ಸಾರ್ವಜನಿಕರ ಹಿಡಿತಕ್ಕೆ ಒಪ್ಪಿಸುತ್ತದೆ. ಖಾಸಗೀ ಒಡೆತನವನ್ನು ತೊಡೆದು ಹಾಕುತ್ತದೆ. ರಾಷ್ಟ್ರೀಯತೆಗೆ ಪ್ರಾಮುಖ್ಯತೆ ನೀಡುತ್ತದೆ ಎಂದಿದ್ದಾರೆ.

6. ಇವರ ಪ್ರಕಾರ ಭೂ ಒಡೆತನವು ಸಮುದಾಯದ ಒಡೆತನಕ್ಕೆ ಸೇರಿದ ಬೇಕೆಂಬುದು. ಇವೇ ಮುಂತಾದವುಗಳಾಗಿವೆ.

## 13.3 ಸಮಾಜವಾದದ ವಿಧಗಳು

ಸಾಧಾರಣವಾಗಿ ಸಮಾಜವಾದ ಎಂದಾಕ್ಷಣ, ವಿಕಸನ ಸಮಾಜವಾದವನ್ನು ದೃಷ್ಟಿಯಲ್ಲಿರಿಸಿಕೊಳ್ಳಲಾಗುತ್ತದೆ. ಇದು ತನ್ನ ವಿಖಸನದಲ್ಲಿ ಕಂಡುಕೊಂಡ ವಿವಿಧತೆಗಳನ್ನೇ ಸಮಾಜವಾದದ ವಿಧಗಳೆಂದೂ ಗುರುತಿಸಲಾಗಿದೆ.

ಕ್ರಾಂತಿಕಾರಿ ಸಮಾಜವಾದವನ್ನು ವಿಖಸನ ಸಮಾಜವಾದದಿಂದ ವಿಭಿನ್ನವೆಂದು ಗುರುತಿಸಲಾಗಿದೆ. ಇದು ಬಂಡವಾಳಶಾಹಿತ್ವವನ್ನು ತೊಡೆದು ಹಾಕಲು ಅವಶ್ಯಕವೆಂದೇ ತಿಳಿಸಿದ್ದಾರೆ. ಆದಾಗ್ಯೂ ವಿಖಸನ ಸಮಾಜವಾದವು ಬಂಡವಾಳಶಾಹಿತ್ವ ಹಾಗೂ ಸಮಾಜವಾದಿ ಚಿಂತನೆಗಳ ಸಮಾವೇಶವೆಂದಿದ್ದಾರೆ. ಹಾಗಾಗಿ ಇಂತಹಾ ವ್ಯವಸ್ಥೆಯನ್ನು ಉದಾರವಾದಿ ವ್ಯವಸ್ಥೆ ಎಂದೂ ಹೇಳಿದ್ದಾರೆ.

ಇಂತಹಾ ಸಮಾಜವಾದವು ಪ್ರಸ್ತುತದಲ್ಲಿನ ಸಮಾಜವ್ಯವಸ್ಥೆಯನ್ನು ತಿರಸ್ಕರಿಸಿ ವಿರೋಧ ವ್ಯಕ್ತಪಡಿಸುವುದರಿಂದ ಇದನ್ನು ಮಾರ್ಕ್ಸ್‌ವಾದ ಸಮಾಜವಾದವೆಂದೂ ಇದನ್ನು ಗುರುತಿಸಲಾಗಿದೆ.

ವಿಖಸನ ಸಮಾಜವಾದವು ಪ್ರಜಾಪ್ರಭುತ್ವದ ಹಾದಿಯನ್ನು ಅನುಸರಿಸಿ ಇದು ಉಳ್ಳದಿರುವವರ ಒಳಿತಿಗಾಗಿ ಶ್ರಮಿಸುತ್ತಾ ಶ್ರಮಿಕ ವರ್ಗ, ಕಾರ್ಮಿಕವರ್ಗಗಳಿಗಾಗಿ ಇದು ಪ್ರಯತ್ನಿಸಿದರೆ, ಮಾರ್ಕ್ಸ್‌ವಾದಿ ಚಿಂತನೆಯು ಹಿಂಸಾಚಾರವನ್ನು ಪ್ರತಿಪಾದಿಸಿ ಬದಾಲವಣೆಗೆ ಚರ್ಚಿಸುತ್ತಿದೆ, ಹೀಗಾ 'ಕ್ರಾಂತಿ' ಎಂಬ ಚಿಂತನೆಯು ಈ ಮೂಲಚಿಂತನೆಯ ತಳಹದಿಯಾಗಿದ್ದು ವಿಖಸನ ಹಾಗು ಮಾರ್ಕ್ಸ್‌ವಾದಿ ಚರ್ಚೆಗಳ ಬದಲಾವಣೆಗೆ ನಾಂದಿಯಾಗಿದೆ.

ಮುಂದುವರೆದು ಗಮನಿಸಿದರೆ, ವಿಖಸನ ಸಮಾಜವಾದವು ಕಾರ್ಮಿಕ ವರ್ಗದ ಹಕ್ಕಿಗಾಗಿ ಶ್ರಮಿಸುವುದರೊಂದಿಗೆ ಸಮಗ್ರ ಸಮಾಜದ ಹಿತಕ್ಕಾಗಿ ಶ್ರಮಿಸುತ್ತದೆ. ಹೀಗೆ, ಶ್ರಮಿಕ ವರ್ಗದ ಹಾಗು ಸಮಾಜದಲ್ಲಿನ ಇತರೇ ವರ್ಗಗಳ ಹಿತಾಸಕ್ತಿಗಳ ಸಮ್ಮಿಳನಕ್ಕೆ ಇದು ಪ್ರಯತ್ನಿಸಿ, ಸೌಹಾರ್ದತೆಗೆ ಸಮಾನತೆಗೆ, ಸಾಮಾಜಿಕ ಸಂಬಂಧಗಳಿಗೆ ಹೆಚ್ಚಿನ ಒತ್ತು ನೀಡುವ ಮೂಲಕ ಆಧುನಿಕ ಉದಾರವಾದಿ ಚಿಂತನೆಗೆ ಅನೇಕ ಹೋಲಿಕೆ ಹೊಂದಿದೆ.

ಇದಕ್ಕೆ ವಿರೋಧವಾಗಿ ಕ್ರಾಂತಿಕಾರಕ ಸಮಾಜವಾದವು ಸಮಾನತೆಯನ್ನು ತಿರಸ್ಕರಿಸಿ, ಬಂಡವಾಲಶಾಹಿಯ ಸ್ಥಾನಮಾನಗಳನ್ನು ಸಂಪೂರ್ಣವಾಗಿ ಬುಡಮೇಲುಗೊಳಿಸುವ ಯೋಜನೆ ಹೊಂದಿರುತ್ತದೆ. ಹೀಗೆ ಮಾಡುವುದರ ಮೂಲಕ ಇದು ಸಮಾನವಾದ, ವರ್ಗರಹಿತ ಸಮಾಜದ ಅಸ್ತಿತ್ವಕ್ಕೆ ಪ್ರಯತ್ನಿಸುತ್ತದೆ.

## ಯುಟೋಪಿಯನ್ ಹಾಗು ವೈಜ್ಞಾನಿಕ ಸಮಾಜವಾದ

ಸಮಾಜವಾದವು 20ನೇ ಶತಮಾನದ ಹತ್ತಿರದಲ್ಲಿ ಅಸಮಾನತೆ, ಅನ್ಯಾಯ, ಶೋಷಣೆಯನ್ನು ಕೈಗಾರಿಕಾ ಅಭಿವೃದ್ಧಿ ಹೊಂದಿದ ಸಮಾಜಗಳಲ್ಲಿ ತೊಡೆದು ಹಾಕಲು ಅಸ್ಥಿತ್ವಕ್ಕೆ ಬಂದಿತು. ಆದರೂ, ಕೆಲವು ಬರಹಗಾರರು ಈ ಚಿಂತನೆಯನ್ನು 19ನೇ ಹಾಗೂ 18ನೇ ಶತಮಾನದಲ್ಲೆ ಅಸ್ತಿತ್ವಕ್ಕೆ ಬಂದಿತೆಂದು ಚರ್ಚಿಸಿದ್ದಾರೆ.

## ಯುಟೋಪಿಯಾ ಪರಿಕಲ್ಪನೆ

ಇದೊಂದು ಕನಸಿನ ಅಥವಾ ಆದರ್ಶ ರಾಜ್ಯವಾಗಿದ್ದು ಇಲ್ಲಿ ಒಂದು ರೀತಿಯ ಮಾದರಿ ತೆರನಾದ ರಾಜಕೀಯ ವ್ಯವಸ್ಥೆ ಹಾಗು ಸಾಮಾಜಿಕ ವ್ಯವಸ್ಥೆ ಇರುತ್ತದೆ. ಥಾಮಸ್ ಮೂರ್‌ರವರ ಬರಹವು ಒಂದು ಉತ್ತಮ ಮಾದರೀ ಸಮಾಜ ಹಾಗು ರಾಜಕೀಯ ವ್ಯವಸ್ಥೆಯನ್ನು ಪ್ರತಿಪಾದಿಸಿದೆ. ಆದರೆ, ಅದನ್ನು ಆಚರಣೆಗೆ ತರಲಾಗುವುದಿಲ್ಲಾ, ಹೀಗೆ ಹಲವಾರು ಬರಹಗಾರರು ತಮ್ಮ ವಾಸ್ತವಿಕ ಪ್ರಪಂಚದ ವ್ಯವಸ್ಥೆಯ ಬಗ್ಗೆ ತಮ್ಮ ಅನಾಸಕ್ತಿಗಳನ್ನು ಪ್ರದರ್ಶಿಸಲು ಮಾದರೀ ವ್ಯವಸ್ಥೆಗಳ ಬಗ್ಗೆ ಬರಹಗಳ ಮೂಲಕ ತಮ್ಮ ವಿಚಾರ ವ್ಯಕ್ತಪಡಿಸಿರುವುದು ಕಂಡು ಬರುತ್ತದೆ. ಪ್ಲೇಟೋರವರ ರಿಪಬ್ಲಿಕ್ ಸಹಾ ಇದರಂತೆಯೇ ಒಂದು ಯುಟೋಪಿಯಾ. ಆದರೂ ಪ್ಲೇಟೋರವರ ರಿಬಬ್ಲಿಕ್‌ನ್ನು ಸಮಾಜವಾದಿ ಬರಹವೆಂದು ಗುರುತಿಸಲು ಸಾಧ್ಯವಿಲ್ಲ.

## ಆಧುನಿಕ ಸಮಾಜವಾದದ ಹುಟ್ಟು

ಸಮಾಜದಲ್ಲಿನ ಉತ್ಪಾದನ ಮೂಲಗಳನ್ನು ಸಮುದಾಯದ ಹಿಡಿತ/ಒಡೆತನದಲ್ಲಿ ಇಡುವುದು, ಸಾಮಾನ್ಯರ ಬಳಕೆಗಾಗಿ ಬಳಸುವುದು ನಿಜಕ್ಕೂ ಹೊಸ ರೀತಿಯ ಚಿಂತನೆಯಾಗಿದೆ.

ಸಂಪ್ರದಾಯ ಉದಾರವಾದಿತ್ವದ ಸೋಲಿನಿಂದ ಬೆಳೆದುಬಂದ ಈ ಚಿಂತನೆಯು ಉದಾರವಾದಿ ಚರ್ಚೆಗಳನ್ನು ವಿರೋಧಿಸುವ

ಚಟುವಟಿಕೆಗಳಾಗಿದ್ದು ಸಮಸ್ಯೆಗೆ ಎಡೆ ಮಾಡಿತ್ತು. ಆದರೆ ಈ ಚಿಂತನೆಯು ಸಹಾ ಮಾನವ ಸಮಾಜದ ಅಭಿವೃದ್ಧಿಗಾಗಿ ಶ್ರಮಿಸುವ ಹೇಳಿಕೆ ನೀಡಿತ್ತು. ಘನಾತ್ಮಕ ಉದಾರವಾದದ ಬೆಳವಣಿಗೆಯು ಈ ರೀತಿಯಾಗಿ ಅಸಮಾನ ಸಮಾಜದ ಸೃಷ್ಟಿಗೆ ಕಾರಣೀಭೂತವೆಂಬ ಕಾರಣದಿಂದ ಸಮಾಜವಾದಿ ಚಿಂತಕರು ಘನಾತ್ಮಕ ಉದಾರವಾದದ ತಪ್ಪುಗಳನ್ನು ತಿದ್ದುವ ಚಿಂತನೆಗೆ ಎಡೆ ಮಾಡಿಕೊಟ್ಟರು. ಇವರ ಪ್ರಕಾರ ಘನಾತ್ಮಕ ಉದಾರವಾದವು ಮಾನವ ಅಭಿವೃದ್ಧಿಗೆ ಸಹಾಯಕಾರಿಯಾಗಿಲ್ಲವೆಂಬ ಕಾರಣಕ್ಕಾಗಿ ಉದಾರವಾದಿ ಮಾರುಕಟ್ಟೆ ಆರ್ಥಿಕ ನೀತಿಯನ್ನು ಈ ಸಮಾಜವಾದವು ವಿರೋಧಿಸಿತು.

1789ರ ಫ್ರೆಂಚ್ ಮಹಾಕ್ರಾಂತಿಯನ್ನು ಈ ಸಮಾಜವಾದದ ಬೆಳವಣಿಗೆಯ ಹಾದಿಯಲ್ಲಿನ ಏಕಮೇವ ಮೈಲಿಗಲ್ಲೆಂದೇ ಕರೆದಿದ್ದಾರೆ. ಈ ಕ್ರಾಂತಿಯು ಸ್ವಾತಂತ್ರ್ಯ, ಸಮಾನತೆ ಹಾಗು ಭ್ರಾತೃತ್ವ ಎಂಬ ತ್ರಿ ತತ್ವಗಳ ಮೇಲೆ ಅಸ್ತಿತ್ವಕ್ಕೆ ಬಂದಿತು. ಜನರ ನಡುವಿನ ಅಸಮಾನತೆಯನ್ನು ಆರ್ಥಿಕವಾಗಿ, ಸಾಮಾಜಿಕವಾಗಿ ತೊಡೆದು ಹಾಕಿದ ಇವರು, ಫ್ರಾನ್ಸಿಸ್ ಜಿಬೂಫ್‌ನ ನೇತೃತ್ವದಲ್ಲಿ ಬದಲಾವಣೆಗೆ ಅಣಿಯಾದರು. 18ನೇ ಶತಮಾನದ ಮೊದಲಲ್ಲಿ ಈ ಸಮಾಜವಾದದ ಹೇಳಿಕೆಗಳು ಎಲ್ಲೆಡೆಯಲ್ಲಿಯೂ ಆದರ್ಶಮಯವಾದ ಚಿತ್ರಣ ನೀಡಿ, ಸಮಾಜದಲ್ಲಿ ಅಸಮಾನತೆಯನ್ನು ತೊಡೆಯಲು ಪ್ರಯತ್ನಿಸಿದರು.

ರಾಬರ್ಟ್ ಓವನ್ ಹಾಗು ಚಾರ್ಲ್ಸ್ ಫ್ಯೂರಿಯರ್ ಈ ಯುಟೋಪಿಯನ್ ಸಮಾಜವಾದದ ಪ್ರತಿಪಾದಕರಾಗಿದ್ದಾರೆ. ಇವರು ಸಹಕಾರಿ ಮನೋಭಾವನೆಗೆ ಹೆಚ್ಚಿನ ಬೆಲೆ ನೀಡಿ ಸ್ಪರ್ಧೆಯನ್ನು ತೊಡೆದು ಹಾಕಲು ಪ್ರಯತ್ನಿಸಿದರು. ಮಾನವನ ಗುಣವನ್ನು ಬದಲಿಸಲು, ಪರಿಸರ ಬದಲಾಗಬೇಕು ಎಂದು ಹೇಳಿಕೆ ನೀಡಿದ ಇವರು ಇಂಗ್ಲೆಂಡ್, ಸ್ಕಾಟ್‌ಲ್ಯಾಂಡ್ ದೇಶಗಳಲ್ಲಿನ ಸಮುದಾಯಗಳ ಬಗ್ಗೆ ಚರ್ಚಿಸಿದ್ದರು. ಇದೇ ನಿಟ್ಟಿನಲ್ಲಿ ಪ್ರಮುಖರಾದ ಮತ್ತೊಬ್ಬರೆಂದರೆ ಪ್ರಧಾನ್. ಇವರು ವಿಕೇಂದ್ರೀಕೃತ ಸಹಕಾರಿ ವ್ಯವಸ್ಥೆಯನ್ನು ಬೆಂಬಲಿಸಿದವರಾಗಿದ್ದರು.

ಹೀಗೆ ಈ ಯುಟೋಪಿಯನ್ ಸಮಾಜವಾದಿಗಳು ಶೋಷಣೆ, ಅಸಮಾನತೆಯನ್ನು ಹೋಗಲಾಡಿಸಲು ಯತ್ನಿಸಿದವರಾಗಿದ್ದಾರೆ.

## ವೈಜ್ಞಾನಿಕ ಸಮಾಜವಾದ

ವೈಜ್ಞಾನಿಕ ಸಮಾಜವಾದವು 19ನೇ ಶತಮಾನದ ಮಧ್ಯಭಾಗದಲ್ಲಿ ಬೆಳೆದು ಯುಟೋಪಿಯನ್ ಸಮಾಜವಾದದ ಮಾರ್ಕ್ಸ್ ಮತ್ತು ಎಂಗೆಲ್ಸ್‌ರಿಂದ ಅಸ್ತಿತ್ವಕ್ಕೆ ಬಂದಿತು. ಇವರಿಬ್ಬರು ಇಂಗ್ಲೆಂಡಿನ ಹಾಗೂ ಪ್ಯಾರಿಸ್‌ನ ಹಲವಾರು ಸಮಾಜವಾದಿ ಚಿಂತಕರೊಂದಿಗೆ ಬೆರೆತು ಚರ್ಚೆ ಮಾಡಿ ಅನಂತರದಲ್ಲಿ ಕೈಗಾರಿಕೆಯಲ್ಲಿ ಪ್ರಮುಖ ಸ್ಥಾನವನ್ನು ವಹಿಸಿದ್ದ ಇಂಗ್ಲೆಂಡಿನಲ್ಲಿ ಯುಟೋಪಿಯನ್ ಸಮಾಜವಾದಕ್ಕೆ ವಿಭಿನ್ನವಾದ ವೈಜ್ಞಾನಿಕ ತಳಹದಿಯುಳ್ಳ ಬಂಡವಾಳಶಾಹಿ ವಿರೋಧಿ ಚಿಂತನೆಯನ್ನು ಸಾಮಾಜಿಕ ನ್ಯಾಯದ ಆಧಾರದ ಮೇಲೆ ರಚಿಸುವ ಪ್ರಯತ್ನ ಮಾಡಿದರು. ಚಾರಿತ್ರಿಕವಾಗಿ ಶೋಷಣೆಗೆ ಕಾರಣಗಳನ್ನು ಅಧ್ಯಯನಿಸಿದ ಇವರು ಬಂಡವಾಳಶಾಹಿತ್ವವನ್ನು ಶೋಷಣೆಗೆ ಕಾರಣವೆಂದು ಗುರುತಿಸಿ ಅದನ್ನು ತೊಡೆದು ಹಾಕುವ ಸಲುವಾಗಿ ಚಾರಿತ್ರಿಕ ವಿಕಸನ ಸಿದ್ಧಾಂತವನ್ನು ರಚಿಸಿ ಕ್ರಾಂತಿಯಿಂದಲೇ ಮಾತ್ರ ಸಮಾಜದಲ್ಲಿ ಬದಲಾವಣೆ ತರಲು ಸಾಧ್ಯವೆಂದು ಪ್ರತಿಪಾದಿಸಿದರು. ಬಂಡವಾಳಶಾಹಿತ್ವವನ್ನು ಬುಡಸಮೇತ ಕಿತ್ತೊಗೆದು ಕಾರ್ಮಿಕ ವರ್ಗಕ್ಕೆ ಪ್ರಾಮುಖ್ಯತೆ ನೀಡಿ ಶ್ರಮಿಕ ವರ್ಗವು ತನ್ನ ಸ್ವಾತಂತ್ರ್ಯವನ್ನು ಕ್ರಾಂತಿ ಮೂಲಕ ಪಡೆಯಬೇಕೆಂದು ಪ್ರತಿಪಾದಿಸಿದರು.

ಹೆಗೆಲ್‌ರವರ ಬರಹಗಳಿಂದ ಮೋಹಿತವಾಗಿದ್ದ ಮಾರ್ಕ್ಸ್ ಹೆಗೆಲ್‌ರ ಡೈಯೋಲೆಕ್ಟಿಕಲ್ ಪದ್ಧತಿ ಮುಖಾಂತರ ಹೊಸ ವಿಚಾರಗಳನ್ನು ಬೌದ್ಧಿಕ ಚರ್ಚೆಗಳಿಗೆ ಒಳಪಡಿಸಿ ಈತ ಮುಂದೆ ಆ ಚಿಂತನೆಯನ್ನು ಬೆಳೆಸಿ ಅಭಿವೃದ್ಧಿ ಪಡಿಸಿ ಪ್ರಾಪಂಚಿಕ ವ್ಯವಸ್ಥೆಯಲ್ಲಿ ಹೇಗೆ ಶೋಷಣೆಯನ್ನು ತೊಡೆದುಹಾಕಬೇಕೆಂಬ ಬಗ್ಗೆ ತಮ್ಮ ವಿಚಾರಗಳನ್ನು ಮಂಡಿಸುವರು. ಹೀಗೆ ಚರಿತ್ರೆಯಲ್ಲಿ ಕಾಲಾನುಕ್ರಮೇಣ ಆದ ಬದಲಾವಣೆಗಳನ್ನು ಗುರುತಿಸುವ ಇವರು ಸಮತಾವಾದ ಮತ್ತು ಸಮಾಜವಾದಗಳ ಚರ್ಚೆಗಳಿಗೆ ಬೆಂಬಲ ನೀಡಿದರು. ಇವರ

ಈ ಚರ್ಚೆಯಲ್ಲಿ ಚಾರಿತ್ರಿಕ ಕಾಲದಿಂದ ಆಧುನಿಕ ಕಾಲದವರೆಗೆ ಆದ ಬದಲಾವಣೆಗಳ ಸ್ಥೂಲ ಪರಿಚಯವು ಇದ್ದು ಸಮಾಜವಾದವು ಹೀಗೆ ಕಾರ್ಮಿಕರ ಶ್ರಮದಿಂದ ಕಟ್ಟಿಟ್ಟಿದೆ ಎಂಬುದನ್ನು ಚರ್ಚಿಸಲಾಗಿದೆ. ಹೀಗೆ ಕಾರ್ಮಿಕ ಹಾಗು ಶ್ರಮಿಕ ವರ್ಗವನ್ನು ಹುರಿದುಂಬಿಸಿ ಇವರು ಉತ್ಪಾದನಾ ಮೂಲಗಳು ಹೆಚ್ಚು ವೈಜ್ಞಾನಿಕವಾದ ಶ್ರಮಿಕವರ್ಗ ಮತ್ತು ಸಾಮಾನ್ಯ ಜನರು ಇದನ್ನು ತಿರಸ್ಕರಿಸಿ ಬದಲಾವಣೆಗೆ ಅನುವು ಮಾಡಿಕೊಡುತ್ತಾರೆಂದು ಚರ್ಚಿಸಿದ್ದಾರೆ. ಇವರ ಈ ಹಂತ ಹಂತದ ವಿವರಣೆಯೂ ಮಾರ್ಕ್ಸ್‌ವಾದದ ವೈಜ್ಞಾನಿಕ ಅಧ್ಯಯನ ಎಂಬುದು ಕಂಡುಬರುತ್ತದೆ.

## ಫೇಬಿಯನ್ ಸಮಾಜವಾದ

ಇದು ವಿಖಸನ ಸಮಾಜವಾದದ ಮುಖ್ಯ ದಾಖಲೆ ಹೊಂದಿದ ಚಿಂತನೆಯಾಗಿದೆ. ಇದು ಮಾರ್ಕ್ಸ್‌ರವರ ಕ್ರಾಂತಿಕಾರಿ ಸಮಾಜವಾದಕ್ಕಿಂತ ವಿಭಿನ್ನ ಚಿಂತನೆಯಾಗಿದೆ. ಈ ವಾದವು ಮಾರ್ಕ್ಸ್‌ರ ವಾದವನ್ನು ಬದಲಿಸುವಲ್ಲಿ ಪ್ರಯತ್ನ ಮಾಡಿರುವ ಬಗ್ಗೆ ಕೂಡಾ ಮಾಹಿತಿ ಇದೆ. ಈ ಕೆಳಕಂಡ ಅಂಶಗಳು ಅದಕ್ಕೆ ಪೂರಕವಾಗಿವೆ.

1 ಇವರು ರಿಕಾರ್ಡೋ ಅವರ ಬಾಡಿಗೆ ಸಿದ್ಧಾಂತವನ್ನು ತರುವ ಮುಖಾಂತರ ಮಾರ್ಕ್ಸ್‌ರವರ ಶ್ರಮ ಸಿದ್ಧಾಂತದ ಮೌಲ್ಯವನ್ನು ತಮ್ಮ ಆರ್ಥಿಕ ನೀತಿಯಾಗಿ ತೊಡೆದು ಹಾಕಿದರು.

2. ಇವರು ಕೇವಲ ಶ್ರಮಿಕ ವರ್ಗದ ಮೇಲೆ ಸಾಮಾಜಿಕ ಬದಲಾವಣೆಯ ನಂಬಿಕೆಯ ಹೊರೆ ಇಡದೇ ಮಧ್ಯಮ ವರ್ಗದವರನ್ನು ಸಹ ಈ ಯತ್ನದಲ್ಲಿ ತಮ್ಮೊಂದಿಗೆ ಸೇರಿಸಿಕೊಂಡರು.

3. ಸಮಾಜವಾದವನ್ನು ಒಮ್ಮಿಂದೊಮ್ಮಿಗೆ ತರದೆ ಇವರು ರಾಜ್ಯದ ಮುಖಾಂತರವೇ ಉತ್ಪಾದನ ಮೂಲಗಳ ಒಡೆತನವನ್ನು ಸಮುದಾಯದ ಒಡೆತನಕ್ಕೆ ತರುವ ಪ್ರಯತ್ನ ಮಾಡಿದರು.

4. ಇವರು ಶ್ರಮಿಕವರ್ಗದ ಪರವಾದ ಕಾನೂನು, ವಿದ್ಯಾಭ್ಯಾಸ, ಹಾಗೂ ಪ್ರಜಾಪ್ರಭುತ್ವದ ಚಿಂತನೆಗಳನ್ನು ವಿಖಸನ ಹಾದಿಯಲ್ಲಿ ಸೇರಿಸಿಕೊಂಡು ಬದಲಾವಣೆಗೆ ಪ್ರಯತ್ನಿಸಿದರು.

## 13.4 ಸಮಾಜವಾದದ ಮೌಲ್ಯಮಾಪನ

ವಿಖಸನ ಸಮಾಜವಾದವನ್ನು ಎಲ್ಲ ಸಮಾಜಗಳಲ್ಲಿಯೂ ಒಂದಲ್ಲ ಒಂದು ತೆರನಾಗಿ ಆಚರಣೆಗೆ ತಂದಿದ್ದಾರೆ. ಸ್ಕಾಂಡಿನೇವಿಯನ್ ರಾಷ್ಟ್ರಗಳಲ್ಲಿ ಹೆಚ್ಚಾಗಿ ಇದ್ದು, ಭಾರತದಂತಹ ರಾಷ್ಟ್ರಗಳಲ್ಲಿ ನಿಧಾನವಾಗಿ ಬೆಳೆದು ಸಾಮಾಜಿಕ-ಆರ್ಥಿಕ ವಿಭಜನೆಗಳನ್ನು ಕಡಿಮೆ ಮಾಡುವ ಯತ್ನ ನಡೆಸಿದೆ. ಆದರೂ ಇದನ್ನು ಹಲವಾರು ಕಾರಣಗಳಿಗಾಗಿ ಟೀಕಿಸುತ್ತಾರೆ.

ಇದಕ್ಕೆ ಸರಿಯಾದ ಪೂರಕವಾದ ವಾದಗಳಿಲ್ಲದಿರುವುದು ಇದರಲ್ಲಿರುವುದು ಹಲವಾರು ಚಿಂತನೆಗಳು. ಫೇಬಿಯನ್ ಸಮಾಜವಾದ, ಲಿವಿಥೆನಿಸಂ, ಸಿಂಡಿಕ್ಯಾಲಿಸಂ, ಗಿಲ್ಡ್‌ಸಮಾಜವಾದ, ಪಾರ್ಲಿಮೆಂಟರಿ ಹಾಗು ಪ್ರಜಾಪ್ರಭುತ್ವ ಸಮಾಜವಾದ, ಹೀಗೆ ಅನೇಕಾನೇಕ ಹೆಸರಿನಿಂದ ಪ್ರಚಲಿತವಿರುವ ಈ ಚಿಂತನೆಗಳನ್ನು ಒಟ್ಟಾರೆ ಕೂಡಿಸಿ ಅದರ ಚಿಂತನೆಯನ್ನು ರಚಿಸಲು ಸಾಧ್ಯವಾಗದಿರುವುದೇ ಈ ಚಿಂತನೆಯು ಬೆಳೆಯದಿರಲು ಕಾರಣವಾಗಿದೆ. ಹೀಗೆ, ತನ್ನಲ್ಲಿನ ಅನೇಕ ವಿದ್ಯಾಮಾನಗಳಿಂದ ಹಾಗು ನಿಶ್ಚಿತ ಚಿಂತನೆ ಇಲ್ಲದ ಕಾರಣ ಈ ವಿಖಸನ ಸಮಾಜವಾದವು ಅಭಿವೃದ್ಧಿ ಹಾದಿಯಲ್ಲಿ ಬೆಳೆಯದಂತಾಗಿದೆ.

ಇಂತಹುದರಲ್ಲಿ ಕೆಲವು ಗಿಲ್ಡ್ ಸಮಾಜವಾದ ಹಾಗು ಸಿಂಡಿಕ್ಯಾಲಿಸಂನಂತಹ ಚಿಂತನೆಗಳು ಕಾರ್ಮಿಕ ಸಂಘಟನೆಗಳಿಗೆ ಬೆಂಬಲ ಸೂಚಿಸಿ, ಬೆಳೆದರೂ ಇನ್ನು ಕೆಲವು ಚಿಂತನೆಗಳು ಈ ನಿಟ್ಟಿನಲ್ಲಿ ಬೆಳೆಯಲಾಗಿಲ್ಲಾ. ಫೇಬಿಯನ್ ಸಮಾಜವಾದವು ಕೇವಲ ಬುದ್ಧಿಜೀವಿಗಳ

ನಡುವೆಯೇ ಬೆಳೆಯಲಾಗಿ ಇದು ಮಧ್ಯಮವರ್ಗದ ಹಿಡಿತಕ್ಕೆ ಸಿಕ್ಕಿಕೊಂಡಿದೆ. ಹೀಗಾಗಿ ಈ ಚಿಂತನೆಯ ಬಗ್ಗೆ ಶ್ರಮಿಕ ವರ್ಗಕ್ಕೆ ಯಾವುದೇ ತೆರನಾದ ಮಾಹಿತಿ ಇಲ್ಲ. ಅದೇ ನಿಟ್ಟಿನಲ್ಲಿ ಫೇಬಿಯನ್ ಚಿಂತಕನಾದವನು ಭೌದ್ಧಿಕ ಶ್ರೀಮಂತಿಕೆಯ ವರ್ಗಕ್ಕೆ ಸೇರಿದವನೆಂಬ ಭಾವನೆ ಬಂದೊದಗಿದೆ.

ಹೀಗೆ, ಸಮಾಜವಾದದ ವಿವಿಧ ಮುಖಗಳು, ತಮ್ಮ ಚಿಂತನೆಯ ಚೌಕಟ್ಟಿನಲ್ಲಿಯೇ, ಸಿಲುಕಿಕೊಂಡು ಕೆಲವೊಮ್ಮೆ ಬಂಡವಾಳಶಾಹಿಗಳ ಹಿಡಿತಕ್ಕೆ ಸಿಕ್ಕಿ ನಲುಗಿವೆ.

## ನಿಮ್ಮ ಪ್ರಗತಿ ಪರಿಶೀಲನೆ - 1

**ಸೂಚನೆ:** 1. ಈ ಕೆಳಗೆ ಬಿಟ್ಟಿರುವ ಜಾಗವನ್ನು ನಿಮ್ಮ ಉತ್ತರಕ್ಕೆ ಉಪಯೋಗಿಸಿಕೊಳ್ಳಿ.

2. ಈ ಘಟಕದ ಕೊನೆಯಲ್ಲಿ ನೀಡಿರುವ ಉತ್ತರದೊಂದಿಗೆ ನಿಮ್ಮ ಪ್ರಗತಿಯನ್ನು ಪರಿಶೀಲಿಸಿಕೊಳ್ಳಿ.

**1. ಸಮಾಜವಾದದ ಅರ್ಥ ಮತ್ತು ತತ್ವಗಳನ್ನು ವಿವರಿಸಿ.**

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

**2. ಸಮಾಜವಾದದ ವಿಧಗಳನ್ನು ಪರಿಶೀಲಿಸಿ.**

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

## 13.5 ಸಮಾರೋಪ

ಈ ಮೇಲಿನ ಅಧ್ಯಯನದಲ್ಲಿ ಕೇವಲ ಕೆಲವು ಸಮಾಜವಾದಿ ಚಿಂತನೆಯ ಬಗ್ಗೆ ಚರ್ಚೆ ಮೂಡಿ ಬಂದಿದೆ. ಕಾರಣ ಇದೇ ಚರ್ಚೆ ಬೇರೆ ಅಧ್ಯಾಯಗಳಲ್ಲಿಯೇ ಇರುವುದರಿಂದ ಈ ಅಧ್ಯಯನದಲ್ಲಿಯೇ ಹೆಚ್ಚಿನ ಮಾಹಿತಿ ನೀಡದೆ, ಈ ಚಿಂತನೆಗಳ ವಿವಿಧತೆಯನ್ನು ಮಾತ್ರವೇ ಇಲ್ಲಿ ತಮಗೆ ಪರಿಚಯಿಸಲಾಗಿದೆ.

## 13.6 ಒಟ್ಟಾರೆ ಅಭಿಪ್ರಾಯ

ಈ ಮೇಲಿನ ಅಧ್ಯಯನ ಚರ್ಚೆಯನ್ನು ಗಮನಿಸಿದರೆ ಈ ಚರ್ಚೆಯು ಕೇವಲ ಸಮಾಜವಾದದ ವಿವಿಧಾಂಶ ಹಾಗೂ ಮೂಲ ಚಿಂತನೆಗಳು ಬಗ್ಗೆ ಚರ್ಚಿಸಿರುವುದು ಕಂಡುಬರುತ್ತದೆ. ಆದರೆ, ಇದೇ ಪರಿಪೂರ್ಣ ಚರ್ಚೆಯಲ್ಲಾ. ಸಮಾಜವಾದಕ್ಕಿರುವ

ವಿವಿಧ ಮುಖಗಳನ್ನು ಪರಿಚಯಿಸುವ ಮೂಲಕ ನಾವಿಲ್ಲಿ ಈ ವಾದದ ಪ್ರಾಮುಖ್ಯತೆಯನ್ನು ತಿಳಿದುಕೊಳ್ಳಲು ಸಾಧ್ಯ ಎಂಬುದು ಇಲ್ಲಿ ತಿಳಿಯಬೇಕಾದ ಅಂಶವಾಗಿದೆ.

## 13.7 ಕಠಿಣ ಪದಗಳು

ಫೆಲಾನಕ್ಸ್ : ಸಮಾಜವನ್ನು ವಿಂಗಡಿಸಿ ರಚಿಸಲಾಗುವ ಸಣ್ಣ ಗುಂಪು

ವೈಜ್ಞಾನಿಕ ಸಮಾಜವಾದ : ಸಮತಾವಾದ ಅಥವಾ ಮಾರ್ಕ್ಸ್‌ವಾದ

ವಿಖಸನ ಸಮಾಜವಾದ : ಬಂಡವಾಳಶಾಹಿ ಹಾಗೂ ಸಮಾಜವಾದದ ಸಮ್ಮಿಳನ

## 13.8 ಕೆಲವು ಉಪಯುಕ್ತ ಗ್ರಂಥಗಳು

ಎಫ್.ಡಬ್ಲ್ಯೂ ಕಾಕರ್ : ರೀಸೆಂಟ್ ಪೊಲಿಟಿಕಲ್ ಥಾಟ್

ಎಸ್.ಪಿ. ವರ್ಮಾ : ಮಾಡರ್ನ್ ಪೊಲಿಟಿಕಲ್ ಥಿಯರಿ

ಡಾ. ಕೆ.ಜೆ. ಸುರೇಶ್ : ಆಧುನಿಕ ಸಿದ್ಧಾಂತಗಳು

## 13.9 ನಿಮ್ಮ ಪ್ರಗತಿಯನ್ನು ಪರಿಶೀಲಿಸಿಕೊಳ್ಳಿ

<u>ನಿಮ್ಮ ಪ್ರಗತಿ ಪರಿಶೀಲನೆ</u> **- 1**

1. ನೋಡಿ ವಿಭಾಗ 13.2
2. ನೋಡಿ ವಿಭಾಗ 13.3

# ಘಟಕ 14 ಸಮಾಜವಾದದ ತತ್ವಗಳು

<u>ರಚನೆ</u>


14.0 ಉದ್ದೇಶಗಳು

14.1 ಪ್ರಸ್ತಾವನೆ

14.2 ಸಮಾಜವಾದ ಅದರ ಹಿನ್ನೆಲೆ

14.3 ಆಧುನಿಕ ಸಮಾಜವಾದ

14.4 ಸಮಾಜವಾದದ ಮುಖ್ಯ ತತ್ವಗಳು

14.5 ಸಮಾಜವಾದ ಒಂದು ವಿವರಣೆ

14.6 ಸಮಾರೋಪ

14.7 ಒಟ್ಟಾರೆ ಅಭಿಪ್ರಾಯ

14.8 ಕಠಿಣ ಪದಗಳು

14.9 ಕೆಲವು ಉಪಯುಕ್ತ ಗ್ರಂಥಗಳು

14.10 ನಿಮ್ಮ ಪ್ರಗತಿಯನ್ನು ಪರಿಶೀಲಿಸಿಕೊಳ್ಳಿ


VOP_FL_MA_Pol_Sci_C-8(1-7)_TF.20_F.No.60

60

## 14.0 ಉದ್ದೇಶಗಳು

ಈ ಅಧ್ಯಯನದ ಉದ್ದೇಶವು ಸಮಾಜವಾದದ ವಿವಿಧ ಚಿಂತನೆಗಳನ್ನು ಒಟ್ಟುಗೂಡಿಸಿ ಪ್ರತಿಪಾದಿಸುವುದಾಗಿದೆ. ಈ ವಾದದ ಮೂಲ ಚಿಂತನೆಗಳು ಕೆಲವೆ ಇದ್ದರೂ ಸಹ ಅವುಗಳು ಆಳವಾಗಿ ಬೇರೂರಿರುವುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಒಂದು ಆದರ್ಶವಾಗಿ ಸಮಾಜವಾದವನ್ನು ಪರಿಗಣಿಸಿ ಅಧ್ಯಯನಿಸಿದರೆ ಅದು ವ್ಯಕ್ತಿಯ ಜೀವನದ ಮೇಲೆ ಸಾಕಷ್ಟು ಪರಿಣಾಮವನ್ನು ಬೀರಬಲ್ಲ ಚಿಂತನೆಯಾಗಿದೆ.

## 14.1 ಪ್ರಸ್ತಾವನೆ

ಸಮಾಜವಾದ ಕುರಿತಂತೆ ಹೆಚ್ಚಿನ ಚಿಂತಕರುಗಳು ಅದನ್ನು ವ್ಯಾಖ್ಯಾನಿಸುವ ಗೋಜಿಗೆ ಹೋಗಿಲ್ಲ. ಆದರೆ ಇವರು ಅವರ ಕಾರ್ಯವಿಧಾನವನ್ನು ದೃಷ್ಟಿಯಲ್ಲಿಟ್ಟುಕೊಂಡು ಅದರ ಕಾರ್ಯವೈಖರಿಯ ಆಧಾರದ ಮೇಲೆ ಅವುಗಳನ್ನು ವ್ಯಾಖ್ಯಾನಿಸಲಾಗಿದೆ. ಆಕ್ಸ್‌ಫರ್ಡ್ ಇಂಗ್ಲಿಷ್ ನಿಘಂಟಿನ ಪ್ರಕಾರ ಸಮಾಜವಾದವು ಮಾಲಿಕತ್ವವನ್ನು ಪ್ರತಿಪಾದಿಸುವ ಒಂದು ನೀತಿ ಅಥವಾ ಸಿದ್ಧಾಂತ ಮತ್ತು ಉತ್ಪಾದನೆಯ ಮೂಲ, ಭೂಮಾಲೀಕತ್ವಗಳ ಮೇಲೆ ಸಮುದಾಯದ ನಿಯಂತ್ರಣವೆಂದು ಹೇಳಲಾಗಿದೆ. ಇದೇ ಸಮಾಜವಾದದ ನಿಯಂತ್ರಣವೆಂದು ಹೇಳಲಾಗಿದೆ. ಇದೇ ಸಮಾಜವಾದದ ಮುಖ್ಯ ಗುರಿಯಾಗಿದೆ. ಹಾಗೂ ಅದರ ಆಡಳಿತ ನಡೆಸುವುದು ಆಗಿದೆ. ಎಲ್ಲರ ಹಿತಾಸಕ್ತಿಯನ್ನು ದೃಷ್ಟಿಯಲ್ಲಿರಿಸಿಕೊಂಡು ಕಾರ್ಯಾಚರಣೆಗೆ ತರಬೇತಾದ ಈ ಅಂಶವನ್ನು ಮೇಲಿನ ವ್ಯಾಖ್ಯೆ ಪ್ರತಿಪಾದಿಸುತ್ತದೆ. ಇದೇ ರೀತಿಯಾಗಿರುವ ಹಲವಾರು ವ್ಯಾಖ್ಯೆಗಳು ಹೆಚ್ಚಿನ ಮಟ್ಟಿಗೆ ಸಮಾಜವಾದದ ಈ ಮೂಲ ಅಂಶಗಳನ್ನು ಕುರಿತು ಚರ್ಚಿಸುವ ವ್ಯಾಖ್ಯೆಗಳಾಗಿವೆ. ಒಟ್ಟಿನಲ್ಲಿ ಸಮಾಜವಾದವು ಆರ್ಥಿಕ ಸಂಘಟನೆ ಮತ್ತು ಸಾಮಾಜಿಕ ಪುನರ್‌ರಚನೆಯನ್ನು ದೃಷ್ಟಿಯಲ್ಲಿರಿಸಿಕೊಂಡಿದೆ. ಈ ಕಾರ್ಯಗಳನ್ನು ಅಸ್ಥಿತ್ವಕ್ಕೆ ತರುವಲ್ಲಿ ರಾಜಕೀಯ ಮಾರ್ಗವನ್ನು ಉತ್ಪಾದನಾ ಮೂಲಗಳ ಮೇಲೆ ನಿಯಂತ್ರಣ ತರುವ ಮೂಲಕ ಇದು ಸಾಧಿಸಬಯಸುತ್ತದೆ. ಈ ರೀತಿಯಾಗಿ ಸಮಾಜವಾದವು ಸಮಾನ ಹಂಚಿಕೆಯನ್ನು ಆಧಾರವಾಗಿಟ್ಟುಕೊಂಡು ಸ್ವತಂತ್ರ ಮತ್ತು ಸಮಾನತೆಯ ಮೂಲ ಅಂಶಗಳನ್ನು ಕಾರ್ಯೋನ್ಮುಖವಾಗುವಂತೆ ಮಾಡಿ ಎಲ್ಲ ನಾಗರೀಕರಿಗೂ ಸಮಾನ ಹಕ್ಕನ್ನು ನೀಡುವ ವ್ಯವಸ್ಥೆಯನ್ನು ಇದು ಕಲ್ಪಿಸುತ್ತದೆ.

ಹೀಗೆ ಸಮಾಜವಾದದ ವಿವಿಧ ವ್ಯಾಖ್ಯೆಗಳು ವಿವಿಧ ರೀತಿಯ ಸಮಾಜವಾದವನ್ನು ಪರಿಚಯಿಸುವುದರೊಂದಿಗೆ ಸಮಾಜವಾದಗಳ ನಡುವಿನ ವಿಭನ್ನತೆಯನ್ನು ಗುರುತಿಸಲು ಸಹಾಯಕಾರಿಯಾಗಿದೆ.

## 14.2 ಸಮಾಜವಾದ ಅದರ ಹಿನ್ನೆಲೆ

19ನೇ ಶತಮಾನದ ಮಧ್ಯಭಾಗದಿಂದ ಮಾರ್ಕ್ಸ್‌ವಾದವು ಸಮಾಜವಾದದ ಪ್ರಮುಖ ಚಿಂತನೆಯಾಗಿ ಬೆಳೆದು ಆ ನಿಟ್ಟಿನಲ್ಲಿ ಎಲ್ಲ ಟೀಕೆಗಳನ್ನು ಎದುರಿಸಿ ಮಾರ್ಕ್ಸ್‌ವಾದವನ್ನು ಬಿಟ್ಟಂತೆ ಮತ್ತೆ ಕೆಲವು ಸಮಾಜವಾದಿ ಚಿಂತನೆಗಳು ಈ ವಾದದ ಚಿಂತನೆಗೆ ವಿಭಿನ್ನ ತೆರವಾದ ಅರ್ಥವನ್ನು ಕಲ್ಪಿಸಿ ಇದರ ಪರಿಪೂರ್ಣತೆಯೆಡೆಗೆ ಪ್ರಯತ್ನಿಸಿವೆ. ಇದರಲ್ಲಿ ಕೆಲವು ಮಾರ್ಕ್ಸ್‌ವಾದದ ಬದಲಾಗಿ ಕಂಡು ಬಂದರೆ ಮತ್ತೆ ಕೆಲವು ಮಾರ್ಕ್ಸ್‌ವಾದವನ್ನು ಪುನಃ ವಿಮರ್ಶಿಸುವಂತೆ ಕಂಡುಬರುತ್ತವೆ. ಇನ್ನು ಕೆಲವು ಚಿಂತನೆಗಳು ಮಾರ್ಕ್ಸ್‌ವಾದವನ್ನು ಕ್ರಾಂತಿಕಾರಿ ಚಿಂತನೆಯಾಗಿ ಪರಿಗಣಿಸಿದರೆ ಕೆಲವು ಮಾರ್ಕ್ಸ್‌ವಾದವನ್ನು ವಿಕಾಸವಾದವೆಂದು ಪರಿಗಣಿಸಿವೆ. ಹೀಗೆ ಮಾರ್ಕ್ಸ್‌ರವರ ಜೀವಿತ ಕಾಲದಲ್ಲಿ ಅವರ ಹಿಂಬಾಲಕರನ್ನು ಅವರ ಚಿಂತನೆಯ ಆಧಾರದ ಮೇಲೆ ವಿಂಗಡಿಸಲಾಗಿದೆ. ಮಾರ್ಕ್ಸ್‌ರವರ ಸಾವಿನ ನಂತರ ಈ ವ್ಯತ್ಯಾಸಗಳು ಹೆಚ್ಚಾಗಿ ಇವರ ಹಿಂಬಾಲಕರ ನಡುವಿನ ತೀವ್ರ ವ್ಯತ್ಯಾಸಗಳು ಬೆಳಕಿಗೆ ಬರತೊಡಗಿದವು. ಈ ವ್ಯತ್ಯಾಸಗಳು ಸಾಧಾರಣವಾಗಿ ಸಮಾಜವಾದದ ಗುರಿಯನ್ನು ತಲುಪುವ ಕಾರ್ಯಾಚರಣೆಯ ವೈವಿಧ್ಯತೆಯನ್ನು ಅನುಸರಿಸಿದಂತಿತ್ತು. ಇಂತಹ ಒಂದು ಸಮಸ್ಯೆಯನ್ನು ಮತ್ತಷ್ಟು ಕ್ಲಿಷ್ಟಗೊಳಿಸಿದ್ದೆಂದರೆ ವಿವಿಧ ಪ್ರತಿಪಾದಕರು ತಾವು ಮಾರ್ಕ್ಸ್‌ನ ಚಿಂತನೆಯನ್ನು ಬೆಂಬಲಿಸುವರು ಮತ್ತು ಪುನರ್ ಉಚ್ಚರಿಸುವರೆಂಬ ಮತ್ತೊಂದು ವಿಭಾಗಗಳನ್ನು ಮಾಡಿಕೊಂಡರು. ಮಾರ್ಕ್ಸ್‌ನ ಇಂತಹ ವಿಭಿನ್ನ ಚಿಂತಕರ ಎಲ್ಲ ಚಿಂತನೆಯನ್ನು

ಅಧ್ಯಯನಿಸಲು 'ವಿಕಸನ ಮಾರ್ಕ್ಸ್‌ವಾದ'ವನ್ನು ಇಲ್ಲಿ ಅಧ್ಯಯನಿಸುವುದು ಅವಶ್ಯಕವೆನಿಸುತ್ತದೆ.

ಸಾಧಾರಣವಾಗಿ ಸಮಾಜವಾದ ಎಂದಾಕ್ಷಣ ವಿಕಸನ ಸಮಾಜವಾದವನ್ನು ದೃಷ್ಟಿಯಲ್ಲಿರಿಸಿಕೊಳ್ಳಲಾಗುತ್ತದೆ. ಇದು ತನ್ನ ವಿಕಸನದಲ್ಲಿ ಕಂಡುಕೊಂಡ ವಿವಿಧತೆಗಳನ್ನೇ ಸಮಾಜವಾದದ ವಿಧಗಳೆಂದೂ ಗುರುತಿಸಲಾಗಿದೆ.

ಕ್ರಾಂತಿಕಾರಿ ಸಮಾಜವಾದವನ್ನು ವಿಕಸನ ಸಮಾಜವಾದದಿಂದ ವಿಭಿನ್ನವೆಂದು ಗುರುತಿಸಲಾಗಿದೆ. ಇದು ಬಂಡವಾಳಶಾಹಿತ್ವವನ್ನು ತೊಡೆದು ಹಾಕಲು ಅವಶ್ಯಕವೆಂದೂ ತಿಳಿಸಿದ್ದಾರೆ. ಆದಾಗ್ಯೂ ವಿಕಸನ ಸಮಾಜವಾದವು ಬಂಡವಾಳಶಾಹಿತ್ವ ಹಾಗೂ ಸಮಾಜವಾದಿ ಚಿಂತನೆಗಳ ಸಮಾವೇಶವೆಂದಿದ್ದಾರೆ. ಹಾಗಾಗಿ ಇಂತಹ ವ್ಯವಸ್ಥೆಯನ್ನು ಉದಾರವಾದಿ ವ್ಯವಸ್ಥೆ ಎಂದು ಹೇಳಿದ್ದಾರೆ.

ಇಂತಹಾ ಸಮಾಜವಾದವು ಪ್ರಸ್ತುತದಲ್ಲಿನ ಸಮಾಜ ವ್ಯವಸ್ಥೆಯನ್ನು ತಿರಸ್ಕರಿಸಿ ವಿರೋಧ ವ್ಯಕ್ತಪಡಿಸುವುದರಿಂದ ಇದನ್ನು ಮಾರ್ಕ್ಸ್‌ವಾದ ಸಮಾಜವಾದವೆಂದೂ ಇದನ್ನು ಗುರುತಿಸಲಾಗಿದೆ.

ವಿಕಸನ ಸಮಾಜವಾದವು ಪ್ರಜಾಪ್ರಭುತ್ವದ ಹಾದಿಯನ್ನು ಅನುಸರಿಸಿದರೆ, ಇದು ಉಳ್ಳದಿರುವವರ ಒಳಿತಿಗಾಗಿ ಶ್ರಮಿಸಿ, ಶ್ರಮಿಕ ವರ್ಗ ಹಾಗೂ ಕಾರ್ಮಿಕ ವರ್ಗಗಳಿಗಾಗಿ ಪ್ರೋತ್ಸಾಹಿಸುತ್ತದೆ. ಮಾರ್ಕ್ಸ್‌ವಾದಿ ಚಿಂತನೆಯೂ ಹಿಂಸಾಚಾರವನ್ನು ಪ್ರತಿಪಾದಿಸಿ ಬದಲಾವಣೆ ಚರ್ಚಿಸುತ್ತದೆ. ಹೀಗೆ 'ಕ್ರಾಂತಿ' ಎಂಬ ಚಿಂತನೆಯೂ ಈ ಮೂಲ ಚಿಂತನೆಯ ತಳಹದಿಯಾಗಿದ್ದು ವಿಕಸನ ಹಾಗೂ ಮಾರ್ಕ್ಸ್‌ವಾದಿ ಚರ್ಚೆಗಳ ಬದಲಾವಣೆಗೆ ನಾಂದಿಯಾಗಿದೆ.

ಮುಂದುವರೆದು ಗಮನಿಸಿದರೆ, ವಿಕಸನ ಸಮಾಜವಾದವು ಕಾರ್ಮಿಕ ವರ್ಗದ ಹಕ್ಕಿಗಾಗಿ ಶ್ರಮಿಸುವುದರೊಂದಿಗೆ ಸಮಗ್ರ ಸಮಾಜದ ಹಿತಕ್ಕಾಗಿ ಸಹಾ ಶ್ರಮಿಸುತ್ತದೆ. ಹೀಗೆ, ಶ್ರಮಿಕ ವರ್ಗದ ಹಾಗೂ ಸಮಾಜದಲ್ಲಿನ ಇತರೇ ವರ್ಗಗಳ ಹಿತಾಸಕ್ತಿಗಳ ಸಮ್ಮಿಳನಕ್ಕೆ ಇದು ಪ್ರಯತ್ನಿಸಿ, ಸೌಹಾರ್ದತೆಗೆ, ಸಮಾನತೆಗೆ, ಸಮಾಜಿಕ ಸಂಬಂಧಗಳಿಗೆ ಹೆಚ್ಚಿನ ಒತ್ತು ನೀಡುವ ಮೂಲಕ ಆಧುನಿಕ ಉದಾರವಾದಿ ಚಿಂತನೆಗೆ ಅನೇಕ ಹೋಲಿಕೆ ಹೊಂದಿವೆ.

ಇದಕ್ಕೆ ವಿರೋಧವಾಗಿ ಕ್ರಾಂತಿಕಾರಕ ಸಮಾಜವಾದವು ಸಮಾನತೆಯನ್ನು ತಿರಸ್ಕರಿಸಿ, ಬಂಡವಾಳಶಾಹಿಯ ಸ್ಥಾನಮಾನಗಳನ್ನು ಸಂಪೂರ್ಣವಾಗಿ ಬುಡ ಮೇಲುಗೊಳಿಸುವ ಯೋಜನೆ ಹೊಂದಿರುತ್ತದೆ. ಹೇಗೆ ಮಾಡುವುದರ ಮೂಲಕ ಇದು ಸಮಾಜವಾದ ವರ್ಗರಹಿತ ಸಮಾಜದ ಅಸ್ತಿತ್ವಕ್ಕೆ ಪ್ರಯತ್ನಿಸುತ್ತಿದೆ ಹೀಗೆ ಚಾರಿತ್ರಿಕವಾಗಿ ವಿಕಸನ ಸಮಾಜವಾದವು ತನ್ನ ಪ್ರತಿಪಾದನೆಯಲ್ಲಿ ಸಮಾಜದ ಏಳಿಗೆಯನ್ನು ಹಂತಹಂತವಾಗಿ ಆಗುವಂತೆ ಪ್ರತಿಪಾದಿಸುತ್ತದೆ.

## 14.3 ಆಧುನಿಕ ಸಮಾಜವಾದ

ಸಮಾಜವಾದವು ಒಂದು ಚಿಂತನೆಯಾಗಿ ಸಮುದಾಯದ ನಿಯಂತ್ರಣದಲ್ಲಿ ಸಮಾಜದ ಆಸ್ತಿಯನ್ನು ಗುರುತಿಸುವ ಚಿಂತನೆಯನ್ನು ಮಾಡಿ ಎಲ್ಲರಿಗೂ ಸಮಾನವಾದ ಹಂಚಿಕೆಯನ್ನು ಮಾಡುವುದು. ಆಧುನಿಕ ಚಿಂತನೆಯೇ ಸರಿ. ಸಾಂಪ್ರದಾಯಿಕ ಉದಾರವಾದದ ಸೋಲಿನಿಂದ ಮಾನವನ ಚಟುವಟಿಕೆಗಳ ಮೇಲಿರುವ ನಿಯಂತ್ರಣಗಳನ್ನು ತೊಡೆದು ಹಾಕಿ ಅವನ ಸರ್ವತೋಮುಖ ಏಳಿಗೆಗೆ ಸಹಕಾರಿಯಾಗುವುದಾಗಿದೆ.

ಸಂಪ್ರದಾಯ ಉದಾರವಾದಿತ್ವದ ಸೋಲಿನಿಂದ ಬೆಳೆದು ಬಂದ ಈ ಚಿಂತನೆಯು ಉದಾರವಾದಿ ಚರ್ಚೆಗಳನ್ನು ವಿರೋಧಿಸುವ ಚಟುವಟಿಕೆಗಳಾಗಿದ್ದು ಸಮಸ್ಯೆಗೆ ಎಡೆ ಮಾಡಿತ್ತು. ಆದರೆ, ಈ ಚಿಂತನೆಯು ಸಹಾ ಮಾನವ ಸಮಾಜದ ಅಭಿವೃದ್ಧಿಗಾಗಿ ಶ್ರಮಿಸುವ ಹೇಳಿಕೆ ನೀಡಿತ್ತು. ಧನಾತ್ಮಕ ಉದಾರವಾದದ ಬೆಳವಣಿಗೆಯು ಈ ರೀತಿಯಾಗಿ ಅಸಮಾನ ಸಮಾಜದ ಸೃಷ್ಟಿಗೆ ಕಾರಣೀಭೂತವೆಂಬ

ಕಾರಣದಿಂದ ಸಮಾಜವಾದಿ ಚಿಂತಕರು ಧನಾತ್ಮಕ ಉದಾರವಾದದ ತಪ್ಪುಗಳನ್ನು ತಿದ್ದುವ ಚಿಂತನೆಗೆ ಎಡೆ ಮಾಡಿಕೊಟ್ಟರು. ಇವರ ಪ್ರಕಾರ ಧನಾತ್ಮಕ ಉದಾರವಾದವು ಮಾನವ ಅಭಿವೃದ್ಧಿಗೆ ಸಹಾಯಕಾರಿಯಾಗಿಲ್ಲವೆಂಬ ಕಾರಣಕ್ಕಾಗಿ ಉದಾರವಾದಿ ಮಾರುಕಟ್ಟೆ ಆರ್ಥಿಕ ನೀತಿಯನ್ನು ಈ ಸಮಾಜವಾದವು ವಿರೋಧಿಸಿತು.

1789 ರ ಫ್ರೆಂಚ್ ಮಹಾಕ್ರಾಂತಿಯನ್ನು ಈ ಸಮಾಜವಾದದ ಬೆಳವಣಿಗೆಯ ಹಾದಿಯಲ್ಲಿನ ಏಕಮೇವ ಮೈಲಿಗಲ್ಲೆಂದೂ ಕರೆದಿದ್ದಾರೆ. ಈ ಕ್ರಾಂತಿಯ ಸ್ವಾತಂತ್ರ, ಸಮಾನತೆ ಹಾಗು ಭ್ರಾತೃತ್ವ ಎಂಬ ತ್ರಿ ತತ್ವಗಳ ಮೇಲೆ ಅಸ್ತಿತ್ವಕ್ಕೆ ಬಂದಿತು. ಜನರ ನಡುವಿನ ಅಸಮಾನತೆಯನ್ನು ಆರ್ಥಿಕವಾಗಿ, ಸಾಮಾಜಿಕವಾಗಿ ತೊಡೆದು ಹಾಕಿ ಇವರು, ಫ್ರಾನ್ಸಿಸ್ ಜಿಬೂಫ್‌ನ ನೇತೃತ್ವದಲ್ಲಿ ಬದಲಾವಣೆಗೆ ಅಣಿಯಾದರು. 18ನೇ ಶತಮಾನದ ಮೊದಲಲ್ಲಿ ಈ ಸಮಾಜವಾದದ ಹೇಳಿಕೆಗಳು ಎಲ್ಲೆಡೆಯಲ್ಲಿಯೂ ಆದರ್ಶವಾದದ ಚಿತ್ರಣ ನೀಡಿ ಸಮಾಜದಲ್ಲಿನ ಅಸಮಾನತೆಯನ್ನು ತೊಡೆಯಲು ಪ್ರಯತ್ನಿಸಿದರು.

ರಾಬರ್ಟ್ ಓವನ್ ಹಾಗು ಚಾರ್ಲ್ಸ್ ಫ್ಯೂರಿಯರ್ ಈ ಯುಟೋಪಿಯನ್ ಸಮಾಜವಾದದ ಪ್ರತಿಪಾದಕರಾಗಿದ್ದಾರೆ. ಇವರು ಸಹಕಾರಿ ಮನೋಭಾವನೆಗೆ ಹೆಚ್ಚಿನ ಬೆಲೆ ನೀಡಿ ಸ್ಪರ್ಧೆಯನ್ನು ತೊಡೆದು ಹಾಕಲೂ ಪ್ರಯತ್ನಿಸಿದರು. ಮಾನವನ ಗುಣವನ್ನು ಬದಲಿಸಲು, ಪರಿಸರ ಬದಲಾಗಬೇಕು ಎಂದು ಹೇಳಿಕೆ ನೀಡಿದ ಇವರು ಇಂಗ್ಲೆಂಡ್, ಸ್ಕಾಟ್‌ಲ್ಯಾಂಡ್, ದೇಶಗಳಲ್ಲಿನ ಸಮುದಾಯಗಳ ಬಗ್ಗೆ ಚರ್ಚಿಸಿದ್ದರು. ಇದೇ ನಿಟ್ಟಿನಲ್ಲಿ ಪ್ರಮುಖರಾದ ಮತ್ತೊಬ್ಬರೆಂದರೆ ಪ್ರೌಧಾನ್, ಇವರು ವಿಕೇಂದ್ರೀಕೃತ ಸಹಕಾರಿ ವ್ಯವಸ್ಥೆಯನ್ನು ಬೆಂಬಲಿಸಿದವರಾಗಿದ್ದರು.

ಹೀಗೆ ಈ ಯುಟೋಪಿಯನ್ ಸಮಾಜವಾದಿಗಳು ಶೋಷಣೆ, ಅಸಮಾನತೆಯನ್ನು ಹೋಗಲಾಡಿಸಲು ಯತ್ನಿಸಿದವರಾಗಿದ್ದಾರೆ.

ಸಮಾಜವಾದ ಹಾಗೂ ಉದಾರವಾದವು ಮಾನವ ಅಭಿವೃದ್ಧಿಯನ್ನು ದೃಷ್ಟಿಯಲ್ಲಿರಿಸಿಕೊಂಡು ಅವು ಕೈಗಾರಿಕಾ ಕ್ರಾಂತಿ ನಂತರದಲ್ಲಿ ರಾಜಕೀಯ ಮತ್ತು ನ್ಯಾಯಿಕ ಅಸಮಾನತೆಗಳನ್ನು ತೊಡೆದು ಹಾಕಿ ಸ್ವತಂತ್ರ ಮಾರುಕಟ್ಟೆ ಚಿಂತನೆಯಿಂದ ಆಗಬಹುದಾದ ಅನ್ಯಾಯಗಳನ್ನು ಬದಿಗೊತ್ತಿ ಸಮಾಜದಲ್ಲಿ ಸಾಮಾಜಿಕ ನ್ಯಾಯ ಮತ್ತು ಸಮಾನ ಹಂಚಿಕೆಯನ್ನು ಸ್ಥಾಪಿಸಿ ಸಮಾನತೆಯನ್ನು ತರುವ ಪ್ರಯತ್ನವನ್ನು ಮಾಡಿತು. ಇದೆ ನಿಟ್ಟಿನಲ್ಲಿ ಬರುವ ಮತ್ತೊಂದು ಚಿಂತನೆಯೆಂದರೆ ವೈಜ್ಞಾನಿಕ ಸಮಾಜವಾದವಾಗಿದೆ. ಇದರ ಪ್ರಕಾರ ಸಮಾಜವಾದದ ಬೆಳವಣಿಗೆಯೂ ಈ ಕೆಳಕಂಡಂತಿದೆ.

ವೈಜ್ಞಾನಿಕ ಸಮಾಜವಾದವು ಯುರೋಪಿನಲ್ಲಿ ಮಾರ್ಕ್ಸ್ ಮತ್ತು ಎಂಗೆಲ್ಸ್‌ರಿಂದ 19ನೇ ಶತಮಾನದ ಮಧ್ಯಭಾಗದಲ್ಲಿ ಅಸ್ತಿತ್ವಕ್ಕೆ ಬಂದಿತು. ಇವರ ಪ್ರಯತ್ನಗಳ ಜೊತೆಗೆ ಇಂಗ್ಲೆಂಡಿನ ಹಾಗೂ ಪ್ರೌಲಿಸನ್ ಹಲವಾರು ಸಮಾಜವಾದಿ ಚಿಂತಕರೊಂದಿಗೆ ಬೆರೆತು ಚರ್ಚೆ ಮಾಡಿ ಅನಂತರದಲ್ಲಿ ಕೈಗಾರಿಕೆಯಲ್ಲಿ ಪ್ರಮುಖ ಸ್ಥಾನವನ್ನು ವಹಿಸಿದ್ದ ಇಂಗ್ಲೆಂಡಿನಲ್ಲಿ ಯುಟೋಪಿಯನ್ ಸಮಾಜವಾದಕ್ಕೆ ವಿಭಿನ್ನವಾದ ವೈಜ್ಞಾನಿಕ ತಳಹದಿಯುಳ್ಳ ಬಂಡವಾಳಶಾಹಿ ವಿರೋಧಿ ಚಿಂತನೆಯನ್ನು ಸಾಮಾಜಿಕ ನ್ಯಾಯದ ಆಧಾರದ ಮೇಲೆ ರಚಿಸುವ ಪ್ರಯತ್ನ ಮಾಡಿದರು. ಚಾರಿತ್ರಿಕವಾಗಿ ಶೋಷಣೆಗೆ ಕಾರಣವೆಂದು ಗುರುತಿಸಿ ಅದನ್ನು ತೊಡೆದು ಹಾಕುವ ಸಲುವಾಗಿ ಚಾರಿತ್ರಿಕ ವಿಕಸನ ಸಿದ್ಧಾಂತವನ್ನು ರಚಿಸಿ ಕ್ರಾಂತಿಯಿಂದಲೇ ಮಾತ್ರ ಸಮಾಜದಲ್ಲಿ ಬದಲಾವಣೆ ತರಲು ಸಾಧ್ಯವೆಂದು ಪ್ರತಿಪಾದಿಸಿದರು. ಬಂಡವಾಳಶಾಹಿತ್ವವನ್ನು ಬುಡಸಮೇತ ಕಿತ್ತೊಗೆದು ಕಾರ್ಮಿಕ ವರ್ಗಕ್ಕೆ ಪ್ರಾಮುಖ್ಯತೆ ನೀಡಿ ಶ್ರಮಿಕ ವರ್ಗವು ತನ್ನ ಸ್ವಾತಂತ್ರ್ಯವನ್ನು ಕ್ರಾಂತಿ ಮೂಲಕ ಪಡೆಯಬೇಕೆಂದು ಪ್ರತಿಪಾದಿಸಿದರು.

ಹೆಗೆಲ್‌ರವರ ಬರಹಗಳಿಂದ ಮೋಹಿತರಾಗಿದ್ದ ಮಾರ್ಕ್ಸ್ ಹೆಗೆಲ್‌ರವರ ಡೈಯೊಲೆಕ್ಟಿಕಲ್ ಪದ್ಧತಿ ಮುಖಾಂತರ ಹೊಸ ವಿಚಾರಗಳನ್ನು ಬೌದ್ಧಿಕ ಚರ್ಚೆಗಳಿಂದ ಒಳಪಡಿಸಿ ಈತ ಮುಂದೆ ಆ ಚಿಂತನೆಯನ್ನು ಬೆಳೆಸಿ ಅಭಿವೃದ್ಧಿಪಡಿಸಿ ಪ್ರಾಪಂಚಿಕ ವ್ಯವಸ್ಥೆಯಲ್ಲಿ

ಹೇಗೆ ಶೋಷಣೆಯನ್ನು ತೊಡೆದು ಹಾಕಬೇಕೆಂಬ ಬಗ್ಗೆ ತಮ್ಮ ವಿಚಾರಗಳನ್ನು ಮಂಡಿಸಿದರು. ಹೀಗೆ ಚರಿತ್ರೆಯಲ್ಲಿ ಕಾಲಾನುಕ್ರಮೇಣ ಆದ ಬದಲಾವಣೆಗಳನ್ನು ಗುರುತಿಸಿದ ಇವರು ಸಮಾತಾವಾದ ಮತ್ತು ಸಮಾಜವಾದಗಳ ಚರ್ಚೆಗಳಿಗೆ ಬೆಂಬಲ ನೀಡಿದರು. ಇವರ ಈ ಚರ್ಚೆಯಲ್ಲಿ ಚಾರಿತ್ರಿಕ ಕಾಲದಿಂದ ಆಧುನಿಕ ಕಾಲದವರೆಗೆ ಆದ ಬದಲಾವಣೆಗಳ ಸ್ಥೂಲ ಪರಿಚಯವು ಇದ್ದು ಸಮಾಜವಾದವು ಹೀಗೆ ಕಾರ್ಮಿಕರ ಶ್ರಮದಿಂದ ಕಟ್ಟಲ್ಪಟ್ಟಿದೆ ಎಂಬುದನ್ನು ಚರ್ಚಿಸಲಾಗಿದೆ. ಹೀಗೆ ಕಾರ್ಮಿಕ ಹಾಗೂ ಶ್ರಮಿಕ ವರ್ಗವನ್ನು ಹುರಿದುಂಬಿಸಿ ಇವರು ಉತ್ಪಾದನಾ ಮೂಲಗಳು ಹೆಚ್ಚು ವೈಜ್ಞಾನಿಕವಾದದಲ್ಲಿ ಶ್ರಮಿಕ ವರ್ಗ ಮತ್ತು ಸಾಮಾನ್ಯ ಜನರು ಇದನ್ನು ತಿರಸ್ಕರಿಸಿ ಬದಲಾವಣೆಗೆ ಅನುವು ಮಾಡಿಕೊಡುತ್ತಾರೆಂದು ಚರ್ಚಿಸಿದ್ದಾರೆ. ಇವರ ಈ ಹಂತ ಹಂತದ ವಿವರಣೆಯೂ ಮಾರ್ಕ್ಸ್‌ವಾದದ ವೈಜ್ಞಾನಿಕ ಅಧ್ಯಾಯ ಎಂಬುದು ಕಂಡುಬರುತ್ತದೆ.

ಈ ಮೇಲಿನ ವಿಶ್ಲೇಷಣೆಯ ಪ್ರಕಾರ ಪ್ರತಿಯೊಂದು ಸಮಾಜವು ಸದಾಕಾಲದಲ್ಲಿಯೂ ಉತ್ತಮ ಉತ್ಪಾದನಾ ಮಾಧ್ಯನಗಳನ್ನು ಹುಡುಕುತ್ತಾ ಆ ಮೂಲಕ ಸಮಾಜದ ಸಂವಾದಗಳಲ್ಲಿ ಬದಲಾವಣೆಯನ್ನು ತಂದು ಸಂಸ್ಥೆಗಳಲ್ಲಿ ಮಾರ್ಪಾಟುಗಳನ್ನು ಮಾಡಲು ಅವಕಾಶ ಮಾಡಿಕೊಡುತ್ತದೆ. ಈ ಬದಲಾವಣೆಗಳು ಚಾರಿತ್ರಿಕವಾಗಿ ಒಂದು ಹಂತದಿಂದ ಮತ್ತೊಂದು ಹಂತಕ್ಕೆ ಸಮಾಜವು ಮುಂದುವರೆಯಲು ಸಹಾಯಕಾರಿಯಾಗುತ್ತದೆ. ಹೀಗೆ ಬದಲಾದ ಸಮಾಜವು ಸಮತಾವಾದದ ಸಂಪೂರ್ಣ ಸ್ಥಿತಿಯನ್ನು ತಲುಪುವವರೆಗೂ ಮುಂದುವರೆದು ಈ ಮಧ್ಯದಲ್ಲಿ ಪ್ರಜಾಪ್ರಭುತ್ವ ಬಂಡವಾಳಶಾಹಿತ್ವ ಸಮಾಜಗಳನ್ನು ಮೀರಿ ನಿಲ್ಲುತ್ತದೆ. ಇಂತಹ ಸಮಾಜದ ಒಡೆತನವು ಕಾರ್ಮಿಕರ ಹಿಡಿತಕ್ಕೆ ಸಿಕ್ಕುವುದರಿಂದ ಕಾರ್ಮಿಕರು ಮತ್ತು ಅವರ ನಾಯಕರು ಈ ಅಧಿಕಾರವನ್ನು ಸಮತಾವಾದದ ಗುರಿ ತಲುಪುವಲ್ಲಿ ಬಳಸಿಕೊಳ್ಳಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಸಮಾಜವಾದವು ಚರಿತ್ರೆಯ ಒತ್ತಡಗಳಿಗೆ ಸಿಕ್ಕಿ ಮುಂದುವರೆದ ಸಮಾಜದ ಸಂಪೂರ್ಣ ರೂಪವೆನಿಸುತ್ತದೆ. ಹೀಗೆ ಮಾರ್ಕ್ಸ್ ಶ್ರಮಿಕ ವರ್ಗವು ಚರಿತ್ರೆಯಲ್ಲಿ ತನ್ನ ಪಾತ್ರವನ್ನು ಅರಿತು ಮುಂದುವರೆದರೆ ಸಮಾಜವಾದವನ್ನು ಮತ್ತು ಸಮತಾವಾದವನ್ನು ಶೀಘ್ರದಲ್ಲಿಯೇ ತಲುಪಬಹುದೆಂದು ತಿಳಿಸಿದ್ದಾರೆ.

ಹೀಗೆ ಮಾರ್ಕ್ಸ್‌ನ ಅಧ್ಯಯನ ಮಾರ್ಗವು ಲೌಕಿಕವಾಗಿ ಹಂತಹಂತಗಳ ಮೂಲಕ ವೈಜ್ಞಾನಿಕವಾದವಾಗಿ ವೈಜ್ಞಾನಿಕ ಸಮಾಜವಾದ ಎಂಬ ಹೆಸರುಗಳನ್ನು ಪಡೆದುಕೊಂಡಿದೆ.

## 14.4 ಸಮಾಜವಾದದ ಮುಖ್ಯ ತತ್ವಗಳು

ಸಮಾಜವಾದವು ಈ ಕೆಳಕಂಡ ಮುಖ್ಯ ಅಂಶಗಳನ್ನು ಅವಲಂಬಿಸಿದೆ

1. ಸಮಾಜವಾದವು ಮೂಲತಃ ಸಮಾಜದ ಮೇಲೆ ಹೆಚ್ಚಿನ ನಂಬಿಕೆಯನ್ನು ಹೊಂದಿದ್ದು, ವ್ಯಕ್ತಿಯನ್ನು ಸಮಾಜದ ಅಂಶವೆಂದು ಪರಿಗಣಿಸುತ್ತದೆ. ಫ್ರೈಡ್ ಬ್ರ್ಯಾಮಲಿಯವರ ಪ್ರಕಾರ ವ್ಯಕ್ತಿಗತವಾದ. ಇಚ್ಚೆಗಳನ್ನು ಸಮಾಜದ ಇಚ್ಚೆಗಾಗಿ ಮುಡಿಪಾಗಿಡುವುದೇ ಸಮಾಜವಾದ ಎಂದಿದ್ದಾರೆ. ಇಲ್ಲಿ ಉತ್ಪಾದನಾ ಮಾಡುವ ವಸ್ತುಗಳು ಕೇವಲ ಸಮಾಜದ ಅಶ್ಯಕತೆಗಾಗಿ ಬಳಕೆಯಾಗುವಂತಹವುಗಳು ಆದ್ದರಿಂದ ಇವುಗಳು ಲಾಭಕ್ಕಾಗಿ ಮಾಡಿದ ಶ್ರಮವಿಲ್ಲ.

2. ಸಮಾಜವಾದವು ಬಂಡವಾಳಶಾಹಿತ್ವವನ್ನು ತೊಡೆದು ಹಾಕುವುದರಿಂದ ಅವರು ಬಂಡವಾಳಶಾಹಿಯನ್ನು ವೈರಿಗಳೆಂದು ಪರಿಗಣಿಸಿದ್ದಾರೆ. ಇವರ ದೃಷ್ಟಿಯಲ್ಲಿ ಬಂಡವಾಳಶಾಹಿತ್ವವು ಕೇವಲ ಲಾಭದ ಆಧಾರದ ಮೇಲೆ ರಚಿತವಾಗಿರುವುದರಿಂದ ಇಲ್ಲಿ ಉತ್ಪಾದನೆಯು ಅಸಮಾನ ಹಂಚಿಕೆಗೆ ದಾರಿಯಾಗಿ ಉಳ್ಳವರು ಮತ್ತು ಉಳ್ಳದಿರುವವರ ನಡುವೆ ಅಂತರ ಹೆಚ್ಚಾಗುತ್ತದೆ. ಇದು ಅನ್ಯಾಯಕ್ಕೆ ಎಡೆಮಾಡಿಕೊಟ್ಟು ಬಂಡವಾಳಶಾಹಿತ್ವದ ದೌರ್ಬಲ್ಯಗಳನ್ನು ತೋರಿಸುತ್ತದೆ. ಇಂತಹ ಉತ್ಪಾದನೆಯು ಸಮಾಜದ ಯಾವುದೇ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡಿರುವುದಿಲ್ಲ.

3. ಸಮಾಜವಾದವು ಸಮಾಜದಲ್ಲಿ ಯಾವುದೇ ತೆರನಾದ ಸ್ಪರ್ಧೆಯನ್ನು ತೊಡೆದುಹಾಕಿ, ಈಗಾಗಲೇ ಅಸ್ತಿತ್ವದಲ್ಲಿರುವ ವ್ಯವಸ್ಥೆಯಲ್ಲಿರುವ ಹಲವಾರು ಲೋಪದೋಷಗಳನ್ನು ಟೀಕಿಸಿ, ಶ್ರಮಿಕ ವರ್ಗವು ಹೀಗೆ ಆದಾಯದಲ್ಲಿ ನಷ್ಟವನ್ನು ಹೊಂದುತ್ತವೆ ಎಂಬುದನ್ನು ಚರ್ಚಿಸಿ ಬಂಡವಾಳಶಾಹಿತ್ವವು ನಿರುದ್ಯೋಗಕ್ಕೆ ಹೇಗೆ ಕಾರಣವಾಗುತ್ತದೆ ಎಂಬುದನ್ನು ತಿಳಿಸಿ ಸಮಾಜವಾದದ ಪ್ರತಿಕೂಲ ಅಂಶಗಳ ಬಗ್ಗೆ ತಿಳಿಸುತ್ತದೆ.

4. ಸಮಾಜವಾದವು ಆರ್ಥಿಕ ಅಸಮಾನತೆಯನ್ನು ಸಾಧಿಸುವಲ್ಲಿ ಸಹಾಯಕಾರಿಯಾಗುತ್ತದೆ ಮತ್ತು ಬಂಡವಾಳಶಾಹಿತ್ವ ಉಂಟುಮಾಡಿದ ಉಳ್ಳವರ ಹಾಗೂ ಉಳ್ಳದಿರುವರ ನಡುವಿನ ವ್ಯತ್ಯಾಸವನ್ನು ಕಡಿಮೆ ಮಾಡುತ್ತದೆ. ಲೆವಲ್ಲಿಯವರ ಪ್ರಕಾರ ಸಮಾಜವಾದವು ಹೆಚ್ಚಿನ ಸಮಾನತೆಯನ್ನು ಸಾಧಿಸುವ ಒಂದು ಚಿಂತನೆ. ಆರ್ಥಿಕ ಸಮಾಜವಾದದ ಆದರ್ಶವನ್ನು ಹೊಂದಿರುವ ಚಿಂತನೆಯಾಗಿದೆ. ಉಲ್ಸೆ ಅವರ ಪ್ರಕಾರ ಸಮಾಜವಾದವು ಕೇವಲ ಸಮಾನತೆಯನ್ನು ಸಾಧಿಸುವಲ್ಲದ ಕಾರ್ಮಿಕ ನಾಯಕತ್ವವು ಸಮಾಜದ ಮೇಲೆ ನಿಯಂತ್ರಣವನ್ನು ಹೊಂದಲು ಸಹಾಯ ಮಾಡುವ ವ್ಯವಸ್ಥೆ ಎಂದಿದ್ದಾರೆ.

5. ಸಮಾಜವಾದವು ಉತ್ಪಾದನಾ ಮೂಲಗಳ ಮೇಲೆ ಸಾರ್ವಜನಿಕ ನಿಯಂತ್ರಣವಿರಬೇಕೆಂದು ತಿಳಿಸುತ್ತಾ ಖಾಸಗಿ ಬಂಡವಾಳ ಹೂಡುವಿಕೆಯನ್ನು ಇದು ತೊಡೆದು ಹಾಕುವ ಯೋಜನೆಯನ್ನು ಹೊಂದಿದೆ. ಅಂದರೆ ಉತ್ಪಾದನಾ ಮೂಲಗಳನ್ನು ರಾಷ್ಟ್ರೀಕರಣಗೊಳಿಸಿ ಭೂಮಿಯನ್ನು ಸೇರಿದಂತೆ ಇತರೇ ಉತ್ಪಾದನಾ ಮೂಲಗಳನ್ನೆಲ್ಲಾ ಸಮುದಾಯದ ಒಡೆತನದ ಅಡಿಯಲ್ಲಿ ತಂದು ಸಮುದಾಯಕ್ಕಾಗಿ ಬಳಸುವ ಚಿಂತನೆಯು ಈ ಸಮಾಜವಾದದ ಚಿಂತನೆಯಲ್ಲಿ ಒಂದಾಗಿದೆ. ಉತ್ಪಾದನಾ ಮೂಲಗಳನ್ನೆಲ್ಲ ರಾಷ್ಟ್ರದ ಹಿಡಿತಕ್ಕೆ ತರುವ ಮೂಲಕ ಹೆಚ್ಚಿನಾಂಶ ಸಮಾಜವಾದವನ್ನು ಸಾಧಿಸಿದಂತಾಗಿದೆ ಎಂದು ಇವರು ಅಭಿಪ್ರಾಯಪಟ್ಟಿದ್ದಾರೆ. ಹೀಗೆ ಸಮಾಜವಾದವು ಖಾಸಗಿ ಆಸ್ತಿಯ ಹಕ್ಕನ್ನು ತೊಡೆದು ಹಾಕಿ ಅಸಮಾನತೆಯನ್ನು ತೊಡೆದು ಉತ್ಪಾದನಾ ಒಡೆತನವನ್ನು ಸಮುದಾಯದ ಹಿಡಿತಕ್ಕೆ ತಂದು ಶೋಷಣೆಯನ್ನು ತೊಡೆದುಹಾಕುವ ಚಿಂತನೆಯನ್ನು ಹೊಂದಿದೆ.

## 14.5 ಸಮಾಜವಾದದ ವಿವರಣೆ

ಸಮಾಜವಾದವು ಎಲ್ಲ ರೀತಿಯ ಸ್ಪರ್ಧೆಗಳನ್ನು ತೊಡೆದು ಹಾಕಿ ಬಂಡವಾಳಶಾಯಿಗಳನ್ನು ತೊಡೆದು ಹಾಕುವ ಒಂದು ಉತ್ತಮ ಚಿಂತನೆಯಾಗಿದೆ. ಇದು ಎಲ್ಲ ರೀತಿಯ ಅಸಮಾನತೆಗಳನ್ನು ತೊಡೆದು ಹಾಕಿ ಉತ್ತಮ ಸಮಾಜದ ನಿರ್ಮಾಣದೆಡೆಗೆ ತನ್ನ ಒಲವನ್ನು ತೋರಿಸಿದೆ. ಇದರ ಪ್ರಕಾರ ಬಂಡವಾಳಶಾಹಿತ್ವವು ಮಾನವನ ಗುಣವನ್ನು ಕೆಡಿಸುತ್ತದೆ. ಅಸತ್ಯ ಹಾಗೂ ಅನ್ಯಾಯಗಳಿಗೆ ಎಡೆಮಾಡಿಕೊಡುತ್ತದೆ ಎಂದು ಹೇಳಿದ್ದಾರೆ. ಸಮಾಜವಾದವು ಈ ದೃಷ್ಟಿಯಲ್ಲಿ ಮಾನವನ ಗುಣದ ಮೇಲೆ ಉತ್ತಮ ಪರಿಣಾಮವನ್ನು ಬೀರಿ ಮೌಲ್ಯಗಳ ಪ್ರಸರಣೆಯೆಲ್ಲ ಹೆಚ್ಚಿನ ಬದಲಾವಣೆಯನ್ನು ತರುತ್ತದೆ. ಸ್ವಾರ್ಥಕ್ಕಿಂತ ಸರ್ವರ ಹಿತಾಸಕ್ತಿಯನ್ನು ಬಯಸುವ ಈ ಚಿಂತನೆಯೂ ಪ್ರಜಾಪ್ರಭುತ್ವವನ್ನು ಸಂಪೂರ್ಣವಾಗಿ ಕಂಡುಕೊಳ್ಳಲು ಪ್ರಯತ್ನವನ್ನು ಮಾಡುತ್ತದೆ. ಹೀಗೆ ಆದರ್ಶಾತ್ಮಕ ಅಂಶಗಳನ್ನು ಹೊಂದಿರುವ ಈ ಸಮಾಜವಾದವನ್ನು ಟೀಕಾಕಾರರು ನೌಕರಶಾಹಿ ಮತ್ತು ಅಧಿಕಾರಶಾಹಿಯ ನಿಯಂತ್ರಣ ವ್ಯವಸ್ಥೆ ಎಂದು ಟೀಕಿಸಿದ್ದಾರೆ. ಇಂತಹ ಒಂದು ವ್ಯವಸ್ಥೆಯಲ್ಲಿ ಸ್ಪರ್ಧೆಗಿಂತ ಸಮಾಜದ ಒಳಿತಿಗಾಗಿ ಶ್ರಮಿಸುವಂತಹ ವ್ಯವಸ್ಥೆಯಿದೆ. ಸಮಾಜವಾದಿಗಳು ಪ್ರಜಾಪ್ರಭುತ್ವವನ್ನು ಆರ್ಥಿಕ ಚಟುವಟಿಕೆಗಳಿಗೂ ಸೇರಿದಂತೆ ಹಮ್ಮಿಕೊಂಡು ಪ್ರಜಾಪ್ರಭುತ್ವವನ್ನು ಸ್ವತಃ ಪೂರ್ಣವಾಗಿಸುವ ಚಿಂತನೆಯನ್ನು ಹೊಂದಿದೆ ಮತ್ತು ಇವರು ಭ್ರಷ್ಟಾಚಾರವನ್ನು ತೊಡೆದು ಹಾಕಿ ಅವರ ಹಿತಾಸಕ್ತಿಯನ್ನು ಕಾಪಾಡುವಂತಹ ದುಷ್ಪರಿಣಾಮಗಳನ್ನು ತೊಡೆದು ಹಾಕುವಂತಹ ವ್ಯವಸ್ಥೆಯನ್ನು ಪ್ರತಿಪಾದಿಸಿದ್ದಾರೆ. ನೌಕರಶಾಹಿಯು ರಾಜ್ಯದ ಹಿತಾಸಕ್ತಿಯನ್ನು ದೃಷ್ಟಿಯಲ್ಲಿರಿಸಿಕೊಳ್ಳದೇ ಸ್ವಹಿತಾಸಕ್ತಿಯನ್ನು ಬೆಳೆಸಿಕೊಳ್ಳುವ ಒಂದು ವ್ಯವಸ್ಥೆಯಾಗಿರುವುದರಿಂದ ಇದು ಸಾರ್ವಜನಿಕವಾಗಿ ಒಳಿತನ್ನು ಬಯಸುವುದಿಲ್ಲ. ರಾಜ್ಯದ ನಿಯಂತ್ರಣದಲ್ಲಿ ಉತ್ಪಾದನಾ ಮೂಲಗಳು ಬಂದಾಗ ಉತ್ಪಾದನಾ ವ್ಯವಸ್ಥೆಯಲ್ಲಿ ಮತ್ತು ಹಂಚಿಕೆಯಲ್ಲಿ

ಬದಲಾವಣೆಯಾಗಿ ಬಡತನದ ಮತ್ತು ಶ್ರೀಮಂತಿಕೆಯ ನಡುವಿನ ಅಂತರವನ್ನು ಕಡಿಮೆ ಮಾಡುತ್ತದೆ. ಕಾರಣ ಸಮಾಜದಲ್ಲಿ ಅಸಮಾನತೆಯು ತೊಡೆದು ಹಾಕಲ್ಪಟ್ಟು ಅಭಿವೃದ್ಧಿಗೆ ನಾಂದಿಯಾಗುತ್ತದೆ.

ಸಮಜವಾದವು ಅನೇಕ ಸಮಸ್ಯೆಗಳನ್ನು ಈ ನಿಟ್ಟಿನಲ್ಲಿ ಎದುರಿಸಿದರೂ ಇದು ಪ್ರತಿಯೊಂದು ಸಮಾಜಕ್ಕೆ ಅವಶ್ಯಕವಾಗಿ ಬೇಕಾಗುವ ಒಂದು ಚಳುವಳಿಯಾಗಿದೆ. ಇದು ಸಾಮಾಜಿಕ ಶಾಸನಗಳ ರಚನೆಯಲ್ಲಿಯೂ ಮಹತ್ತರ ಬದಲಾವಣೆಗಳನ್ನು ತರುವುದರೊಂದಿಗೆ ಶ್ರಮಿಕ ವರ್ಗಕ್ಕೆ ಅನುಕೂಲವಾಗುವಂತಹ ಆದಾಯದಲ್ಲಿ ಹೆಚ್ಚಳ, ದುಡಿಯುವ ವೇಳೆಯಲ್ಲಿ ವ್ಯತ್ಯಾಸ, ಕೈಗಾರಿಕೆಯ ಉದ್ಯಮದಲ್ಲಿ ಪರಿಸರದ ಬದಲಾವಣೆ, ನಿರ್ಧರಿತ ಬೆಲೆಯ ರೂಪಣೆ, ಆಸ್ತಿಯ ನಿಯಂತ್ರಣ ಹೀಗೆ ಹಲವಾರು ಶಾಸನಬದ್ಧ ವ್ಯತ್ಯಾಸಗಳನ್ನು ಆಚರಣೆಗೆ ತರುತ್ತದೆ. ಇದರಿಂದ ಪ್ರಜಾಪ್ರಭುತ್ವವು ಆರ್ಥಿಕ ಬಲಿಷ್ಠತೆಯನ್ನು ಹೊಂದಿದ ಉತ್ತಮ ವ್ಯವಸ್ಥೆಯಾಗುತ್ತದೆ.

## ನಿಮ್ಮ ಪ್ರಗತಿ ಪರಿಶೀಲನೆ - 1

**ಸೂಚನೆ:** 1. ಈ ಕೆಳಗೆ ಬಿಟ್ಟಿರುವ ಜಾಗವನ್ನು ನಿಮ್ಮ ಉತ್ತರಕ್ಕೆ ಉಪಯೋಗಿಸಿಕೊಳ್ಳಿ.

2. ಈ ಘಟಕದ ಕೊನೆಯಲ್ಲಿ ನೀಡಿರುವ ಉತ್ತರದೊಂದಿಗೆ ನಿಮ್ಮ ಪ್ರಗತಿಯನ್ನು ಪರಿಶೀಲಿಸಿಕೊಳ್ಳಿ.

**1. ಸಮಾಜವಾದದ ಹಿನ್ನೆಲೆಯನ್ನು ಪರಿಶೀಲಿಸಿ.**

..........................................................................................................

..........................................................................................................

..........................................................................................................

..........................................................................................................

..........................................................................................................

..........................................................................................................

**2. ಆಧುನಿಕ ಸಮಾಜವಾದವನ್ನು ಚರ್ಚಿಸಿ.**

..........................................................................................................

..........................................................................................................

..........................................................................................................

..........................................................................................................

..........................................................................................................

..........................................................................................................

**3. ಸಮಾಜವಾದದ ತತ್ವಗಳನ್ನು ವಿರ್ಮಶಿಸಿ.**

..........................................................................................................

..........................................................................................................

..........................................................................................................

..........................................................................................................

..........................................................................................................

..........................................................................................................

## 14.6 ಸಮಾರೋಪ

ಸಮಾರೋಪದಲ್ಲಿ ಮುಖ್ಯವಾಗಿ ತಿಳಿಯಬೇಕಾದ ಚರ್ಚೆಯೆಂದರೆ ಸಮಾಜವಾದವು ವ್ಯಕ್ತಿಗಿಂತ ಸಮಾಜಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿ ಬಂಡವಾಳಶಾಹಿತ್ವ ತೊಡರುಗಳನ್ನು ಸಂಪೂರ್ಣವಾಗಿ ತೊಡೆದು ಹಾಕಿ ಶೋಷಣೆಯನ್ನು ತೊಡೆದು ಸಮಾನ ಸಮಾಜವನ್ನು ಸ್ಥಾಪಿಸಿಕೊಳ್ಳುವ ಒಂದು ವ್ಯವಸ್ಥೆ ಎಂದಷ್ಟೆ ಹೇಳಬಹುದಾಗಿದೆ.

## 14.7 ಒಟ್ಟಾರೆ ಅಭಿಪ್ರಾಯ

ಸಮಾಜವಾದದ ಈ ಮುಖ್ಯ ಅಂಶಗಳ ಚರ್ಚೆಯು ಸಮಾಜವಾದವನ್ನು ಆಳವಾಗಿ ಅರ್ಥೈಸಿಕೊಳ್ಳಲು ಸಹಾಯವಾಗುವ ಒಂದು ಅಧ್ಯಾಯವಾಗಿದ್ದು ಸಮಾಜದ ಒಳಿತು ಕೆಡಕುಗಳನ್ನು ತಿಳಿದುಕೊಳ್ಳುವಲ್ಲಿ ಒಂದು ಪ್ರಮುಖ ಅಧ್ಯಯನ ಮಾರ್ಗವಾಗಿದೆ.

## 14.8 ಕಠಿಣ ಪದಗಳು

ಭ್ರಾತೃತ್ವ : ಸಹೋದರತ್ವ

ಒಡೆತನ : ಮಾಲೀಕತ್ವ

ಶ್ರಮಿಕವರ್ಗ : ದುಡಿಯುವವರು/ ಕಾರ್ಮಿಕರು

## 14.9 ಕೆಲವು ಉಪಯುಕ್ತ ಗ್ರಂಥಗಳು

ಎಫ್.ಡಬ್ಲ್ಯೂ ಕಾಕರ್ : ರೀಸೆಂಟ್ ಪೊಲಿಟಿಕಲ್ ಥಾಟ್

ಎಸ್.ಪಿ. ವರ್ಮಾ : ಮಾಡರ್ನ್ ಪೊಲಿಟಿಕಲ್ ಥಿಯರಿ

ಡಾ. ಕೆ.ಜೆ. ಸುರೇಶ್ : ಆಧುನಿಕ ಸಿದ್ಧಾಂತಗಳು

## 14.10 ನಿಮ್ಮ ಪ್ರಗತಿಯನ್ನು ಪರಿಶೀಲಿಸಿಕೊಳ್ಳಿ

**ನಿಮ್ಮ ಪ್ರಗತಿ ಪರಿಶೀಲನೆ - 1**

1. ನೋಡಿ ವಿಭಾಗ 14.2
2. ನೋಡಿ ವಿಭಾಗ 14.3
3. ನೋಡಿ ವಿಭಾಗ 14.4

# ಘಟಕ 15 ಪ್ರಜಾಸತ್ತಾತ್ಮಕ ಸಮಾಜವಾದ

## ರಚನೆ


15.0 ಉದ್ದೇಶಗಳು

15.1 ಪ್ರಸ್ತಾವನೆ

15.2 ಪ್ರಜಾಸತ್ತಾತ್ಮಕ ಸಮಾಜವಾದದ ಹಿನ್ನೆಲೆ

15.3 ಫೇಬಿಯನ್ ಸಮಾಜವಾದದ ಗುರಿ ಹಾಗೂ ಉದ್ದೇಶ

15.4 ಪ್ರಜಾಸತ್ತಾತ್ಮಕ ಸಮಾಜ

15.5 ಪ್ರಜಾಸತ್ತಾತ್ಮಕ ಸಮಾಜವಾದದ ಟೀಕೆ

15.6 ಒಟ್ಟಾರೆ ಅಭಿಪ್ರಾಯ

15.7 ಕಠಿಣ ಪದಗಳು

15.8 ಕೆಲವು ಉಪಯುಕ್ತ ಗ್ರಂಥಗಳು

15.9 ನಿಮ್ಮ ಪ್ರಗತಿಯನ್ನು ಪರಿಶೀಲಿಸಿಕೊಳ್ಳಿ

## 15.0 ಉದ್ದೇಶಗಳು

ಈ ಅಧ್ಯಯನದ ಉದ್ದೇಶ ಇಂದು ಅಸ್ತಿತ್ವದಲ್ಲಿರುವ ಪ್ರಜಾಸತ್ತಾತ್ಮಕ ಸಮಾಜವಾದದ ಬಗ್ಗೆ ಪ್ರಸ್ತಾಪಿಸಿ ಆ ಮೂಲಕ ಬದಲಾಗುತ್ತಿರುವ ಸಮಾಜವಾದದ ಆದರ್ಶದಲ್ಲಿನ ಹೊಂದಾಣಿಕೆ ಹಾಗೂ ಬದಲಾವಣೆಯ ಬಗ್ಗೆ ತಿಳಿದುಕೊಳ್ಳುವುದಾಗಿದೆ ಹಾಗೂ ಇದು ಸಮಾಜದ ಮೇಲೆ ಯಾವ ಪರಿಣಾಮವನ್ನು ಬೀರುವುದಾಗಿದೆ ಎಂಬುದನ್ನು ತಿಳಿದುಕೊಳ್ಳುವುದಾಗಿದೆ.

## 15.1 ಪ್ರಸ್ತಾವನೆ

ಸಮಾಜವಾದದ ಮತ್ತೊಂದು ರೂಪವಾದ ಪ್ರಜಾಪ್ರಭುತ್ವ ಸಮಾಜವಾದವು ಈಗ ಆಸ್ಟ್ರೀಯ, ಜರ್ಮನಿ, ಬ್ರಿಟೀಷ್ ಲೇಬರ್ ಪಕ್ಷದ ಚಿಂತನೆಗಳಲ್ಲಿ ಕಂಡು ಬರುತ್ತದೆ. ಯುರೋಪಿನ ಇತರೇ ರಾಷ್ಟ್ರಗಳಲ್ಲೂ ಇದರ ಚಿಂತನೆಗಳು ಪ್ರಚಲಿತದಲ್ಲಿದ್ದು ಎರಡನೇ ಮಹಾಯುದ್ಧದ ನಂತರದಲ್ಲಿ ಹೆಚ್ಚು ಬೆಳಕಿಗೆ ಬಂದಿದೆ. ಪ್ರಜಾಪ್ರಭುತ್ವ ಸಮಾಜವಾದದ ಮೂಲ ಸಿದ್ಧಾಂತವು ಹೊಸ ಕಾಂತಿಯನ್ನು ಚಿಂತನೆಯಾದ ನೈತಿಕ ಸಮಾಜವಾದದಲ್ಲಿ ಮೂಡಿಬಂದಿದೆ. ಇದರ ಪ್ರಕಾರ ಸಮಾಜವಾದವು ಚರಿತ್ರೆಯಲ್ಲಿ ನೈಸರ್ಗಿಕವಾಗಿ ಬೆಳೆದ ಸಿದ್ಧಾಂತವಲ್ಲಾ ಆದರೆ, ನೈತಿಕವಾಗಿ, ಆದರ್ಶಮಾರ್ಗವಾಗಿ, ಎಲ್ಲಾ ಸಮಾಜಕ್ಕೂ ಅಳವಡಿಸುವಂತಹ ಚಿಂತನೆಯಾಗಿದ್ದು ಇದು ಸಮಾಜದ ಪುನರ್‌ರಚನೆಗಾಗಿ ಜನರನ್ನು ಎಚ್ಚರಿಸಿ ಪ್ರಜ್ಞಾವಂತರಾಗಿಸುವ ಚಿಂತನೆಯಾಗಿದೆ. ಇದು, ವರ್ಗಕಲಹ, ಸಾಮಾಜಿಕ ಕ್ರಾಂತಿಯನ್ನು ನಿರ್ಲಕ್ಷಿಸಿ ಇವು ಅನವಶ್ಯಕವೆಂದು ಚರ್ಚಿಸುತ್ತದೆ. ಪ್ರಜಾಪ್ರಭುತ್ವ ಸಮಾಜವಾದವು ಈ ಮೂಲಕ ಸಮಾಜದ ಸಾಂಸ್ಕೃತಿಕ ಹಾಗೂ ವಿದ್ಯಾಭ್ಯಾಸದ ಹಿನ್ನೆಲೆಯಲ್ಲಿ ಬೆಳೆಯುವ ಚಿಂತನೆಯಾಗಿದ್ದು ಇದು ಬಂಡವಾಳಶಾಹಿಯ ಬೆಳಕಿನಲ್ಲಿಯೇ ಅರಳುತ್ತದೆ ಎಂಬುದಾಗಿದೆ. ಇದೊಂದು ಸುಧಾರಣಾತತ್ವವಾಗಿ, ಪ್ರಜಾಪ್ರಭುತ್ವ ಸಮಾಜವಾದವು ಫ್ರಾಂಕ್‌ಫುಟ್ ಚಿಂತನಾಶಾಲೆಯಿಂದ ಬೆಳೆದು ಅಸ್ತಿತ್ವಕ್ಕೆ ಬಂದಿದೆ ಎಂಬುದಾಗಿದೆ. ಇವುಗಳಲ್ಲಿ ಪ್ರಮುಖವಾದುದು ಎಂದರೆ

1. ಸಮಾಜವಾದವು ಒಂದು ಅಂತರರಾಷ್ಟ್ರೀಯ ಚಳುವಳಿಯಾಗಿದ್ದು ಇದು ಎಲ್ಲೆಡೆಯೂ ಒಂದೇ ತೆರನಾದ ಮಾರ್ಗವನ್ನು ಬಯಸುವುದಿಲ್ಲಾ. ಮಾರ್ಕ್ಸ್‌ವಾದದ ಮೂಲಕವೇ ಆಗಲೀ, ಅಥವ ಇನ್ನಾವುದೇ ಮೂಲಕವೇ ಆಗಲಿ, ಇದರ ಗುರಿ, ಸಾಮಾಜಿಕ ನ್ಯಾಯ, ಉತ್ತಮಜೀವನ, ಸ್ವಾತಂತ್ರ ಹಾಗೂ ವಿಶ್ವಶಾಂತಿಯನ್ನು ಕಂಡುಕೊಳ್ಳುವುದೇ ಆಗಿದೆ.

2. ಸ್ವಾತಂತ್ರ್ಯವಿಲ್ಲದೇ ಸಮಾಜವಾದವಿರುವುದಿಲ್ಲಾ ಸಮಾಜವಾದವನ್ನು ಪ್ರಜಾಪ್ರಭುತ್ವದ ಮಾರ್ಗದಲ್ಲಿಯೇ ಕಂಡುಕೊಳ್ಳಬೇಕು ಹಾಗೂ ಇವೆರಡೂ ಒಂದಕ್ಕೊಂದು ಪೂರಕವಾಗಿವೆ ಎಂದು ತಿಳಿಸಿದ್ದಾರೆ.

3. ಬಂಡವಾಳಶಾಹಿತ್ವವನ್ನು ತೊಡೆದು ಹಾಕಿ, ಸಮಾಜವಾದವು ಸಾರ್ವಜನಿಕರಿಗೆ ಸಂಪೂರ್ಣ ಉದ್ಯೋಗ ನೀಡುವ ಯೋಜನೆಯನ್ನು ಹಾಕಿಕೊಂಡಿದ್ದು ಉತ್ಪಾದನೆಯ ಹೆಚ್ಚಳ, ಬದುಕಿನ ಮಟ್ಟದ ಉದ್ಧಾರ, ಸಾಮಾಜಿಕ ಭದ್ರತೆ ಹಾಗೂ ಸರಿಯಾದ ಹಂಚಿಕೆಯನ್ನು ಮಾಡುವ ಉದ್ದೇಶ ಹೊಂದಿದೆ.

4. ಸಾರ್ವಜನಿಕ ಒಡೆತನವು ಈ ನಿಟ್ಟಿನಲ್ಲಿ ರಾಷ್ಟ್ರೀಕರಣದ ಬಣ್ಣವನ್ನು ಪಡೆದುಕೊಂಡು ಈಗಾಗಲೇ ಅಸ್ತಿತ್ವದಲ್ಲಿರುವ ಉತ್ಪಾದನಾ ಮೂಲಗಳ ಒಡೆತನವನ್ನು ಸಮುದಾಯದ ಒಳಿತಿಗಾಗಿ ಬಳಸುವುದಾಗಿದೆ.

5. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವ್ಯಾಪಾರೀ ಸಂಘಟನೆಗಳೂ ಹಾಗೂ ಗ್ರಾಹಕ ಸಂಘಟನೆಗಳು ಅವಶ್ಯಕವೆಂಬುದನ್ನು ಮನಗಾಣಬಹುದು.

6. ಸಮಾಜವಾದಿ ಯೋಜನೆ ಎಂದರೆ ಯೋಜನಾ ಅಧಿಕಾರವೆಲ್ಲವೂ ಕೇಂದ್ರೀಕೃತವಾಗಬೇಕೆಂದಲ್ಲಾ, ಅದು ವಿಕೇಂದ್ರೀಕೃತವಾಗಿರಬೇಕೆಂಬುದು ಆಗಿದೆ.

7. ಸಮಾಜವಾದವು ವ್ಯಕ್ತಿ ತನ್ನ ಶ್ರಮಕ್ಕೆ ತಕ್ಕಂತೆ ಫಲವನ್ನು ಬಯಸುವುದು ಸರಿ ಎಂಬ ಭಾವನೆ ಹೊಂದಿದೆ.

8. ಸಮಾಜವಾದಿಗಳು ಎಲ್ಲಾ ರೀತಿಯ ನ್ಯಾಯಿಕ, ಆರ್ಥಿಕ, ಹಾಗೂ ರಾಜಕೀಯ ವ್ಯತ್ಯಾಸಗಳನ್ನು ಲಿಂಗಬೇಧಗಳನ್ನು, ಗುಂಪಿನ ನಡುವಿನ ಅಂತರ/ಬೇಧಗಳನ್ನು, ಗ್ರಾಮ್ಯ ಹಾಗೂ ಪಟ್ಟಣ ಪ್ರದೇಶವೆಂಬ ವಿಂಗಡಣೆಯನ್ನು, ಜನಾಂಗೀಯ ಹಾಗೂ ಪ್ರಾದೇಶಿಕ ವ್ಯತ್ಯಾಸಗಳನ್ನು ಒಪ್ಪುವುದಿಲ್ಲಾ.

9. ಪ್ರಜಾಪ್ರಭುತ್ವ ಸಮಾಜವಾದವು ಎಲ್ಲ ರೀತಿಯ ಸಾಮ್ರಾಜ್ಯಶಾಹಿತ್ವವನ್ನು ವಿರೋಧಿಸುತ್ತದೆ. ಇದು ಜನರ ಎಲ್ಲ ರೀತಿಯ ಶೋಷಣೆ ಹಾಗೂ ಶೋಷಿತವರ್ಗಗಳನ್ನು ದೃಷ್ಠಿಯಲ್ಲಿರಿಸಿಕೊಂಡು ಅವುಗಳನ್ನು ತೊಡೆದು ಹಾಕಲು ಯತ್ನಿಸುತ್ತದೆ. ಪ್ರಪಂಚದ ಹಣಕಾಸನ್ನು ನಾವು ಪುನರ್ ಹಂಚಿಕೆ ಮಾಡಬೇಕೆಂದು ಇದು ತಿಳಿಸುತ್ತದೆ. ಉತ್ಪಾದನೆಯ ಹೆಚ್ಚಳ ಸಹಾ ಇದರ ಮೂಲ ಚಿಂತನೆಯಾಗಿದೆ.

10. ಸ್ವಾತಂತ್ರ್ಯದ ಜೊತೆಜೊತೆಗೆ ನಾವು ಶಾಂತಿಯನ್ನು ಕಾಪಾಡಬೇಕೆಂದೂ ಇವರು ಅಭಿಪ್ರಾಯಪಟ್ಟಿದ್ದಾರೆ.

ಹೀಗೆ ಸಮಾಜವಾದವು ಕೇವಲ ಕಾರ್ಮಿಕರಿಗೆ ಮಾತ್ರವಲ್ಲದೇ ಸಾರ್ವಜನಿಕರೆಲ್ಲರಿಗೂ ಉತ್ತಮ ಬೆಂಬಲ ನೀಡುವ ಯೋಜನೆಯನ್ನು ಹೊಂದಿದೆ. ಎಲ್ಲ ರೀತಿಯ ಶೋಷಣೆಗಳನ್ನು ತೊಡೆದು ಹಾಕಿ ಆರ್ಥಿಕವಾಗಿ ಪುನರ್ ಹಂಚಿಕೆ ಅವಶ್ಯಕವೆಂದು ಇದು ಚರ್ಚಿಸುತ್ತದೆ.

## 15.2 ಪ್ರಜಾಸತ್ತಾತ್ಮಕ ಸಮಾಜವಾದದ ಹಿನ್ನೆಲೆ

ಫೇಬಿಯನ್ ಸಮಾಜವಾದದ ಆಧುನಿಕ ರೂಪವೇ ಪ್ರಜಾಪ್ರಭುತ್ವ ಸಮಾಜವಾದ. ಇಲ್ಲಿ ಪ್ರಜಾಪ್ರಭುತ್ವ ಹಾಗು ಸಮಾಜವಾದಕ್ಕೆ ಎರಡಕ್ಕೂ ಸಮಾನ ಗೌರವವಿದೆ. ಇವೆರಡರ ಗುರಿಗಳನ್ನು ಬೇರ್ಪಡಿಸಲು ಸಾಧ್ಯವಿಲ್ಲ. ಇದು ಸಾಮಾನ್ಯ ಜನರ ಜೀವನ ಸುಧಾರಿಸಲು ಬೇಕಾದ ತಂತ್ರ ಎಂದು ಗುರುತಿಸಲಾಗಿದೆ. ಸಮಾಜವಾದಿ ಗುರಿ ತಲುಪಲು ಪ್ರಜಾಪ್ರಭುತ್ವದ ಮಾರ್ಗದ ಬಗ್ಗೆ ಈ ಚರ್ಚೆ ಇದೆ. ಇದು ಮಾರ್ಕ್ಸ್‌ವಾದವನ್ನು ಬದಲಿಸಿ ಚರ್ಚಿಸುತ್ತದೆ.

ಇದರ ಪ್ರಕಾರ ಇಡೀ ಸಮಾಜದಲ್ಲಿನ ಉತ್ಪಾದನಾ ಮೂಲಗಳನ್ನು ರಾಷ್ಟ್ರೀಕರಣ ಮಾಡುವ ಅವಶ್ಯಕತೆ ಇಲ್ಲಾ. ಆದರೆ, ಅವಶ್ಯಕವಾದದ್ದನ್ನು ಮಾತ್ರ ಮಾಡಿದರೆ ಸಾಕು. ಹೆಚ್ಚಿನ ಜನರಿಗೆ ಇದರ ಪ್ರಜ್ಞೆ ಇಲ್ಲ ಎಂದಿದ್ದಾರೆ.

ಇದು ಸಮಾಜವಾದದ ಗುರಿಯನ್ನು ವೈಶಾಲ್ಯಗೊಳಿಸುವೆಡೆಗೆ ಚಿಂತಿಸಿದ್ದು, ಇದು ಮಾನವನ ಜೀವನದಲ್ಲಿ 'ವಸ್ತು'ಗಳ ಪ್ರಾಮುಖ್ಯತೆಯನ್ನು ಕಡಿಮೆಗೊಳಿಸುವ ದೃಷ್ಟಿ ಹೊಂದಿದೆ. ಮಾನವನ ನೈತಿಕತೆ, ಬೌದ್ಧಿಕತೆ, ಭಾವನಾತ್ಮಕತೆ ಇವು ಅವನ ಸಂಪೂರ್ಣ ಬೆಳವಣಿಗೆಗೆ ಅವಶ್ಯಕವೆಂದಿದ್ದಾರೆ. ಬರೀ ಊಟ, ವಸತಿ, ಬಟ್ಟೆ ನೋಡಿದರೆ ಸಾಲದು, ಅವರ ವಿದ್ಯಾಭ್ಯಾಸ ಸುಖಃ-ದುಃಖ, ಸಂಸಾರ, ಸಂಸ್ಕೃತಿಗಳಿಗೂ ನಾವು ಬೆಲೆಯನ್ನು ಕೊಡಬೇಕು ಎಂದು ಚರ್ಚಿಸಿದ್ದಾರೆ.

ಇವರ ಪ್ರಕಾರ, ಸ್ವತಂತ್ರ, ಮಾನವನ ಅಭಿವೃದ್ಧಿಗೆ ಬಹಳ ಮುಖ್ಯವಾಗಿ ಬೇಕಾಗುವುದು. ಸಮಾಜವಾದದಲ್ಲಿ ಸ್ವತಃ ಆಸ್ತಿಗೆ ಹಕ್ಕಿಲ್ಲದಿದ್ದರೂ, ಶೋಷಿತವಲ್ಲದ ವ್ಯವಸ್ಥೆಗೆ ಅಡಚಣೆ ಇಲ್ಲಾ ಎಂದಿದ್ದಾರೆ. ಯಾವ ಸಮಾಜದಲ್ಲಿ ವ್ಯಕ್ತಿಗತವಾದ ಸ್ವಾತಂತ್ರ್ಯವಿರುವುದಿಲ್ಲವೋ, ಅಂತಹ ಸಂದರ್ಭದಲ್ಲಿ ಅಲ್ಲಿನ ವ್ಯವಸ್ಥೆ ಅನುಪಯುಕ್ತವೆಂದಿದ್ದಾರೆ.

ಈ ರೀತಿಯಾಗಿ ಚಿಂತಿಸುವ ಈ ಪ್ರಜಾಪ್ರಭುತ್ವ ಸಮಾಜವಾದವು ಎಲ್ಲ ರೀತಿಯ ಸಾರ್ವಭೌಮತ್ವವನ್ನು ಟೀಕಿಸುತ್ತದೆ. ಶ್ರಮಿಕ ವರ್ಗದ ಸಾರ್ವಭೌಮತ್ವವನ್ನು ಟೀಕಿಸುವ ಈ ಚಿಂತನೆಯು ಮಾನವನ ಸಂತೋಷವನ್ನೇ ತನ್ನ ಗುರಿಯಾಗಿಸಿಕೊಂಡಿದೆ ಎಂಬುದು ಇಲ್ಲಿ ಸ್ಪಷ್ಟವಾಗಿದೆ.

ಪ್ರಜಾಪ್ರಭುತ್ವದಲ್ಲಿನ ರಚನೆಗಳು ಸ್ಪರ್ಧಾತ್ಮಕವಾಗಿರದೇ, ಸೇವೆಗಾಗಿ ತೊಡಗಿಸಿಕೊಂಡ ವ್ಯವಸ್ಥೆಯಾಗಿರಬೇಕೆಂದ ಇವರ ಚರ್ಚೆಗಳು, ಒತ್ತಡಗುಂಪುಗಳು, ಪಾರ್ಲಿಮೆಂಟ್, ವಿರೋಧಪಕ್ಷಗಳು, ಇವುಗಳನ್ನು ಅವಶ್ಯಕವೆಂದು ತಿಳಿಸಿದ್ದಾರೆ.

ಈ ಚಿಂತನೆಗಳಲ್ಲಿ ಪ್ರಮುಖರೆಂದರೆ ಹೆರಾಲ್ಡ್ ಜಿ. ಲಾಸ್ಕಿ ಇವರು ಸಮಾಜವಾದದ ಗುರಿಯನ್ನು ಪ್ರಜಾಪ್ರಭುತ್ವ ಹಾಗೂ ಉದಾರವಾದಿ ಮಾರ್ಗದಲ್ಲಿ ಸಾಧಿಸುವ ಚರ್ಚೆ ಮಾಡಿದ್ದಾರೆ. ಡೆನ್‌ಮಾರ್ಕ್, ಸ್ವೀಡನ್, ನಾರ್ವೆ, ರಾಷ್ಟ್ರಗಳು ಭಾರತದಲ್ಲಿ ತಕ್ಕ ಮಟ್ಟಿಗೆ ಈ ವ್ಯವಸ್ಥೆ ಇದೆ.

## ಕಲ್ಯಾಣ ರಾಷ್ಟ್ರ

ಇದರ ಪರಿಕಲ್ಪನೆ ಸಹಾ ಸಮಾಜವಾದಿ ಚಿಂತನೆಯನ್ನು ಉದಾರವಾದಿ ಚಿಂತನೆಯೊಂದಿಗೆ ಹೋಲಿಸಿ ಗುರುತಿಸಿರುವ ಚಿಂತನೆ ಆಗಿದೆ. ಇಲ್ಲಿ ಸ್ವಾತಂತ್ರ ಹಾಗೂ ಸಮಾನತೆಯ ಆಧಾರದ ಮೇಲೆ ಸಮಾಜದ ರಚನೆಯ ಚಿತ್ರಣವಿದೆ.

ಇದು, ಸಮಾಜದಲ್ಲಿ ಕೆಳಸ್ತರದಲ್ಲಿರುವವರಿಗೆ ಹೆಚ್ಚಿನ ಆಸೆ ಆಕಾಂಕ್ಷೆ ನೀಡುವ ರಾಜಕೀಯ ಚಿಂತನೆ ಆಗಿದೆ. ಕಲ್ಯಾಣವೆಂಬುದನ್ನು ವಿವರಿಸದಿದ್ದರೂ ಇದೊಂದು ಉತ್ತಮ ವ್ಯವಸ್ಥೆ ಎಂಬ ಭಾವನೆಯನ್ನು ಇದು ಮೂಡಿಸಿದೆ. ಇಲ್ಲಿ ಬಂಡವಾಳಶಾಹಿಯು ತನ್ನೊಳಗೇ ಕೆಲವು ಒಪ್ಪಂದ ಮಾಡಿಕೊಂಡು ಸಮಾಜವಾದದ ಗುರಿಯೆಡೆಗೆ ಶ್ರಮಿಸುವ ಚಿಂತನೆಗಳನ್ನು ಹೊಂದಿದಂತೆ ಕಂಡುಬರುತ್ತದೆ.

ಬಂಡವಾಳಶಾಹಿಯನ್ನು ತೊಡೆದು ಹಾಕಬೇಕೆಂದು ಚರ್ಚೆಗೆ ಅವಕಾಶ ಮಾಡಿಕೊಡದ ಈ ವ್ಯವಸ್ಥೆ ಉತ್ಪಾದನಾ ನಿಯಂತ್ರಣದ ಬಗ್ಗೆ ಚರ್ಚಿಸಿ ಸಾಮಾಜಿಕ ನ್ಯಾಯ ಸ್ಥಾಪನೆ, ಸಮಾನತೆಯ ಸಾಧನೆ, ಹಾಗೂ ಶೋಷಿತವಲ್ಲದ ಬಂಡವಾಳಶಾಹಿತ್ವದ ಮತ್ತೊಂದು ರೀತಿಯಲ್ಲಿ ಜೀವನವನ್ನು ಕಲ್ಪಿಸಿತು ಎಂದೇ ಹೇಳಬಹುದಾಗಿದೆ.

ಈ ಪ್ರಕಾರ, ಪ್ರತೀ ವ್ಯಕ್ತಿಗೆ ಸ್ವಲ್ಪ ಮಟ್ಟಿಗೆ ಆದರೂ ಆರ್ಥಿಕ ಬಲಿಷ್ಠತೆ ನೀಡಿ ಸಮಾಜವಾದ ಹಾಗೂ ಬಂಡವಾಳಶಾಹಿತ್ವದ ನಡುವೆ ಒಂದು ಹೊಸ ಬಾಂಧವ್ಯ ಏರ್ಪಡಿಸಿದ್ದಾರೆ.

ಈ ವ್ಯವಸ್ಥೆಯಲ್ಲಿ ರಾಜ್ಯಕ್ಕೆ ಹೆಚ್ಚಿನ ಚಟುವಟಿಕೆ ಇದ್ದು, ಆರ್ಥಿಕ ಅಸಮಾನತೆಗಳನ್ನು ತೊಡೆದು ಹಾಕುವ ವ್ಯವಸ್ಥೆ ಇಲ್ಲಿದೆ. ಸಮಾನವಾಗಿ ಎಲ್ಲರಿಗೂ ಎಲ್ಲ ರೀತಿಯ ಸೇವೆಯನ್ನು ಒದಗಿಸಿಕೊಡುವ, ರಸ್ತೆ, ಬಾವಿ, ರೈಲ್ವೆ, ಅಂಚೆ ಕಛೇರಿ, ಬಡವರಿಗೆ ಶಾಲೆ, ಕಾಲೇಜು, ಆಸ್ಪತ್ರೆ, ಆಟದ ಮೈದಾನ, ಆರಕ್ಷಕರು ಹಾಗೂ ಇನ್ನಿತರೇ ಎಲ್ಲಾ ಸೇವೆಗಳನ್ನು ಒದಗಿಸಿಕೊಡುವ ವ್ಯವಸ್ಥೆ ಇಲ್ಲಿರುತ್ತದೆ.

ಅದೇ ತೆರನಾಗಿ ಈ ವ್ಯವಸ್ಥೆಯಲ್ಲಿ ಎಲ್ಲಾ ಬಂಡವಾಳಶಾಹಿ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ನಿಯಂತ್ರಣವಿದ್ದು, ಅದು ಜನರ ಜೀವನದ ಎಲ್ಲ ಭಾಗಗಳಿಗೂ ಅನ್ವಾಯವಾಗುವಂತಿರುತ್ತದೆ. ಉದಾ: ನೀರು, ಒಳಚರಂಡಿ, ಶ್ರಮಿಕವರ್ಗದ ನಿಯಂತ್ರಣಾ ಕಾನೂನು, ಪರಿಸರದ ಕಾನೂನು, ಪರಿಸರ ಪ್ರಜ್ಞೆ, ಕುರಿತಾದ ಕಾನೂನು ಹೀಗೆ ಎಲ್ಲ ರೀತಿಯ ನಿಯಂತ್ರಣಗಳೂ ಇಲ್ಲಿರುತ್ತವೆ.

ಹೀಗೆ, ಕಲ್ಯಾಣರಾಷ್ಟ್ರದ ಹೆಸರಿನಲ್ಲಿಯೆ ಸಮಾಜವಾದವನ್ನು ಪ್ರಜಾಪ್ರಭುತ್ವಿಕವಾಗಿ ಆಚರಣೆಗೆ ತಂದು, ಮಾನವನ ಬೆಳವಣಿಗೆ, ಮಾನವತೆ, ಘನತೆ, ಇವುಗಳಿಗೆ ಪ್ರಾಮುಖ್ಯತೆ ನೀಡಿ ಆರ್ಥಿಕ ಹಾಗೂ ಸಾಮಾಜಿಕ ಬೆಳವಣಿಗೆಗೆ ಇದು ಪೂರಕವಾಗಿದೆ.

ದುಡಿಯುವ ಜನರ, ಉಳ್ಳವರ ಹಾಗು ಉಳ್ಳದಿರುವವರ ಎಲ್ಲರ ಹಿತಾಸಕ್ತಿಗಳನ್ನು ಕಾಪಾಡಿ ಅಸಮಾನತೆ ಹೋಗಲಾಡಿಸಿ, ಸಮಾನತೆಯನ್ನು ಸಾಧಿಸುವ ನಿಟ್ಟಿನಲ್ಲಿ ಪ್ರಯತ್ನ ನಡೆಸಿರುವ ಈ ಚಿಂತನೆ ನಿಜಕ್ಕೂ ಉತ್ತಮವಾದದ್ದು ಎಂದಷ್ಟೇ ಇಲ್ಲಿ ಹೇಳಬಹುದಾಗಿದೆ.

## 15.3 ಫೇಬಿಯನ್ ಸಮಾಜವಾದದ ಗುರಿ ಹಾಗು ಉದ್ದೇಶಗಳು

1884ರಲ್ಲಿ ಇಂಗ್ಲೆಂಡಿನಲ್ಲಿ ಅಸ್ತಿತ್ವಕ್ಕೆ ಬಂದ ಈ ಸಮಾಜವು ರೋಮನ್ ಸೈನ್ಯಾಧಿಕಾರಿಯ ಹೆಸರಿನಿಂದ ಪ್ರಚಲಿತತೆಗೆ ಬಂದಿದೆ. ಕೈಟಸ್ ಫೇಬಿಯಸ್ ಎಂಬ ಈತ, ಹಾನಿಬಾಲ್ ಜನಾಂಗವನ್ನು ವಿರೋಧಿಸಿ ನಡೆಸಿದ ಹೋರಾಟದ ಫಲವಾಗಿ, ಇವನ ಈ ಧಾಳಿಯ ಮುಖ್ಯಚಿಂತನೆಯು ಈ ಆಲೋಚನೆಯ ಮೇಲೆ ಪ್ರಭಾವ ಬೀರಿತು. ಇದು 'ಕಾದು ನೋಡಿ ಹೊಡಿ' ಎಂಬ ಮೂಲ ಚಿಂತನೆಯ ಆಧಾರವಾಗಿದ್ದು, ಇದು ಬಹಳಷ್ಟು ಬೌದ್ಧಿಕಜೀವಿಗಳಿಗೆ ಸ್ಫೂರ್ತಿಯಾಗಿ ಬೆಳೆದಿದೆ.

19ನೇ ಶತಮಾನದಲ್ಲಿ ಅಸ್ತಿತ್ವಕ್ಕೆ ಬಂದ ಮಾರ್ಕ್ಸ್‌ವಾದವು ಬದಲಾವಣೆಗೆ ಹಿಂಸಾಮಾರ್ಗ ಹಾಗೂ ಕ್ರಾಂತಿಯ ಅವಶ್ಯಕತೆಯನ್ನು ಚರ್ಚಿಸಿತು. ಆದರೆ, ಫೇಬಿಯನ್ ವಾದ ಕಾಲಾನುಕ್ರಮೇಣದ ಬದಲಾವಣೆಯಲ್ಲಿ ನಂಬಿಕೆ ಹೊಂದಿದ್ದರ ಫಲವಾಗಿ ಮಾರ್ಕ್ಸ್‌ವಾದಕ್ಕೆ ಹೆಚ್ಚಿನ ಗಮನ ಕೊಡದೆ, ಶಾಂತಿಮಾರ್ಗದಲ್ಲಿ ಬದಲಾವಣೆಗೆ ಅವಕಾಶ ಮಾಡಿಕೊಟ್ಟಿತು.

ಮಾರ್ಕ್ಸ್‌ವಾದವು ಕಾರ್ಮಿಕ ವರ್ಗದಿಂದ ಬದಲಾವಣೆ ಬಯಸಿದ್ದರೆ, ಫೇಬಿಯನ್ ವಾದವು ಮಧ್ಯಮ ವರ್ಗದ ಕಡೆಯಿಂದ ಬದಲಾವಣೆಯನ್ನು ಬಯಸಿತು. ಇದು ಈ ರೀತಿಯ'ಕ್ರಮೇಣ' ಬದಲಾವಣೆಯಲ್ಲಿ ನಂಬಿಕೆ ಹೊಂದಿದ್ದು ಇದು ಪರಿಪೂರ್ಣವೆಂಬ ಭಾವನೆ ಹೊಂದಿತ್ತು.

ಈ ನಿಟ್ಟಿನಲ್ಲಿ 1865-1885ರ ವರೆವಿಗೆ ಬ್ರಿಟನ್ ರಾಷ್ಟ್ರ ತನ್ನ ಕಾರ್ಯ ನಡೆಸಿತು. ಇದೇ ಸಂದರ್ಭದಲ್ಲಿ ಶ್ರಮಿಕ ವರ್ಗಕ್ಕೆ ಓಟಿನ ಹಕ್ಕು ದೊರೆತಿದ್ದನ್ನು ಇಲ್ಲಿ ನೆನೆಯಬಹುದಾಗಿದೆ. ಇದೇ ಸಂದರ್ಭದಲ್ಲಿ ಕಾರ್ಮಿಕ ಸಂಘಟನೆಗಳಿಗೆ ಸ್ಥಾನ ಕೂಡಾ ದೊರಕಿದ್ದನ್ನು ನಾವಿಲ್ಲಿ ಗಮನಿಸಬೇಕಾಗಿದೆ.

ಈ ಮೇಲಿನ ಉದಾಹರಣೆಯು ಫೇಬಿಯನ್ ಚಿಂತಕರು, ಪ್ರಜಾಪ್ರಭುತ್ವಿಕ ರಾಜ್ಯವನ್ನು ಹೇಗೆ ಸಮಾಜ ಸುಧಾರಣೆಯಲ್ಲಿ ಬಳಸಿದರೆಂಬುದನ್ನು ಕಂಡುಕೊಳ್ಳಲು ಉತ್ತಮ ಉದಾಹರಣೆಯಾಗಿದೆ. 1858-1947ರಲ್ಲಿ ಸಿಡ್ನಿವೆಬ್ ಎಂಬ ಫೇಬಿಯನ್ ಚಿಂತಕರು, ಈ ಚಿಂತನೆಯಿಂದ ಆರ್ಥಿಕ ಅಂಶಗಳು ಹೇಗೆ ಮಾನವನ ಸಾಮಾಜಿಕ ಜೀವನದ ಮೇಲೆ ಪರಿಣಾಮ ಬೀರುತ್ತವೆ ಎಂಬುದನ್ನು ತಿಳಿದು ಸಂಶೋಧಿಸಲು ಇದೊಂದು ಉತ್ತಮ ವ್ಯವಸ್ಥೆ, ಚಿಂತನೆ, ಪರಿಕಲ್ಪನೆ ಎಂದು ಚರ್ಚಿಸಿದರು.

ಈ ಚಿಂತನೆಯ ಮುಖ್ಯ ಪ್ರತಿಪಾದಕರಲ್ಲಿ ಬಹುಶಃ ಆ ಶತಮಾನದ ಎಲ್ಲ ಬೌದ್ಧಜೀವಿಗಳೂ ಸೇರಿದ್ದಾರೆಂದರೆ ಆಶ್ಚರ್ಯಕರವಲ್ಲಾ. ಬರ್ನಾಡ್ ಶಾಹ್, ಸಿಡ್ನೆವೆಬ್, ಸಿಡ್ನಿ ಆಲಿವರ್, ಗ್ರಹಾಂ ವೆಲ್ಲಾಸ್, ಅನಿಬೆಸೆಂಟ್, ಜಿ.ಡಿ.ಎಚ್.ಕೋಲ್ ಇವರೆಲ್ಲರೂ ಇದರ ಪ್ರತಿಪಾದಕರಾಗಿದ್ದಾರೆ.

ಫೇಬಿಯನ್ ಸಮಾಜವಾದದ ಚಿಂತನೆಗಳಲ್ಲಿ ಪ್ರಮುಖವಾದವುಗಳೆಂದರೆ,

ಭೂ ಹಾಗೂ ಕೈಗಾರಿಕಾ ಉತ್ಪಾದನೆ ಹೆಚ್ಚಳ ಇದನ್ನು ಇವರು ವ್ಯಕ್ತಿಯ ಹಿಡಿತಕ್ಕಿಂತ ವರ್ಗದ ಹಿಡಿತದಲ್ಲಿ ಬೆಳೆಸಲು ಇಚ್ಛಿಸಿದ್ದಾರೆ. ಇದರಿಂದ ವ್ಯಕ್ತಿಗತವಾಗಿ ಅದರ ಫಲವು ಸೇರದೇ ಸಮುದಾಯದ ಒಡಲಿಗೆ ಇದರ ಫಲ ಸೇರುತ್ತದೆ ಎಂಬುದು.

ಇದು ಇನ್ನಿತರರ ಮಾತಿನಲ್ಲಿ ಆಸ್ತಿಯ ಹಕ್ಕನ್ನು ಕಸಿದುಕೊಳ್ಳುವ ಚಿಂತನೆ ಎಂಬುದು. ಯಾವುದೇ ಆಸ್ತಿಯನ್ನು ಸರ್ಕಾರದ

ಆಸ್ತಿಯೆಂದು ಪೋಷಿಸುವ ಮೂಲಕ, ಅದರಿಂದ ಬರುವ ಆದಾಯ ಸಮಾಜದ ಒಳಿತಿಗಾಗಿ ಉಪಯೋಗವಾಗುವುದೆಂದು ಇವರು ತಿಳಿಸಿದ್ದಾರೆ.

ಕೈಗಾರಿಕಾ ಉತ್ಪಾದನೆಯನ್ನು ಕಡಿಮೆಗೊಳಿಸಿ, ಶ್ರಮಿಕ ವರ್ಗಕ್ಕೆ ಹೆಚ್ಚಿನ ಆದಾಯ ನೀಡಿ, ಆಡಳಿತದ ಹಕ್ಕನ್ನು ಸಮುದಾಯದ ಕೈಯಲ್ಲಿರಿಸಿ ಬದಲಾವಣೆಗೆ ದಾರಿಮಾಡುವುದು ಇದರ ಉದ್ದೇಶವಾಗಿದೆ.

ಸಮಾನ ಅವಕಾಶ ಒದಗಿಸಿಕೊಡುವುದೂ ಸಹಾ ಇದರ ಉದ್ದೇಶವಾಗಿದ್ದು ಶ್ರಮವಹಿಸದ ಜನರಿಗೆ ಆದಾಯದಲ್ಲಿ ಪಾಲಿಲ್ಲವೆಂಬುದನ್ನು ಇದು ಸ್ಪಷ್ಟಪಡಿಸಿದೆ.

ಸಮಾಜವಾದಿ ಚಿಂತನೆಯನ್ನು ಹರಡುವುದು ಇದು ಸಹಾ ಈ ಫೇಬಿಯನ್ನರ ಮೂಲ ಚಿಂತನೆಯಾಗಿದೆ. ಇಲ್ಲಿ ವ್ಯಕ್ತಿ ಸಮಾಜ ಹಾಗೂ ರಾಜ್ಯದ ನಡುವಿನ ಸಂಬಂಧಗಳ ಪುನರ್ ವಿಮರ್ಶೆಯೂ ಸೇರಿದಂತೆ, ಈ ಚಿಂತನೆಯ ಪ್ರಸರಣದ ಬಗ್ಗೆ ಇವರು ಕಾಳಜಿ ವಹಿಸಿದ್ದಾರೆ. ಗಂಡು ಹೆಣ್ಣಿನ ನಡುವೆ ಸಮಾನತೆ, ಸಾಧಿಸಲೂ ಸಹಾ ಪ್ರಜಾಪ್ರಭುತ್ವ ಚಿಂತನೆಯ ಅವಶ್ಯಕತೆಯ ಚರ್ಚೆ ಇವರದ್ದಾಗಿದೆ.

ಹೀಗೆ ಫೆಬಿಯನ್ ಸಮಾಜವಾದಿ ಚಿಂತನೆಯು ಪ್ರಜಾಪ್ರಭುತ್ವದ ಉತ್ತಮ ವ್ಯವಸ್ಥೆ ತನ್ನಷ್ಟಕ್ಕೆ ತಾನೇ ಸಮಾಜವಾದದ ಚಿಂತನೆಯಾಗುತ್ತದೆ ಎಂದು ತಿಳಿಸಿದ್ದಾರೆ.

ಇಂತಹ ಚಿಂತನೆಯ ಕೆಲವು ಮುಖ್ಯಾಂಶಗಳೆಂದರೆ

a) ಇದು ರಿಕಾರ್ಡೋರವರ ಶ್ರಮಜೀವನದ ಬೆಲೆಯ ಚಿಂತನೆಯ ಮೇಲೆ ಆಧಾರಿತವಾಗಿದೆ.

b) ಮಧ್ಯಮವರ್ಗಕ್ಕೆ ಚಿಂತನಾಶೀಲವರ್ಗವೆಂದು ಗುರುತಿಸಿ ಅವರ ಮೂಲಕ ಬದಲಾವಣೆಯನ್ನು ಬಯಸುವ ಯೋಜನೆ ಇದರದ್ದಾಗಿದೆ.

c) ಸಮಾಜವಾದವನ್ನು ಸಹಕಾರ, ರಾಜ್ಯ, ಔದ್ಯೋಗಿಕರಣದ ಒಡೆತನದ ಬದಲಾವಣೆ, ಹೀಗೆ ಹಂತಹಂತವಾಗಿ ಇವರು ಬದಲಾವಣೆ ಮೂಲಕ ಸುಧಾರಣೆ, ಸುಧಾರಣೆಯಿಂದ ವ್ಯವಸ್ಥೆಯಲ್ಲಿ ಬದಲಾವಣೆಯನ್ನು ಬಯಸುವವರಾಗಿದ್ದಾರೆ.

## 15.4 ಪ್ರಜಾಸತ್ತಾತ್ಮಕ ಸಮಾಜ

ಹೆಚ್ಚಿನ ಐರೋಪ್ಯ ರಾಷ್ಟ್ರಗಳಲ್ಲಿ ಇಂತಹಾ ಪ್ರಜಾಪ್ರಭುತ್ವ ವಿಕಸನಾ ಸಮಾಜವಾದದ ವ್ಯವಸ್ಥೆ ಇಂದು ಅಸ್ತಿತ್ವಕ್ಕೆ ಬಂದಿದೆ. ಕಾಲಕ್ಕೆ ತಕ್ಕಂತೆ ಬದಲಾವಣೆಗಳನ್ನು ಅಳವಡಿಸಿಕೊಂಡು ಈ ವ್ಯವಸ್ಥೆಗಳು ಅಸ್ತಿತ್ವಕ್ಕೆ ಬಂದಿವೆ. ಏಷ್ಯಾ ಹಾಗೂ ಆಫ್ರಿಕಾ ರಾಷ್ಟ್ರಗಳಲ್ಲಿ 20ನೇ ಶತಮಾನದಲ್ಲಿ ಮುಖ್ಯವಾಗಿ ಸಾಮ್ರಾಜ್ಯಶಾಹಿ ವಿರೋಧಿ ಕಾರಣದಿಂದ ಹಾಗೂ ಸ್ವತಃ ರಾಷ್ಟ್ರವನ್ನಾಳುವಲ್ಲಿನ ಸವಾಲುಗಳ ಕಾರಣದಿಂದ ಈ ವ್ಯವಸ್ಥೆ ಅಸ್ತಿತ್ವಕ್ಕೆ ಬಂದಿತು. 1942ರವರೆವಿಗೆ ಇದನ್ನು ಭಾರತದಲ್ಲಿ ಗುರುತಿಸಲಿಲ್ಲ. ಪ್ರಜಾ ಸೋಷಿಯಲಿಸ್ಟ್ ಪಕ್ಷ ಸಹಾ ಇದೇ ಸಂದರ್ಭದಲ್ಲಿ ಅಸ್ತಿತ್ವದಲ್ಲಿತ್ತು.

1930ರ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಯುವಪೀಳಿಗೆ ಸಮಾಜವಾದಿ ಚಿಂತನೆಯು ಪಕ್ಷವನ್ನು ಬಲಪಡಿಸುವುದೆಂಬ ಹಂಬಲ ಹೊಂದಿದ್ದರು. ಹಾಗಾಗಿ 1934ರಲ್ಲಿ ಕಾಂಗ್ರೆಸ್ ಸೋಷಿಯಲಿಸ್ಟ್ ಪಕ್ಷ ಅಸ್ತಿತ್ವಕ್ಕೆ ಬಂದಿತು. ಇಂತಹುದೇ ಹಲವಾರು ಬೆಳವಣಿಗೆಗಳು ಭಾರತದ ರಾಷ್ಟ್ರೀಯ ಹೋರಾಟದ ಉದ್ದಕ್ಕೂ ನಡೆದು ಅದರಲ್ಲಿ ರಾಮಮನೋಹರ ಲೋಹಿಯಾ, ಜಯಪ್ರಕಾಶ್ ನಾರಾಯಣ್, ಮೌಲಾನ ಅಬ್ದುಲ್ ಕಲಮ್, ಹಾಗೂ ಗಾಂಧಿಯವರೂ ಸೇರಿದಂತೆ ನೆಹರೂರವರೂ ಈ ಎಲ್ಲರೂ ಕೂಡಾ ತಮ್ಮ

ಚಿಂತನೆಯನ್ನು ಕೊಡಿಸಿದ್ದಾರೆ.

ಈ ಮೂಲಕ ರಾಷ್ಟ್ರದಲ್ಲಿ ಸಮಾನತೆ, ಭೂ ಹಂಚಿಕೆಯಲ್ಲಿ ಸುಧಾರಣೆ, ಬಡವರಿಗೆ ಭೂಮಿ ಹಂಚಿಕೆ, ಭೂ ಮಾಲೀಕ ಹಾಗು ಸಾಗುವಳಿದಾರರ ನಡುವಿನ ಶೋಷಣೆ ಎಲ್ಲವೂ ಸೇರಿದಂತೆ ಹಲವಾರೂ ಸುಧಾರಣೆಗಳನ್ನು ಬೆಳಕಿಗೆ ತಂದರು.

ಸ್ವತಂತ್ರ ಪೂರ್ವದಲ್ಲಿ ಹಾಗು ಸ್ವಾತಂತ್ರ್ಯ ನಂತರದಲ್ಲಿ ಸಹಾ ಸಮಾಜವಾದಿ ಚಳುವಳಿಗಳಿಗೆ ಭಾರತ ಹಾಗು ಇತರೇ ಐರೋಪ್ಯ ರಾಷ್ಟ್ರಗಳಲ್ಲಿ ಪ್ರಾಮುಖ್ಯತೆ ದೊರಕಿದ್ದು ಪ್ರಜಾಪ್ರಭುತ್ವವು ಒಂದು ವ್ಯವಸ್ಥೆ ಮಾರ್ಗವಾಗಿ ಈ ರಾಷ್ಟ್ರಗಳಲ್ಲಿ ಸಮಾಜವಾದವನ್ನು ತನ್ನ ಆದರ್ಶ ಗುರಿಯಾಗಿ ಇಟ್ಟುಕೊಂಡು ಸುಧಾರಣೆಯೆಡೆಗೆ ತಮ್ಮ ಒಲವನ್ನು ತೋರಿದ್ದವು.

ಇಷ್ಟೇ ಅಲ್ಲದೆ ಈ ವ್ಯವಸ್ಥೆಯ ಸಲುವಾಗಿ ಸಮಾನತೆ, ಭೂ ಒಡೆತನದಲ್ಲಿ ಹಾಗು ಶ್ರಮದ ಪ್ರತಿಫಲದಲ್ಲಿ ಇಂದು ಸಾಕಷ್ಟು ಹೊಂದಾಣಿಕೆಯಾಗಿ ಶೋಷಣೆಯಲ್ಲಿ ಕಮ್ಮಿ ಪ್ರಮಾಣದ ಶೋಷಣೆ ಕಂಡು ಬಂದಿದೆ. ಹೀಗೆ ಪ್ರಜಾಪ್ರಭುತ್ವವು ನಿಜವಾಗಿಯೂ ಒಂದು ಮಾದರಿ ವ್ಯವಸ್ಥೆಯಾಗಿ ಉದಾರವಾಗಿ ಸಮಾಜವಾದಿ ಚಿಂತನೆಗಳನ್ನು ತನ್ನಲ್ಲಿ ಮೈಗೂಡಿಸಿಕೊಂಡು ಬೆಳೆದಿದೆ.

## 15.5 ಪ್ರಜಾಪ್ರಭುತ್ವ ಸಮಾಜವಾದಿ ಚಿಂತನೆಯ ಟೀಕೆ

ಈ ವ್ಯವಸ್ಥೆ ನಿಜಕ್ಕೂ ಅಹಿತಕರವಾದ ಸ್ಪರ್ಧೆಯನ್ನು ತೊಡೆದುಹಾಕಿ, ಬಂಡವಾಳಶಾಹಿಗಳನ್ನು ಕಡಿಮೆಗೊಳಿಸಿ, ಸಮಾಜದಲ್ಲಿ ಸಮಾನತೆ ಸಾಧಿಸುವ ಚಿಂತನೆ ಆಗಿದೆ. ಉತ್ತಮ ಸಮಾಜ ರಚನೆ, ಬಂಡವಾಳಶಾಹಿತ್ವದ ಲಕ್ಷಣಗಳಿಂದ ಲಾಭ, ಮೋಸ, ಅಸತ್ಯತೆಗಳನ್ನು ಇದು ಕಡಿಮೆಗೊಳಿಸುವ ಯೋಜನೆ ಹೊಂದಿದೆ. ಉತ್ತಮ ಮೌಲ್ಯರಚನೆಗೆ ಪೂರಕವಾಗಿ ಶ್ರಮಸಿಬೇಕೆಂಬ ಈ ಚಿಂತನೆ, ಆರ್ಥಿಕ ರಂಗದಲ್ಲಿ ಪ್ರಜಾಪ್ರಭುತ್ವಿಕ ತತ್ವಗಳನ್ನು ಪರಿಚಯಿಸುವ ಬಗ್ಗೆ ಚಿಂತಿಸುತ್ತದೆ.

ಟೀಕೆ ಮಾಡುವ ಚಿಂತಕರು, ಪ್ರಜಾಪ್ರಭುತ್ವಿಕ ಅಂಶಗಳ ಬಗ್ಗೆ ಚರ್ಚಿಸಿ ಈ ವ್ಯವಸ್ಥೆ ಸಮಾಜವಾದದಲ್ಲಿ ಉತ್ಪಾದನಾ ಮೂಲಗಳ ನಿಯಂತ್ರಣವನ್ನು ಅಧಿಕಾರಶಾಹಿಗೆ ವರ್ಗಾಯಿಸಿ ಹೆಚ್ಚಿನ ನಿಯಂತ್ರಣಕ್ಕೆ ಎಡೆ ಮಾಡುತ್ತದೆ ಎಂದಿದ್ದಾರೆ.

ಈ ವ್ಯವಸ್ಥೆ ರಾಜ್ಯಕ್ಕೆ ಹೆಚ್ಚಿನ ಬೆಂಬಲ ಕೊಡುವ ಮೂಲಕ ರಾಜ್ಯದಲ್ಲಿನ ಅಧಿಕಾರ ಶಾಹಿಗೆ ಹೆಚ್ಚಿನ ಅಧಿಕಾರ ನೀಡಿ ಸಮುದಾಯದ ಒಡೆತನ ಕಾರ್ಯರೂಪಕ್ಕೆ ಬರದಂತಾಗುತ್ತದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಒಟ್ಟಿನಲ್ಲಿ ಈ ವ್ಯವಸ್ಥೆಯು ಯಾವುದೇ ಕಾರಣಕ್ಕೂ ಸಮಾಜವಾದ ಹಾಕಿಕೊಂಡಂತಹಾ ಪ್ರಗತಿಪರ, ಸಮುದಾಯದ ಪರ, ಶೋಷಣೆರಹಿತ, ವರ್ಗರಹಿತವ್ಯವಸ್ಥೆ ಆಗಲು ಸಾಧ್ಯವಿಲ್ಲವೆಂದೂ ಇವರು ಟೀಕಿಸಿದ್ದಾರೆ.

ಪ್ರಜಾಪ್ರಭುತ್ವ ವ್ಯವಸ್ಥೆಯೇ ತನ್ನ ಹಲವಾರು ತಪ್ಪು ಒಪ್ಪುಗಳಿಂದ ಕಲುಷಿತವಾಗಿರುವ ಸಂದರ್ಭದಲ್ಲಿ ಅದನ್ನು ಅವಲಂಬಿಸಿ ಉತ್ತಮ ವ್ಯವಸ್ಥೆ ಆಚರಣೆಗೆ ತರಲು ಸಾಧ್ಯವಿಲ್ಲವೆಂದೋ ಇವರು ಟೀಕಿಸಿದ್ದಾರೆ.

ಈ ಟೀಕೆಗಳ ಮಧ್ಯದಲ್ಲೂ ಹಲವಾರು ಬದಲಾವಣೆ, ಸುಧಾರಣೆಗಳನ್ನು ನಾವು ಗಮನಿಸಿದರೆ, ಪ್ರಜಾಪ್ರಭುತ್ವ ವ್ಯವಸ್ಥೆ ಪರಿಪೂರ್ಣವಾಗಿ ಅಲ್ಲದಿದ್ದರೂ, ಅಲ್ಪಸ್ವಲ್ಪ ಮಟ್ಟದಲ್ಲಿಯಾದರೂ ಬದಲಾವಣೆಗೆ ಎಡೆ ಮಾಡಿದೆ ಎಂಬುದು ಸತ್ಯದ ಸಂಗತಿ.

ದಿನಗೂಲಿಯಲ್ಲಿ ಹೆಚ್ಚಳ, ಶೋಷಣೆಯ ವಿರುದ್ಧ ಕ್ರಮ, ನಿರ್ಧರಿತ ಸೇವಾ ವೇಳೆ, ಕಾರ್ಮಿಕರ ಹಾಗೂ ಅವರು ದುಡಿಯುವ ಕೈಗಾರಿಕೆಯ ಪರಿಸರದಲ್ಲಿ ಬದಲಾವಣೆ, ಬೆಲೆ ನಿಗದಿತ ಕಾರ್ಯಕ್ರಮ, ಖಾಸಗೀ ಆಸ್ತಿ ಒಡೆತನಕ್ಕೆ ಹಕ್ಕು ಇಲ್ಲದಿರುವುದು, ಇವೇ ಹಲವಾರು ಅಂಶಗಳು, ಈ ಪ್ರಜಾಪ್ರಭುತ್ವ ಸಮಾಜ ಬದಲಾವಣೆಯನ್ನು ತಂದಿರುವುದಕ್ಕೆ ನಿರ್ದಶನವಾಗಿದೆ.

ಈ ವ್ಯವಸ್ಥೆಯು ಮಾಡಿರುವ ಬದಲಾವಣೆಗಳನ್ನು ಗಮನದಲ್ಲಿ ತಂದುಕೊಳ್ಳುವುದು ಉತ್ತಮ.

## ನಿಮ್ಮ ಪ್ರಗತಿ ಪರಿಶೀಲನೆ - 1

**ಸೂಚನೆ:** 1. ಈ ಕೆಳಗೆ ಬಿಟ್ಟಿರುವ ಜಾಗವನ್ನು ನಿಮ್ಮ ಉತ್ತರಕ್ಕೆ ಉಪಯೋಗಿಸಿಕೊಳ್ಳಿ.

2. ಈ ಘಟಕದ ಕೊನೆಯಲ್ಲಿ ನೀಡಿರುವ ಉತ್ತರದೊಂದಿಗೆ ನಿಮ್ಮ ಪ್ರಗತಿಯನ್ನು ಪರಿಶೀಲಿಸಿಕೊಳ್ಳಿ.

**1. ಪ್ರಜಾಸತ್ತಾತ್ಮಕ ಸಮಾಜವಾದದ ಹಿನ್ನೆಲೆಯನ್ನು ವಿಮರ್ಶಿಸಿ.**

..............................................................................................................................................

..............................................................................................................................................

..............................................................................................................................................

..............................................................................................................................................

..............................................................................................................................................

..............................................................................................................................................

**2. ಪ್ರಜಾಸತ್ತಾತ್ಮಕ ಸಮಾಜವಾದದ ತತ್ವಗಳನ್ನು ಚರ್ಚಿಸಿ.**

..............................................................................................................................................

..............................................................................................................................................

..............................................................................................................................................

..............................................................................................................................................

..............................................................................................................................................

..............................................................................................................................................

## 15.6 ಒಟ್ಟಾರೆ ಅಭಿಪ್ರಾಯ

ಇಲ್ಲಿಯವರೆಗೆ ಚರ್ಚಿಸುವ ಸಮಾಜವಾದದ ಚರ್ಚೆ ಆಧುನಿಕ ಚಿಂತನೆಗಳಲ್ಲಿ ಪ್ರಮುಖವಾದದ್ದು. ಸಂಪ್ರದಾಯಿಕ ಸಮಾಜವಾದದ ಸೋಲಿನಿಂದ ಬೆಳೆದು ಬಂದ ಈ ಚಿಂತನೆ ಬಂಡವಾಳಶಾಹಿ, ರಾಜ್ಯ ಎರಡನ್ನು ನಿಯಂತ್ರಣ ಮಾಡುವ ಚಿಂತನೆ ಹೊಂದಿದೆ.

ಮೂಲತಃ ಮಾನವನ ಅಭಿವೃದ್ಧಿಗಾಗಿ ಶ್ರಮಿಸಿದ ಈ ಚಿಂತನೆ. ಕೈಗಾರಿಕಾ ಕ್ರಾಂತಿಯ ಸಂದರ್ಭದಲ್ಲಿ ಬೆಳೆದು ಬಂದು ರಾಜಕೀಯ, ಆರ್ಥಿಕ, ಸಾಮಾಜಿಕ ಅಸಮಾನತೆಗಳನ್ನು ತೊಡೆಡು ಹಾಕುವಲ್ಲಿ ಸಾಕಷ್ಟು ಸಹಾಯಕಾರಿಯಾಗಿದೆ.

ಫ್ರೆಂಚ್ ಮಹಾಕ್ರಾಂತಿಯನ್ನು ಸಹಾ ಈ ಸಮಾಜವಾದದ ಬೆಳವಣಿಗೆಯಲ್ಲಿ ಒಂದು ಮುಖ್ಯ ಮೈಲಿಗಲ್ಲೆಂದು ಪರಿಗಣಿಸಲಾಗಿದೆ. ಆ ಕ್ರಾಂತಿಯಲ್ಲಿ ದೊರೆತ ಸ್ವಾತಂತ್ರ್ಯ, ಭ್ರಾತೃತ್ವ ಹಾಗೂ ಸಮಾನತೆ ಮೂಲತಃ ಪ್ರಜಾಪ್ರಭುತವ ಸಮಾಜವಾದದ ಮಂತ್ರವಾಯಿತು. ಹೀಗೆ, ಸಮಾಜವಾದದ ವಿವಿಧ ಮುಖಗಳ ಪರಿಚಯ ಇಲ್ಲಿ ನಡೆದಿದೆ.

## 15.7 ಕಠಿಣ ಪದಗಳು

ಮಾನವತಾ - ಮಾನವೀಯತೆ

ಕ್ರಾಂತಿ - ಸುಧೀರ್ಘ ಚಳುವಳಿ ಮೂಲತಃ ಬದಲಾವಣೆಗಳನ್ನು ತರುವುದು

ಅಸತ್ಯತೆ - ಸತ್ಯ ಹೇಳದಿರುವುದು (ಮೌಲ್ಯರಹಿತ)

## 15.8 ಕೆಲವು ಉಪಯುಕ್ತ ಪುಸ್ತಕಗಳು

ಎಫ್.ಡಬ್ಲ್ಯೂ ಕಾಕರ್ : ರೀಸೆಂಟ್ ಪೊಲಿಟಿಕಲ್ ಥಾಟ್

ಎಸ್.ಪಿ. ವರ್ಮಾ : ಮಾಡರ್ನ್ ಪೊಲಿಟಿಕಲ್ ಥಿಯರಿ

ಡಾ. ಕೆ.ಜೆ. ಸುರೇಶ್ : ಆಧುನಿಕ ಸಿದ್ಧಾಂತಗಳು

## 15.9 ನಿಮ್ಮ ಪ್ರಗತಿಯನ್ನು ನೀವೇ ಪರಿಶೀಲಿಸಿಕೊಳ್ಳಿ

<u>ನಿಮ್ಮ ಪ್ರಗತಿ ಪರಿಶೀಲನೆ</u> **- 1**

1. ನೋಡಿ ವಿಭಾಗ 15.2
2. ನೋಡಿ ವಿಭಾಗ 15.4



VOP_FL_MA_Pol_Sci_C-8(1-7)_TF.20_F.No.61
61

# ಘಟಕ 16 ಪ್ರಜಾಪ್ರಭುತ್ವದ ಅರ್ಥ, ಬಗೆಗಳು ಮತ್ತು ಸಿದ್ಧಾಂತಗಳು

## ರಚನೆ


16.1 ಪೀಠಿಕೆ

16.2 ಅರ್ಥ ಮತ್ತು ವ್ಯಾಖ್ಯೆಗಳು

16.3 ಉಗಮ ಮತ್ತು ಬೆಳವಣಿಗೆ

16.4 ಪ್ರಜಾಪ್ರಭುತ್ವದ ವರ್ಗೀಕರಣ

16.4.1 ಪ್ರತ್ಯಕ್ಷ ಪ್ರಜಾಪ್ರಭುತ್ವ

16.4.2 ಪರೋಕ್ಷ ಪ್ರಜಾಪ್ರಭುತ್ವ

16.5 ಪ್ರಜಾಪ್ರಭುತವದ ಸಿದ್ಧಾಂತಗಳು

16.6 ಸಾರಾಂಶ

16.7 ಕಠಿಣ ಪದಗಳು

16.8 ಕೆಲವು ಉಪಯುಕ್ತ ಗ್ರಂಥಗಳು

16.9 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು

## 16.0 ಉದ್ದೇಶಗಳು

ಈ ಘಟಕದ ವಸ್ತು ವಿಷಯವನ್ನು ಅಧ್ಯಯನ ಮಾಡಿದ ನಂತರ ನೀವು

* ಪ್ರಜಾಪ್ರಭುತ್ವ ಎಂದರೇನು ಎಂಬುದನ್ನು ತಿಳಿಯಬಹುದು
* ಪ್ರಜಾಪ್ರಭುತ್ವದ ಬಗೆಗಳನ್ನು ಗುರುತಿಸಬಹುದು
* ಪ್ರಜಾಪ್ರಭುತ್ವದ ಸಿದ್ಧಾಂತಗಳನ್ನು ಚರ್ಚಿಸಬಹುದು

## 16.1 ಪೀಠಿಕೆ

ಪ್ರಜಾಪ್ರಭುತ್ವವೆಂದರೆ ಪ್ರಜೆಗಳೆಲ್ಲರೂ ಸ್ವಾತಂತ್ರ್ಯ ಮತ್ತು ಸಮಾನತೆಗಳಿಂದ ಒಂದಾಗಿ ಬೆರೆತು ಜಿವಿಸಿರುವ ಜೀವನ ಕ್ರಮವೇ ಪ್ರಜಾಪ್ರಭುತ್ವ. ಅಲ್ಲದೆ ಆಡಳಿತದಲ್ಲಿ ನ್ಯಾಯ ಮತ್ತು ಸಮಾನತೆ ಇರಬೇಕು ಹಾಗೂ ರಾಜ್ಯ ಯಾವಾಗಲೂ ಒಂದು ಸಮಾಜವಾದ ರಾಜ್ಯವಾಗಿರಬೇಕು, ಇವುಗಳ ಜೊತೆಗೆ ರಾಜ್ಯದಲ್ಲಿ ಅನುವಂಶೀಯತೆ ಆಡಳಿತವಿರಬಾರದು. ಇದಕ್ಕೆ ಬದಲಾಗಿ ಜನಪ್ರತನಿಧಿಗಳಿಂದ ಕೂಡಿದ ಸರ್ಕಾರವಿರಬೇಖು, ಯಾವುದೇ ಸಂದರ್ಭದಲ್ಲಿಯೂ ಬಹುಸಂಖ್ಯಾತರಿಂದ ಅಲ್ಪಸಂಖ್ಯಾತರ ಮೇಲೆ ದಬ್ಬಾಳಿಕೆ ನಡೆಯದಂತೆ ನೋಡಿಕೊಳ್ಳುವ ಉತ್ತಮ ಹಾಗೂ ಸುಸ್ಥಿರವಾದ ವ್ಯವಸ್ಥೆಯೇ ಪ್ರಜಾಪ್ರಭುತ್ವ. ಮಾನವನಿಗೆ ನೈತಿಕ ಮತ್ತು ಬೌದ್ಧಿಕ ಸಾಮರ್ಥ್ಯಗಳಿವೆ. ವಿವೇಕ ಮತ್ತು ನ್ಯಾಯಯುತವಾಗಿ ತನ್ನನ್ನು ತಾವೇ ಆಳಿಕೊಳ್ಳುವ ಬೇರ್ಪಡಿಸಲಾಗದ ಹಕ್ಕನ್ನು ಮಾನವ ಹೊಂದಿದ್ದಾನೆ ಎಂಬ ಅಚಲ ನಂಬಿಕೆಯನ್ನು ಪ್ರಜಾಪ್ರಭುತವವು ಆಧರಿಸಿ. ಒಪ್ಪಿಕೊಳ್ಳಬಹುದಾದ ಸರ್ಕಾರ ಪದ್ಧತಿಯಾಗಿದೆ. ಪ್ರಜಾಪ್ರಭುತ್ವವು ಇಪ್ಪತ್ತನೆಯ ಶತಮಾನದ ಅತ್ಯಂತ ವಿಶಿಷ್ಟವಾದ ಘಟನೆಯಾಗಿದೆ.

## 16.2 ಅರ್ಥ ಮತ್ತು ವ್ಯಾಖ್ಯೆಗಳು

ಪ್ರಜಾಪ್ರಭುತ್ವ ಎಂಬ ಪದವು ಎಲ್ಲರಿಗೂ ಪರಿಚಿತವಾಗಿದ್ದರೂ, ಅದರ ಎಲ್ಲ ಅರ್ಥಗಳನ್ನು ಒಳಗೊಳ್ಳುವಂತೆ ಒಂದೇ ವಾಕ್ಯದಲ್ಲಿ ಅದನ್ನು ಹೇಳಲು ಸಾಧ್ಯವಿಲ್ಲ. ಪ್ರಜಾಪ್ರಭುತ್ವ ಎಂಬ ಪರಿಕಲ್ಪನೆಯು ಬಹುರೂಪಿಯಾಗಿದ್ದು, ಹಲವಾರು ಮೂಲಾಂಶಗಳನ್ನು ಒಳಗೊಳ್ಳುವ ಸಂಯುಕ್ತ ಪರಿಕಲ್ಪನೆಯೂ ಆಗಿದೆ. ಅದು ರಾಜಕೀಯ ಆದರ್ಶಗಳನ್ನು, ಆರ್ಥಿಕ ಮತ್ತು ಸಾಮಾಜಿಕ ಶಕ್ತಿಗಳನ್ನು, ನೈತಿಕ ತತ್ವಗಳನ್ನು, ಒಂದು ಬಗೆಯ ಸರ್ಕಾರ ಪದ್ಧತಿಯನ್ನು ಮತ್ತು ಒಂದು ಜೀವನ ವಿಧಾನವನ್ನೂ ಸೂಚಿಸುತ್ತದೆ.

ಪ್ರಜಾಪ್ರಭುತ್ವ ಆಂಗ್ಲಭಾಷೆಯ ಡೆಮಾಕ್ರಸಿ ಪದದ ಕನ್ನಡ ಅನುವಾದ. ಅಜು ಎರಡು ಗ್ರೀಕ್ ಭಾಷೆಯ ಪದಗಳಾದ ಡೆಮಾಸ್ ಮತ್ತು ಕ್ರಿಶಿಯಾ ಪದಗಳ ಸಂಯುಕ್ತರೂಪ. ಅಂದರೆ, ಜನತೆ ಮತ್ತು ಶಕ್ತಿ ಅಥವಾ ಜನತೆಯ ಶಕ್ತಿ ಎಂದಾಗುತ್ತದೆ. ಗ್ರೀಕ್‌ನ ಶ್ರೇಷ್ಟ ಜನ ನಾಯಕ ಪೆರಿಕ್ಲಿಸ್ ಪ್ರಜಾಪ್ರಭುತ್ವವನ್ನು ಜನತೆ ಶಕ್ತಿಶಾಲಿಯಾಗಿರುವ ಒಂದು ಸರ್ಕಾರ ಎಂದು ವ್ಯಾಖ್ಯಾನಿಸಿದ್ದಾನೆ. ಅರಿಸ್ಟಾಟಲ್ ಅವರ ಪ್ರಕಾರ, ಆಳ್ವಿಕೆಯೇ ಪ್ರಜಾಪ್ರಭುತ್ವ. ಆಧುನಿಕ ಕಾಲದಲ್ಲಿ ಅಮೇರಿಕ ಸಂಯುಕ್ತ ಸಂಸ್ಥಾನಗಳ ಅಧ್ಯಕ್ಷ ಅಬ್ರಾಹಂ ಲಿಂಕನ್ ತಮ್ಮ ಭಾಷಣದಲ್ಲಿ ಜನತೆಗೋಸ್ಕರ, ಜನತೆಯಿಂದಲೇ ರಚಿತವಾದ, ಜನತೆಯ ಸರ್ಕಾರ ಎಂಬುವ ಪ್ರಜಾಪ್ರಭುತ್ವದ ಸುಂದರ ಹಾಗೂ ಸಂಕ್ಷಿಪ್ತವರ್ಣನೆ ನೀಡಿದ್ದಾರೆ.

ಹಿರೋಡಟಸ್‌ನ ಕಾಲದಿಂದಲೂ ಪ್ರಜಾಪ್ರಭುತ್ವ ಪದವು ಯಾವ ರಾಜ್ಯದಲ್ಲಿ ಆಳುವ ಅಧಿಕಾರವು ಯಾವುದೇ ಒಂದು ನಿರ್ದಿಷ್ಟ ವರ್ಗ ಅಥವಾ ವರ್ಗಗಳಲ್ಲಿ ವ್ಯಾಪಕ ನೆಲೆಗೊಳ್ಳದೆ, ಸಮುದಾಯದ ಸದಸ್ಯರಲ್ಲಿದೆಯೋ, ಅಂತದ ಒಂದು ಸರ್ಕಾರವೇ ಪ್ರಜಾಪ್ರಭುತ್ವ ಎಂಬಂತೆ ಬಳಕೆಯಲ್ಲಿದೆ. ಕೆ.ಎಂ. ಪಣಿಕ್ಕರ್ ಪ್ರಕಾರ ಪ್ರಜಾಪ್ರಭುತ್ವವು ಕೇವಲ ಒಂದು ಬಗೆಯ ಸರ್ಕಾರವಲ್ಲ,

ಅದು ಸಂಕೀರ್ಣವಾದ ಸಾಮಾಜಿಕ ಮತ್ತು ಆರ್ಥಿಕ ವಿಷಯಗಳನ್ನೂ ಒಳಗೊಂಡಿರುತ್ತದೆ.

ಮೆಕೈವರ್ ಅವರು ಪ್ರಜಾಪ್ರಭುತ್ವವೆಂದರೆ ಬಹು ಸಂಖ್ಯಾತರಿಂದಾಗಲೀ, ಇತರರಿಂದಾಗಲೀ ನಡೆಯುವ ರಾಜ್ಯಕ್ರಮದ ವಿವರಣೆಯಲ್ಲ. ಯಾರು ಆಳಬೇಕು, ಯಾವ ಉದ್ದೇಶಕ್ಕಾಗಿ ಆಳಬೇಕು ಎಂಬುದನ್ನು ಕಂಡುಹಿಡಿಯುವ ವಿಧಾನ ಎಂದು ಹೇಳಿದ್ದಾರೆ. ಗೆಟಲ್ ಪರಮಾಧಿಕಾರದ ಚಲಾವಣೆಯಲ್ಲಿ ಪಾಲು ಹೊಂದಿರುವ ಹಕ್ಕು ಸಮಸ್ತ ಜನತೆಯಲ್ಲಿ ಕೈಯಲ್ಲಿರುವ ಸರ್ಕಾರ ಪದ್ಧತಿಯೇ ಪ್ರಜಾಪ್ರಭುತ್ವ ಎಂದು ವ್ಯಾಖ್ಯಾನಿಸಿದ್ದಾರೆ.

ಮೆಕ್‌ಜರ್ಫರ್ಸನ್ ಅವರು ಪ್ರಜಾಪ್ರಭುತ್ವಕ್ಕೆ ನೀಡಿರುವ ವ್ಯಾಖ್ಯೆ ಹೀಗಿದೆ. ಸರ್ಕಾರಗಳನ್ನು ಆಯ್ಕೆ ಮಾಡುವ ಮತ್ತು ಅಧಿಕಾರ ಚಲಾಯಿಸುವಂತೆ ಮಾಡುವ ಕೇವಲ ಒಂದು ತಂತ್ರ ಅಥವಾಕಾನೂನುಗಳು ಮತ್ತು ನಿರ್ಧಾರಗಳನ್ನು ಹೇಗಾದರೂ ಪಡೆಯುವ ಒಂದು ವಿಧಾನವೇ ಪ್ರಜಾಪ್ರಭುತ್ವ.

ಲಿಪ್‌ಸೆಟ್ ಸರ್ಕಾರದ ಅಧಿಕಾರಿಗಳನ್ನು ಬದಲಾಯಿಸುವ ಸಂವಿಧಾನಾತ್ಮಕ ಅವಕಾಶಗಳನ್ನು ನಿಗದಿತವಾಗಿ ಪೂರೈಸುವ ಒಂದು ರಾಜಕೀಯ ವ್ಯವಸ್ಥೆ ಮತ್ತು ರಾಜಕೀಯ ಹುದ್ದೆಗಳಿಗೆ ಸ್ಪರ್ಧಾಳುಗಳನ್ನು ಆಯ್ಕೆ ಮಾಡುವ ಮೂಲಕ ಈ ದೊಡ್ಡ ಪ್ರಮಾಣದ ನಿರ್ಧಾರಗಳ ಮೇಲೆ ಪ್ರಭಾವ ಬೀರುವ ಸಾಧ್ಯವಾದಷ್ಟು ಹೆಚ್ಚಿನ ಜನರಿಗೆ ಅನುಮತಿ ದೊರಕಿಸಿಕೊಡುವ ಸಾಮಾಜಿಕ ಕಾರ್ಯತಂತ್ರವೇ ಪ್ರಜಾಪ್ರಭುತ್ವ.

ಆದ್ದರಿಂದ, ಪ್ರಜಾಪ್ರಭುತ್ವದ ವಿವಿಧ ವ್ಯಾಖ್ಯೆಗಳನ್ನು ಪರಿಶೀಲಿಸಿದಾಗ ಅದನ್ನು ಒಂದು ಸರ್ಕಾರ ಪದ್ಧತಿ, ರಾಜ್ಯ ಪದ್ಧತಿ ಮತ್ತು ಜೀವನ ವಿಧಾನವೆಂದು ತಜ್ಞರು ಪರಿಗಣಿಸಿರುವುದು ಸ್ಪಷ್ಟವಾಗುತ್ತದೆ. ಪ್ರಜಾಪ್ರಭುತ್ವವೆಂಬ ಪರಿಕಲ್ಪನೆಯು ವೈವಿಧ್ಯಮಯವಾದ ವ್ಯಾಖ್ಯಾನಗಳಿಗೆ ಒಳಗಾಗಿದ್ದರೂ, ಅಗಾಧವಾದ ಅದರ ಇತಿಹಾಸವನ್ನು ಸಮರ್ಪಕವಾಗಿ ಒಳಗೊಳ್ಳಲು ಅಸಮರ್ಥವಾಗಿದೆ. ಪ್ರಜಾಪ್ರಭುತ್ವವು ತತ್ವಗಳ ಸಂಕಲನವಾಗಿ ಸಾಮಾನ್ಯವಾಗಿ ಚರ್ಚಿತವಾಗಿರುವುದರಿಂದ, ಅದರ ಪರಿಕಲ್ಪನೆಯು ಕ್ರಮಬದ್ಧವಾಗಿ ರೂಪಿತವಾಗಲು ಸಾಧ್ಯವಾಗಿಲ್ಲ. ಅದು ಇನ್ನೂ ನಿರ್ದಿಷ್ಟ ಸಿದ್ಧಾಂತವಾಗಿ ಅಸ್ತಿತ್ವಕ್ಕೆ ಬಂದಿಲ್ಲ. ಆದ್ದರಿಂದ ಪ್ರಜಾಪ್ರಭುತ್ವದ ವಿಶ್ಲೇಷಣೆ ಎಂದರೆ, ಪ್ರಜಾಪ್ರಭುತ್ವದ ತತ್ವಗಳ ವಿಶ್ಲೇಷಣೆಯೇ ಆಗಿದೆ.

ಪ್ರಜಾಪ್ರಭುತವದ ಮೂಲಭೂತ ತತ್ವಗಳನ್ನು ಕೆಳಕಂಡಂತೆ ನಿರೂಪಿಸಬಹುದು.

* ಪ್ರಜಾಪ್ರಭುತ್ವವು ಎಲ್ಲ ವ್ಯಕ್ತಿಗಳಿಗೆ ವಾಕ್ ಸ್ವಾತಂತ್ರ್ಯ ಮತ್ತು ಇತರರೊಂದಿಗೆ ವಿಮರ್ಶಿಸುವ ಮತ್ತು ಭಿನ್ನಮತ ಹೊಂದಿರುವ ಅವಕಾಶ ಕಲ್ಪಿಸುತ್ತದೆ.
* ಅದು ವಿಚಾರಗಳು ಮತ್ತು ಪಂಥಗಳ ಬಹುತ್ವವನ್ನು ದೊರಕಿಸುತ್ತದೆ ಮತ್ತು ತಾಳ್ಮೆಯ ತತ್ವವನ್ನು ದೃಢವಾಗಿ ಆಧಲಿಸಿದೆ.
* ಅದು ಮನವೊಲಿಸುವ ಮತ್ತು ಶಾಂತಿಯುತ ವಿಧಾನಗಳನ್ನು ಆಂತರಿಕ ಮತ್ತು ಅಂತರರಾಷ್ಟ್ರೀಯ ಕ್ಷೇತ್ರಗಳಲ್ಲಿ ಅನುಸರಿಸುವುದಕ್ಕೆ ಕಂಕಣಬದ್ಧವಾಗಿದೆ.
* ಅದು ಸಾಮಾಜಿಕ ಒಳಿತಿಗಾಗಿಯಾದರೂ, ಹಿಂಸಾತ್ಮಕ ವಿಧಾನಗಳನ್ನು ಸ್ಪಷ್ಟವಾಗಿ ವಿರೋಧಿಸುತ್ತದೆ. ಸಮಾದ ಕಲ್ಯಾಣದ ಹೆಸರಿನಲ್ಲಿ ನ್ಯಾಯಬಾಹಿರವಾದ ಹಿಂಸೆಯನ್ನು ಬಳಸುವ ಸರ್ಕಾರವನ್ನು ಪ್ರಜಾಸತ್ತಾತ್ಮಕವೆಂದು ಕರೆಯಲು ಸಾಧ್ಯವಿಲ್ಲ.
* ಪ್ರಜಾಪ್ರಭುತ್ವವು ವ್ಯಕ್ತಿಯ ಘನತೆಯನ್ನು ಎತ್ತಿಹಿಡಿಯುತ್ತದೆ ಮತ್ತು ವ್ಯಕ್ತಿಗೆ ವಿವಿಧ ಬಗೆಯ ಹಕ್ಕುಗಳನ್ನು ನೀಡುತ್ತದೆ.
* ಅದು ಸ್ವಾತಂತ್ರ್ಯ ಮತ್ತು ಸಮಾನತೆಯ ತಳಹದಿಯ ಮೇಲೆ ನಿರ್ಮಿತವಾಗಿದೆ.

* ಜನತೆಯ ಕೈಯಲ್ಲಿ ಪರಮಾಧಿಕಾರವಿರುವ ಸರ್ಕಾರ ಪದ್ಧತಿಯೇ ಪ್ರಜಾಪ್ರಭುತ್ವ

* ಆಚರಣೆಯಲ್ಲಿ ಪ್ರಜಾಪ್ರಭುತ್ವವೆಂದರೆ ಬಹುಮತವಿರುವವರ ಆಳ್ವಿಕೆಯಾಗಿದ್ದು, ಅಲ್ಪಸಂಖ್ಯಾತರ ಹಕ್ಕುಗಳಿಗೆ ಸಂಪೂರ್ಣ ರಕ್ಷಣೆಯಿರುವ ವ್ಯವಸ್ಥೆಯಾಗಿದೆ.

* ವಯಸ್ಕರು ಯಾವುದೇ ಹಿಂಸೆ ಅಥವಾ ಒತ್ತಡಕ್ಕೆ ಮಣಿಯದೆ, ಸ್ವಸಂತೋಷದಿಂದ ತಮ್ಮ ಪ್ರತಿನಿಧಿಗಳನ್ನು ಚುನಾಯಿಸುವ ಪದ್ಧತಿಯಾದ, ಪ್ರತಿನಿಧಿ ಸರ್ಕಾರವನ್ನು ಪ್ರಜಾಪ್ರಭುತ್ವ ಎನ್ನಲಾಗಿದೆ.

* ಜನತೆ ಸಮ್ಮತಿಸಿರುವ ಲಿಖಿತ ಅಥವಾ ಅಲಿಖಿತ ಸಂವಿಧಾನವನ್ನು ಕಟ್ಟುನಿಟ್ಟಾಗಿ ಅನುಸರಿಸಿ ಕಾರ್ಯ ನಿರ್ವಹಿಸುವ ಸರ್ಕಾರವೇ ಪ್ರಜಾಪ್ರಭುತ್ವ.

* ಪ್ರಜಾಸತ್ತಾತ್ಮಕ ಸರ್ಕಾರವು ಎಲ್ಲರಿಗೂ ಸಾಕಷ್ಟು ಅವಕಾಶಗಳನ್ನು ಒದಗಿಸುತ್ತದೆ ಮತ್ತು ಪ್ರತಿಯೊಬ್ಬರ ಅಸ್ತಿತ್ವವನ್ನು ಗುರುತಿಸುತ್ತದೆ ಹಾಗೂ ಅವರಿಗೆ ಸಂಪೂರ್ಣ ನ್ಯಾಯ ದೊರಕುವಂತೆ ಮಾಡುತ್ತದೆ.

* ಅದು ಎಲ್ಲರ ಕಲ್ಯಾಣವನ್ನು ಧ್ಯೇಯವಾಗಿ ಹೊಂದಿರುವ ಸರ್ಕಾರ ಪದ್ಧತಿಯಾಗಿದೆ.

* ಪ್ರಜಾಪ್ರಭುತವ ಪದ್ಧತಿಯಲ್ಲಿ ಸರ್ಕಾರವನ್ನು ಸಂವಿಧಾನಾತ್ಮಕ ತತ್ವಗಳಿಗೆ ಅನುಸಾರವಾಗಿ ಬದಲಾಯಿಸಲು ಅವಕಾಶ ನೀಡುತ್ತದೆ ಮತ್ತು ಯಾವುದೇ ಬದಲಾವಣೆಯನ್ನು ಹಿಂಸೆ ಅಥವಾ ಕ್ರಾಂತಿಕಾರಕ ಮಾರ್ಗಗಳ ಮೂಲಕ ತರುವುದನ್ನು ವಿರೋಧಿಸುತ್ತದೆ.

* ಜವಹರಲಾಲ್ ನೆಹರೂ ಮತ್ತು ಪ್ರಜಾಪ್ರಭುತ್ವ

ಜವಾಹರಲಾಲ್ ನೆಹರೂ ಅವರು ಪ್ರಜಾಪ್ರಭುತವವನ್ನು ಒಂಬ್ಬ ವ್ಯಕ್ತಿವಾದಿಯಾಗಿ ನೋಡಿದ್ದಾರೆ. ಇವರು ಪ್ರಜಾಪ್ರಭುತ್ವವನ್ನು ಮಾನವೀಯ ಮೌಲ್ಯ, ಸರ್ಕಾರದ ಕಾರ್ಯಕ್ರಮಗಳು, ಸಾಮಾಜಿಕ ರಚನೆ, ಸಾಮಾಜಿಕ ಆರ್ಥಿಕ ಮತ್ತು ರಾಜಕೀಯ ಸಮಾನತೆಯ ಆಧಾರದ ಮೇಲೆ ವಿಶ್ಲೇಷಿಸಲು ಪ್ರಯತ್ನಿಸಿದ್ದಾರೆ. ಒಬ್ಬ ವ್ಯಕ್ತಿವಾದಿಯಾಗಿ ನೆಹರೂ ಪ್ರಜಾಪ್ರಭುತ್ವವನ್ನು ವ್ಯಕ್ತಿಯ ಸರ್ವಾಂಗೀಣ ಅಭಿವೃದ್ಧಿಯ ದೃಷ್ಟಿಯಿಂದ ನೋಡಿದರೆ, ರಾಜ್ಯದ ದೃಷ್ಟಿಯಿಂದ ಪ್ರಜಾಪ್ರಭುತ್ವವನ್ನು ಮಾನವೀಯ ಮೌಲ್ಯಗಳು ಮತ್ತು ವ್ಯಕ್ತಿಯ ಅಭಿವೃದ್ಧಿಯ ದೃಷ್ಟಿಕೋನದಿಂದ ನೋಡಿದ್ದಾರೆ.

ಪ್ರಜಾಸತ್ತಾತ್ಮಕ ರಾಜ್ಯದಲ್ಲಿ ಮಾತ್ರವೇ ಸಮಾಜ ರಚನೆಯ ಕ್ರಮಬದ್ಧ ವ್ಯವಸ್ಥೆಯನ್ನು ಕಾಣಲು ಸಾಧ್ಯ ಎಂದು ಸಂವಿಧಾನ ರಚನಾ ಸಭೆಯಲ್ಲಿ ಅಬ್‌ಜಕ್ಟೀವ್ ರೆಜಲೂಸನ್‌ನ್ನು ಮಂಡಿಸಿ, ಭಾರತದ ಎಲ್ಲಾ ಪ್ರಜೆಗಳೂ ಮಾತನಾಡುವ, ಚಿಂತಿಸುವ, ಅಭಿಪ್ರಾಯ ವ್ಯಕ್ತಪಡಿಸುವ ಇಚ್ಛೆ, ಧರ್ಮದಲ್ಲಿ ನಂಬಿಕೆಯನ್ನು ಹೊಂದಿರುವ, ಪೂಜಿಸುವ, ಸಂಘಸಂಸ್ಥೆಗಳನ್ನು ಸ್ಥಾಪಿಸಿಕೊಳ್ಳುವ ಸ್ವಾತಂತ್ರವಿರಬೇಕೆಂದು ಒತ್ತಾಯಿಸಿದ್ದರು. ಪ್ರಜಾಪ್ರಭುತ್ವದ ಸಿದ್ಧಾಂತ ಹಾಗೂ ಕಾರ್ಯಾಚರಣೆಯಲ್ಲಿ ಪ್ರಾಮಾಣಿಕ ನಂಬಿಕೆಯನ್ನು ಹೊಂದಿದ್ದು, ಪ್ರಜಾಪ್ರಭುತ್ವ ಎಂದರೆ ಸರ್ಕಾರ ಪದ್ತಿ ಮಾತ್ರವೇ ಅಲ್ಲ. ಅದು ಶಿಸ್ತು, ತಾಳ್ಮೆ, ಸಹನೆಯಿಂದ ಕೂಡಿದ ಒಂದು ಜೀವನ ಮಾರ್ಗವಿದ್ದಂತೆ ಪ್ರಜಾಪ್ರಭುತ್ವ ವ್ಯಕ್ತಿಯ ಗೌರವದ ,ಸಮಾನ ಅವಕಾಶದ, ಸಮಾನತೆಯ,ಸಹನೆಯ, ತಾಳ್ಮೆಯ, ಶಿಸ್ತಿನ, ಉತ್ತಮ ಜೀವನದ ಸಂಕೇತವಾಗಿದೆ ಎಂದು ನೆಹರೂ ಹೇಳಿದ್ದಾರೆ.

ಪ್ರಜಾ ತಂತ್ರದ ಮೂಲಕವೇ ಅಭಿವೃದ್ಧಿ ಪಥದತ್ತ ಸಾಗುವ ರಾಷ್ಟ್ರದ ನಿರ್ಮಾಣ ಮಾಡಬಹುದಾಗಿದ್ದು ಅದಕ್ಕಾಗಿ ಇತರ ದೇಶಗಳ ಪ್ರಜಾಪ್ರಭುತ್ವ ಪದ್ಧತಿಯನ್ನು ಮಾದರಿಯಾಗಿಟ್ಟುಕೊಳ್ಳಬೇಕಿಲ್ಲ. ಪ್ರಜಾಪ್ರಭುತ್ವವೆಂದರೆ ದಡ್ಡರನ್ನೊಳಗೊಂಡ ಪದ್ಧತಿಯೇನಲ್ಲ ಎಂದಿದ್ದು ನೆಹರೂ, ನಾನು ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ನಂಬಿಕೆ ಹೊಂದಿರುವವನು, ಆದರೆ ನೂರು ಮಂದಿ ದಡ್ಡರನ್ನು ನಂಬುವುದಕ್ಕೆ

ಸಿದ್ಧನಿಲ್ಲ. ಅದಕ್ಕೆ ಬದಲಾಗಿ ಒಬ್ಬ ಉತ್ತಮ ವ್ಯಕ್ತಿಯನ್ನು ನಂಬುತ್ತೇನೆ ಎಂದು ಉದ್ಗರಿಸಿದ್ದಾರೆ. ಹೀಗೆ ಪ್ರಜಾಪ್ರಭುತ್ವವನ್ನು ನೆಹರೂ, ವ್ಯಕ್ತಿಯ ಅಭಿವೃದ್ಧಿಯ ದೃಷ್ಟಿಯಿಂದ, ಪ್ರತಿನಿಧಿ ಪ್ರಜಾಸತ್ತಾತ್ಮಕ ಸಂಸ್ಥೆಯನ್ನು, ಸಂಸದೀಯ ಪ್ರಜಾಪ್ರಭುತವ ವ್ಯವಸ್ಥೆಯನ್ನು ಬಹುಮತದ ಆಳ್ವಿಕೆಯನ್ನು ಬೆಂಬಲಿಸಿದ್ದಾರೆ. ನೆಹರೂರವರ ಪ್ರಜಾಪ್ರಭುತ್ವದ ವಿಚಾರಗಳನ್ನು ಈ ಕೆಳಗಿನಂತೆ ಪಟ್ಟಿಮಾಡಬಹುದಾಗಿದೆ.

* ಪ್ರಜಾಪ್ರಭುತ್ವದಲ್ಲಿ ಮಾತ್ರವೇ ವ್ಯಕ್ತಿಗೆ ಚಿಂತನಾ, ಅಭಿಪ್ರಾಯ ವ್ಯಕ್ತಪಡಿಸುವ, ಸಂಘ -ಸಂಸ್ಥೆಗಳನ್ನು ಸ್ಥಾಪಿಸಿಕೊಳ್ಳುವ, ಸ್ವಾತಂತ್ರವಿದ್ದು, ವ್ಯಕ್ತಿಯ ಅಭಿವೃದ್ಧಿ ಸಾಧ್ಯ ಎಂದು ನಂಬಿದ್ದರು. ಆದರೆ ನಿರ್ಬಂಧಿತ ಸ್ವಾತಂತ್ರ್ಯವನ್ನು ಬೆಂಬಲಿಸಿದ್ದರು. ಪ್ರಜಾಪ್ರಭುತ್ವವನ್ನು ಪ್ರತಿನಿಧಿ ಆಳ್ವಿಕೆಗೆ ನೀಡಿ ಬಹುಮತ ತತ್ವದ ಆಳ್ವಿಕೆಗೆ ತಲೆಬಾಗಬೇಕೆಂದು ವಾದಿಸಿದ್ದಾರೆ. ಹಾಗೂ ಜನತಾ ಪರಮಾಧಿಕಾರತ್ವ ತತ್ವವನ್ನು ಬೆಂಬಲಿಸಿದ್ದಾರೆ.

* ಸಾಮಾಜಿಕ, ರಾಜಕೀಯ, ಆರ್ಥಿಕ ಸಮಾನತೆ : ಹಂತಹಂತವಾಗಿ, ಪ್ರಜಾಪ್ರಭುತವದಲ್ಲಿ ಮಾತ್ರವೇ ಸಾಮಾಜಿಕ, ರಾಜಕೀಯ, ಆರ್ಥಿಕ ಸಮಾನತೆಯನ್ನು ಸಾಧಿಸಬಹುದಾಗಿದೆ ಎಂಬುದು ನೆಹರೂ ಅವರ ನಂಬಿಕೆ. ಪ್ರಜಾಪ್ರಭುತ್ವವೆಂದರೆ ಸಾಮಾಜಿಕವಾದದ ಸ್ವಯಂ ಶಿಸ್ತು ಆಗಿದೆ ಎಂದು ನೆಹರು ನಂಬಿದ್ದರು.

* ಪ್ರಜಾಪ್ರಭುತ್ವವು ಕೇವಲ ಸರ್ಕಾರದ ಪದ್ಧತಿ ಮಾತ್ರವೇ ಅಲ್ಲ, ಅದು ಒಂದು ಜೀವನ ವಿಧಾನವಾಗಿದೆ. ನೆಹರೂ ಅವರ ಪ್ರಕಾರ ಪ್ರಜಾಪ್ರಭುತ್ವವೆಂದರೆ ಶಾಂತಿಯುತ ಬದಲಾವಣೆಯ ಸಾಧನವಾಗಿದೆ. ಇದರಿಂದ ನೆಹರೂ ಶಾಂತಿಯಲ್ಲಿ ನಂಬಿಕೆಯನ್ನು ಹೊಂದಿದ್ದರು ಎಂದು ಗೊತ್ತಾಗುತ್ತದೆ.

ಪ್ರಜಾಪ್ರಭುತ್ವ ವ್ಯಕ್ತಿಯ ವ್ಯಕ್ತಿತ್ವ ವಿಕಾಸಕ್ಕೆ ಅವಕಾಶವನ್ನು ನೀಡುತ್ತದೆ ಎಂದು ನೆಹರೂ ಹೇಳಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಪಾರ್ಲಿಮೆಂಟ್ ಸರ್ವೋಚ್ಚ ಪರಮಾಧಿಕಾರವುಳ್ಳ ಸಂಸ್ಥೆಯಾಗಿದ್ದು, ಜನತಾ ಪರಮಾಧಿಕಾರದ ಪ್ರತಿನಿಧಿಯಾಗಿದೆ ಎಂದು ನೆಹರೂ ಅಭಿಪ್ರಾಯಪಟ್ಟಿದ್ದಾರೆ.

## ನಿಮ್ಮ ಪ್ರಗತಿ ಪರಿಶೀಲನೆ - 1

**ಸೂಚನೆ:** 1. ಈ ಕೆಳಗೆ ಬಿಟ್ಟಿರುವ ಜಾಗವನ್ನು ನಿಮ್ಮ ಉತ್ತರಕ್ಕೆ ಉಪಯೋಗಿಸಿಕೊಳ್ಳಿ.

2. ಈ ಘಟಕದ ಕೊನೆಯಲ್ಲಿ ನೀಡಿರುವ ಉತ್ತರದೊಂದಿಗೆ ನಿಮ್ಮ ಪ್ರಗತಿಯನ್ನು ಪರಿಶೀಲಿಸಿಕೊಳ್ಳಿ.

**1. ಪ್ರಜಾಪ್ರಭುತ್ವದ ಅರ್ಥ ಮತ್ತು ವ್ಯಾಖ್ಯೆಗಳನ್ನು ವಿಷದೀಕರಿಸಿ.**

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

2. ಪ್ರಜಾಪ್ರಭುತ್ವದ ಉಗಮ ಮತ್ತು ಬೆಳವಣಿಗೆಯನ್ನು ಕುರಿತು ವಿವರಿಸಿ?

.......................................................................................................................................................

.......................................................................................................................................................

.......................................................................................................................................................

.......................................................................................................................................................

.......................................................................................................................................................

.......................................................................................................................................................

## 16.3 ಪ್ರಜಾಪ್ರಭುತ್ವದ ಉಗಮ ಮತ್ತು ಬೆಳವಣಿಗೆ

ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಪ್ರಜಾಪ್ರಭುತವದ ಉಗಮವನ್ನು ಸುಮಾರು 2500 ವರ್ಷಗಳಷ್ಟು ಹಿಂದೆಯೇ ಗುರುತಿಸಲಾಗಿದೆ. ಪ್ರಾಚೀನ ಗ್ರೀಸ್ ಮತ್ತು ರೋಮ್ ಚಕ್ರಾಧಿಪತ್ಯದ ಅವಧಿಗಳಲ್ಲಿ ಜನತಾ ಪರಮಾಧಿಕಾರ ಮತ್ತು ಕಾನೂನಿನ ದೃಷ್ಟಿಯಲ್ಲಿ ಸಮಾನತೆ ಎಂಬ ತತ್ವಗಳ ಆಧಾರದ ಮೇಲೆ ಪ್ರಜಾಪ್ರಭುತವ ಅಸ್ತಿತ್ವದಲ್ಲಿತ್ತು. ಪ್ರಾಚೀನ ಗ್ರೀಕ್ ನಗರ ರಾಜ್ಯಗಳಾದ ಅಥೆನ್ಸ್ ಮತ್ತು ಸ್ಪಾರ್ಟಾಗಳಲ್ಲಿ ಪ್ರಜಾಪ್ರಭುತ್ವದ ಆಚರಣೆಯನ್ನು ಕುರಿತು ಅಧ್ಯಯನಗಳನ್ನು ಪ್ಲೇಟೋ ಅರಿಸ್ಟಾಟಲ್ ತಮ್ಮ ಗ್ರಂಥಗಳಲ್ಲಿ ಉಲ್ಲೇಖಿಸಿದ್ದಾರೆ. ರೋಮ್ ಚಕ್ರಾಧಿಪತ್ಯದ ಅವನತಿಯೊಂದಿಗೆ ಪ್ರಾಚೀನ ಪ್ರಜಾಪ್ರಭುತ್ವ ಅವಸಾನವಾಯಿತು. ನಂತರ ಸಂಭವಿಸಿದ ಕತ್ತಲೆ ಯುಗದಲ್ಲಿ ಪ್ರಜಾಪ್ರಭುತ್ವವಿರಲಿಲ್ಲ. ಪ್ರಾಚೀನ ಗ್ರೀಸ್ ಮತ್ತು ರೋಮ್‌ಗಳಲ್ಲಿದ್ದ ಪ್ರಜಾಪ್ರಭುತ್ವವು ಯಶಸ್ವಿಯಾಗದಿರುವುದಕ್ಕೆ ಹಲವಾರು ನಿರ್ಬಂಧಗಳಿದ್ದವು. ಅದು ಎಲ್ಲೆಡೆ ಅಸ್ತಿತ್ವದಲ್ಲಿರಲಿಲ್ಲ. ಪ್ರತ್ಯಕ್ಷ ಪ್ರಜಾಪ್ರಭುತ್ವ ಕೇವಲ ಪ್ರಜೆಗಳಿಂದ ಮಾತ್ರ ನಡೆಯುತ್ತಿತ್ತು. ಮಹಿಳೆಯರು ಮತ್ತು ಗುಲಾಮರು ಪ್ರಜಾಪ್ರಭುತ್ವದಲ್ಲಿ ಪಾಲುಗೊಳ್ಳುತ್ತಿರಲಿಲ್ಲ ರೋಮ್ ಚಕ್ರಾಧಿಪತ್ಯದಲ್ಲಿ ಚಕ್ರವರ್ತಿಯನ್ನು ಜನರೇ ಚುನಾಯಿಸುತ್ತಿದ್ದರೂ, ವಾಸ್ತವಿಕ ಆಳ್ವಿಕೆಯಲ್ಲಿ ಜನತೆಯ ಇಚ್ಚೆ ಗೌಣವಾಗಿತ್ತು. ಪ್ರಾಚೀನ ಭಾರತದಲ್ಲಿ ಪ್ರಜಾಪ್ರಭುತ್ವವು ಕೆಲವು ರಾಜ್ಯಗಳಲ್ಲಿ ಮಾತ್ರ ಅಸ್ತಿತ್ವದಲ್ಲಿತ್ತು ಎಂದು ಇತಿಹಾಸ ತಜ್ಞರು ತಿಳಿಸಿದ್ದಾರೆ.

ರೋಮ್ ಚಕ್ರಾಧಿಪತ್ಯದ ಪತನದ ನಂತಪ ಪ್ರಜಾಪ್ರಭುತ್ವವು ಕರಾಳಯುಗವನ್ನು ಪ್ರವೇಶಿಸಿತು. ಊಳಿಗಮಾನ್ಯ ಪದ್ಧತಿಯ ಮಧ್ಯಯುಗದಲ್ಲಿ, ಪಾಳೇಗಾರರು ಪ್ರಬಲರಾಗಿ, ಜನಸಾಮಾನ್ಯರು ಅಧಿಕಾರವಂಚಿತರಾಗಿದ್ದರು. ಪಾಳೆಗಾರಿಕೆಯ ಅರಾಜಕತೆಯಲ್ಲಿ ದಬ್ಬಾಳಿಕೆ ಮೆರೆಯುತ್ತಿತ್ತು. ಪ್ರಜಾಪ್ರಭುತ್ವ ಕಣ್ಮರೆಯಾಗಿತ್ತು. ಯುರೋಪಿನಲ್ಲಿ ಆಧುನಿಕ ಯುಗ ಆರಂಭವಾದ ಮೊದಲ ಅವಧಿಯಲ್ಲಿ ಪುನರುಜ್ಜೀವನದಂತಹ ಚಳುವಳಿಗಳು ಪ್ರಭಾವಶಾಲಿಯಾಗಿದ್ದರೂ, ಪ್ರಜಾಪ್ರಭುತ್ವಕ್ಕಿಂತ ನಿರಂಕುಶ ಪ್ರಭುತ್ವಕ್ಕೆ ಹೆಚ್ಚಿನ ಪ್ರೋತ್ಸಾಹವಿತ್ತು.

ಯುರೋಪಿನಿಂದ ವಿವಿಧ ರಾಷ್ಟ್ರಗಳಲ್ಲಿ ನಿರಂಕುಶ ಪ್ರಭುತ್ವದ ವಿರುದ್ಧ ತೀವ್ರ ಪ್ರತಿಭಟನೆ ಆಧುನಿಕ ಯುಗದಲ್ಲಿ ಕಂಡು ಬಂದಿತು. ಫ್ರಾನ್ಸ್‌ನಲ್ಲಿ ವಾಲ್ಟೇರ್ ಮತ್ತು ರೋಸೋ ಅವರ ವೈಚಾರಿಕ ಕ್ರಾಂತಿ, ಇಂಗ್ಲೆಂಡಿನಲ್ಲಿ ಸ್ಟ್ಯೂಯರ್ಟ್ ದೊರೆಗಳ ವಿರುದ್ಧ ಸಂಸತ್ತಿನ ಪರಮಾಧಿಕಾರದ ವಿಜೃಂಭಣೆ, ಹಾಗೂ ನಿಧಾನವಾಗಿಯಾದರೂ, ಸಂಸದೀಯ ಪ್ರಜಾಪ್ರಭುತ್ವದ ಸ್ಥಾಪನೆಯಿಂದಾಗಿ, ಪ್ರಜಾಪ್ರಭುತ್ವ ಕೇವಲ ಒಂದು ಸರ್ಕಾರ ಪದ್ಧತಿ ಮಾತ್ರವಾಗದೆ, ಜೀವನ ವಿಧಾನವೂ ಆಗಿ ವಿಕಸಿತವಾಯಿತು.

ಅಮೆರಿಕಾದ ಬ್ರಿಟಿಷ್ ವಸಾಹತುಗಳಲ್ಲಿ ಇಂಗ್ಲೆಂಡಿನ ನಿರಂಕುಶಾಡಳಿತದ ವಿರುದ್ಧ ಬಂಡಾಯವೆದ್ದ ಜನರು 1775-83ರಲ್ಲಿ ಸ್ವಾತಂತ್ರ್ಯ ಸಮರವನ್ನು ಯಶಸ್ವಿಯಾಗಿ ಗೆದ್ದು, ಸಂಯುಕ್ತ ಮತ್ತು ಗಣರಾಜ್ಯ ಪದ್ಧತಿಯಿರುವ ಲಿಖಿತ ಸಂವಿಧಾನದ ಮೂಲಕ ಪ್ರಜಾಪ್ರಭುತ್ವದ ಹಾದಿ ತುಳಿದರು. ಫ್ರಾನ್ಸ್‌ನಲ್ಲಿ ನಿರಂಕುಶ ಪ್ರಭುತ್ವವನ್ನು ವಿರೋಧಿಸಿ, ನಡೆದ ಮಹಾಕ್ರಾಂತಿ (1789-94) ಯ ನಂತರ ಪ್ರಜಾಸತ್ತಾತ್ಮಕ ಗಣರಾಜ್ಯ ಪದ್ಧತಿಯನ್ನು ಸ್ಥಾಪಿಸಲಾಯಿತು.

ಇಪ್ಪತ್ತನೆಯ ಶತಮಾನವು ಪ್ರಜಾಪ್ರಭುತ್ವದ ಸ್ವರ್ಣಯುಗದಲ್ಲಿ, ಯುರೋಪ್‌ನ ಜನತೆ ಅದನ್ನು ಭಾವೋದ್ವೇಗದಿಂದ ಆಚರಣೆಗೆ ತಂದರು. ಮೊದಲನೆಯ ಮಹಾಯುದ್ಧವನ್ನು ಬ್ರಿಟನ್ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳು ಪ್ರಜಾಪ್ರಭುತ್ವ ಮತ್ತು ಸ್ವಯಂ ನಿರ್ಧಾರದ ತತ್ವಗಳ ರಕ್ಷಣೆಗಾಗಿ ನಡೆಸಿದವು. ಸಾಮ್ರಾಜ್ಯಶಾಹಿಗಳ ದಬ್ಬಾಳಿಕೆಯ ವಿರುದ್ಧ ಹೋರಾಡಿ, ಪ್ರಜಾಸತ್ತಾತ್ಮಕ ಸಂಸ್ಥೆಗಳನ್ನು ಸ್ಥಾಪಿಸುವ ಛಲ ಜನತೆಯಲ್ಲಿ ಮೂಡಿತು. ಎಫ್. ಡಬ್ಲ್ಯೂ. ಕೋಕರ್ ಹೇಳಿರುವಂತೆ ಜಾಗತಿಕ ಯುದ್ಧದ ಏರುಪೇರುಗಳಿಂದ ಉಂಟಾದ ಹಲವಾರು ಪರಿವರ್ತನೆಗಳು, ಒಂದು ಬಗೆಯ ಪ್ರಜಾಪ್ರಭುತ್ವದ ನಿರೋಚಿತ ಕಾನೂನನ್ನು ಬಲಯುತಗೊಳಿಸಿದವು. ಓರ್ವ ಝಾರ್, ಓರ್ವ ಸುಲ್ತಾನ, ಮೂವರು ಚಕ್ರವರ್ತಿಗಳು ಮತ್ತು ನೂರಾರು ಸಣ್ಣ ಪುಟ್ಟ ರಾಜರು, ಗ್ರಾಂಡ್ ಡ್ಯೂಕರು ಮತ್ತು ರಾಜಕುಮಾರರ ಹತ್ಯೆ, ಉಚ್ಚಾಟನೆ ಅಥವಾ ಬಲಾತ್ಕಾರವಾದ ನಿರ್ಗಮನದಂತಹ ಶಾಂತಿಯುತ ಅಥವಾ ರಕ್ತಸಿಕ್ತ ಜನಪ್ರಿಯ ಕ್ರಾಂತಿಗಳು ಎಲ್ಲೆಡೆ ಸಂಭವಿಸಿದ್ದರಿಂದ ಕಿತ್ತೆಸೆಯಲ್ಪಟ್ಟರು. ಆದರೆ, ದುರಾದೃಷ್ಟವಶಾತ್, ಎರಡು ಮಹಾಯುದ್ಧಗಳ ನಡುವಣ ಅವಧಿಯಲ್ಲಿ ಕೆಲವು ಸರ್ವಾಧಿಕಾರಿಗಳು ಜನತೆಯ ಅಸಹಾಯಕ ಪರಿಸ್ಥಿತಿಯನ್ನು ದುರುಪಯೋಗಪಡಿಸಿಕೊಂಡು ತಮ್ಮ ದಬ್ಬಾಳಿಕೆಯನ್ನು ಕೆಲಕಾಲ ಯಶಸ್ವಿಯಾಗಿ ಚಲಾಯಿಸಿದರು.

ಎರಡನೆಯ ಮಹಾಯುದ್ಧದ ನಂತರ (1939-45) ಏಷ್ಯಾ ಮತ್ತು ಆಫ್ರಿಕಾ ಖಂಡಗಳ ಹಲವಾರು ದೇಶಗಳು ಸ್ವತಂತ್ರವಾದವು. ಭಾರತ, ಇಂಡೋನೇಷ್ಯಾ, ಶ್ರೀಲಂಕ, ಪಾಕಿಸ್ತಾನ, ಬಾಂಗ್ಲದೇಶ, ಕೀನ್ಯಾ, ಜಿಂಬಾಬ್ವೆ, ದಕ್ಷಿಣ ಆಫ್ರಿಕಾ ಮುಂತಾದ ದೇಶಗಳಲ್ಲಿ ಪ್ರಜಾಪ್ರಭುಉತ್ವ ಹಲವಾರು ಅಡಚಣೆಗಳನ್ನು ಎದುರಿಸಿ, ಕೆಲೆವೆಡೆ ಪ್ರಜಾಪ್ರಭುತ್ವವಲ್ಲದ ರಾಜಕೀಯ ವ್ಯವಸ್ಥೆಗಳು ಸ್ಥಾಪಿತವಾಗಿವೆ. ಸರ್ವಾಧಿಕಾರಿಗಳಿಗೆ ಸವಾಲಾಗಿರುವ ಪ್ರಜಾಸತ್ತಾತ್ಮಕ ವ್ಯವಸ್ಥೆ ಜನತೆಯ ಮನ್ನಣೆಯಿಂದ ವಿಶ್ವವ್ಯಾಪಿಯಾಗಿ ಜನಪ್ರಿಯವಾಗುತ್ತಿದೆ. ಪ್ರಜಾಪುತ್ವದ ಆಂತರಿಕ ಮತ್ತು ಬಾಹ್ಯ ಶತ್ರುಗಳನ್ನು ಎದುರಿಸುವ ನಿರಂತರ ಹೋರಾಟ ಮುಂದುವರೆಯುತ್ತಿದೆ.

## 16.4 ಪ್ರಜಾಪ್ರಭುತ್ವದ ವಿಧಗಳು

ಪ್ರಜಾಪ್ರಭುತ್ವದಲ್ಲಿ ಎರಡು ವಿಧಗಳಿದ್ದು ಅವುಗಳನ್ನು ಪ್ರತ್ಯಕ್ಷ ಪ್ರಜಾಪ್ರಭುತ್ವ ಮತ್ತು ಪರೋಕ್ಷ ಪ್ರಜಾಪ್ರಭುತ್ವ ಎಂಬುದಾಗಿ ವಿಂಗಡಿಸಲಾಗಿದೆ.

### 16.4.1 ಪ್ರತ್ಯಕ್ಷ ಪ್ರಜಾಪ್ರಭುತ್ವ

ಪ್ರತ್ಯಕ್ಷ ಪ್ರಜಾಪ್ರಭುತ್ವವೆಂಬ ಪರಿಕಲ್ಪನೆಯನ್ನು ಹಲವಾರು ರೀತಿಗಳಲ್ಲಿ ವ್ಯಾಖ್ಯಾನಿಸಲಾಗಿದೆ. ಜೇಮ್ಸ್ ಗಾರ್ನರ್ ಅವರ ಪ್ರಕಾರ ಜನತೆಯ ಮೂಲಕ ರಾಜ್ಯದ ಇಚ್ಚೆಯನ್ನು ಪ್ರತ್ಯಕ್ಷವಾಗಿ ಅಥವಾ ಕೂಡಲೇ ವ್ಯಕ್ತಪಡಿಸಿದೆ ಅದೇ ಪ್ರತ್ಯಕ್ಷ ಪ್ರಜಾಪ್ರಭುತ್ವವಾಗುತ್ತದೆ. ಪ್ರಾಚೀನ ಗ್ರೀಸ್‌ನ ಅಥೆನ್ಸ್ ನಗರ ರಾಜ್ಯ ಇಂತಹ ಪ್ರಜಾಪ್ರಭುತ್ವಕ್ಕೆ ಹೆಸರುವಾಸಿಯಾಗಿತ್ತು. ಆದರೆ ಅಥೆನ್ಸ್‌ನ ಪ್ರಜಾಪ್ರಭುತ್ವದಲ್ಲಿ ಪಾಲುಗೊಳ್ಳುತ್ತಿದ್ದ ಪ್ರಜೆಗಳ ಸಂಖ್ಯೆ ಕಡಿಮೆಯಿದ್ದು, ಪ್ರಜೆಗಳೆಂದು ಪರಿಗಣಿತರಾಗದಿದ್ದ, ಗುಲಾಮರು ಮತ್ತು ಸ್ತ್ರೀಯರ ಸಂಖ್ಯೆ ಅತಿ ದೊಡ್ಡ ಪ್ರಮಾಣದಲ್ಲಿತ್ತು. ಆಧುನಿಕ ಕಾಲದಲ್ಲಿನ ಪ್ರತ್ಯಕ್ಷ ಪ್ರಜಾಪ್ರಭುತ್ವವು ಸ್ವಿಟ್ಜರ್ಲೆಂಡಿನ ಕ್ಯಾಂಟನ್‌ಗಳಲ್ಲಿ ಆಚರಣೆಯಲ್ಲಿದೆ.

ಪ್ರಜೆಗಳೆಲ್ಲ ಒಂದೆಡೆ ಸೇರಿ, ತಮಗೆ ಬೇಕಾದ ಶಾಸನಗಳನ್ನು ರಚಿಸುವ, ಅವುಗಳನ್ನು ಕಾರ್ಯಗತಗೊಳಿಸಲು ಬೇಕಾದ ಅಧಿಕಾರಿಗಳು ಮತ್ತು ನ್ಯಾಯಾಧೀಶರನ್ನು ದಕ್ಷತೆಯ ಆಧಾರದ ಮೇಲೆ ಚುನಾಯಿಸುವ, ಅದಕ್ಷರನ್ನು ವಜಾ ಮಾಡುವ ನೇರ ವ್ಯವಸ್ಥೆ ಆಚರಣೆಯಲ್ಲಿರಲು ಕಾರಣಗಳೆಂದರೆ, ಸೀಮಿತ ಜನಸಂಖ್ಯೆ ಮತ್ತು ಪರಿಮಿತ ಭೂಪ್ರದೇಶ. ಇಂದಿನ ಪರಿಸ್ಥಿತಿಯಲ್ಲಿ, ಇಂತಹ ರಾಜ್ಯಗಳಿಲ್ಲ. ಆದಾಗ್ಯೂ, ಸ್ವಿಟ್ಜರ್ಲೆಂಡಿನ ಕ್ಯಾಂಟನ್‌ಗಳಲ್ಲಿ ಪ್ರಜಾ ನಿರ್ಧಾರ ಮತ್ತು ಪ್ರಜಾನಿರ್ದೇಶನ ಮತ್ತು ಹಿಂದಕ್ಕೆ ಕರೆಯುವ

ಪದ್ಧತಿಗಳ ಮೂಲಕ ಆಚರಿಸಲಾಗುತ್ತದೆ.

**ಪ್ರತ್ಯಕ್ಷ ಪ್ರಜಾಪ್ರಭುತ್ವದ ಅಗತ್ಯಾಂಶಗಳು**

* ರಾಜ್ಯದ ಎಲ್ಲ ಜನರು ಒಂದೆಡೆ ಸಭೆ ಸೇರಿ, ಪರಸ್ಪರ ಅರಿಯುವಷ್ಟು ಕಡಿಮೆ ಪ್ರಮಾಣದ ಜನಸಂಖ್ಯೆಯುಳ್ಳ ಸಣ್ಣ ರಾಜ್ಯ.
* ಸಾಮಾಜಿಕ ವ್ಯವಹಾರಗಳಲ್ಲಿ ತುಂಬಾ ಸರಳತೆ.
* ಸಮಾಜದಲ್ಲಿ ಸ್ಥಾನ-ಮಾನ ಮತ್ತು ಸಂಪತ್ತಿನಲ್ಲಿ ಗಣನೀಯ ಸಮಾನತೆ
* ಅತ್ಯಲ್ಪಭೋಗ ಸಾಮಗ್ರಿಗಳು ಅಥವಾ ಅವುಗಳಿಲ್ಲದೆಯೇ ಇರುವುದು.
* ಅಪೇಕ್ಷಣೀಯವಾದರೂ, ಆಚರಣೆಯಲ್ಲಿ ತರಲಾಗದ ಪ್ರತ್ಯಕ್ಷ ಪ್ರಜಾಪ್ರಭುತ್ವದ ಗುಣಗಳೆಂದರೆ,
* ಪ್ರಜೆಗಳು ರಾಜ್ಯಕ್ಕೆ ಹೆಚ್ಚಿನ ನಿಷ್ಠೆ ಹೊಂದಿರುತ್ತಾರೆ ಮತ್ತು ಅದರ ವ್ಯವಹರಾಗಳಲ್ಲಿ ನೇರವಾಗಿ ಪಾಲುಗೊಳ್ಳಲು ಹೆಮ್ಮೆಪಡುತ್ತಾರೆ.
* ಪ್ರತಿಯೊಬ್ಬ ಪ್ರಜೆಯು ಯಾವುದಾದರೂ ಹುದ್ದೆ ಅಲಂಕರಿಸಿ, ರಾಜ್ಯಕ್ಕೆ ಸೇವೆ ಸಲ್ಲಿಸಲು ಅವಕಾಶಗಳು ದೊರೆಯುತ್ತವೆ.
* ಅಥೆನ್ಸ್‌ನಲ್ಲಿದ್ದ ಪ್ರತ್ಯಕ್ಷ ಪ್ರಜಾಪ್ರಭುತ್ವವು ಪ್ರಜೆಗಳಿಗೆ ಸದ್ಗುಣ ಮತ್ತು ಆನಂದಭರಿತ ಜೀವನದಲ್ಲಿ ಪಾಲುಗಾರಿಕ ಹೊಂದಿ ಉನ್ನತ ಜೀವನದ ಅನುಕೂಲಗಳನ್ನು ಅನುಜವಿಸಲು ಅವಕಾಶ ನೀಡಿತ್ತು.

**ಪ್ರತ್ಯಕ್ಷ ಪ್ರಜಾಪ್ರಭುತ್ವದ ದೋಷಗಳು**

ಅ) ಗ್ರೀಸ್‌ನಗರ ರಾಜ್ಯಗಳಲ್ಲಿ ಪ್ರತ್ಯಕ್ಷ ಪ್ರಜಾಪ್ರಭುತ್ವದ ಅನುಕೂಲವನ್ನು ಕೆಲವರೇ ಮಾತ್ರ ಅನುಭವಿಸುತ್ತಿದ್ದರು. ಪೌರತ್ವದ ಅನುಕೂಲಗಳು ಮಹಿಳೆಯರಿಗೆ, ಗುಲಾಮರಿಗೆ ಮತ್ತು ವಿದೇಶಿಯರಿಗೆ ಲಭ್ಯವಿರಲಿಲ್ಲ.

ಆ) ಪ್ರಾಚೀನ ಗ್ರೀಸ್‌ನಲ್ಲಿ ಪ್ರಜಾಪ್ರಭುತ್ವದ ಯಶಸ್ಸಿಗೆ ಅಗತ್ಯವಾಗಿದ್ದ ಸ್ವಾತಂತ್ರ್ಯ ಮತ್ತು ಸಮಾನತೆಗಳು ಇರಲಿಲ್ಲ.

ಇ) ಪ್ರತ್ಯಕ್ಷ ಪ್ರಜಾಪ್ರಭುತ್ವವು ಸಣ್ಣ ಪುಟ್ಟ ರಾಜಕೀಯಗಳಲ್ಲಿ ಮಾತ್ರ ಯಶಸ್ವಿಯಾಗಬಲ್ಲದೆ ಹೊರತು, ಆಧುನಿಕ ಕಾಲದ ದೊಡ್ಡ ಭೂಪ್ರದೇಶವುಳ್ಳ ರಾಜ್ಯಗಳಲ್ಲಲ್ಲ.

## 16.4.2 ಪರೋಕ್ಷ ಪ್ರಜಾಪ್ರಭುತ್ವ

ಆಧುನಿಕ ಕಾಲದಲ್ಲಿ ಪ್ರಜಾಪ್ರಭುತ್ವವು ಪರೋಕ್ಷವಾಗಲು ಪ್ರಮುಖ ಕಾರಣಗಳೆಂದರೆ, ಜನಸಂಖ್ಯೆಯ ಹೆಚ್ಚಳ ಮತ್ತು ಭೂಪ್ರದೇಶದ ವಿಸ್ತರಣೆ. ಪ್ರಜೆಗಳ ಪ್ರತಿನಿಧಿಗಳ ಮೂಲಕ ಪ್ರಜಾಪ್ರಭುತ್ವ ಪದ್ಧತಿ ಕಾರ್ಯಾಚರಣೆಯಲ್ಲಿರುವುದರಿಂದ ಪ್ರಜಾಪ್ರಭುತ್ವ ಪರೋಕ್ಷ ಪದ್ಧತಿಯಾಗಿದೆ. ಇದನ್ನು ಪ್ರತಿನಿಧಿ ಪ್ರಜಾಪ್ರಭುತ್ವವೆಂದು ಕರೆಯಲಾಗಿದೆ. ಉದಾಹರಣೆಗೆ ಬ್ರಿಟನ್, ಅಮೆರಿಕ ಸಂಯುಕ್ತ ಸಂಸ್ಥಾನಗಳು, ಫ್ರಾನ್ಸ್, ಭಾರತ ಹಾಗೂ ಇನ್ನಿತರ ದೇಶಗಳಲ್ಲಿ ಈ ಪದ್ಧತಿ ಅಸ್ತಿತ್ವದಲ್ಲಿದೆ. ಪ್ರತಿನಿಧಿ ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಮತದಾರ ವರ್ಗವು ನೇರವಾಗಿ ಸರ್ಕಾರವನ್ನು ನಿರ್ದೇಶಿಸುವುದಿಲ್ಲ. ತನ್ನನ್ನು ಪ್ರತಿನಿಧಿಸುವ ಮತ್ತು ತನ್ನ ಪರವಾಗಿ ಕ್ರಿಯಾಶೀಲವಾಗುವ ಅಂಗ ಅಥವಾ ಅಂಗಗಳನ್ನು ಅಸ್ತಿತ್ವಕ್ಕೆ ತರುವ ಕಾನೂನು ಬದ್ಧ ಪರಮಾಧಿಕಾರ ಹೊಂದಿರುತ್ತದೆ.

ಪ್ರತಿನಿಧಿ ಸರ್ಕಾರ ಪದ್ಧತಿಯಲ್ಲಿ ಸಂಸದೀಯ, ಅಧ್ಯಕ್ಷೀಯ ಮತ್ತು ಮಿಶ್ರ ಸ್ವರೂಪದ ಪ್ರಜಾಸತ್ತಾತ್ಮಕ ವ್ಯವಸ್ಥೆಯು, ಶಾಸಕಾಂಗ ಮತ್ತು ಕಾರ್ಯಾಂಗಗಳ ಸಂಬಂಧಗಳನ್ನು ಆಧರಿಸಿ ಕಾರ್ಯಾಚರಣೆಯಲ್ಲಿದೆ. ಉದಾಹರಣೆಗೆ ಭಾರತದಲ್ಲಿ ಸಂಸದೀಯ

ಪ್ರಜಾಪ್ರಭುತ್ವ ಪದ್ಧತಿ, ಅಮೇರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಅಧ್ಯಕ್ಷೀಯ ಪ್ರಜಾಪ್ರಭುತವ ಪದ್ಧತಿ ಹಾಗೂ ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ಮಿಶ್ರ ಸ್ವರೂಪದ ಪ್ರಜಾಪ್ರಭುತ್ವ ಪದ್ಧತಿ ಅಸ್ತಿತ್ವದಲ್ಲಿದೆ. ಸ್ವಿಸ್ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷ ಪದ್ಧತಿಗಳೆರಡರ ಲಕ್ಷಣಗಳನ್ನು ಅಳವಡಿಸಿದ್ದರೂ, ಪ್ರತ್ಯಕ್ಷ ಪ್ರಜಾಪ್ರಭುತ್ವದ ಸಂಸ್ಥೆಗಳಾದ ಪ್ರಜಾನಿರ್ಧಾರ, ಪ್ರಜಾ ನಿರ್ದೇಶನ ಜನಮತಗಣನೆ (ಪ್ಲೆಬಿಸೈಟ್) ಮತ್ತು ಹಿಂದಕ್ಕೆ ಕರೆಯುವ ಪದ್ಧತಿಗಳು ಆಚರಣೆಯಲ್ಲಿವೆ. ಇಂದಿನ ಪರಿಸ್ಥಿತಿಯಲ್ಲಿ ರಾಜ್ಯದ ಎಲ್ಲಾ ಪ್ರಜೆಗಳು ಸರ್ಕಾರದ ವ್ಯವಹಾರಗಳಲ್ಲಿ ಪಾಲುಗೊಳ್ಳಲು ಅಸಾಧ್ಯವಾಗಿರುವುದರಿಂದ, ಪರೋಕ್ಷ ಪ್ರಜಾಪ್ರಭುತ್ವ ಪದ್ಧತಿ ವಿಶ್ವವ್ಯಾಪಿಯಾದ ಪದ್ಧತಿಯಾಗಿದೆ.

**ಪರೋಕ್ಷ ಪ್ರಜಾಪ್ರಭುತ್ವದ ದೋಷಗಳು**

* ರಾಜಕೀಯ ವ್ಯವಹಾರಗಳಲ್ಲಿ ಆಸಕ್ತಿ ಹೊಂದಿರುವ ಸಂಖ್ಯೆ ಅತ್ಯಲ್ಪವಾಗಿದ್ದು, ಅಂತಹವರು ಮಾತ್ರ ಚುನಾವಣೆಯ ಕಣಕ್ಕಿಳಿಯುತ್ತಾರೆ.

* ಬಹುತೇಕ ಪ್ರಜೆಗಳು ಸರ್ಕಾರದ ವ್ಯವಹಾರಗಳಲ್ಲಿ ಆಸಕ್ತಿ ಹೊಂದಿರುವುದಿಲ್ಲ. ಅಭಿವೃದ್ಧಿ ಹೊಂದದ ದೇಶಗಳಲ್ಲಿ ರಾಜಕೀಯ ಪ್ರಜ್ಞೆಯ ಅಭಾವದಿಂದಾಗಿ, ಕೆಲವೆ ಮಂದಿ ನಾಯಕರು, ಜನತೆಯ ಅಜ್ಞಾನವನ್ನು ದುರುಪಯೋಗಪಡಿಸಿಕೊಂಡು, ಮನಬಂದಂತೆ ಅಧಿಕಾರ ಚಲಾಯಿಸುವ ಅಪಾಯವಿದೆ.

* ಪ್ರಸ್ತುತ ಪರಿಸ್ಥಿತಿಯಲ್ಲಿ ಸರ್ಕಾರದ ಪ್ರಕ್ರಿಯೆ ಸಂಕೀರ್ಣವಾಗಿದ್ದು, ಹಲವಾರು ಕಠಿಣ ಸಮಸ್ಯೆಗಳನ್ನು ಎದುರಿಸಲು, ಶ್ರೇಷ್ಠವಾದ ಕೌಶಲ ಮತ್ತು ಬುದ್ಧಿವಂತಿಕೆ ಅಗತ್ಯವಾಗುತ್ತದೆ. ಜನತಾ ಪ್ರತಿನಿಧಿಗಳು ಪರಿಣಿತರಾಗಿ ಕಾರ್ಯ ನಿರ್ವಹಿಸುವುದು ಕಷ್ಟಕರವಾಗುತ್ತದೆ.

* ಅಂತಿಮವಾಗಿ ಪರೋಕ್ಷ ಪ್ರಜಾಪ್ರಭುತ್ವದಲ್ಲಿ ಪ್ರಜೆಗಳು ಸರ್ಕಾರವನ್ನು ನಡೆಸುವ ನಾಯಕರನ್ನು ಚುನಾಯಿಸುವ ಮತದಾರರಾಗಿ ಮಾತ್ರ ತಮ್ಮ ಪಾತ್ರ ನಿರ್ವಹಿಸಬಹುದೇ ವಿನಾ ನಿಜವಾದ ಅರ್ಥದಲ್ಲಿ ರಾಜ್ಯದ ಅಧಿಕಾರ ಸೂತ್ರ ಹಿಡಿಯಬಲ್ಲ ರಾಷ್ಟ್ರಪತಿ ಅಥವಾ ಪ್ರಧಾನಮಂತ್ರಿಯಾಗಿ ಕಾರ್ಯನಿರ್ವಹಿಸಲು ಸಾಧ್ಯವಿಲ್ಲ.

## 16.5 ಪ್ರಜಾಪ್ರಭುತ್ವದ ಸಿದ್ಧಾಂತಗಳು

ಸಮಕಾಲೀನ ಜಗತ್ತಿನಲ್ಲಿ ಪ್ರಜಾಪ್ರಭುತ್ವವು ಅತ್ಯಂತ ಜನಪ್ರಿಯ ರಾಜಕೀಯ ಪರಿಕಲ್ಪನೆಯಾಗಿದೆ. ಅದು ಕೇವಲ ಸರ್ಕಾರ ಪದ್ಧತಿ ಮಾತ್ರವಲ್ಲದೆ, ರಾಜ್ಯ ಪದ್ಧತಿ ಹಾಗೂ ಸಮಾಜ ವ್ಯವಸ್ಥೆಯೂ ಆಗಿದೆ. ಅದು ಸಾಮಾಜಿಕ, ಆರ್ಥಿಕ ಮತ್ತು ನೈತಿಕ ವಿಚಾರಗಳನ್ನು ಒಳಗೊಂಡಿದೆ. ಪ್ರಜಾಪ್ರಭುತ್ವದ ಆಚರಣೆಗೆ ಸಂಬಂಧಿಸಿದಂತೆ, ಕಾಲಾನುಕ್ರಮದಲ್ಲಿ ಹಲವಾರು ಚಿಂತಕರು ಮತ್ತು ಲೇಖಕರು ತಮ್ಮ ವಿಚಾರಗಳನ್ನು ಪ್ರಕಟಿಸಿದ್ದಾರೆ. ಪ್ರಜಾಸತ್ತಾತ್ಮಕ ಸಿದ್ಧಾಂತವು ಸಾಂಪ್ರದಾಯಿಕ ಉದಾರವಾದಿಗಳು ಮತ್ತು ನವ ಉದಾರವಾದಿಗಳಿಂದ ಪ್ರತಿಪಾದಿಸಲ್ಪಟ್ಟಿದೆ. ಈ ಹಂತದಲ್ಲಿ ಎರಡು ಅಂಶಗಳು ಗಮನಾರ್ಹವಾಗಿವೆ. ಪ್ರಜಾಪ್ರಭುತ್ವ ಒಂದು ರಾಜಕೀಯ ರಚನೆಯಾಗಿ ಮಾತ್ರ ಉಳಿದಿಲ್ಲ. ಅದು ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಹಾಸುಹೊಕ್ಕಾಗಿದೆ. ಆದ್ದರಿಂದ ಪ್ರಜಾಪ್ರಭುತ್ವದ ಸಿದ್ಧಾಂತವು ಈ ಎಲ್ಲ ವಿಷಯಗಳನ್ನು ಒಳಗೊಂಡಿರಬೇಕು.

## ನಿಮ್ಮ ಪ್ರಗತಿ ಪರಿಶೀಲನೆ - 2

**ಸೂಚನೆ:** 1. ಈ ಕೆಳಗೆ ಬಿಟ್ಟಿರುವ ಜಾಗವನ್ನು ನಿಮ್ಮ ಉತ್ತರಕ್ಕೆ ಉಪಯೋಗಿಸಿಕೊಳ್ಳಿ.

2. ಈ ಘಟಕದ ಕೊನೆಯಲ್ಲಿ ನೀಡಿರುವ ಉತ್ತರದೊಂದಿಗೆ ನಿಮ್ಮ ಪ್ರಗತಿಯನ್ನು ಪರಿಶೀಲಿಸಿಕೊಳ್ಳಿ.

**1. ಪ್ರತ್ಯಕ್ಷ ಪ್ರಜಾಪ್ರಭುತ್ವವನ್ನು ವಿವರಿಸಿ.**

....................................................................................................

....................................................................................................

....................................................................................................

....................................................................................................

....................................................................................................

....................................................................................................

....................................................................................................

**2. ಪರೋಕ್ಷ ಪ್ರಜಾಪ್ರಭುತ್ವವನ್ನು ಕುರಿತು ಟಿಪ್ಪಣಿ ಬರೆಯಿರಿ?**

....................................................................................................

....................................................................................................

....................................................................................................

....................................................................................................

....................................................................................................

....................................................................................................

....................................................................................................

## 16.6 ಸಾರಾಂಶ

ಪ್ರಜಾಪ್ರಭುತ್ವವೆಂಬುದು ಆಧುನಿಕ ಕಾಲದಲ್ಲಿ ಹೆಚ್ಚು ಪ್ರಚಲಿತದಲ್ಲಿರುವ ಹಾಗೂ ಜನಪ್ರಿಯ ರಾಜಕೀಯ ವ್ಯವಸ್ಥೆಯಾಗಿದೆ. ಏಕೆಂದರೆ ಇದರಲ್ಲಿ ಪ್ರಜೆಗಳೇ ಪ್ರಭುಗಳಾಗಿರುತ್ತಾರೆ. ಪ್ರಜೆಗಳ ಹಕ್ಕು ಮತ್ತು ಸ್ವಾತಂತ್ರ್ಯಗಳು ಇದರಲ್ಲಿ ರಕ್ಷಿತವಾಗುತ್ತವೆ ಎಂಬುದಕ್ಕಾಗಿ. ಪ್ರಜಾಪ್ರಭುತ್ವವು ಪ್ರಾಚೀನ ಕಾಲದಿಂದಲೇ ಬೆಳೆದುಬಂದಿರುವಂತವುದು. ಗ್ರೀಕರ ನಗರ ರಾಜ್ಯಗಳಲ್ಲಿ ಇದು ಅಸ್ತಿತ್ವದಲ್ಲಿತ್ತು. ಆದರೆ ಆಧುನಿಕ ಕಾಲದಲ್ಲಿ ಪ್ರಥಮವಾಗಿ ಇಂಗ್ಲೆಂಡಿನಲ್ಲಿ ಇದು ಅನುಷ್ಠಾನಗೊಂಡು ನಂತರದಲ್ಲಿ ಇತರ ರಾಷ್ಟ್ರಗಳಲ್ಲಿಯು ಪ್ರಚಲಿತಗೊಂಡಿದೆ. ಒಟ್ಟಾರೆ ಇರುವಂತ ರಾಜಕೀಯ ಪದ್ಧತಿಗಳಲ್ಲಿ ಇದು ಉತ್ತಮವಾದುದು ಎಂಬುದು ಮುಖ್ಯವಾದುದಾಗಿದೆ.

## 16.7 ಕಠಿಣ ಪದಗಳು

| | | |
|---|---|---|
| ವಾಕ್‌ಸ್ವಾತಂತ್ರ್ಯ | - | ತನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಅವಕಾಶ |
| ಪ್ರತ್ಯಕ್ಷ ಪ್ರಜಾಪ್ರಭುತ್ವ | - | ಪ್ರಜೆಗಳು ನೇರವಾಗಿ ಸರ್ಕಾರಿ ಕಾರ್ಯಗಳಲ್ಲಿ ಭಾಗಿಯಾಗುವುದು |
| ಪರೋಕ್ಷ ಪ್ರಜಾಪ್ರಭುತ್ವ | - | ಪ್ರಜಾಪ್ರತಿನಿಧಿಗಳಿಂದ ನಡೆಯುವ ಸರ್ಕಾರಿ ಪದ್ಧತಿ |
| ಪರಮಾಧಿಕಾರ | - | ರಾಜ್ಯಕ್ಕಿರುವ ಪರಮಶ್ರೇಷ್ಠ ಅಧಿಕಾರ |

## 16.8 ಕೆಲವು ಉಪಯುಕ್ತ ಗ್ರಂಥಗಳು


ಎಸ್.ಪಿ. ವರ್ಮಾ - ಮಾಡರ್ನ್ ಪೊಲಿಟಿಕಲ್ ಥಿಯರಿ

ವಿ.ಪಿ.ವರ್ಮಾ - ಪೊಲಿಟಿಕಲ್ ಫಿಲಾಸೊಫಿ

ಹೆಚ್.ಆರ್. ಮುಖಿ - ಹಿಸ್ಟರಿ ಆಫ್ ಪೊಲಿಟಿಕಲ್ ಥಿಯರಿ

ಡಾ. ಟಿ.ಡಿ.ದೇವೇಗೌಡ - ರಾಜಕೀಯ ಸಿದ್ಧಾಂತಗಳು

ಡಾ.ಕೆ.ಜೆ. ಸುರೇಶ್ - ಆಧುನಿಕ ರಾಜಕೀಯ ಸಿದ್ಧಾಂತಗಳು


## 16.9 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು

<u>ನಿಮ್ಮ ಪ್ರಗತಿ ಪರಿಶೀಲನೆ</u> **- 1**

1. ವಿಭಾಗ 16.2 ನೋಡಿ
2. ವಿಭಾಗ 16.3 ನೋಡಿ

<u>ನಿಮ್ಮ ಪ್ರಗತಿ ಪರಿಶೀಲನೆ</u> **- 2**

1. ಉಪವಿಭಾಗ 16.4.1 ನೋಡಿ
2. ಉಪವಿಭಾಗ 16.4.2 ನೋಡಿ

# ಘಟಕ 17 ಪ್ರಜಾಪ್ರಭುತ್ವದ ಸಾಂಪ್ರದಾಯಿಕ ಮತ್ತು ಉದಾರವಾದಿ ಸಿದ್ಧಾಂತ

## ರಚನೆ


17.0 ಉದ್ದೇಶಗಳು

17.1 ಪೀಠಿಕೆ

17.2 ಪ್ರಜಾಪ್ರಭುತ್ವದ ಸಾಂಪ್ರದಾಯಿಕ ಸಿದ್ಧಾಂತದ ಬೆಳವಣಿಗೆ

17.3 ಉದಾರವಾದಿ ಸಿದ್ಧಾಂತದ ಪ್ರಮುಖ ಲಕ್ಷಣಗಳು ತತ್ವಗಳು

17.4 ಸಾರಾಂಶ

17.5 ಕಠಿಣ ಪದಗಳು

17.6 ಕೆಲವು ಉಪಯುಕ್ತ ಗ್ರಂಥಗಳು

17.7 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು

## 17.0 ಉದ್ದೇಶಗಳು

ಈ ಘಟಕದ ವಸ್ತು ವಿಷಯವನ್ನು ಅಧ್ಯಯನ ಮಾಡಿದ ನಂತರ ನೀವು

* ಪ್ರಜಾಪ್ರಭುತ್ವದ ಸಿದ್ಧಾಂತಗಳ ಪ್ರಾಮುಖ್ಯತೆಯನ್ನು ತಿಳಿಯಬಹುದು
* ಪ್ರಜಾಪ್ರಭುತ್ವದ ಸಾಂಪ್ರದಾಯಿಕ ಸಿದ್ಧಾಂತಗಳದ ಸ್ವರೂಪವನ್ನು ವಿವರಿಸುವುದು
* ಪ್ರಜಾಪ್ರಭುತ್ವದ ಉದಾರವಾದಿ ಸಿದ್ಧಾಂತದ ಪ್ರಸ್ತುತತೆಯನ್ನು ಚರ್ಚಿಸಬಹುದು

## 17.1 ಪೀಠಿಕೆ

ಪ್ರಜಾಪ್ರಭುತ್ವದ ಸಾಂಪ್ರದಾಯಿಕ ಸಿದ್ಧಾಂತವು ಒಟ್ಟಾರೆ ವಾದಿ ತಾತ್ವಿಕ ಚಿಂತನೆಯ ಒಂದು ಅಂಶವಾಗಿದೆ. ಅದರ ತಾತ್ವಿಕ ತಳಹದಿಯು ವ್ಯಕ್ತಿವಾದವಾಗಿದೆ, ರಾಜಕೀಯ ಬುನಾದಿ, ಧರ್ಮನಿರಪೇಕ್ಷತೆ, ಸ್ವಾತಂತ್ರ, ಸಮಾನತೆ, ಭ್ರಾತೃತ್ವ, ಹಕ್ಕುಗಳು ಮತ್ತು ನ್ಯಾಯ, ರಾಜಕೀಯ ಅಧಿಕಾರದ ಬುನಾದಿಯು ಜನತೆಯ ಸಮ್ಮತಿಯಾಗಿದೆ, ಮತ್ತು ಪ್ರಾತಿನಿಧಿಕ ಸಂಸ್ಥೆಗಳೊಂದಿಗೆ ಸೀಮಿತವಾದ ಒಂದು ಉದಾರವಾದಿ ಪ್ರಜಾಸತ್ತಾತ್ಮಕ ರಾಜ್ಯದ ಸ್ಥಾಪನೆ ಅದರ ಧ್ಯೇಯವಾಗಿದೆ.

ಸಾಂಪ್ರದಾಯಿಕ ಉದಾರವಾದದ ಪ್ರತಿಪಾದಕರು ಪ್ರಜಾಸತ್ತಾತ್ಮಕ ವಿಚಾರಗಳನ್ನು ಮತ್ತು ಆದರ್ಶಗಳನ್ನು ಬೆಂಬಲಿಸುತ್ತಾರೆ. ಅವರು ಸ್ವಾತಂತ್ರ, ಸಮಾನತೆ ಮತ್ತು ಭ್ರಾತೃತ್ವಕ್ಕಾಗಿ ಮನವಿ ಮಾಡಿದ್ದಾರೆ. ಅವರು ಸ್ವತಂತ್ರವಾಗಿ ಆಲೋಚಿಸುವ, ಮಾತನಾಡುವ ಮತ್ತು ಚಟುವಟಿಕೆಗಳಲ್ಲಿ ತೊಡಗುವ ಹಾಗೂ ಅಪಾಯಕಾರಿ ಎಂದು ಪರಿಗಣಿಸುವ ಅಭಿಪ್ರಾಯ ಮತ್ತು ಪ್ರವೃತ್ತಿಗಳ ಸಹಿಷ್ಣುತೆಯನ್ನು ಮೂಲಭೂತ ಉದಾರವಾದಿ ಮೌಲ್ಯಗಳೆಂದು ನೆಲೆಗೊಳಿಸುವ ಪ್ರಯತ್ನವೆಂದು ಹೇಳುತ್ತಾರೆ, ಮತ್ತು ಅಧಿಕಾರವು ಎಲ್ಲರ ಹಿತ ಮತ್ತು ಎಲ್ಲರ ಒಳಿತನ್ನು ರಕ್ಷಿಸುತ್ತದೆ ಎಂಬ ಅಭಿಪ್ರಾಯ ಹೊಂದಿದ್ದಾರೆ. ಪ್ರಜಾಪ್ರಭುತ್ವವು ಉದಾರವಾದಿ ಮೌಲ್ಯಗಳು, ತತ್ವಗಳು, ಗುರಿಗಳು ಮತ್ತು ಧ್ಯೇಯಗಳನ್ನು ಕಾರ್ಯರೂಪಕ್ಕೆ ತರುವ ಸಾಧನವೆಂದು ನಂಬಿದ್ದಾರೆ. ಪ್ರಜಾಪ್ರಭುತ್ವವು ಎಲ್ಲಾ ಪ್ರಜೆಗಳನ್ನು ಸಮುದಾಯವಾಗಿ ಒಂದುಗೂಡಿಸುವ ಒಂದು ಸಾಧನ ಮತ್ತು ಅರಿಸ್ಟಾಟಲ್ ಅವರು ಬಹಳ ಹಿಂದೆಯೇ ಹೇಳಿದ್ದ ನ್ಯಾಯಯುತವಾದ ರಾಜ್ಯ ಸ್ಥಾಪನೆಯ ಮಾರ್ಗ.

## 17.2 ಪ್ರಜಾಪ್ರಭುತ್ವದ ಸಾಂಪ್ರದಾಯಿಕ ಉದಾರವಾದಿ ಸಿದ್ಧಾಂತದ ಬೆಳವಣಿಗೆ

ಪ್ರಜಾಪ್ರಭುತ್ವದ ಸಾಂಪ್ರದಾಯಿಕ ಉದಾರವಾದಿ ಸಿದ್ಧಾಂತವು ನಿಧಾನವಾಗಿ, ನಿರಂತರವಾಗಿ ಮತ್ತು ವಿಕಸನ ಪ್ರಕ್ರಿಯೆಯ ಮೂಲಕ ಅಸ್ತಿತ್ವಕ್ಕೆ ಬಂದಿದೆ. ಅದರ ಆರಂಭವನ್ನು ಗ್ರೀಕ್ ತತ್ವಜ್ಞಾನಿಗಳ ಕೃತಿಗಳಲ್ಲಿ ಗಮನಿಸಬಹುದಾದರೂ, ಉದಾರವಾದಿ ಪ್ರಜಾಪ್ರಭುತ್ವದ ಮೂಲಭೂತ ತತ್ವಗಳು ಹದಿನೇಳನೆಯ ಶತಮಾನ ಮತ್ತು ನಂತರದ ಶತಮಾನದ ತತ್ವಜ್ಞಾನಿಗಳಾದ ಹಾಬ್ಸ್, ಲಾಕ್, ರೂಸೋ, ಬೆಂಥ್ಯಾಮ್, ಮಿಲ್ ಮುಂತಾದವರ ಕೃತಿಗಳಲ್ಲಿ ಸ್ಪಷ್ಟ ರೂಪ ತಳೆಯಿತು. ಸರ್ಕಾರದ ಪ್ರಕ್ರಿಯೆಯಲ್ಲಿ ಜನತೆ ಪಾಲುಗೊಳ್ಳಬೇಕೆಂಬ ವಿಚಾರವು ಪ್ರಜಾಪ್ರಭುತ್ವದ ಸಾಂಪ್ರದಾಯಿಕ ಉದಾರವಾದಿ ಸಿದ್ಧಾಂತದ ತಳಹದಿಯಾಗಿದೆ.

ಪ್ರಜಾಪ್ರಭುತ್ವದ ಸಾಂಪ್ರದಾಯಿಕ ಉದಾರವಾದಿ ಸಿದ್ಧಾಂತವು ಮೇಲೆ ಹೇಳಿದ ತತ್ವಜ್ಞಾನಿಗಳಾದ ವಿಚಾರಗಳಲ್ಲಿ ವ್ಯಕ್ತವಾಗುತ್ತದೆ. ರಾಜಕೀಯ ಪ್ರಕ್ರಿಯೆಗಳಲ್ಲಿ ಜನತೆಯ ಸಕ್ರಿಯ ಪಾಲುಗೊಳ್ಳುವಿಕೆಯನ್ನು ಒತ್ತಿ ಹೇಳುತ್ತದೆ. ಈ ಸಿದ್ಧಾಂತವು ಮತದಾನ ಪದ್ಧತಿ, ಪ್ರತಿನಿಧಿ ಸರ್ಕಾರದ ಅಸ್ತಿತ್ವ, ಮುಕ್ತ ಚುನಾವಣೆಗಳು, ವ್ಯಕ್ತಿಯ ಹಕ್ಕುಗಳು ಮತ್ತು ಅಭಿವ್ಯಕ್ತಿ, ಸ್ವಾತಂತ್ರ, ಕಾನೂನಿನ ಅದಿಪತ್ಯ,

ಮತ್ತು ನ್ಯಾಯಾಂಗದ ಸ್ವಾತಂತ್ರ, ಸಾರ್ವಜನಿಕ ಹುದ್ದೆಗಳಿಗೆ ಸಮಾನ ಅವಕಾಶ ಮತ್ತು ಶಾಸಕಾಂಗಕ್ಕೆ ಕಾರ್ಯಾಂಗದ ಜವಾಬ್ದಾರಿ ಎಂಬ ತತ್ವಗಳನ್ನು ಎತ್ತಿಹಿಡಿಯುತ್ತದೆ.

ಥಾಮಸ್ ಹಾಬ್ಸ್ ತಮ್ಮ ಲೆವಿಯಥಾನ್ ಗ್ರಂಥದಲ್ಲಿ ಸಾಮಾಜಿಕ ಒಪ್ಪಂದದ ಮೂಲಕ ಸರ್ಕಾರ ಅಥವಾ ರಾಜ್ಯದ ಸ್ಥಾಪನೆಯಲ್ಲಿ ಜನತೆ ಪಾಲುಗೊಳ್ಳುತ್ತಾರೆ ಎಂಬ ಪ್ರಜಾಸತ್ತಾತ್ಮಕ ತತ್ವಗಳನ್ನು ವಿಸ್ತಾರವಾಗಿ ತಿಳಿಸಿದರು. ಸಮಾಜದ ದೈವಿಕ ಉಗಮ ಸಿದ್ಧಾಂತವನ್ನು ತಿರಸ್ಕರಿಸಿ, ರಾಜಕೀಯ ಸಂಘಟನೆಯು ಮೂಲತಃ ನೈಸರ್ಗಿಕ ಪರಿಸ್ಥಿತಿಯಲ್ಲಿ ಸಮಾನರಾದ ಮತ್ತು ಮುಕ್ತವಾಗಿ ಜೀವಿಸುತ್ತಿದ್ದ ಜನರು ತಮ್ಮಲ್ಲೇ ಮಾಡಿಕೊಂಡ ಒಪ್ಪಂದದ ಪ್ರತಿಫಲ. ಅವರು ಕೈಗೊಂಡ ಒಪ್ಪಂದದಿಂದ ಪರಮಾಧಿಕಾರ ಸ್ಥಾಪಿತವಾಯಿತು. ಆದ್ದರಿಂದ, ಪರಮಾಧಿಕಾರ ಉಗಮವು ಪ್ರಜಾಸತ್ತಾತ್ಮಕವಾಗಿದೆ. ಆದರೆ ನೈಸರ್ಗಿಕ ಪರಿಸ್ಥಿತಿಯು ಸಂಗ್ರಾಮಸ್ಥಿತಿಯಾಗಿದ್ದು, ಜನತೆಯ ಮೇಲೆ ಯಾವ ಪ್ರಾಧಿಕಾರವು ಇಲ್ಲದಿದ್ದರಿಂದ, ಜನರೇ, ಪ್ರಭುವಿಗೆ ತಮ್ಮ ಎಲ್ಲ ಅಧಿಕಾರಗಳನ್ನು ಒಪ್ಪಂದದ ಸಮಯದಲ್ಲಿ ಒಪ್ಪಿಸಿದರು. ಪ್ರಭುವು ನಿರಂಕುಶ ಪರಮಾಧಿಕಾರಿ. ಎಲ್ಲ ಕಾನೂನುಗಳನ್ನು ಅವನಿಂದ ಹೊರಹೊಮ್ಮುವವು ಮತ್ತು ಜನರು ಅವನಿಗೆ ಅವಿಧೇಯರಾಗುವ ಹಕ್ಕು ಹೊಂದಿರುವುದಿಲ್ಲ. ಆದ್ದರಿಂದ ಹಾಬ್ಸ್ ಪ್ರಕಾರ ಪರಮಾಧಿಕಾರದ ಉಗಮಕ್ಕೆ ಪ್ರಜಾಪ್ರಭುತ್ವ ಕಾರಣವಾದರೂ, ಅದರ ಸ್ಥಾಪನೆಯ ನಂತರ, ಪ್ರಜಾಪ್ರಭುತ್ವ ಉಳಿಯುವುದಿಲ್ಲ. ಜನತೆಗೆ ಪ್ರಭುವು ದಯಪಾಲಿಸಿದ ಹಕ್ಕುಗಳು ಮಾತ್ರ ಇರುತ್ತವೆ. ಹೀಗೆ ಹಾಬ್ಸ್ ಅವರ ಸಿದ್ಧಾಂತವು ಪ್ರಜಾಪ್ರಭುತ್ವದ ಮೇಲೆ, ಪ್ರಜಾಸತ್ತಾತ್ಮಕ ಧಾಳಿಯಾಗಿದೆ. ಹಾಬ್ಸ್ ಜನತಾ ಪರಮಾಧಿಕಾರದ ತತ್ವವನ್ನು ಪರೋಕ್ಷವಾಗಿ ನಿರೂಪಿಸಿದ್ದಾರೆ.

ಜನತೆಯ ವಿಧೇಯತೆಯು ಪ್ರಭುವು ನೀಡುವ ರಕ್ಷಣೆಯನ್ನು ಅವಲಂಬಿಸಿರುತ್ತದೆ ಮತ್ತು ಅಂತಹ ರಕ್ಷಣೆ ಇರುವವರೆಗೆ ಅಸ್ತಿತ್ವದಲ್ಲಿರುತ್ತದೆ. ಜನತೆಗೆ ರಕ್ಷಣೆ ನೀಡುವುದು ಪ್ರಭುವಿನ ಮೂಲಭೂತ ಕಾರ್ಯವಾಗಿದೆ. ಹೀಗೆ ಹೇಳುವ ಮೂಲಕ ಮಧ್ಯಮ ವರ್ಗದ ಉದಾರವಾದ ಅಥವಾ ಲೈಸ್ಸೆಫೇರ್ ಸಿದ್ಧಾಂತಕ್ಕೆ ತಳಪಾಯ ಒದಗಿಸಿದ್ದಾರೆ.

ಜಾನ್‌ಲಾಕ್ ಅವರು ತಮ್ಮ ಟೂ ಟ್ರೀ ಟೈಸಸ್ ಆಫ್ ಗವರ್ನ್‌ಮೆಂಟ್ ಎಂಬ ಕೃತಿಯಲ್ಲಿ ಉದಾರವಾದಿ ಪ್ರಜಾಪ್ರಭುತ್ವದ ಸಿದ್ಧಾಂತವನ್ನು ಮತ್ತಷ್ಟು ಅಭಿವೃದ್ಧಿಪಡಿಸಿದರು. ನಿರಂಕುಶಾಧಿಕಾರದ ದೈವಿಕ ಹಕ್ಕು ಮತ್ತು ನಿರಂಕುಶಾಧಿಕಾರಗಳೆರಡನ್ನೂ ಖಂಡಿಸಿದರು. ಅವರು ಸೀಮಿತ ಅಥವಾ ಸಂವಿಧಾನಾತ್ಮಕ ಸರ್ಕಾರವನ್ನು ಸಮರ್ಥಿಸಿದರು.

ಲಾಕ್ ಅವರು ಹಾಬ್ಸ್ ತಿಳಿಸಿರುವಂತೆ ಜನತೆಯ ಪಾರಮ್ಯತೆಯನ್ನು ಎತ್ತಿಹಿಡಿದಿದ್ದಾರೆ. ಲಾಕ್ ಪ್ರಕಾರ ಜೀವಿಸುವ ಹಕ್ಕು, ಸ್ವಾತಂತ್ರ್ಯದ ಹಕ್ಕು ಮತ್ತು ಆಸ್ತಿಯ ಹಕ್ಕು ನೈಸರ್ಗಿಕ ಹಕ್ಕುಗಳಾಗಿವೆ. ರಾಜ್ಯ ಮತ್ತು ಸರ್ಕಾರ ಹಕ್ಕುಗಳನ್ನು ರಕ್ಷಿಸಲು ಸ್ಥಾಪಿತವಾಗಿಯೇ ಹೊರತು, ಅವುಗಳನ್ನು ಕಿತ್ತುಕೊಳ್ಳುವುದಕ್ಕಲ್ಲ. ಹಕ್ಕುಗಳನ್ನು ಒಪ್ಪಿಸುವುದಾಗಲೀ ಅಥವಾ ಕಸಿದುಕೊಳ್ಳುವುದಾಗಲಿ ಸಾಧ್ಯವಿಲ್ಲ. ಹಕ್ಕುಗಳು ರಾಜ್ಯದ ಮೇಲೆ ಇತಿಮಿತಿ ವಿಧಿಸುತ್ತವೆ. ಹೀಗೆ, ಹೇಳುತ್ತಾ ಲಾಕ್ ಅವರು ನೈಸರ್ಗಿಕ ಹಕ್ಕುಗಳು ಮತ್ತು ಸೀಮಿತ ಸರ್ಕಾರದ ಸಿದ್ಧಾಂತಗಳಿಗೆ ತಳಹದಿ ಒದಗಿಸಿದ್ದಾರೆ.

ಬಹಿರಂಗವಾಗಿ ಅಲ್ಲದಿದ್ದರೂ, ಸೂಚ್ಯವಾಗಿ ಜನತೆಯ ಹಕ್ಕುಗಳನ್ನು ಉಲ್ಲಂಘಿಸುವ ಸರ್ಕಾರವನ್ನು ಕಿತ್ತೆಸೆಯುವ ಹಕ್ಕು ಜನತೆಗೆ ಇದೆ ಎಂದು ಲಾಕ್ ಸಮರ್ಥಿಸಿದ್ದಾರೆ. ಇಂಗ್ಲೆಂಡಿನ ಎರಡನೆಯ ಜೇಮ್ಸ್ ದೊರೆಯ ಉಚ್ಚಾಟನೆಯನ್ನು ಸಮರ್ಥಿಸಿದ್ದಾರೆ.

ಜಾನ್‌ಲಾಕ್ ಅವರು ಜನತೆಯ ಸಮ್ಮತಿಯಿಂದ ಸರ್ಕಾರ ಎಂಬ ಸಿದ್ಧಾಂತವನ್ನು ಪ್ರತಿಪಾದಿಸಿದ್ದಾರೆ. ಅವರು ಆಸ್ತಿಯ ಹಕ್ಕನ್ನು ಅತಿಯಾಗಿ ಬೆಂಬಲಿಸುತ್ತಾ ಆಸ್ತಿಯ ರಕ್ಷಣೆಗಾಗಿ ರಾಜ್ಯ ಉಗಮವಾಯಿತು ಎಂದಿದ್ದಾರೆ. ಇವರಿಂದ ಪ್ರೇರಣೆ ಪಡೆದ ಅಮೇರಿಕಾದ ಸ್ವಾತಂತ್ರ ಹೋರಾಟಗಾರರು. ಪ್ರಾತಿನಿಧ್ಯವಿಲ್ಲದೆ ತೆರಿಗೆ ವಿಧಿಸುವಂತಿಲ್ಲ ಎಂಬ ಘೋಷಣೆ ಹೊರಡಿಸಿರುವುದು ಇತಿಹಾಸದಿಂದ

ಸ್ಪಷ್ಟವಾಗಿದೆ. ಆದ್ದರಿಂದ ಮಧ್ಯಮವರ್ಗದ ವ್ಯಕ್ತಿವಾದಿ ಉದಾರವಾದವು ಹಾಬ್ಸ್ ಮತ್ತು ಲಾಕ್ ಅವರ ವಿಚಾರಗಳಿಂದ ವ್ಯಾಪಕವಾಗಿ ಬೆಳೆಯಿತು.

ಲಾಕ್ ಪ್ರತಿಪಾದಿಸಿರುವ ಪ್ರಜಾಸತ್ತಾತ್ಮಕ ರಾಜ್ಯದ ತ್ತವಗಳನ್ನು ಕೆಳಕಂಡಂತೆ ಸಂಕ್ಷಿಪ್ತವಾಗಿ ನಿರೂಪಿಸಬಹುದು.

* ಪ್ರಜಾಸತ್ತಾತ್ಮಕ ರಾಜ್ಯವು ಜನತೆಯ ಸಮ್ಮತಿಯನ್ನು ಆಧರಿಸಿದೆ.
* ಅದು ರಾಜ್ಯವನ್ನು ಸ್ಥಾಪಿಸುವ ಜನತೆಗಾಗಿ ಅಸ್ತಿತ್ವದಲ್ಲಿದೆ, ಮತ್ತು ಜನತೆಗಾಗಿ ರಾಜ್ಯವೇ ಹೊರತು, ರಾಜ್ಯಕ್ಕಾಗಿ ಜನತೆಯಲ್ಲ.
* ಪ್ರಜಾಸತ್ತಾತ್ಮಕ ರಾಜ್ಯವು ಸಂವಿಧಾನಾತ್ಮಕ ರಾಜ್ಯವಾಗಿದೆ ಮತ್ತು ಕಾನೂನಿನ ಅಧಿಪತ್ಯದಿಂದ ಆಳಲ್ಪಡುತ್ತದೆ.
* ರಾಜ್ಯ ಸೀಮಿತವಾಗಿದೆಯೆ ಹೊರತು ನಿರಂಕುಶವಾಗಿಲ್ಲ
* ಅದು ಸಹಿಷ್ಣುತೆಯ ರಾಜ್ಯ, ಅಭಿಪ್ರಾಯಗಳ ಭೆದವನ್ನು ಸಹಿಸುತ್ತದೆ ಮತ್ತು
* ಅದು ಪರಭಾರೆಯಾಗದ ವ್ಯಕ್ತಿಗಳ ನೈಸರ್ಗಿಕ ಹಕ್ಕುಗಳನ್ನು ರಕ್ಷಿಸುತ್ತದೆ.

ಲಾಕ್ ಅವರ ಸಿದ್ಧಾಂತವು ಬಹುಮತ ತತ್ವ ಮತ್ತು ಅಧಿಕಾರಗಳ ಪ್ರತ್ಯೇಕತೆಯನ್ನಾಧರಿಸಿದ ಪ್ರತಿನಿಧಿ ಸರ್ಕಾರವನ್ನು ಸಮರ್ಥಿಸುತ್ತದೆ. ಪ್ರಾಧ್ಯಾಪಕ ಸಿ.ಸಿ. ಮ್ಯಾಕ್ಸೀ ಅವರು ಹೇಳುವಂತೆ ಅವರು (ಲಾಕ್) ಒಂದು ಕ್ರಮಬದ್ಧವಾದ ವೈಚಾರಿಕವಾದ, ಮತ್ತು ಸುಪ್ರಸಿದ್ಧವಾಗಿ ತಡೆಯಬಹುದಾದ ವ್ಯಕ್ತಿವಾದ, ಜನತಾ ಪರಮಾಧಿಕಾರ ಮತ್ತು ಸಂವಿಧಾನಾತ್ಮಕ ಸರ್ಕಾರದ ತಾತ್ವಿಕ ಚಿಂತನೆಯನ್ನು ಜಗತ್ತಿಗೆ ನೀಡಿದ್ದಾರೆ.

ಹದಿನೆಂಟನೆಯ ಶತಮಾನದಲ್ಲಿ, ಹಲವಾರು ತತ್ವಜ್ಞಾನಿಗಳು ಮತ್ತು ಲೇಖಕರು, ಸಾಂಪ್ರದಾಯಿಕ ಉದಾರವಾದಿ ಪ್ರಜಾಪ್ರಭುತ್ವದ ತತ್ವಗಳನ್ನು ವಿವರಿಸುವುದನ್ನು ಮುಂದುವರಿಸಿದರೆ, ಕೆಲವು ರಾಜ್ಯದ ಮುತ್ಸದ್ದಿಗಳು ಸಾಂಸ್ಥಿಕ ಅಂಶಗಳ ಕಡೆ ತಮ್ಮ ಗಮನಹರಿಸಿದರು ಮತ್ತು ಅದರ ಸಾಂಸ್ಥಿಕ ತಳಹದಿಯನ್ನು ನೆಲೆಗೊಳಿಸಲು ಪ್ರಯತ್ನಿಸಿದರು.

ಪ್ರಖ್ಯಾತ ಫ್ರೆಂಚ್ ವಿದ್ವಾಂಸರಾದ ಮಾಂಟೆಸ್ಕ್ಯೊ ಅವರು ತಮ್ಮ ದಿ ಸ್ಪಿರಿಟ್ ಆಫ್ ದಿ ಲಾಸ್ ಕೃತಿಯಲ್ಲಿ ಅಧಿಕಾರ ಪ್ರತ್ಯಕತಾ ಸಿದ್ಧಾಂತವನ್ನು ಪ್ರತಿಪಾದಿಸಿದರು. ಅದು ಪ್ರಜಾಪ್ರಭುತ್ವದ ಶ್ರೇಷ್ಟ ಮನವಿಯಾಗಿತ್ತು ಮತ್ತು ನಂತರ ಅದೊಂದು ರಾಜಕೀಯ ಕುರುಡು ನಂಬಿಕೆಯಾಯಿತು. ಅಂದಿನ ರಾಜಕೀಯ ಚಿಂತನೆಯು ಈ ಸಿದ್ಧಾಂತದ ಸಾಮಾನ್ಯ ತತ್ವಳನ್ನು ಅಳವಡಿಸಿಕೊಂಡಿತು. ಅವು ಅಮೆರಿಕ ಮತ್ತು ಫ್ರಾನ್ಸಿನ ಕ್ರಾಂತಿಗಳ ರಾಜಕೀಯ ತತ್ವಜ್ಞಾನದ ಭಾಗಗಳಾದವು ಹಾಗೂ ಹದಿನೆಂಟನೆಯ ಶತಮಾನದ ಅಂತ್ಯದಲ್ಲಿ ಆ ದೇಶಗಳ ಸಂವಿಧಾನದಲ್ಲಿ ಅಳವಡಿಸಲ್ಪಟ್ಟವು. ಇಂತಹದೇ ವಿಚಾರಗಳನ್ನು ಇಂಗ್ಲೆಂಡ್‌ನಲ್ಲಿ ಬ್ಲಾಕ್‌ಸ್ಟನ್ ನೆಲೆಗೊಳಿಸಿದರು. ಅವು ಕಾನೂನು ರೂಪಿಸುವ ಮತ್ತು ಕಾರ್ಯಗತಗೊಳಿಸುವ ಅಧಿಕಾರಗಳು ಒಂದೇ ವ್ಯಕ್ತಿಗಣದಲ್ಲಿದ್ದರೆ, ಸ್ವಾತಂತ್ರ್ಯವು ನಾಶವಾಗುವುದೆಂದು ವಾದಿಸಿದರು. ಆರ್ಥಿಕ ತಳಹದಿಯ ಮೇಲೆ ಸೀಮಿತ ಸರ್ಕಾರವನ್ನು ಆಡಂಸ್ಮಿತ್, ಮಾಲ್ಥೂಸ್ ಮತ್ತು ರಿಕಾರ್ಡೊ ಸಮರ್ಥಿಸಿದರೆ, ಅಮೆರಿಕಾದ ಕ್ರಾಂತಿಕಾರಿಗಳೂ ಮತ್ತು ಸಂವಿಧಾನ ತಜ್ಞರೂ ಆದ ಜೆಫರ್‌ಸನ್ ಮತ್ತು ಮ್ಯಾಡಿಸನ್ ಅವರು ಸಾಂಪ್ರದಾಯಿಕ ಉದಾರವಾದಿ ಪ್ರಜಾಪ್ರಭುತ್ವದ ಸಿದ್ಧಾಂತದ ಸಾಂಸ್ಥಿಕ ತಳಹದಿಯನ್ನು ನೆಲೆಗೊಳಿಸಲು ಪ್ರಯತ್ನಿಸಿದ್ದರು. ಆದರೆ ಇವರಲ್ಲೇ ಅತ್ಯಂತ ಕೀರ್ತಿಶಾಲಿಯಾದ ರೂಸೋ ಜನತಾ ಪರಮಾಧಿಕಾರದ ರೂವಾರಿಯಾಗಿದ್ದಾರೆ.

ಜೆ.ಜೆ. ರೂಸೋ ಅವರ ಕೃತಿ ಸಾಮಾಜಿಕ ಒಪ್ಪಂದವು ಪ್ರಜಾಪ್ರಭುತ್ವವನ್ನು ಪ್ರತಿಪಾದಿಸಿದೆ. ಈ ಕೃತಿಯಲ್ಲಿ ರೂಸೋ ಅವರು ನೈಸರ್ಗಿಕ ಪರಿಸ್ಥಿತಿಯಲ್ಲಿದ್ದ ಮಾನವ ಅನಾಗರಿಕನಾಗಿದ್ದರೂ, ಉದಾತ್ತ ಸ್ವಭಾವದವನು. ಅನಂತರ ತನ್ನ ಬೌದ್ಧಿಕ ಶಕ್ತಿಯನ್ನು

ಬೆಳೆಸಿಕೊಂಡ ಮೇಲೆ, ವಿಚಾರಶೀಲನಾಗಿ, ತನ್ನಬೌದ್ಧಿಕ ಶಕ್ತಿಯ ಗುಲಾಮನಾದನು. ಅವನು ಕೃತಿಮನಾಗಿ, ತನ್ನ ಮೂಲ ಸ್ವಾತಂತ್ರ್ಯವನ್ನು ಕಳೆದುಕೊಂಡನು. ರೂಸೋ ಅವರ ಕೃತಿಯು ಮಾನವ ಸ್ವತಂತ್ರನಾಗಿ ಹುಟ್ಟಿದ, ಆದರೆ ಅವನು ಎಲ್ಲೆಡೆಯಲ್ಲಿಯೂ ಸಂಕೋಲೆಗಳಲ್ಲಿದ್ದಾನೆ ಎಂಬ ಮೊದಲ ಸಾಲಿನಿಂದ ಎಲ್ಲ ಕಾಲದಲ್ಲೂ ಪ್ರಸ್ತುತವಾಗುವಂತೆ ಮಾಡಿದೆ.

ರೂಸೋ ಅವರ ಪ್ರಕಾರ ಮಾನವ ತನ್ನ ಇಚ್ಛೆಯನ್ನು ವಿಧೇಯತೆಯಿಂದ ಪಾಲಿಸುವುದರಿಂದ ಮುಕ್ತನಾಗಿದ್ದಾನೆ ಎಂದು ಘೋಷಿಸಿದರು. ಆದರೆ ವೈಚಾರಿಕತೆಯ ಅಭ್ಯಾಸದಿಂದ ಅವನು ಸಹಜ ಹಾಗೂ ಕೃತ್ರಿಮವಿಲ್ಲದೆ ಕ್ರಿಯಾಶಾಲಿಯಾಗಲು, ಬಾಹ್ಯ ಸಂಸ್ಥೆಯೊಂದರ ಅವಶ್ಯಕತೆಗೆ ಒಳಗಾದನು. ಈ ಸಂಸ್ಥೆಯೇ ಸಾರ್ವತ್ರಿಕ ಇಚ್ಛೆ. ಎಲ್ಲರ ಹಿತಕ್ಕೆ ಸಂಬಂಧಪಟ್ಟ ವಿಷಯಗಳನ್ನು ನಿಸ್ವಾರ್ಥವಾಗಿ ವ್ಯಕ್ತಪಡಿಸುವ ಎಲ್ಲ ಜನತೆಯ ಇಚ್ಛೆಯ ಸಾರ್ವತ್ರಿಕ ಇಚ್ಛೆ. ಇದು ಜನತೆಯ ಮಾತು ಎಂಬ ರೋಮನ್ ಸಿದ್ಧಾಂತದ ಪುನರುಚ್ಚಾರವಾಗಿದೆ. ಇದೇ ಜನತಾ ಪರಮಾಧಿಕಾರ ಎಂಬ ಸಿದ್ಧಾಂತದ ತಳಹದಿ ರೂಸೋ ಅವರ ಸಿದ್ಧಾಂತದಲ್ಲಿ ಜನತೆಯ ಪರಮಾಧಿಕಾರ ಸರ್ವಶ್ರೇಷ್ಠವಾಗಿದೆ.

ರೂಸೋ ಅವರ ಸಿದ್ಧಾಂತವು ಜನಸಾಮಾನ್ಯರಿಗೆ ಅಮಲೇರಿಸಿ, ಫ್ರಾನ್ಸ್‌ನ ರಕ್ತ ಕ್ರಾಂತಿಯ ಅವಧಿಯಲ್ಲಿ ಜನಸ್ಫೋಮದ ಆಳ್ವಿಕೆಗೆ ದಾರಿ ಮಾಡಿಕೊಟ್ಟಿತ್ತು. ಅವರ ವಿಚಾರಧಾರೆಯಲ್ಲಿ ಅಮಲೇರಿಸಿಕೊಂಡ ಶ್ರೀ ಸಾಮಾನ್ಯರು, ಇತಿಹಾಸದ ದಿಕ್ಕನ್ನೇ ಬದಲಾಯಿಸಿದರು. ಜನತಾ ಪರಮಾಧಿಕಾರಕ್ಕೆ ನ್ಯಾಯಬದ್ಧತೆ ಒದಗಿಸಿದವರೇ ರೂಸೋ ಅವರಿಂದ ಆಧುನಿಕ ಕಾಲದಲ್ಲಿ ಪ್ರತ್ಯಕ್ಷ ಪ್ರಜಾಪ್ರಭುತ್ವ ಮತ್ತೊಮ್ಮೆ ತಲೆ ಎತ್ತಿತು ಹಾಗೂ ಅದರ ಸಾಧನಗಳಾದ, ಜನಮತಗಣನೆ, ಪ್ರಜಾಭಿಪ್ರಾಯ, ಜನಾದೇಶ ಮತ್ತು ಹಿಂದಕ್ಕೆ ಕರೆಯುವ ಪದ್ಧತಿಗಳು ಸ್ಥಾಪಿತವಾದವು.

ಹೀಗೆ, ರೂಸೋ ಅವರ ಪ್ರಬಲ ಪ್ರತಿಪಾದನೆಯಿಂದ,. ಸಮುದಾಯದ ರಾಜಕೀಯ ಜೀವನದಲ್ಲಿ ಭಾಗವಹಿಸುವ ವ್ಯಕ್ತಿಯ ಅವರ್ಗೀಯ ಹಕ್ಕನ್ನು ರೂಸೋ ಒತ್ತಿಹೇಳಿದ್ದಾರೆ.ರೂಸೋ ಅವರು ಸಾಮಾಜಿಕ ಒಪ್ಪಂದದಲ್ಲಿ ಪ್ರತಿಪಾದಿಸಿರುವ ಮೂರು ಸರಳ ತತ್ವಗಳೆಂದರೆ

* ಮಾನವರು ಸ್ವಭಾವತಃ ಮುಕ್ತರು ಮತ್ತು ಸಮಾನರು
* ಸಮಾನತೆ ಮತ್ತು ಸ್ವಾತಂತ್ರವುಳ್ಳ ವ್ಯಕ್ತಿಗಳು ಸ್ವತಂತ್ರವಾಗಿ ಮಾಡಿಕೊಳ್ಳುವ ಒಪ್ಪಂದದ ಆಧಾರದ ಮೇಲೆ ಸರ್ಕಾರದ ಹಕ್ಕುಗಳು ನೆಲೆಸಿವೆ, ಮತ್ತು

ವ್ಯಕ್ತಿಗಳ ನ್ಯಾಯಸಮ್ಮತ ಒಪ್ಪಂದವು ಸರ್ಕಾರದ ರಚನೆಗೆ ಕಾರಣವಾಗುತ್ತದೆ.

ಮೇಲೆ ಹೇಳಿದ ತತ್ವಗಳಿಂದ, ಜನತೆಯ ಸಮ್ಮತಿ ಮತ್ತು ಇಚ್ಛೆಯೇ ರಾಜ್ಯದ ಬುನಾದಿಎಂದು ಸ್ಪಷ್ಟವಾಗುತ್ತದೆ. ಜನತೆಗೆ ಶಾಸನೀಯ ಅಧಿಕಾರ ನೀಡುವ ಮೂಲಕ ರೂಸೋ ಅವರು ಪ್ರತ್ಯಕ್ಷ ಪ್ರಜಾಪ್ರಭುತ್ವಕ್ಕೆ ಸಮರ್ಥನೆ ನೀಡಿದ್ದಾರೆ. ರೂಸೋ ಅವರ ರಾಜಕೀಯ ಚಿಂತನೆಯು ಫ್ರಾನ್ಸಿನ ಮಹಾಕ್ರಾಂತಿಯ ಮೇಲೆ ಬೀರಿರುವ ಪ್ರಭಾವ, 1789ರ ಮಾನವ ಹಕ್ಕುಗಳ ಘೋಷಣೆಯಲ್ಲಿ ಪ್ರತಿಧ್ವನಿಸಿದೆ. ಸಾಂಪ್ರದಾಯಿಕ ಉದಾರವಾದಿ ಪ್ರಜಾಪ್ರಭುತ್ವ ಸಿದ್ಧಾಂತವನ್ನು ನಂಬಿರುವ ಬೆಂಬಲಿಗರು ಸ್ವಾತಂತ್ರ, ಸಮಾನತೆ ಮತ್ತು ಜನತಾ ಪರಮಾಧಿಕಾರವನ್ನು ಅಮೂಲ್ಯವೆಂದು ಪರಿಗಣಿಸುತ್ತಾರೆ.

ಹತ್ತೊಂಬತ್ತನೆಯ ಶತಮಾನದ ಪ್ರಾರಂಭದ ಅವಧಿಯಲ್ಲಿ ಉಪಯುಕ್ತತಾವಾದಿ ರಾಜಕೀಯ ತತ್ವಜ್ಞಾನಿಗಳಾದ ಜರೇಮಿ ಬೆಂಥ್ಯಾಮ್ ಮತ್ತು ಜಾನ್ ಸ್ಟೂವರ್ಟ್‌ಮಿಲ್ ಅವರು ಪ್ರಜಾಪ್ರಭುತ್ವದ ಸಾಂಪ್ರದಾಯಿಕ ಉದಾರವಾದಿ ಸಿದ್ಧಾಂತದ ವಿಚಾರಗಳನ್ನು ಮತ್ತು ಸಂಸ್ಥೆಗಳನ್ನು ಕ್ರಮಬದ್ಧವಾಗಿ ವಿವರಿಸಿದರು.



62

ಜರೇಮಿ ಬೆಂಥ್ಯಾಮ್ ಅಟಿರು ಉದಾರವಾದಿ ಪ್ರಜಾಪ್ರಭುತ್ವ ಸಿದ್ಧಾಂತಕ್ಕೆ ಪ್ರಮುಖ ಕಾಣಿಕೆ ನೀಡಿದ್ದಾರೆ. ಅವರು ಅತ್ಯಂತ ವಾಸ್ತವಿಕ ಹಾಗೂ ಅನುಭವ ಜನ್ಯ ವಿಚಾರಧಾರೆಯಿಂದ ಅತ್ಯಧಿಕ ಜನರ ಅತ್ಯಧಿಕ ಹಿತ ಎಂಬ ತತ್ವವನ್ನು ಆಚರಣೆಗೆ ತರಲು ರಾಜ್ಯ ಅಸ್ತಿತ್ವದಲ್ಲಿದೆ ಎಂದು ಪ್ರತಿಪಾದಿಸಿದರು. ನೋವು ಮತ್ತು ನಲಿವು ಎಂಬ ಎರಡು ಪರಮಾಧಿಕಾರಿಗಳ ಆಳ್ವಿಕೆಗೆ ಒಳಗಾಗಿರುವ ಮಾನವರ ಆನಂದವನ್ನು ಗರಿಷ್ಠಗೊಳಿಸುವ ಮತ್ತು ನೋವನ್ನು ಕಡಿಮೆ ಮಾಡುವ ಕರ್ತವ್ಯ ರಾಜ್ಯಕ್ಕಿದೆ. ಇವನ್ನು ಸಾಧಿಸಲು ಕಾನೂನುಗಳ ರಚನೆ, ಮತ್ತು ಆನಂದಕ್ಕೆ ಅಡಚಣೆಯಾಗಿರುವ ಎಲ್ಲ ಅಡ್ಡಿ ಆತಂಕಗಳನ್ನು ನಿವಾರಿಸಬೇಕು. ಮಾನವನ ಆನಂದವನ್ನು ಅಧಿಕಗೊಳಿಸಲು ಕಾನೂನಿನ ವ್ಯಾಪಕ ಸುಧಾರಣೆಯಾಗಬೇಕು. ವಯಸ್ಕ ಮತದಾನ ಪದ್ಧತಿ, ಪ್ರತಿನಿಧಿ ಸರ್ಕಾರ ಮತ್ತು ಕಾರಾಗೃಹಗಳ ಸುಧಾರಣೆ ಮುಂತಾದವುಗಳನ್ನು ಬೆಂಥ್ಯಾಮ್ ಒತ್ತಿಹೇಳಿದ್ದಾರೆ. ಮ್ಯಾಕ್‌ಫರ್ಸನ್ ಅವರ ಪ್ರಕಾರ, ಬೆಂಥ್ಯಾಮ್ ಮತ್ತು ಜೇಮ್ಸ್‌ಮಿಲ್ ಅವರ ತತ್ವಜ್ಞಾನವು ಮಾದರಿ ಉದಾರವಾದಿ ಪ್ರಜಾಪ್ರಭುತ್ವದ ಸ್ಥಾಪನೆಗೆ ಮುಖ್ಯವಾಗಿ ಕಾರಣವಾಯಿತು.

ಜೆ.ಎಸ್.ಮಿಲ್ ಅವರು ಹತ್ತೊಂಬತ್ತನೆಯ ಶತಮಾನದ ಎರಡನೆಯ ಭಾಗದಲ್ಲಿ ಉದಾರವಾದಿ ಮತ್ತು ಪ್ರಜಾಸತ್ತಾತ್ಮಕ ಆದರ್ಶ, ಉದ್ದೇಶಗಳು ಮತ್ತು ಸಂಸ್ಥೆಗಳನ್ನು ಅಭಿವೃದ್ಧಪಡಿಸಿದರು. ಮಿಲ್ ಅವರ ರೆಪ್ರೆಸೆಂಟೇಟಿವ್ ಗೌರ್ನ್‌ಮೆಂಟ್ ಮತ್ತು ಎಸ್ಸೇ ಆನ್ ಲಿಬರ್ಟಿ ಪ್ರಜಾಪ್ರಭುತ್ವದ ಸಿದ್ಧಾಂತದ ಬೆಳವಣಿಗೆಯ ಪ್ರಮುಖ ಮೈಲಿಗಲ್ಲುಗಳಾಗಿವೆ. ಬೆಂಥ್ಯಾಮ್, ಅವರ ಸಿದ್ಧಾಂತವನ್ನು ಪರಿಷ್ಕರಿಸಿದ ಅವರು, ಸ್ವಹಿತ ಮತ್ತು ಇತರರ ಹಿತ ಎಂಬ ತತ್ವಗಳನ್ನು ಪ್ರತಿಪಾದಿಸಿ, ಸ್ವಹಿತ ಸಾಧಿಸಲು ವ್ಯಕ್ತಿಗೆ ಸ್ವಾತಂತ್ರವಿರಬೇಕು ಮತ್ತು ಇತರರ ಹಿತ ಸಾಧಿಸಲು ರಾಜ್ಯಕ್ಕೆ ಪರಮಾಧಿಕಾರ ಇರಬೇಕು ಎಂದು ಪ್ರತಿಪಾದಿಸಿ, ಲೈಸ್ಸೇಫೇರ್ ಉದಾರವಾದವನ್ನು ಪ್ರತಿಷ್ಠಾಪಿಸಿದರು. ಸರ್ ಅರ್ನೆಸ್ಟ್ ಬಾರ್ಕರ್ ಅವರು ಜೆ.ಎಸ್.ಮಿಲ್ ಅವರ ಸಿದ್ಧಾಂತವನ್ನು ಖಾಲಿ ಸ್ವಾತಂತ್ರ ಮತ್ತು ಅಸ್ಪಷ್ಟ ವ್ಯಕ್ತಿವಾದವೆಂದು ಟೀಕಿಸಿದ್ದಾರೆ. ತನಗೆ ಮಾತ್ರ ಸಂಬಂಧಿಸಿದ ಚಟುವಟಿಕೆಗಳಾದ ವ್ಯಕ್ತಿ ಎಲ್ಲಿದ್ದಾನೆ ಮತ್ತು ಜೀವನದಲ್ಲಿ ತನ್ನ ಸ್ಥಾನಮಾನವನ್ನು ಉತ್ತಮ ಪಡಿಸಿಕೊಳ್ಳಲು ರಾಜ್ಯದ ನೆರವಿಗಾಗಿ ಆಕ್ರಂದನಗೈಯುವ ಬಡವನಿಗೆ, ಹಸ್ತಕ್ಷೇಪ ಮಾಡದಿರುವ ರಾಜ್ಯದಿಂದ ಏನು ಪ್ರಯೋಜನ? ಎಂದು ಮಾರ್ಮಿಕವಾಗಿ ನುಡಿದಿದ್ದಾರೆ.

ತಮ್ಮ ರೆಪ್ರೆಂಸೆಂಟೇಟಿವ್ ಗೌರ್ನ್‌ಮೆಂಟ್ ಗ್ರಂಥದಲ್ಲಿ ಜೆ.ಎಸ್.ಮಿಲ್ ಅವರು ವಯಸ್ಕ ಮತದಾನ ಪದ್ಧತಿ ಮತ್ತು ಅನಿಯಂತ್ರಿತ ಪ್ರಜಾಪ್ರಭುತ್ವದ ಅಪಾಯಗಳನ್ನು ಗುರುತಿಸಿದ್ದಾರೆ. ಪ್ರಜಾಪ್ರಭುತ್ವದ ರಕ್ಷಣೆಗಾಗಿ ಹಲವಾರು ಕ್ರಮಗಳನ್ನು ಸೂಚಿಸಿದ್ದಾರೆ. ಮುಖ್ಯವಾಗಿ ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿಗೆ ಮೊದಲು ಸಾರ್ವತ್ರಿಕ ಶಿಕ್ಷಣ ಪದ್ಧತಿ ಜಾರಿಗೊಳಿಸದಿದ್ದಲ್ಲಿ ಪ್ರಜಾಪ್ರಭುತ್ವ ಅಪಾಯಕ್ಕೊಳಗಾಗುತ್ತದೆ. ನಿಶ್ಚಿತ ಪರಿಸ್ಥಿತಿಗಳಲ್ಲಿ ಪ್ರಜಾಪ್ರಭುತ್ವ ಅತ್ಯುತ್ತಮ ಸರ್ಕಾರವೆಂದು ಮಿಲ್ ಸ್ಪಷ್ಟಪಡಿಸಿದ್ದಾರೆ.

ಜೆ.ಎಸ್.ಮಿಲ್ ಅವರ ಉದಾರವಾದಿ ಪ್ರಜಾಪ್ರಭುತ್ವದ ರಕ್ಷಣೆಗಾಗಿ ಹಲವಾರು ಕ್ರಮಗಳನ್ನು ಸೂಚಿಸಿದ್ದಾರೆ. ಮುಖ್ಯವಾಗಿ ಸಾರ್ವತ್ರಿಕ ವಯಸ್ಕಮಾತದಾನ ಪದ್ಧತಿಗೆ ಮೊದಲು ಸಾರ್ವತ್ರಿಕ ಶಿಕ್ಷಣ ಪದ್ಧತಿ ಜಾರಿಗೊಳಿಸದಿದ್ದಲ್ಲಿ, ಪ್ರಜಾಪ್ರಭುತ್ವ ಅಪಾಯಕ್ಕೊಳಗಾಗುತ್ತದೆ. ನಿಶ್ಚಿತ ಪರಿಸ್ಥಿತಿಗಳಲ್ಲಿ ಪ್ರಜಾಪ್ರಭುತ್ವ ಅತ್ಯುತ್ತಮ ಸರ್ಕಾರವೆಂದು ಮಿಲ್ ಸ್ಪಷ್ಟಪಡಿಸಿದ್ದಾರೆ.

ಜೆ.ಎಸ್.ಮಿಲ್ ಅವರು ಉದಾರವಾದಿ ಪ್ರಜಾಪ್ರಭುತ್ವವನ್ನು ನೈತಿಕ ಬೆಳವಣಿಗೆಯ ದೃಷ್ಟಿಯಿಂದ ಸಮರ್ಥಿಸುತ್ತಾ ಸಂತೃಪ್ತ ಹಂದಿಯಾಗಿರುವುದಕ್ಕಿಂತ ಅತೃಪ್ತ ಸಾಕ್ರೆಟಿಸ್ ಆಗಿರುವುದು ಲೇಸು ಎಂದು ಹೇಳಿದ್ದಾರೆ. ಉದಾರವಾದಿ ಮತ್ತು ಪ್ರಜಾಸತ್ತಾತ್ಮಕ ಸರ್ಕಾರದ ಸ್ಥಾಪನೆಗೆ ಅಗತ್ಯವಾದ ಸಂವಿಧಾನಾತ್ಮಕ ಸರ್ಕಾರದ ಸ್ಥಾಪನೆಗೆ ಅಗತ್ಯವಾದ ಸಂವಿಧಾನಾತ್ಮಕ ಸುಧಾರಣೆಗಳನ್ನು ಜೆ.ಎಸ್. ಮಿಲ್ ಕೆಳಕಂಡಂತೆ ನಿರೂಪಿಸಿದ್ದಾರೆ.

* ಪ್ರಮಾಣಾನುಗುಣ ಪದ್ಧತಿಯನ್ನು ಪರಿಚಯಿಸುವುದರ ಮೂಲಕ ಹಲವು ಪಕ್ಷಗಳಲ್ಲಿ
* ಸಾರ್ವತ್ರಿಕ ಮತದಾನ ಪದ್ಧತಿಯಲ್ಲಿ ಒಂದಷ್ಟು ಬೌದ್ಧಿಕ ಶಕ್ತಿಯಿರುವಾಗ ಮತ ಚಲಾಯಿಸುವ ಹಕ್ಕು ನೀಡುವುದು. ಓದುವ,

ಬರೆಯುವ ಮತ್ತು ಲೆಕ್ಕ ಮಾಡುವ ಸಾಮರ್ಥ್ಯವಿಲ್ಲದವರಿಗೆ ಮತದಾನ ಹಕ್ಕು ನೀಡುವುದರಿಂದ ಪ್ರಜಾಪ್ರಭುತ್ವಕ್ಕೆ ಅನಾನುಕೂಲವೇ ಹೆಚ್ಚು.

* ಶ್ರೇಷ್ಠ ಬೌದ್ಧಿಕ ಶಕ್ತಿ ಮತ್ತು ಉನ್ನತ ನಡಚೆಯುಳ್ಳವರ ಮತ ಬಹುಮತವೆಂದು ಪರಿಗಣಿತವಾಗಬೇಕು.
* ಗುಪ್ತ ಮತದಾನ ಪದ್ಧತಿಯಲ್ಲಿ ಬೇಜವಾಬ್ದಾರಿಯುತ ಮತದಾನ ನಡೆಯುತ್ತದೆ. ಆದುದರಿಂದ ಬಹಿರಂಗ ಮತದಾನ ಪದ್ಧತಿ ಉತ್ತಮವಾದದ್ದು.
* ಸರ್ಕಾರದ ಪರಿಶುದ್ಧತೆ ಮತ್ತು ದಕ್ಷತೆಯ ದೃಷ್ಟಿಯಿಂದ ಸಂಸತ್ ಸದಸ್ಯರಿಗೆ ಸಂಭಾವನೆ ಇರಬಾರದು.
* ಪ್ರಜಾಪ್ರಭುತ್ವದ ಉದಾರವಾದಿ ಸಿದ್ಧಾಂತದ ಅಗ್ರಮಾನ್ಯ ಪ್ರತಿಪಾದಕರಾಗಿ ಜೆ.ಎಸ್.ಮಿಲ್ ವಿಶ್ವವಿಖ್ಯಾತರಾಗಿದ್ದಾರೆ. ವ್ಯಕ್ತಿವಾದ ಮತ್ತು ಪ್ರಜಾಪ್ರಭುತ್ವವನ್ನು ಬೆಂಬಲಿಸಿರುವ ಮಿಲ್, ಇಂಗ್ಲೆಂಡಿನ ರಾಜಕೀಯ ತತ್ವಜ್ಞಾನಿಗಳಲ್ಲಿ ಶ್ರೇಷ್ಟ ಸ್ಥಾನ ಗಳಿಸಿದ್ದಾರೆ.

ಟಿ.ಹೆಚ್‌ಗ್ರೀನ್ ಅವರು ಉದಾರವಾದಿ ಪ್ರಜಾಪ್ರಭುತ್ವ ಸಿದ್ಧಾಂತದ ತತ್ವಗಳನ್ನು ತಮ್ಮ ಕೃತಿಗಳಲ್ಲಿ ಪ್ರತಿಪಾದಿಸಿದ್ದಾರೆ. ವ್ಯಕ್ತಿ ಸ್ವಾತಂತ್ರ್ಯ ಮತ್ತು ಜವಾಬ್ದಾರಿಗೆ ಪೂರ್ವ ನಿಬಂಧನೆಯಾಗಿ, ಸಮಷ್ಠಿಯ ಹಿತ ಎಂಬ ಪರಿಕಲ್ಪನೆಯಿಂದ, ಪ್ರಜಾಪ್ರಭುತ್ವದ ಉದಾರವಾದಿ ಸಿದ್ಧಾಂತದ ವಿಸ್ತರಣೆಯನ್ನು ಗ್ರೀನ್ ಕೈಗೊಂಡಿದ್ದಾರೆ.

ಇತ್ತೀಚಿನ ಅವಧಿಯಲ್ಲಿ ಲಿಂಡ್‌ಸೇ, ಬಾರ್ಕರ್, ಜಿ.ಡಿ.ಹೆಚ್.ಕೋಲ್, ವುಡ್ರೋವಿಲ್ಸನ್, ಲಾಸ್ಕಿ, ಮೆಕೈವರ್ ಮತ್ತು ಇತರ ಹಲವಾರು ತತ್ವಜ್ಞಾನಿಗಳು ಮತ್ತು ಲೇಖಕರು ಸಾಂಪ್ರದಾಯಿಕ ಉದಾರವಾದಿ ಸಿದ್ಧಾಂತವನ್ನು ಎತ್ತಿಹಿಡಿದಿದ್ದಾರೆ. ಇಪ್ಪತ್ತನೆಯ ಶತಮಾನದ ಪ್ರಮುಖ ಬೆಳವಣಿಗೆಗಳಾದ, ಪಕ್ಷ ಪದ್ಧತಿ, ಸ್ವತಂತ್ರ ಪತ್ರಿಕೆಗಳು, ಸ್ತ್ರೀ ಮತ್ತು ಪುರುಷರಿಗೆ ಸಮಾನ ಹಕ್ಕುಗಳು, ಅಕ್ಷರತೆಯ ವಿಸ್ತರಣೆ, ವಸಾಹತು ,ಶೋಷಣೆಯ ಅಂತ್ಯ, ಮುಂತಾದವುಗಳು ಉದಾರವಾದಿ ಪ್ರಜಾಪ್ರಭುತ್ವ ಮತ್ತು ಪ್ರತಿನಿಧಿ ಸಂಸ್ಥೆಗಳ ಬೆಳವಣಿಗೆಗೆ ನೆರವು ನೀಡಿವೆ.

## 17.3 ಉದಾರವಾದಿ ಸಿದ್ಧಾಂತದ ಪ್ರಮುಖ ಲಕ್ಷಣಗಳು ತತ್ವಗಳು

ಸಾಂಪ್ರದಾಯಿಕ ಉದಾರವಾದಿ ಸಿದ್ಧಾಂತವು ಪ್ರಜಾಪ್ರಭುತ್ವದ ರಾಜಕೀಯ ಪರಿಕಲ್ಪನೆಯಾಗಿದೆ. ಜನಸಾಮಾನ್ಯರು ಅದನ್ನು ಜನರಿಂದ, ಜನರಿಗಾಗಿ, ಮತ್ತು ಜನರಿಗೋಸ್ಕರ ಇರುವ ಸರ್ಕಾರ ಪದ್ಧತಿ ಎಂದು ಗುರುತಿಸುತ್ತಾರೆ. ಜನತಾ ಪರಮಾಧಿಕಾರ ಅದರ ತಳಹದಿ. ಅದರ ಉದ್ದೇಶ ಪಾಲುಗೊಳ್ಳುವ ಸರ್ಕಾರ ಸ್ಥಾಪಿಸುವುದೇ ಆಗಿದೆ. ರಾಜಕೀಯ ಪ್ರಕ್ರಿಯೆ ಮತ್ತು ವ್ಯವಹಾರಗಳಲ್ಲಿ ಸಕ್ರಿಯವಾಗಿ ಜನತೆ ಪಾಲುಗೊಳ್ಳುವ ಸರ್ಕಾರವೇ ಪ್ರಜಾಪ್ರಭುತ್ವ. ಅದು ಮಾನವನ ಅಭಿವೃದ್ಧಿ ಮತ್ತು ಏಳಿಗೆಯ ಧ್ಯೇಯ ಹೊಂದಿದೆ ಹಾಗೂ ಆದರ್ಶವಾದ ಸಮಾಜ ಸ್ಥಾಪನೆ ಗುರಿ ಹೊಂದಿದೆ.

ಉದಾರವಾದಿ ಪ್ರಜಾಪ್ರಭುತ್ವವು ಕೇವಲ ಒಂದು ಸರ್ಕಾರ ಪದ್ಧತಿ ಮಾತ್ರವಾಗದೆ, ಒಂದು ಜೀವನ ವಿಧಾನವೂ ಆಗಿದೆ. ಮಾನವನ ವ್ಯಕ್ತಿತ್ವ ವಿಕಾಸದ ಉದ್ದೇಶ ಹೊಂದಿದೆ. ಸ್ವಾತಂತ್ರ, ಸಮಾನತೆ ಮತ್ತು ಹಕ್ಕುಗಳೊಂದಿಗೆ ನೈತಿಕ ಜೀವನಕ್ಕೆ ಬೇಕಾದ ಅವಶ್ಯಕ ಅಂಶಗಳನ್ನು ಪ್ರಜಾಪ್ರಭುತ್ವ ನೀಡುತ್ತದೆ. ಅದು ಮಾನವನ ವ್ಯಕ್ತಿತ್ವ, ಸಾಮರ್ಥ್ಯಗಳು ಮತ್ತು ಸಾಧ್ಯತೆಗಳನ್ನು ವಿಕಾಸಗೊಳ್ಳುವ ಸಾಧನವೇ ಹೊರತು, ಗುರಿಯಾಗಿರುವುದಿಲ್ಲ.

ನಿಜವಾದ ಉದಾರವಾದಿ ಪ್ರದಜಾಪ್ರಭುತ್ವವು ರಾಜಕೀಯ ಸ್ವಾತಂತ್ರ ಮತ್ತು ಸಾಮಾಜಿಕ ಹಾಗೂ ಆರ್ಥಿಕ ಸಮಾನತೆಯ ಆದರ್ಶಗಳನ್ನು ಒಂದುಗೂಡಿಸಲೇ ಬೇಕಾಗುತ್ತದೆ. ಅಂದರೆ ಪ್ರಜಾಸತ್ತಾತ್ಮಕ ಸರ್ಕಾರ ಮತ್ತು ಪ್ರಜಾಸತ್ತಾತ್ಮಕ ಜೀವನ ವಿಧಾನವು

ಅಸ್ತಿತ್ವದಲ್ಲಿರಬೇಕಾಗುತ್ತದೆ. ಎಲ್ಲ ಮಾನವರ ಸಮಾನತೆ ಮತ್ತು ಮಾನವ ಜೀವಿಯ ವ್ಯಕ್ತಿತ್ವವನ್ನು ಗುರುತಿಸುವುದು ಪ್ರಜಾಸತ್ತಾತ್ಮಕ ಜೀವನದ ಧೋರಣೆಯಾಗುತ್ತದೆ. ಅಂತಹ ಜೀವನವು ತಾಳ್ಮೆ, ಪರಸ್ಪರ ಗೌರವ ಮತ್ತು ಭ್ರಾತೃತ್ವದ ಲಕ್ಷಣಗಳನ್ನು ಹೊಂದಿರುತ್ತದೆ. ಉದಾರವಾದಿ ಪ್ರಜಾಸತ್ತಾತ್ಮಕ ಆದರ್ಶವೆಂದರೆ, ಬಹುಮತದವರ ನಿರ್ಧಾರವು ಅಲ್ಪಸಂಖ್ಯಾತರ ಹಿತಾಸಕ್ತಿಗಳಿಗೆ ಅವಕಾಶ ಕಲ್ಪಿಸುವುದೇ ಆಗಿದೆ. ಅವರು, ವಯಸ್ಕ ಮತದಾನ ಪದ್ಧತಿಯ ಸೈದ್ಧಾಂತಿಕ ಬುನಾದಿ ಹಾಕಿದರು, ಪ್ರತಿನಿಧಿ ಸರ್ಕಾರಕ್ಕಾಗಿ ಮನವಿ ಮಾಡಿದರು, ಮತ್ತು ಉದಾರವಾದಿ ಮತ್ತು ಪ್ರಜಾಸತ್ತಾತ್ಮಕ ರಾಜ್ಯವೊಂದರಲ್ಲಿ ಮಾತ್ರ, ಅತ್ಯಧಿಕ ಜನರ ಅತ್ಯಧಿಕ ಹಿತವನ್ನು ಕಾರ್ಯರೂಪಕ್ಕೆ ತರಬಹುದೆಂದು ಅಭಿಪ್ರಾಯಪಟ್ಟರು. ಬೆಂಥ್ಯಾಮ್ ಅವರು ಹೇಳಿರುವಂತೆ, ಪ್ರಜಾಸತ್ತಾತ್ಮಕ ರಾಜ್ಯವು ಜವಾಬ್ದಾರಿಯುತ, ಸಂವೇದನಾಶೀಲ ಮತ್ತು ಪ್ರತಿನಿಧಿ ಸರ್ಕಾರವನ್ನು ಪೋಷಿಸುತ್ತದೆ.

ಉದಾರವಾದಿ ಪ್ರಜಾಪ್ರಭುತ್ವದ ಸಿದ್ಧಾಂತದಲ್ಲಿ ಕೆಲವು ತತ್ವಗಳು ಅಡಗಿವೆ. ಆ ತತ್ವಗಳು ಸಾಂಸ್ಥಿಕ ರೂಪದಲ್ಲಿ ವ್ಯಕ್ತವಾಗುತ್ತವೆ. ಮೇಲೆ ತಿಳಿಸಿದ ಉದಾರವಾದಿ ಪ್ರಜಾಪ್ರಭುತ್ವದ ಸಿದ್ಧಾಂತದ ಬೆಳವಣಿಗೆಯು ಪ್ರಜಾಪ್ರಭುತ್ವದ ಪ್ರಧಾನ ತತ್ವಗಳನ್ನು ಸ್ಪಷ್ಟಪಡಿಸುತ್ತದೆ. ಪ್ರಜಾಪ್ರಭುತ್ವ ಎಂಬುದು ಒಂದು ರಾಜಕೀಯ ಪರಿಕಲ್ಪನೆಯಾಗಿದೆ. ಹೆಸರೇ ಸೂಚಿಸುವಂತೆ ಇದು ಜನತಾ ಪರಮಾಧಿಕಾರದ ತತ್ವವನ್ನು ಆಧರಿಸಿದೆ. ಅಲ್ಲದೆಯೇ ಸಮಾನತೆಯ ತತ್ವವೂ ಸಹ ಪ್ರಜಾಪ್ರಭುತ್ವದಲ್ಲಿ ಅಡಕವಾಗಿದೆ. ರೂಸೋ ಅಭಿಪ್ರಾಯಪಡುವಂತೆ ಮಾನವ ಸ್ವತಂತ್ರನಾಗಿ ಜನಿಸಿದ್ದಾನೆ ಈ ಸ್ವತಂತ್ರ ವ್ಯಕ್ತಿಯ ಸರ್ವತೋಮುಖ ಅಭಿವೃದ್ಧಿಯ ಉದ್ದೇಶ ಹೊಂದಿರುವ, ಪ್ರಜೆಗಳು ಪಾಲ್ಗೊಳ್ಳಬಹುದಾದ ಸರ್ಕಾರ ವ್ಯವಸ್ಥೆಯೇ ಪ್ರಜಾಪ್ರಭುತ್ವವಾಗಿದೆ. ಸ್ವಾತಂತ್ರ ಹಾಗೂ ಸಮಾನತೆಯ ತತ್ವಗಳು ಪ್ರಜಾಪ್ರಭುತ್ವದ ಅಡಿಗಲ್ಲುಗಳಾಗಿವೆ. ಪ್ರಜಾಪ್ರಭುತ್ವವು ಸ್ವಾತಂತ್ರ ಹಾಗೂ ಸಮಾನ ಅವಕಾಶ ನೀಡುವುದರ ಮೂಲಕ ವ್ಯಕ್ತಿಯ ವ್ಯಕ್ತಿತ್ವ ವಿಕಾಸಕ್ಕೆ ನೆರವಾಗುತ್ತದೆ.

ಉದಾರವಾದಿ ಪ್ರಜಾಪ್ರಭುತ್ವದಲ್ಲಿ ರಾಜಕೀಯ ಸ್ವಾತಂತ್ರ ಮತ್ತು ಆರ್ಥಿಕ, ಸಾಮಾಜಿಕ ಸಮಾನತೆಗಳು ಇರುತ್ತವೆ. ಪ್ರತಿ ವ್ಯಕ್ತಿಗೂ ಮನ್ನಣೆ ನೀಡುವ ವ್ಯವಸ್ಥೆ ಇದಾಗಿದೆ. ಪ್ರಜಾಪ್ರಭುತ್ವ ಕೇವಲ ಸರ್ಕಾರ ವ್ಯವಸ್ಥೆ ಮಾತ್ರವೇ ಅಲ್ಲ ಜೀವನ ವಿಧಾನವೂ ಹೌದು. ಪರಸ್ಪರ ಗೌರವ, ತಾಳ್ಮೆ, ಸಹಿಷ್ಣುತೆ, ಭ್ರಾತೃತ್ವ ಈ ಜೀವನ ವಿಧಾನದ ಲಕ್ಷಣಗಳಾಗಿವೆ. ಜೆ.ಎಸ್.ಮಿಲ್ ಹೇಳುವಂತೆ ಇಲ್ಲಿ ಪ್ರತಿಯೊಬ್ಬನ ಅಭಿಪ್ರಾಯಕ್ಕೂ ಮನ್ನಣೆ ಇದೆ.

ಇಂದು ನಾವು ಪ್ರಜಾಪ್ರಭುತ್ವ ಎಂದು ಗುರುತಿಸುವ ಎಲ್ಲ ಸರ್ಕಾರ ಪದ್ಧತಿಗಳಲ್ಲೂ ಉದಾರವಾದಿ ಸಿದ್ಧಾಂತಿಗಳು ಪ್ರತಿಪಾದಿಸಿದ ತತ್ವಗಳನ್ನೂ, ಲಕ್ಷಣಗಳನ್ನೂ ಆಯಾ ವ್ಯವಸ್ಥೆಗೆ ತಕ್ಕಂತೆ ಬೇರೆ ಬೇರೆ ಪ್ರಮಾಣದಲ್ಲಿ ಕಾಣಬಹುದಾಗಿದೆ. ಈ ಸಿದ್ಧಾಂತದ ಪ್ರಮುಖ ಲಕ್ಷಣಗಳನ್ನು ಈ ಕೆಳಗಿನಂತೆ ವಿವರಿಸಬಹುದು.

### ವ್ಯಕ್ತಿಗೆ ಪ್ರಾಮುಖ್ಯತೆ

ಉದಾರವಾದಿ ಸಿದ್ಧಾಂತವು ವ್ಯಕ್ತಿಗೆ ಪ್ರಾಮುಖ್ಯತೆ ನೀಡುತ್ತದೆ. ಸರ್ಕಾರವಿರುವುದು ಜನತೆಗಾಗಿ. ಅಷ್ಟೇ ಅಲ್ಲದೆ ಜನತೆ ಸರ್ಕಾರದ ರಚನೆಯಲ್ಲಿ ಪಾಲ್ಗೊಳ್ಳಬೇಕು, ಸರ್ಕಾರದ ಕಾರ್ಯ ಚಟುವಟಿಕೆಯ ಮೇಲೆ ನಿಯಂತ್ರಣ ಹೊಂದಿರಬೇಕೆಂಬ ವಿಚಾರ ಉದಾರವಾದಿ ಸಿದ್ಧಾಂತದಲ್ಲಿ ವ್ಯಕ್ತವಾಗುತ್ತದೆ. ವ್ಯಕ್ತಿಗಳ ಅಭಿಪ್ರಾಯದಲ್ಲಿ ಭಿನ್ನತೆ ಇದ್ದರೂ ಸಾಮರಸ್ಯ ಸಾಧ್ಯ. ಸಮ್ಮತಿ ಸಾಧ್ಯ ಎಂಬುದನ್ನು ಒಪ್ಪಿಕೊಳ್ಳುತ್ತದೆ. ಅಭಿಪ್ರಾಯ ವ್ಯತ್ಯಾಸಗಳಿದ್ದರೂ ಪ್ರತಿಯೊಬ್ಬನಿಗೂ ತನ್ನ ಅಭಿಪ್ರಾಯ ವ್ಯಕ್ತಪಡಿಸುವ ಅವಕಾಶ ಹಾಗೂ ಸ್ವಾತಂತ್ರವಿರಬೇಕು.

### ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿ

ವ್ಯಕ್ತಿಗೆ ನೀಡಿರುವ ಪ್ರಾಮುಖ್ಯತೆ ಸಾರ್ವತ್ರಿಕ ವಯಸ್ಕ ಮತದಾನದ ಮೂಲಕ ವ್ಯಕ್ತವಾಗುತ್ತದೆ. ಉದಾರವಾದಿ ಸಿದ್ಧಾಂತಿಗಳ ಪ್ರಕಾರ ಪ್ರಜಾಪ್ರಭುತ್ವದಲ್ಲಿ ಜಾತಿ, ಮತ,ಪಂಥ, ಕುಲ, ಲಿಂಗ, ವರ್ಗ ಎಂಬ ಯಾವುದೇ ಭೇದಭಾವವಿಲ್ಲದೆ ಎಲ್ಲರಿಗೂ ಸಮಾನವಾದ ಮತದಾನದ ಹಕ್ಕು ಇರಬೇಕು. ಆದುದರಿಂದ ಮತದಾನ ಸಾರ್ವತ್ರಿಕವಾಗುತ್ತದೆ.

ಮತದಾನದ ಹಕ್ಕು ಕೇವಲ ಸಾರ್ವತ್ರಿಕವಷ್ಟೇ ಅಲ್ಲ ಒಬ್ಬನಿಗೆ ಒಂದು ಮತ ಎಂಬ ತತ್ವವನ್ನು ಇದು ಒಳಗೊಂಡಿದೆ. ಸಮಾನತೆಯ ತತ್ವವನ್ನೂ ಒಳಗೊಂಡಿದೆ. ಮತದಾನದ ಹಕ್ಕು ಅತಿ ವಿಶೇಷವಾಗ ಹಕ್ಕಾಗಿದೆ. ಏಕೆಂದರೆ ಈ ಹಕ್ಕಿನ ಚಲಾವಣೆಯ ಮೂಲಕವೇ ಜನತೆ ಸರ್ಕಾರದ ರಚನೆಯಲ್ಲಿ ಪಾಲ್ಗೊಳ್ಳಲು ಸಾಧ್ಯವಾಗುತ್ತದೆ. ಜನತಾ ಪರಮಾಧಿಕಾರವನ್ನು ವ್ಯಕ್ತಪಡಿಸುವ, ಜನತಾ ಪರಮಾಧಿಕಾರದ ತತ್ವವನ್ನು ಆಚರಣೆಗೆ ತರುವ ಸಾಧನವೇ ಮತಾಧಿಕಾರ.

ಮತದಾನದ ಹಕ್ಕಿನ ಮೂಲಕವೇ ವ್ಯಕ್ತಿ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾನೆ. ಆದುದರಿಂದ ಮತಗಳ ಎಣಿಕೆಯ ಮೂಲಕ ಪ್ರಜೆಗಳ ಅಭಿಪ್ರಾಯ ಅರಿತುಕೊಳ್ಳಬಹುದು ಎಂಬುದಾಗಿ ರೂಸೋ ಅಭಿಪ್ರಾಯಪಡುತ್ತಾರೆ. ಮತಾಧಿಕಾರವು ಜನತೆಗೆ ಶಿಕ್ಷಣ ನೀಡಿ ಜವಾಬ್ದಾರಿಯುತವನ್ನಾಗಿ ಮಾಡುವುದರ ಮೂಲಕ ಸರ್ಕಾರವು ಪ್ರಜೆಗಳಿಗೆ ಜವಾಬ್ದಾರಿಯುತವಾಗಿರುವಂತೆ ಸ್ಪಂದಿಸುವಂತೆ ಮಾಡುತ್ತದೆ. ಆಳುವವರು ಮತ್ತು ಆಳಿಸಿಕೊಳ್ಳುವವರ ನಡುವಣ ಸಂಪರ್ಕ ಸೇತುವೆ ಮತದಾನವೇ ಆಗಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಮತಾಧಿಕಾರವು ವ್ಯಕ್ತಿಯ ವ್ಯಕ್ತಿತ್ವ ವಿಕಾಸಕ್ಕೆ ನೆರವಾಗುತ್ತದೆ. ಅವರಲ್ಲಿ ರಾಜಕೀಯ ಅರಿವನ್ನು ಮೂಡಿಸುತ್ತದೆ.

**ಪ್ರತಿನಿಧಿ ಸರ್ಕಾರ**

ಪ್ರಜಾಪ್ರಭುತ್ವ ಎಂದರೆ ಪ್ರತಿನಿಧಿ ಸರ್ಕಾರವೇ ಆಗಿದೆ. ಜೆ.ಎಸ್‌ಮಿಲ್ ಅವರ ಪ್ರಕಾರ ಆಳ್ವಿಕೆ ಎಂದರೆ ಪ್ರತಿಯೊಬ್ಬನೂ ಆಳುತ್ತಾನೆ ಎಂದು ಅರ್ಥವಲ್ಲ. ಕೆಲವರು ಆಳುತ್ತಾರೆ, ಇನ್ನು ಕೆಲವರು ಆಳಿಸಿಕೊಳ್ಳುತ್ತಾರೆ. ಆದರೆ ಆಳುವವರನ್ನು ಆಳಿಸಿಕೊಳ್ಳುವವರೇ ನಿಯತಕಾಲಿಕ ಚುನಾವಣೆಯಲ್ಲಿ ಆಯ್ಕೆ ಮಾಡಿರುತ್ತಾರೆ. ಈ ರೀತಿಯಲ್ಲಿ ಪ್ರಜಾಪ್ರತಿನಿಧಿಗಳಲ್ಲಿ ಅಧಿಕಾರವಿದ್ದರೂ ಅಂತಿಮ ಅಧಿಕಾರ ಜನತೆಯಲ್ಲಿರುತ್ತದೆ.

ಪ್ರತಿನಿಧಿ ಸರ್ಕಾರದಲ್ಲಿ ಕಾರ್ಯನಿರ್ವಹಿಸುವ ಪ್ರತಿನಿಧಿಗಳನ್ನು ನಿಯಮಿತ ಅವಧಿಗಾಗಿ ಪ್ರಜೆಗಳು ಚುನಾಯಿಸುತ್ತಾರೆ. ತಮ್ಮ ಅವಧಿ ಮುಗಿದ ನಂತರ ಮತ್ತೆ ಬೆಂಬಲಕ್ಕಾಗಿ ಪ್ರಜೆಗಳ ಬಳಿಗೆ ಪ್ರತಿನಿಧಿಗಳು ಬರುತ್ತಾರೆ. ಪ್ರತಿನಿಧಿಗಳು ಸಮರ್ಪಕವಾಗಿ ಕಾರ್ಯನಿರ್ವಹಿಸಿದ್ದಾರೆ ಎಂಬ ವಿಶ್ವಾಸ ಉಂಟಾದರೆ, ಅವರ ಕಾರ್ಯಗಳನ್ನು ಪರಿಶೀಲಿಸಿ ಅವರನ್ನು ಮರು ಆಯ್ಕೆ ಮಾಡುತ್ತಾರೆ. ಇಲ್ಲವಾದಲ್ಲಿ ಅವರ ಸ್ಥಾನಕ್ಕೆ ಹೊಸ ಪ್ರತಿನಿದಿಗಳನ್ನು ಆಯ್ಕೆ ಮಾಡುತ್ತಾರೆ. ಈ ರೀತಿಯಲ್ಲಿ ಪ್ರಜೆಗಳ ರಾಜಕೀಯ ಸ್ವಾತಂತ್ರ ಮತ್ತು ರಾಜ್ಯಧಿಕಾರದ ಸೂಕ್ತ ಬಳಕೆಯ ನಡುವೆ ಹೊಂದಾಣಿಕೆ ತರುವ ಸರ್ಕಾರವೇ ಪ್ರತಿನಿಧಿ ಸರ್ಕಾರ.

**ಉದಾರವಾದಿ ಪ್ರಜಾಪ್ರಭುತ್ವದ ಸಿದ್ಧಾಂತವು ವ್ಯಕ್ತಿಯ ಹಕ್ಕುಗಳು ಮತ್ತು ವ್ಯಕ್ತಿಯ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಬಹು ಹೆಚ್ಚಿನ ಮನ್ನಣೆ ನೀಡಿದೆ.**

ಅಭಿವ್ಯಕ್ತಿ ಸ್ವಾತಂತ್ರ ಪ್ರಜಾಸತ್ತಾತ್ಮಕ ರಾಜ್ಯದ ನಾಲ್ಕನೆಯ ಲಕ್ಷಣವಾಗಿದೆ. ಜೆ.ಎಸ್.ಮಿಲ್ ಅವರು ತಮ್ಮ ಪ್ರಬಂಧದ ಎರಡನೆಯ ಅಧ್ಯಾಯದಲ್ಲಿ ವೈಚಾರಿಕ ಸ್ವಾತಂತ್ರ ಮತ್ತು ಅಭಿವ್ಯಕ್ತಿ ಸ್ವಾತಂತ್ರದ ಕುರಿತು ಚರ್ಚಿಸಿದ್ದಾರೆ. ವಿಜ್ಞಾನ, ನೈತಿಕತೆ, ಧರ್ಮ, ರಾಜಕಾರಣ ಎಲ್ಲ ವಿಷಯಗಳ ಕುರಿತಂತೆ ವ್ಯಕ್ತಿಯು ಸ್ವತಂತ್ರವಾಗಿ ತನ್ನ ವಿಚಾರವನ್ನು ವ್ಯಕ್ತಪಡಿಸುವಂತೆ ಇರಬೇಕು. ವ್ಯಕ್ತಿ ಸ್ವಾತಂತ್ರ ಮನ್ನಿಸದ ಸಮಾಜ ಸ್ವತಂತ್ರ ಸಮಾಜವೆನಿಸದು. ಅಭಿಪ್ರಾಯ ವ್ಯತ್ಯಾಸಗಳಿರುವುದರಿಂದಲೇ ವಿಜ್ಞಾನ, ತಾತ್ವಿಕ ಚಿಂತನೆ ಮುಂತಾದ ಕ್ಷೇತ್ರಗಳಲ್ಲಿ ವಿಕಾಸ ಸಾಧ್ಯವಾಗಿದೆ. ಏಕತಾನತೆ ವ್ಯಕ್ತಿಯ ವ್ಯಕ್ತಿತ್ವ ವಿಕಾಸಕ್ಕೆ ಇರುವ ಅತಿ ದೊಡ್ಡ ಅಡಚಣೆಯಾಗಿದೆ. ಅನೇಕ ವಿರುದ್ಧ

ಅಭಿಪ್ರಾಯಗಳಿದ್ದಾಗಲೇ ಸತ್ಯವೆಂದರೆ ಏನು ಎಂಬುದು ತಿಳಿಯುತ್ತದೆ ಎಂಬುದಾಗಿ ಜೆ.ಎಸ್.ಮಿಲ್ ಅಭಿವ್ಯಕ್ತಿ ಸ್ವಾತಂತ್ರದ ಅಗತ್ಯವನ್ನು ಒತ್ತಿ ಹೇಳುತ್ತಾರೆ. ಇಡೀ ಮಾನವ ಜನಾಂಗವೇ ಒಂದು ಅಭಿಪ್ರಾಯ ಹೊಂದಿದ್ದಾಗ, ಬೇರೊಂದು ಅಭಿಪ್ರಾಯ ತಳೆದಿರುವ ಒಬ್ಬನೇ ಒಬ್ಬ ವ್ಯಕ್ತಿಯನ್ನು ಸಹ ಎಲ್ಲರ ಅಭಿಪ್ರಾಯಕ್ಕೆ ಮಣಿಯುವಂತೆ ಮಾಡಬಾರದು. ಏಕೆಂದರೆ ಆ ಒಬ್ಬ ಹೇಳುವುದರಲ್ಲಿಯೇ ಸತ್ಯ ಅಡಗಿರಬಹುದು ಎಂಬುದಾಗಿ ಮಿಲ್ ವಿವರಿಸುತ್ತಾರೆ. ಒಂದು ಸಮಾಜ ಸುಸಂಸ್ಕೃತ ಸಮಾಜವೆನಿಸಬೇಕಾದರೆ ಆ ಸಮಾಜದಲ್ಲಿ ಅಭಿವ್ಯಕ್ತಿ ಸ್ವಾತಂತ್ರ ಮನ್ನಿಸಲ್ಪಟ್ಟಿರಬೇಕು.

ಅರ್ನೆಸ್ಟ್ ಬಾರ್ಕರ್ ಅವರು ಅಭಿವ್ಯಕ್ತಿ ಸ್ವಾತಂತ್ರವು ಪ್ರಜಾಪ್ರಭುತ್ವದಲ್ಲಿ ನಾಲ್ಕು ರೀತಿಯಲ್ಲಿ ವ್ಯಕ್ತವಾಗುತ್ತದೆ ಎಂದು ವಿವರಿಸುತ್ತಾರೆ. ಮತದಾರರಲ್ಲಿ ರಾಜಕೀಯ ಪಕ್ಷಗಳಲ್ಲಿ, ಸಂಸತ್ತಿನಲ್ಲಿ ಹಾಗೂ ಸಚಿವ ಸಂಪುಟದಲ್ಲಿ ಅಭಿವ್ಯಕ್ತಿ ಸ್ವಾತಂತ್ರ ವ್ಯಕ್ತವಾಗುತ್ತದೆ. ಪ್ರಜಾಪ್ರಭುತ್ವದ ಲಕ್ಷಣವೇ ಚರ್ಚಾ ಸ್ವಾತಂತ್ರ. ಅಭಿಪ್ರಾಯಗಳಲ್ಲಿ ಭಿನ್ನತೆ ಇದ್ದರೂ ಚರ್ಚೆಯ ಮೂಲಕ ಸಮನ್ವಯ ಸಾಧ್ಯ ಎಂಬುದು ಉದಾರವಾದಿ ಪ್ರಜಾಪ್ರಭುತ್ವ ಸಿದ್ಧಾಂತದ ಮುಖ್ಯ ಆಧಾರ ತತ್ವವಾಗಿದೆ.

**ಕಾನೂನಿನ ಪ್ರಭುತ್ವ ಅಥವಾ ಕಾಯಿದೆಯ ಆಳ್ವಿಕೆ**

ಪ್ರಜಾಪ್ರಭುತ್ವದ ಅತಿ ಮುಖ್ಯ ಲಕ್ಷಣಗಳಲ್ಲಿ ಒಂದಾಗಿದೆ. ಈ ತತ್ವವು ಬ್ರಿಟನ್ನಿನ ಸಂವಿಧಾನಿಕ ಇತಿಹಾಸದ ಅತಿ ಮುಖ್ಯ ಕೊಡುಗೆಯಾಗಿದೆ. ಪ್ರಜಾಪ್ರಭುತ್ವದಲ್ಲಿ ಯಾವುದೇ ವ್ಯಕ್ತಿಯ ಆಳ್ವಿಕೆ ಇರದೆ ಕಾಯಿದೆಯ ಆಳ್ವಿಕೆ ಇರುತ್ತದೆ. ಆದುದರಿಂದ ಕಾನೂನು ಎಲ್ಲರಿಗೂ ಸಮಾನವಾಗಿ ಅನ್ವಯವಾಗುತ್ತದೆ. ಎ.ವ್ಹಿ.ಡೈಸೆ ಅವರು ಕಾನೂನಿನ ಅಧಿಪತ್ಯದ ಪ್ರದಾನ ತತ್ವಗಳನ್ನು ವಿವರಿಸಿದ್ದಾರೆ. ಕಾನೂನಿನ ಪ್ರಭುತ್ವವೆಂದರೆ ವ್ಯಕ್ತಿಯು ಪ್ರಭುತ್ವವಲ್ಲ. ಅರಸನಿರಲಿ, ಸಾಮಾನ್ಯ ಪ್ರಜೆ ಇರಲಿ, ಕಾನೂನಿನ ದೃಷ್ಟಿಯಲ್ಲಿ ಎಲ್ಲರೂ ಸಮಾನರು, ಕಾನೂನಿನ ಉಲ್ಲಂಘನೆಯಾಗದೆ ಯಾರಿಗೂ ಶಿಕ್ಷೆ ವಿಧಿಸುವಂತಿಲ್ಲ ಮತ್ತು ನ್ಯಾಯ ವಿಚಾರಣೆ ಬಹಿರಂಗವಾಗಿ ನಡೆಯಬೇಕು.

**ಸ್ವತಂತ್ರ ನ್ಯಾಯಾಂಗ**

ಪ್ರಜಾಪ್ರಭುತ್ವದ ತತ್ವಗಳನ್ನು ರಕ್ಷಿಸಲು ಸ್ವತಂತ್ರ ನ್ಯಾಯಾಂಗ ಅತಿ ಅವಶ್ಯಕವಾಗುತ್ತದೆ. ಕಾನೂನಿನ ರಕ್ಷಣೆ, ಸಂವಿಧಾನದ ರಕ್ಷಣೆ, ನಾಗರಿಕ ಹಕ್ಕು ಸ್ವಾತಂತ್ರಗಳ ರಕ್ಷಣೆಗಾಗಿ ಸ್ವತಂತ್ರ ನಿಷ್ಪಕ್ಷಪಾತ ನ್ಯಾಯಾಂಗದ ಅಗತ್ಯವಿದೆ. ಉದಾರವಾದಿ ಪ್ರಜಾಪ್ರಭುತ್ವದ ಉಳಿವು ಅಳಿವು ನ್ಯಾಯಾಂಗ ವ್ಯವಸ್ಥೆಯನ್ನೇ ಅವಲಂಬಿಸಿದೆ. ಆದುದರಿಂದಲೇ ಮಾಂಟೆಸ್ಕ್ಯೂ ಅವರು ಧಿಕಾರ ಪ್ರತ್ಯೇಕತೆಯ ಸಿದ್ಧಾಂತವನ್ನೇ ಪ್ರತಿಪಾದಿಸಿದ್ದಾರೆ. ಶಾಸಕಾಂಗ ಮತ್ತು ಕಾರ್ಯಾಂಗಗಳಿಂದ ಪ್ರತ್ಯೇಕವಾದ ನ್ಯಾಯಾಂಗದ ಕುರಿತು ವಿಮರ್ಶಿಸಿದ್ದಾರೆ. ನ್ಯಾಯಾಂಗದ ಸ್ವಾತಂತ್ರ ರಕ್ಷಣೆಗಾಗಿ ವಿವಿಧ ಪ್ರಜಾಪ್ರಭುತ್ವಗಳಲ್ಲಿ ಅನೇಕ ಮಾರ್ಗಗಳನ್ನು ವಿಧಾನಗಳನ್ನು ಅನುಸಿರಿಸುವುದು ಈ ತತ್ವದ ಪ್ರಾಮುಖ್ಯತೆಯನ್ನು ಸ್ಪಷ್ಟಪಡಿಸುತ್ತವೆ.

**ಸಾರ್ವಜನಿಕ ಹುದ್ದೆಗಳಿಗೆ ಸಮಾನವಾದ ಅರ್ಹತೆಗಳು**

ಪ್ರಜಾಸತ್ತಾತ್ಮಕ ರಾಜ್ಯದ ಮತ್ತೊಂದು ಪ್ರಮುಖ ಲಕ್ಷಣವೆಂದರೆ, ಸಾರ್ವಜನಿಕ ಹುದ್ದೆಗಳಿಗೆ ಸಂಬಂಧಿಸಿದಂತೆ ವ್ಯಕ್ತಿಗಳಿಗೆ ಅರ್ಹತೆಗಳನ್ನು ನಿಗದಿಪಡಿಸಿರಬೇಕು. ಆಧುನಿಕ ರಾಷ್ಟ್ರಗಳಲ್ಲಿ ಸಂವಿಧಾನವು ಸರ್ಕಾರಿ ಹುದ್ದೆಗಳಿಗೆ ಸಮಾನವಾದ ಅರ್ಹತೆಗಳನ್ನು ನಿಗದಿಪಡಿಸುತ್ತದೆ. ತಾರತಮ್ಯರಹಿತ ನೇಮಕಾತಿ ಪದ್ಧತಿಯಿಂದ, ಆಡಳಿತದಲ್ಲಿ ದಕ್ಷತೆಯ ಮಟ್ಟವನ್ನು ಉತ್ತಮಪಡಿಸಲು ಸಾಧ್ಯವಾಗುತ್ತದೆ. ಸಮಾಜದ ಎಲ್ಲಾ ವರ್ಗದ ಜನರಿಗೂ ನ್ಯಾಯ ದೊರಕಿಸಲು ಸಾಧ್ಯವಾಗುತ್ತದೆ.

**ಶಾಸಕಾಂಗಕ್ಕೆ ಕಾರ್ಯಾಂಗದ ಜವಾಬ್ದಾರಿ**

ಅಂತಿಮವಾಗಿ, ಉದಾರವಾದಿ ಪ್ರಜಾಪ್ರಭುತ್ವದಲ್ಲಿ ಕಾರ್ಯಾಂಗವು ಶಾಸಕಾಂಗಕ್ಕೆ ಜವಾಬ್ದಾರಿ ಹೊಂದಿರುವುದು ಪ್ರಮುಖ ಲಕ್ಷಮವಾಗಿದೆ. ಈ ವ್ಯವಸ್ಥೆಯಲ್ಲಿ ಶಾಸಕಾಂಗದ ಸದಸ್ಯರು, ಕಾರ್ಯಾಂಗದ ಸದಸ್ಯರ ಅಧಿಕೃತ ಕರ್ತವ್ಯಗಳ ಲೋಪದೋಷಗಳನ್ನು ಟೀಕಿಸುವ ಪೂರ್ಣ ವಕಾಶಗಳಿರುತ್ತವೆ ಮತ್ತು ಅದರಿಂದಾಗಿ ಆಡಲಿತ ಜವಾಬ್ದಾರಿಯುತವಾಗಿರುತ್ತದೆ. ಇದಕ್ಕಾಗಿ ಬಳಸುವ ಶಾಸನೀಯ ಸಾಧನಗಳೆಂದರೆ, ಪ್ರಶ್ನೋತ್ತರ ವೇಳೆ, ಸಂಸತ್ತಿನ ಚರ್ಚೆಗಳು ಮತ್ತು ನಿಲುವಳಿ ಸೂಚನೆಗಳು, ಇದರಿಂದ ಕಾರ್ಯಾಂಗವು ಸದಾ ಜಾಗೃತವಾಗಿ, ಸ್ಪಂದನಾಶೀಲವಾಗಿ ಮತ್ತು ಜವಾಬ್ದಾರಿಯುತವಾಗಿ ವರ್ತಿಸಲು ಸಾಧ್ಯವಾಗುತ್ತದೆ. ಶಾಸಕಾಂಗದ ಅವಿಶ್ವಾಸ ನಿರ್ಣಯದಿಂದ ಸಚಿವ ಸಂಪುಟವು ಹಠಾತ್ತನೆ ಅಧಿಕಾರದಿಂದ ನಿರ್ಗಮಿಸುವುದನ್ನು ತಪ್ಪಿಸಿಕೊಳ್ಳಲು, ಕಾರ್ಯಾಂಗವು ಶಾಸಕಾಂಗಕ್ಕೆ ಜವಾಬ್ದಾರಿ ಹೊಂದಿರುವುದು ಅನಿವಾರ್ಯವಾಗುತ್ತದೆ.

## ನಿಮ್ಮ ಪ್ರಗತಿ ಪರಿಶೀಲನೆ - 1

**ಸೂಚನೆ:** 1. ಈ ಕೆಳಗೆ ಬಿಟ್ಟಿರುವ ಜಾಗವನ್ನು ನಿಮ್ಮ ಉತ್ತರಕ್ಕೆ ಉಪಯೋಗಿಸಿಕೊಳ್ಳಿ.

2. ಈ ಘಟಕದ ಕೊನೆಯಲ್ಲಿ ನೀಡಿರುವ ಉತ್ತರದೊಂದಿಗೆ ನಿಮ್ಮ ಪ್ರಗತಿಯನ್ನು ಪರಿಶೀಲಿಸಿಕೊಳ್ಳಿ.

**1. ಪ್ರಜಾಪ್ರಭುತ್ವದ ಸಾಂಪ್ರದಾಯಿಕ ಉದಾರವಾದಿ ಸಿದ್ಧಾಂತವನ್ನು ಸಂಕ್ಷಿಪ್ತವಾಗಿ ವಿವರಿಸಿ?**

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

**2. ಉದಾರವಾದಿ ಸಿದ್ಧಾಂತದ ಲಕ್ಷಣಗಳನ್ನು ಪರಿಶೀಲಿಸಿ?**

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

**3.ಉದಾರವಾದಿ ಪ್ರಜಾಪ್ರಭುತ್ವ ಸಿದ್ಧಾಂತವನ್ನು ವಿಮರ್ಶಿಸಿ.**

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

## 17.4 ಸಾರಾಂಶ

ಪ್ರಜಾಪ್ರಭುತ್ವವು ಆಧುನಿಕ ಕಾಲದಲ್ಲಿ ಉದಯಗೊಂಡು ಹೆಚ್ಚು ಪ್ರಚಲಿತಗೊಂಡರು ಸಹ ಅದು ಪ್ರಾಚೀನ ಕಾಲದಿಂದಲೂ ಬೆಳೆದು ಬಂದಿರುವಂತವುದು. ಇದರ ಬೆಳವಣಿಗೆಯನ್ನು ಆಧರಿಸಿಕೊಂಡು ಹಾಗೂ ಚಿಂತಕರುಗಳು ನೀಡಿರುವಂತ ಚಿಂತನೆಗಳನ್ನು ಅಥವ ತತ್ವಗಳನ್ನು ಅವಲಂಬಿಸಿಕೊಂಡು ಕೆಲವು ಸಿದ್ಧಾಂತಗಳು ಹೊರಬಂದಿವೆ ಅವುಗಳಲ್ಲಿ ಸಾಂಪ್ರದಾಯಿಕ ಸಿದ್ಧಾಂತ ಹಾಗೂ ಉದಾರವಾದಿ ಸಿದ್ಧಾಂತಗಳನ್ನು ಈ ಘಟಕದಲ್ಲಿ ಚರ್ಚಿಸಲಾಗಿದೆ. ಈ ಎರಡು ಸಿದ್ಧಾಂತಗಳಲ್ಲಿಯು ಪ್ರಾಚೀನ ಕಾಲದಿಂದ ಇಲ್ಲಿಯವರೆಗೆ ಪ್ರಜಾಪ್ರಭುತ್ವವು ಯಾವ ರೀತಿ ಬೆಳವಣಿಗೆಯನ್ನು ಹೊಂದುತ್ತಾ ಬಂದಿದೆ ಎಂಬುವ ಅಂಶಗಳನ್ನು ವಿವರಿಸಲಾಗಿದೆ.

## 17.5 ಕಠಿಣ ಪದಗಳು

| | | |
|---|---|---|
| ಲೆವಿಯಥಾನ್ | : | ಹಾಬ್ಸ್‌ರವರ ಗ್ರಂಥ |
| ಲೈಸ್ಸಫೇರ್ | : | ಮುಕ್ತವಾಗಿಬಿಡು |
| ಸಾರ್ವತ್ರಿಕ ಇಚ್ಛೆ | : | ಸರ್ವರ ಹಿತ ಕಾಯುವಂತಹುದು |
| ಜನತಾ ಪರಮಾಧಿಕಾರ | : | ಅಂತಿಮ ಅಧಿಕಾರ ಜನತೆಯಲ್ಲಿರುವುದು |
| ಸಾರ್ವತ್ರಿಕ ವಯಸ್ಕ ಮತದಾನ | : | ನಿರ್ಧಿಷ್ಟ ವಯಸ್ಸು ಆದ ನಂತರ ಎಲ್ಲರಿಗೂ ಮತದಾನದ ಹಕ್ಕು ಹೊಂದುವುದು. |

## 17.6 ಕೆಲವು ಉಪಯುಕ್ತ ಗ್ರಂಥಗಳು


| | | |
|---|---|---|
| ಧಾಲ್ ಆರ್.ಎ | - | ಮಾಡ್ರನ್ ಪೊಲಿಟಿಕಲ್ ಥಿಯರಿ |
| ಮೇಫರ್‌ಸನ್ ಸಿ.ಬಿ. | - | ಡೆಮಾಕ್ರಟಿಕ್ ಥಿಯರಿ |
| ಎಸ್.ಪಿ. ವರ್ಮಾ | - | ಮಾಡರ್ನ್ ಪೊಲಿಟಿಕಲ್ ಥಿಯರಿ |
| ವಿ.ಪಿ.ವರ್ಮಾ | - | ಪೊಲಿಟಿಕಲ್ ಫಿಲಾಸೊಫಿ |
| ಹೆಚ್.ಆರ್. ಮುಖಿ | - | ಹಿಸ್ಟರಿ ಆಫ್ ಪೊಲಿಟಿಕಲ್ ಥಿಯರಿ |
| ಡಾ. ಟಿ.ಡಿ.ದೇವೇಗೌಡ | - | ರಾಜಕೀಯ ಸಿದ್ಧಾಂತಗಳು |
| ಡಾ.ಕೆ.ಜೆ. ಸುರೇಶ್ | - | ಆಧುನಿಕ ರಾಜಕೀಯ ಸಿದ್ಧಾಂತಗಳು |


## 17.7 ನಿಮ ಪ್ರಗತಿ ಪರಿಶೀಲನೆಗೆ ಉತ್ತರಗಳು

<u>ನಿಮ್ಮ ಪ್ರಗತಿ ಪರಿಶೀಲನೆ</u> **- 1**

1. ವಿಭಾಗ 17.2 ನೋಡಿ
2. ವಿಭಾಗ 17.3 ನೋಡಿ
3. ವಿಭಾಗ 17.3 ನೋಡಿ

# ಘಟಕ 18 ಪ್ರಜಾಪ್ರಭುತ್ವದ ಗಣ್ಯರ, ಬಹುತ್ವ ಮತ್ತು ಮಾರ್ಕ್ಸ್‌ವಾದಿ ಸಿದ್ಧಾಂತಗಳು

## ರಚನೆ


18.0 ಉದ್ದೇಶಗಳು

18.1 ಪೀಠಿಕೆ

18.2 ಪ್ರಜಾಪ್ರಭುತ್ವದ ಗಣ್ಯರ ಸಿದ್ಧಾಂತ

18.3 ಪ್ರಜಾಪ್ರಭುತ್ವದ ಬಹುತ್ವ ಸಿದ್ಧಾಂತ

18.4 ಮಾರ್ಕ್ಸ್‌ವಾದಿ ಸಿದ್ಧಾಂತ

18.5 ಉಪಸಂಹಾರ

18.6 ಕಠಿಣ ಪದಗಳು

18.7 ಕೆಲವು ಉಪಯುಕ್ತ ಗ್ರಂಥಗಳು

18.8 ನಿಮ ಪ್ರಗತಿ ಪರಿಶೀಲನೆಗೆ ಉತ್ತರಗಳು

## 18.0 ಉದ್ದೇಶಗಳು

ಈ ಘಟಕದ ವಸ್ತು ವಿಷಯವನ್ನು ಅಧ್ಯಯನ ಮಾಡಿದ ನಂತರ ನೀವು

* ಗಣ್ಯರ ಸಿದ್ಧಾಂತ ಎಂದರೇನು ಎಂಬುದನ್ನು ತಿಳಿಯಬಹುದು
* ಬಹುತ್ವ ಸಿದ್ಧಾಂತದ ಪ್ರಾಮುಖ್ಯತೆಯನ್ನು ಪರಿಶೀಲಿಸಬಹುದು
* ಮಾರ್ಕ್ಸ್ ಸಿದ್ಧಾಂತದ ತತ್ವಗಳನ್ನು ಚರ್ಚಿಸಬಹುದು

## 18.1 ಪೀಠಿಕೆ

ರಾಜಕಾರಣ ಮತ್ತು ಪ್ರಜಾಪ್ರಭುತ್ವವನ್ನು ಸಮಾಜಶಾಸ್ತ್ರದ ವಿಧಾನಗಳನ್ನು ಅನುಸರಿಸಿ ಅಭ್ಯಸಿಸಿದ ಮೊಸ್ಕಾ ಮತ್ತು ಪೆರೆಟೊ ಸಾಂಪ್ರದಾಯಿಕ ಪ್ರಜಾಪ್ರಭುತ್ವದ ಕಲ್ಪನೆಯನ್ನು ವಿರೋಧಿಸಿದ್ದಾರೆ. ಯಾವ ರಾಜಕೀಯ ವ್ಯವಸ್ಥೆಯೂ ಸ್ಥಿರವಾಗಿಲ್ಲ. ಬದಲಾಗಿ ಆಳುವ ಶ್ರೇಷ್ಠರಲ್ಲಿ ಬದಲಾವಣೆಯಾಗುತ್ತಲೇ ಇರುತ್ತದೆ ಎಂಬುದಾಗಿ ಪ್ರತಿಪಾದಿಸಿದ್ದಾರೆ. ಮೊಸ್ಕಾ ತಮ್ಮ ರೂಲಿಂಗ್ ಕ್ಲಾಸ್ (ಆಳುವವರ್ಗ) ಎಂಬ ಕೃತಿಯಲ್ಲಿ ಪೆರೆಟೊ ಅವರು ತಮ್ಮ ಮೈಂಡ್ ಆಂಡ್ ಸೊಸೈಟಿ ಎಂಬ ಕೃತಿಯಲ್ಲಿ ಹಾಗೂ ರಾಬರ್ಟ್ ಮಿಷೆಲ್ಸ್ ತಮ್ಮ ಪೊಲಿಟಿಕಲ್ ಪಾರ್ಟಿಸ್ ಎಂಬ ಕೃತಿಯಲ್ಲಿ ಪ್ರಜಾಪ್ರಭುತ್ವದಲ್ಲಿ ಶ್ರೇಷ್ಠರ ಪಾತ್ರವನ್ನು ಕುರಿತು ಚರ್ಚಿಸಿದ್ದಾರೆ.

ಅರಸೊತ್ತಿಗೆ, ಶ್ರೀಮಂತ ಪ್ರಭುತ್ವ, ಪ್ರಜಾಪ್ರಭುತ್ವಗಳೆಂಬ ಸರ್ಕಾರದ ವರ್ಗೀಕರಣವನ್ನು ಅಲ್ಲಗಳೆಯುವ ಮೊಸ್ಕಾಂ ಐತಿಹಾಸಿಕವಾಗಿ ಎಲ್ಲ ಕಾಲದಲ್ಲಿಯೂ ಕೆಲವರ ಆಳ್ವಿಕೆ ಇತ್ತೆಂದು ಅಭಿಪ್ರಾಯಪಡುತ್ತಾರೆ. ಸಮಾಜದಲ್ಲಿ ಅಧಿಕಾರದ ಸ್ವಾಮ್ಯ ಪಡೆದಿರುವ ಶ್ರೇಷ್ಠರಿಗೆ ಎಲ್ಲ ಸವಲತ್ತುಗಳೂ ದೊರೆಯುತ್ತವೆ. ಬಹುಸಂಖ್ಯಾತ ಗಣ್ಯರು ನಿರಂಕುಶ ಪ್ರಭುತ್ವ ಚಲಾಯಿಸುತ್ತಾರೆ. ಎಂದೇನೂ ಇಲ್ಲ. ಪ್ರಜಾಪ್ರಭುತ್ವವಿರುವ ವ್ಯವಸ್ಥೆಯಲ್ಲಿ ಸಾಮಾನ್ಯ ಜನತೆ ಶಾಂತಿಯುತ ಚುನಾವಣಾ ವಿಧಾನ ಹಾಗೂ ಒತ್ತಡದ ಗುಂಪುಗಳ ಮೂಲಕ ಶ್ರೇಷ್ಠರ ಮೇಲೆ ಪ್ರಭಾವ ಬೀರುತ್ತಾರೆ. ಶ್ರೀಮಂತ ಪ್ರಭುತ್ವದಲ್ಲಿ ಹಿಂಸಾತ್ಮಕ ಪ್ರತಿಭಟನೆಯ ಮೂಲಕ ಶ್ರೇಷ್ಟರ ಮೇಲೆ ಪ್ರಭಾವ ಬೀರಲಾಗುತ್ತದೆ. ಈ ರೀತಿ ಶ್ರೇಷ್ಠರ ಆಳ್ವಿಕೆ ಇದ್ದರೂ ಅವರ ಮೇಲೆ ಪ್ರಜೆಗಳ ಪ್ರಭಾವವಿರುತ್ತವೆ.

ಇಪ್ಪತ್ತನೆಯ ಶತಮಾನದ ಪ್ರಾರಂಬದವರೆಗೆ ಉದಾರವಾದಿ ಪ್ರಜಾಪ್ರಭುತ್ವ ಸಿದ್ಧಾಂತ ಅತಿ ಜನಪ್ರಿಯವಾಗಿತ್ತು. ಶತಮಾನದ ಪ್ರಾರಂಭದಲ್ಲಿ ಇಟಲಿಯ ಸಮಾಜ ಶಾಸ್ತ್ರಜ್ಞರಾದ ವಿಲ್‌ಫ್ರಡೊ ಪೆರೆಯೊ ಮತ್ತು ಮೊಸ್ಕಾ ಅವರ ವಿದ್ಯಾರ್ಥಿ ರಾಬರ್ಟ್ ಮಿಷಲ್ಸ್ ಶ್ರೆಷ್ಠರ ಪ್ರಜಾಪ್ರಭುತ್ವ ಸಿದ್ಧಾಂತದ ಪ್ರತಿಪಾದಕರಾದರು. ಜೇಮ್ಸ್ ಬರ್ನ್‌ಹ್ಯಾಂ ಅವರ ಪ್ರಕಾರ ಪ್ರತಿ ಸಮಾಜದಲ್ಲಿಯೂ ಅಲ್ಪಸಂಖ್ಯಾತರು ಆಳುತ್ತಾರೆ. ಆದುದರಿಂದ ರಾಜಕೀಯ ವ್ಯವಸ್ಥೆಯಲ್ಲಿ ಆಳುವ ಮತ್ತು ಆಳಿಸಿಕೊಳ್ಳುವ ಎರಡು ಗುಂಪುಗಳಿರುತ್ತವೆ. ಆಳುವವರು ಧಿಕಾರ ಮತ್ತು ಪ್ರಭಾವದಲ್ಲಿ ಗಣ್ಯರಾಗಿರುತ್ತಾರೆ.

## 18.2 ಗಣ್ಯರ ಸಿದ್ಧಾಂತ

ಗಣ್ಯರ ಸಿದ್ಧಾಂತವನ್ನು ಈ ಕೆಳಕಂಡ ತತ್ವಗಳನ್ನು ಪರಿಶೀಲಿಸುವ ಮೂಲಕ ಅಧ್ಯಯನ ಮಾಡಬಹುದು.

* **ಅಲ್ಪಸಂಖ್ಯಾತರ ಪ್ರಭಾವಶಾಲಿ ಗಣ್ಯರು**

ಪೆರೆಟೊ ಅವರ ಎಲೀಟ್ (ಗಣ್ಯರು) ಎಂಬ ಪದಕ್ಕೆ ಎರಡು ಅರ್ಥ ಕಲ್ಪಿಸುತ್ತಾರೆ. ಸೀಮಿತ ಅರ್ಥದಲ್ಲಿ, ಶ್ರೇಷ್ಠರು ಕೇವಲ ಆಳುವವರನ್ನು ಮಾತ್ರ ಒಳಗೊಂಡಿರುತ್ತಾರೆ. ರಾಜಕೀಯವಾಗಿ, ಸಾಮಾಜಿಕವಾಗಿ ಆಳುವ ಅಧಿಕಾರ ಪಡೆಯುವಲ್ಲಿ ಯಶಸ್ವಿಯಾದವರು

ಈ ಗುಂಪಿಗೆ ಸೇರುತ್ತಾರೆ. ವಿಶಾಲ ಅರ್ಥದಲ್ಲಿ, ವಿವಿಧ ವೃತ್ತಿ ಶ್ರೇಣಿಗಳಲ್ಲಿ ಅತ್ಯುನ್ನತ ಸ್ಥಾನಗಳಿಸಿಕೊಂಡ, ಪ್ರತಿ ಚಟುವಟಿಕೆಯಲ್ಲಿ, ಪ್ರತಿ ರಂಗದಲ್ಲಿ, ಪ್ರತಿ ಕ್ಷೇತ್ರದಲ್ಲಿ ಯಶಸ್ಸುಗಳಿಸಿದ ವ್ಯಕ್ತಿಗಳು ಸಾಮಾಜಿಕ ಶ್ರೇಷ್ಠರೆನಿಸಿಕೊಳ್ಳುತ್ತಾರೆ. ಈ ಗುಂಪು ವ್ಯಾಪಾರಿಗಳು, ಕಲಾಕಾರರು, ರಾಜಕಾರಣಿಗಳು, ವಿಜ್ಞಾನಿಗಳು ಮುಂತಾದವರನ್ನು ಒಳಗೊಂಡಿರುತ್ತದೆ. ಈ ರೀತಿಯಲ್ಲಿ ಪ್ರತಿ ಕ್ಷೇತ್ರದಲ್ಲಿಯೂ ಅಲ್ಪ ಸಂಖ್ಯಾತ ಶ್ರೇಷ್ಠರೇ ಆಯಾ ಕ್ಷೆತ್ರಗಳಲ್ಲಿ ಪ್ರಭಾವಶಾಲಿಗಳಾಗಿರುತ್ತಾರೆ. ಈ ಗುಂಪು ವ್ಯಾಪಾರಿಗಳು, ಕಲಾಕಾರರು, ರಾಜಕಾರಣಿಗಳು, ವಿಜ್ಞಾನಿಗಳು ಮುಂತಾದವರನ್ನು ಒಳಗೊಂಡಿರುತ್ತದೆ. ಈ ರೀತಿಯಲ್ಲಿ ಪ್ರತಿ ಕ್ಷೆತ್ರದಲ್ಲಿಯೂ ಅಲ್ಪ ಸಂಖ್ಯಾತ ಶ್ರೇಷ್ಠರೇ ಆಯಾ ಕ್ಷೇತ್ರಗಳಲ್ಲಿ ಪ್ರಭಾವಶಾಲಿಗಲಾಗಿರುತ್ತಾರೆ. ರಾಜಕೀಯ ಗಣ್ಯರು ಎಲ್ಲಾ ಕಾಲಗಳಲ್ಲಿಯೂ, ಎಲ್ಲ ವ್ಯವಸ್ಥೆಗಳಲ್ಲಿಯೂ ಅಲ್ಪಸಂಖ್ಯಾತರೇ ಆಗಿರುವರು ಎಂಬ ಸತ್ಯವನ್ನು ಈ ಸಿದ್ಧಾಂತ ಸ್ಪಷ್ಟವಾಗಿ ನಿರೂಪಿಸಿದೆ.

ಸಾಮಾಜಿಕ ಗಣ್ಯರು ಮತ್ತು ರಾಜಕೀಯ ಗಣ್ಯರುಗಳ ನಡುವೆ ಅಧಿಕಾರ, ಗೌರವ, ಸ್ಥಾನಮಾನಗಳ ವಿಷಯದಲ್ಲಿ ವ್ಯತ್ಯಾಸವಿರುತ್ತದೆ. ರಾಜಕೀಯ ಗಣ್ಯರಲ್ಲಿ ಸಿಂಹದಂತಿರುವವರು ಮತ್ತು ನರಿಗಳಂತೆ ಇರುವವರು ಇರುತ್ತಾರೆ. ಪ್ರಜೆಗಳು ತಮ್ಮಲ್ಲಿಯ ಸ್ವಭಾವಕ್ಕೆ ಅನುಗುಣವಾಗಿ ನಾಯಕರನ್ನು ಪಡೆಯುತ್ತಾರೆ. ಇವರು ಅಧಿಕಾರದ ಮೂಲಕ ನಿಯಂತ್ರಣ ಹೊಂದಿರುತ್ತಾರೆ. ಆದರೆ ಈ ರಾಜಕೀಯ ಗಣ್ಯರು ರಾಜ್ಯದಲ್ಲಿ ಬದಲಾಗುತ್ತಲೇ ಇರುತ್ತಾರೆ ಅಂದರೆ ಎಲ್ಲ ಕಾಲಕ್ಕೂ ಅವರೇ ಅದಿಕಾರದಲ್ಲಿ ಮುಂದುವರಿಯುವುದಿಲ್ಲ.

*** ನಿರ್ಣಯ ತೆಗೆದುಕೊಳ್ಳುವ ಸ್ಥಾನದಲ್ಲಿ ರಾಜಕೀಯ ಗಣ್ಯರು**

ರಾಜಕೀಯ ಗಣ್ಯರು ಎಲ್ಲ ರಾಜಕೀಯ ವಿಷಯಗಳಲ್ಲಿಯೂ ನಿರ್ಣಯ ತೆಗೆದುಕೊಳ್ಳುವ ಸ್ಥಾನದಲ್ಲಿ ಇರುತ್ತಾರೆ. ಗಣ್ಯ ಪ್ರಜಾಪ್ರಭುತ್ವ ಸಿದ್ಧಾಂತವು ಉದಾರವಾದಿ ಸಿದ್ಧಾಂತದ ಪ್ರಮುಖ ತತ್ವವಾದ ಪ್ರಜೆಗಳ ಆಳ್ವಿಕೆ ಎಂಬುದನ್ನು ಖಂಡಿಸುತ್ತದೆ. ಉದಾರವಾದಿಗಳ ಪ್ರಕಾರ ಪ್ರಜೆಗಳಿಗೆ ತಮ್ಮನ್ನು ತಾವು ಆಳಿಸಿಕೊಳ್ಳುವ ಸಾಮರ್ಥ್ಯವಿದೆ. ಆದರೆ ಈ ಕಲ್ಪನೆ ಟೊಳ್ಳು ಎಂಬುದು ಶ್ರೇಷ್ಠರ ಪ್ರಜಾಪ್ರಭುತ್ವದ ಪ್ರತಿಪಾದಕರ ಅಭಿಪ್ರಾಯವಾಗಿದೆ. ಅದೊಂದು ಜನರ ಮನಸೆಳೆಯುವ ಹೇಳಿಕೆ ಮಾತ್ರ ಎಂಬುದು ಸಾರ್ತೋರಿ ಅವರ ಅಭಿಪ್ರಾಯ. ಪ್ರಜೆಗಳಲ್ಲಿ ಅಧಿಕಾರವಿದೆ ಎಂಬುದು ಕೇವಲ ಕಟ್ಟುಕತೆ ಮಾತ್ರವೇ ಆಗಬಲ್ಲದು. ವಾಸ್ತವಿಕತೆ ಇದಕ್ಕಿಂತ ಊಣನ್ನವಾಗಿದೆ. ಶ್ರೇಷ್ಠರ ಸಿದ್ಧಾಂತಿಗಳ ಪ್ರಕಾರ ಪ್ರತಿ ಸಮಾಜದಲ್ಲಿಯೂ ರಾಜ್ಯಾಧಿಕಾರ ಪಡೆದು ಪ್ರಮುಖ ನಿರ್ಣಯ ತೆಗೆದುಕೊಳ್ಳುವವರು ನಾಯಕರೇ ಆಗಿರುತ್ತಾರೆ. ಪ್ರಜಾಪ್ರಭುತ್ವ ವ್ಯವಸ್ಥೆ ಈ ಸಮಾನ್ಯ ನಿಯಮಕ್ಕೆ ಹೊರತಾಗಿಲ್ಲ.

ಈ ಸಂದರ್ಬದಲ್ಲಿ ಶ್ರೇಷ್ಠರ ಸಿದ್ಧಾಂತದ ಪ್ರತಿಪಾದಕರಾದ ಆಕ್ಟನ್ ಅವರ ಹೇಳಿಕೆ ಪ್ರಸ್ತುತವಾಗುತ್ತದೆ. ಅವರ ಪ್ರಕಾರ ಕೆಲವೇ ಕೆಲವರ ಕೈಯಲ್ಲಿ ಸರ್ಕಾರವಿರಬೇಕಾದುದು ಅನಿವಾರ್ಯವೇ ಆಗುತ್ತದೆ... ಜನರಿಗಾಗಿ ಸರ್ಕಾರವಿರಲು ಸಾಧ್ಯ ಆದರೆ ಜನತೆಯ ಸರ್ಕಾರ ಅಸಾಧ್ಯದ ಕಲ್ಪನೆ. ಈ ರೀತಿಯಲ್ಲಿ ಪ್ರಜಾಪ್ರಭುತ್ವದಲ್ಲಿ ಸರ್ಕಾರದಲ್ಲಿರುವ ನಾಯಕರ ಮೇಲೆ ನಿಯಂತ್ರಣ ಸಾಧಿಸಬೇಕಾದ ಪ್ರಜೆಗಳೇ ನಾಯಕರ ಪ್ರಭಾವಕ್ಕೆ ಒಳಗಾಗುತ್ತಾರೆ.

*** ಶ್ರೇಷ್ಠರಲ್ಲಿ ಕೆಲ ವಿಶೇಷ ಗುಣಗಳಿರುತ್ತವೆ.**

ರಾಜಕೀಯ ಶ್ರೇಷ್ಠರು ಅಧಿಕಾರದ ಸ್ಥಾನ ಪಡೆಯಲು ಮತ್ತು ಆಳ್ವಿಕೆ ನಡೆಸಲು, ಅವರಲ್ಲಿರುವ ಕೆಲ ವಿಶೇಷ ಉತ್ತಮ ಗುಣಮಟ್ಟದ ಗುಣಗಳೇ ಕಾರಣ ಎಂಬುದು ಶ್ರೇಷ್ಠರ ಸಿದ್ಧಾಂತದ ಇನ್ನೊಂದು ಪ್ರಮುಖ ತತ್ವವಾಗಿದೆ. ಬೌದ್ಧಿಕ ಸಾಮರ್ಥ್ಯ, ಆಡಳಿತ ಸಾಮರ್ಥ್ಯ, ನೈತಿಕ ಸಾಮರ್ಥ್ಯ, ಮುಂತಾದವುಗಳನ್ನು ಶ್ರೇಷ್ಠರು ಪಡೆದಿರುತ್ತಾರೆ. ಆದುದರಿಂದಲೇ ಅವರು ಇತರ ಸಾಮಾನ್ಯ ಜನತೆಗಿಂತ ಭಿನ್ನವಾಗಿರುತ್ತಾರೆ. ಪೆರೆಟೊಅವರ ಪ್ರಕಾರ ಆಳುವ ಶ್ರೇಷ್ಠರು ಅಧಿಕಾರವನ್ನು ಪಡೆದುಕೊಂಡು ಅಧಿಕಾರವನ್ನು ಕಾನೂನುಬದ್ಧಗೊಳಿಸಿಕೊಳ್ಳುತ್ತಾರೆ. ನಂತರ ಪ್ರಚಾರ ಮಾಧ್ಯಮ ಅವರ ನಿಯಂತ್ರಣದಲ್ಲಿಯೇ ಇರುವುದರಿಂದ ಪ್ರಜೆಗಳ

ಮನವೊಲಿಸಿಕೊಳ್ಳುತ್ತಾರೆ. ತಾವು ಪ್ರಜೆಗಳ ಕಲ್ಯಾಣಕ್ಕಾಗಿಯೇ ಕಾರ್ಯ ನಿರ್ವಹಿಸುತ್ತಿರುವುದಾಗಿ ನಂಬಿಸುತ್ತಾರೆ. ಈ ರೀತಿ ಅವರಲ್ಲಿ ನರಿ ಹಾಗೂ ಸಿಂಹದ ಗುಣಗಳಿರುತ್ತದೆ.

ಮೊಸ್ಕಾ ಅವರ ಪ್ರಕಾರ ಆಳುವ ಶ್ರೇಷ್ಠರನ್ನು ಆಳಿಸಿಕೊಳ್ಳುವವರಿಂದ ಪ್ರತ್ಯೇಕಿಸುವ ಗುಣವೆಂದರೆ ಸಂಘಟನಾಶಕ್ತಿ. ಕಡಿಮೆ ಸಂಖ್ಯೆಯಲ್ಲಿರುವ ಆಳುವ ಶ್ರೇಷ್ಠರು ಎಲ್ಲ ರಾಜಕೀಯ ಕಾರ್ಯಗಳನ್ನು ನಿರ್ವಹಿಸುತ್ತಾರೆ. ಅಧಿಕಾರದ ಮೇಲೆ ಹಿಡಿತ ಸಾಧಿಸುತ್ತಾರೆ ಮತ್ತು ಅಧಿಕಾರದಿಂದ ದೊರೆಯುವ ಎಲ್ಲ ಸವಲತ್ತುಗಳನ್ನು ಅನುಭವಿಸುತ್ತಾರೆ. ಇದೆಲ್ಲಕ್ಕೂ ಕಾರಣವೆಂದರೆ ಅಲ್ಪಸಂಖ್ಯಾತ ಶ್ರೇಷ್ಠರ ಸಂಘಟನಾ ಶಕ್ತಿಯೇ ಆಗಿದೆ. ಸಿ.ರೈಟ್ ಅವರ ಪ್ರಕಾರ ಅಧಿಕಾರ ಪಡೆದ ಶ್ರೇಷ್ಠರಲ್ಲಿ (ಪವರ ಎಲೀಟ್) ಕೆಲವು ವಿಶೇಷ ಗುಣಗಳಿವೆ. ಒಂದೇ ಹಿನ್ನೆಲೆ, ಒಂದೇ ಬಗೆಯ ಮನೋಭಾವ ಒಂದೇ ಬಗೆಯ ಸಾಮರಸ್ಯವಿರುತ್ತದೆ. ಜೇಮ್ಸ್ ಬರ್ನ್‌ಹ್ಯಾಮ್ ಅವರು ಶ್ರೇಷ್ಠರನ್ನು ಮ್ಯಾನೇಜಿರಿಯಲ್ ಎಲೀಟ್ಸ್ ಅಂದರೆ ನಿರ್ವಹಣಾ ಶ್ರೇಷ್ಠರೆಂದು ಕರೆಯುತ್ತಾನೆ. ಅವರಲ್ಲಿ ಮೇಲ್ವಿಚಾರಣೆಯ ಗುಣವಿರುತ್ತದೆ. ಈ ರೀತಿಯಲ್ಲಿ ಶ್ರೇಷ್ಠರ ಸಿದ್ಧಾಂತದ ಪ್ರತಿಪಾದಕರು ಆಳುವ ಶ್ರೇಷ್ಠರಲ್ಲಿ ಕೆಲ ವಿಶೇಷ ಗುಣಗಳನ್ನು ಗುರುತಿಸುತ್ತಾರೆ.

*** ಸಮಾಜದಲ್ಲಿ ಮೂಲತಃ ಅಸಮಾನತೆ ಇದೆ**

ಶ್ರೇಷ್ಠರ ಸಿದ್ಧಾಂತದ ಪ್ರತಿಪಾದಕರು ಸಮಾಜದಲ್ಲಿ ಅಸಮಾನತೆ ಇದೆ ಎಂಬುದನ್ನು ಒಪ್ಪಿಕೊಳ್ಳುತ್ತಾರೆ. ಅಸಮಾನತೆಯ ತತ್ವವೇ ಈ ಸಿದ್ಧಾಂತದ ಅಡಿಗಲ್ಲಾಗಿದೆ. ಈ ಅಸಮಾನತೆ ಹುಟ್ಟಿನಿಂದ ಬಂದಿರದೇ ಜ್ಞಾನ, ಸ್ವಭಾವ, ಸಂಪತ್ತು, ಸ್ಥಾನಮಾನ,ಪರಿಣತಿ, ದಕ್ಷತೆ ಮುಂತಾದವುಗಳಿಂದ ಉಂಟಾಗುತ್ತದೆ. ಉದಾರವಾದಿಗಳು ಪ್ರಜಾಪ್ರಭುತ್ವದಲ್ಲಿ ರಾಜಕೀಯ ಸಮಾನತೆಯನ್ನು ಪ್ರತಿಪಾದಿಸಿರುವುದನ್ನು ಶ್ರೇಷ್ಠರ ಸಿದ್ಧಾಂತದ ಪ್ರತಿಪಾದಕರು ವಿರೋಧಿಸುತ್ತಾರೆ. ಅಧಿಕಾರ ಪಡೆದ ಆಳುವವರು ಮತ್ತು ಸಾಮಾನ್ಯ ಜನತೆಯ ನಡುವೆ ಸಮಾನತೆ ಇದೆ ಎಂಬುದು ಹಾಸ್ಯಾಸ್ಪದವಾಗಿದೆ ಎಂಬುದು ಇವರ ವಿಚಾರವಾಗಿದೆ. ಸಮಾಜದಲ್ಲಿರುವ ಅಸಮಾನತೆ ವಾಸ್ತವಿಕ, ಸಮಾನತೆಯ ತತ್ವಮಿಥ್ಯೆ ಎಂದು ವಿವರಿಸುತ್ತಾರೆ. ಪೆರೆಟೊ ಅವರ ಪ್ರಕಾರ ಪ್ರತಿ ಸಮಾಜದಲ್ಲಿ ಜನತೆಯನ್ನು ಎರಡು ಗುಂಪುಗಳಲ್ಲಿ ವರ್ಗೀಕರಿಸಬಹುದು. ಅದೆಂದರೆ ಕೆಳಹಂತ ಅಥವಾ ಕೆಳಸ್ತರದಲ್ಲಿರುವ ವ್ಯಕ್ತಿಗಳು ಮತ್ತು ಮೇಲಿನ ಹಂತ ಅಥವಾ ಮೇಲಿನ ಸ್ತರದಲ್ಲಿರುವ ವ್ಯಕ್ತಿಗಳು. ಕೆಳಹಂತದಲ್ಲಿರುವವರು ಶ್ರೇಷ್ಠರಲ್ಲ, ಸಾಮಾನ್ಯರು. ಅವರಲ್ಲಿ ಯಾವುದೇ ವಿಶೇಷಗುಣಗಳಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಮೇಲಿನ ಹಂತದಲ್ಲಿರುವವರಲ್ಲಿ ಬೌದ್ಧಿಕ, ಆಡಳಿತಾತ್ಮಕ, ಸೈನಿಕ, ನೈತಿಕ ಸಾಮರ್ಥ್ಯವಿದೆ.

*** ಶ್ರೇಷ್ಠರಲ್ಲಿ ವಿವಿಧ ಬಗೆಯ ಶ್ರೇಷ್ಠರಿದ್ದಾರೆ**

ಪೆರೆಟೋ ಮತ್ತು ಮೊಸ್ಕಾ ಶ್ರೇಷ್ಠರ ವರ್ಗವನ್ನು ವಿವರಿಸಿದ್ದರೆ, ಡಾಲ್ ಮತ್ತು ಪಾಲ್‌ಸ್ಕಿ ಅವರು ಶ್ರೇಷ್ಠರಲ್ಲಿಯೇ ವೈವಿಧ್ಯತೆ ಇದೆ ಆದುದರಿಂದಲೇ ರಾಜಕೀಯ ವ್ಯವಸ್ಥೆಯಲ್ಲಿ ಆಳುವವರ ವಿಷಯದಲ್ಲಿ ನಿರಂತರ ಬದಲಾವಣೆಗಳು ಆಗುತ್ತಿರುತ್ತವೆ, ಹೊಂದಾಣಿಕೆ ನಡೆದಿರುತ್ತದೆ ಎಂದು ವಿವರಿಸುತ್ತಾರೆ. ಯಾವ ಬಗೆಯ ಶ್ರೇಷ್ಠರೂ ನಿರಂತರವಾಗಿ ಆಳ್ವಿಕೆ ನಡೆಸುವುದು ಸಾಧ್ಯವಿಲ್ಲ. ನಿರಂತರ ಅಧಿಕಾರದಲ್ಲಿ ಇರುವುದಕ್ಕಾಗಿ ಅನುವಂಶಿಕತೆ, ಸೈದ್ಧಾಂತಿಕ ತತ್ವ, ಬಲ ಮುಂತಾದವುಗಳನ್ನು ಶ್ರೇಷ್ಠರು ಬಳಸಿಕೊಂಡರೂ ಅದು ಸಾಧ್ಯವಿಲ್ಲ. ಪ್ರಜಾಪ್ರಭುತ್ವವಿರಲಿ, ಶ್ರೀಮಂತರ ಪ್ರಭುತ್ವವಿರಲಿ, ಸಾಮಾನ್ಯ ಪ್ರಜೆಗಳು ಆಳುವವರ ಮೇಲೆ ಪ್ರಭಾವ ಬೀರುವ ಮಾರ್ಗಗಳು ಇದ್ದೇ ಇವೆ. ಆಳುವ ಶ್ರೇಷ್ಠರು ಬಹುಕಾಲ ಅಧಿಕಾರದಲ್ಲಿದ್ದರೆ ಅವರಲ್ಲಿ ಆಲಸ್ಯ ತಲೆದೋರಿ ಅವರು ಬಲಹೀನರ, ಐಷರಾಮಿಗಳೂ, ಭೋಗಿಗಳು ಆಗುತ್ತಾರೆ. ಹೀಗಾದಾಗ ತಮ ಶಕ್ತಿ ಕಳೆದುಕೊಳ್ಳುತ್ತಾರೆ. ಬಲಹೀನ ಶ್ರೇಷ್ಠರನ್ನು ಇನ್ನೊಂದು ಶ್ರೇಷ್ಠರ ಗುಂಪು ವಿರೋಧಿಸಿ ಅಧಿಕಾರ ಕಸಿದುಕೊಳ್ಳುತ್ತದೆ. ಈ ರೀತಿ ಶ್ರೇಷ್ಠರ ಬದಲಾವಣೆಯ ಪ್ರಕ್ರಿಯೆ ನಿರಂತರವಾಗಿ ನಡೆದಿರುತ್ತದೆ.

* ಪ್ರಜಾಪ್ರಭುತ್ವದ ವಿಧಾನಗಳಲ್ಲಿ ವಿಶ್ವಾಸ

ಶ್ರೇಷ್ಠರ ಸಿದ್ಧಾಂತವು ಉದಾರವಾದಿ ಸಿದ್ಧಾಂತದ ಕೆಲವು ಮೂಲಭೂತ ತತ್ವಗಳನ್ನು ವಿರೋಧಿಸಿದ್ದರೂ ಪ್ರಜಾಸತ್ತಾತ್ಮಕ ವಿಧಾನಗಳಲ್ಲಿ ವಿಶ್ವಾಸ ತಳೆದಿದೆ. ರಾಜಕೀಯ ಪ್ರಕ್ರಿಯೆಯಲ್ಲಿ ಪ್ರಜೆಗಳು ಭಾಗವಹಿಸಬೇಕು, ಮತದಾನ ಮುಖ್ಯವಾಗಿದೆ, ಚುನಾವಣೆಯು ಅಗತ್ಯವಾಗಿದೆ ಹಾಗೂ ಆಯ್ಕೆಯಾದವರು ಜವಾಬ್ದಾರರಾಗಿರಬೇಕು ಎಂಬ ವಿಷಯಗಳನ್ನು ಶ್ರೇಷ್ಠರ ಸಿದ್ಧಾಂತ ಒಪ್ಪಿಕೊಳ್ಳುತ್ತದೆ.

* ರಾಜಕೀಯ ಪ್ರಕ್ರಿಯೆಯಲ್ಲಿ ಪ್ರಜೆಗಳ ಸೀಮಿತ ಪಾತ್ರ

ಶ್ರೇಷ್ಠರ ಸಿದ್ಧಾಂತವು ಪ್ರಜೆಗಳು ರಾಜಕೀಯ ಪ್ರಕ್ರಿಯೆಯಲ್ಲಿ ಭಾಗವಹಿಸಬೇಕು ಎಂಬುದನ್ನು ಒಪ್ಪಿಕೊಳ್ಳುತ್ತದೆ. ಆದರೆ ಪ್ರಜೆಗಳು ಎಲ್ಲ ವಿಷಯಗಳಲ್ಲೂ ಭಾಗವಹಿಸಲು ಪ್ರಾರಂಭಿಸಿದರೆ ಅದು ಪ್ರಜಾಪ್ರಭುತ್ವಕ್ಕೆ ಅಪಾಯಕಾರಿ. ಏಕೆಂದರೆ ಜನತೆಗೆ ಸಾಮರ್ಥ್ಯವಾಗಲಿ ಅನುಭವವಾಗಲಿ ಇಲಿಲದೇ ಇರುವುದರಿಂದ ಅವರ ಪಾತ್ರ ಕೇವಲ ಅಭ್ಯರ್ಥಿಗಳ ಆಯ್ಕೆಗೆ ಮಾತ್ರವೇ ಸೀಮಿತವಾಗಿರಬೇಕು. ಪ್ರಜಾಪ್ರಭುತ್ವದ ಉಳಿವಿಗೆ ಇದು ಅತಿ ಅಗತ್ಯವಾಗಿದೆ. ಶ್ರೇಷ್ಠರಿಗೆ ಮಾತ್ರ ನಿರ್ಣಯ ತೆಗೆದುಕೊಳ್ಳುವ ಸಾಮರ್ಥ್ಯವಿದೆ. ಆದುದರಿಂದ ಮತದಾರ ವರ್ಗ ಕೇವಲ ಕಾಲಕಾಲಕ್ಕೆ ನಡೆಯುವ ಚುನಾವಣೆಯಲ್ಲಿ ರಾಜಕೀಯ ಶ್ರೇಷ್ಠರ ಆಯ್ಕೆಯಲ್ಲಿ ಪಾಲ್ಗೊಳ್ಳಬೇಕು.

* ಮತಚಲಾವಣೆಯ ಉದ್ದೇಶ ಕೇವಲ ರಾಜಕೀಯ ಶ್ರೇಷ್ಠರ ಆಯ್ಕೆ

ಉದಾರವಾದಿ ಸಿದ್ಧಾಂತದಲ್ಲಿ ಮತಚಲಾವಣೆ ಪ್ರಜೆಗಳ ಅಭಿಪ್ರಾಯ ವ್ಯಕ್ತಪಡಿಸುವ ಸಾಧನವಾಗಿದೆ. ಆದುದರಿಂದಲೇ ಮತದಾನ ಪ್ರಜಾಪ್ರಭುತ್ವದ ಮೂಲಭೂತ ತತ್ವಗಳಲ್ಲಿಒಂದಾಗಿದೆ. ಆದರೆ ಶ್ರೇಷ್ಠರ ಪ್ರಜಾಪ್ರಭುತ್ವದ ಸಿದ್ಧಾಂತದಲ್ಲಿ ಮತದಾನದ ಮೂಲಕ ಕೇವಲ ಆಳುವವರ ಆಯ್ಕೆ ಮಾಡಬಹುದೇ ಹೊರತು, ಮತದಾನ ಪ್ರಜೆಗಳ ಅಭಿಪ್ರಾಯ ತಿಳಿಸುವ ಸಾಧನವಲ್ಲ. ನಾಯಕರನ್ನು ಆಯ್ಕೆ ಮಾಡುವ ಅವಕಾಶವನ್ನು ಮತಾಧಿಕಾರ ನೀಡುತ್ತದೆ. ಮತಾಧಿಕಾರ ಚಲಾಯಿಸಿ ಆಳುವವರನ್ನು ಬದಲಾಯಿಸಿಬಹುದಾಗಿದೆ. ಡಂಕನ್ ಅವರ ಪ್ರಕಾರ ನಾಯಕರನ್ನು ಬದಲಾಯಿಸುವ ಅಧಿಕಾರವನ್ನು ಮತಾಧಿಕಾರ ಪ್ರಜೆಗಳಿಗೆ ನೀಡುತ್ತದೆ.

* ಮುಖ್ಯ ತೀರ್ಮಾನ ಕೈಗೊಳ್ಳುವ ಸಾಮರ್ಥ್ಯ ಪ್ರಜೆಗಳಿಗೆ ಇಲ್ಲ

ರಾಜಕೀಯ ನಿರ್ಣಯಗಳನ್ನು ತೆಗೆದುಕೊಳ್ಳುವುದು ಹಾಗೂ ರಾಜ್ಯದ ನೀತಿಯನ್ನು ರೂಪಿಸುವುದು ಮತ್ತು ಜಾರಿಗೆ ತರುವ ವಿಷಯದಲ್ಲಿ ಪ್ರಜೆಗಳಿಗೆ ಶ್ರೆಷ್ಠರ ಸಿದ್ಧಾಂತ ಯಾವ ಪಾತ್ರವನ್ನು ನೀಡುವುದಿಲ್ಲ. ಏಕೆಂದರೆ ಪ್ರಜೆಗಳಿಗೆ ಈ ಕಾರ್ಯ ನಿರ್ವಹಿಸಲು ಬೇಕಾಗುವ ಅರ್ಹತೆಯಾಗಲೀ ಸಾಮರ್ಥ್ಯವಾಗಲೀ ಇಲ್ಲ. ಪೆರಟೋರ ಪ್ರಕಾರ ಸಾಮಾನ್ಯವಾಗಿ ಮನುಷ್ಯ ಅತ್ಯಂತ ಬಲಹೀನ ಪ್ರಾಣಿ. ಅವರಿಗೆ ಸ್ವಾಡಳಿತ ನಡೆಸಿಕೊಳ್ಳುವ ಸಾಮರ್ಥ್ಯವಾಗಲೀ ನಿಯಂತ್ರಣ ತತ್ವವಾಗಲಿ ತಿಳಿಯದು. ಸಹಜಪ್ರವೃತ್ತಿಗೆ ಅನುಗುಣವಾಗಿ ವ್ಯಕ್ತಿ ವರ್ತಿಸುತ್ತಾನೆ. ಅಲ್ಲದೆಯೇ ಈ ತತ್ವ ಪ್ರಜಾಪ್ರಭುತ್ವದ ತತ್ವಕ್ಕೆ ವಿರೋಧಿಯಾಗಿಲ್ಲ ಎಂಬುದು ಶ್ರೇಷ್ಠರ ಸಿದ್ಧಾಂತದ ಪ್ರತಿಪಾದಕರ ವಿಚಾರವಾಗಿದೆ. ಏಕೆಂದರೆ ಕಾಲಕಾಲಕ್ಕೂ ನಡೆಯುವ ಚುನಾವಣೆಯಲ್ಲಿ ವ್ಯಕ್ತಿಗಳು ತಮ್ಮ ಅಭಿಪ್ರಾಯವನ್ನು ರಾಜಕೀಯ ಶ್ರೇಷ್ಠರ ಆಯ್ಕೆಯ ಮೂಲಕ ವ್ಯಕ್ತಪಡಿಸಬಹುದಾಗಿದೆ.

* ಶ್ರೇಷ್ಠರ ಪ್ರಜಾಪ್ರಭುತ್ವ ವ್ಯವಸ್ಥೆ ಮುಕ್ತ ವ್ಯವಸ್ಥೆಯಾಗಿದೆ

ಅರ್ಹತೆ ಅನುಭವ, ಸಾಮರ್ಥ್ಯವಿರುವ ಎಲ್ಲ ವ್ಯಕ್ತಿಗಳಿಗೂ ಶ್ರೇಷ್ಠರ ವರ್ಗಕ್ಕೆ ಮುಕ್ತ ಪ್ರವೇಶವಿದೆ. ಸಾಮರ್ಥ್ಯ ಉಳ್ಳವರು ಮಾತ್ರ ಆಳುವ ಶ್ರೇಷ್ಠರಾಗಿರುತ್ತಾರೆ. ಸಮಾಜದ ಪ್ರತಿ ಕ್ಷೇತ್ರದಲ್ಲೂ ಅರ್ಹತೆ ಮುಖ್ಯವೇ ಹೊರತು ಸಂಖ್ಯೆಯಲ್ಲ. ಉದಾರವಾದಿ

ಸಿದ್ಧಾಂತ ಕೇವಲ ಸಂಖ್ಯೆಯ ಗಣನೆಗೆ ಪ್ರಾಮುಖ್ಯತೆ ನೀಡಿ ಅದಕ್ಷ ವ್ಯವಸ್ಥೆಗೆ ಕಾರಣವಾಗುತ್ತದೆ. ಸಮಾಜದಲ್ಲಿ ಅಧಿಕಾರದ ಸ್ಥಾನ ಪಡೆಯಲು ಎಲ್ಲರಿಗೂ ಮುಕ್ತ ಪ್ರವೇಶವಿದ್ದು ಪ್ರತಿಯೊಬ್ಬನೂ ಅಧಿಕಾರಕ್ಕಾಗಿ ನಡೆಯುವ ಪೈಪೋಟಿಯಲ್ಲಿ ಭಾಗವಹಿಸಬಹುದು ಮತ್ತು ಎಲ್ಲ ಕಾಲಕ್ಕೂ ಅಧಿಕಾರದಲ್ಲಿರುವವರು ಮತದಾತೃವರ್ಗಕ್ಕೆ ಜವಾಬ್ದಾರಿಯಾಗಿರಬೇಕು ಎಂಬುದಾಗಿ ಟಿ.ಬಿ ಬಾಟೊಮೋರ್ ಶ್ರೇಷ್ಠರ ಪ್ರಜಾಪ್ರಭುತ್ವದ ಕಲ್ಪನೆಯನ್ನು ವಿವರಿಸುತ್ತಾರೆ.

* **ಆಳುವ ಶ್ರೇಷ್ಠರು ಅಧಿಕಾರದಲ್ಲಿ ಉಳಿಯಲು ಬಳಸುವ ವಿಧಾನ**

ಮೇಲೆ ವಿವರಿಸಿರುವಂತೆ ಆಳುವ ಶ್ರೇಷ್ಠರಲ್ಲಿ ನಿರಂತರ ಬದಲಾವಣೆ ಆಗುತ್ತಲೇ ಇರುತ್ತದೆ. ತಮ್ಮ ಅಧಿಕಾರವನ್ನು ಉಳಿಸಿಕೊಳ್ಳಲು ಅವರು ಪಾಶವೀ ಶಕ್ತಿಯನ್ನು ಬಳಸಿಕೊಳ್ಳುವುದಿಲ್ಲ. ಅದಕ್ಕೆ ಬದಲಾಗಿ ಜನತೆಗೆ ಒಪ್ಪಿಗೆಯಾಗುವ ನೈತಿಕ ತತ್ವಗಳನ್ನೂ ನಂಬಿಕೆ. ವಿಶ್ವಾಸಗಲನ್ನೂ ಬಳಸಿಕೊಳ್ಳುತ್ತಾರೆ. ಅಷ್ಟೇ ಅಲ್ಲದೆ ಮೊಸ್ಕಾ ಅವರ ಪ್ರಕಾರ ಆಳುವ ಶ್ರೇಷ್ಠರಲ್ಲಿ ಹೊಂದಾಣಿಕೆಯ ಮನೋಭಾವವಿರುತ್ತದೆ. ಸಂದರ್ಭಕ್ಕೆ ತಕ್ಕಂತೆ ಹೊಂದಿಕೊಳ್ಳದಿದ್ದರೆ ಅಧಿಕಾರ ಕಳೆದುಕೊಳ್ಳುತ್ತಾರೆ. ತಮ್ಮ ಅದಿಕಾರವನ್ನು ಸ್ಥಿರವಾಗಿಸಿಕೊಳ್ಳಲು ಅರ್ಹತೆ ಹಾಗೂ ಸಾಮರ್ಥ್ಯವಿರುವ ಜಾಣರನ್ನು ತಮ್ಮ ಗುಂಪಿಗೆ ಸೇರಿಸಿಕೊಳ್ಳುತ್ತಾರೆ.

ಅಲ್ಲದೆಯೇ ಸಾಮಾನ್ಯ ಜನತೆಯ ಮನೋಭಾವವೂ ಸಹ ಶ್ರೇಷ್ಠರಿಗೆ ಅಧಿಕಾರ ನೀಡುತ್ತದೆ. ಅನೇಕ ಜನರು ಆಲಸಿಗಳೂ, ನಿರ್ಲಕ್ಷಭಾವದವರೂ ಆಗಿರುತ್ತಾರೆ. ಅವರಿಗೆ ಸ್ವಾತಂತ್ರ್ಯ ಹಿಡಿಸದು, ನಾಯಕರಿದ್ದರೆ ತಾವು ಸುರಕ್ಷಿತರೆಂಬ ಭಾವನೆ ಇರುತ್ತದೆ. ಇಂತಹ ವ್ಯಕ್ತಿಗಳು ಅಂಜುಕುಳಿಗಳೂ, ಆಜ್ಞಾಪಾಲನೆ ಮಾಡುವವರೂ ಆಗಿರುತ್ತಾರೆ. ಈ ಬಗೆಯ ವ್ಯಕ್ತಿಗಳು ಶ್ರೇಷ್ಠರಿಗೆ ಆಳುವ ಅವಕಾಶ ನೀಡುತ್ತಾರೆ ಎಂಬುದಾಗಿ ಮಿಷಲ್ಸ್ ವಿವರಿಸುತ್ತಾನೆ.

ವಿಶ್ವದಲ್ಲಿರುವ ಎಲ್ಲ ಪ್ರಜಾಪ್ರಭುತ್ವಗಳಲ್ಲಿಯೂ ರಾಜಕೀಯ ಪಕ್ಷಗಳಿರುವುದು ಕೆಲವರ ಆಳ್ವಿಕೆಯ ಸೂಚನೆಯಾಗಿದೆ. ರಾಬರ್ಟ್ ಮಿಷಲ್ಸ್ ಅವರ ಪ್ರಕಾರ ಸಂಪೂರ್ಣವಾದ ರಾಜಕೀಯ ಹಕ್ಕುಗಳಿದ್ದರೂ ಎಲ್ಲ ಪ್ರಜೆಗಳೂ ಪರಿಣಾಮಕಾರಿಯಾಗಿ ಆಳ್ವಿಕೆಯಲ್ಲಿ ಪಾಲ್ಗೊಳ್ಳುವುದಿಲ್ಲ. ಜನತೆಯ ರಾಜಕೀಯ ಆಸಕ್ತಿ ತಮ್ಮ ನಾಯಕರನ್ನು ಹಿಂಬಾಲಿಸುವುದರಲ್ಲಿದೆ. ಜನತೆ ಕೇವಲ ಶ್ರೇಷ್ಠ ಆದರ್ಶಗಳಿಗೆ ಮಾತ್ರ ತಲೆಬಾಗುವುದಲ್ಲದೇ ಈ ಶ್ರೇಷ್ಠ ಆದರ್ಶಗಳನ್ನು ಮೇಳೈಸಿಕೊಂಡ ವ್ಯಕ್ತಿಗಳಿಗೆ ತಲೆಬಾಗುತ್ತಾರೆ. ನಾಯಕತ್ವಕ್ಕೆ ಅಗತ್ಯವಾದ ಸಹನೆ, ತ್ಯಾಗದ ಗುಣಗಳು ಕೆಲವರಲ್ಲಿ ಮಾತ್ರವೇ ಇರುತ್ತವೆ. ನಾಯಕತ್ವದ ಸಾಧನಗಳು ಸಾಮರ್ಥ್ಯಗಳು ಹಲವಾರು ವಾಕ್ಚಾತುರ್ಯ, ಜಾಣ್ಮೆ, ಸರ್ಕಾರ ನಡೆಸುವಲ್ಲಿ ವಿಶೇಷ ತಾಂತ್ರಿಕ ಪರಿಣತಿ, ರಾಜಕೀಯ ಜಾಣ್ಮೆ ಮುಂತಾದವು. ಈ ರೀತಿಯಲ್ಲಿ ಪ್ರತಿ ಸಮಾಜದಲ್ಲಿಯೂ ಆಜ್ಞೆ ನೀಡಬಲ್ಲ ನಾಯಕರಿರುತ್ತಾರೆ ಎಂದು ಮಿಷಲ್ಸ್ ಅಭಿಪ್ರಾಯಪಡುತ್ತಾರೆ.

ಬಾಟೊಮೋರ್ ಅವರು ಶ್ರೇಷ್ಠ ಪ್ರಜಾಪ್ರಭುತ್ವದ ವ್ಯವಸ್ಥೆಯ ಲಕ್ಷಣಗಳನ್ನು ಈ ಕೆಳಗಿನಂತೆ ಪಟ್ಟಿಮಾಡಿದ್ದಾರೆ

* ಶ್ರೇಷ್ಠರ ವ್ಯವಸ್ಥೆ ಮುಕ್ತವಾಗಿದೆ
* ಶ್ರೇಷ್ಠರನ್ನು ಅರ್ಹತೆಯ ಆಧಾರದ ಮೇಲೆ ನಿಯಮಿಸಲಾಗುವುದು
* ಶ್ರೇಷ್ಠರು ನಿರಂತರವಾಗಿ ಬದಲಾಗುತ್ತಲೇ ಇರುತ್ತಾರೆ
* ಶ್ರೇಷ್ಠರಲ್ಲಿ ನಡೆಯುವ ಪೈಪೋಟಿಯಲ್ಲಿ ನಿರ್ಣಯಾಧಿಕಾರ ಪ್ರಜೆಗಳಿಗೆ ಇದೆ.
* ಪ್ರಜಾಪ್ರಭುತ್ವದಲ್ಲಿ ಶ್ರೇಷ್ಠರಿಗೆ ಪ್ರಜೆಗಳ ಬೆಂಬಲವಿದೆ
* ಶ್ರೇಷ್ಠರು ಮತ್ತು ಅಧಿಕಾರವರ್ಗದ ನಡುವೆ ಅತಿ ಕಡಿಮೆ ಅಂತರವಿದೆ

ಈ ರೀತಿಯಲ್ಲಿ ಶ್ರೇಷ್ಠರ ಪ್ರಜಾಪ್ರಭುತ್ವದ ಸಿದ್ಧಾಂತ ಮೇಲಿನ ಲಕ್ಷಣಗಳನ್ನು ಒಳಗೊಂಡಿದೆ

ವಿಮರ್ಶೆ

* ಶ್ರೇಷ್ಠರ ಪ್ರಜಾಪ್ರಭುತ್ವದ ಸಿದ್ಧಾಂತವನ್ನು ಪ್ರಜಾಪ್ರಭುತ್ವ ವಿರೋಧಿ ಎಂದು ಟೀಕಿಸಲಾಗುತ್ತದೆ. ಏಕೆಂದರೆ ಪ್ರಜಾಪ್ರಭುತ್ವ ಮೂಲ ತತ್ವವೇ ಸಮಾನತೆಯ ತತ್ವ, ಶ್ರೇಷ್ಠರ ಸಿದ್ಧಾಂತವು ವ್ಯಕ್ತಿಗಳಲ್ಲಿಯ ಅಸಮಾನತೆಯನ್ನು ಆಧಾರ ಸ್ತಂಭವಾಗಿ ಹೊಂದಿರುವುದರಿಂದ ಅದು ಪ್ರಜಾಪ್ರಭುತ್ವದ ಮೂಲ ಕಲ್ಪನೆಯನ್ನೇ ಉಲ್ಲಂಘಿಸುತ್ತದೆ.

* ಜನರಿಂದ, ಜನರಿಗಾಗಿ, ಜನತೆಯೇ ನಡೆಸುವ ಸರ್ಕಾರವೇ ಪ್ರಜಾಪ್ರಭುತ್ವ ಎಂಬುದನ್ನು ಅವಾಸ್ತವಿಕವೆಂದು ಜರಿದು ಜನರಿಗಾಗಿ ಸರ್ಕಾರವಿರಬಹುದು ಆದರೆ ಜನರಿಂದ ಸರ್ಕಾರ ಎಂಬ ಕಲ್ಪನೆಯನ್ನು ಮಿಥ್ಯೆ ಎಂದು ಅಲ್ಲಗಳೆಯುತ್ತದೆ, ಅತ್ಯಂತ ವಿಷದವಾಗಿ ವಿವರಿಸುತ್ತದೆ.

* ಪ್ರಜೆಗಳ ರಾಜಕೀಯ ಚಟುವಟಿಕೆಯನ್ನು ಕೇವಲ ಚುನಾವಣೆಯಲ್ಲಿಯ ಮತಚಲಾವಣೆಗೆ ಸೀಮಿತಗೊಳಿಸುತ್ತದೆ. ಶ್ರೇಷ್ಠರ ಆಳ್ವಿಕೆಯನ್ನು ಪ್ರಶ್ನಿಸುವ, ವಿರೋಧಿಸುವ ಪ್ರಜೆಗಳ ಅಧಿಕಾರ ಕುರಿತು ಏನೂ ಹೇಳುವುದಿಲ್ಲ. ಆಳಿಸಿಕೊಳ್ಳುವವರಿಗೆ ಸಂಕೀರ್ಣ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯವಿಲ್ಲವೆಂದು ಹೇಳುವುದರ ಮೂಲಕ ಅವರಲ್ಲಿರಬಹುದಾದ ಉತ್ತಮ ಗುಣಗಳನ್ನು ಹಾಗೂ ಅರ್ಹತೆಯನ್ನು ಕಡೆಗಣಿಸುತ್ತದೆ.

* ಶಂಪೀಟರ್ ಅವರು ಹೇಳುವಂತೆ ಶ್ರೇಷ್ಠರ ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ ಶ್ರೇಷ್ಠರು ಅತ್ಯಂತ ಉಚ್ಚ ಅರ್ಹತೆ ಹೊಂದಿರಬೇಕು, ನಿರ್ಣಯದ ವಿಧಾನದಲ್ಲಿ ಸಾಧ್ಯವಾದಷ್ಟೂ ಕಡಿಮೆ ವ್ಯಕ್ತಿಗಳೂ ಪಾಲ್ಗೊಳ್ಳಬೇಕು, ಅಧಿಕಾರಿಗಳು ಅತಿ ಹೆಚ್ಚು ಸಾಮರ್ಥ್ಯ ಉಳ್ಳವರಾಗಿರಬೇಕು ಹಾಗೂ ಅವರಿಗೆ ಆತ್ಮ ನಿಗ್ರಹವಿರಬೇಕು. ಈ ಎಲ್ಲ ಅಂಶಗಳೂ ಅಸ್ತಿತ್ವದಲ್ಲಿರುವುದು ಸರಳವೇನೂ ಅಲ್ಲ. ಇದೊಂದು ಅತಿ ಕಠಿಣವಾದ ವಿಷಯ. ಆದುದರಿಂದ ಶ್ರೇಷ್ಠರ ಆಳ್ವಿಕೆಯನ್ನು ವಾಸ್ತವನ್ನಾಗಿಸುವುದು ಅತಿ ಕಠಿಣ ಕಾರ್ಯವಾಗಿದೆ.

ಶ್ರೇಷ್ಠರ ಪ್ರಜಾಪ್ರಭುತ್ವದ ಸಿದ್ಧಾಂತದಲ್ಲಿ ಕೆಲವು ದೋಷಗಳಿದ್ದರೂ ಕೈಗಾರಿಕಾ ಕ್ರಾಂತಿಯ ನಂತರದ ಬೆಳವಣಿಗೆಯಿಂದ ಇಂದಿನ ಸಮಾಜದಲ್ಲಿ ಪ್ರತಿ ಕ್ಷೇತ್ರದಲ್ಲೂ ಅರ್ಹತೆ, ಸಾಮರ್ಥ್ಯ ಮುಖ್ಯವಾಗಿದೆ. ಸಂಖ್ಯೆಯಾಧರಿತ ಉದಾರವಾದಿ ಪ್ರಜಾಪ್ರಭುತ್ವದ ಸಿದ್ಧಾಂತವು ಪ್ರಜಾಪ್ರಭುತ್ವದ ವ್ಯವಸ್ಥೆಯ ಕೆಲ ಸಮಸ್ಯೆಗಳಿಗೆ ಪರಿಣಾಮಕಾರಿ ಪರಿಹಾರ ನೀಡುವಲ್ಲಿ ವಿಫಲವಾದಾಗ ಶ್ರೇಷ್ಠರ ಪ್ರಜಾಪ್ರಭುತ್ವದ ಕಲ್ಪನೆ ರಾಜಕೀಯ ಸಿದ್ಧಾಂತದಲ್ಲಿ ಇನ್ನೊಂದು ಸಿದ್ಧಾಂತವಾಗಿ ಹುಟ್ಟಿಕೊಂಡಿತು. ಪ್ರತಿಯೊಬ್ಬರಿಗೂ ಅವಕಾಶ ನೀಡುವ ಈ ಕಲ್ಪನೆಯು ದಕ್ಷವಾದ ವ್ಯವಸ್ಥೆಗೆ ಕಾರಣವಾಗಬಹುದು. ಆಳುವ ಶ್ರೇ,ಠರನ್ನು ಜವಾಬ್ದಾರಿಯುತರನ್ನಾಗಿ ಮಾಡುವುದರ ಮೂಲಕ; ಜನರ ಹಿತದೃಷ್ಟಿಯಿಂದ ಶ್ರೇಷ್ಠರಲ್ಲಿ ನಡೆಯುವ ಪೈಪೋಟಿಯನ್ನು ನಿಯಂತ್ರಿಸುವುದರ ಮೂಲಕ, ವಿಕೇಂದ್ರೀಕೃತ ಸಂಸ್ಥೆಗಳನ್ನು ಸ್ಥಾಪಿಸಿ ಎಲ್ಲ ಶ್ರೇಷ್ಠರನ್ನು ಸಮಾಜದ ಒಳಿತಿಗಾಗಿ ಬಳಸಿಕೊಳ್ಳುವುದರ ಮೂಲಕ ಶ್ರೇಷ್ಠರ ಸಿದ್ಧಾಂತ ಮತ್ತು ಪ್ರಭಾಪ್ರಭುತ್ವದ ಆದರ್ಶಗಳ ನಡುವೆ ಹೊಂದಾಣಿಕೆ ತರಬಹುದಾಗಿದೆ.

## 18.3 ಪ್ರಜಾಪ್ರಭುತ್ವದ ಬಹುತ್ವ ಸಿದ್ಧಾಂತ

ಸಮಾಜದ ಸಾಂಸ್ಥಿಕ ಸ್ವರೂಪ ಹಾಗೂ ಅಧಿಕಾರ ವ್ಯವಸ್ಥೆ ಬಹುತ್ವವಾದಿಯಾಗಿದೆ. ಅನೇಕ ಖಾಸಗಿ ಗುಂಪುಗಳು, ಒತ್ತಡದ ಗುಂಪುಗಳು, ವ್ಯಕ್ತಿಗಳು ರಾಜ್ಯದ ಅಧಿಕಾರದಲ್ಲಿ ಪಾಲುದಾರರಾಗಿದ್ದಾರೆ. ಸರ್ಕಾರದ ವಿವಿಧ ಅಂಶಗಳಲ್ಲಿಯೂ ಅಧಿಕಾರ ಹಂಚಲ್ಪಟ್ಟಿದೆ

ಎಂಬುದು ಬಹುತ್ವವಾದಿಗಳ ವಿಚಾರವಾಗಿದೆ. ಅಲ್ಲದೆಯೇ ಪ್ರೆಸ್ಥೂಸ್ ಅವರು ಹೇಳುವಂತೆ ರಾಜ್ಯಾಧಿಕಾರವು ರಾಜ್ಯ ಮತ್ತು ಅನೇಕ ಖಾಸಗಿ ಗುಂಪುಗಳಲ್ಲಿ, ವ್ಯಕ್ತಿಗಳಲ್ಲಿ ಹಂಚಿಕೆಯಾಗಿದೆ. ಈ ರೀತಿಯಲ್ಲಿ ರಾಜ್ಯಾಧಿಕಾರದ ಕೇಂದ್ರೀಕರಣ ತತ್ವಕ್ಕೆ ವಿರುದ್ಧವಾಗಿ ಬಹುತ್ವವಾದಿಗಳು ಅಧಿಕಾರದ ವಿಕೇಂದ್ರೀಕರಣವನ್ನು ಒಪ್ಪಿಕೊಳ್ಳುತ್ತಾರೆ.

ಪ್ರಜಾಪ್ರಭುತ್ವದ ಬಹುತ್ವವಾದಿ ಸಿದ್ಧಾಂತಗಳು ಉದಾರವಾದಿಗಳ ಹಾಗೂ ಶ್ರೇಷ್ಠರ ಪ್ರಜಾಪ್ರಭುತ್ವದ ಕಲ್ಪನೆಯನ್ನು ಒಪ್ಪಿಕೊಳ್ಳುವುದಿಲ್ಲ. ಸಾಂಪ್ರದಾಯಿಕ ಉದಾರವಾದಿಗಳ ಪ್ರಕಾರ ರಾಜ್ಯಾಧಿಕಾರವು ಪ್ರಜೆಗಳಲ್ಲಿದೆ. ಸಾಂಪ್ರದಾಯಿಕ ಶ್ರೇಷ್ಠರ ಪ್ರಜಾಪ್ರಭುತ್ವದ ಪ್ರತಿಪಾದಕರ ಪ್ರಕಾರ ರಾಜ್ಯಾಧಿಕಾರ ರಾಜಕೀಯ ಶ್ರೇಷ್ಠರಲ್ಲಿದೆ. ಆದರೆ ಪ್ರಜಾಪ್ರಭುತ್ವ ಬಹುತ್ವವಾದಿ ಸಿದ್ಧಾಂತವು ಈ ಎರಡೂ ತತ್ವಗಳನ್ನೂ ಅಲ್ಲಗಳೆದು ರಾಜ್ಯಾಧಿಕಾರವು ವಿಕೇಂದ್ರೀಕೃತವಾಗಿದ್ದು, ಸರ್ಕಾರ, ನಾಯಕರು, ಗುಂಪುಗಳು ಮತ್ತು ಅನೇಕ ಸಂಘ ಸಂಸ್ಥೆಗಳಲ್ಲಿ ಹಂಚಿಕೆಯಾಗಿದೆ ಎಂದು ವಿವರಿಸುತ್ತಾರೆ.

ದಹಲ್, ಬೆರಿಲ್‌ಸನ್, ಸಾರ್ತೋರಿ, ಎಚ್ ಎಕ್‌ಸ್ಟೀನ್, ವ್ಹಿ. ಪ್ರಸ್ಥೂಸ್, ಎಫ್.ಹಂಟರ್, ಆಗರ್ ಮುಂತಾದವರ ಈ ಸಿದ್ಧಾಂತದ ಪ್ರತಿಪಾದಕರಲ್ಲಿ ಅಗ್ರಗಣ್ಯರಾಗಿದ್ದಾರೆ. ಪ್ರಜಾಪ್ರಭುತ್ವದ ಬಹುತ್ವವಾದಿ ಸಿದ್ಧಾಂತವು ಬಹುತ್ವವಾದದ ಮುಂದುವರಿಕೆಯಾಗಿದೆ. ರಾಜ್ಯದಲ್ಲಿರುವ ವಿವಿಧ ಸಂಘ-ಸಂಸ್ಥೆಗಳನ್ನು ಬಹುತ್ವವಾದ ಮುಖ್ಯವೆಂದು ಪರಿಗಣಿಸುತ್ತದೆ. ಈ ಸಂಸ್ಥೆಗಳು ತಮ್ಮದೇ ಆದ ವ್ಯಕ್ತಿತ್ವವನ್ನು ಉದ್ದೇಶವನ್ನು ಅಧಿಕಾರವನ್ನೂ ಹಕ್ಕು ಕರ್ತವ್ಯಗಳನ್ನು ಹೊಂದಿವೆ. ಮೇಟ್ ಲ್ಯಾಂಡ್, ಎಮಿಲಿ ಡರ್ಕಹೀಮ್ ಮುಂತಾದವರು ವಿವಿಧ ಗುಂಪುಗಳು, ಸಂಘಸಂಸ್ಥೆಗಳ ಪ್ರಾಮುಖ್ಯತೆಯನ್ನು ಮನ್ನಿಸುತ್ತಾರೆ. ಸಮಾಜವು ಅನೇಕ ಸಂಘ-ಸಂಸ್ಥೆಗಳನ್ನು ಒಳಗೊಂಡಿದೆ. ಈ ಸಂಘ-ಸಂಸ್ಥೆಗಳಿಗೆ ಸ್ವತಂತ್ರ ಅಸ್ತಿತ್ವವಿದೆ ಆದುದರಿಂದ ಅವುಗಳಿಗೆ ಸ್ವಾಯತ್ತತೆ ಇರಬೇಕು ಎಂಬುದು ಬಹುತ್ವವಾದಿಗಳ ವಾದವಾಗಿದೆ. ಕೇವಲ ಸಮಾಜ ಮಾತ್ರ ಬಹುತ್ವ ಸ್ವರೂಪ ಪಡೆದಿಲ್ಲ ಅಧಿಕಾರವೂ ಬಹುತ್ವ ಸ್ವರೂಪ ಪಡೆದಿದೆ ಎಂಬುದು ಬಹುತ್ವವಾದಿಗಳ ತಾತ್ವಿಕ ನಿಲುವಾಗಿದೆ. ಜೆ.ಡಿ.ಎಚ್.ಕೋಲ್, ಅರ್ನೆಸ್ಟ್ ಬಾರ್ಕರ್, ಜೆ.ಎನ್.ಫಿಗ್ಸ್, ಎ.ಡಿ. ಲಿಂಡ್ಸೆ, ಮೇರಿ ಎಮ್. ಫಾಲೇಟ್, ದುಗ್ವಿ, ಕ್ರಾಬ್ ಮುಂತಾದವರು ಬಹುತ್ವವಾದಿ ಸಿದ್ಧಾಂತದ ಪ್ರಮುಖ ಪ್ರತಿಪಾದಕರಾಗಿದ್ದಾರೆ.

ಬಹುತ್ವವಾದಿ ಪ್ರಜಾಪ್ರಭುತ್ವದ ಪರಿಕಲ್ಪನೆಯು ಅಸ್ಪಷ್ಟವಾಗಿದೆ. ಆದುದರಿಂದ ನಿಶ್ಚಿತ ಅರ್ಥವಿವರಣೆ ನೀಡುವುದು ಕಠಿಣ. ಏಕೆಂದರೆ ವಿವಿಧ ರೀತಿಯಲ್ಲಿ ಈ ಸಿದ್ಧಾಂತವನ್ನು ಮಂಡಿಸಲಾಗುತ್ತದೆ. ಜೋಸೆಫ್ ಎ ಶಂಪೀಟರ್ ಅವರ ಕ್ಯಾಪಿಟಲಿಸಂ, ಸೋಶಿಯಲಿಸಂ ಆಂಡ್ ಡೆಮಾಕ್ರಸಿ ಎಂಬ ಕೃತಿಯಲ್ಲಿ ಪ್ರಥಮ ಬಾರಿಗೆ ಪ್ರಜಾಪ್ರಭುತ್ವದ ಬಹುತ್ವವಾದಿ ಪರಿಕಲ್ಪನೆಯನ್ನು ವಿವರಿಸಲಾಯಿತು. ನಂತರದಲ್ಲಿ ರಾಬರ್ಟ್ ಧಾಲ್ ಈ ಸಿದ್ಧಾಂತಕ್ಕೆ ಹೆಚ್ಚಿನ ವಿವರಣೆ ನೀಡಿದರು. ಅಶೀರ್ವಾದಂ ಅವರು ಬಹುತ್ವವಾದಿ ಪ್ರಜಾಪ್ರಭುತ್ವದ ಸಿದ್ಧಾಂತವನ್ನು ಉದಾರವಾದಿ ಸಿದ್ಧಾಂತದ ವಾಸ್ತವಿಕ ರೂಪವೆಂದು ಕರೆದಿದ್ದಾರೆ.

ಬಹುತ್ವವಾದಿ ಪ್ರಜಾಪ್ರಭುತ್ವದ ಪ್ರತಿಪಾದಕರು ಜೆ.ಎಸ್.ಮಿಲ್, ಬಾರ್ಕರ್, ಗ್ರೀನ್ ಮುಂತಾದವರು ಪ್ರತಿಪಾದಿಸಿದ ಪ್ರಜಾಪ್ರಭುತ್ವದ ಕಲ್ಪನೆಯನ್ನು ಒಪ್ಪಿಕೊಳ್ಳುವುದಿಲ್ಲ. ಸಾಂಪ್ರದಾಯಿಕ ಸಿದ್ಧಾಂತಗಳ ಪ್ರಕಾರ ಪ್ರಜಾಪ್ರಭುತ್ವವು ನೈತಿಕ ಪರಿಕಲ್ಪನೆಯಾಗಿದ್ದು ಪೌರರ ನೈತಿಕ ಜೀವನವನ್ನು ಸುಧಾರಿಸುವ ಉದ್ದೇಶ ಹೊಂದಿದೆ. ವಾಸ್ತವವಾದಿಗಳಾದ ಬಹುತ್ವವಾದಿಗಳು ಈ ಕಲ್ಪನೆಯನ್ನು ವಿರೋಧಿಸುತ್ತಾರೆ. ಅವರ ಪ್ರಕಾರ ಪ್ರಜಾಪ್ರಭುತ್ವವು ವ್ಯಕ್ತಿಗಳ ಬೆಳವಣಿಗೆಯ ಉದ್ದೇಶ ಹೊಂದಿದ ಸಾಮಾಜಿಕ-ರಾಜಕೀಯ ವ್ಯವಸ್ಥೆಯಲ್ಲ ಬದಲಾಗಿ ರಾಜಕೀಯ ಮಾರುಕಟ್ಟೆಯಲ್ಲಿ ಮತದಾರ ವರ್ಗ ತನ್ನ ಬೇಡಿಕೆಗಳನ್ನು ಮಂಡಿಸುವ ಸಾಧನವಾಗಿದೆ.

### ಬಹುತ್ವವಾದಿ ಪ್ರಜಾಪ್ರಭುತ್ವದ ಪ್ರಮುಖ ತತ್ವಗಳು

ಬಹುತ್ವವಾದಿ ಪ್ರಜಾಪ್ರಭುತ್ವದ ಕಲ್ಪನೆ ಬಹುತ್ವವಾದಿ ಸಿದ್ಧಾಂತದ ತಾತ್ವಿಕ ನೆಲೆಗಟ್ಟನ್ನು ಆಶ್ರಯಿಸಿದೆ. ಸಮಾಜದಲ್ಲಿರುವ

ಸಂಘ-ಸಂಸ್ಥೆಗಳು ತಮ್ಮದೇ ಆದ ವ್ಯಕ್ತಿತ್ವ, ಅಧಿಕಾರ ಹೊಂದಿರುವುದಲ್ಲದೇ ರಾಜ್ಯದ ಪರಮಾಕಾರದ ಮೇಲಿನ ಮಿತಿಗಳೂ ಆಗಿವೆ. ಪರಮಾಧಿಕಾರ ರಾಜ್ಯಕ್ಕೆ ಮಾತ್ರವೇ ವಿಶೇಷವಾಗಿ ಇರುವ ಅಧಿಕಾರವಲ್ಲ. ತಮ್ಮತಮ್ಮ ಕ್ಷೇತ್ರದಲ್ಲಿ ಸಂಸ್ಥೆಗಳು ಪರಮಾಧಿಕಾರಿಗಳೇ ಎಂಬ ತತ್ವವನ್ನು ಆಧರಿಸಿ ವಿಕೇಂದ್ರೀಕರಣ, ಮತ್ತು ಸ್ಥಳೀಯ ಘಟಕಗಳ ಪ್ರಾಮುಖ್ಯತೆಯನ್ನು ಈ ಸಿದ್ಧಾಂತ ಪ್ರತಿಪಾದಿಸುತ್ತದೆ. ಇಂದಿನ ಬಹುತ್ವ ಸಮಾಜದಲ್ಲಿ ಈ ಕಲ್ಪನೆ ಅತ್ಯಂತ ಸಮರ್ಪಕವೆನಿಸುತ್ತದೆ. ಈ ವಿಚಾರಗಳಿಂದ ಪ್ರಭಾವಿತರಾದ ಬಹುತ್ವವಾದಿಗಳು ತಮ್ಮದೇ ಆದ ಪ್ರಜಾಪ್ರಭುತ್ವದ ಸಿದ್ಧಾಂತವನ್ನು ನೀಡಿದ್ದಾರೆ. ಈ ಸಿದ್ಧಾಂತದ ಮೂಲ ತತ್ವಗಳನ್ನು ಈ ಕೆಳಗಿನಂತೆ ವಿವರಿಸಬಹುದು.

* ಮುಕ್ತ ರಾಜಕೀಯ ವ್ಯವಸ್ಥೆ

ಬಹುತ್ವವಾದಿ ಪ್ರಜಾಪ್ರಭುತ್ವ ಸಿದ್ಧಾಂತವು ಪ್ರತಿ ವ್ಯಕ್ತಿಯೂ ಸಂಘ-ಸಂಸ್ಥೆ ಕಟ್ಟಿಕೊಳ್ಳುವ ಸ್ವಾತಂತ್ರವನ್ನು ಹೊಂದಿದ್ದಾನೆ ಎಂಬ ತತ್ವವನ್ನು ಆಧರಿಸಿವೆ. ಸಮಾಜದಲ್ಲಿ ಅಸ್ತಿತ್ವದಲ್ಲಿರುವ ಅನೇಕ ಸಂಘ-ಸಂಸ್ಥೆಗಳು ವ್ಯಕ್ತಿಸ್ವಾತಂತ್ರದ ಫಲವಾಗಿವೆ. ಐಚ್ಛಿಕವಾಗಿ ರೂಪಿಸಿಕೊಂಡ ಈ ಸಂಸ್ಥೆಗಳ ಮೂಲಕ ವ್ಯಕ್ತಿ ರಾಜಕೀಯ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಾನೆ. ವ್ಯಕ್ತಿಯು ಸಂಘ-ಸಂಸ್ಥೆಗಳ ಮೂಲಕ ತನ್ನ ಅಭಿಪ್ರಾಯ ವ್ಯಕ್ತಪಡಿಸಿ ರಾಜಕೀಯ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುತ್ತಾನೆ. ಇಲ್ಲಿ ರಾಜಕೀಯ ಪಕ್ಷಗಳ ಉದಾಹರಣೆ ಅತ್ಯಂತ ಸಮಂಜಸವಾಗಿದೆ. ವ್ಯಕ್ತಿಗಳು ಸಂಘಟಿತರಾಗಿ ರಾಜಕೀಯ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುತ್ತಾರೆ. ಆದುದರಿಂದ ಪರಿಣಾಮಕಾರಿಯಾಗಿ ತಮ್ಮ ಪ್ರಭಾವ ಬೀರುತ್ತಾರೆ.

* ಅಧಿಕಾರ ಹಾಗೂ ಪ್ರಭಾವದ ಬಹು ಕೇಂದ್ರಗಳು

ರಾಜಕೀಯ ವ್ಯವಸ್ಥೆಯು ಮುಕ್ತವಾಗಿರುವುದರಿಂದ ರಾಜಕೀಯ ಸಮುದಾಯದಲ್ಲಿ ಅನೇಕ, ಬಹುವಿಧದ ಅಧಿಕಾರ ಕೇಂದ್ರಗಳಿರುತ್ತವೆ. ಈ ಶಕ್ತಿಗಳ ನಡುವೆ ಯಾವಾಗಲೂ ಪೈಪೋಟಿ ನಡೆಯುತ್ತಲೇ ಇರುತ್ತದೆ. ಈ ಮುಕ್ತ ವ್ಯವಸ್ಥೆಯ ಮೇಲೆ ಯಾವುದೇ ಬಾಹ್ಯ ನಿಯಂತ್ರಣವಾಗಲೀ ಅಥವಾ ಪೈಪೋಟಿಗೆ ತಡೆಯಾಗಲೀ ಇಲ್ಲದಿರುವಾಗ ಮಾತ್ರವೇ ಪ್ರಜಾಪ್ರಭುತ್ವ ಸಾಧ್ಯವಾಗುತ್ತದೆ ಎಂಬುದಾಗಿ ಬಹುತ್ವವಾದಿಗಳು ಅಭಿಪ್ರಾಯಪಡುತ್ತಾರೆ.

* ಅಧಿಕಾರ ವಿಕೇಂದ್ರೀಕರಣ

ಬಹು ವಿವಿಧ ಶಕ್ತಿ ಕೇಂದ್ರಗಳಿರುವುದರಿಂದ ಅಧಿಕಾರ ವಿಕೇಂದ್ರೀಕರಣವೂ ಇರುತ್ತದೆ. ಯಾವುದೇ ಪಕ್ಷ, ವ್ಯಕ್ತಿ, ಸಂಘ ಅಥವ ಸಂಸ್ಥೆಯಲ್ಲಿ ಅಧಿಕಾರ ಕೇಂದ್ರೀಕರಣವನ್ನು ಬಹುತ್ವವಾದಿ ಸಿದ್ಧಾಂತ ವಿರೋಧಿಸುತ್ತದೆ. ಅಧಿಕಾರ ಕೇಂದ್ರೀಕರಣದ ಅಪಾಯಗಳನ್ನು ಗುರುತಿಸಿ, ಎಚ್ಚರಿಕೆ ನೀಡುತ್ತದೆ. ಅಧಿಕಾರ ಕೇಂದ್ರೀಕರಣ ನಿರಂಕುಶಾಧಿಕಾರ ಮತ್ತು ಸ್ವಾತಂತ್ರದ ನಷ್ಟಕ್ಕೂ ಕಾರಣವಾಗುತ್ತದೆ. ಈ ವ್ಯವಸ್ಥೆಗೆ ಬದಲಾಗಿ ಸಂಘ-ಸಂಸ್ಥೆಗಳನ್ನು ಕಟ್ಟಿಕೊಳ್ಳುವ ಸ್ವಾತಂತ್ರವನ್ನು ಎತ್ತಿ ಹಿಡಿಯುವ ಬಹುತ್ವವಾದಿಗಳು ರಾಜ್ಯಾಧಿಕಾರವು ರಾಜಕೀಯ ಮತ್ತು ರಾಜಕೀಯವಲ್ಲದ ಸಂಘ-ಸಂಸ್ಥೆಗಳಲ್ಲಿ ಹಂಚಲ್ಪಟ್ಟಿರುವುದನ್ನು ವಿವರಿಸುತ್ತಾರೆ.

* ನಿರ್ಣಯ ತೆಗೆದುಕೊಳ್ಳುವಲ್ಲಿ ವಿವಿಧ ಪ್ರಮುಖ ಪಾತ್ರವಹಿಸುತ್ತವೆ. ರಾಬರ್ಟ್‌ಧಾಲ್ ಅವರ ಪ್ರಕಾರ ನಿರ್ಣಯಗಳನ್ನು ಅನೇಕ ಪಡೆಗಳಲ್ಲಿ ತೆಗೆದುಕೊಳ್ಳಲಾಗುತ್ತದೆ. ಸರ್ಕಾರದ ನೀತಿಯ ರಚನೆಯಲ್ಲಿ ಕೇವಲ ಸರ್ಕಾರ ಮಾತ್ರ ಪಾಲ್ಗೊಳ್ಳದೆ ಅನೇಕ ಗುಂಪುಗಳು ಭಾಗವಹಿಸುತ್ತವೆ. ಉದ್ಯಮಿಗಳು, ವ್ಯಾಪಾರಿಗಳು, ಕಾರ್ಮಿಕ ಸಂಘಟನೆಗಳು, ರಾಡಕೀಯ ಪಕ್ಷಗಳು, ರಾಜಕಾರಣಿಗಳು, ರೈತರು, ವಿವಿಧ ವೃತ್ತಿ ಗುಂಪುಗಳು ಈ ರೀತಿಯಲ್ಲಿ ಅನೇಕ ಬಗೆಯ ಸಂಘ-ಸಂಸ್ಥೆಗಳು ಸರ್ಕಾರದ ನೀತಿಯ ರಚನೆಯಲ್ಲಿ ವಿವಿಧ ರೀತಿಯಲ್ಲಿ ವಿವಿಧ ಹಂತಗಳಲ್ಲಿ ಪಾಲ್ಗೊಳ್ಳುತ್ತವೆ.



VOP_FL_MA_Pol_Sci_C-8(1-7)_TF.20_F.No.63
63

* ಈ ಗುಂಪುಗಳ ಪ್ರಭಾವವನ್ನುಪರಿಮಾಣೀಕರಿಸುವುದು ಸುಲಭದ ಮಾತಲ್ಲ. ಕೆಲವು ಗುಂಪುಗಳು, ವ್ಯಕ್ತಿಗಳು ಹೆಚ್ಚು ಪ್ರಭಾವ ಬೀರಿದರೆ ಇನ್ನು ಕೆಲವು ಗುಂಪುಗಳ ಪ್ರಭಾವ ಅತಿ ಕಡಿಮೆ ಇರಬಹುದು. ಆದರೆ ಯಾವ ಗುಂಪನ್ನು ನಿರ್ಲಕ್ಷಿಸಲಾಗದು. ಯಾವ ಗುಂಪೂ ಸಂಪೂರ್ಣವಾಗಿ ತನ್ನ ಹಿತಾಸಕ್ತಿಯನ್ನು ಸರ್ಕಾರದ ಮೂಲಕ ಸಾಧಿಸಿಕೊಳ್ಳದು ಏಕೆಂದರೆ ಇತರ ಗುಂಪುಗಳ ಹಿತಾಸಕ್ತಿಗೇನಾದರೂ ಧಕ್ಕೆಯಾದರೆ ಸರ್ಕಾರದ ನೀತಿಯನ್ನು ವಿರೋಧಿಸುವಲ್ಲಿ ಅತೃಪ್ತ ಗುಂಪುಗಳು ಒಂದಾಗುತ್ತವೆ. ಈ ರೀತಿಯಲ್ಲಿ ಸರ್ಕಾರದ ನೀತಿ ರೂಪಿಸುವುದರಲ್ಲಿ ಹಾಗೂ ಅದನ್ನು ಆಚರಣೆಗೆ ತರುವಲ್ಲಿ ವಿವಿಧ ಗುಂಪುಗಳ ಪಾತ್ರವನ್ನು ಗುರುತಿಸಲೇಬೇಕಾಗುತ್ತದೆ ಎಂಬುದು ಬಹುತ್ವವಾದಿಗಳ ಅಭಿಪ್ರಾಯವಾಗಿದೆ. ಈ ಸಂದರ್ಭದಲ್ಲಿ ಅಮೇರಿಕೆಯ ರಾಜಕೀಯ ವ್ಯವಸ್ಥೆಯಲ್ಲಿನ ಪ್ರಧಾನ ಪಾತ್ರವಹಿಸುತ್ತಿರುವ ಒತ್ತಡ ಗುಂಪುಗಳ ಪಾತ್ರ ಉಲ್ಲೇಖನೀಯ.

*** ಸಾಮರಸ್ಯ ರಾಜಕಾರಣದ ಪ್ರಾಮುಖ್ಯತೆ**

ಹಂಟರ್ ಅವರು ಹೇಳುವಂತೆ ವ್ಯಕ್ತಿಗಳು ಸಾಂಘಿಕ ರೂಪದಲ್ಲಿದ್ದರೆ ಮಾತ್ರ ಪರಿಣಾಮಕಾರಿಯಾಗಬಲ್ಲರು. ವ್ಯಕ್ತಿಗಳು ಸಂಘ-ಸಂಸ್ಥೆಗಳ ಮೂಲಕ ತಮ್ಮ ಅಭಿಪ್ರಾಯವನ್ನು ಅಭಿವ್ಯಕ್ತಗೊಳಿಸುತ್ತಾರೆ. ಅನೇಕ ಸಂಘ-ಸಂಸ್ಥೆಗಳ ನಡುವೆ ರಾಜ್ಯಾಧಿಕಾರ ಹಂಚಲ್ಪಟ್ಟಿದೆ ಎಂಬ ತಾತ್ವಿಕ ತಳಹದಿ ಹೊಂದಿರುವ ಬಹುತ್ವವಾದಿ ಪ್ರಜಾಪ್ರಭುತ್ವವು ಸಾಮರಸ್ಯ ರಾಜಕಾರಣದ ತತ್ವಕ್ಕೂ ಪ್ರಾಮುಖ್ಯತೆ ನೀಡಿದೆ. ಚರ್ಚೆಯ ಮೂಲಕ ವಿಭಿನ್ನ ಗುಂಪುಗಳು ಒಂದು ನಿರ್ಣಯಕ್ಕೆ ಬರಲು ಸಾಧ್ಯ. ಆದುದರಿಂದ ಸರ್ಕಾರದ ನೀತಿ ರೂಪಿಸುವಲ್ಲಿ ಈ ಗುಂಪುಗಳು ಹಾಗೂ ಸರ್ಕಾರದ ನಡುವೆ ಸಾಮರಸ್ಯವೇರ್ಪಡುತ್ತದೆ. ಎಲ್ಲರ ಜೊತೆಯಲ್ಲೂ ಚರ್ಚಿಸಿ ತೆಗೆದುಕೊಂಡ ನಿರ್ಣಯಕ್ಕೆ, ನಿರ್ಣಯ ತೆಗೆದುಕೊಳ್ಳುವಲ್ಲಿ ಪಾಲ್ಗೊಂಡ ಎಲ್ಲ ಗುಂಪುಗಳೂ ಬದ್ಧವಾಗಿರುತ್ತವೆ. ಆದುದರಿಂದ ಇಂತಹ ವ್ಯವಸ್ಥೆಯಲ್ಲಿ ಪ್ರಜೆಗಳ ನಿಷ್ಠೆ ಹಾಗೂ ಕಾನೂನುಬದ್ಧತೆ ದೊರೆಯುವುದು ನಿಶ್ಚಿತ.

*** ವ್ಯಕ್ತಿಗಳ ವಿವೇಚನಾಶಕ್ತಿಯಲ್ಲಿ ವಿಶ್ವಾಸ**

ಬಹುತ್ವವಾದಿ ಪ್ರಜಾಪ್ರಭುತ್ವವು ವ್ಯಕ್ತಿಗಳ ವಿವೇಚನಾಶಕ್ತಿಯಲ್ಲಿ ವಿಶ್ವಾಸ ತಳೆದಿದೆ. ಆದರೆ ಇಲ್ಲಿ ವ್ಯಕ್ತಿ ಕೇವಲ ಪ್ರತ್ಯೇಕಿತ ವ್ಯಕ್ತಿಯಾಗಿ ರಾಜಕೀಯ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳದೆ ಸಂಘಟಿತ ರೂಪದಲ್ಲಿ ಸಂಘ-ಸಂಸ್ಥೆಗಳ ಮೂಲಕ ಪಾಲ್ಗೊಳ್ಳುತ್ತಾನೆ. ಒಂದೇ ಬಗೆಯ ಹಿತಾಸಕ್ತಿಯುಳ್ಳ, ಒಂದೇ ಮನೋಭಾವದ, ಒಂದೇ ಬಗೆಯ ಉದ್ದೇಶಗಳುಳ್ಳ ವ್ಯಕ್ತಿಗಳು ತಮ್ಮ ಉದ್ದೇಶ ಸಾಧನೆಗಾಗಿ ವಿವಿಧ ಬಗೆಯ ಸಂಘ-ಸಂಸ್ಥೆಗಳನ್ನು ಕಟ್ಟಿಕೊಳ್ಳುತ್ತಾರೆ. ಇವುಗಳ ಮೂಲಕ ರಾಜ್ಯವೆಂಬ ಸಂಸ್ಥೆಯನ್ನು, ರಾಜಕೀಯ ಪ್ರಕ್ರಿಯೆಯನ್ನೂ ಬಳಸಿಕೊಂಡು ತಮ್ಮ ಹಿತಸಾಧನೆ ಮಾಡಿಕೊಳ್ಳುತ್ತಾರೆ. ಈ ರೀತಿಯಲ್ಲಿ ಬಹುತ್ವವಾದಿಗಳು ವ್ಯಕ್ತಿಗಳು ಅವನ ಸಾಂಘಿಕ ರೂಪದಲ್ಲಿ ಗುರುತಿಸುತ್ತಾರೆ.

*** ಚುನಾವಣಾ ವಿಧಾನದಲ್ಲಿ ವಿಶ್ವಾಸ**

ಮುಖ್ಯ ವಿಷಯಗಳ ಕುರಿತಂತೆ ಜನತೆಯ ಅಭಿಪ್ರಾಯವನ್ನು ಅರಿಯಲು ಚುನಾವಣೆಯ ವಿಧಾನ ಅತ್ಯಂತ ಯುಕ್ತವಾಗಿದೆ ಎಂಬುದು ಬಹುತ್ವವಾದಿಗಳ ವಿಚಾರವಾಗಿದೆ. ಪ್ರೆಸ್ಥೂಸ್, ಶಂಪೀಟರ್ ಮುಂತಾದ ಬಹುತ್ವವಾದಿಗಳು ಚುನಾವಣಾ ವಿಧಾನಕ್ಕೆ ಪ್ರಾಮುಖ್ಯತೆ ನೀಡಿದ್ದಾರೆ. ಶಂಪೀಟರ್ ಅವರ ಪ್ರಕಾರ ಪ್ರಜಾಪ್ರಭುತ್ವವೆಂದರೆ ಮುಕ್ತ ಮತಕ್ಕಾಗಿ ನಡೆಯುವ ಮುಕ್ತ ಪೈಪೋಟಿ. ಈ ಪೈಪೋಟಿ ಕೇವಲ ಚುನಾವಣಾ ವಿಧಾನದ ಮೂಲಕ ಮಾತ್ರವೇ ನಡೆಯಲು ಸಾಧ್ಯ. ವಾಸ್ತವಿಕವಾಗಿ ಚುನಾವಣೆಯೊಂದೇ ಪೈಪೋಟಿ ನಡೆಸುವ ವಿಧಾನ ಎಂಬುದಾಗಿ ಶಂಪೀಟರ್ ವಿವರಿಸುತ್ತಾರೆ. ವಿವಿಧ ವಿಷಯಗಳಲ್ಲಿ ರಾಜಕೀಯ ನಿರ್ಣಯ ತೆಗೆದುಕೊಳ್ಳುವಲ್ಲಿ ಚುನಾವಣಾ ವಿಧಾನದ ಮೂಲಕ ಪ್ರಜೆಗಳು ಭಾಗವಹಿಸಲು ಸಾಧ್ಯವಾಗುತ್ತದೆ ಎಂಬುದಾಗಿ ಪ್ರೆಸ್ಥೂಸ್ ವಿವರಣೆ ನೀಡುತ್ತಾರೆ. ಅಷ್ಟೇ

ಅಲ್ಲದೆ ಪ್ರಜೆಗಳು ಸರ್ಕಾರವನ್ನು ಮತ್ತು ಆಯ್ಕೆ ಮಾಡದೇ ತಮ್ಮ ನಿಯಂತ್ರಣ ಚಲಾಯಿಸುವ ವಿಧಾನವೇ ಚುನಾವಣೆಗಳು

* **ಅಧಿಕಾರ ಪ್ರತ್ಯೇಕತೆ ಮತ್ತು ಅಧಿಕಾರ ವಿಭಜನೆ**

ಬಹುತ್ವವಾದಿ ಪ್ರಜಾಪ್ರಭುತ್ವದ ಕಲ್ಪನೆಯಲ್ಲಿ ಸರ್ಕಾರದ ಅಂಗಗಳ ನಡುವೆ ಅಧಿಕಾರ ಪ್ರತ್ಯೇಕತೆ ಇರಬೇಕು ಹಾಗೂ ಅಧಿಕಾರ ಕೇಂದ್ರೀಕರಣಕ್ಕೆ ಬದಲಾಗಿ ಕೇಂದ್ರ ಹಾಗೂ ಸ್ಥಳೀಯ ಸರ್ಕಾರಗಳ ನಡುವೆ ಅಧಿಕಾರ ವಿಭಜನೆಯಬ ಇರಬೇಕು. ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗಗಲ ನಡುವೆ ಅಧಿಕಾರ ಪ್ರತ್ಯೇಕತೆ ಹಾಗೂ ನಿಯಂತ್ರಣ ವಿಧಾನಗಳಿರಬೇಕು. ಬಹುತ್ವವಾದಿಗಳು ಅಧಿಕಾರ ವಿಭಜನೆಯನ್ನು ಬೆಂಬಲಿಸಲು ಇನ್ನೊಂದು ಮುಖ್ಯ ಕಾರಣವೆಂದರೆ ಸ್ಥಳೀಯ ಹಿತಾಸಕ್ತಿಗೆ ಪ್ರಾಮುಖ್ಯತೆ

* ನಾಯಕರಿಗೆ ಪ್ರಾಮುಖ್ಯತೆ : ಪ್ರಜಾಪ್ರಭುತ್ವದ ಬಹುತ್ವಾದಿ ಸಿದ್ಧಾಂತಿಗಳು ಸಂಘ-ಸಂಸ್ಥೆಗಳಿಗೆ ಪ್ರಾಮುಖ್ಯತೆ ನೀಡುವುದೇ ಅಲ್ಲದೆ ನಾಯಕರಿಗೂ ಪ್ರಾಮುಖ್ಯತೆ ನೀಡುತ್ತಾರೆ. ಅವರ ಪ್ರಕಾರ ಪ್ರಜಾಪ್ರಭುತ್ವವೆಂದರೆ
* ಚುನಾಯಿತರ ಅಧಿಪತ್ಯ (ಎಲೆಕ್ಟಿವ್ ಪೊಲಿಯಾರ್ಕಿ) ಥಾಲ್
* ಹಲವು ಚುನಾಯಿತರ ಶ್ರೇಷ್ಠರ ಆಳ್ವಿಕೆ
* ನಾಯಕರ ಮೂಲಕ ಸಂಘಟಿತ ಅಧಿಕಾರದ ಪ್ರಯೋಜನವನ್ನು ವ್ಯಕ್ತಿಗಳು ಪಡೆಯುತ್ತಾರೆ, ಪ್ರೆಸ್ಥೂಸ್
* ಈ ದೃಷ್ಟಿಯಿಂದ ನೋಡಿದಾಗ ಪ್ರಜಾಪ್ರಭುತ್ವವೆಂದರೆ ಅಲ್ಪಸಂಖ್ಯಾತರ ಆಳ್ವಿಕೆ ಎಂಬರ್ಥ ಉಂಟಾಗುತ್ತದೆ. ಚುನಾಯಿತ ಅಲ್ಪಸಂಖ್ಯಾತರು ಆಯ್ಕೆಯಾಗಲು ನಡೆಸುವ ಪೈಪೋಟಿ ವ್ಯವಸ್ಥೆಯೇ ಪ್ರಜಾಪ್ರಭುತ್ವ ಎಂಬುದಾಗಿ ಥಾಲ್ ವ್ಯಾಖ್ಯಾನಿಸುತ್ತಾರೆ. ನಾಯಕರನ್ನು ಎಲ್ಲ ಕಾಲದಲ್ಲಿಯೂ ಪ್ರಜೆಗಳೇ ನಿಯಂತ್ರಿಸಲು ಸಾಧ್ಯವಿಲ್ಲ.. ಆದುದರಿಂದ ಇತರ ನಾಯಕರು, ಅವರನ್ನು ನಿಯಂತ್ರಿಸುತ್ತಾರೆ. ಪ್ರಜಾಪ್ರಭುತ್ವದಲ್ಲಿ ವಾಸ್ತವಿಕವಾಗಿ ಹಲವರು ಪ್ರಧಾನಪಾತ್ರ ವಹಿಸಿದರೂ, ಅವರ ಆಯ್ಕೆ ಮುಕ್ತ ರೀತಿಯಲ್ಲಿ ನಡೆಯುತ್ತದೆ.

* ವಿಮರ್ಶೆ

ಬಹುತ್ವವಾದಿ ಪ್ರಜಾಪ್ರಭುತ್ವದ ಪರಿಕಲ್ಪನೆಯನ್ನು ಅನೇಕ ಬಗೆಯಲ್ಲಿ ಟೀಕಿಸಲಾಗಿದೆ. ಆದರೂ ಸಹ ಈ ಸಿದ್ಧಾಂತ ತಾತ್ವಿಕ ಪ್ರಜಾಪ್ರಭುತ್ವ ಸಿದ್ಧಾಂತಕ್ಕೆ ವಾಸ್ತವಿಕತೆಯ ಮೆರಗು ಕೊಟ್ಟಿದೆ. ಮ್ಯಾಕ್‌ಫರ್ಸನ್ ಅವರು ಹೇಳುವಂತೆ ಬಹುತ್ವವಾದಿ ಪ್ರಜಾಪ್ರಭುತ್ವದ ಕಲ್ಪನೆಯನ್ನು ಒಂದು ಸಾರ್ವತ್ರಿಕ ಸಿದ್ಧಾಂತವೆಂದು ಒಪ್ಪಿಕೊಳ್ಳಲಾಗದು. ಸಾಂಪ್ರದಾಯಿಕ, ಮೌಲಿಕ ಪ್ರಜಾಪ್ರಭುತ್ವದ ಸಿದ್ಧಾಂತಕ್ಕೆ ಬಹುತ್ವವಾದಿಗಳ ಕಲ್ಪನೆ ನಷ್ಟವನ್ನುಂಟು ಮಾಡಿದೆ.

ಈ ಸಿದ್ಧಾಂತವು ಸಂಘ-ಸಂಸ್ಥೆಗಳಿಗೆ ಪ್ರಾಮುಖ್ಯತೆ ನೀಡಿ ವ್ಯಕ್ತಿಯನ್ನು ಕಡೆಗಾಣಿಸುತ್ತದೆ. ಏಕೆಂದರೆ ಈ ಸಿದ್ಧಾಂತದ ಪ್ರಕಾರ ಕೇವಲ ಸಂಘ-ಸಂಸ್ಥೆಗಳ ಮೂಲಕ ಮಾತ್ರವೇ ಪರಿಣಾಮಕಾರಿಯಾಗಿ ರಾಜಕೀಯ ಪ್ರಕ್ರಿಯೆಯಲ್ಲಿ ವ್ಯಕ್ತಿಯು ಭಾಗವಹಿಸಬಲ್ಲ. ಆದರೆ ಪ್ರತ್ಯೇಕವಾಗಿಯೂ ಸಹ ಪ್ರತಿಯೊಬ್ಬ ವ್ಯಕ್ತಿಗೂ ತನ್ನದೇ ಆದ ಅಭಿಪ್ರಾಯವಿದೆ, ಶಕ್ತಿಯಿದೆ, ವ್ಯಕ್ತಿತ್ವವಿದೆ. ಸಾಂಪ್ರದಾಯಿಕ ಪ್ರಜಾಪ್ರಭುತ್ವ ಸಿದ್ಧಾಂತದ ಮೂಲ ಕಲ್ಪನೆಯಲ್ಲಿ ವ್ಯಕ್ತಿಗೆ ಪ್ರಥಮ ಸ್ಥಾನವಿದೆ. ಪ್ರತಿ ವ್ಯಕ್ತಿಯನ್ನೂ ಗಣಿಸಲಾಗುತ್ತದೆ.

ಸಂಘ-ಸಂಸ್ಥೆಗಳಿಗೆ, ಗುಂಪುಗಳಿಗೆ ನೀಡಿರುವ ಪ್ರಾಮುಖ್ಯತೆ ಸರಿಯಾದುದಲ್ಲ. ಏಕೆಂದರೆ ಯಾವುದೇ ಸಮಾಜದ ಉದಾಹರಣೆ ತೆಗೆದುಕೊಂಡರೂ ಸಂಸ್ಥೆಗಳು, ಗುಂಪುಗಳು ಕೆಲವೇ ವ್ಯಕ್ತಿಗಳ ಹಿತಾಸಕ್ತಿ ರಕ್ಷಿಸುತ್ತಿರುವುದು ಕಂಡುಬರುತ್ತದೆ. ಏಕೆಂದರೆ ಯಾವುದೇ ಸಂಘವಿರಲಿ, ಅಲ್ಲಿಯ ಸದಸ್ಯರೆಲ್ಲರಿಗೂ ಸಮಾನ ಸ್ಥಾನ-ಮಾನವಾಗಲೀ ಅಥವಾ ಅವರ ಅಭಿಪ್ರಾಯಗಳಿಗೆ ಸಮಾನ ಬೆಲೆಯಾಗಲೀ

ಇರುವುದಿಲ್ಲ. ಕೆಲವರು ಪ್ರಭಾವಶಾಲಿಗಳಾಗಿದ್ದರೆ, ಇನ್ನು ಕೆಲವರು ಬಲಹೀನರಾಗಿರುತ್ತಾರೆ. ಆದುದರಿಂದ ವರ್ಗ ಸಮಾಜದಲ್ಲಿರುವಂತೆ ಇಲ್ಲಿಯೂ ದಬ್ಬಾಳಿಕೆ, ಶೋಷಣೆ ನಡೆಯುತ್ತಲೇ ಇರುತ್ತದೆ. ಆದುದರಿಂದ ವ್ಯಕ್ತಿಗಳು ಸಂಘ-ಸಂಸ್ಥೆಯ ಮಾಧ್ಯಮದ ಮೂಲಕ ಭಾಗವಹಿಸದೇ ನೇರವಾಗಿ ಭಾಗವಹಿಸುವುದು ಉತ್ತಮ.

ಬಹುತ್ವವಾದಿ ಸಿದ್ಧಾಂತವು ವಾಸ್ತವಿಕತೆಗೆ ಪ್ರಾಮುಖ್ಯತೆ ನೀಡಿ ಪ್ರಜಾಪ್ರಭುತ್ವದ ತಾತ್ವಿಕ ಮೌಲ್ಯವನ್ನು ನಿರ್ಲಕ್ಷಿಸಿದೆ ಎಂಬುದು ಮ್ಯಾಕ್ ಫರ್ಸನ್ ಅವರ ಟೀಕೆಯಾಗಿದೆ. ಬಹುತ್ವ ಸಿದ್ಧಾಂತವು ಅಸಮರ್ಪಕವೂ ಹಾಗೂ ಸೀಮಿತವೂ ಆದ ವಿವರಣೆ ನೀಡುತ್ತದೆ. ವಾಸ್ತವವಾದಿ ಬಹುಸಿದ್ಧಾಂತವು ಪ್ರಜಾಪ್ರಭುತ್ವದ ಅತಿ ಗಂಭೀರ ಸಮಸ್ಯೆಗಳನ್ನು ನಿರ್ಲಕ್ಷಿಸುತ್ತದೆ. ರಾಜಕೀಯ ಪ್ರಕ್ರಿಯೆಯಲ್ಲಿ ಅನೇಕ ಬಗೆಯ ಪ್ರಭಾವಗಳಲ್ಲಿ ಆರ್ಥಿಕ ವರ್ಗಗಳ ಪ್ರಭಾವವೂ ಒಂದು, ಎಂದು ಪರಿಗಣಿಸಿ, ಅದರ ಗಂಭೀರತೆಯನ್ನು ಅರ್ಥಮಾಡಿಕೊಳ್ಳುವಲ್ಲಿ ಸೋಲುತ್ತದೆ. ಎಲ್ಲ ಗುಂಪುಗಳೂ ಸಮಾನ ಪ್ರಭಾವ ಬೀರಲು, ತಮ್ಮ ಹಿತ ಸಾಧಿಸಿಕೊಳ್ಳಲು ಸಾಧ್ಯವಿಲ್ಲ ಎಂಬ ವಾಸ್ತವಿಕತೆಯನ್ನು ಕಡೆಗಾಣಿಸುತ್ತದೆ.

ಶಂಪೀಟರ್ ಮತ್ತು ಧಾಲ್, ಸಾತೋರಿ ಅವರಿಗೆ ನೀಡಿರುವ ಪ್ರಜಾಪ್ರಭುತ್ವದ ವಿವರಣೆಯಲ್ಲಿ ಮನುಷ್ಯನನ್ನು ಕೇವಲ ಉಪಭೋಗಿ ಎಂದು ಪರಿಗಣಿಸಲಾಗುತ್ತದೆ. ಈ ದೃಷ್ಟಿಯಿಂದ ನೋಡಿದಾಗ ಪ್ರಜಾಪ್ರಭುತ್ವವೆಂದರೆ ಯಾರಿಗೆ, ಯಾವಾಗ, ಹೇಗೆ, ಏನು ಸಿಗಬೇಕು ಎಂಬ ಪ್ರಕ್ರಿಯೆಯಲ್ಲಿ ಜನತೆ ಕೇವಲ ಪರೋಕ್ಷವಾಗಿ ಪಾಲ್ಗೊಳ್ಳುವುದು ಎಂದಾಗುತ್ತದೆ. ಈ ವಿವರಣೆ ವ್ಯಕ್ತಿಯು ನೈತಿಕ ಜೀವಿಯಾಗಬೇಕು ಎಂಬ ಉದಾತ್ತ ಧ್ಯೇಯವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದೆ, ಎಂಬುದಾಗಿ ಮ್ಯಾಕ್‌ಫರ್ಸನ್ ಟೀಕಿಸುತ್ತಾರೆ. ಪ್ರಜಾಪ್ರಭುತ್ವದ ಮೌಲಿಕ, ತಾತ್ವಿಕ ಉದಾತ್ತ ಸ್ವರೂಪವೇ ಸಂಪೂರ್ಣವಾಗಿ ಇಲ್ಲವಾಗುತ್ತದೆ.

ಸಾಮರಸ್ಯ ರಾಜಕಾರಣ ಎಂಬುದು ವಾಸ್ತವಿಕವಲ್ಲದ, ಆಚರಣೆಗೆ ತರಲು ಸಾಧ್ಯವಿಲ್ಲದ ತತ್ವವಾಗಿದೆ. ಏಕೆಂದರೆ ವಿವಿಧ ಹಿತಾಸಕ್ತಿಯುಳ್ಳ, ಹಿತಾಸಕ್ತಿಗಳ ನಡುವೆ ಘರ್ಷಣೆ ಇರುವ ಗುಂಪುಗಳು ಏಕಾಭಿಪ್ರಾಯಕ್ಕೆ ಬರುವುದು ಅಥವಾ ಅವರ ನಡುವೆ ಸಾಮರಸ್ಯವೇರ್ಪಡುವುದು ಅಸಾಧ್ಯದ ಮಾತೇ ಸರಿ. ಸಾಮರಸ್ಯಕ್ಕೆ ಬದಲಾಗಿ ಗುಂಪುಗಳ ಸಂಖ್ಯೆ ಬೆಳೆದಂತೆ, ಅವುಗಳ ನಡುವಿನ ಅಂತರ ಹೆಚ್ಚಾದಂತೆ ಪ್ರತಿಯೊಂದು ಗುಂಪೂ ಒತ್ತಡದ ಗುಂಪಿನಂತೆ ವರ್ತಿಸಲು ಪ್ರಾರಂಭಿಸುತ್ತದೆ. ಪ್ರತಿ ಗುಂಪಿಗೂ ತನ್ನ ಹಿತಾಸಕ್ತಿಯೇ ಪ್ರಧಾನವಾಗುತ್ತದೆ. ಈ ಪ್ರಕ್ರಿಯೆಯಲ್ಲಿ ರಾಷ್ಟ್ರೀಯ ಹಿತಾಸಕ್ತಿ ನಿರ್ಲಕ್ಷ್ಯಕ್ಕೆ ಒಳಗಾಗುತ್ತದೆ. ಸಮಸ್ತ ಸಮಾಜದ ಸಮಷ್ಟಿ ಹಿತಕ್ಕೆ ಧಕ್ಕೆಯಾಗುತ್ತದೆ. ಅಷ್ಟೇ ಅಲ್ಲದೆ ಗುಂಪುಗಳ ಸಂಖ್ಯೆ ಬೆಳೆದಂತೆ ಸರ್ಕಾರದಲ್ಲೂ ಸಹ ಅಸ್ಥಿರತೆ ತಲೆದೋರುತ್ತದೆ. ಎಲ್ಲ ಸಂದರ್ಭಗಳಲ್ಲಿ ಸರ್ಕಾರ ಸಂಘ-ಸಂಸ್ಥೆಗಳ ಜೊತೆ ಸಮಾಲೋಚಿಸಲು ಪ್ರಾರಂಭಿಸಿದರೆ, ಮೊದಲನೆಯಾದಗಿ, ನಿರ್ಣಯ ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲ. ಎರಡನೆಯದಾಗಿ, ಹಾಗೇನಾದರೂ ನಿರ್ಣಯ ತೆಗೆದುಕೊಂಡರೆ ಸರ್ಕಾರ ತನ್ನತನವನ್ನೇ ಕಳೆದುಕೊಳ್ಳುವ ಸಾಧ್ಯತೆಯೂ ಇರುತ್ತದೆ.

ಈ ರೀತಿಯಲ್ಲಿ ಬಹುತ್ವವಾದಿ ಪ್ರಜಾಪ್ರಭುತ್ವದ ಸಿದ್ಧಾಂತದ ಆಧುನಿಕ ಔದ್ಯೋಗಿಕೃತ ಸಮಾಜದ ಸಮಸ್ಯೆಗಳಿಗೆ ಪರಿಹಾರಗಳನ್ನು ಒದಗಿಸುವ ಒಂದು ಪ್ರಯತ್ನವಾಗಿದೆ. ಶಂಪೀಟರ್ ಅವರು ಹೇಳುವಂತೆ ಪ್ರಜಾಪ್ರಭುತ್ವವಿರುವ ಸರ್ಕಾರವನ್ನು ಇತರ ವ್ಯವಸ್ಥೆಗಳಿಂದ ಬೇರ್ಪಡಿಸಿ ಗುರುತಿಸಲು ಒಂದು ಪರಿಣಾಮಕಾರಿ ಅಳತೆಗೋಲನ್ನು ಬಹುತ್ವವಾದಿ ಸಿದ್ಧಾಂತ ನೀಡುತ್ತದೆ. ಏಕೆಂದರೆ ಈ ಸಿದ್ಧಾಂತವೂ ಪ್ರಜಾಸತ್ತಾತ್ಮಕ ಪ್ರಕ್ರಿಯೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿ ಅದನ್ನು ವಿವರಿಸಿದೆ.

## ನಿಮ್ಮ ಪ್ರಗತಿ ಪರಿಶೀಲನೆ - 1

ಸೂಚನೆ: 1. ಈ ಕೆಳಗೆ ಬಿಟ್ಟಿರುವ ಜಾಗವನ್ನು ನಿಮ್ಮ ಉತ್ತರಕ್ಕೆ ಉಪಯೋಗಿಸಿಕೊಳ್ಳಿ.

2. ಈ ಘಟಕದ ಕೊನೆಯಲ್ಲಿ ನೀಡಿರುವ ಉತ್ತರದೊಂದಿಗೆ ನಿಮ್ಮ ಪ್ರಗತಿಯನ್ನು ಪರಿಶೀಲಿಸಿಕೊಳ್ಳಿ.

**1. ಶ್ರೇಷ್ಠರ ಪ್ರಜಾಪುತ್ವ ಸಿದ್ಧಾಂತವನ್ನು ವಿವರಿಸಿ.**

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

**2. ಪ್ರಜಾಪ್ರಭುತ್ವದ ಬಹುಧಿತ್ವ ಸಿದ್ಧಾಂತವನ್ನು ವಮರ್ಶಿಸಿ.**

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

## 18.4 ಮಾರ್ಕ್ಸ್‌ವಾದಿ ಸಿದ್ಧಾಂತ

ಪ್ರಜಾಪ್ರಭುತ್ವ ಮಾರ್ಕ್ಸ್‌ವಾದಿ ಸಿದ್ಧಾಂತದ ವಿವರಣೆ ಕಾರ್ಲ್ ಮಾರ್ಕ್ಸ್‌ರ ಬೆಳವಣಿಗೆಗಳಲ್ಲಿ ಹಾಗೂ ಲೆನಿನ್ ಮತ್ತಿತರ ಮಾರ್ಕ್ಸ್‌ವಾದಿಗಳ ಬರವಣಿಗೆಯಲ್ಲಿ ದೊರೆಯುತ್ತದೆ. ಮಾರ್ಕ್ಸ್‌ವಾದಿ ಪ್ರಜಾಪ್ರಭುತ್ವದ ಸಿದ್ಧಾಂತ ವಿವರಿಸುವ ಪೂರ್ವದಲ್ಲಿ ಸಮತಾವಾದ ಹಾಗೂ ಪ್ರಜಾಪ್ರಭುತ್ವ ಎರಜೂ ಪರಿಕಲ್ಪನೆಗಳಲ್ಲಿ ಏನಾದರೂ ಸಾಮ್ಯವಿರುವ ಸಾಧ್ಯತೆ ಇದೆಯೆ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಪ್ರಜಾಪ್ರಭುತ್ವ ಮತ್ತು ಸಮಾತಾವಾದದ ರಾಜಕೀಯ ತಾತ್ವಿಕ ಚಿಂತನೆ ಒಂದೇ ಅಲ್ಲ ಎಂಬುದಾಗಿ ಎಡ್ವರ್ಡ್ ಬೆನ್ಸ್ ಅಭಿಪ್ರಾಯಪಡುತ್ತಾರೆ. ಹಾಗಿದ್ದರೆ, ಮಾರ್ಕ್ಸ್‌ವಾದಿ ಪ್ರಜಾಪ್ರಭುತ್ವದ ಕಲ್ಪನೆ ಅಸಾಧ್ಯವೆಂದೇ ಆಗುತ್ತದೆ. ಆದರೆ ಈ ಎರಡು ಸಿದ್ಧಾಂತಗಳ ನಡುವೆ ತಾತ್ವಿಕ ಹಾಗೂ ನೈತಿಕ ಸಾಮ್ಯವಿದೆ. (ಎಡ್ವರ್ಡ್ ಬೆನ್ಸ್). ಆದುದರಿಂದಲೇ ಮಾರ್ಕ್ಸ್‌ವಾದಿ ಪ್ರಜಾಪ್ರಭುತ್ವದ ಪರಿಕಲ್ಪನೆಯ ವಿವರಣೆ ಸಾಧ್ಯ. ಸಮತಾವಾದವು ಪ್ರಜಾಪ್ರಭುತ್ವದಂತೆಯೇ ವಿವೇಚಾನಾತ್ಮಕ,ಮ ಮಾನವೀಯ, ಸಾರ್ವತ್ರಿಕ, ಬೌದ್ಧಿಕ ತತ್ವಗಳನ್ನೊಳಗೊಂಡಿದ್ದು ಸಮಾನತೆಯ ತತ್ವಕ್ಕೆ ಪ್ರಾಮುಖ್ಯತೆ ನೀಡುತ್ತದೆ. ಈ ದೃಷ್ಟಿಯಿಂದ ನೋಡಿದಾಗ, ಎರಡಕ್ಕೂ ಒಂದೇ ತಾತ್ವಿಕ ನೈತಿಕ ನೆಲೆಗಟ್ಟು (ಫಿಲಾಸಫಿಕಲ್ ಬೇಸಿಸ್) ಇರುವುದು ಕಷ್ಟ. ಆದರೆ ಸೂಕ್ಷ್ಮವಾಗಿ ಅವಲೋಕಿಸಿದಾಗ ಅವುಗಳ ತಾತ್ವಿಕ ಪರಿಕಲ್ಪನೆಯಲ್ಲಿಯೇ (ಫಿಲಾಸಫಿಕಲ್ ಕನ್ಸೆಪ್ಸನ್) ವ್ಯತ್ಯಾಸವಿರುವುದು ತಿಳಿಯುತ್ತದೆ. ಸಮತಾವಾದವು ಆರ್ಥಿಕ ಭೌತಿಕವಾದವನ್ನು

ಅವಲಂಬಿಸಿದ್ದರೆ ಪ್ರಜಾಪ್ರಭುತ್ವ ಅಮೂರ್ತ, ಆದಿಭೌದಿಕ ತತ್ವಗಳನ್ನು ಅವಲಂಬಿಸಿದೆ. ಆವಿರಡೂ ಪರಿಕಲ್ಪನೆಗಳ ನಡುವೆ ಸೈದ್ಧಾಂತಿಕ ಸಾಮೀಪ್ಯವಿದ್ದರೂ ಆಚರಣೆಯಲ್ಲಿ ವ್ಯತ್ಯಾಸವಿದೆ.

ಮಾರ್ಕ್ಸ್‌ವಾದಿ ಪ್ರಜಾಪ್ರಭುತ್ವ ಸಿದ್ಧಾಂತದ ಪ್ರಮುಖ ತತ್ವಗಳು

1842-43ರ ಕಾರ್ಲ್ ಮಾರ್ಕ್ಸ್‌ರ ಬರವಣಿಗೆಯಲ್ಲಿ ಪ್ರಜಾಪ್ರಭುತ್ವದ ತತ್ವಗಳ ಕುರಿತ ವಿವರಣೆ ಇದೆ. ಈ ಅವಧಿಯಲ್ಲಿ ಮಾರ್ಕ್ಸ್ ಹನ್ನೆರಡು ಪ್ರಬಂಧಗಳನ್ನು ಬರೆದಿದ್ದಾರೆ. ಇಲ್ಲಿ ಬರುವ ಪ್ರಜಾಪ್ರಭುತ್ವ ವಿವರಣೆ ಈ ಕೆಳಗಿನಂತಿದೆ.

* **ರಾಜ್ಯಕ್ಕೆ ವಿವೇಚನೆಯ ತಳಹದಿ ಇದೆ.**

ರಾಜ್ಯವು ವ್ಯಕ್ತಿಯಲ್ಲಿರುವ ಮೂಲಭೂತ ಗುಣಗಳನ್ನು ಪ್ರತಿನಿಧಿಸಬೇಕು. ವ್ಯಕ್ತಿಯ ಹಿತಾಸಕ್ತಿಗಳನ್ನು ಅಗತ್ಯಗಳನ್ನೂ ರಾಜ್ಯ ಪೂರೈಸಬೇಕು. ಇಲ್ಲಿ ಮಾರ್ಕ್ಸ್ ಅರಸೊತ್ತಿಗೆಯು ವಿವೇಚನಾರಹಿತ ಸವಲತ್ತುಗಳನ್ನು ಆಧರಿಸಿರುವುದರಿಂದ ವಿವೇಚನಾತ್ಮಕ ರಾಜ್ಯವನ್ನು ನೀಡಲು ಸಾಧ್ಯವಿಲ್ಲ ಎಂಬ ವಿಚಾರ ವ್ಯಕ್ತಪಡಿಸುತ್ತಾರೆ. ಕೇವಲ ಪ್ರಜಾಪ್ರಭುತ್ವವು ಮಾತ್ರವೇ ವಿವೇಚನೆ ಆಧರಿಸಿದ ಸಾರ್ವತ್ರಿಕ ಹಕ್ಕುಗಳನ್ನು ನೀಡಲು ಸಾಧ್ಯ. ಪ್ರಜಾಪ್ರಭುತ್ವದಲ್ಲಿ ಮಾತ್ರವೇ ವಿವೇಚನೆ ಆಧರಿತ ಕಾನೂನು ರೂಪಿತವಾಗುತ್ತದೆ.

* **ಜನತಾ ಪರಮಾಧಿಕಾರ**

ರಿಚರ್ಡ್ ಹಂಟ್ ಅವರು ಹೀಗೆ ಹೇಳಿದ್ದಾರೆ. ಮಾರ್ಕ್ಸ್‌ರ ಪ್ರಕಾರ.. ಕಾನೂನು ಜನತೆಯ ಇಚ್ಚೆಯ ಬುದ್ಧಿಪೂರ್ವಕ ಅಭಿವ್ಯಕ್ತಿಯಾಗಿ ಅವರಿಂದಲೇ ರಚಿತವಾದಾಗ ನಿಜವಾದ ಕಾನೂನು ಆಗುತ್ತದೆ. ಈ ರೀತಿಯಲ್ಲಿ ಮಾರ್ಕ್ಸ್ ಕೇವಲ ಜನತಾ ಪರಮಾಧಿಕಾರವನ್ನು ಮಾತ್ರವೇ ಅಲ್ಲದೆ ಜನತೆ ವಿವೇಚನಾಪೂರ್ವಕವಾಗಿ, ಬುದ್ಧಿಪೂರ್ವಕವಾಗಿ ವರ್ತಿಸುತ್ತಾರೆ ಎಂಬುದರಲ್ಲಿ ವಿಶ್ವಾಸ ತಳೆದಿದ್ದರು.

* **ಅಭಿವ್ಯಕ್ತಿ ಸ್ವಾತಂತ್ರ**

ಪತ್ರಿಕೋದ್ಯಮ ಸ್ವಾತಂತ್ರ ಮತ್ತು ವಿರೋಧ ಪಕ್ಷಗಳಿಗೆ ಯುವ ಕಾರ್ಲ್ ಮಾರ್ಕ್ಸ್ ಬೆಂಬಲ ನೀಡಿದ್ದರು ಅಲ್ಲದೆ ಅಭಿಪ್ರಾಯಭೇದವಿರುವುದು ಅಪಾಯಕಾರಿಯಾದುದೇನೂ ಅಲ್ಲ ಎಂಬುದು ಅವರ ವಿಶ್ವಾಸವಾಗಿತ್ತು. ಆದುದರಿಂದಲೇ ಪ್ರಜಾಪ್ರಭುತ್ವದಲ್ಲಿ ವಿವಿಧ ಪಕ್ಷಗಳ ಅಸ್ತಿತ್ವವನ್ನು ಸಮರ್ಥಿಸಿದರು. ಪಕ್ಷಗಳಿಲ್ಲದೆ, ಅಭಿವೃದ್ಧಿ ಇಲ್ಲ, ಒಡಕುಗಳಿಲ್ಲದೆ ವಿಕಾಸವಿಲ್ಲ ಎಂಬುದಾಗಿ ಮಾರ್ಕ್ಸ್ ಅಭಿಪ್ರಾಯಪಡುತ್ತಾರೆ. ಸಂಸ್ಥೆಗಳಲ್ಲಿ ಸುಧಾರಣೆಯಾಗಬೇಕಾದರೆ ಅವುಗಳನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸಬೇಕು. ಅಂದಾಗ ಮಾತ್ರ ಅದರಲ್ಲಿರುವ ಅಪರಿಪೂರ್ಣತೆಯನ್ನು ತೊಡೆದು ಹಾಕಲು ಸಾಧ್ಯ. ಈ ಬೆಳವಣಿಗೆಯ ಪ್ರಕ್ರಿಯೆ ಕೇವಲ ಸ್ವಾತಂತ್ರವಿದ್ದರೆ ಮಾತ್ರ ಸಾಧ್ಯವಾಗುತ್ತದೆ. ಆದುದರಿಂದಲೇ ವ್ಯಕ್ತಿಯ ಉನ್ನತಿಯ ಏಕೈಕ ಸಾಧನವೇ ಸ್ವಾತಂತ್ರ. ಪ್ರಜಾಪ್ರಭುತ್ವದಲ್ಲಿ ಪತ್ರಿಕಾ ಸ್ವಾತಂತ್ರದ ಜೊತೆಯಲ್ಲಿಯೇ ವಿಕಾಸದ ಸಾಧನಗಳಾದ ಇತರ ಸ್ವಾತಂತ್ರಗಳೂ ದೊರೆಯುತ್ತವೆ ಎಂಬುದಾಗಿ ಮಾರ್ಕ್ಸ್ ವಿವರಿಸುತ್ತಾರೆ.

* **ಸಾರ್ವತ್ರಿಕ ಮತದಾನ**

ಕಾರ್ಲ್‌ಮಾರ್ಕ್ಸ್ ಅನುವಂಶಿಕ ಸಂಪತ್ತಿನ ವರ್ಗಾವಣೆಯನ್ನೂ, ಮತದಾರ ಪಡೆಯಲು ಸಂಪತ್ತಿನ ಅರ್ಹತೆ ಇರಬೇಕು ಎಂಬುದನ್ನೂ ವಿರೋಧಿಸಿ ಸಾರ್ವತ್ರಿಕ ಮತದಾನವನ್ನು ಆಧರಿಸಿದ ಸಮಾನ ಪ್ರಾದೇಶಿಕ ಪ್ರಾತಿನಿಧ್ಯವನ್ನು ಪ್ರತಿಪಾದಿಸಿದ್ದಾರೆ. ಯಾವುದೇ ಒಂದು ವರ್ಗದ, ಗುಂಪಿನ ಹಿತಾಸಕ್ತಿಯನ್ನು ಪ್ರತಿನಿಧಿಗಳು ಪ್ರತಿನಿಧಿಸುವುದನ್ನು ಮಾರ್ಕ್ಸ್ ವಿರೋಧಿಸಿದರು. ಇಲ್ಲಿ ಪ್ರಷ್ಯಾದ ರಾಜಕೀಯ

ವ್ಯವಸ್ಥೆಯಲ್ಲಿದ್ದ ಕೆಲವು ಪ್ರಜಾಪ್ರಭುತ್ವದ ಸಮಾನತೆಯ ತತ್ವ ವಿರೋಧಿಸುವ ಅಂಶಗಳನ್ನು ವಿರೋಧಿಸಿದರು.

* **ನೌಕರಶಾಹಿಯು ಪ್ರಜೆಗಳ ನಿಯಂತ್ರಣದಲ್ಲಿರಬೇಕು.**

ಪ್ರಷ್ಯಾದ ಆಡಳಿತ ವರ್ಗ ತನ್ನದೇ ಆದ ಹಿತಾಸಕ್ತಿ ಹೊಂದಿ ಪ್ರಜೆಗಳ ಸಾಮಾನ್ಯ ಹಿತಸಾಧನೆಯನ್ನು ನಿರ್ಲಕ್ಷಿಸಿತ್ತು. ಆದುದರಿಂದ ಮಾರ್ಕ್ಸ್ ನೌಕರಶಾಹಿ ಮೇಲೂ ಪ್ರಜೆಗಳ ನಿಯಂತ್ರಣವಿರಬೇಕೆಂದು ಪರಿಹಾರ ಸೂಚಿಸಿದರು. ಪ್ರಜಾಪ್ರಭುತ್ವದಲ್ಲಿ ನೌಕರಶಾಹಿಯು ತಾನೇ ಒಂದು ಪ್ರತ್ಯೇಕ ವರ್ಗವಾಗಿ ತನ್ನ ಹಿತಸಾಧನೆ ಸಾಧಿಸಿಕೊಳ್ಳದಂತೆ ಇರಬೇಕು.

* **ಪ್ರಜಾಪ್ರಭುತ್ವದ ರಾಜ್ಯ ಸ್ಥಾಪನೆಯ ಉದಾತ್ತ ಉದ್ದೇಶ**

ವ್ಯಕ್ತಿಯ ಘನತೆ ಗೌರವಗಳನ್ನು ಕೇವಲ ಅವರ ಸ್ವಾತಂತ್ರ ಮಾತ್ರವೇ ಎತ್ತಿ ಹಿಡಿಯಬಲ್ಲದು. ಮಾರ್ಕ್ಸ್‌ರ ಪ್ರಕಾರ, ಗ್ರೀಕರ ನಂತರ ಈ ಸ್ವಾತಂತ್ರದ ಕಲ್ಪನೆ ಸಂಪೂರ್ಣವಾಗಿ ನಷ್ಟವಾಗಿದೆ. ಮಾನವ ಸಮುದಾಯ ರಚಿಸುವ ಏಕೈಕ ಮಾರ್ಗ ಈ ಬಗೆಯ ಸ್ವಾತಂತ್ರವಾಗಿದೆ. ಬಹುವರ್ಷಗಳ ದಬ್ಬಾಳಿಕೆಯಿಂದ ಮಾನವ ಸಮಾಜವು ಅಮಾನವೀಯ ಪಶು ಜಗತ್ತಿನಂತಿದೆ. ಶೋಷಣೆ ಮಾಡುವವ, ದಬ್ಬಾಳಿಕೆ ನಡೆಸುವವ ಮತ್ತು ಒಡೆಯ ಇತರರನ್ನು ಪ್ರಾಣಿಗಳಂತೆ ಕೀಳಾಗಿ ಕಾಣುತ್ತಾನೆ. ಪ್ರಜೆಗಳು, ಆಳ್ವಿಕೆಗೆ ಒಳಪಟ್ಟವರು ಮತ್ತು ಸೇವಕರು ತಾವೂ ಮನುಷ್ಯರು ಎಂಬುದನ್ನೇ ಮರೆತಿದ್ದಾರೆ. ಈ ಪ್ರಾಣಿ ಜಗತ್ತಿನಿಂದ ಬಿಡುಗಡೆಯಾಗಿ ಮಾನವ ಜಗತ್ತಿಗೆ ಪ್ರವೇಶಿಸಲು ಇರುವ ಮಾರ್ಗವೇ ಪ್ರಜಾಪ್ರಭುತ್ವ ಎಂಬುದಾಗಿ ಪ್ರಷ್ಯಾದ ನಿರಂಕುಶ ಪ್ರಭುತ್ವವನ್ನು ವಿರೋಧಿಸುವಾಗ ಕಾರ್ಲ್‌ಮಾರ್ಕ್ಸ್ ಬರೆಯುತ್ತಾನೆ.

ಈ ರೀತಿಯಲ್ಲಿ ಮೇಲೆ ತಿಳಿಸಿದ ಯುವ ಮಾರ್ಕ್ಸ್‌ನ ವಿಚಾರಗಳು ಮಾರ್ಕ್ಸ್‌ನನ್ನು ಉದಾರವಾದಿ ಪ್ರಜಾಪ್ರಭುತ್ವದ ಪರಂಪರೆಗೆ ಸೇರಿಸುತ್ತವೆ. ಇದು ಮಾರ್ಕ್ಸ್‌ನ ಮಾನವತಾವಾದಿ- ಪ್ರಜಾಪ್ರಭುತ್ವವಾದಿ ಹಂತವಾಗಿದೆ.

ಉದಾರವಾದಿ ಪ್ರಜಾಪ್ರಭುತ್ವದ ಕಲ್ಪನೆಯನ್ನು ತನ್ನದೇ ಆದ ವಿಶಿಷ್ಟ ರೀತಿಯಲ್ಲಿ ಬೆಂಬಲಿಸಿದ ಯುವ ಮಾರ್ಕ್ಸ್ ಸಮತಾವಾದಿಯಾದ ನಂತರ ಅವನ ವಿಚಾರಗಳಲ್ಲಿ ಅನೇಕ ಮೂಲೂತ ಬದಲಾವಣೆಗಳಾದವು. ಕಾರ್ಮಿಕರ ಪ್ರಭುತ್ವದ ತಾತ್ಕಾಲಿಕ ಅವಧಿಯಲ್ಲಿ ಸ್ವಯಾಡಳಿತದ ಸರ್ಕಾರ ಸ್ಥಾಪನೆಯಾಗುತ್ತದೆ ಎಂಬುದು ಮಾರ್ಕ್ಸ್ ವಿಚಾರವಾಗಿತ್ತು. ಮಾರ್ಕ್ಸ್‌ನ ದೃಷ್ಟಿಯಲ್ಲಿ ಪ್ರಜಾಪ್ರಭುತ್ವವೆಂದರೆ ರಾಜ್ಯ ರಹಿತ ಪ್ರಜಾಪ್ರಭುತ್ವ, ಆರ್ಥಿಕ ಸಾಮರಸ್ಯವಿರುವ ಸಮಾನರನ್ನುಳ್ಳ ಸಮಾಜವೇ ಪ್ರಜಾಪ್ರಭುತ್ವ. ಮಾರ್ಕ್ಸ್, ಎಂಗಲ್ಸ್, ಲೆನಿನ್ ಮತ್ತಿತರ ಮಾರ್ಕ್ಸ್‌ವಾದಿಗಳ ಪ್ರಕಾರ ಪ್ರಜಾಪ್ರಭುತ್ವವೆಂದರೆ ಸಮಾನತೆ, ವರ್ಗರಹಿತ ವ್ಯವಸ್ಥೆ, ರಾಜ್ಯದ ಒಂದು ಬಗೆ, ಕೆಲವು ತಾತ್ವಿಕ ಮೌಲ್ಯಗಳು ಮತ್ತು ಸಮಾಜದ ಒದು ಬಗೆ ಎಂದಾಗುತ್ತದೆ. ಈ ರೀತಿಯಲ್ಲಿ ಮಾರ್ಕ್ಸ್‌ನ ಪ್ರಕಾರ ಉತ್ಪಾದಕರ ಸ್ವಯಮಾಡಳಿತವೇ ಪ್ರಜಾಪ್ರಭುತ್ವ ಎಂದಾಗುತ್ತದೆ.

ಮಾರ್ಕ್ಸ್‌ನ ದೃಷ್ಟಿಯಲ್ಲಿ ಪ್ರಜಾಪ್ರಭುತ್ವವು ಕೇವಲ ವರ್ಗ ವಿರೋಧಿ ಮಾತ್ರವಲ್ಲ ರಾಜ್ಯ ವಿರೋಧಿಯೂ ಆಗಿದೆ. ತಮ್ಮ ಸಂಸ್ಥೆಗಳನ್ನು ರೂಪಿಸಿಕೊಳ್ಳುವ, ಬದಲಾಯಿಸುವ, ರದ್ದುಗೊಳಿಸುವ ಸಮಸ್ತ ಅಧಿಕಾರ ಜನತೆಗೆ ಇದೆ ಎಂಬುದು ಕಾರ್ಲ್‌ಮಾರ್ಕ್ಸ್‌ರ ಕಲ್ಪನೆಯಾಗಿತ್ತು. ರಾಜಕೀಯ ಸಾರ್ವಭೂಮತೆಯ ವಿಷಯದಲ್ಲಿ ಹುಟ್ಟು, ಸಾಮಾಜಿಕ ಸ್ಥಾನಮಾನ, ಶಿಕ್ಷಣ, ವೃತ್ತಿ, ವರ್ಗ ಮುಂತಾದ ರಾಜಕೀಯವಲ್ಲದ ಭೇದ ಭಾವಗಳನ್ನು ಪರಿಗಣಿಸದೇ ಎಲ್ಲ ಪೌರರು ರಾಜಕೀಯ ಪರಮಾಧಿಕಾರದಲ್ಲಿ ಸಮಾನ ಪಾಲುದಾರರಾಗಬೇಕು ಎಂಬುದಾಗಿ ಮಾರ್ಕ್ಸ್ ಘೋಷಿಸುತ್ತಾನೆ. ಈ ರೀತಿಯಲ್ಲಿ ನಿಜವಾದ ಪ್ರಜಾಪ್ರಭುತ್ವದಲ್ಲಿ ಯಾವುದೇ ಭೇದಭಾವಗಳಿರಬಾರದು. ನಿಜವಾದ ಪ್ರಜಾಪ್ರಭುತ್ವದಲ್ಲಿ ಬಂಡವಾಳಶಾಹಿ ಉತ್ಪಾದನಾ ವಿಧಾನ ಆಧರಿತ ವರ್ಗಗಳ ಅಂತ್ಯವಾಗಬೇಕು.

ವ್ಯಕ್ತಿಯೇ ಅತ್ಯಂತ ಶ್ರೇಷ್ಟ ಎಂಬ ಸತ್ಯ ಹೊಳೆಯಬೇಕಾದರೆ ಅದು ಪ್ರಜಾಪ್ರಭುತ್ವದಲ್ಲಿ ಮಾತ್ರ ಸಾಧ್ಯ. ವ್ಯಕ್ತಿಯನ್ನು ಹೀನಾಯಗೊಳಿಸುವ ನಿರ್ಲಕ್ಷಿಸುವ, ಕೀಲುಗೊಳಿಸುವ, ಗುಲಾಮರನ್ನಾಗಿಸುವ ಎಲ್ಲ ಪರಿಸ್ಥಿತಿಗಳನ್ನು ಕಿತ್ತೊಗೆದಾಗ ಮಾತ್ರ ಪ್ರಜಾಪ್ರಭುತ್ವ

ಅಸ್ತಿತ್ವಕ್ಕೆ ಬರುತ್ತದೆ ಎಂಬುದಾಗಿ ಮಾರ್ಕ್ಸ್ ವಿವರಿಸುತ್ತಾನೆ. ಆದುದರಿಂದಲೇ, ಎಲ್ಲ ಬಗೆಯ ಖಾಸಗಿ ಆಸ್ತಿಯೂ ವರ್ಗ ಭೇದಗಳನ್ನು ಸಪ್ಪಿಸುವುದರಿಂದ ಅದು ಪ್ರಜಾಪ್ರಭುತ್ವದಲ್ಲಿರಬೇಕಾದ ವ್ಯಕ್ತಿ ಸ್ವಾತಂತ್ರದ ತತ್ವಕ್ಕೆ ವಿರುದ್ಧವಾಗಿದೆ ಎಂಬುದಾಗಿ ಘೋಷಿಸುತ್ತಾನೆ.

ಪ್ರಜಾಪ್ರಭುತ್ವದ ತತ್ವವನ್ನಾಧರಿಸಿ ಸಮಾಜದ ರಚನೆಯಾಗಬೇಕಾದರೆ ಕ್ರಾಂತಿಯಾಗಬೇಕು. ಕ್ರಾಂತಿಯ ಪರಿಣಾಮವಾಗಿ ಸಮಾಜದಿಂದ ಪ್ರತ್ಯೇಕಿಸಲ್ಪಟ್ಟ ತನ್ನದೇ ಹಿತಾಸಕ್ತಿಯುಳ್ಳ ರಾಜ್ಯವೆಂಬ ಸಂಸ್ಥೆ ಕಾಣದಾಗುತ್ತದೆ. ರಾಜ್ಯದ ಲಯವೆಂದರೆ ಸಾಮೂಹಿಕ ನಿರ್ಣಯ ತೆಗೆದುಕೊಳ್ಳುವ ವ್ಯವಸ್ಥೆಯ ಅಂತ್ಯವೆಂದೇನೂ ಅಲ್ಲ. ಇಲ್ಲಿ ಮಾರ್ಕ್ಸ್ ಕಾರ್ಯಾಂಗೀಯ ಅಧಿಕಾರದ ಪ್ರಜಾಪ್ರಭುತ್ವೀಕರಣವನ್ನು ಸೂಚಿಸುತ್ತಾನೆ. ಮೇಲಿನ ಹಂತದಿಂದ ಕೆಳಗಿನ ಸ್ತರದವರೆಗೆ ಈ ಬದಲಾವಣೆ ತರಲಾಗುತ್ತದೆ. ಮಾರ್ಕ್ಸ್ ನೌಕರಶಾಹಿ ರಾಜ್ಯವನ್ನು ಕಟುವಾಗಿಯೇ ವಿರೋಧಿಸಿದ್ದ. ಅಂತೆಯೇ ವೃತ್ತಿಪರ ರಾಜಕಾರಣಿಗಳು, ವೃತ್ತಿಪರ ಅಧಿಕಾರಿವರ್ಗ, ಸೈನ್ಯ, ಪೋಲೀಸ್, ವೃತ್ತಿಪರ ನ್ಯಾಯಾಧೀಶರು ಈ ಎಲ್ಲವನ್ನೂ ಕೊನೆಗೊಳಿಸಿದಾಗ ಮಾತ್ರ ಪ್ರಜಾಪ್ರಭುತ್ವ ಸ್ಥಾಪನೆ ಸಾಧ್ಯ.

## ನಿಮ್ಮ ಪ್ರಗತಿ ಪರಿಶೀಲನೆ - 2

**ಸೂಚನೆ:** 1. ಈ ಕೆಳಗೆ ಬಿಟ್ಟಿರುವ ಜಾಗವನ್ನು ನಿಮ್ಮ ಉತ್ತರಕ್ಕೆ ಉಪಯೋಗಿಸಿಕೊಳ್ಳಿ.

2. ಈ ಘಟಕದ ಕೊನೆಯಲ್ಲಿ ನೀಡಿರುವ ಉತ್ತರದೊಂದಿಗೆ ನಿಮ್ಮ ಪ್ರಗತಿಯನ್ನು ಪರಿಶೀಲಿಸಿಕೊಳ್ಳಿ.

**1. ಮಾರ್ಕ್ಸ್‌ವಾದಿ ಪ್ರಜಾಪ್ರಭುತ್ವ ಸಿದ್ಧಾಂತದ ಪ್ರಸ್ತುತತೆಯನ್ನು ಕುರಿತು ಚರ್ಚಿಸಿ.**

........................................................................................................................

........................................................................................................................

........................................................................................................................

........................................................................................................................

........................................................................................................................

........................................................................................................................

........................................................................................................................

........................................................................................................................

........................................................................................................................

**2. ಮಾರ್ಕ್ಸ್‌ವಾದಿ ಸಿದ್ಧಾಂತವನ್ನು ಕುರಿತು ಟಿಪ್ಪಣಿ ಬರೆಯಿರಿ?**

........................................................................................................................

........................................................................................................................

........................................................................................................................

........................................................................................................................

........................................................................................................................

........................................................................................................................

........................................................................................................................

........................................................................................................................

........................................................................................................................

## 18.6 ಕಠಿಣ ಪದಗಳು

ಬಹುತ್ವವಾದ : ಪರಮಾಧಿಕಾರವು ರಾಜ್ಯಕ್ಕೆ ಸೀಮಿತವಲ್ಲ ಹಂಚಿಕೆಯಾಗಬೇಕು.

ಅಸಮಾನತೆ : ತಾರತಮ್ಯತೆ ಇರುವುದು

ಸಾಮರಸ್ಯ : ಹೊಂದಿಕೊಂಡಿರುವುದು

ಮಾನವತಾವಾದಿ : ಮಾನವರೆಲ್ಲರೂ ಒಂದೇ ಎಂಬುವ ಭಾವನೆ

## 18.7 ಕೆಲವು ಉಪಯುಕ್ತ ಗ್ರಂಥಗಳು

ಬ್ಯಾರಿ, ನಾರ್ಮನ್ - ಆನ್ ಇಂಟ್ರಡಕ್ಷನ್ ಟು ಮಾಡರ್ನ್ ಪೊಲಿಟಿಕಲ್ ಥಿಯರಿ

ಧಾಲ್. ಆರ್.ಎ - ಎ ಪ್ರಿಫೇಸ್ ಟು ಡೆಮಾಕ್ರಟಿಕ್ ಥಿಯರಿ

ಮುಖಿ .ಹೆಚ್.ಆರ್. - ಹಿಸ್ಟರಿ ಆಫ್ ಪೊಲಿಟಿಕಲ್ ಥಿಯರಿ

## 18.8 ನಿಮ ಪ್ರಗತಿ ಪರಿಶೀಲನೆಗೆ ಉತ್ತರಗಳು

<u>ನಿಮ್ಮ ಪ್ರಗತಿ ಪರಿಶೀಲನೆ</u> - 1

1. ವಿಭಾಗ 18.2 ನೋಡಿ
2. ವಿಭಾಗ 18.3 ನೋಡಿ

<u>ನಿಮ್ಮ ಪ್ರಗತಿ ಪರಿಶೀಲನೆ</u> - 2

1. ವಿಭಾಗ 18.4 ನೋಡಿ
2. ವಿಭಾಗ 18.4 ನೋಡಿ

# ಘಟಕ 19 ಪ್ರಜಾಪ್ರಭುತ್ವದ ಅಗತ್ಯಾಂಶಗಳು

## ರಚನೆ

19.0 ಉದ್ದೇಶಗಳು

19.1 ಪೀಠಿಕೆ

19.2 ಪ್ರಜಾಪ್ರಭುತ್ವದ ಅಗತ್ಯಾಂಶಗಳು

19.2.1 ಸಾಂಸ್ಥಿಕ ಅಗತ್ಯಾಂಶಗಳು

19.2.2 ಸ್ವಾತಂತ್ರ್ಯ ಮತ್ತು ಸಮಾನತೆಯ ತತ್ವ

19.2.3 ಬುದ್ಧಿವಂತ ಜನತೆ

19.2.4 ಪ್ರಜಾಪ್ರಭುತ್ವ ಚರ್ಚೆಯಿಂದ ಕೂಡಿದ ಸರ್ಕಾರ ವ್ಯವಸ್ಥೆ

19.2.5 ಸ್ವತಂತ್ರ ನ್ಯಾಯಾಂಗ ವ್ಯವಸ್ಥೆ

19.2.6 ಸಾರ್ವಜನಿಕ ಅಭಿಪ್ರಾಯ

19.2.7 ರಾಜಕೀಯ ಪಕ್ಷಗಳು ಮತ್ತು ಪ್ರಜಾಪ್ರಭುತ್ವ

19.2.8 ಉತ್ತಮ ವಿರೋಧಪಕ್ಷದ ಅವಶ್ಯಕತೆ

19.2.9 ಮೂಲಭೂತ ಹಕ್ಕುಗಳು

19.2.10 ಉತ್ತಮ ನಾಯಕತ್ವ

19.2.11 ಅಧಿಕಾರದ ವಿಕೇಂದ್ರೀಕರಣ

19.2.12 ಚುನಾವಣೆಗಳು

19.3 ವಿವಿಧ ಚಿಂತಕರುಗಳ ಅಭಿಪ್ರಾಯ

19.4 ಉಪಸಂಹಾರ

19.5 ಕಠಿಣ ಪದಗಳು

19.6 ಕೆಲವು ಉಪಯುಕ್ತ ಗ್ರಂಥಗಳು

19.7 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು

## 19.0 ಉದ್ದೇಶಗಳು

ಈ ಘಟಕದ ವಸ್ತು ವಿಷಯವನ್ನು ಅಧ್ಯಯನ ಮಾಡಿದ ನಂತರ ನೀವು

* ಪ್ರಜಾಪ್ರಭುತ್ವದ ಅಗತ್ಯಾಂಶಗಳನ್ನು ಪರಿಶೀಲಿಸಬಹುದು
* ಪ್ರಜಾಪ್ರಭುತ್ವದ ಅವಶ್ಯಕತೆಯನ್ನು ಚರ್ಚಿಸಬಹುದು
* ಪ್ರಜಾಪ್ರಭುತ್ವದ ಅಗತ್ಯಾಂಶಗಳ ಬಗೆಗೆ ಚಿಂತಕರುಗಳ ಅಭಿಪ್ರಾಯವನ್ನು ಪರೀಕ್ಷಿಸಬಹುದು

## 19.1 ಪೀಠಿಕೆ

ಪ್ರಜಾಪ್ರಭುತ್ವ ಎಂಬ ಪರಿಕಲ್ಪನೆಯು ಬಹುರೂಪಿಯಾಗಿದ್ದು, ಹಲವಾರು ಮೂಲಾಂಶಗಳನ್ನು ಒಳಗೊಳ್ಳುವ ಸಂಯುಕ್ತ ಪರಿಕಲ್ಪನೆಯೂ ಆಗಿದೆ. ಅದು ರಾಜಕೀಯ ಆದರ್ಶಗಳನ್ನು, ಆರ್ಥಿಕ ಮತ್ತು ಸಾಮಾಜಿಕ ಶಕ್ತಿಗಳನ್ನು, ನೈತಿಕ ತತ್ವಗಳನ್ನು, ಒಂದು ಬಗೆಯ ಸರ್ಕಾರ ಪದ್ಧತಿಯನ್ನು ಮತ್ತು ಒಂದು ಜೀವನ ವಿಧಾನವನ್ನೂ ಸೂಚಿಸುತ್ತದೆ.

ಪ್ರಜಾಪ್ರಭುತ್ವ ಇಂದು ಹೆಚ್ಚು ಜನಪ್ರಿಯತೆ ಹೊಂದಿರುವ ಸರ್ಕಾರ ವ್ಯವಸ್ಥೆಯಾಗಿದ್ದು ವಿಶ್ವದ ಬಹುತೇಕ ರಾಷ್ಟ್ರಗಳು ಪ್ರಜಾಪ್ರಭುತ್ವ ರಾಷ್ಟ್ರಗಳಾಗಿರುವುದು ಇದಕ್ಕೆ ನಿದರ್ಶನವಾಗಿದೆ. ಈ ರೀತಿ ಜನಪ್ರಿಯತೆ ಹೊಂದಿರುವ ಪ್ರಜಾಪ್ರಭುತ್ವ ವ್ಯವಸ್ಥೆಯು ಯಶಸ್ವಿಯಾಗಬೇಕಾದರೆ ಅದಕ್ಕೆ ಪೂರಕವಾಗಿ ಹಲವಾರು ಅಂಶಗಳು ಕಾರ್ಯನಿರ್ವಹಿಸಿದಾಗ ಮಾತ್ರ ಸಾಧ್ಯ. ಅಂತಹ ಮೌಲ್ಯಯುತ ಅಂಶಗಳನ್ನು ಈ ಕೆಳಕಂಡಂತೆ ಗುರುತಿಸಬಹುದಾಗಿದೆ.

## 19.2 ಪ್ರಜಾಪ್ರಭುತ್ವದ ಅಗತ್ಯಾಂಶಗಳು

### 19.2.1 ಸಾಂಸ್ಥಿಕ ಅಗತ್ಯಾಂಶಗಳು

ಪ್ರಜಾಪ್ರಭುತ್ವ ಪದ್ಧತಿ ಸಾಧ್ಯಾವಗುವ, ಅತ್ಯುತ್ತಮ ಸರ್ಕಾರ ಪದ್ಧತಿಯಾದರೂ, ಅದರ ಯಶಸ್ವಿ ಕಾರ್ಯಾಚರಣೆಗೆ ಇನ್ನು ಹಲವಾರು ಅಗತ್ಯಾಂಶಗಳು ಇರಬೇಕಾಗುತ್ತದೆ. ಇವುಗಳೆಂದರೆ, ಪ್ರಜಾಪ್ರಭುತ್ವದ ಹಂಬಲ, ನಿರಂತರ ಜಾಗೃತಿ, ಸಹಕಾರ, ಸಹಿಷ್ಣುತೆ ಮತ್ತು ಪರಸ್ಪರ ಅರಿವು, ಸಾರ್ವಜನಿಕ ಸಮ್ಮತಿ ಮತ್ತು ವಿಮರ್ಶೆ, ಸುಶಿಕ್ಷಿತ ಮತದಾರ ವರ್ಗ, ಉತ್ತಮ ನಾಯಕತ್ವ , ಮುಕ್ತ ಮತ್ತು ನಿರ್ಭೀತ ಪತ್ರಿಕೆಗಳು, ಸಮರ್ಪಕ ಜೀವನ ನಿರ್ವಹಣಾ ಮಟ್ಟ ಉತ್ತಮ ಸಂವಿಧಾನ ಮತ್ತು ಎಲ್ಲಕ್ಕಿಂತ ಮಿಗಿಲಾಗಿ ಪ್ರಜಾಸತ್ತಾತ್ಮಕ ಸಮಾಜ.

ಪ್ರಜಾಪ್ರಭುತ್ವವು ವಾಸ್ತವವಾಗಿ ಮತ್ತು ಪರಿಣಾಮಕಾರಿಯಾಗಿ ಅಸ್ತಿತ್ವದಲ್ಲಿರಲು ಕೆಳಕಂಡ ಕೆಲವು ಸಾಂಸ್ಥಿಕ ಅಗತ್ಯಗಳಿರಬೇಕಾಗುತ್ತದೆ.

* ಒಂದು ಲಿಖಿತ ಸಂವಿಧಾನ
* ಜನತೆಯ ಆಶೋತ್ತರಗಳನ್ನು ಪ್ರತಿಬಿಂಬಿಸುವ ಶಾಸಕಾಂಗ
* ನಿರ್ಭೀತ ಮತ್ತು ಸ್ವತಂತ್ರ ನ್ಯಾಯಾಂಗ
* ಉತ್ತಮವಾಗಿ ಕಾರ್ಯ ನಿರ್ವಹಿಸುವ ರಾಜಕೀಯ ಪಕ್ಷಗಳು

* ಪರಿಣಾಮಕಾರಿಯಾದ ವಿರೋಧಪಕ್ಷ
* ಸ್ಥಳೀಯ ಸ್ವಯಂಮಾಡಳಿತ ಸಂಸ್ಥೆಗಳು
* ಮುಕ್ತ ಮತ್ತು ಸ್ವತಂತ್ರ ಪತ್ರಿಕೆಗಳು
* ಶಿಕ್ಷಣ ಪಡೆದ ಮತ್ತು ರಾಜಕೀಯ ಪ್ರಜ್ಞೆಯುಳ್ಳ ಮತದಾರ ವರ್ಗ

### 19.2.2 ಸ್ವಾತಂತ್ರ್ಯ ಮತ್ತು ಸಮಾನತೆಯ ತತ್ವ

ಪ್ರಜಾಪ್ರಭುತ್ವ ವ್ಯವಸ್ಥೆಯು ಯಶಸ್ವಿಯಾಗಬೇಕಾದರೆ ಸ್ವಾತಂತ್ರ್ಯ ಮತ್ತು ಸಮಾನತೆ ಹೆಚ್ಚು ಪ್ರಮುಖವೆನಿಸುತ್ತವೆ. ಹೇಗೆಂದರೆ ಪ್ರಜಾಪ್ರಭುತ್ವವೆಂದರೆ ಇನ್ನೊಂದುಅರ್ಥದಲ್ಲಿ ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ಒಳಗೊಂಡಿರುವ ಒಂದು ಅರ್ಥಪೂರ್ಣ ವ್ಯವಸ್ಥೆಯೇ ಆಗಿದೆ ಎಂದು ಹೇಳಬಹುದು.

ಇದಕ್ಕೆ ಸಂಬಂಧಿಸಿದಂತೆ ವಿಶ್ವದ ಪ್ರತಿಯೊಂದು ಪ್ರಜಾಪ್ರಭುತ್ವ ರಾಷ್ಟ್ರಗಳು ಸ್ವಾತಂತ್ರ್ಯ ಮತ್ತು ಸಮಾನತೆಯ ತತ್ವಗಳನ್ನಾಧರಿಸಿ ತಮ್ಮ ಸಂವಿಧಾನಗಳನ್ನು ರಚಿಸಿಕೊಂಡಿವೆ. ಅಂದರೆ ಯಾವುದೇ ಒಂದು ರಾಷ್ಟ್ರದಲ್ಲಿ ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ ಪ್ರಜಾಪ್ರಭುತ್ವದ ಮೂಲ ತಿರುಳಂತಿರುವ ಸ್ವಾತಂತ್ರ್ಯ ಮತ್ತು ಸಮಾನತೆ ತತ್ವಗಳು ಹೆಚ್ಚು ಅವಶ್ಯಕ. ಸ್ವಾತಂತ್ರ್ಯ ಪರಿಕಲ್ಪನೆಗೆ ಸಂಬಂಧಿಸಿದಂತೆ ಪ್ರಾಚೀನ ಕಾಲದಿಂದ ಇಂದಿನವರೆಗೆ ಹಲವಾರು ಪ್ರಮುಖ ರಾಜಕೀಯ ಚಿಂತಕರುಗಳು ಸ್ವಾತಂತ್ರ್ಯದ ಪ್ರಾಮುಖ್ಯತೆಯ ಬಗ್ಗೆ ಹೇಳಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ವಿಭಿನ್ನ ರೀತಿಯ ಸ್ವಾತಂತ್ರ್ಯಗಳ ಬಗ್ಗೆ ತಿಳಿಸಿದ್ದಾರೆ. ಅವುಗಳೆಂದರೆ

* ನೈಸರ್ಗಿಕ ಸ್ವಾತಂತ್ರ್ಯ
* ನಾಗರೀಕ ಸ್ವಾತಂತ್ರ್ಯ
* ರಾಜಕೀಯ ಸ್ವಾತಂತ್ರ್ಯ
* ಆರ್ಥಿಕ ಸ್ವಾತಂತ್ರ್ಯ

*** ನೈಸರ್ಗಿಕ ಸ್ವಾತಂತ್ರ್ಯ**

ನೈಸರ್ಗಿಕ ಸ್ವಾತಂತ್ರ್ಯವೆಂದರೆ ಜಾನ್ ಲಾಕ್ ಹೇಳಿರುವಂತೆ ಪ್ರತಿಯೊಬ್ಬ ಮನುಷ್ಯನು ಹುಟ್ಟಿನಿಂದಲೇ ನಿಸರ್ಗದತ್ತವಾಗಿ ಸ್ವಾತಂತ್ರ್ಯವನ್ನು ಪಡೆದಿರುತ್ತಾನೆ. ಅಂದರೆ ಮನುಷ್ಯ ಹುಟ್ಟಿನಿಂದಲೇ ಜೀವಿಸುವ ಸ್ವಾತಂತ್ರ್ಯ, ಸಂಚಾರ ಸ್ವಾತಂತ್ರ್ಯ ಪಡೆದಿದ್ದು ಇವುಗಳ ಮೇಲೆ ಯಾರೊಬ್ಬರ ನಿರ್ಬಂಧಗಳು ಇರಬಾರದೆಂದು ತಿಳಿಸಿದ್ದಾನೆ. ಈ ಹಿನ್ನೆಲೆಯಲ್ಲಿ ಆಧುನಿಕ ಯುಗದಲ್ಲಿ ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದಲ್ಲಿ ಜಾನ್‌ಲಾಕ್ ತಿಳಿಸಿರುವಂತಹ ಸ್ವಾತಂತ್ರ್ಯ ಪರಿಕಲ್ಪನೆ ಹೆಚ್ಚು ಅವಶ್ಯಕ.

*** ನಾಗರೀಕ ಸ್ವಾತಂತ್ರ್ಯ**

ನಾಗರೀಕ ಸ್ವಾತಂತ್ರ್ಯವೆಂದರೆ ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಯು ಮುಕ್ತವಾಗಿ ತನಗೆ ಇಚ್ಛೆಬಂದಂತೆ ಬೇರೊಬ್ಬರಿಗೆ ತೊಂದರೆ ನೀಡದ ರೀತಿಯಲ್ಲಿ ಜೀವಿಸುವಂತಹ ಮುಕ್ತ ವಾತಾವರಣವನ್ನೇ ನಾಗರೀಕ ಸ್ವಾತಂತ್ರ್ಯವೆಂದು ಹೇಳಬಹುದು. ಅಂದರೆ ಯಾವುದೇ ಒಬ್ಬ ವ್ಯಕ್ತಿ ಯಾವುದೇ ರೀತಿಯ ನಿರ್ಬಂಧಗಳಿಗೆ ಒಳಪಡದೇ ಸಮಾಜದಲ್ಲಿ ಜೀವಿಸುವಂತಹ ಸ್ಥಿತಿಯು ಇದ್ದಾಗ ಮಾತ್ರ

ಪ್ರಜಾಪ್ರಭುತ್ವ ವ್ಯವಸ್ಥೆ ಯಶಸ್ವಿಯಾಗಲು ಸಾಧ್ಯ.

* **ರಾಜಕೀಯ ಸ್ವಾತಂತ್ರ್ಯ**

ರಾಜಕೀಯ ಸ್ವಾತಂತ್ರ್ಯವೆಂದರೆ ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಯು ತನ್ನ ರಾಷ್ಟ್ರದ ರಾಜಕೀಯ ವ್ಯವಸ್ಥೆಯಲ್ಲಿ ಭಾಗವಹಿಸಲು ಇರುವಂತಹ ಮುಕ್ತ ವಾತಾವರಣವನ್ನೇ ರಾಜಕೀಯ ಸ್ವಾತಂತ್ರ್ಯವೆಂದು ಹೇಳಬಹುದು. ಅಂದರೆ ಪ್ರಜಾಪ್ರಭುತ್ವ ವ್ಯವಸ್ಥೆಯು ಚುನಾವಣೆಗಳ ಮೇಲೆ ಅವಲಂಬಿತವಾಗಿರುತ್ತದೆ. ಈ ಚುನಾವಣೆಗಳು ಯಶಸ್ವಿಯಾಗಬೇಕಾದರೆ ದೇಶದ ಪ್ರತಿಯೊಬ್ಬ ಪ್ರಜೆಯು ತನ್ನ ವಿವೇಚನೆಗೆ ತಕ್ಕಂತೆ ಮತ ಚಲಾಯಿಸುವಂತಹ ಮುಕ್ತ ರಾಜಕೀಯ ಸನ್ನಿವೇಶವಿದ್ದಾಗ ಮಾತ್ರ ಚುನಾವಣೆಗಳು ಯಶಸ್ವಿಯಾಗಲು ಸಾಧ್ಯ. ಹಾಗೆಯೇ ಚುನಾವಣೆಯಲ್ಲಿ ಅಭ್ಯರ್ಥಿಯಾಗಿ ಭಾಗವಹಿಸಲು ಸಹ ಮುಕ್ತ ಅವಕಾಶಗಳು ಇರಬೇಕು. ಇಂತಹ ವ್ಯವಸ್ಥೆಯು ಪ್ರಜಾಪ್ರಭುತ್ವಕ್ಕೆ ಪೂರಕವಾಗಿ ಕಾರ್ಯ ನಿರ್ವಹಿಸಬಲ್ಲದು.

* **ಆರ್ಥಿಕ ಸ್ವಾತಂತ್ರ್ಯ**

ಆರ್ಥಿಕ ಸ್ವಾತಂತ್ರ್ಯವೆಂದರೆ ಸಮಾಜದಲ್ಲಿನ ಪ್ರತಿಯೊಬ್ಬ ಪ್ರಜೆಯು ತನಗೆ ಇಚ್ಚೆಬಂದಂತಹ ಕ್ಷೇತ್ರದಲ್ಲಿ ದುಡಿಯುವಂತಹ ಅವಕಾಶಗಳು ಇರಬೇಕು. ಅಂದರೆ ಯಾವುದೇ ಒಬ್ಬ ವ್ಯಕ್ತಿ ಯಾವುದೇ ಉದ್ಯೋಗವನ್ನಾಗಲಿ ಪಡೆಯುವಂತಹ ಸ್ವಾತಂತ್ರ್ಯ ಇದ್ದಾಗ ಮಾತ್ರ ಸಮಾಜದಲ್ಲಿ ಆರ್ಥಿಕ ಸಮಾನತೆಯನ್ನು ತರುವ ಮೂಲಕ ಪ್ರಜಾಪ್ರಭುತ್ವವನ್ನು ಯಶಸ್ವಿಗೊಳಿಸಲು ಸಾಧ್ಯವೆನಿಸುತ್ತದೆ.

ಪ್ರಜಾಪ್ರಭುತ್ವದ ಯಶಸ್ವಿಗೆಸ್ವಾತಂತ್ರ್ಯ ಎಷ್ಟು ಪ್ರಮುಖವೋ ಸಮಾನತೆಯ ತತ್ವವು ಸಹ ಅಷ್ಟೇ ಪ್ರಮುಖವೆನಿಸುತ್ತದೆ. ಅಂದರೆ ಸಮಾಜದಲ್ಲಿ ಪ್ರತಿಯೊಬ್ಬ ಪ್ರಜೆಯು ಸಹ ಎಲ್ಲ ರೀತಿಯಲ್ಲಿ ಸಮಾನ ಅವಕಾಶಗಳನ್ನು ಪಡೆಯುವ ಮೂಲಕ ರಾಜಕೀಯವಾಗಿ ಆರ್ಥಿಕವಾಗಿ, ಹಾಗೂ ಸಾಮಾಜಿಕವಾಗಿ ಸಮಾನತೆಯನ್ನು ಪಡೆದಾಗ ಮಾತ್ರ ಪ್ರಜಾಪ್ರಭುತ್ವ ವ್ಯವಸ್ಥೆ ಹೆಚ್ಚು ಅರ್ಥಪೂರ್ಣವೆನಿಸುತ್ತದೆ.

## 19.2.3 ಪ್ರಜ್ಞಾವಂತ ಜನತೆ

ಪ್ರಜಾಪ್ರಭುತ್ವವು ಯಶಸ್ವಿಯಾಗಬೇಕಾದರೆ ರಾಷ್ಟ್ರದ ಜನತೆ ಹೆಚ್ಚು ಜಾಗೃತರಾಗಿದ್ದಾಗ ಮಾತ್ರ ಸಾಧ್ಯ. ಹೇಗೆಂದರೆ ಜನತೆ ರಾಷ್ಟ್ರದ ರಾಜಕೀಯದಲ್ಲಿ ದೈನಂದಿನ ಚಟುವಟಿಕೆಗಳಲ್ಲಿ ಆಗುವ ಏರುಪೇರುಗಳನ್ನು ಗುರುತಿಸುವಂತಹ ಬುದ್ಧಿವಂತಿಕೆಯನ್ನು ಹೊಂದಿರಬೇಕು. ಅಂದರೆ ಪ್ರಸ್ತುತದಲ್ಲಿರುವ ಸರ್ಕಾರ ಯಾವ ರೀತಿ ಪ್ರಜೆಗಳಿಗೆ ಪೂರಕವಾದಂತಹ ಆಡಳಿತವನ್ನು ನಡೆಯುತ್ತಿದೆ ಎಂಬುದನ್ನು ತಿಳಿಯುವುದರೊಂದಿಗೆ ಚುನಾವಣೆಯ ಸಂದರ್ಭದಲ್ಲಿ ಸಂಬಂಧಿಸಿದ ಸರ್ಕಾರದ ಅಸ್ತಿತ್ವವನ್ನುನಿರ್ಧರಿಸುವಂತಹ ಬುದ್ಧಿವಂತ ಜನತೆಯಿದ್ದಾಗ ಮಾತ್ರ ಪ್ರಜಾಪ್ರಭುತ್ವ ಹೆಚ್ಚು ಸಮರ್ಥವೆನಿಸುತ್ತದೆ.

## 19.2.4 ಪ್ರಜಾಪ್ರಭುತ್ವ ಚರ್ಚೆಯಿಂದ ಕೂಡಿದ ಸರ್ಕಾರ ವ್ಯವಸ್ಥೆ

ಪ್ರಜಾಪ್ರಭುತ್ವದಲ್ಲಿ ಚರ್ಚೆಗೆ ಮುಕ್ತ ಅವಕಾಶವನ್ನು ಕಲ್ಪಿಸಲಾಗಿದ್ದು ಸರ್ಕಾರದ ಮಟ್ಟದಲ್ಲಿಪ್ರತಿಯೊಂದು ಅಂಶಗಳು ಹೆಚ್ಚು ಹೆಚ್ಚು ಚರ್ಚೆಗೆ ಒಳಪಡುವ ಮೂಲಕ ಅನುಷ್ಠಾನಕ್ಕೆ ಬಂದಾಗ ಮಾತ್ರ ಯೋಜನೆಗಳು ನಿಯಮಗಳು ಕಡಿಮೆ ದೋಷಮುಕ್ತವಾಗಿ ರೂಪಿತಗೊಳ್ಳುವ ಮೂಲಕ ಜನತೆಗೆ ಹೆಚ್ಚು ಪೂರಕವಾಗಿ ಕಾರ್ಯ ನಿರ್ವಹಿಸುವುದರೊಂದಿಗೆ ಪ್ರಜಾಪ್ರಭುತ್ವವನ್ನು ಯಶಸ್ವಿಯಾಗಿ ಮುನ್ನಡೆಸಬಹುದಾಗಿದೆ.

## 19.2.5 ಸ್ವತಂತ್ರ ನ್ಯಾಯಾಂಗ ವ್ಯವಸ್ಥೆ

ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ ರಾಷ್ಟ್ರದ ಪ್ರತಿಯೊಬ್ಬ ಪ್ರಜೆಗೂ ನ್ಯಾಯ ದೊರಕುವಂತಹ ಸ್ಥಿತಿ ಇರಬೇಕು.

ಪ್ರತಿಯೊಬ್ಬರಿಗೂ ಮುಕ್ತವಾಗಿ ನ್ಯಾಯ ದೊರೆಯಬೇಕಾದರೆ ಆ ರಾಷ್ಟ್ರವು ಸ್ವತಂತ್ರ ನ್ಯಾಯಾಂಗ ವ್ಯವಸ್ಥೆಯನ್ನು ಹೊಂದಿದ್ದಾಗ ಮಾತ್ರ ಸಾಧ್ಯ. ಅಂದರೆ ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ ಆ ರಾಷ್ಟ್ರದಲ್ಲಿರುವ ನ್ಯಾಯಾಂಗದ ಮೇಲೆ ಯಾವುದೇ ರೀತಿಯ ರಾಜಕೀಯ ಹಾಗೂ ಸಂವಿಧಾನಿಕ ಒತ್ತಡಗಳು ಇಲ್ಲದೆ ಮುಕ್ತವಾಗಿ ಕಾರ್ಯನಿರ್ವಹಿಸುವಂತಹ ವಾತಾವರಣವಿದ್ದಾಗ ಮಾತ್ರ ಪ್ರಜಾಪ್ರಭುತ್ವ ಯಶಸ್ವಿಯಾಗಲು ಸಾಧ್ಯ. ಸ್ವತಂತ್ರ ನ್ಯಾಯಂಗದ ಗೈರು ಹಾಜರಿಯಲ್ಲಿ ಒಂದು ರಾಷ್ಟ್ರ ಸೈದ್ಧಾಂತಿಕವಾಗಿ ಪ್ರಜಾಪ್ರಭುತ್ವ ರಾಷ್ಟ್ರವಾಗಿದ್ದರೂ ಸಹ ಕಾರ್ಯಚರಣೆಯಲ್ಲಿ ಅದು ಒಂದು ಸರ್ವಾಧಿಕಾರ ರಾಷ್ಟ್ರವಾಗಿರುತ್ತದೆ.

### 19.2.6 ಸಾರ್ವಜನಿಕ ಅಭಿಪ್ರಾಯ

ಪ್ರಜಾಪ್ರಭುತ್ವದ ಯಶಸ್ವಿಯು ಆ ರಾಷ್ಟ್ರದ ಜನತೆಯು ಹೊಂದಿರುವಂತಹ ಅಭಿಪ್ರಾಯದ ಮೇಲೆ ನಿರ್ಧಾರಿತವಾಗುತ್ತದೆ. ಅಂದರೆ ಯಾವುದೇ ಒಂದು ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಅಲ್ಲಿನ ಸರ್ಕಾರ ವ್ಯವಸ್ಥೆಯು ಅಸ್ತಿತ್ವ ಸಾರ್ವಜನಿಕ ಅಭಿಪ್ರಾಯದಿಂದ ನಿಯಂತ್ರಿಸಲ್ಪಟ್ಟಿರುತ್ತದೆ. ಇಂತಹ ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವಲ್ಲಿ ಹಲವಾರು ಅಂಶಗಳು ಸಹಾಯಕ ನಿಯೋಗಿಗಳಂತೆ ಕಾರ್ಯನಿರ್ವಹಿಸುತ್ತವೆ. ಅವುಗಳೆಂದರೆ

* ಜನತೆ
* ಪ್ರಚಾರ
* ಮುದ್ರಣ
* ಸಾರ್ವಜನಿಕ ವೇದಿಕೆಗಳು
* ರಾಜಕೀಯ ಪಕ್ಷಗಳು
* ಶಾಸಕಾಂಗ
* ಸಮೂಹ ಮಾಧ್ಯಮಗಳು
* ಒತ್ತಡ ಗುಂಪುಗಳು
* ಹಿತಾಸಕ್ತಿ ಗುಂಪುಗಳು
* ಗೆಳೆಯರ ಬಳಗ

ಇತ್ಯಾದಿ ಅಂಶಗಳು ಒಂದು ರಾಷ್ಟ್ರದ ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವಲ್ಲಿ ಕಾರ್ಯಪ್ರವೃತ್ತರಾಗಿದ್ದು ಇವುಗಳ ಮೂಲಕ ಸಮರ್ಥ ಸಾರ್ವಜನಿಕ ಅಭಿಪ್ರಾಯ ರೂಪಗೊಂಡಾಗ ಮಾತ್ರ ಪ್ರಜಾಪ್ರಭುತ್ವ ಹೆಚ್ಚು ಯಶಸ್ವಿಯಾಗಲು ಸಾಧ್ಯ.

### 19.2.7 ರಾಜಕೀಯ ಪಕ್ಷಗಳು ಮತ್ತು ಪ್ರಜಾಪ್ರಭುತ್ವ

ಪ್ರಜಾಪ್ರಭುತ್ವದಲ್ಲಿ ರಾಜಕೀಯ ಪಕ್ಷ ವ್ಯವಸ್ಥೆಯಿಲ್ಲದೆ ಇರಲು ಸಾಧ್ಯವಿಲ್ಲ. ಆಧುನಿಕ ಸರ್ಕಾರ ಪದ್ಧತಿಯಲ್ಲಿ ರಾಜಕೀಯ ಪಕ್ಷಗಳು ಹೆಚ್ಚು ಮಹತ್ವವನ್ನು ಪಡೆದಿದೆ. ಈ ಪಕ್ಷಗಳು ಪ್ರಜಾಪ್ರಭುತ್ವದ ಬಂಡಿಯ ಗಾಲಿಗಳಂತೆ ಎಂದು ಹೇಳಬಹುದು. ಪ್ರಜಾಪ್ರಭುತ್ವದ ಅಳಿವು ರಾಜಕೀಯ ಪಕ್ಷ ಅವಲಂಬಿಸಿದೆ. ಇವು ಪ್ರಜಾಪ್ರಭುತ್ವದಲ್ಲಿ ಸರ್ಕಾರದೊಡನೆ ಸಕ್ರಿಯವಾಗಿ ಪಾಲ್ಗೊಂಡು

ಜನರ ಇಚ್ಛೆ ನಿರ್ಧರಿಸುತ್ತವೆ. ಇವು ಜನಸಾಮಾನ್ಯರಿಗೆ ಶಿಕ್ಷಣ ನೀಡುವುದರ ಮೂಲಕ ಸಾರ್ವಜನಿಕ ನಿಯಮಗಳನ್ನು ರೂಪಿಸುವಾಗ ಎಲ್ಲರಿಗೂ ಅವಕಾಶಗಳನ್ನು ಒದಗಿಸಿಕೊಡುತ್ತದೆ. ಅಥವಾ ಪಕ್ಷಗಳು ನಮಗೆ ಕಾಣದ ರೀತಿಯಲ್ಲಿ ಸಾಮಾನ್ಯ ಜನತೆ ಮತ್ತು ಸರ್ಕಾರದ ಪ್ರತಿನಿದಿಗಳ ನಡುವೆ ಕೆಲಸವನ್ನು ಮಾಡುತ್ತವೆ.

ಪ್ರಜಾಪ್ರಭುತ್ವದ ಯಶಸ್ಸಿ ಆ ರಾಷ್ಟ್ರವು ಹೊಂದಿರುವ ಪಕ್ಷಪದ್ಧತಿಯನ್ನು ಅವಲಂಬಿಸಿರುತ್ತದೆ. ಅಂದರೆ ಪಕ್ಷಪದ್ಧತಿಯಲ್ಲಿ ಏಕಪಕ್ಷಪದ್ಧತಿ, ದ್ವಿಪಕ್ಷಪದ್ಧತಿ ಹಾಗು ಬಹುಪಕ್ಷ ಪದ್ಧತಿಗಳೆಂಬ ವಿಭಿನ್ನ ವಿಧಾನಗಳಿದ್ದು ಜಗತ್ತಿನ ಪ್ರಜಾಪ್ರಭುತ್ವ ರಾಷ್ಟ್ರಗಳು ತಮಗೆ ಪೂರಕವಾದಂತಹ ಪಕ್ಷಪದ್ದತಿಯನ್ನು ಅಳವಡಿಸಿಕೊಂಡಿವೆ. ದ್ವಿಪಕ್ಷಪದ್ಧತಿಗೆ ಸಂಬಂಧಿಸಿದಂತೆ ಹೇಳುವುದಾದರೆ ದ್ವಿಪಕ್ಷಪದ್ಧತಿ ಹೊಂದಿರುವ ರಾಷ್ಟ್ರಗಳಲ್ಲಿ ಸರ್ಕಾರದ ಆಡಳಿತ ಸ್ಥಿರವಾಗಿದ್ದು ಹೆಚ್ಚು ಸಮರ್ಥವಾದ ಆಡಳಿತವನ್ನು ಒದಗಿಸುವ ಸಾಧ್ಯತೆಗೆ ಹೆಚ್ಚು ಅವಕಾಶವಿರುತ್ತದೆ. ಉದಾ: ಅಮೇರಿಕಾ, ಬ್ರಿಟನ್ ಈ ರಾಷ್ಟ್ರಗಳು ದ್ವಿಪಕ್ಷಪದ್ಧತಿಯನ್ನು ಹೊಂದಿದ್ದು ಅಲ್ಲಿನ ಸ್ಥಿರಾಡಳಿತವನ್ನು ಗಮನಿಸಬಹುದಾಗಿದೆ.

ಹಾಗೆಯೇ ಬಹುಪಕ್ಷಪದ್ಧತಿ ಸಂಬಂಧಿಸಿದಂತೆ ಹೇಳುವುದಾದರೆ ಬಹುಪಕ್ಷಪದ್ಧತಿಯಲ್ಲಿ ಎರಡಕ್ಕಿಂತ ಹೆಚ್ಚು ಪಕ್ಷಗಳು ಅಸ್ತಿತ್ವದಲ್ಲಿದ್ದು ಜನತೆಗೆ ಹೆಚ್ಚು ಆಯ್ಕೆಯ ಸ್ವಾತಂತ್ರ್ಯಕ್ಕೆ ಅವಕಾಶ ದೊರೆದಂತಾಗುತ್ತದೆ. ಆದರೆ ಬಹುಪಕ್ಷಪದ್ಧತಿ ಹೊಂದಿರುವ ರಾಷ್ಟ್ರಗಳಲ್ಲಿ ಹೆಚ್ಚು ಸ್ಥಿರತೆಯಿಂದ ಕೂಡಿದ ಆಡಳಿತವನ್ನು ನೀಡುವುದು ಕಷ್ಟಸಾಧ್ಯದ ವಿಷಯ. ಉದಾ: ಭಾರತ ಮತ್ತು ಫ್ರಾನ್ಸ್ ಇವುಗಳು ಬಹುಪಕ್ಷಪದ್ಧತಿಯನ್ನು ಹೊಂದಿದ್ದು ಈ ರಾಷ್ಟ್ರಗಳಲ್ಲಿನ ಸರ್ಕಾರಗಳ ಅಸ್ತಿರತೆಯಿಂದ ಕಾರ್ಯನಿರ್ವಹಿಸಿರುವುದನ್ನು ಗುರುತಿಸಬಹುದು.

ಏಕಪಕ್ಷಪದ್ಧತಿಗೆ ಸಂಬಂಧಿಸಿದಂತೆ ಯಾವುದೇ ಒಂದು ರಾಷ್ಟ್ರ ಏಕಪಕ್ಷಪದ್ಧತಿಯನ್ನು ಹೊಂದಿದ್ದರೆ ಅದನ್ನು ಪ್ರಜಾಪ್ರಭುತ್ವ ರಾಷ್ಟ್ರ ಎಂದು ಪರಿಪೂರ್ಣವಾಗಿ ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಕಾರಣ ಈ ವ್ಯವಸ್ಥೆಯಲ್ಲಿ ಜನತೆಯ ಆಯ್ಕೆಯ ಸ್ವಾತಂತ್ರ್ಯ ಮೊಟಕುಗೊಳ್ಳುವುದರೊಂದಿಗೆ ಇಡೀ ಪ್ರಜಾಪ್ರಭುತ್ವದ ವ್ಯವಸ್ಥೆಗೆ ಹೆಚ್ಚು ಅರ್ಥವಿಲ್ಲದಂತಾಗಿ ಇದೊಂದು ಸರ್ವಾಧಿಕಾರ ಆಡಳಿತ ವ್ಯವಸ್ಥೆಯಾಗಿ ಕಾರ್ಯನಿರ್ವಹಿಸುವ ಸಾಧ್ಯತೆ ಹೆಚ್ಚಿರುತ್ತದೆ. ಆದ್ದರಿಂದ ಯಾವುದೇ ಒಂದು ರಾಷ್ಟ್ರದಲ್ಲಿ ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ ಆ ರಾಷ್ಟ್ರವು ಹೊಂದಿರುವ ಪಕ್ಷಪದ್ಧತಿಯು ಸಹ ಪ್ರಮುಖವಾಗಿರುತ್ತದೆ.

ರಾಜಕೀಯ ಪಕ್ಷಗಳು ರಾಷ್ಟ್ರವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವ ಮಧ್ಯವರ್ತಿಗಳೆಂದು ಹೇಳಬಹುದು. ಯಾವುದೇ ಒಂದು ವ್ಯವಸ್ಥೆಯಲ್ಲಿ ಒಂದೇ ರೀತಿಯ ಪಕ್ಷವಿದ್ದರೆ ಅಲ್ಲಿ ಆಡಳಿತ ದಕ್ಷವಾಗಿರುವುದಿಲ್ಲಾ. ಕಾರಣ ಪ್ರತಿಪಕ್ಷಗಳಿದ್ದಲ್ಲಿ ಆಡಳಿತ ಪಕ್ಷ ಅಧ್ಯಕ್ಷತೆ ಮತ್ತು ದುಂದುಗಾರಿಕೆಯಿಂದ ಕೂಡಿದ್ದು ರಾಷ್ಟ್ರದ ಪ್ರಗತಿಗೆ ಮಾರಕವಾಗುವುದರ ಮೂಲಕ ಕೇವಲ ಪಕ್ಷದ ಹಿತದೃಷ್ಟಿಯನ್ನು ಕಾಪಾಡಲು ಕಾರ್ಯಕ್ರಮ ಕೈಗೊಳ್ಳಬಹುದು. ಆದುದರಿಂದ ಅಲ್ಲಿ ಪ್ರಬಲವಾದ ವಿರೋಧ ಪಕ್ಷದ ಅವಶ್ಯಕತೆ ಇರುತ್ತದೆ.

ವಿರೋಧ ಪಕ್ಷಗಳು ಆಡಳಿತ ಪಕ್ಷ ರಾಷ್ಟ್ರದಲ್ಲಿ ಕೈಗೊಂಡ ಕೆಲವು ಕಾರ್ಯಕ್ರಮಗಳು ಸರಿಯಾಗಿವೆಯೇ ಎಂದು ವಿಮರ್ಶಿಸುವುದರ ಮೂಲಕ ಸಾಮಾನ್ಯ ಜನತೆಗೆ ಆಡಳಿತ ಪಕ್ಷದ ಲೋಪದೋಷಗಳನ್ನು ತಿಳಿಸುವುದರ ಮೂಲಕ ಮುಂದಿನ ಚುನಾವಣೆಯಲ್ಲಿ ಜನತೆ ಸರಿಯಾಗಿ ತೀರ್ಮಾನ ಕೈಗೊಳ್ಳುವಂತೆ ಮಾಡುತ್ತದೆ. ಒಟ್ಟಿನಲ್ಲಿ ರಾಜಕೀಯ ಪಕ್ಷಗಳು ಇರುವುದರಿಂದ ಯಾವುದೇ ಸರ್ಕಾರವು ನಿರಂಕುಶವಾಗಿ ವರ್ತಿಸುವುದಿಲ್ಲ. ಗಾಂಧೀಜಿ ಮತ್ತು ಜಯಪ್ರಕಾಶ್ ನಾರಾಯಣ ಪಕ್ಷಗಳಿಲ್ಲದ ಸರ್ಕಾರ ಇರಬೇಕೆಂದು ಹೇಳಿದ್ದರು. ಆದರೆ ಇವರ ಪ್ರಕಾರ ರಾಜಕೀಯ ಪಕ್ಷಗಳು ಅನಿಷ್ಟವಾಗಿರುತ್ತವೆ. ಆಧುನಿಕ ಕಾಲದಲ್ಲಿ ಪ್ರಜಾಪ್ರಭುತ್ವದ ಯಶಸ್ಸು ಮುಖ್ಯವಾಗಿ ರಾಜಕೀಯ ಪಕ್ಷಗಳನ್ನು ಅವಲಂಬಿಸಿದೆ ಎಂದು ಹೇಳಬಹುದು.

ರಾಜಕೀಯ ಪಕ್ಷಗಳು ರಾಷ್ಟ್ರದ ಎಲ್ಲಾ ಮುಗ್ಧ ಜನರಿಗೂ ಸಹ ಶಿಕ್ಷಣವನ್ನು ನೀಡುತ್ತವೆ. ರಾಜಕೀಯ ಪಕ್ಷಗಳು ಚುನಾವಣೆಯ ಸಂದರ್ಭದಲ್ಲಿ ಪ್ರಕಟಿಸಿದ ಚುನಾವಣೆ ಪ್ರಣಾಳಿಕೆಗಳಿಂದ ಜನರನ್ನು ಎಚ್ಚರಿಸುವುದರ ಮೂಲಕ ಆ ಪಕ್ಷವನ್ನು ಸಹ ಗಮನಿಸುವಂತೆ ಮಾಡುತ್ತದೆ. ರಾಜಕೀಯ ಪಕ್ಷಗಳು ದೇಶದ ನಾನಾ ಪ್ರದೇಶದ ಜನರನ್ನು ಪ್ರತಿನಿಧಿಸುವುದರಿಂದ ಅವು ದೇಶದ ಸಮಸ್ಯೆಗಳನ್ನು ಕುರಿತು ಚರ್ಚಿಸಿ ಅದಕ್ಕೆ ಸರಿಯಾದ ಪರಿಹಾರವನ್ನು ಕಂಡುಕೊಳ್ಳುವುದರ ಮೂಲಕ ರಾಷ್ಟ್ರ ಕಲ್ಯಾಣಕ್ಕೆ ನಾಂದಿಯಾಗುತ್ತದೆ.

* ರಾಜಕೀಯ ಪಕ್ಷಗಳು ಸಾರ್ವಜನಿಕರಿಗೆ ರಾಜಕೀಯ ಶಿಕ್ಷಣ ನೀಡುತ್ತವೆ.
* ಪ್ರಜಾಪ್ರಭುತ್ವದ ಬದುಕು ಮತ್ತು ಸಾವು ರಾಜಕೀಯ ಪಕ್ಷಗಳ ಮೇಲೆ ನಿಂತಿದೆ.
* ಸಾರ್ವಜನಿಕರು ತಮ್ಮ ಅಭಿಪ್ರಾಯವನ್ನು ಸರ್ಕಾರಕ್ಕೆ ರಾಜಕೀಯ ಪಕ್ಷಗಳ ಮೂಲಕ ತಿಳಿಸುತ್ತಾರೆ.
* ಕಾನೂನು ರಚನೆಯಲ್ಲಿ ಅಗತ್ಯ ಕಾರ್ಯ ನಿರ್ವಹಿಸುತ್ತವೆ.
* ರಾಷ್ಟ್ರದ ಅಭಿವೃದ್ಧಿಗೆ ದಲ್ಲಾಳಿಗಳಾಗಿ ಕಾರ್ಯ ನಿರ್ವಹಿಸುತ್ತವೆ.
* ಸರ್ಕಾರ ಮತ್ತು ಸಾರ್ವಜನಿಕರ ಮಧ್ಯೆ ಕೊಂಡಿಯಂತೆ ಕಾ.ರ್ಯನಿರ್ವಹಿಸುತ್ತವೆ.
* ರಾಜಕೀಯ ಪಕ್ಷಗಳು ವಿರೋಧ ಪಕ್ಷಗಳನ್ನು ರೂಪಿಸಿ ಅದು ಆಡಳಿತ ಪಕ್ಷದ ಒಳಿತು ಕೆಡಕುಗಳನ್ನು ಗಮನಿಸುವಂತೆ ಸರ್ಕಾರದ ನೀತಿ ನಿಯಮಗಳನ್ನು ಟೀಕೆ ಮಾಡುವುದರ ಮೂಲಕ ಆಡಳಿತ ಸಮತೋಲನ ಸಾಧಿಸುತ್ತದೆ.

### 19.2.8 ಉತ್ತಮ ವಿರೋಧಪಕ್ಷದ ಅವಶ್ಯಕತೆ

ಪ್ರಜಾಪ್ರಭುತ್ವದ ಯಶಸ್ವಿಯಾಗಬೇಕಾದರೆ ಉತ್ತಮ ವಿರೋಧಪಕ್ಷದ ಪಾತ್ರ ಅವಶ್ಯವಾಗಿರುತ್ತದೆ. ಹೇಗೆಂದರೆ ಪ್ರಜಾಪ್ರಭುತ್ವದಲ್ಲಿ ಮುಕ್ತವಾದ ಚರ್ಚೆಗೆ ಅವಕಾಶವಿದ್ದು ಈ ಕೆಲಸವನ್ನು ಬಲಿಷ್ಠ ವಿರೋಧ ಪಕ್ಷಗಳು ಇದ್ದಾಗ ಮಾತ್ರ ನಿರ್ವಹಿಸಲು ಸಾಧ್ಯ. ಅಂದರೆ ಆಡಳಿತ ಪಕ್ಷದ ಲೋಪದೋಷಗಳನ್ನು ಪತ್ತೆ ಹಚ್ಚುವ ಕೆಲಸವನ್ನು ವಿರೋದ ಪಕ್ಷವು ನಿರ್ವಹಿಸುವ ಮೂಲಕ ಸರ್ಕಾರದ ಮೇಲೆ ಒತ್ತಡವನ್ನು ಹೇರುವುದರೊಂದಿಗೆ ಸರ್ಕಾರವನ್ನು ಸರಿಯಾದ ಮಾರ್ಗದಲ್ಲಿ ಕೊಂಡೊಯ್ಯಲು ಬಲಿಷ್ಠ ವಿರೋಧ ಪಕ್ಷಗಳು ಹೆಚ್ಚು ಸಮರ್ಥವಾಗಿ ಕಾರ್ಯನಿರ್ವಹಿಸಿದಾಗ ಮಾತ್ರ ಪ್ರಜಾತಾಂತ್ರಿಕ ಸರ್ಕಾರ ಯಶಸ್ವಿಯಾಗಲು ಸಾಧ್ಯ. ಇಲ್ಲವಾದಲ್ಲಿ ಆಡಳಿತ ಪಕ್ಷದ ನಿರಂಕುಶ ಆಡಳಿತಕ್ಕೆ ಜನತೆ ಒಳಪಡಬೇಕಾದ ಪ್ರಸಂಗ ಒದಗಿಬರುವ ಸಾಧ್ಯತೆಯೇ ಹೆಚ್ಚು.

### 19.2.9 ಮೂಲಭೂತ ಹಕ್ಕುಗಳು

ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ ಆ ರಾಷ್ಟ್ರದ ಪ್ರತಿಯೊಬ್ಬ ಪ್ರಜೆಗೂ ಮೂಲಭೂತ ಹಕ್ಕುಗಳು ಸಂವಿಧಾನಬದ್ಧವಾಗಿ ದೊರೆಯುವಂತಿರಬೇಕು. ಅಂದರೆ ಈ ಮೂಲಭೂತ ಹಕ್ಕುಗಳ ಮೂಲಕ ಜನತೆಯ ಸ್ವಾತಂತ್ರ್ಯ ಸಮಾನತೆಯನ್ನು ಕಾಪಾಡುವುದರ ಜೊತೆಗೆ ಅವರುಗಳ ರಾಜಕೀಯ ಶೈಕ್ಷಣಿಕ ಸಾಮಾಜಿಕ ಹಾಗೂ ಆರ್ಥಿಕ ಹಿತಾಸಕ್ತಿಗಳನ್ನು ಕಾಪಾಡುವ ಮೂಲಕ ಪ್ರತಿಯೊಬ್ಬ ಪ್ರಜೆಗೂ ಮೂಲಭೂತ ಹಕ್ಕುಗಳ ಅಡಿಯಲ್ಲಿ ನ್ಯಾಯವನ್ನು ಒದಗಿಸಿದಾಗ ಪ್ರಜಾಪ್ರಭುತ್ವ ತತ್ವ ಹೆಚ್ಚು ಯಶಸ್ವಿಯಾಗಬಹುದಾಗಿದೆ.

### 19.2.10 ಉತ್ತಮ ನಾಯಕತ್ವ

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜಕೀಯವಾಗಿ ಭಾಗವಹಿಸಲು ಎಲ್ಲರಿಗೂ ಸಮಾನ ಅವಕಾಶವನ್ನು ಕಲ್ಪಿಸಲಾಗಿದೆ. ಹೀಗೆ ಕಲ್ಪಿಸಿರುವ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕಾದರೆ ಉತ್ತಮ ನಾಯಕತ್ವ ಗುಣಗಳನ್ನು ಹೊಂದಿರುವ ವ್ಯಕ್ತಿಗಳಿಂದ

ಮಾತ್ರ ಸಾಧ್ಯ. ಉತ್ತಮ ನಾಯಕತ್ವವನ್ನು ಹೊಂದಿರುವ ನಾಯಕರುಗಳಿಂದ ಪ್ರಜಾಪ್ರಭುತ್ವ ಹೆಚ್ಚು ಅರ್ಥಪೂರ್ಣವೆನಿಸುತ್ತದೆ. ಕಾರಣ ಉತ್ತಮ ನಾಯಕತ್ವವನ್ನು ಹೊಂದಿದ ವ್ಯಕ್ತಿಯು ಜನತೆಗೆ ಸಮಕಾಲೀನ ಪರಿಸ್ಥಿತಿಯ ಬಗ್ಗೆ ಸಮರ್ಥವಾಗಿ ತಿಳುವಳಿಕೆ ನೀಡುವ ಮೂಲಕ ಪ್ರತಿಯೊಬ್ಬ ಪ್ರಜೆಯನ್ನು ಹೆಚ್ಚು ಜಾಗೃತರನ್ನಾಗಿಸುವ ಕೆಲಸವನ್ನು ನಿರ್ವಹಿಸುತ್ತಾರೆ. ಹಾಗೆಯೇ ಸರ್ಕಾರದ ಮೇಲೆ ಒತ್ತಡವನ್ನು ತರುವ ಮೂಲಕ ಜಾನತೆಯ ಹಿತಾಸಕ್ತಿಯನ್ನು ಕಾಪಾಡುವ ಕೆಲಸವನ್ನು ಸಹ ನಿರ್ವಹಿಸುವುದರೊಂದಿಗೆ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹೆಚ್ಚು ಸಧೃಡಗೊಳಿಸುವಲ್ಲಿ ಉತ್ತಮ ನಾಯಕತ್ವದ ಅವಶ್ಯಕತೆ ಹೆಚ್ಚಾಗಿರುವುದು ಕಂಡುಬರುತ್ತದೆ.

### 19.2.11 ಅಧಿಕಾರದ ವಿಕೇಂದ್ರೀಕರಣ

ಪ್ರಜಾಪ್ರಭುತ್ವವೆಂದರೆ ಪ್ರಜೆಗಳಿಂದ ಪ್ರಜೆಗಳಿಗಾಗಿ ಪ್ರಜೆಗಳಿಗೋಸ್ಕರ ಇರುವ ಸರ್ಕಾರ ವ್ಯವಸ್ಥೆಯಾಗಿದ್ದು ಇದು ಯಶಸ್ವಿಯಾಗಬೇಕಾದರೆ ಅಧಿಕಾರ ಕೇಂದ್ರೀಕರಣಕ್ಕೆ ಬದಲಾಗಿ ವಿಕೇಂದ್ರೀಕರಣಗೊಂಡಾಗ ಮಾತ್ರ ಸಾಧ್ಯ. ಹೇಗೆಂದರೆ ಅಧಿಕಾರವು ವಿಕೇಂದ್ರೀಕರಣಗೊಂಡಾಗ ಹೆಚ್ಚು ಹೆಚ್ಚು ಜನರು ಆಡಳಿತದಲ್ಲಿ ಭಾಗವಹಿಸುವ ಅವಕಾಶ ದೊರೆಯುವ ಮೂಲಕ ಸಾಮಾನ್ಯ ಜನತೆಯು ಕೂಡ ಆಡಳಿತದಲ್ಲಿ ರಾಜಕೀಯವಾಗಿ ಭಾಗವಹಿಸುವುದರೊಂದಿಗೆ ಜನತೆಗೆ ಹೆಚ್ಚು ರಾಜಕೀಯ ಜ್ಞಾನ ದೊರೆಯುವ ಮೂಲಕ ಪ್ರಜಾಪ್ರಭುತ್ವ ಹೆಚ್ಚು ಅರ್ಥಪೂರ್ಣವಾಗುವ ಸಾಧ್ಯತೆ ಇರುತ್ತದೆ.

### 19.2.12 ಚುನಾವಣೆಗಳು

ಚುನಾವಣೆಗಳು ಪ್ರಜಾಪ್ರಭುತ್ವ ವ್ಯವಸ್ಥೆಯ ಅತ್ಯಂತ ಪ್ರಮುಖವಾದ ಅಗತ್ಯಾಂಶಗಳಾಗಿವೆ ಕಾರಣ ಪ್ರಜಾಪ್ರಭುತ್ವ ವ್ಯವಸ್ಥೆ ನಿಂತಿರುವುದೇ ಚುನಾವಣೆಗಳ ಆಧಾರದ ಮೇಲೆ, ಪ್ರಜಾಪ್ರಭುತ್ವ ವ್ಯವಸ್ಥೆಯು ಸಧೃಡ ಹಾಗೂ ಸಮರ್ಥವಾಗಿರಬೇಕಾದರೆ ಸ್ವಾತಂತ್ರ್ಯ ಹಾಗೂ ಮುಕ್ತತೆಯಿಂದ ಕೂಡಿದ ಚುನಾವಣೆಗಳು ನಡೆದಾಗ ಮಾತ್ರ ಸಾಧ್ಯ. ಚುನಾವಣೆಗಳಿಗೆ ಸಂಬಂಧಿಸಿದಂತೆ ಹಲವಾರು ರೂಪಗಳಿದ್ದು ಪ್ರತ್ಯಕ್ಷ ಚುನಾವಣೆಗಳು ನಡೆದಲ್ಲಿ ಪ್ರಜಾಪ್ರಭುತ್ವ ಹೆಚ್ಚು ಮೌಲ್ಯಯುತವಾಗಿ ಕಾರ್ಯನಿರ್ವಹಿಸುವ ಸಾಧ್ಯತೆ ಇರುತ್ತದೆ. ಆದರೆ ಇಂದು ಪ್ರತ್ಯಕ್ಷ ಪ್ರಜಾಪ್ರಭುತ್ವದ ಜಾರಿ ಅಸಾಧ್ಯವಾಗಿದ್ದು ಹೆಚ್ಚಾಗಿ ಪರೋಕ್ಷ ಪ್ರಜಾಪ್ರಭುತ್ವ ಅಸ್ತಿತ್ವದಲ್ಲಿರುವುದನ್ನು ಗಮನಿಸಬಹುದು.

## 19.3 ವಿವಿಧ ಚಿಂತಕರುಗಳ ಅಭಿಪ್ರಾಯ

ಇ.ಬಿ.ಷೂಲ್ಜ್ ಪ್ರಜಾಸತ್ತಾತ್ಮಕ ಸರ್ಕಾರದ ಅಗತ್ಯಾಂಶಗಳನ್ನು ಕೆಳಕಂಡಂತೆ ಪಟ್ಟಿಮಾಡಿದ್ದಾರೆ.

* ಪ್ರಮುಖ ಅಧಿಕಾರಿಗಳನ್ನು ಜನತಾ ನಿಯಂತ್ರಣಕ್ಕೊಳಪಡಿಸುವುದು
* ಉದಾರವಾದ ಮತದಾನ ಪದ್ಧತಿ
* ಪ್ರಜಾಸಕತ್ತಾತ್ಮಕ ಪ್ರಕ್ರಿಯೆಯ ನಿಯಮಗಳನ್ನು ಪಾಲಿಸುವ ಇಚ್ಛೆ
* ವಾಕ್ ಸ್ವಾತಂತ್ರ್ಯ, ಸಭೆ ಸೇರುವ, ಸಂಘ ರಚಿಸುವ ಸ್ವಾತಂತ್ರ್ಯಗಳು ಮತ್ತು ನ್ಯಾಯಬಾಹಿರವಾದ ಬಂಧನದ ವಿರುದ್ಧ ರಕ್ಷಣೆ

ಸಂಕ್ಷಿಪ್ತವಾಗಿ ಹೇಳುವುದಾದರೆ, ಪ್ರತಿನಿಧಿ ಪ್ರಜಾಪ್ರಭುತ್ವವು ಎ.ವಿ. ಡೈಸಿ ಅವರು ಕರೆಯುವ ಕಾನೂನಿನ ಅಧಿಪತ್ಯ ಸ್ಥಾಪಿಸುವ ಪದ್ಧತಿ. ಅದು ಜನತೆಯ ಅವಶ್ಯಕ ಸ್ವಾತಂತ್ರ್ಯಗಳನ್ನು ರಕ್ಷಿಸುತ್ತದೆ ಮತ್ತು ಮಾನವಕುಲದ ಸಮಾನತೆಯ ತತ್ವವನ್ನು ಗೌರವಿಸುತ್ತದೆ. ಅದು ಅಧಿಕಾರ ಪ್ರತ್ಯೇಕತಾ ತತ್ವ ಪರಿಮಿತವಾಗಿರುವ ಸೀಮಿತ ಸರ್ಕಾರ ಪದ್ಧತಿ ಎಫ್.ಜಿ. ವಿಲ್ಸನ್ ಅವರು ಹೇಳುವಂತೆ, ಪ್ರಜಾಪ್ರಭುತ್ವದ ಅಗತ್ಯಾಂಶಗಳೆಂದರೆ,



VOP_FL_MA_Pol_Sci_C-8(1-7)_TF.20_F.No.64
64

* ಸರ್ಕಾರದ ರಚನೆ ಮತ್ತು ಕಾರ್ಯಗಳನ್ನು ನಿರ್ದಿಷ್ಟಪಡಿಸುವ ನಿಯಮಗಳನ್ನು ಒಳಗೊಂಡ ಒಂದು ಸಂವಿಧಾನ

* ಸಂವಿಧಾನಾತ್ಮಕ ಎಂದರೆ, ಕಾನೂನಿನ ಅಧಿಪತ್ಯವೇ ವಿನಾ ಮಾನವರ ಅಧಿಪತ್ಯವಲ್ಲ.

* ಜನತೆಯ ಮೂಲಭೂತ ಹಕ್ಕುಗಳ ಘೋಷಣೆ ಮತ್ತು

* ಪ್ರಜಾಸತ್ತಾತ್ಮಕ ರಚನೆ ಹೊಂದಿರುವ ಸರ್ಕಾರ.

ಮಿಲ್ ಅವರ ಪ್ರಕಾರ, ಪ್ರಜಾಪ್ರಭುತ್ವದ ಯಶಸ್ವಿ ಕಾರ್ಯಾಚರಣೆಗೆ ಬೇಕಾದ ಅಗತ್ಯಾಂಶಗಳೆಂದರೆ ಜನತೆಯ ಪ್ರಜಾಪ್ರಭುತ್ವವನ್ನು ಪಡೆಯುವ ಇಚ್ಚೆ ಹೊಂದಿರಬೇಕು, ಅದರ ಸಂರಕ್ಷಣೆಗೆ ಅವಶ್ಯಕವಾದುದನ್ನು ಕೈಗೊಳ್ಳುವ ಇಚ್ಚೆ ಹೊಂದಿರಬೇಕು, ಅದರ ಸಂರಕ್ಷಣೆಗೆ ಅವಶ್ಯಕವಾದುದನ್ನು ಕೈಗೊಳ್ಳುವ ಇಚ್ಚೆ ಮತ್ತು ಸಾಮರ್ಥ್ಯ ಹೊಂದಿರಬೇಕು ಮತ್ತು ಅದು ವಿಧಿಸುವ ಕರ್ತವ್ಯಗಳು ಮತ್ತು ಕಾರ್ಯಗಳನ್ನು ನೆರವೇರಿಸುವ ಇಚ್ಚೆ ಮತ್ತು ಸಾಮರ್ಥ್ಯವನ್ನು ಹೊಂದಿರಬೇಕು.

ವಾಲ್ಟರ್ ಬ್ಯಾಗ್‌ಹಾಟ್ ಎಂಬ ಆಂಗ್ಲ ವಿದ್ವಾಂಸರು ಪ್ರಜಾಪ್ರಭುತ್ವದ ಅಗತ್ಯಾಂಶಗಳನ್ನು ಕೆಳಕಂಡಂತೆ ನಿರೂಪಿಸಿದ್ದಾರೆ.

* ಪ್ರಜಾಪ್ರಭುತ್ವವು ಜಾಣ್ಮೆ ಮತ್ತು ಸದ್ಗುಣಕ್ಕಿಂತ ಹೆಚ್ಚಿನ ಗುಣಗಳನ್ನು ಜನತೆಯಿಂದ ಬಯಸುತ್ತದೆ. ಜನತೆ ಹಲವಾರು ಪಕ್ಷಗಳ ನಡುವೆ ವಿಭಜಿತವಾಗಿದ್ದರೂ, ಮೂಲಭೂತವಾಗಿ ಒಂದುಗೂಡಿ ಸರ್ಕಾರದ ಚಟುವಟಿಕೆಗಳಲ್ಲಿ ಭಾಗವಹಿಸಿ ಪ್ರಧಾನ ಉದ್ದೇಶಗಳನ್ನು ಈಡೇರಿಸಲೇಬೇಕು ಮತ್ತು ಘರ್ಷಣೆ ಹಾಗೂ ವೈರತ್ವಗಳನ್ನು ಸಾಧಿಸುವುದಕ್ಕೆ ಉತ್ಸುಕರಾಗಬೇಕು.

* ಯಾವುದೇ ವರ್ಗವು ಶಾಶ್ವತವಾಗಿ ಅಧಿಕಾರದಿಂದ ಪ್ರತ್ಯೇಕವಾಗಿರಬಾರದು. ಏಕೆಂದರೆ, ಇದರಿಂದ ಅತೃಪ್ತಿಯ ಭಾವನೆ ಮತ್ತು ಸರ್ದಾ ಗೊಣಗಾಟ ಆರಂಭವಾಗುತ್ತದೆ. ಪ್ರತಿಯೊಂದು ವರ್ಗವೂ ಎಲ್ಲರ ಅಸ್ತಿತ್ವದ ಅನುಕೂಲಗಳಲ್ಲಿ ಪಾಲುಗೊಳ್ಳಬೇಕು.

* ರಾಷ್ಟ್ರವು ತಾಳ್ಮೆ ಮತ್ತು ಹೊಂದಾಣಿಕೆಯ ಅಭ್ಯಾಸಗಳನ್ನು ಪ್ರದರ್ಶಿಸಲೇಬೇಕು. ರಾಷ್ಟ್ರದ ವಿವಿಧ ಸಮುದಾಯಗಳು ಪರಸ್ಪರ ಅರಿವು ಮತ್ತು ಇತರರ ಅಭಿಪ್ರಾಯವನ್ನು ಮೆಚ್ಚುವ ಮನೋಭಾವ ಹೊಂದಿರಬೇಕು. ಅವು ಈ ಕಾರ್ಯದಲ್ಲಿ ವಿಫಲವಾದರೆ ವಿಚ್ಛಿದ್ರಕಾರಿ ಪರಿಣಾಮಗಳುಂಟಾಗುತ್ತವೆ.

* ಜನತೆಯು ರಾಜ್ಯದ ಮುಖ್ಯಸ್ಥರಾದ ದೊರೆ ಅಥವಾ ಸಂವಿಧಾನಕ್ಕೆ ಗೌರವ ತೋರಬೇಕು.

* ಜನತೆಯು ಅಜ್ಞಾನಿಗಳಾದ ಜನ ಸಮೂಹದಿಂದ ಪ್ರಭಾವಿತರಾಗಬಾರದು. ಏಕೆಂದರೆ, ಇದು ಜ್ಞಾನದ ವಿರುದ್ಧ ಅಜ್ಞಾನದ, ಪ್ರಜ್ಞಾವಂತಿಕೆಯ ವಿರುದ್ಧ ಸಂಖ್ಯೆಯ ಶ್ರೇಷ್ಠತೆ ಎಂದಾಗುತ್ತದೆ.

ಜೆ.ಎಸ್. ಸಿಂಗ್ ಅವರು ತಮ್ಮ ಫಂಡಮೆಂಟಲ್ಸ್ ಆಫ್ ಪೊಲಿಟಿಕಲ್ ಸೈನ್ಸ್ ಅಂಡ್ ಆರ್ಗನೈಜೇಷನ್ ಎಂಬ ಕೃತಿಯಲ್ಲಿ ಪ್ರಜಾಪ್ರಭುತ್ವದ ಯಶಸ್ವಿ ಕಾರ್ಯಾಚರಣೆಗೆ ಬೇಕಾದ ಅಗತ್ಯಾಂಶಗಳನ್ನು ಕೆಳಕಂಡಂತೆ ತಿಳಿಸಿದ್ದಾರೆ.

* ಪ್ರಜಾಪ್ರಭುತ್ವದ ಸಮರ್ಪಕವಾಗಿ ಕಾರ್ಯ ನಿರ್ವಹಿಸಲು ಅವಶ್ಯಕವಾದ ಅಂಶವೆಂದರೆ, ಜನತೆಯ ನಡುವೆ ಸಂಪತ್ತಿಗೆ ಸಂಬಂಧಿಸಿದಂತೆ ಅಗಾಧವಾದ ಅಸಮಾನತೆಗಳಿರಬಾರದು.

* ಪ್ರಜಾಪ್ರಭುತ್ವವೆಂದರೆ, ಸಾರ್ವಜನಿಕ ಅಭಿಪ್ರಾಯದಂತೆ ನಡೆಯುವ ಆಳ್ವಿಕೆ. ಆದ್ದರಿಂದ, ಜನತೆಯ ನಡುವಣ ಭಿನ್ನಾಭಿಪ್ರಾಯವು ಒಂದೇ ಸಾರ್ವಜನಿಕ ಅಭಿಪ್ರಾಯ ರೂಪಿಸುವುದಕ್ಕೆ ಅಡಚಣೆಯುಂಟಾಗುವಷ್ಟಿರಬಾರದು.

* ಪ್ರಜಾಪ್ರಭುತ್ವದ ಯಶಸ್ವಿ ಕಾರ್ಯಾಚರಣೆಯ ಪ್ರಜೆಗಳ ಜಾಣ್ಮೆ, ಆಸಕ್ತಿ, ಸಾರ್ವಜನಿಕ ಹಿತದೃಷ್ಟಿ ಮತ್ತು ನಾಗರಿಕ ಪ್ರಜ್ಞೆಯನ್ನು ಅವಲಂಬಿಸಿರುತ್ತದೆ.

* ಸಾರ್ವಜನಿಕ ವ್ಯವಹಾರಗಳಲ್ಲಿ ಭಾವಾವೇಶಕ್ಕೆ ಒಳಗಾಗದೆ ಆಸಕ್ತಿ ತಳೆಯಲು ಸಾಧ್ಯವಾಗುವಂತಹ ಕನಿಷ್ಟ ಮೂಲಭೂತ ಅಗತ್ಯಗಳನ್ನು ಪೂರೈಸಿಕೊಳ್ಳುವ ಆತಂಕದಿಂದ ಜನಸಾಮಾನ್ಯರು ಮುಕ್ತರಾಗಿರಬೇಕು.

* ಪ್ರಜಾಪ್ರಭುತ್ವವು ಶಾಂತಿಯುತ ವಾತಾವರಣದಲ್ಲಿ ಮಾತ್ರ ಬೆಳೆಯುವುದು. ಯುದ್ಧ, ಯುದ್ಧದ ಭೀತಿ, ರಹಸ್ಯಮಯ ವಾತಾವರಣ, ಆಜ್ಞೆಗಳನ್ನು ಪ್ರಶ್ನಿಸದೇ ವಿಧೇಯತೆ ತೋರುವುದು ಮತ್ತು ಆಂತರಿಕ ಪ್ರಕ್ಷುಬ್ಧ ಪರಿಸ್ಥಿತಿಗಳು ಪ್ರಜಾಪ್ರಭುತ್ವದ ತಳಹದಿಯನ್ನು ದುರ್ಬಲಗೊಳಿಸುತ್ತದೆ.

* ಪ್ರಜಾಪ್ರಭುತ್ವವನ್ನು ಯಶಸ್ವಿಯಾಗಿ ಹೊಂದಲು ಜನತೆಯು ಕೆಲವು ಗುಣಗಳು ಮತ್ತು ಧೋರಣೆಗಳನ್ನು ಮೈಗೂಡಿಸಿಕೊಳ್ಳಬೇಕು ಮತ್ತು ಬೆಳೆಸಿಕೊಳ್ಳಬೇಕು. ಅವರು ಸ್ಥಳೀಯ ಸರ್ಕಾರಕ್ಕಾಗಿ ಹಂಬಲಿಸಬೇಕು ಮತ್ತು ಪ್ರಜಾಪ್ರಭುತ್ವವಲ್ಲದ ಇನ್ನಾವುದೇ ಪದ್ಧತಿಯ ಸರ್ಕಾರವನ್ನು ಸಹಿಸಿಕೊಳ್ಳದ ನಿರ್ಧಾರ ತಳೆಯಬೇಕು.

* ಸಾರ್ವಜನಿಕ ವ್ಯವಹಾರಗಳಲ್ಲಿ ಜಾತಿ, ವರ್ಗ, ಧರ್ಮ, ಪಂಥ ಮುಂತಾದ ಪರಿಗಣನೆಗಳನ್ನು ಮೀರಿ ವರ್ತಿಸುವುದನ್ನು ಕಲಿಯಬೇಕು ಮತ್ತು ಇಡೀ ಜನತೆಯ ಹಿತಾಸಕ್ತಿಯ ದೃಷ್ಟಿಯಿಂದ ಎಲ್ಲಾ ಸಮಸ್ಯೆಗಳನ್ನು ಪರಿಶೀಲಿಸುವ ಅಭ್ಯಾಸ ಬೆಳೆಸಿಕೊಳ್ಳಬೇಕು.

* ಎಲ್ಲಕ್ಕಿಂತ ಮಿಗಿಲಾಗಿ, ಪ್ರಜೆಗಳು ಪ್ರಾಮಾಣಿಕತೆ, ನಿಷ್ಪಕ್ಷಪಾತತೆ ಮತ್ತು ಕಳಂಕರಹಿತವಾಗಿರಬೇಕು. ಪ್ರಜಾಪ್ರಭುತ್ವವು ಜನತೆಯ ಕೈಯಲ್ಲಿ ಅಪಾರ ಅಧಿಕಾರಗಳನ್ನು ನೀಡುವುದು ಮತ್ತು ಅವರ ಹೆಗಲಿಗೆ ಗುರುತರವಾದ ಜವಾಬ್ದಾರಿಗಳನ್ನು ಹೊರಿಸುವುದು.

## ನಿಮ್ಮ ಪ್ರಗತಿ ಪರಿಶೀಲನೆ - 1

**ಸೂಚನೆ:** 1. ಈ ಕೆಳಗೆ ಬಿಟ್ಟಿರುವ ಜಾಗವನ್ನು ನಿಮ್ಮ ಉತ್ತರಕ್ಕೆ ಉಪಯೋಗಿಸಿಕೊಳ್ಳಿ.

2. ಈ ಘಟಕದ ಕೊನೆಯಲ್ಲಿ ನೀಡಿರುವ ಉತ್ತರದೊಂದಿಗೆ ನಿಮ್ಮ ಪ್ರಗತಿಯನ್ನು ಪರಿಶೀಲಿಸಿಕೊಳ್ಳಿ.

**1. ಪ್ರಜಾಪ್ರಭುತ್ವದ ಅಗತ್ಯಾಂಶಗಳನ್ನು ವಿಮರ್ಶಿಸಿ?**

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

**2. ಪ್ರಜಾಪ್ರಭುತ್ವದ ಸಾಂಸ್ಥಿಕ ಅಗತ್ಯಾಂಶಗಳನ್ನು ಕುರಿತು ಚರ್ಚಿಸಿ?**

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

**3.** ಪ್ರಜಾಪ್ರಭುತ್ವದ ಯಶಸ್ವಿಯಲ್ಲಿ ರಾಜಕೀಯ ಪಕ್ಷಗಳ ಪ್ರಾಮುಖ್ಯತೆಯನ್ನು ತಿಳಿಸಿ?

..............................................................................................................................................................

..............................................................................................................................................................

..............................................................................................................................................................

..............................................................................................................................................................

..............................................................................................................................................................

..............................................................................................................................................................

..............................................................................................................................................................

..............................................................................................................................................................

**4.** ಪ್ರಜಾಪ್ರಭುತ್ವದ ಅಗತ್ಯಾಂಶಗಳಿಗೆ ಸಂಬಂಧಿಸಿದಂತೆ ವಿವಿಧ ಚಿಂತಕರುಗಳ ಅಭಿಪ್ರಾಯಗಳನ್ನು ಕ್ರೂಡೀಕರಿಸಿ?

..............................................................................................................................................................

..............................................................................................................................................................

..............................................................................................................................................................

..............................................................................................................................................................

..............................................................................................................................................................

..............................................................................................................................................................

..............................................................................................................................................................

..............................................................................................................................................................

## 19.4 ಉಪಸಂಹಾರ

ಹೀಗೆ ವಿವಿಧ ಲೇಖಕರು, ವಿಭಿನ್ನವಾದ ಅಗತ್ಯಾಂಶಗಳನ್ನು ಪ್ರಜಾಪ್ರಭುತ್ವದ ಯಶಸ್ವಿ ಕಾರ್ಯಾಚರಣೆಗೆ ನಿಗದಿಪಡಿಸಿದ್ದಾರೆ. ಲೀಕೆ ಮತ್ತು ಮೈಯ್ನೆ ಅವರು ಹಲವರ ಆಳ್ವಿಕೆಯನ್ನು ಪರಿಮಿತಗೊಳಿಸಲು ಲಿಖಿತ ಸಂವಿಧಾನವನ್ನು ಪ್ರಮುಖ ಅಂಶವೆಂದು ಒತ್ತಿ ಹೇಳಿದ್ದಾರೆ. ಲಿವೆಲಿಯೆ ಮತ್ತು ಮಿಲ್ ಅವರು, ಜನತೆಯ ಪ್ರಾಥಮಿಕ ಶಿಕ್ಷಣಕ್ಕೆ ಒತ್ತು ನೀಡಿದ್ದಾರೆ. ಬ್ರೈಸ್ ಅವರು ಮಾನವಕುಲದ ನೈತಿಕ ಮತ್ತು ಬೌದ್ಧಿಕ ಅಂಶಕ್ಕೆ ಪ್ರಾಧಾನ್ಯತೆ ನೀಡಿದ್ದಾರೆ. ಪ್ರಾಧ್ಯಾಪಕ ಗಾರ್ನರ್ ಅವರ ಪ್ರಕಾರ, ಪ್ರಜಾಪ್ರಭುತ್ವವನ್ನು ನಡೆಸುವ ಜನರು, ಶ್ರೇಷ್ಠವಾದ ರಾಜಕೀಯ ಜಾಣ್ಮೆ, ಸಾರ್ವಜನಿಕ ವ್ಯವಹಾರಗಳಲ್ಲಿ ನಿರಂತರ ಆಸಕ್ತಿ, ಸಾರ್ವಜನಿಕ ಜವಾಬ್ದಾರಿಯ ತೀಕ್ಷ್ಣವಾದ ಸಂವೇದನೆ, ಮತ್ತು ಬಹುಮತದ ನಿರ್ಧಾರಗಳನ್ನು ಒಪ್ಪಿಕೊಳ್ಳುವ ಮತ್ತು ಅದಕ್ಕೆ ಬದ್ಧವಾಗಿರಲುಸಿದ್ಧವಾಗಿರುವ ಗುಣಗಳನ್ನು ಹೊಂದಿರಬೇಕು. ಜನತಾ ಸರ್ಕಾರದ ಮೂಲಭೂತ ತತ್ವಗಳಲ್ಲಿ ಒಂದಾದ ಬಲಿಷ್ಟ ಅಲ್ಪಸಂಖ್ಯಾತರ ಹಕ್ಕುಗಳನ್ನು ಗೌರವಿಸುವ ಜವಾಬ್ದಾರಿ ಬಹುಸಂಖ್ಯಾತರಿಗೆ ಇರುತ್ತದೆ. ಹಲವಾರು ಪ್ರದೇಶಗಳಲ್ಲಿ ಮತದಾರರ ಆತಂಕಕಾರಿ ನಿರಾಸಕ್ತಿಯು ನಿಸ್ಸಂದೇಹವಾಗಿ ಪ್ರಜಾಪ್ರಭುತ್ವಕ್ಕೆ ಅಪಾಯಕಾರಿಯಾಗಿದೆ.

ಪ್ರಜಾಪ್ರಭುತ್ವ ವೈವಿಧ್ಯಮಯವಾದ ವ್ಯಾಖ್ಯಾನಗಳಿಗೆ ಒಳಗಾಗಿದ್ದರೂ, ಅಗಾಧವಾದ ಅದರ ಇತಿಹಾಸವನ್ನು ಸಮರ್ಪಕವಾಗಿ ಒಳಗೊಳ್ಳಲು ಅಸಮರ್ಥವಾಗಿದೆ. ಪ್ರಜಾಪ್ರಭುತ್ವವು ತತ್ವಗಳ ಸಂಕಲನವಾಗಿ ಸಾಮಾನ್ಯವಾಗಿ ಚರ್ಚಿತವಾಗಿರುವುದರಿಂದ, ಅದರ ಪರಿಕಲ್ಪನೆಯು ಕ್ರಮಬದ್ಧವಾಗಿ ರೂಪಿತವಾಗಲು ಸಾಧ್ಯವಾಗಿಲ್ಲ. ಅದು ಇನ್ನೂ ನಿರ್ಧಿಷ್ಟಸಿದ್ಧಾಂತವಾಗಿ ಅಸ್ತಿತ್ವಕ್ಕೆ ಬಂದಿಲ್ಲ.

## 19.5 ಕಠಿಣ ಪದಗಳು

ನಿರ್ಭೀತ - ಯಾವುದೇ ರೀತಿಯ ಭಯವಿಲ್ಲದಿರುವುದು

ನಿರಂಕುಶ - ದಬ್ಬಾಳಿಕೆ

ವಿಕೇಂದ್ರೀಕರಣ - ಹಂಚಿಕೆಯಾಗಿರುವುದು

ವಾಕ್‌ಸ್ವಾತಂತ್ರ್ಯ - ತನ್ನ ಅಭಿಪ್ರಾಯಗಳನ್ನು ಮುಕ್ತವಾಗಿ ವ್ಯಕ್ತಪಡಿಸಿಲ್ಲ

ಸದ್ಗುಣ - ಸಜ್ಜನಿಕೆ

ಸಾರ್ವಜನಿಕ ಅಭಿಪ್ರಾಯ - ಜನಾಭಿಪ್ರಾಯ

## 19.6 ಕೆಲವು ಉಪಯುಕ್ತ ಗ್ರಂಥಗಳು


ಸಬೈನ್ .ಜಿ.ಹೆಚ್. : ಎ ಹಿಸ್ಟರಿ ಆಫ್ ಪೊಲಿಟಿಕಲ್ ಥಿಯರಿ, ಆಕ್ಸ್‌ಫರ್ಡ್ ಅಂಡ್ ಐಬಿಹೆಚ್ ಪಬ್ಲಿಷಿಂಗ್ ಕೋ.ಪ್ರೈ.ಲಿ. ನ್ಯೂ ಡೆಲ್ಲಿ, 1973

ಬ್ರೀಚ್ಟ್, ಅರ್ನಾಲ್ಡ್ : ಪೊಲಿಟಿಕಲ್ ಥಿಯರಿ, ದಿ ಫೌಂಡೇಷನ್ಸ್ ಆಫ್ ಟ್ವೆಂಟೀಯತ್ ಸೆಂಚುರಿ ಪೊಲಿಟಿಕಲ್ ಥಾಟ್, ಪ್ರಿನ್ಸ್‌ಟನ್ ಯೂನಿವರ್ಸಿಟಿ ಪ್ರೆಸ್, ಪ್ರಿನ್ಸ್‌ಟನ್ 1959.

ಧಾಲ್. ಆರ್.ಎ : ಮಾಡ್ರನ್ ಪೊಲಿಟಿಕಲ್ ಅನಾಲಿಸಿಸ್, ಎಂಗಲ್‌ವುಡ್ ಕ್ಲಿಫ್ಸ್, ನ್ಯೂ ಜೆರ್ಸಿ, ಪ್ರೆಂಟಿಸ್ ಹಾಲ್ 1976

ಜೋಡ್, ಸಿ.ಇ.ಎಂ. : ಮಾಡ್ರನ್ ಪೊಲಿಟಿಕಲ್ ಥಿಯರಿ, ಲಂಡನ್, ಆಕ್ಸಫರ್ಡ್ ಯೂನಿವರ್ಸಿಟಿ ಪ್ರೆಸ್, 1946

ಡಾ. ಟಿ.ಡಿ. ದೇವೇಗೌಡ : ರಾಜಕೀಯ ಸಿದ್ಧಾಂತಗಳು

ಡಾ.ಕೆ.ಜೆ. ಸುರೇಶ್ : ಆಧುನಿಕ ರಾಜಕೀಯ ಸಿದ್ಧಾಂತಗಳು


## 19.7 ನಿಮ ಪ್ರಗತಿ ಪರಿಶೀಲನೆಗೆ ಉತ್ತರಗಳು

<u>ನಿಮ್ಮ ಪ್ರಗತಿ ಪರಿಶೀಲನೆ</u> - **1**

1. ವಿಭಾಗ 19.2 ನೋಡಿ
2. ಉಪವಿಭಾಗ 19.2.1 ನೋಡಿ
3. ಉಪವಿಭಾಗ 19.2.7 ನೋಡಿ
4. ವಿಭಾಗ 19.3 ನೋಡಿ

# ಘಟಕ 20 ಪ್ರಜಾಪ್ರಭುತ್ವದ ಮೌಲ್ಯಗಳು ಹಾಗೂ ಮಿತಿಗಳು

## ರಚನೆ


20.0 ಉದ್ದೇಶಗಳು

20.1 ಪೀಠಿಕೆ

20.2 ಪ್ರಜಾಪ್ರಭುತ್ವದ ಮೌಲ್ಯಗಳು

20.3 ಪ್ರಜಾಪ್ರಭುತ್ವದ ಮಿತಿಗಳು

20.4 ಉಪಸಂಹಾರ

20.5 ಕಠಿಣ ಪದಗಳು

20.6 ಕೆಲವು ಉಪಯುಕ್ತ ಗ್ರಂಥಗಳು

20.7 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು

## 20.0 ಉದ್ದೇಶಗಳು

ಈ ಘಟಕದ ವಸ್ತು ವಿಷಯವನ್ನು ಅಧ್ಯಯನ ಮಾಡಿದ ನಂತರ ನೀವು

* ಪ್ರಜಾಪ್ರಭುತ್ವದ ಮೌಲ್ಯಗಳನ್ನು ಪರಿಶೀಲಿಸಬಹುದು
* ಪ್ರಜಾಪ್ರಭುತ್ವದ ಮಿತಿಗಳನ್ನು ಚರ್ಚಿಸಬಹುದು
* ಪ್ರಜಾಪ್ರಭುತ್ವದ ಗುಣದೋಷಗಳನ್ನು ವಿಮರ್ಶಿಸಬಹುದು
* ಪ್ರಜಾಪ್ರಭುತ್ವದ ನಿಯಂತ್ರಣಗಳನ್ನು ಗುರುತಿಸಬಹುದು

## 20.1 ಪೀಠಿಕೆ

ಸಮಕಾಲೀನ ಜಗತ್ತಿನಲ್ಲಿ ಪ್ರಜಾಪ್ರಭುತ್ವವು ಅತ್ಯಂತ ಜನಪ್ರಿಯ ರಾಜಕೀಯ ಪರಿಕಲ್ಪನೆಯಾಗಿದೆ. ಅದು ಕೇವಲ ಸರ್ಕಾರ ಪದ್ಧತಿ ಮಾತ್ರವಲ್ಲದೆ, ರಾಜ್ಯ ಪದ್ಧತಿ ಹಾಗೂ ಸಮಾಜ ವ್ಯವಸ್ಥೆಯೂ ಆಗಿದೆ. ಅದು ಸಾಮಾಜಿಕ, ಆರ್ಥಿಕ ಮತ್ತು ನೈತಿಕ ವಿಚಾರಗಳನ್ನು ಒಳಗೊಂಡಿದೆ. ಪ್ರಜಾಪ್ರಭುತ್ವದ ಆಚರಣೆಗೆ ಸಂಬಂಧಿಸಿದಂತೆ, ಕಾಲಾನುಕ್ರಮದಲ್ಲಿ ಹಲವಾರು ಚಿಂತಕರು ಮತ್ತು ಲೇಖಕರು ತಮ್ಮ ಅಭಿಪ್ರಾಯಗಳನ್ನು ಪ್ರಕಟಿಸುತ್ತಾ ಬಂದಿದ್ದಾರೆ.

## 20.2 ಪ್ರಜಾಪ್ರಭುತ್ವದ ಮೌಲ್ಯಗಳು

**ಸಮಸ್ಯೆ ಅಥವ ವಿವಾದಗಳಿಗೆ ಶಾಂತಿಯುತ ಪರಿಹಾರ**

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಆಡಳಿತಕ್ಕೆ ಸಂಬಂಧಿಸಿದಂತೆ ಸಂಭವಿಸುವ ಸಮಸ್ಯೆಗಳಿಗೆ ಶಾಂತಿಯುತವಾದ ಪರಿಹಾರ ದೊರೆಯುತ್ತದೆ. ಹೇಗೆಂದರೆ ಉದಾಹರಣೆಗೆ ಕಾವೇರಿ ವಿವಾದಕ್ಕೆ ಸಂಬಂಧಿಸಿದಂತೆ ಕರ್ನಾಟಕ ಮತ್ತು ತಮಿಳುನಾಡಿನ ನಡುವೆ ಸಮಸ್ಯೆ ಉದ್ಭವಿಸಿದ್ದು ಇದರ ಪರಿಹಾರಕ್ಕಾಗಿ ಶಾಂತಿಯುತವಾದ ಪ್ರಯತ್ನಗಳು ನಡೆಯುತ್ತಿರುವುದನ್ನು ಗಮನಿಸಬಹುದು. ಅಂದರೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾವುದೇ ಒಂದು ಸಮಸ್ಯೆಗೆ ಶಾಂತಿಯುತವಾದ ಪರಿಹಾರ ದೊರೆಯಲು ಪ್ರಮುಖ ಕಾರಣ ವ್ಯವಸ್ಥೆಯು ಹೊಂದಿರುವ ಸ್ವತಂತ್ರ ನ್ಯಾಯಾಂಗ ವ್ಯವಸ್ಥೆ ಎಂದು ಹೇಳಬಹುದಾಗಿದೆ.

**ಸಮಾಜದಲ್ಲಿ ಶಾಂತಿಯುತ ಬದಲಾವಣೆ**

ಯಾವುದೇ ಒಂದು ಸಮಾಜ ನಿಶ್ಚಲ ಸ್ಥಿತಿಯಲ್ಲಿ ಇರಲು ಸಾಧ್ಯವಿಲ್ಲ ಅಂದರೆ ಪ್ರತಿಯೊಂದು ಸಮಾಜವು ಸಹ ನಿರಂತರ ಚಲನಶೀಲವಾಗಿದ್ದು ಬದಲಾವಣೆ ಪ್ರಕ್ರಿಯೆಯು ಸಾಗುತ್ತಿರುತ್ತದೆ. ಆದರೆ ಈ ಬದಲಾವಣೆ ಪ್ರಕ್ರಿಯೆಯು ವಿಧಾನ ಸಮಾಜದಿಂದ ಸಮಾಜಕ್ಕೆ ಭಿನ್ನವಾಗಿರುತ್ತದೆ. ಅಂದರೆ ಕೆಲವು ವ್ಯವಸ್ಥೆಯಲ್ಲಿ ಬದಲಾವಣೆ ಹಿಂಸಾತ್ಮಕವಾಗಿ ಜರುಗಿದರೆ ಕೆಲವು ವ್ಯವಸ್ಥೆಯಲ್ಲಿ ಬದಲಾವಣೆ ಶಾಂತಿಯುತವಾಗಿ ನಡೆಯುತ್ತದೆ. ಹೀಗೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿನ ಬದಲಾವಣೆ ಯಾವಾಗಲು ಶಾಂತಿಯುತವಾಗಿಯೇ ನಡೆಯುತ್ತಿರುತ್ತದೆ. ಕಾರಣ ಪ್ರತಿಯೊಬ್ಬ ಪ್ರಜೆಗೂ ಸ್ವಾತಂತ್ರ್ಯ ಸಮಾನತೆ ಇದ್ದು ಎಲ್ಲರು ಕಾನೂನಿನ ಮುಂದೆ ಸರಿಸಮಾನರಾಗಿರುವುದರಿಂದ ಯಾವುದೇ ರೀತಿಯ ಶೋಷಣೆಗೆ ಅವಕಾಶ ಇಲ್ಲದಿರುವುದರಿಂದ ಬದಲಾವಣೆ ಯಾವುದೇ ರೀತಿಯ ಹಿಂಸಾತ್ಮಕ ರೂಪ ತಾಳಲು ಸಾಧ್ಯವಿರುವುದಿಲ್ಲ.

### ಕಾನೂನುಗಳ ಯಶಸ್ವಿ ಹಾಗು ಕ್ರಮಬದ್ಧತೆ

ಪ್ರಜಾಪ್ರಭುತ್ವ ವ್ಯವಸ್ಥೆಯು ಪ್ರತಿಯೊಂದು ರಾಷ್ಟ್ರಗಳಲ್ಲಿಯೂ ಸಹ ಸಂವಿಧಾನಾತ್ಮಕವಾಗಿ ಕಾರ್ಯನಿರ್ವಹಿಸುತ್ತಿದ್ದು ಯಾವುದೇ ಒಂದು ಆಡಳಿತಾತ್ಮಕ ಬದಲಾವಣೆಗಳು ನಡೆಯಬೇಖಾದಲ್ಲಿ ಸಂವಿಧಾನಾತ್ಮಕವಾಗಿ ರಚಿತವಾಗಿರುವ ಕಾನೂನುಗಳಡಿಯಲ್ಲಿಯೇ ನಡೆಯಬೇಕಾಗಿರುತ್ತದೆ. ಅಂದರೆ ಯಾವುದೇ ಒಂದು ಸಮಸ್ಯೆಯು ಪರಿಹಾರವಾಗಬೇಕಾದಲ್ಲಿ ಅದು ಕಾನೂನಿನ ಅಡಿಯಲ್ಲಿಯೇ ನಡೆಯಬೇಕಾಗಿರುತ್ತದೆ. ಆದರೆ ಪ್ರಜಾಪ್ರಭುತ್ವವನ್ನು ಹೊರತುಪಡಿಸಿ ಬೇರೆ ಆಡಳಿತ ವ್ಯವಸ್ಥೆಯಲ್ಲಿ ಇದಕ್ಕೆ ಬದಲಾಗಿ ಪಕ್ಷ ಅಥವ ವ್ಯಕ್ತಿಯ ಸರ್ವಾಧಿಕಾರ ಮನೋಭಾವನೆಗೆ ಒಳಪಟ್ಟು ಕಾರ್ಯ ನಿರ್ವಹಿಸುವ ಮೂಲಕ ಶೋಷಣೆಗೆ ಅವಕಾಶವಿರುತ್ತದೆ.

### ವೈವಿಧ್ಯತೆಗೆ ಮಾನ್ಯತೆ

ಪ್ರಜಾಪ್ರಭುತ್ವ ವ್ಯವಸ್ಥೆಯು ಒಂದು ಉತ್ತಮ ಆದರ್ಶ ವ್ಯವಸ್ಥೆಯಾಗಿದ್ದು ಯಾವುದೇ ಒಬ್ಬ ವ್ಯಕ್ತಿಯು ಆರ್ಥಿಕವಾಗಿ ರಾಜಕೀಯವಾಗಿ ಹಾಗೂ ಸಾಮಾಜಿಕವಾಗಿ ತನಗೆ ಇಷ್ಟಬಂದ ರೀತಿಯಲ್ಲಿ ಜೀವನ ನಡೆಸಲು ಅವಕಾಶವನ್ನು ಕಲ್ಪಿಸಲಾಗಿದ್ದು ವೈವಿಧ್ಯತೆಗೆ ಮಾನ್ಯತೆ ದೊರೆತಂತಾಗಿದೆ. ಹೇಗೆಂದರೆ ಯಾವುದೇ ಒಬ್ಬ ವ್ಯಕ್ತಿ ಯಾವುದೇ ಒಂದು ನಿರ್ಧಿಷ್ಟ ಕಾರ್ಯವನ್ನು ನಿರ್ವಹಿಸುವುದಕ್ಕೆ ಬದಲಾಗಿ ಏಕ ಕಾಲದಲ್ಲಿ ಹಲವಾರು ಕ್ಷೇತ್ರಗಳಲ್ಲಿ ತನ್ನನ್ನು ತೊಡಗಿಸಿಕೊಳ್ಳಲು ಅವಕಾಶವನ್ನು ಕಲ್ಪಿಸಲಾಗಿದೆ. ಹಾಗೆಯೇ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಭಾಷೆ ಧರ್ಮ ಜಾತಿ ಪ್ರಾದೇಶಿಕತೆ ಇವುಗಳ ಆಧಾರದ ಮೇಲೆ ಯಾವುದೇ ರೀತಿಯ ತಾರತಮ್ಯವನ್ನು ಮಾಡಲು ಅವಕಾಶವಿರುವುದಿಲ್ಲ. ಅಂದರೆ ಪ್ರತಿಯೊಂದು ಸಮಾಜದಲ್ಲಿ ವ್ಯಕ್ತಿಯು ಅವನಿಗೆ ಇಷ್ಟಬಂದ ಭಾಷೆ, ಧರ್ಮ, ಜಾತಿ ಹಾಗು ಇತರೆ ಆಚರಣೆಗಳನ್ನು ಕೈಗೊಳ್ಳಲು ಅವಕಾಶವನ್ನು ಕಲ್ಪಿಸುವ ಮೂಲಕ ವೈವಿಧ್ಯತೆಯನ್ನು ರಕ್ಷಿಸಲಾಗುತ್ತದೆ.

### ಉತ್ತಮ ನ್ಯಾಯಾಂಗ ವ್ಯವಸ್ಥೆ

ಪ್ರತಿಯೊಂದು ಪ್ರಜಾಪ್ರಭುತ್ವ ರಾಷ್ಟ್ರಗಳು ಸಹ ಬಹುತೇಕವಾಗಿ ಉತ್ತಮ ನ್ಯಾಯಾಂಗ ವ್ಯವಸ್ಥೆಯನ್ನು ಹೊಂದಿವೆ. ಅಂದರೆ ಸ್ವತಂತ್ರ ನ್ಯಾಯಾಂಗ ವ್ಯವಸ್ಥೆಯು ಪ್ರತಿಯೊಬ್ಬ ನಾಗರೀಕರಿಗೂ ನ್ಯಾಯವನ್ನು ಯಾವುದೇ ರೀತಿಯ ವ್ಯಕ್ತಿಗತ ಅಥವ ಸಾಂಸ್ಥಿಕವಾದಂತಹ ಹಸ್ತಕ್ಷೇಪಗಳಿಲ್ಲದೆ ನ್ಯಾಯವನ್ನು ದೊರಕಿಸುವ ಕೆಲಸ ನಡೆಯುತ್ತಿರುತ್ತದೆ. ಆದರೆ ಬೇರೆ ರೀತಿಯ ವ್ಯವಸ್ಥೆಗಳಲ್ಲಿ ನ್ಯಾಯಾಂಗವು ಆಡಳಿತ ವ್ಯವಸ್ಥೆಯ ಕಪಿಮುಷ್ಟಿಯಲ್ಲಿ ಸಿಲುಕಿರುತ್ತದೆ.

### ಪ್ರಜಾಪ್ರಭುತ್ವ ವ್ಯಕ್ತಿಸ್ವಾತಂತ್ರ್ಯವನ್ನು ರಕ್ಷಿಸುತ್ತದೆ

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಯೊಬ್ಬ ವ್ಯಕ್ತಿಯು ಸಹ ಸ್ವತಂತ್ರನಾಗಿರುತ್ತಾನೆ. ಅಂದರೆ ಯಾವುದೇ ಒಬ್ಬ ವ್ಯಕ್ತಿ ತನಗೆ ಇಷ್ಟಬಂದ ರೀತಿಯಲ್ಲಿ ಬೇರೊಬ್ಬರಿಗೆ ತೊಂದರೆ ಮಾಡದೆ ಬದುಕುವ ಅವಕಾಶವನ್ನು ಕಲ್ಪಿಸಲಾಗಿರುತ್ತದೆ. ಈ ವ್ಯಕ್ತಿಸ್ವಾತಂತ್ರ್ಯಕ್ಕೆ ಸಂಬಂಧಿಸಿದಂತೆ ಪ್ರತಿಯೊಂದು ಪ್ರಜಾಪ್ರಭುತ್ವ ರಾಷ್ಟ್ರಗಳೂ ತಮ್ಮ ಸಂವಿಧಾನದಲ್ಲಿ ಒಂದು ಮೂಲಭೂತ ಹಕ್ಕನ್ನಾಗಿ ಪರಿಗಣಿಸುವ ಮೂಲಕ ವ್ಯಕ್ತಿಸ್ವಾತಂತ್ರಕ್ಕೆ ಹೆಚ್ಚಿನ ಮಹತ್ವವನ್ನು ನೀಡಲಾಗಿದೆ.

### ಗಾಂಧೀಜಿ ಮತ್ತು ಪ್ರಜಾಪ್ರಭುತ್ವ

ಗಾಂಧೀಜಿಯವರು ಪ್ರಜಾಸತ್ತಾತ್ಮಕ ಸರ್ಕಾರವನ್ನು ಪ್ರತಿಪಾದಿಸಿದರು. ವ್ಯಕ್ತಿ ವಿಕಾಸಕ್ಕೆ ಅವಶ್ಯವಾದ ಸ್ವಾತಂತ್ರ್ಯ ಹಾಗೂ ಸಮಾನತೆಯು ಪ್ರಜಾಪ್ರಭುತ್ವದಲ್ಲಿಯೇ ಸಾಕಾರವಾಗುವುದರಿಂದ ಪ್ರಜಾಪ್ರಭುತ್ವವು ಇನ್ನುಳಿದ ಸರ್ಕಾರಗಳಿಗಿಂತ ಯೋಗ್ಯ. ಅಂತಿಮ

ಸಾರ್ವಭೌಮತ್ವವು ಪ್ರಜೆಗಳಲ್ಲಿಯೇ ಇರುವುದರಿಂದ ಜನರಿಗೆ ತಮ್ಮ ಹಿತರಕ್ಷಣೆ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಪ್ರಜೆಗಳ ಹಿತವೇ ಸರ್ಕಾರದ ಅಂತಿಮ ಗುರಿಯಾಗಿರಬೇಕು. ಸರ್ವಸಮ್ಮತಿಯಿಂದ ಸರ್ಕಾರವು ಸಾಗಬೇಕು.

ಸರ್ಕಾರ ವಿಚಾರದಲ್ಲಿ ಗಾಂಧೀಜಿಯವರು ವ್ಯಕ್ತಿ ಹಾಗೂ ಗ್ರಾಮಗಳಿಗೆ ಹೆಚ್ಚಿನ ಪ್ರಾಧಾನ್ಯತೆ ಕೊಟ್ಟಿರುತ್ತಾರೆ. ವ್ಯಕ್ತಿಸ್ವಾತಂತ್ರ್ಯ, ಸಮಾನತೆ ಅವಶ್ಯ. ವ್ಯಕ್ತಿ ಅಭಿಪ್ರಾಯಕ್ಕೆ ರಾಜ್ಯದಲ್ಲಿ ಮನ್ನಣೆ ದೊರೆಯಬೇಕು. ವ್ಯಕ್ತಿಗಳ ಅಭಿಪ್ರಾಯ ವಿಚಾರ, ಇಚ್ಛೆಗಳಂತೆ ಸರ್ಕಾರವು ಸಾಗಬೇಕು. ಭಾರತವು ಗ್ರಾಮೀಣ ದೇಶ. ಹಳ್ಳಿಗಳಲ್ಲಿಯೂ ರಾಜಕೀಯ ಪ್ರಜ್ಞೆ ಮೂಡಲು ಸರ್ಕಾರದ ಅಧಿಕಾರದ ವಿಕೇಂದ್ರೀಕರಣವನ್ನು ಗಾಂಧೀಜಿ ಪ್ರತಿಪಾದಿಸಿದರು. ಸ್ವಾವಲಂಬನೆ ಅವಶ್ಯ. ತಮ್ಮ ಆಡಳಿತವನ್ನು ತಾವೇ ನಡೆಸಿಕೊಂಡು ಹೋಗಲು ಅವಶ್ಯವಾದ ವಾತಾವರಣವನ್ನು ಕಲ್ಪಿಸುವುದು ಪ್ರಜಾಸತ್ತಾತ್ಮಕ ಸರ್ಕಾರದ ಪ್ರಥಮ ಕರ್ತವ್ಯ. ಅಧಿಕಾರ ಹಾಗೂ ಆರ್ಥಿಕ ವಿಕೇಂದ್ರೀಕರಣದಿಂದ ಮಾತ್ರ ಪ್ರಜಾರಾಜ್ಯವು ಹಳ್ಳಿ ಹಳ್ಳಿಗಳಿಗೂ ತಲುಪುತ್ತದೆ. ಸರ್ವರಹಿತ ಆದರಿಂದ ಸಾಧ್ಯವಾಗುತ್ತದೆ. ರಾಷ್ಟ್ರವು ಸ್ವರಾಜ್ಯವಾಗಿ ರಾಮರಾಜ್ಯ ಸ್ಥಾಪನೆಯತ್ತ ಸಾಗುವರೆಂದು ಗಾಂಧೀಜಿಯವರು ತಮ್ಮ ಆಶೆಯನ್ನು ವ್ಯಕ್ತಪಡಿಸಿರುತ್ತಾರೆ.

ಜಯಪ್ರಕಾಶ್ ನಾರಾಯಣ್ ಮತ್ತು ಪ್ರಜಾಪ್ರಭುತ್ವ

ಜಯಪ್ರಕಾಶ್ ನಾರಾಯಣ್‌ರವರು ಪ್ರಜಾಪ್ರಭುತ್ವ ನೈತಿಕ ಮೌಲ್ಯಗಳ ತಳಹದಿಯ ಮೇಲಿರಬೇಕು ಹಾಗೂ ಪ್ರಜಾಪ್ರಭುತ್ವ ಯಶಸ್ವಿಯಾಗಬೇಕೆಂದರೆ ಕೆಲವು ಅಂಶಗಳು ಅತೀ ಅವಶ್ಯಕವಾದ ಅಂಶಗಳಿರಬೇಕೆಂದು ತಿಳಿಸಿದ್ದಾರೆ. ಅವುಗಳೆಂದರೆ

1. ಕರ್ತವ್ಯ ಪ್ರಜ್ಞೆ
2. ಸಹನೆ
3. ಸತ್ಯ ಹಾಗೂ ಸ್ವಾತಂತ್ರ್ಯತೆ
4. ದಬ್ಬಾಳಿಕೆಯ ಪ್ರತಿಭಟನೆ
5. ಜವಾಬ್ದಾರಿ
6. ಸಮಾನತೆಯಲ್ಲಿ ನಂಬಿಕೆ
7. ಅಹಿಂಸೆ

ಈ ಅಂಶಗಳು ಅತಿ ಅವಶ್ಯಕವಾಗಿದ್ದು ರಾಜಕೀಯ ಅಧಿಕಾರ ಕೇಂದ್ರೀಕರಣಕ್ಕೆ ವಿರೋಧ ವ್ಯಕ್ತಪಡಿಸಿದರಲ್ಲದೆ ಇದರಿಂದ ವ್ಯಕ್ತಿಯ ಸ್ವಾತಂತ್ರ್ಯ ಹಾಗೂ ಪ್ರಜಾಪ್ರಭುತ್ವಕ್ಕೆ ವಿರೋಧವಾದುದು ಎಂದು ತಿಳಿಸಿದರು.

## 20.3 ಪ್ರಜಾಪ್ರಭುತ್ವದ ಮಿತಿಗಳು

ಪ್ರಜಾಪ್ರಭುತ್ವವು ಪ್ರಸ್ತುತದಲ್ಲಿ ಎಷ್ಟು ಯಶಸ್ವಿ ವ್ಯವಸ್ಥೆಯೆನಿಸಿದ್ದರೂ ಸಹ ಅದು ತನ್ನ ಕಾರ್ಯಾಚರಣೆಯ ಸಂದರ್ಭಗಳಲ್ಲಿ ಹಲವಾರು ರೀತಿಯ ಮಿತಿಗೆ ಒಳಪಟ್ಟು ಕಾರ್ಯ ನಿರ್ವಹಿಸುವುದನ್ನು ಗುರುತಿಸುವುದಾಗಿದೆ. ಅವುಗಳೆಂದರೆ

ಗಾಂಧೀಜಿಯವರು ಹೇಳಿರುವಂತೆ ಪ್ರಜಾಪ್ರಭುತ್ವವು ಸಾಮ್ರಾಜ್ಯಶಾಹಿ ಹಾಗೂ ಬಂಡವಾಳಶಾಹಿ ವ್ಯಾಮೋಹದಿಂದ ಕಲುಷಿತಗೊಂಡಿರುವುದು. ಬಡವರ ಶೋಷಣೆಯು ಅಲ್ಲಿ ನಡದೆ ಇರುತ್ತದೆ. ಪ್ರಜಾಪ್ರಭುತ್ವದ ಹೆಸರಿನಲ್ಲಿ ಪ್ಯಾಸಿಸಂ ಮತ್ತು ನಾಝಿಜಂ ತಲೆ ಎತ್ತಿನಿಂತಿವೆ. ಪ್ರಜಾಪ್ರಭುತ್ವದ ಹೆಸರಿನಲ್ಲಿ ದಬ್ಬಾಳಿಕೆ, ಬಲಾತ್ಕಾರ ನೆಲೆಯೂರಿದೆ. ಪ್ರಜಾಪ್ರಭುತ್ವದ ಸೋಗಿನಲ್ಲಿ ನಿರಂಕುಶ

ಪ್ರಭುತ್ವ ನೆಲೆಯೂರ ತೊಡಗಿದೆ. ಇಂಗ್ಲೆಂಡ್ ಭಾರತವನ್ನು ಪ್ರಜಾಸತ್ತಾತ್ಮಕ ವಿಧಾನಗಳಿಂದ ಗೆಲ್ಲಲಿಲ್ಲ. ಅಮೆರಿಕ ಹಾಗೂ ದಕ್ಷಿಣ ಆಫ್ರಿಕೆಯಲ್ಲಿಯ ವರ್ಣದ್ವೇಷ ನೀತಿಯನ್ನು ಗಾಂಧೀಜಿಯವರು ಖಂಡಿಸಿದರು. ಇವುಗಳಿಂದ ಕಂಡುಬರುವುದೇನೆಂದರೆ ಪ್ರಬುದ್ಧ ಪಾಶ್ಚಿಮಾತ್ಯ ಹಾಗೂ ಇನ್ನುಳಿದ ಕೆಲವು ರಾಷ್ಟ್ರಗಳಲ್ಲಿ ಹೆಸರಿಗೆ ಮಾತ್ರ ಪ್ರಜಾಪ್ರಭುತ್ವವಿದ್ದು ಕಾರ್ಯ ರೂಪದಲ್ಲಿ ಸರ್ವಾಧಿಕಾರತ್ವವಿರುತ್ತದೆ.

ಬಹುಸಂಖ್ಯಾತರ ಆಳ್ವಿಕೆಯು ಪ್ರಜಾಪ್ರಭುತ್ವದ ತತ್ವ. ಆದರೆ ಈ ತತ್ವದ ದುರುಪಯೋಗವಾಗಿ ಅಲ್ಪಸಂಖ್ಯಾತರ ಹಿತ ಹಾಳಾಗತೊಡಗಿದೆ. ಪ್ರಜಾ ರಾಜ್ಯವು ಸರ್ವರಹಿತ ರಕ್ಷಣೆಗಾಗಿರುವುದೇ ಹೊರತಾಗಿ ಬಹು ಸಂಖ್ಯಾತರರ ಹಿತಕ್ಕಷ್ಟೇ ಅಲ್ಲ. ಸಮಾನತೆ ಹಾಗೂ ಹಕ್ಕುಗಳನ್ನು ಕಲ್ಪಿಸುತ್ತ ಸರ್ವೋದಯವನ್ನು ಸಾಧಿಸುವ ಸರ್ಕಾರವೇ ನಿಜವಾದ ಪ್ರಜಾಪ್ರಭುತ್ವ. ಆರ್ಥಿಕವಾಗಿ ಸರ್ವರಿಗೂ ಸಮಾನ ಅವಕಾಶ ದೊರೆಯಬೇಕು. ಅಹಿಂಸೆಯು ಪ್ರಜಾಪ್ರಭುತ್ವದ ತಳಹದಿಯಾಗಿರಬೇಕು. ಅಹಿಂಸಾತ್ಮಕ ವಿಧಾನಗಳಿಂದ ಸರ್ವೋದಯ ಸಾಧಿಸುವ ನಿಜವಾದ ಪ್ರಜಾಪ್ರಭುತ್ವ. ಎಲ್ಲಿ ಅಹಿಂಸೆ, ಬಲಾತ್ಕಾರ, ಶೋಷಣೆ ಇದೆಯೋ ಅಲ್ಲಿ ಪ್ರಜಾಪ್ರಭುತ್ವವು ಇರುವುದಿಲ್ಲ. ಪ್ರಜಾಪ್ರಭುತ್ವ ಮತ್ತು ಹಿಂಸೆ ಇವು ಒಂದಕ್ಕೊಂದು ವಿರೋಧವಾರುತ್ತದೆ. ಪ್ರಜಾಸತ್ತೆಯ ವಿಚಾರಗಳಲ್ಲಿ ಗಾಂಧೀಜಿಯವರು ಲಾಕ್‌ನ ಬಹು ಸಂಖ್ಯಾತರ ತತ್ವ ಹಾಗೂ ಮಾರ್ಕ್ಸ್‌ನ ವರ್ಗ ತತ್ವವನ್ನು ವಿರೋಧಿಸಿರುತ್ತಾರೆ.

### ಮಾರ್ಕ್ಸ್‌ವಾದಿಗಳ ಟೀಕೆ

ಮಾರ್ಕ್ಸ್‌ವಾದಿಗಳು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಕಟುವಾಗಿ ಟೀಕಿಸಿದ್ದಾರೆ. ಅಂದರೆ ಮಾರ್ಕ್ಸ್‌ವಾದಿಗಳ ಪ್ರಕಾರ ಪ್ರಜಾಪ್ರಭುತ್ವ ವ್ಯವಸ್ಥೆಯು ಶೋಷಣೆಗೆ ಅವಕಾಶ ಮಾಡಿಕೊಡುವ ಮೂಲಕ ದುರ್ಬಲರು ದುರ್ಬಲರಾಗಿಯೇ ಸಬಲರು ಸಬಲರಾಗಿಯೇ ಮುಂದುವರಿಯಲು ಸಹಕಾರಿಯಾಗಿ ಕಾರ್ಯ ನಿರ್ವಹಿಸುತ್ತದೆ. ಮುಂದುವರೆದು ಮಾರ್ಕ್ಸ್‌ವಾದಿಗಳು ಆಡಳಿತದ ಚುಕ್ಕಾಣಿ ದುಡಿಯುವ ವರ್ಗದವರು ಕೈಯಲ್ಲಿರುವುದಕ್ಕೆ ಬದಲಾಗಿ ಶ್ರೀಮಂತ ಹಾಗೂ ಪ್ರಭಾವಿ ವ್ಯಕ್ತಿಗಳ ಕಪಿಮುಷ್ಠಿಯಲ್ಲಿ ಸಿಲುಕುವುದರೊಂದಿಗೆ ಶೋಷಣೆಯು ನಿರಂತರವಾಗಿ ಮುಂದುವರಿಯಲು ಅವಕಾಶ ಹೆಚ್ಚಾಗಿರುತ್ತದೆ ಎಂದು ಕಟುವಾಗಿ ಟೀಕಿಸುತ್ತಾರೆ.

### ಅಪರಿಪೂರ್ಣತೆ

ಪ್ರಜಾಪ್ರಭುತ್ವ ವ್ಯವಸ್ಥೆ ಒಂದು ಅಪರಿಪೂರ್ಣ ವ್ಯವಸ್ಥೆಯಾಗಿದೆ. ಹೇಗೆಂದರೆ ಯಾವುದೇ ಒಂದು ವಿಷಯಕ್ಕೆ ಸಂಬಂಧಿಸಿದಂತೆ ತೀರ್ಮಾನಗಳನ್ನು ಕೈಗೊಳ್ಳುವಾಗ ಸಂವಿಧಾನ ಅಥವಾ ಕಾನೂನಿನನ್ವಯವೇ ಕೈಗೊಳ್ಳಬೇಕಾಗಿರುವುರಿಂದ ಬದಲಾಗುತ್ತಿರುವ ಸನ್ನಿವೇಶಕ್ಕೆ ಪೂರಕವಾದ ನಿರ್ಧಾರಗಳನ್ನು ಕೈಗೊಳ್ಳುವಲ್ಲಿ ಈ ವ್ಯವಸ್ಥೆಯು ಸಹಕಾರಿಯಾಗಿ ಕಾರ್ಯನಿರ್ವಹಿಸಲು ಸಾಧ್ಯವಿರುವುದಿಲ್ಲ.

### ಸಿದ್ಧಾಂತ ಮತ್ತು ಕಾರ್ಯರೂಪದಲ್ಲಿನ ಸಮಸ್ಯೆಗಳು

ಪ್ರಜಾಪ್ರಭುತ್ವವನ್ನು ಸೈದ್ಧಾಂತಿಕವಾಗಿ ಗಮನಿಸಿದಾಗ ಅದು ಇಂದಿಗೂ ಒಂದು ಆದರ್ಶ ವ್ಯವಸ್ಥೆಯಾಗಿಯೇ ಉಳಿದಿರುವುದು ಕಂಡು ಬರುತ್ತದೆ. ಹೇಗೆಂದರೆ ಪ್ರಜಾಪ್ರಭುತ್ವದ ಮೂಲ ತಿರುಳುಗಳಾದ ಸ್ವಾತಂತ್ರ್ಯ, ಸಮಾನತೆ, ಹಾಗೂ ಭ್ರಾತೃತ್ವ ತತ್ವಗಳನ್ನು ಸಿದ್ಧಾಂತದಲ್ಲಿ ತಿಳಿಸಿರುವಂತೆ ಯಥಾವತ್ತಾಗಿ ಕಾರ್ಯಚರಣೆಗೆ ತರಲು ಸಾಧ್ಯವಿಲ್ಲ. ಕಾರಣ ಇಂದು ಪ್ರತಿಯೊಂದು ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಒಂದಲ್ಲಾ ಒಂದು ರೀತಿಯಲ್ಲಿ ಅಸಮಾನತೆಯು ಮುಂದುವರೆಯುತ್ತಿದೆ. ಉದಾ. ಭಾರತದಲ್ಲಿ ಸಾಮಾಜಿಕವಾಗಿ ಅಸಮಾನತೆಯು ಮುಂದುವರೆದಿದ್ದರೆ ಅಮೇರಿಕಾದಲ್ಲಿ ಆರ್ಥಿಕವಾಗಿ ಅಸಮಾನತೆ ಮುಂದುವರೆಯುತ್ತಿರುವುದನ್ನು ಗುರುತಿಸುವುದಾಗಿದೆ.

**ಪ್ರಜಾಪ್ರಭುತ್ವ ವ್ಯವಸ್ಥೆ ದುಬಾರಿಯಾದುದು**

ಪ್ರಜಾಪ್ರಭುತ್ವ ವ್ಯವಸ್ಥೆ ಹೆಚ್ಚು ದುಬಾರಿಯಾದುದು. ಕಾರಣ ಪ್ರಜಾಪ್ರಭುತ್ವ ವ್ಯವಸ್ಥೆಯು ಕಾರ್ಯನಿರ್ವಹಿಸಬೇಕಾದರೆ ಚುನಾವಣೆಗಳು ನಡೆಯಲೇಬೇಕಾಗಿರುತ್ತದೆ. ಇತ್ತೀಚಿನ ದಿನಗಳಲ್ಲಿ ನಡೆಯುತ್ತಿರುವ ಚುನಾವಣೆಗಳನ್ನು ಗಮನಿಸಿದರೆ ಪ್ರತಿಯೊಂದು ರಾಷ್ಟ್ರದಲ್ಲಿಯೂ ಚುನಾವಣೆಗಳು ಹೆಚ್ಚು ದುಬಾರಿಯಾಗುತ್ತಿರುವುದನ್ನು ಗಮನಿಸಬಹುದು. ಹಾಗೆಯೇ ಇನ್ನೊಂದು ರೀತಿಯಲ್ಲಿ ಪ್ರಜಾಪ್ರಭುತ್ವ ಹೆಚ್ಚು ದುಬಾರಿಯಾಗುತ್ತಿರಲು ಕಾರಣ ಬಹು ದಕ್ಷೆ ಹೊಂದಿರುವ ರಾಷ್ಟ್ರಗಳಲ್ಲಿ ಚುನಾವಣೆಗಳ ಸಂಖ್ಯೆ ಹೆಚ್ಚಾಗಿದ್ದು ಅದು ಮತ್ತಷ್ಟು ದುಬಾರಿ ವ್ಯವಸ್ಥೆಯಾಗಿ ಪರಿಣಮಿಸುತ್ತಿದೆ.

**ಜಾಗೃತಿಯ ಸಮಸ್ಯೆ**

ಪ್ರಜಾಪ್ರಭುತ್ವ ಇಂದು ಜಾಗೃತಿಯ ಸಮಸ್ಯೆಯನ್ನು ಎದುರಿಸುತ್ತಿದೆ. ಕಾರಣ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿನ ಪ್ರಜೆಗಳು ಎಲ್ಲರೂ ಜಾಗೃತರಾಗಿಲ್ಲ. ಉದಾ: ತೃತೀಯ ಜಗತ್ತಿನ ಬಹುತೇಕ ರಾಷ್ಟ್ರಗಳು ಪ್ರಜಾಪ್ರಭುತ್ವ ರಾಷ್ಟ್ರಗಳಾಗಿದ್ದು ಆ ರಾಷ್ಟ್ರಗಳಲ್ಲಿನ ಸಾಕ್ಷರತೆಯ ಪ್ರಮಾಣವನ್ನು ಗಮನಿಸಿದಾಗ ಅದು 50% ಕ್ಕಿಂತ ಕಡಿಮೆ ಇದು ಜನತೆಯಲ್ಲಿ ಜಾಗೃತಿಯ ಕೊರತೆ ಇರುವುದನ್ನು ಸೂಚಿಸುತ್ತದೆ. ಅಂದರೆ ಈ ರೀತಿಯ ಜಾಗೃತಿಯು ಕೊರತೆಯಿಂದಾಗಿ ಪ್ರಜೆಗಳು ಸಮರ್ಥ ಹಾಗೂ ಯೋಗ್ಯ ಅಭ್ಯರ್ಥಿಗಳನ್ನು ಚುನಾಯಿಸುವಲ್ಲಿ ವಿಫಲವಾಗುವ ಸಾಧ್ಯತೆಯೇ ಹೆಚ್ಚಾಗಿರುವುದರೊಂದಿಗೆ ಪ್ರಜಾಪ್ರಭುತ್ವ ಯಶಸ್ವಿಯಾಗುವ ಸಾಧ್ಯತೆ ಇರುವುದು ಸಾಧ್ಯವಿರುವುದಿಲ್ಲ.

**ಪಕ್ಷಪದ್ಧತಿಯ ದೋಷಗಳು**

ಇಂದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಏಕಪಕ್ಷಪದ್ಧತಿ, ದ್ವಿಪಕ್ಷಪದ್ಧತಿ ಹಾಗೂ ಬಹುಪಕ್ಷಪದ್ಧತಿಯೆಂಬ ಪಕ್ಷಪದ್ಧತಿಗಳಿದ್ದು ಪ್ರತಿಯೊಂದು ವ್ಯವಸ್ಥೆಯೂ ಸಹ ತನ್ನದೇ ಆದ ದೋಷಗಳಿಂದ ಕೂಡಿವೆ. ಉದಾ. ಏಕಪಕ್ಷಪದ್ಧತಿಯು ಹೆಚ್ಚು ಸರ್ವಾಧಿಕಾರಕ್ಕೆ ಅವಕಾಶ ಕಲ್ಪಿಸಿದರೆ, ದ್ವಿಪಕ್ಷಪದ್ಧತಿಯಲ್ಲಿ ಸ್ಥಿರತೆ ಇದ್ದರೂ ಸಹ ಇಲ್ಲಿಯ ಆಯ್ಕೆಯ ಮಿತಿಗಳಿದ್ದು ಸರ್ವಾಧಿಕಾರಕ್ಕೆ ಮಾಡಿಕೊಡುವ ಸಾಧ್ಯತೆ ಹೆಚ್ಚಾಗಿರುತ್ತದೆ. ಆದರೆ ಬಹುಪಕ್ಷ ಪದ್ಧತಿಯಲ್ಲಿ ಆಯ್ಕೆಗೆ ಹೆಚ್ಚಿನ ಅವಕಾಶಗಳಿದ್ದರೂ ಸಹ ಇದು ಬಾರಿ ರೀತಿಯಲ್ಲಿ ದೋಷಪೂರಿತವಾಗಿದೆ. ಹೇಗೆಂದರೆ ಬಹುಪಕ್ಷ ಪದ್ಧತಿ ಇರುವಲ್ಲಿ ಸ್ಥಿರವಾದ ಸರ್ಕಾರ ರಚನೆ ಸಾಧ್ಯವಿಲ್ಲದಂತಾಗಿ ಆಡಳಿತ ಹಾಗೂ ಅಭಿವೃದ್ಧಿ ಪ್ರಕ್ರಿಯೆ ಇವುಗಳೆರಡೂ ಕುಂಠಿತವಾಗುವ ಸಾಧ್ಯತೆ ಹೆಚ್ಚಾಗಿರುತ್ತದೆ.

**ಏಕಪಕ್ಷ ಪದ್ಧತಿ**

ಏಕಪಕ್ಷ ಪದ್ಧತಿಯಲ್ಲಿ ದೇಶದ ಎಲ್ಲಾ ಅಧಿಕಾರವು ಒಂದೇ ಪಕ್ಷದಲ್ಲಿ ಕೇಂದ್ರೀಕೃತವಾಗಿರುತ್ತದೆ. ಇಲ್ಲಿ ಯಾವುದೇ ವಿರೋಧ ಪಕ್ಷಗಳಿರುವುದಿಲ್ಲಾ ರಾಷ್ಟ್ರೀಯ ಹಿತಾಸಕ್ತಿಗೆ ಭಂಗ ತರುವಂತಹ ಪಕ್ಷಗಳಿರುವುದಿಲ್ಲಾ. ಒಂದೇ ಪಕ್ಷ ತನ್ನ ಅಧಿಕಾರವನ್ನು ಅನುಭವಿಸುತ್ತದೆ.

ಉದಾಹರಣೆ: 1917 ರ ರಷ್ಯಾದ ಕ್ರಾಂತಿ ನಂತರ ರಷ್ಯನ್ ಕಮ್ಯುನಿಸ್ಟ್ ಗುಂಪು

ಈ ಪಕ್ಷ ಪದ್ಧತಿಯಲ್ಲಿ ಅಧಿಕಾರದಾಹ ಮತ್ತು ನಿರಂಕುಶತೆ ಹೊಂದಿರುವುದರಿಂದ ಯಾವುದೇ ರೀತಿಯ ಸ್ವಾತಂತ್ರ್ಯ ಹೊಂದಿರುವುದಿಲ್ಲ ಈ ವ್ಯವಸ್ಥೆ ಸರ್ವಾಧಿಕಾರಕ್ಕೆ ಅವಕಾಶ ನೀಡುತ್ತದೆ. ಈ ಪದ್ಧತಿಯ ಅಡಿಯಲ್ಲಿ ಜನತೆ ಅಸಾಹಯಕವಾಗಿ ಜೀವಿಸುತ್ತಾರೆ. ಉದಾ. :ನಾಸೀಸಿಮ್

ಜನತೆಗೆ ಯಾವುದೇ ರೀತಿಯ ಸ್ವಾತಂತ್ರ್ಯ ಹೊಂದಿರುವುದಿಲ್ಲಾ. ವ್ಯತಿರಿಕ್ತವಾಗಿ ಪ್ರಜಾಪ್ರಭುತ್ವದಲ್ಲಿ ವೈಯಕ್ತಿಕ ಸ್ವಾತಂತ್ರ್ಯ ಮತ್ತು ಮಾನವೀಯ ಮೌಲ್ಯಗಳಿಗೆ ಪ್ರಾಮುಖ್ಯತೆ ನೀಡಲಾಗುತ್ತದೆ. ಎಲ್ಲರೂ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಸ್ವತಂತ್ರವಾಗಿರುತ್ತದೆ. ಏಕ ಪಕ್ಷವ್ಯವಸ್ಥೆ ಮಾನವೀಯ ಮೌಲ್ಯಗಳನ್ನು ಕಾಲಿನಲ್ಲಿ ತುಳಿಯುತ್ತದೆ.

ಏಕಪಕ್ಷ ಸರ್ವಾಧಿಕಾರ ವ್ಯವಸ್ಥೆಯು ನಿರಂಕುಶತ್ವ ಅಶಾಂತಿ ಮತ್ತು ಯುದ್ಧದ ಮೇಲೆ ನಿಂತಿರುತ್ತದೆ. ಈ ಪಕ್ಷ ಪದ್ಧತಿ ಸರ್ಕಾರಗಳು ತಮ್ಮ ರಾಷ್ಟ್ರವನ್ನು ಅಭಿವೃದ್ಧಿಪಡಿಸುವ ಉದ್ದೇಶ ಹೊಂದಿರುತ್ತವೆ ಮತ್ತು ಇತರ ರಾಷ್ಟ್ರಗಳನ್ನು ನಿಯಂತ್ರಣ ಮಾಡುವ ಉದ್ದೇಶ ಹೊಂದಿರುತ್ತವೆ. ಆದ್ದರಿಂದ ಅವುಗಳು ಯಾವಾಗಲೂ ಯುದ್ಧದಲ್ಲಿ ತೊಡಗಿರುತ್ತವೆ

**ದ್ವಿಪಕ್ಷಪದ್ಧತಿ**

ಇಲ್ಲಿ ಕೇವಲ ಪ್ರಮುಖ 2ಪಕ್ಷಗಳು ಅಸ್ತಿತ್ವದಲ್ಲಿರುತ್ತವೆ. ಅಧಿಕಾರ ಹಸ್ತಾಂತರವು ಈ 2 ಪಕ್ಷಗಳಲ್ಲಿ ನಡೆಯುತ್ತಿರುತ್ತದೆ. ಈ ಪಕ್ಷಗಳು ಸದಾ ಅಧಿಕಾರವನ್ನು ಪಡೆಯಲು ಹೋರಾಡುತ್ತಿರುತ್ತದೆ. ಎಲ್ಲಿ ಕೇವಲ 2 ಪಕ್ಷಗಳು ತೃಪ್ತಿಕರವಾಗಿ ಅಧಿಕಾರ ಪಡೆಯುವ ಹೋರಾಟ ನಡೆಸುತ್ತವೆಯೋ ಅಲ್ಲಿ ಇನ್ನೂ ಹಲವಾರು ಪಕ್ಷಗಳು ಇದ್ದರೂ ನಿಜವಾದ ಹೋರಾಟ ಈ ಎರಡು ಪಕ್ಷಗಳಲ್ಲಿ ವಿಭಜಿಸಲ್ಪಟ್ಟಿರುತ್ತದೆ. ಉಳಿದ ಪಕ್ಷಗಳು ತಟಸ್ಥವಾಗಿರುತ್ತದೆ.

ಉದಾ: ಅಮೇರಿಕಾ - ಡೆಮಾಕ್ರಟಿಕ್ ಪಕ್ಷ ಮತ್ತು ರಿಪಬ್ಲಿಕ್ ಪಕ್ಷ

ಇಂಗ್ಲೆಂಡ್-ಕನ್ಸರ್‌ವೇಟಿವ್ ಪಕ್ಷ ಮತ್ತು ಲೇಬರ್ ಪಕ್ಷ

ಕೇವಲ 2 ಪ್ರಧಾನ ಪಕ್ಷಗಳಿರುವುದರಿಂದ ಅಲ್ಪಸಂಖ್ಯಾತರನ್ನು ಪ್ರತಿನಿಧಿಸುವ ಯಾವುದೇ ಪಕ್ಷವಿರುವುದಿಲ್ಲ. ರಾಷ್ಟ್ರದ ಅಭಿವೃದ್ಧಿ ಸಾಧ್ಯವಾಗುವುದಿಲ್ಲ. ಏಕೆಂದರೆ ಪ್ರಧಾನ ಪಕ್ಷಗಳು ತಮ್ಮದೆ ಆದ ಗುರಿ ಮತ್ತು ಉದ್ದೇಶ ಹೊಂದಿರುತ್ತವೆ. ಕೆಲವು ವೇಳೆ ಇವುಗಳ ತತ್ವಗಳು ರಾಷ್ಟ್ರದ ಹಿತಾಸಕ್ತಿಗೆ ವಿರುದ್ಧವಾಗಿರಬಹುದು.

ಕಾನೂನು ಕೆಲವೇ ಜನರ ಹಿತಾಸಕ್ತಿಗಾಗಿ ಜಾರಿಗೆ ತರಲಾಗಿರುತ್ತದೆ ಹೊರತು, ಬಹುಸಂಖ್ಯಾತ ಜನರ ಹಿತದೃಷ್ಟಿಯಿಂದಲ್ಲ. ಈ ಪಕ್ಷ ಪದ್ಧತಿ ಯಾವುದಾದರೊಂದು ಪಕ್ಷದ ಸರ್ವಾಧಿಕಾರ ಆಡಳಿತಕ್ಕೆ ದಾರಿಯಾಗಿರುತ್ತದೆ.

**ಬಹುಪಕ್ಷ ಪದ್ಧತಿ**

ಬಹುಪಕ್ಷ ಪದ್ಧತಿಯಲ್ಲಿ ಹೆಚ್ಚು ಪಕ್ಷಗಳು ಅಸ್ಥಿತ್ವದಲ್ಲಿ ಇದ್ದು, ಚುನಾವಣೆಯಲ್ಲಿ ಬಹುಮತ ಪಡೆದ ಪಕ್ಷ ಸರ್ಕಾರವನ್ನು ರಚಿಸುತ್ತದೆ. ಇಲ್ಲಿ ಎಲ್ಲಾ ಪಕ್ಷಗಳ ನಡುವೆ ತೀವ್ರ ಸ್ಪರ್ಧೆ ನಡೆಯುತ್ತಿರುತ್ತದೆ. ಯಾವುದೇ ಪಕ್ಷ ಬಹುಮತ ಪಡೆಯದೇ ಇದ್ದಾಗ ಅದು ಇತರ ಪಕ್ಷಗಳ ಬೆಂಬಲದಿಂದ ಸಮ್ಮಿಶ್ರ ಸರ್ಕಾರ ರಚಿಸಬಹುದಾಗಿದೆ. ಇದು ದೇಶದ ಸಂಸ್ಕೃತಿಯ ಮೇಲೆ ಅವಲಂಬಿತವಾಗಿರುತ್ತದೆ.

ಸ್ಥಿರ ಸರ್ಕಾರ ಮತ್ತು ರಾಜಕೀಯ ವ್ಯವಸ್ಥೆಯನ್ನು ಕಾಣಲಾಗುವುದಿಲ್ಲ. ಬಹು ಪಕ್ಷ ಪದ್ಧತಿಯಲ್ಲಿ ಅನೇಕ ಪಕ್ಷಗಳಿದ್ದು ಒಂದಕ್ಕೊಂದು ಅನುಮಾನಕ್ಕೆ ಎಡೆ ಮಾಡಿಕೊಡುತ್ತದೆ. ಇದು ಇಡೀ ದೇಶದಲ್ಲಿ ಭಿನ್ನ ಭಿನ್ನವಾದ ಅಭಿಪ್ರಾಯವನ್ನು ಮಾಡಿಸುತ್ತದೆ. ಈ ಪದ್ಧತಿಯಲ್ಲಿ ಯಾವ ಪಕ್ಷಗಳೂ ಸಹ ಜನರ ವಿಶ್ವಾಸ ಹೆಚ್ಚು ಗಳಿಸಲು ಸಾಧ್ಯವಿಲ್ಲ.

ಎಲ್ಲಾ ರಾಜಕೀಯ ಪಕ್ಷಗಳು ಗುರಿ ಸಾಧನೆಗೋಸ್ಕರ ತಮ್ಮ ಪ್ರಚಾರಗಳನ್ನು ಕೈಗೊಳ್ಳುವುದರಿಂದ ದೇಶದಲ್ಲಿ ಪರಿಸ್ಥಿತಿಯನ್ನು ಹದಗೆಡಿಸುತ್ತದೆ. ಯಾವುದೇ ಮಂತ್ರಿಮಂಡಲವು ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸಲು ಸಾಧ್ಯವಾಗುವುದಿಲ್ಲ.

ಈ ಪಕ್ಷ ಪದ್ಧತಿಯಲ್ಲಿ ಪಕ್ಷಗಳು ಅಧಿಕಾರಕ್ಕೆ ಬರುವ ಹಂಬಲದಿಂದ ಸಂವಿಧಾನವನ್ನು ಉಲ್ಲಂಘನೆ ಮಾಡುವುದರ ಮೂಲಕ ಚುನಾವಣೆಯ ಸಮಯದಲ್ಲಿ ಭ್ರಷ್ಟಾಚಾರದಿಂದ ಜನರ ರಾಜಕೀಯ ಪ್ರಜ್ಞೆಯನ್ನು ಹಾಳುಮಾಡುತ್ತವೆ.

**ಸರ್ಕಾರ ರಚನೆಯಲ್ಲಿನ ಕ್ಲಿಷ್ಟತೆ**

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರ್ಕಾರ ರಚಿಸುವ ಕೆಲಸವೂ ಸಹ ಹೆಚ್ಚು ಕಷ್ಟಕರವಾಗಿದ್ದು ಚುನಾವಣೆಯಲ್ಲಿ ಯಾವುದೇ ಒಂದು ಪಕ್ಷ ಬಹುಮತ ಪಡೆಯದೇ ಇದ್ದಾಗ ಹೆಚ್ಚು ಲಾಭಗಳು ನಡೆಯಲು ಸಾಧ್ಯತೆ ಹೆಚ್ಚು. ಹಾಗೆಯೇ ಇನ್ನೊಂದು ರೀತಿಯಲ್ಲಿ ಯಾವುದೇ ಒಂದು ಪಕ್ಷ ಬಹುಮತ ಪಡೆದಿದ್ದರೂ ಸಹ ಪಕ್ಷದ ಸದಸ್ಯರುಗಳ ನಡುವೆಯೇ ಹಲವಾರು ರೀತಿಯಲ್ಲಿ ಗೊಂದಲಗಳು ಸಂಭವಿಸುವ ಸಾಧ್ಯತೆ ಹೆಚ್ಚಾಗಿರುವುದರಿಂದ ಸರ್ಕಾರ ರಚಿಸುವುದೇ ಒಂದು ದೊಡ್ಡ ಸಮಸ್ಯೆಯಾಗಿ ಪರಿಣಮಿಸುವ ಸಾಧ್ಯತೆ ಇರುತ್ತದೆ.

**ಜೆ.ಪಿ. ಯವರ ಪ್ರಕಾರ ಪ್ರಜಾಪ್ರಭುತ್ವದ ಮಿತಿಗಳು**

ಪ್ರಜಾಪ್ರಭುತ್ವವನ್ನು ಪ್ರಜಾ ತಂತ್ರ ಅಥವಾ ಲೋಕ ತಂತ್ರ ಎಂದು ಅರ್ಥೈಸಿರುವ ಜೆ.ಪಿ.ಯವರು ಲೋಕ ತಂತ್ರ ನಮಗೆ ಆದರ್ಶ ರಾಜಕೀಯ ತಂತ್ರವೆಂದೇ ಕರೆದಿದ್ದಾರೆ. ರಾಜತಂತ್ರಕ್ಕೆ ಬದಲಾಗಿ ರಾಜಕೀಯ ಲೋಕ ತಂತ್ರದ ಸಾಧನೆಯನ್ನು ಮಾಡಬೇಕಿದೆ ಎಂಬುದು ಜೆ.ಪಿ.ಯವರ ಗುರಿಯಾಗಿತ್ತು. ಲೋಕ ತಂತ್ರ ಎಂದರೆ ಜೆ.ಪಿ.ಯವರ ಪ್ರಕಾರ.

* ಜನ ಪ್ರತ್ಯಕ್ಷವಾಗಿ ತಮ್ಮ ಮೇಲೆ ತಾವೇ ಆಡಳಿತ ನಡೆಸಿಕೊಳ್ಳುವುದು
* ಜನ ಸ್ವತಃ ಕಾಯಿದೆ ರಚಿಸುವುದು
* ತಾವೇ ಸ್ವತಃ ನ್ಯಾಯ ವಿತರಣೆ ಮಾಡಿಕೊಳ್ಳುವುದು
* ತಾವೇ ಸ್ವತಃ ಆಡಳಿತ ಕಾರ್ಯ ನಿರ್ವಹಿಸುವುದು
* ತಾವೇ ಸ್ವತಃ ಮೇಲ್ವಿಚಾರಣೆ ನಡೆಸಿಕೊಳ್ಳುವುದು

ಲೋಕ ತಂತ್ರದ ಚಟುವಟಿಕೆಯ ಅತ್ಯಗತ್ಯ ಅಂಶಗಳೆಂದು ಸಂವಿಧಾನ, ಆಡಳಿತ ವ್ಯವಸ್ಥೆ, ರಾಜಕೀಯ ಪಕ್ಷಗಳು,ಚುನಾವಣೆ, ಆಜರೂ ಜನರಲ್ಲಿ ನೈತಿಕ - ಆಧ್ಯಾತ್ಮಿಕ ಗುಣಗಳು ಪೂರ್ತಿ ವಿಕಾಸಗೊಳ್ಳುವವರೆಗೂ, ಎಷ್ಟೇ ಉತ್ತಮವಾದ ಸಂವಿಧಾನ, ಆಡಳಿತ ವ್ಯವಸ್ಥೆ, ರಾಜಕೀಯ ವ್ಯವಸ್ಥೆ ಇದ್ದರೂ ನಿಷ್ಪ್ರಯೋಜಕ ಎಂದಿದ್ದಾರೆ. ವ್ಯಕ್ತಿಗೆ ಶಿಕ್ಷಣ ನೀಡುವ ಮೂಲಕ ಸತ್ಯಚಿಂತನೆ, ಹಿಂಸೆಯಿಂದ ದೂರವಿರುವುದು, ಸ್ವಾತಂತ್ರ್ಯ, ಪ್ರೇಮದ ಭಾವನೆಯ ಜೊತೆಗೆ ಅನ್ಯಾಯ, ಕಿರುಕುಳವನ್ನು ವಿರೋಧಿಸುವ ಧೈರ್ಯ, ಸಹಕಾರ ಭಾವನೆ, ಸಮಾಜದ ಹಿತದಲ್ಲಿಯೇ ಸ್ವಂತ ಹಿತ ಕಾಣುವುದು, ಜವಾಬ್ದಾರಿತನ, ಒಗ್ಗಟ್ಟಿನಲ್ಲಿ ನಂಬಿಕೆ ಬರುವಂತೆ ಮಾಡಬೇಕೆಂದು ಕರೆಕೊಟ್ಟಿದ್ದಾರೆ.

ಪಾರ್ಲಿಮೆಂಟರಿ ಅಥವ ಸಂಸದೀಯ ಪ್ರಜಾಪ್ರಭುತ್ವ ಪದ್ಧತಿಯ ಕಾರ್ಯಾಚರಣೆಯು ಸಂಕುಚಿತ ದೃಷ್ಟಿಕೋನವನ್ನು ಹೊಂದಿದೆ ಎಂದಭಿಪ್ರಾಯ ಪಟ್ಟಿದ್ದ ಜೆ.ಪಿ. ಜನರು ಕ್ರಿಯಾಶೀಲರಾಗಿ, ಸಾರ್ವಜನಿಕ ಆಡಳಿತ ಅಥವ ಸರ್ಕಾರದ ವ್ಯವಹಾರದಲ್ಲಿ ಭಾಗವಹಿಸುವಂತೆ ಕರೆ ನೀಡಿದ್ದರು. ಭಾರತದ ಜನತೆ ಸರ್ಕಾರದ ನೀತಿ, ನಿರೂಪಣೆಯಲ್ಲಿ ಕ್ರಿಯಾಶೀಲರಾಗಿ ಪಾಲ್ಗೊಳ್ಳದಿದ್ದರೆ, ಪಾರ್ಲಿಮೆಂಟರಿ ಪ್ರಜಾಪ್ರಭುತ್ವ ಯಶಸ್ವಿಯಾಗಲಾರದೆಂದು ಹೇಳಿದ್ದರು.

ಏಕ ಸದಸ್ಯ ಚುನಾವಣಾ ಕ್ಷೇತ್ರ ವ್ಯವಸ್ಥೆಯ ಬಗ್ಗೆ ಟೀಕಿಸಿದ್ದ ಜೆ.ಪಿ. ಇದು ಭಾರತದ ಶಾಸಕಾಂಗ ಸಭೆಯ ನ್ಯೂನ್ಯತೆಯೆಂದಿದ್ದರು. ಇವರು ರಾಷ್ಟ್ರೀಯ ಕಾಂಗ್ರೆಸ್ ಚುನಾವಣೆಯಲ್ಲಿ ಶೇ 50ರಷ್ಟು ಮತವನ್ನು ಪಡೆಯದಿದ್ದರೂ ಕೇಂದ್ರ ರಾಜ್ಯಗಳಲ್ಲಿ ಸರ್ಕಾರ ರಚಿಸುತ್ತದೆ. ಇದರ ಪ್ರತಿಫಲವೆಂದರೆ ಅಲ್ಪಸಂಖ್ಯಾತ ಸರ್ಕಾರ ಅಧಿಕಾರಕ್ಕೆ ಬರುತ್ತದೆ. ಇದರ ಸುಧಾರಣೆಗೂ ಜೆ.ಪಿ. ಒತ್ತಾಯಿಸಿದ್ದರು.

ರಾಜಕೀಯ ಪಕ್ಷಗಳ ಪಾತ್ರವನ್ನು ಕಟುವಾಗಿ ಟೀಕಿಸಿದ್ದ ಜೆ.ಪಿ. ರಾಜಕೀಯ ಪಕ್ಷಗಳು ಅಧಿಕಾರದ ಸೂತ್ರ ಹಿಡಿದ ನಂತರ ಸ್ವಂತ ಅಥವ ಪಕ್ಷದ ಹಿತಕ್ಕೋಸ್ಕರ ಕಾರ್ಯನಿರ್ವಹಿಸುತ್ತವೇ ವಿನಃ ಲೋಕ ಕಲ್ಯಾಣಕ್ಕಾಗಿ ಕಾರ್ಯನಿರ್ವಹಿಸುವುದಿಲ್ಲ ಎಂದಿದ್ದರು. ಪಕ್ಷಗಳು ಅಶಿಸ್ತನ್ನು, ಭ್ರಷ್ಟಾಚಾರವನ್ನು ಸೃಷ್ಟಿಸುತ್ತವೆ ಎಂದು ಟೀಕಿಸಿದ್ದರು. ರಾಜಕೀಯ ಪಕ್ಷಗಳು ಮತ ಗಳಿಕೆಗಾಗಿ ಅನೈತಿಕ ಮಾರ್ಗಗಳು ಹಿಡಿಯುವುದನ್ನು ಚುನಾವಣೆಗೆ ಹಣದ ಹೊಳೆಯನ್ನೆ ಹರಿಸುವುದನ್ನು ಜಾತಿವಾದ, ಭಾಷಾವಾದ, ಪ್ರಾದೇಶಿಕವಾದ ಮೂಲಕ ಜನರನ್ನು ತಪ್ಪುದಾರಿಗೆ ಎಳೆಯುವುದನ್ನು ಬಲವಾಗಿ ಖಂಡಿಸಿದ್ದರು. ಆದರೂ ಮಾರ್ಚ್ 1977ರಲ್ಲಿ ಜನತಾಪಕ್ಷವನ್ನು ಸ್ಥಾಪಿಸಲು ಜೆ.ಪಿ.ಯವರೇ ಮುಂದಾದರು.

ಭಾರತದಲ್ಲಿ ಪಾರ್ಲಿಮೆಂಟರಿ ಪ್ರಜಾಪ್ರಭುತ್ವ ಪದ್ಧತಿಯ ಕಾರ್ಯಾಚರಣೆಯನ್ನು ವೀಕ್ಷಿಸಿದ್ದ ಜೆ.ಪಿ.ಯವರು, ರಾಜಕೀಯ ಪಕ್ಷಗಳ ಪಾತ್ರವನ್ನೂ ಕಟುವಾಗಿ ಖಂಡಿಸಿದ್ದರು. ರಾಜಕೀಯ ಪಕ್ಷಗಳು, ಅನೈತಿಕತೆಯ, ಭ್ರಷ್ಟಾಚಾರದ, ಅಸಮಾನತೆಯನ್ನು ಸೃಷ್ಟಿಸುವ ವರ್ಗ-ಜಾತಿಗಳನ್ನು ಸೃಷ್ಟಿಸುವ ಸಾಧನಗಳಾಗಿವೆ. ಆದ್ದರಿಂದ ಸರ್ಕಾರ ಮತ್ತು ಜನತೆಯ ನಡುವೆ ನೇರ ಸಂಪರ್ಕವನ್ನು ಕಲ್ಪಿಸುವುದರ ಮೂಲಕ ಪಕ್ಷ ರಹಿತ ಪ್ರಜಾಪ್ರಭುತ್ವವನ್ನು ಪ್ರತಿಪಾದನೆ ಮಾಡಿದರು. ಪಕ್ಷರಹಿತ ಪ್ರಜಾಪ್ರಭುತ್ವವನ್ನು ಸ್ಥಾಪಿಸಲು ಈ ಕೆಳಕಂಡ ಸುಧಾರಣೆಗಳನ್ನು ಜಾರಿಗೆ ತರುವಂತೆ ಕರೆನೀಡಿದರು.

ಪಕ್ಷ ರಹಿತ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಜಾರಿಗೆ ತರಬೇಕಾದರೆ ಮೊದಲು ಅಧಿಕಾರ ವಿಕೇಂದ್ರೀಕರಣ ಮಾಡಬೇಕು. ಇದರಿಂದ ಸರ್ಕಾರ ಮತ್ತು ಜನತೆಯ ನಡುವೆ ನೇರ ಹಾಗು ನಿಕಟವಾದ ಸಂಬಂಧ ಉಂಟಾಗುತ್ತದೆ. ಆಗ ಪಕ್ಷಗಳ ಅಗತ್ಯವೇ ಇಲ್ಲ ಎಂಬುದು ಜೆ.ಪಿ.ಯವರ ಅಭಿಮತ.

ಸಮಾಜವಾದ ಎಲ್ಲಾ ಕೆಡಕುಗಳಿಗೆ ಕಾರಣವಾದ ರಾಜಕೀಯ ಪಕ್ಷಗಳನ್ನೇ ರದ್ದು ಮಾಡುವಂತೆ ಜೆ.ಪಿ. ಕರೆಕೊಟ್ಟಿದ್ದಾರೆ.

## ನಿಮ್ಮ ಪ್ರಗತಿ ಪರಿಶೀಲನೆ - 1

**ಸೂಚನೆ:** 1. ಈ ಕೆಳಗೆ ಬಿಟ್ಟಿರುವ ಜಾಗವನ್ನು ನಿಮ್ಮ ಉತ್ತರಕ್ಕೆ ಉಪಯೋಗಿಸಿಕೊಳ್ಳಿ.

2. ಈ ಘಟಕದ ಕೊನೆಯಲ್ಲಿ ನೀಡಿರುವ ಉತ್ತರದೊಂದಿಗೆ ನಿಮ್ಮ ಪ್ರಗತಿಯನ್ನು ಪರಿಶೀಲಿಸಿಕೊಳ್ಳಿ.

**1. ಪ್ರಜಾಪ್ರಭುತ್ವದ ಮೌಲ್ಯಗಳನ್ನು ಕುರಿತು ವಿವರಿಸಿ?**

............................................................................................................................................
............................................................................................................................................
............................................................................................................................................
............................................................................................................................................
............................................................................................................................................
............................................................................................................................................

**2. ಪ್ರಜಾಪ್ರಭುತ್ವದ ಮಿತಿಗಳನ್ನು ಕುರಿತು ವಿವರಿಸಿ?**

............................................................................................................................................
............................................................................................................................................
............................................................................................................................................
............................................................................................................................................
............................................................................................................................................

3. ಪಕ್ಷಪದ್ಧತಿಯ ದೋಷಗಳನ್ನು ಕುರಿತು ವಿಮರ್ಶಿಸಿ?

.................................................................................................................................................................

.................................................................................................................................................................

.................................................................................................................................................................

.................................................................................................................................................................

.................................................................................................................................................................

.................................................................................................................................................................

.................................................................................................................................................................

## 20.4 ಉಪಸಂಹಾರ

ಪ್ರಜಾಪ್ರಭುತ್ವ ವ್ಯವಸ್ಥೆ ಎಷ್ಟೋ ಲೋಪದೋಷಗಳು ಹಾಗೂ ಮಿತಿಗಳನ್ನು ಹೊಂದಿದ್ದರೂ ಸಹ ಪ್ರಸ್ತುತದಲ್ಲಿ ವಿಶ್ವದ ಬಹುತೇಕ ರಾಷ್ಟ್ರಗಳು ಪ್ರಜಾಪ್ರಭುತ್ವ ರಾಷ್ಟ್ರವಾಗಿರುವುದನ್ನು ಗಮನಿಸಿದರೆ ಇದು ಬೇರೆ ಆಡಳಿತ ವ್ಯವಸ್ಥೆಗಿಂತ ಹೆಚ್ಚು ಜನಪ್ರಿಯ ಆಡಳಿತ ವ್ಯವಸ್ಥೆಯಾಗಿರುವುದು ಕಂಡುಬರುತ್ತದೆ.

## 20.5 ಕಠಿಣ ಪದಗಳು

ಲೋಕತಂತ್ರ : ಜೆ.ಪಿ.ಯವರ ದೃಷ್ಟಿಯ ಪ್ರಜಾಪ್ರಭುತ್ವ

ಸಾಮ್ರಾಜ್ಯಶಾಹಿ : ಇತರ ರಾಷ್ಟ್ರಗಳನ್ನು ಆಕ್ರಮಿಸಿಕೊಂಡು ಆಳ್ವಿಕೆ ಮಾಡುವ ರಾಷ್ಟ್ರ

ನಿರಂಕುಶ : ನಿಯಂತ್ರಣವಿಲ್ಲದ ಅಧಿಕಾರ

ಬಹುಪಕ್ಷ ಪದ್ಧತಿ : ಎರಡಕ್ಕೂ ಹೆಚ್ಚು ಪಕ್ಷಗಳಿರುವುದು

ಪಾರ್ಲಿಮೆಂಟರಿ : ಸಂಸದೀಯ

## 20.6 ಕೆಲವು ಉಪಯುಕ್ತ ಗ್ರಂಥಗಳು

ಬ್ಯಾರಿ .ಬಿ : ಡೆಮಾಕ್ರಸಿ, ಪವರ್ ಅಂಡ್ ಜಸ್ಟೀಸ್, ಎಸ್ಸೇಸ್ ಇನ್ ಪೊಲಿಟಿಕಲ ಥಿಯರಿ, ಆಕ್ಸ್‌ಫರ್ಡ್ ಕ್ಲಾರೆನ್‌ಡನ್ ಪ್ರೆಸ್, 1989

ಬ್ಯಾರಿ, ನಾರ್ಮನ್ : ಇಂಟ್ರಡಕ್ಷನ್ ಟು ಮಾಡ್ರನ್ ಪೊಲಿಟಿಕಲ್ ಥಿಯರಿ, ಲಂಡನ್, ಮ್ಯಾಕ್‌ನಿಲ್ಲನ್ 1995.

ಹೆಲ್ಡ್ ಡೇವಿಡ್ : ಪೊಲಿಟಿಕಲ್ ಥಿಯರಿ ಟುಡೇ, ಕೇಂಬ್ರಿಡ್ಜ್, ಪಾಲಿಟಿ ಪ್ರೆಸ್ 1991, ಚಂದ್ ಅಂಡ್ ಕೋ.ಲಿ., ನ್ಯೂ ಡೆಲ್ಲಿ 1987.

ಅಗರ್‌ವಾಲ್ ಆರ್.ಸಿ. : ಪೊಲಿಟಿಕಲ್ ಥಿಯರಿ, ಚಂದ್ ಅಂಡ್ ಕೋ.ಲಿ.,ನ್ಯೂ ಡೆಲ್ಲಿ 1997.

ಡಾ. ಟಿ.ಡಿ. ದೇವೇಗೌಡ : ರಾಜಕೀಯ ಸಿದ್ಧಾಂತಗಳು

ಡಾ.ಕೆ.ಜೆ. ಸುರೇಶ್ : ರಾಜಕೀಯ ಸಿದ್ಧಾಂತಗಳು

## 20.7 ನಿಮ ಪ್ರಗತಿ ಪರಿಶೀಲನೆಗೆ ಉತ್ತರಗಳು

ನಿಮ್ಮ ಪ್ರಗತಿ ಪರಿಶೀಲನೆ **- 1**

1. ವಿಭಾಗ 20.2 ನೋಡಿ

2. ವಿಭಾಗ 20.3 ನೋಡಿ

3. ವಿಭಾಗ 20.3 ನೋಡಿ

# ಘಟಕ 21 ವೈಜ್ಞಾನಿಕ ಸಮಾಜವಾದ ಅಥವಾ ಸಮತಾವಾದ

## ರಚನೆ

21.0 ಉದ್ದೇಶಗಳು

21.1 ಪೀಠಿಕೆ

21.2 ಮಾರ್ಕ್ಸ್‌ರ ಮುಖ್ಯ ಕೃತಿಗಳು

21.3 ಸಮತಾವಾದದ ಲಕ್ಷಣ ಮತ್ತು ಸ್ವರೂಪ

21.4 ಸಮತಾವಾದದ ಮುಖ್ಯ ತತ್ವಗಳು

- 21.4.1 ದ್ವಂದ್ವಾತ್ಮಕ ಭೌತಿಕವಾದ
- 21.4.2 ಐತಿಹಾಸಿಕ ಭೌತಿಕವಾದ
- 21.4.3 ಅಧಿಕ ಮೌಲ್ಯದ ಸಿದ್ಧಾಂತ
- 21.4.4 ವರ್ಗ ಸಂಘರ್ಷ
- 21.4.5 ಬಂಡವಾಳಶಾಹಿ ಪದ್ಧತಿಯು ತನ್ನ ವಿನಾಶದತ್ತ ಸಾಗಿದೆ
- 21.4.6 ಕ್ರಾಂತಿಯ ಅನಿವಾರ್ಯತೆ
- 21.4.7 ಕಾರ್ಮಿಕರ ಸರ್ವಾಧಿಕಾರತ್ವ
- 21.4.8 ಕ್ರಮೇಣ ರಾಜ್ಯದ ಲಯ
- 21.4.9 ಧರ್ಮ

21.5 ಸಮತಾವಾದದ ವಿಮರ್ಶೆ

21.6 ಉಪಸಂಹಾರ

21.7 ಮುಖ್ಯ ಪದಗಳು

21.8 ಕೆಲವು ಉಪಯುಕ್ತ ಗ್ರಂಥಗಳು

21.9 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು



65

## 20.0 ಉದ್ದೇಶಗಳು

ಈ ಘಟಕದ ವಸ್ತು ವಿಷಯವನ್ನು ಅಧ್ಯಯನ ಮಾಡಿದ ನಂತರ ನೀವು

* ಕಾರ್ಲ್ ಮಾರ್ಕ್ಸ್‌ರವರ ವ್ಯಕ್ತಿತ್ವವನ್ನು ತಿಳಿಯಬಹುದು
* ಕಾರ್ಲ್ ಮಾರ್ಕ್ಸ್‌ರವರ ತತ್ವಗಳನ್ನು ಅರಿಯಬಹುದು
* ಕಾರ್ಲ್ ಮಾರ್ಕ್ಸ್‌ರವರ ತತ್ವಗಳನ್ನು ವಿಮರ್ಶಿಸಬಹುದು

## 21.1 ಪೀಠಿಕೆ

ಕಾರ್ಲ್‌ಮಾರ್ಕ್ಸ್‌ನನ್ನು ವೈಜ್ಞಾನಿಕ ಸಮಾಜವಾದದ ಸ್ಥಾಪಕನೆಂದು ಪರಿಗಣಿಸಲಾಗುತ್ತದೆ. ಪ್ರಸಿದ್ಧ ತತ್ವಜ್ಞಾನಿಯಾದ ಹೆಗೆಲ್ಲನ ವಿಚಾರಗಳಿಂದ ಪ್ರಭಾವಿತನಾದ ಕಾರ್ಲ್‌ಮಾರ್ಕ್ಸ್ ಚಿಕ್ಕ ವಯಸ್ಸಿನಲ್ಲಿಯೇ ಸಾಮಾಜಿಕ ರಾಜಕೀಯ ಕೇಡುಗಳ ನಿವಾರಣೆ ಕಾಲ್ಪನಿಕ ಚಿಂತನೆಯಿಂದ ಸಾಧ್ಯವಿಲ್ಲ. ಬದಲಾಗಿ ವ್ಯವಸ್ಥಿತವಾದ ಸಾಮಾಜಿಕ ವ್ಯವಸ್ಥೆಯ ಅಧ್ಯಯನದಿಂದ ಸಾದ್ಯ ಎಂಬುದನ್ನು ಮನಗಂಡನು. ಆದುದರಿಂದ ಆಧುನಿಕ ಕೈಗಾರಿಕೃತ ಸಮಾಜದ ವ್ಯವಸ್ಥಿತ ಅಧ್ಯಯನ ಕೈಗೊಂಡನು. ಜೀವನಪೂರ್ತಿ ಐತಿಹಾಸಿಕ ಆಧಾರಗಳ ಮೇಲೆ ಸಮಾಜವಾದದ ಸೈದ್ಧಾಂತಿಕ ವಿವರಣೆ ನೀಡಲು ಯತ್ನಿಸಿದನು. ಪ್ಯಾರಿಸ್‌ನಲ್ಲಿ ವಾಸಿಸುವಾಗ ವಿವಿಧ ಕ್ರಾಂತಿಕಾರಿ ಚಿಂತಕರ ಸಂಪರ್ಕಕ್ಕೆ ಬಂದನು. ಪ್ರೋದಾನ್, ಬಾಕುನಿನ್, ಹೀನ್, ವೊಲ್ಫ್, ಮ್ಯಾಝಿನಿ, ಎಂಗೆಲ್ಸ್ ಮುಂತಾದ ಸಮಕಾಲೀನ ಚಿಂತಕರೊಂದಿಗೆ ಸಂಪರ್ಕ ಬೆಳೆಸಿದನು. 1849ರಲ್ಲಿ ಲಂಡನ್ನಿಗೆ ವಲಸೆ ಹೋದ ಮಾರ್ಕ್ಸ್ 34 ವರ್ಷಗಳ ಜೀವಿತದ ಅವಧಿಯನ್ನು ಅಲ್ಲಿಯೇ ಕಳೆದನು.

1848ರಲ್ಲಿ ಪ್ರಕಟವಾದ ಕಮ್ಯುನಿಸ್ಟ್ ಮೆಸೆಫೆಸ್ಟೊವನ್ನು 1847ರಲ್ಲಿ ವಲಸೆಬಂದ ಕಾರ್ಮಿಕರ ಸಂಘಟನೆಯಾದ ಲೀಗ್ ಆಫ್ ಕಮ್ಯುನಿಸ್ಟ್‌ಗಾಗಿ ಸಿದ್ಧಪಡಿಸಲಾಗಿತ್ತು. ಹಿಂದಿನ ದಶಕದಲ್ಲಿಯೂ ಈ ಬಗೆಯ ರಹಸ್ಯ ಸಂಘಟನೆಗಳು ಪ್ಯಾರಿಸ್, ಲಂಡನ್ ಮತ್ತಿತರ ಐರೋಪ್ಯ ನಗರಗಳಲ್ಲಿ ಅಸ್ತಿತ್ವದಲ್ಲಿದ್ದವು. ಪ್ರಸಕ್ತ ಆರ್ಥಿಕ ಅಭಿವೃದ್ಧಿಯ ಹಂತದಲ್ಲಿ ಕೆಲಸಗಾರರ ಯೋಜನಾಬದ್ಧ ಚಳವಳಿಯ ಉದ್ದೇಶವನ್ನು ಲೀಗ್ ಹೊಂದಿತ್ತು. ಈ ಸಂಘಟನೆಯ ತತ್ವಗಳು, ಧ್ಯೇ.ಯೋದ್ದೇಶಗಳು ಮತ್ತು ಕಾರ್ಯ ವಿಧಾನವನ್ನು ವಿವರಿಸಲು ಕಮ್ಯುನಿಸ್ಟ್ ಮೆನಿಫೆಸ್ಟೊ ಪ್ರಕಟವಾಯಿತು.

ಓವೆನ್, ಮುಂತಾದ ಮಧ್ಯಮ ವರ್ಗದ ಸುಧಾರಕರಿಂದ ತಮ್ಮ ತತ್ವ ಬೇರೆಯಾಗಿದೆ ಎಂಬುದನ್ನು ತೋರಿಸುವುದಕ್ಕಾಗಿಯೇ ಸಮಾಜವಾದ ಎಂಬುದಕ್ಕೆ ಬದಲಾಗಿ ಕಮ್ಯುನಿಸಮ್ ಎಂಬ ಪದ ಬಳಸಿರುವುದಾಗಿ ಎಂಗೆಲ್ಸ್ ವಿವರಣೆ ನೀಡುತ್ತಾರೆ. ಎಲ್ಲ ಸಮಾಜವಾದಿ ಕೃತಿಗಳಲ್ಲಿಯೂ ಅತ್ಯಂತ ಹೆಚ್ಚು ಭಾಷೆಗಳಿಗೆ ಅನುವಾದಿತವಾದ ಹೆಚ್ಚು ಓದುಗರನ್ನು ಹೊಂದಿದ ಕೃತಿಯೇ ಕಮ್ಯುನಿಸ್ಟ್ ಮೆನಿಫೆಸ್ಟೊ ಆರ್ಥಿಕ ವರ್ಗಗಳ ನಡುವೆ ನಡೆಯುವ ಘರ್ಷಣೆಯ ಸಂಪೂರ್ಣ ವಿವರಣೆ ಇಲ್ಲಿ ದೊರೆಯುತ್ತದೆ. ಬಂಡವಾಳಶಾಹಿ ವ್ಯವಸ್ಥೆಯ ನಾಶ, ಕಾರ್ಮಿಕವರ್ಗ ಅನುಸರಿಸಬೇಕಾದ ಕ್ರಮಗಳ ವಿವರಣೆ ಇದೆ.

ಕಾರ್ಲ್‌ಮಾರ್ಕ್ಸ್ ಅವರ ದಾಸ ಕ್ಯಾಪಿಟಲ್‌ನ ಮೂರು ಸಂಪುಟಗಳನ್ನು ಸಮಾಜವಾದಿಗಳ ಬೈಬಲ್ ಎಂದು ಕರೆಯಲಾಗುತ್ತದೆ. ಅಮೂರ್ತ ಸೈದ್ಧಾಂತಿಕ ವಿವರಣೆ ಹಾಗೂ ವಾಸ್ತವಾಕಶಗಳ ವಿವರಣೆಯನ್ನು ಈ ಕೃತಿ ಒಳಗೊಂಡಿದೆ. ಮೊದಲ ಸಂಪುಟ ಮಾತ್ರವೇ ಮಾರ್ಕ್ಸ್‌ನ ಜೀವಿತ ಅವಧಿಯಲ್ಲಿ ಪ್ರಕಟವಾಯಿತು. ನಂತರದ ಎರಡು ಸಂಪುಟಗಳನ್ನು ಎಂಗೆಲ್ಸ್‌ನು ಮಾರ್ಕ್ಸ್‌ರ ಬರಹಗಳನ್ನು ಸೇರಿಸಿ ಪ್ರಕಟಿಸಿದನು.

## 21.2 ಮಾರ್ಕ್ಸ್‌ರ ಮುಖ್ಯ ಕೃತಿಗಳು

ಕಮ್ಯುನಿಸ್ಟ್‌ಮೆನಿಫೆಸ್ಟೊ (1848)

ದಾಸ್ ಕ್ಯಾಪಿಟಲ್ (1867,1885,1984)

ಕ್ರಿಟಿಕ್ ಆಫ್ ಪೊಲಿಟಿಕಲ್ ಎಕಾನಮಿ (1859)

ದಿ ಇನ್ ಅಗರಲ್ ಅಡ್ರೆಸ್ (1864)

ವ್ಯಾಲೂ, ಪ್ರೈಸ್, ಆಂಡ್ ಪ್ರೊಫಿಟ್ (1865 ಭಾಷಣ)

## 21.3 ಸಮತಾವಾದದ ಲಕ್ಷಣ ಮತ್ತು ಸ್ವರೂಪ

ಕಾರ್ಲ್‌ಮಾರ್ಕ್ಸ್ ಪ್ರತಿಪಾದಿಸಿದ ಸಮಾಜವಾದವನ್ನು ವೈಜ್ಞಾನಿಕ ಸಮಾಜವಾದ, ಪ್ರೊಲಿತೇರಿಯನ್ ಸಮಾಜವಾದ ಎಂದು ಕರೆಯಲಾಗಿದೆ. ಈ ಪದಗಳು ಮಾರ್ಕ್ಸ್‌ನ ಸಿದ್ಧಾಂತ ಇತರರಿಗಿಂತ ಭಿನ್ನವಾಗಿದೆ ಎಂಬುದನ್ನು ತಿಳಿಸುತ್ತವೆ. ಹಾಗೆಯೇ ಅದರ ಮುಖ್ಯ ಲಕ್ಷಣದ ಮೇಲೆ ಬೆಳಕುಚೆಲ್ಲುತ್ತವೆ. ಮೊದಲನೆಯದಾಗಿ, ಇತಿಹಾಸ ಬೆಳವಣಿಗೆ ಪರಿಣಾಮವಾದ ಸಮಾಜವಾದವನ್ನು ವ್ಯವಸ್ಥಿತ ಅಧ್ಯಯನ ಆಧಾರದ ಮೇಲೆ ಮಂಡಿಸಲಾಗಿದೆ.

ಆದುದರಿಂದ ಅದು ವೈಜ್ಞಾನಿಕವೆನಿಸುತ್ತದೆ. ಬಂಡವಾಳಶಾಹಿ ವ್ಯವಸ್ಥೆಯು ದುಷ್ಪರಿಣಾಮಗಳನ್ನು ಖಂಡಿಸಿದೆ. ಇತರ ಸಮಾಜವಾದಿಗಳು ಇತಿಹಾಸದ ಆಧಾರದ ಮೇಲೆ ಸಿದ್ಧಾಂತ ನೀಡದೆ ಕಲ್ಪನೆಗಳನ್ನು ಆಧರಿಸಿದ್ದಾರೆ. ಉದಾ: ರಾಬರ್ಟ್ ಓವೆನ್, ಫೋರಿಎ, ಸೇಂಟ್ ಸೀಮೊನ್.

ಮಾರ್ಕ್ಸ್‌ನ ಸಮಾಜವಾದವು ಕೇವಲ ಕಾರ್ಮಿಕ ವರ್ಗವನ್ನು ಎಚ್ಚರಿಸುವ ಅಥವಾ ಪ್ರೋತ್ಸಾಹಿಸಲು ಅಥವಾ ಪ್ರೇರಣೆ ನೀಡುವ ಸಿದ್ಧಾಂತ ಮಾತ್ರವೇ ಆಗಿರದೆ ಪ್ರಮುಖವಾದ ವೈಜ್ಞಾನಿಕ ಸಿದ್ಧಾಂತಗಳ ಆಧಾರದ ಮೇಲೆ ಮಾರ್ಕ್ಸ್ ಕಾರ್ಮಿಕರ ಕ್ರಾಂತಿ ವಿವರಿಸುತ್ತಾನೆ. ನೈಸರ್ಗಿಕ ನಿಯಮಗಳು ಅರ್ಥಶಾಸ್ತ್ರದ ನಿಯಮಗಳು ಮತ್ತು ಇತಿಹಾಸಗಳ ವೈಜ್ಞಾನಿಕ ತತ್ವನನ್ನು ಬಳಸಿ ಸಮಾಜವಾದದ ಬೆಳವಣಿಗೆಯನ್ನು ವಿವರಿಸುತ್ತಾನೆ.

ಮಾರ್ಕ್ಸನ ಸಿದ್ಧಾಂತದಲ್ಲಿ ಕ್ರಾಂತಿಕಾರಕ ತಂತರಗಳೂ ಇವೆ ವಿವಿಧ ಸಿದ್ಧಾಂತಗಳಲ್ಲಿ ಮಾರ್ಕ್ಸ್ ವಿಚಾರಗಳ ಮೂಲವನ್ನು ಕಾಣಬಹುದಾದರೂ ಅವು ನೀಡಿದ ವೈಜ್ಞಾನಿಕ ಸಮಾಜವಾದದ ಸೌಧ ಮಾರ್ಕ್ಸ್‌ನ ಕೊಡುಗೆಯೇ ಆಗಿದೆ ಎಂಬುದಾಗಿ ಅಲೆಗ್ಸಾಂಡರ್‌ಗೆ ಅಭಿಪ್ರಾಯಪಡುತ್ತಾರೆ. ಮಾರ್ಕ್ಸ್‌ವಾದದ ಸತ್ವ ಮಾರ್ಕ್ಸ್‌ನ ವಿಚಾರಗಳು ಸ್ವಂತಿಕೆಯಿಂದ ಕೂಡಿವೆಯೇ ಅಥವಾ ಇಲ್ಲವೇ ಎಂಬುದರಲ್ಲಿ ಇಲ್ಲ. ಬದಲಾಗಿ ಸಮಾಜವಾದಕ್ಕೆ ಹೊಸದಾದ ಶಕ್ತಿಯನ್ನು ನೀಡಿ ಅದನ್ನೊಂದು ಜಾಗತಿಕ ಸ್ಫೂರ್ತಿಯನ್ನಾಗಿ ಮಾಡಿದ ಕೀರ್ತಿ ಮಾರ್ಕ್ಸ್‌ನಿಗೆ ಸೇರುತ್ತದೆ.

ಮಾರ್ಕ್ಸ್ ಅನೇಕ ಸಿದ್ಧಾಂತಗಳು ವಿಚಾರಗಳು ಪ್ರಭಾವಕ್ಕೆ ಒಳಗಾಗಿದ್ದಾನೆ ಹೇಗೆಲ್‌ನಿಂದ ವ್ಯಕ್ತಿಗಳೂ ಹಾಗೂ ಸಮಾಜಗಳೂ ನಿರಂತರ ಬದಲಾವಣೆ ಹೊಂದುತ್ತಿರುತ್ತವೆ ಎಂಬ ಸತ್ಯವನ್ನು ಕಂಡುಕೊಂಡನು. ಆದುದರಿಂದ ಇತಿಹಾಸವು ಕೇವಲ ಅನುಕ್ರಮ ಘಟನೆಗಳ ಪರಿಣಾಮವಲ್ಲ ಬದಲಾಗಿ ನಿರಂತರವಾದ ಪ್ರಕ್ರಿಯೆಯಾಗಿದೆ. ಈ ಪ್ರಕ್ರಿಯೆಯು ವಿಧಾನ ನೇರವಾಗಿರದೆ ಅಂಕುಡೊಂಕಾಗಿರುತ್ತದೆ. ಹೇಗೆಲ್ ವಿಚಾರಗಳ ಬೆಳವಣಿಗೆಯ ವಿಷಯದಲ್ಲಿ ತಿಳಿಸುವ ವಾದ-ಪ್ರತಿವಾದ ಮತ್ತು ಸಾಮನ್ವಯದ ತತ್ವವನ್ನೇ ಮಾರ್ಕ್ಸ್ ಆರ್ಥಿಕ ವ್ಯವಸ್ಥೆಯ ವಿವರಣೆಯಲ್ಲಿ ಬಳಸಿಕೊಂಡಿದ್ದಾನೆ.

ಹೆಗೆಲ್ಲನ ಪ್ರಕಾರ ಈ ನಿರಂತರ ಪ್ರಕ್ರಿಯೆ ಪರಿಪೂರ್ಣ ಸ್ವಾತಂತ್ರದ ತಾತ್ವಿಕ ಚಿಂತನೆಯನ್ನು ನೀಡುತ್ತದೆ ಮಾರ್ಕ್ಸ್ ಇದೇ ವಿಧಾನವನ್ನು ಭೌತಿಕ ಪ್ರಕ್ರಿಯೆಯ ವಿವರಣೆಗಾಗಿ ಬಳಸುತ್ತಾನೆ. ಇಲ್ಲಿ ವಾದ ಪ್ರತಿವಾದಕ್ಕೆ ಬದಲಾಗಿ ಘರ್ಷಣೆಯಲ್ಲಿ ನಿರತವಾಗಿರುವ ವರ್ಗಗಳಿವೆ ಎಂಬುದು ಮಾರ್ಕ್ಸ್‌ನ ವಿವರಣೆ. ಈ ರೀತಿಯಲ್ಲಿ ಮಾರ್ಕ್ಸ್‌ನು ಹೆಗೆಲ್ಲರ ವಿಧಾನವನ್ನು ಬಳಸಿಕೊಂಡಿದ್ದರೂ ಆದರ್ಶವಾದಕ್ಕೆ ಪ್ರತಿಯಾಗಿ ಭೌತಿಕವಾದವನ್ನು ಪ್ರತಿಪಾದಿಸಿದ್ದಾನೆ.

ಮಾರ್ಕ್ಸ್‌ನ ಮೇಲಾದ ಎರಡನೆಯ ಪ್ರಭಾವೆಂದರೆ ಫ್ರಾನ್ಸ್‌ನ ಸಮಾಜವಾದ ಕಲ್ಪನೆ ಹದಿನೆಂಟನೆಯ ಶತಮಾನದ ಕ್ಯಾಬೆಟ್ ಎಂಬ ಫ್ರೆಂಚ್ ಚಿಂತಕ ನೀಡಿದ ಸಮತಾವಾದದ ಕಲ್ಪನೆ ಮಾರ್ಕ್ಸ್‌ನ ಮೇಲೆ ಪ್ರಭಾವ ಬೀರಿತು. ಬ್ರುಸೆಲ್ಸ್‌ನಲ್ಲಿ ಕಾರ್ಮಿಕ ಸಂಘಟನೆಯೊಂದನ್ನು ಸ್ಥಾಪಿಸಿದಾಗ ಎಂಗೆಲ್ಸ್ ಅದನ್ನು ಕಮ್ಯುನಿಸ್ಟ್ ಎಂದು ಕರೆದುದು ಕ್ಯಾಬೆಟ್ ಪ್ರಭಾವದ ಸೂಚಿಯಾಗಿದೆ. ವರ್ಗ-ಸಂಘರ್ಷದ ವಿಚಾರವೂ ಸಹ ಫ್ರೆಂಚ್ ಸಮಾಜವಾದಿಗಳ ವಿಚಾರವೇ ಆಗಿದೆ. ಆದರೆ ಫೋರಿಏ, ಸೀಮೋನ್ ಬಡ ಮತ್ತು ಶ್ರೀಮಂತವರ್ಗ ಎಂದು ಕರೆದರೆ ಮಾರ್ಕ್ಸ್ ಅದನ್ನೇ ಬದಲಾಯಿಸಿ ಕೆಲಸಗಾರವರ್ಗ ಮತ್ತು ಬಂಡವಾಳಗಾರವರ್ಗ ಎನ್ನುತ್ತಾನೆ.

ಮೂರನೆಯದಾಗಿ, ಶ್ರಮವೇ ಮೌಲ್ಯದ ಮೂಲವಾಗಿದೆ ಎಂಬ ಬ್ರಿಟಿಷ್ ಸಮಾಜವಾದಿಗಳ ವಿಚಾರಗಳಿಂದ ಪ್ರಭಾವಿತನಾದ ಮಾರ್ಕ್ಸ್ ಅಧಿಕ ಮೌಲ್ಯದ ಸಿದ್ಧಾಂತವನ್ನು ನೀಡಿದ್ದಾನೆ. ಈ ರೀತಿಯಿಂದ ಮಾರ್ಕ್ಸ್‌ನಿಗಿಂತಲೂ ಮೊದಲೇ ಬ್ರಿಟನ್ ಮತ್ತು ಫ್ರಾನ್ಸ್‌ನಲ್ಲಿ ವ್ಯಕ್ತವಾದ ಸಮಾಜವಾದಿ ವಿಚಾರಗಳ ಪ್ರಭಾವ ಮಾರ್ಕ್ಸ್‌ನ ಮೇಲೆ ಆಗಿರುವುದನ್ನು ಕಾಣಬಹುದು. ಲಾಸ್ಕಿ ಅವರು ಹೇಳುವಂತೆ ಸಮತಾವಾದಕ್ಕೆ ಸೈದ್ಧಾಂತಿಕ ಸ್ವರೂಪ ಮತ್ತು ನಿರ್ದೇಶನವನ್ನೂ ಕಾರ್ಲ್ ಮಾರ್ಕ್ಸ್ ನೀಡಿದ್ದಾನೆ. ಕಮ್ಯುನಿಸಂ ಅನ್ನು ಒಂದು ಶಕ್ತಿಯನ್ನಾಗಿಸಿದ ಅಂತರರಾಷ್ಟ್ರೀಯ ಚಳುವಳಿಯನ್ನಾಗಿಸಿದ ಕೀರ್ತಿ ಮಾರ್ಕ್ಸ್‌ರಿಗೆ ಸಲ್ಲುತ್ತದೆ. ಕಮ್ಯುನಿಸ್ಟ್ ಮೆನಿಫೆಸ್ಟೋದ ಕೊನೆಯಲ್ಲಿ ವಾಕ್ಯವೃಂದವನ್ನು ಇಲ್ಲಿ ಉಲ್ಲೇಖಿಸುವುದು ಪ್ರಸ್ತುತವೆನಿಸುತ್ತದೆ.

ಕಮ್ಯುನಿಸ್ಟರು ತಮ್ಮ ಅಭಿಪ್ರಾಯಗಳು ಗುರಿಗಳನ್ನು ಮುಚ್ಚಿಡುವುದನ್ನು ತಿರಸ್ಕರಿಸುತ್ತಾರೆ. ಅಸ್ತಿತ್ವದಲ್ಲಿರುವ ಎಲ್ಲ ಸಾಮಾಜಿಕ ಪರಿಸ್ಥಿತಿಗಳನ್ನೂ ಬಲಪ್ರಯೋಗದಿಂದ ಉರುಳಿಸುವ ಮೂಲಕವಷ್ಟೇ ತಮ ಮಗುರಿಗಳನ್ನೂ ಸಾಧಿಸಿಕೊಳ್ಳಲು ಸಾಧ್ಯ ಎಂದು ಬಹಿರಂಗವಾಗಿಯೇ ಘೋಷಿಸುತ್ತಾರೆ. ಕಮ್ಯುನಿಸ್ಟ್ ಕ್ರಾಂತಿ ಬರುವುದನ್ನು ಕಂಡು ಆಳುವ ವರ್ಗಗಳು ತತ್ತರಿಸಲಿ. ಶ್ರಮ ಜೀವಿಗಳು ತಮ್ಮ ದಾಸ್ಯವನ್ನಲ್ಲದೆ ಬೇರೇನನ್ನೂ ಕಳೆದುಕೊಳ್ಳುವುದಿಲ್ಲ. ಆದರೆ ಅವರ ಮುಂದೆಗಳಿಸಲು ಜಗತ್ತೇ ಇದೆ.

## 21.4 ಸಮತಾವಾದದ ಮುಖ್ಯ ತತ್ವಗಳು

ಮಾರ್ಕ್ಸ್‌ನ ಸಮತಾವಾದದ ಮುಖ್ಯ ತತ್ವಗಳನ್ನು ಈ ಕೆಳಗಿನಿಂತೆ ವಿವರಿಸಬಹುದು ಅವರು ತಿಳಿಸಿರುವ ಪ್ರಧಾನ ತತ್ವಗಳು ಯಾವುವೆಂದರೆ

* ದ್ವಂದ್ವಾತ್ಮಕ ಭೌತಿಕವಾದ
* ಐತಿಹಾಸಿಕ ಭೌತಿಕವಾದ
* ಅಧಿಕ ಮೌಲ್ಯದ ಸಿದ್ಧಾಂತ
* ವರ್ಗ ಸಂಘರ್ಷ
* ಬಂಡವಾಳಶಾಹಿ ಪದ್ಧತಿಯು ತನ್ನ ವಿನಾಶದತ್ತ ಸಾಗಿದೆ
* ಕ್ರಾಂತಿಯ ಅನಿವಾರ್ಯತೆ

* ಕಾರ್ಮಿಕರ ಸರ್ವಾಧಿಕಾರತ್ವ
* ಕ್ರಮೇಣ ರಾಜ್ಯದ ಲಯ
* ಧರ್ಮ

### 21.4.1 ದ್ವಂದ್ವಾತ್ಮಕ ಭೌತಿಕವಾದ

ಮಾರ್ಕ್ಸ್‌ನು ತನ್ನ ಸಮಾಜವಾದವನ್ನು ಶಾಸ್ತ್ರೀಯ ಸಮಾಜವಾದವೆಂದು ಕರೆಯುತ್ತಾನೆ. ಇದು ಭೂರಹಿತ ಕಾರ್ಮಿಕರ ಸರ್ಕಾರವನ್ನು ಸ್ಥಾಪಿಸಿರುವುದರಿಂದ ಭೂರಹಿತ ಕಾರ್ಮಿಕರ ಸಮಾಜವಾದವೆಂದೂ ಕರೆಯಬಹುದು. ಈ ಸಮಾಜವಾದವು ಹಿಂದಿನ ಐತಿಹಾಸಿಕ ಮತ್ತು ಆರ್ಥಿಕ ಬೆಳವಣಿಗೆಯನ್ನು ಶಾಸ್ತ್ರೀಯವಾಗಿ ಅಭ್ಯಸಿಸಿ ಅದರ ಆಧಾರದ ಮೇಲೆ ರಚಿತವಾಗಿರುವುದರಿಂದ ಅದನ್ನು ಶಾಸ್ತ್ರೀಯ ಸಮಾಜವಾದವೆಂದು ಕರೆಯಲಾಗುತ್ತದೆ. ಈ ಸಮಾಜವಾದಕ್ಕೆ ಐತಿಹಾಸಿಕ ಆಧಾರವಿದೆ. ಕೆಲವೊಂದು ತತ್ವಗಳ ಆಧಾರದ ಮೇಲೆ ಬಂಡವಾಳಶಾಹಿಯಲ್ಲಿಯ ದೋಷಗಳನ್ನಷ್ಟೇ ಅಲ್ಲದೆ ಬಂಡವಾಳಶಾಹಿಯ ಮೇಲೆಯೆ ಮಾರ್ಕ್ಸ್ ದಾಳಿಮಾಡಿರುತ್ತಾನೆ. ಸಂಘಟಿಸಿ ದಾಳಿ ಮಾಡುವ ವಿಧಾನವನ್ನು ಸೂಚಿಸಿರುತ್ತಾನೆ. ದ್ವಂದ್ವಾತ್ಮಕ ತತ್ವವನ್ನು ಮಾರ್ಕ್ಸ್‌ವಾದವು ಅವಲಂಬಿಸಿರುವುದರಿಂದ ಅದು ಶಾಸ್ತ್ರೀಯವಾಗಿ ಕಂಡು ಬರುತ್ತದೆ. ದ್ವಂದ್ವಾತ್ಮಕ (Dialectic) ದಲ್ಲಿ ಮಾರ್ಕ್ಸ್ ಕೆಲವು ಮಟ್ಟಿಗೆ ಹೆಗೆಲ್ ತತ್ವಜ್ಞಾನಿಯ ವಿಚಾರವನ್ನು ಅನುಸರಿಸುವುದಾಗಿ ಕಂಡು ಬಂದರೂ, ಅದು ಸಂಪೂರ್ಣವಾಗಿ ಹೆಗೆಲ್‌ನ ವಾದವನ್ನು ಅವಲಂಬಿಸಿರುವುದಿಲ್ಲ. ಹಳೆಯ ಮತ್ತು ಹೊಸ ವಿಚಾರಗಳ ನಡುವೆ ಒಂದು ಘರ್ಷಣೆಯು ಅವ್ಯಾಹತವಾಗಿ ನಡದೇ ಇರುವುದೆಂಬ ಹೆಗೆಲ್‌ನ ವಾದವನ್ನು ಮಾರ್ಕ್ಸ್ ಒಪ್ಪಿಕೊಂಡಿರುತ್ತಾನೆ. ವಾದ (Thesis) ಕ್ಕೊಂದು ಪ್ರತಿವಾದ (Anti Thesis) ವಾದ ಮತ್ತು ಪ್ರತಿವಾದ ಇವೆರಡರ ನಡುವಿನ ಘರ್ಷಣೆಯಿಂದ ಸಂಯೋಗವಾದ (Synthesis) ಉದ್ಭೂತವಾಗುತ್ತದೆ. ದರೆ ಈ ಸಂಯೋಗವಾದವು ಚಿರಸ್ಥಿಯಿಯಲ್ಲ. ಸಂಯೋಗ ವಾದ ವಾದವಾಗಿ ಅದಕ್ಕೊಂದು ಪ್ರತಿವಾದ ಉದ್ಭೂತವಾಗಿ ಅವೆರಡರ ನಡುವಿನ ಘರ್ಷಣೆಯಿಂದ ಇನ್ನೊಂದು ಸಂಯೋಗವಾದ ನಿರ್ಮಿತವಾಗುತ್ತದೆ. ಈ ರೀತಿಯಾಗಿ ಬದಲಾವಣೆಯು ನಡದೇ ಇದ್ದು ಇದು ಸಮಾಜದ ಪ್ರಗತಿಗೆ ದಾರಿ ಮಾಡುತ್ತದೆ. ಹಳೆಯ ವಿಚಾರಗಳು ಸ್ಥಾಪಿತವಾಗುತ್ತ ವಿಚಾರಗಳ ದ್ವಂದ್ವದಿಂದ ಸಂಯೋಗ ಉಂಟಾಗಿ ರಾಷ್ಟ್ರ ಮತ್ತುಸಾಮಾಜಿಕ ಸಂಸ್ಥೆಗಳಲ್ಲಿ ಬದಲಾವಣೆಯ ಅವಶ್ಯಕತೆಯು ಕಂಡು ಬರುವುದಿಲ್ಲವೆಂದು ಹೆಗೆಲ್‌ನ ವಿಚಾರವನ್ನು ಮಾರ್ಕ್ಸ್‌ನು ಒಪ್ಪುವುದಿಲ್ಲ. ಅವಶ್ಯವಾದ ಬದಲಾವಣೆ ಮಾರ್ಕ್ಸ್‌ನ ವಾದ. ಈ ಆಧಾರದ ಮೇಲೆಯೇ ಕ್ರಾಂತಿಯಿಂದ ಪ್ರಚಲಿತ ರಾಜಕೀಯ, ಸಾಮಾಜಿಕ ಪದ್ಧತಿಯನ್ನು ಬುಡಮೇಲು ಮಾಡಿ ಭೂ-ರಹಿತ ಕಾರ್ಮಿಕರ ಸರ್ವಾಧಿಕಾರ ಸ್ಥಾಪನೆ ಎಂದು ಮಾರ್ಕ್ಸ್ ಒತ್ತಿ ಹೇಳಿರುತ್ತಾನೆ. ಜಗತ್ತಿನ ಅರ್ಥವಿವರಣೆಯನ್ನು ಮಾಡುವುದೇ ತತ್ವಜ್ಞಾನದ ಕಾರ್ಯವಾಗಿರದೇ, ಅದರಲ್ಲಿ ಬದಲಾವಣೆ ಮಾಡುವುದಾಗಿರುತ್ತದೆ ಎಂದು ಮಾರ್ಕ್ಸ್‌ನ ವಿಚಾರವಾಗಿರುತ್ತದೆ. ಮಾರ್ಕ್ಸ್‌ನ ಭೌತಿಕವಾದಿ, ಭೌತಿಕಕ್ಕೆ ಅವನ ವಿಚಾರಗಳಲ್ಲಿ ವಿಶೇಷ ಪ್ರಾಧಾನ್ಯತೆ, ಭೌತಿಕವು ಮಾನವನ ಜೀವನವನ್ನೇ ನಿರ್ಣಯಿಸುತ್ತದೆ. ಮಾನವನ ಸಾಮಾಜಿಕದ ಧಾರ್ಮಿಕ ರಾಜಕೀಯ ಮತ್ತು ಭೌದ್ಧಿಕ ಜೀವನವು ಉತ್ಪಾದನೆಯ ಪದ್ಧತಿಯನ್ನು ಅವಲಂಬಿಸಿದ್ದು ಸರ್ಕಾರ ಮತ್ತು ಕಾನೂನುಗಳು ಸಹ ಆರ್ಥಿಕ ಪರಿಸ್ಥಿತಿಯ ಮೇಲೆ ರಚಿತವಾಗಿರುತ್ತದೆ. ಆರ್ಥಿಕ ವ್ಯವಸ್ಥೆಯಲ್ಲಿಯ ಭಿನ್ನತೆಯೇ ರಾಜಕೀಯ ವ್ಯವಸ್ಥೆ, ಕಾನೂನು ವ್ಯವಸ್ಥೆ ಇವುಗಳಲ್ಲಿಯ ವೈವಿಧ್ಯತೆಯ ಮೂಲ, ಆರ್ಥಿಕ ವ್ಯವಸ್ಥೆಯ ಬದಲಾವಣೆಯು ವ್ಯಕ್ತಿಜೀವನದ ಎಲ್ಲ ಹಂತಗಳಲ್ಲಿಯೂ ಮಾರ್ಪಾಟನ್ನು ಮೂಡಿಸುತ್ತದೆ. ಒಂದು ಸಾಮಾಜಿಕ ವ್ಯವಸ್ಥೆಯ ಬದಲಾವಣೆಯು ವ್ಯಕ್ತಿ ಜೀವನದ ಎಲ್ಲ ಹಂತಗಳಲ್ಲಿಯೂ ಮಾರ್ಪಾಟನ್ನು ಮೂಡಿ ರಚಿತವಾಗಿರುವುದು. ಈ ವಾದವನ್ನೇ ಇತಿಹಾಸದ ಆರ್ಥಿಕ ವಿವರಣೆ ಎಂದು ಕರೆಯಲಾಗುತ್ತದೆ. ಐತಿಹಾಸಿಕವಾಗಿ ಮಾರ್ಕ್ಸ್‌ನು ತನ್ನ ವಿಚಾರವನ್ನು ಸಮರ್ಥಿಸುತ್ತಾನೆ. ಮಾನವನ ಇತಿಹಾಸದ ಪುಟಗಳನ್ನು ತಿರುವುತ್ತ ಕಾಲಕಾಲಕ್ಕೆ ಆರ್ಥಿಕ ವ್ಯವಸ್ಥೆಯಲ್ಲಿ ಆದ ಬದಲಾವಣೆಗಳನ್ನು ಹೊರಗೆಡಹುತ್ತ ಬೇಟೆಯಾಡುವ ಕಾಲ, ಒಕ್ಕಲುತನ ಕಾಲ ಜಮೀನುದಾರರ ಕಾಲ, ಬಂಡವಾಳಶಾಹಿಗಳ

ಕಾಲದಲ್ಲಿಯ ಆರ್ಥಿಕ ವ್ಯವಸ್ಥೆಯನ್ನು ವಿವರಿಸುತ್ತಾನೆ. ಖಾಸಗಿ ಆಸ್ತಿಯ ವಿಚಾರವು ಇಲ್ಲದ ಕಾಲದಲ್ಲಿ ಸಾಮೂಹಿಕ ಉತ್ಪಾದನೆ ಮತ್ತು ಸೇವನೆ ಅಥವಾ ವಿವರಣೆಯಿದ್ದು ಖಾಸಗಿ ಆಸ್ತಿಯು ಸ್ಥಾಪಿತವಾದ ಮೇಲೆ ಗುಲಾಮಗಿರಿ ಪ್ರಾರಂಭವಾಗಿ ಗುಲಾಮರ ದುಡಿಮೆಯ ಮೇಲೆ ಬಾಳುವ ಯಜಮಾನರು ಜನ್ಮವೆತ್ತಿದರು. ಜಮೀನದಾರಿ ಪದ್ಧತಿಯಲ್ಲಿ ಅರೆಗುಲಾಮರ (Serfs) ದುಡಿಮೆಯ ಮೇಲೆ ನಿಂತ ಜಮೀನುದಾರರು ಕಂಡು ಬರುತ್ತಾರೆ. ಔದ್ಯೋಗಿಕರಣದಲ್ಲಿ ಬೆಳೆದ ಬಂಡವಾಳಶಾಹಿ (Capitalism) ಕೂಲಿಕಾರರ ದುಡಿಮೆಯ ಮೇಲೆ ನಿಂತಿರುತ್ತದೆ. ಈ ಪ್ರಕಾರವಾಗಿ ಒಂದು ವರ್ಗದ ದುಡಿಮೆಯ ಮೇಲೆ ಇನ್ನೊಂದು ವರ್ಗವು ಜೀವಿಸತೊಡಗಿರುವುದು, ಸುಖ ಪಡುತ್ತಿರುವುದು ಇತಿಹಾಸದಲ್ಲಿ ಸ್ಪಷ್ಟವಿದೆ ಎಂದು ಮಾರ್ಕ್ಸ್‌ನು ಹೇಳುತ್ತಾನೆ. ಈ ಆರ್ಥಿಕ ವ್ಯವಸ್ಥೆಯೇ ದಲಿತವರ್ಗವನ್ನು ಶೋಷಣೆಗೆ ಒಳಪಡಿಸಿತು. ಈ ಆರ್ಥಿಕ ಪದ್ಧತಿಯಲ್ಲಿಯ ಬದಲಾವಣೆಗೆ ಯಾವ ಅರಿವು, ತಿಳುವಳಿಕೆ ಕಾರಣವಾಗಿರದೇ ಉತ್ಪಾದನೆ ಮತ್ತು ವಿನಿಮಯಗಳ ಪದ್ಧತಿಯಲ್ಲಿಯ ಬದಲಾವಣೆಯೇ ಮೂಲ ಕಾರಣವಾಗಿರುತ್ತದೆ. ಒಂದು ಕಾಲದ 'ಉತ್ಪಾದಕ ಶಕ್ತಿ' ಇದಕ್ಕೆ ಕಾರಣವೆಂದು ವಿವರಿಸಿರುತ್ತಾನೆ.

ಹೆಗೆಲ್‌ರ ದ್ವಂದ್ವಾತ್ಮಕತೆ ಮತ್ತು ಮಾರ್ಕ್ಸ್‌ರ ದ್ವಂದ್ವಾತ್ಮಕತೆಗಳ ನಡುವಣ ವ್ಯತ್ಯಾಸಗಳನ್ನು ಕೆಳಕಂಡಂತೆ ನಿರೂಪಿಸಬಹುದು.

* ಹೆಗೆಲ್ ಪ್ರಕಾರ ಚೇತನವು ಶ್ರೇಷ್ಟವಾದ ವಾಸ್ತವಿಕತೆಯಾಗಿದ್ದರೆ ಕಾರ್ಲ್‌ಮಾರ್ಕ್ಸ್‌ಗೆ ಭೌತಿಕತೆಯೇ ಸರ್ವಶ್ರೇಷ್ಟವಾದ ವಾಸ್ತವಿಕತೆ.
* ಹೆಗೆಲ್‌ರ ಪ್ರಕಾರ ಸಾಮಾಜಿಕ ವಿಕಸನದ ಒಳಿತೆಂದರೆ, ವಿಚಾರದ ಪೂರ್ಣ ಪಜ್ಞಾವಂತಿಕೆಯೇ ಆದರೆ, ಮಾರ್ಕ್ಸ್‌ರ ಪ್ರಕಾರ, ಅದು ವರ್ಗರಹಿತ ಸಮಾಜದ ಸ್ಥಾಪನೆಯೇ ಆಗಿದೆ.
* ಹೆಗೆಲ್‌ರ ಪ್ರಕಾರ ರಾಷ್ಟ್ರಗಳ ನಡುವಣ ಸಮರವು ಇತಿಹಾಸದ ಯಾಂತ್ರಿಕ ಕ್ರಿಯೆಯಾದರೆ, ಮಾರ್ಕ್ಸ್ ಅವರಿಗೆ ಅದು ವರ್ಗಗಳ ನಡುವಣ ಹೋರಾಟವೇ ಆಗಿದೆ.

ಹೆಗೆಲ್‌ರ ದ್ವಂದ್ವಾತ್ಮಕತೆ (ಡೆಯಲೆಕ್ಟಿಕ್ಸ್) ಯಿಂದ ಪ್ರಾರಂಭಿಸಿ ಮಾರ್ಕ್ಸ್ ಮೂರು ಮುಖ್ಯ ಸಿದ್ಧಾಂತಗಳನ್ನು ಅಭಿವೃದ್ಧಿಪಡಿಸಿದ್ದಾರೆ. ಇವು ಯಾವುವೆಂದರೆ

* ಐತಿಹಾಸಿಕ ಭೌತಿಕವಾದ ಸಿದ್ಧಾಂತ
* ಅಧಿಕ ಮೌಲ್ಯ ಸಿದ್ಧಾಂತ ಮತ್ತು
* ವರ್ಗ ಸಂಘರ್ಷ ಸಿದ್ಧಾಂತ

### 21.4.2 ಐತಿಹಾಸಿಕ ಭೌತಿಕವಾದ (ಸ್ಟಾರಿಕಲ್ ಮೆಟೀರಿಯಲಿಸಮ್)

ಸಮಾಜದ ಎಲ್ಲ ಪ್ರಕ್ರಿಯೆಗಳ ಉಗಮವು ಜೀವನದ ಭೌತಿಕ ಪರಿಸ್ಥಿತಿಗಳಲ್ಲಿ ಉಂಟಾಗುತ್ತದೆ. ಸಬೈನ್ ಅವರು ಹೇಳುವಂತೆ, ಮಾರ್ಕ್ಸ್‌ರ ಐತಿಹಾಸಿಕ ಭೌತಿಕವಾದ ಎಂದರೆ, ಪ್ರಪ್ರಥಮವಾಗಿ ಧರ್ಮನಿರಪೇಕ್ಷತೆಯೇ ಆಗುತ್ತದೆ.

ಮಾರ್ಕ್ಸ್‌ರ ಪ್ರಕಾರ ಎಲ್ಲ ಮೂಲಭೂತ ಆತಿಹಾಸಿಕ ಬದಲಾವಣೆಗಳು ಉತ್ಪಾದನಾ ವಿಧಾನಗಳ ಅಥವಾ ಆರ್ಥಿಕ ಶಕ್ತಿಗಳಿಂದ ನಿರ್ಧರಿಸಲ್ಪಡುತ್ತವೆ. ಉತ್ಪಾದನಾ ವಿಧಾನದಲ್ಲಿ ಉಂಟಾಗುವ ಯಾವುದೇ ಬದಲಾವಣೆಯು ಅದಕ್ಕನುಗುಣವಾದ ಬದಲಾವಣೆಯನ್ನುಸಾಮಾಜಿಕ ಸಂಬಂಧಗಳಲ್ಲಿ ತರುತ್ತದೆ. ಮಾರ್ಕ್ಸ್‌ರ ಪ್ರಕಾರ ಜೀವನದ ಅವಶ್ಯಕತೆಗಳನ್ನು ಪಡೆಯುವ ಮಾನವನ ಪ್ರಯತ್ನಗಳನ್ನು ಇತಿಹಾಸದ ನಾಲ್ಕು ಮುಖ್ಯ ಹಂತಗಳಲ್ಲಿ ಗುರುತಿಸಿದ್ದಾರೆ. ಅವುಗಳೆಂದರೆ, ಅನಾದಿ, ಪ್ರಾಚೀನ, ಊಳಿಗಮಾನ್ಯ ಮತ್ತು ಬಂಡವಾಳಶಾಹಿ.

ಅನಾದಿ ಸಮತಾವಾದಿ ಹಂತದಲ್ಲಿ ಉತ್ಪಾದನಾ ಸಾಧನಗಳು ಅತ್ಯಲ್ಪವಾಗಿದ್ದು, ಸಮುದಾಯದ ಒಡೆತನಕ್ಕೆ ಒಳಪಟ್ಟಿತ್ತು.ಆದರೆ ಉಳಿದ ಮೂರು ಹಂತಗಳಲ್ಲೂ ಉತ್ಪಾದನಾ ಸಾಧನಗಳು ಮತ್ತು ಉಪಕರಣಗಳನ್ನು ನಿಯಂತ್ರಿಸುವ ವರ್ಗವು ಯಜಮಾನಿಕೆ ವಹಿಸಿ ಉಳಿದ ವರ್ಗಗಳನ್ನು ಶೋಷಿಸುತ್ತದೆ. ಪರಿಣಾಮವಾಗಿ ಬಿಗುವಿನ ವಾತಾವರಣ ಮತ್ತು ಘರ್ಷಣೆಗೆ ದಾರಿ ಮಾಡಿಕೊಡುತ್ತದೆ. ಮಾರ್ಕ್ಸ್ ಅವರ ಮಾತುಗಳಲ್ಲಿ ಹೇಳುವುದಾದರೆ, ಎಲ್ಲ ಸಾಮಾಜಿಕ ರಾಜಕೀಯ, ಮತ್ತು ಬೌದ್ಧಿಕ ಸಂಬಂಧಗಳು, ಮತ್ತು ದಾರ್ಮಿಕ ಮತ್ತು ಕಾನೂನು ವ್ಯವಸ್ಥೆಗಳು, ಇತಿಹಾಸದ ಗತಿಯಲ್ಲಿ ಹೊರಹೊಮ್ಮುವ ಎಲ್ಲ ಸೈದ್ಧಾಂತಿಕ ಧೋರಣೆಗಳು ಜೀವನದ ಭೌತಿಕ ಪರಿಸ್ಥಿತಿಗಳಿಂದಲೇ ಹುಟ್ಟಿರುತ್ತವೆ.

ಉತ್ಪಾದನೆಯ ಶಕ್ತಿಗಳ ಬುನಾದಿಯ ಮೇಲೆ ಸಮಾಜ ರಚನೆಯಾಗುತ್ತದೆ. ಕಾರ್ಲ್‌ಮಾರ್ಕ್ಸ್ ಅವರು ಕಾನೂನು ಸಂಬಂಧಗಳು ಹಾಗೂ ರಾಜ್ಯದ ಬಗೆಗಳನ್ನು ಅರ್ಥಮಾಡಿಕೊಳ್ಳುವುದಾಗಲಿ, ಅಥವಾ ಮಾನವನ ಮನಸ್ಸಿನ ಸಾಮಾನ್ಯ ಪ್ರಗತಿ ಎಂದು ಕರೆಯಲ್ಪಡುವುದರಿಂದಾಗಲಿ, ವಿವರಿಸಲು ಸಾಧ್ಯವಿಲ್ಲ. ಆದರೆ ಅವುಗಳ ಬೇರು ಜೀವನದ ಭೌತಿಕ ಪರಿಸ್ಥಿತಿಗಳಲ್ಲಿದೆ. ಭೌತಿಕ ಜೀವನದ ಉತ್ಪಾದನಾ ಸಾಧನಗಳೇ ಸಾಮಾಜಿಕ, ರಾಜಕೀಯ ಮತ್ತು ಆಧ್ಯಾತ್ಮಿಕ ಜೀವನದ ಪ್ರಕ್ರಿಯೆಗಳ ಸಾಮಾನ್ಯ ಲಕ್ಷಣಗಳನ್ನು ನಿರ್ದರಿಸುತ್ತವೆ. ಮಾನವರ ಪ್ರಜ್ಞಾವಂತಿಕೆಯು ಅವರ ಅಸ್ತಿತ್ವವನ್ನು ನಿರ್ಧರಿಸುವುದಿಲ್ಲ. ಅದಕ್ಕೆ ತದ್ವಿರುದ್ಧವಾಗಿ, ಅವರ ಸಾಮಾಜಿಕ ಅಸ್ತಿತ್ವವು ಅವರ ಪ್ರಜ್ಞಾವಂತಿಕೆಯನ್ನು ನಿರ್ಧರಿಸುತ್ತದೆ. ಆದ್ದರಿಂದ ಆರ್ಥಿಕ ವ್ಯವಸ್ಥೆಯು ಒಂದು ದೇಶದ ರಾಜಕೀಯ ಸಂಸ್ಥೆಗಳು ಮತ್ತು ಆಚರಣೆಗಳು, ಅದರ ಸಾಮಾಜಿಕ ರಚನೆ, ಅದರ ಕಾನೂನು ಮತ್ತು ಸಂಪ್ರದಾಯಗಳು, ಅಟಿರ ಕಲೆ ಮತ್ತು ತತ್ವಶಾಸ್ತ್ರ ಹಾಗೂ ಅದರ ಧರ್ಮ ಮತ್ತು ನೈತಿಕತೆಯನ್ನು ವಿವರಿಸುತ್ತದೆ.

ಮಾರ್ಕ್ಸ್‌ರ ಪ್ರಕಾರ, ಸಮಾಜದ ಭೌತಿಕ ಶಕ್ತಿಯನ್ನು ನಿಯಂತ್ರಿಸುವ ವರ್ಗವೇ ಏಕಕಾಲದಲ್ಲಿ ಅದರ ಬೌದ್ಧಿಕ ಆಳುವ ಶಕ್ತಿಯೂ ಆಗಿರುತ್ತದೆ. ಆದಾಗ್ಯೂ ಸಿದ್ಧಾಂತ, ದೇವತಾಶಾಸ್ತ್ರ ನೀತಿಶಾಸ್ತ್ರ ತತ್ವಶಾಸ್ತ್ರ ಮುಂತಾದವುಗಳು ಅಸ್ತಿತ್ವದಲ್ಲಿರುವ ಸಾಮಾಜಿಕ ಸಂಬಂಧಗಳಿಗೆ ವಿರೋಧಾಭಾಸ ಉಂಟುಮಾಡುವ ಸಾಧ್ಯತೆ ಇರುತ್ತದೆ. ಅಸ್ತಿತ್ವದಲ್ಲಿರುವ ಉತ್ಪಾದನಾ ಶಕ್ತಿಗಳೊಂದಿಗೆ ಸಾಮಾಜಿಕ ಸಂಬಂಧಗಳ ವೈರುಧ್ಯಗಳಿದ್ದಾಗ ಇಂತಹ ಪರಿಣಾಮ ಉಂಟಾಗುತ್ತದೆ. ಪರಿಸ್ಥಿತಿಗಳು ಬದಲಾಗುತ್ತಿದ್ದಾಗ ಅಥವಾ ಬದಲಾವಣೆಗೆ ಪರಿಪಕ್ವವಾದಾಗ, ಉತ್ಪಾದನಾ ಶಕ್ತಿಗಳು, ಸಮಾಜದ ಸ್ಥಿತಿ ಮತ್ತು ಪ್ರಜ್ಞಾವಂತಿಕೆಗಳ ನಡುವೆ ವಿರೋಧಾಭಾಸಗಳುಂಟಾಗುತ್ತವೆ.

ಐತಿಹಾಸಿಕ ಭೌತಿಕವಾದದ ಪ್ರಕಾರ, ಎಲ್ಲ ಸಾಮಾದಿಕ ಬದಲಾವಣೆಗಳು ಮತ್ತು ರಾಜಕೀಯ ಕ್ರಾಂತಿಗಳ ಅಂತಿಮ ಕಾರಣಗಳನ್ನು ಶಾಶ್ವತ ಸತ್ಯ ಮತ್ತು ನ್ಯಾಯವನ್ನು ಸೋಧಿಸುವ ಜನತೆಯ ಮನಸ್ಸಿನಲ್ಲಿ ಹುಡುಕುವ ಬದಲು, ಉತ್ಪಾದನೆ ಮತ್ತು ವಿತರಣೆ ಸಾಧನಗಳಲ್ಲಾಗುವ ಬದಲಾವಣೆಗಳಲ್ಲಿ ಕಾಣಬೇಕು, ತತ್ವಶಾಸ್ತ್ರದಲ್ಲಿ ಹುಡುಕುವ ಬದಲು, ಸಂಬಂಧಪಟ್ಟ ಅವಧಿಯ ಅರ್ಥಶಾಸ್ತ್ರದಲ್ಲಿ ಹುಡುಕಬೇಕು. ಮಾರ್ಕ್ಸ್ ಪ್ರಕಾರ ಮಾನವ ಇತಿಹಾಸದಲ್ಲಿ ಉತ್ಪಾದನಾ ಸಾಧನಗಳ ಒಡೆತನ ಹೊಂದಿದ ವರ್ಗವೇ, ಸಮಾಜದ ಉಳಿದ ವರ್ಗಗಳನ್ನು ಶೋಷಿಸುತ್ತಾ ಬಂದಿರುವುದು ಸ್ಪಷ್ಟವಾಗುತ್ತದೆ.ಇದನ್ನೇ ಐತಿಹಾಸಿಕ ಭೌತಿಕವಾದದ ಪರಿಕಲ್ಪನೆ ಎಂದು ಕರೆಯಲಾಗಿದೆ.

### 21.4.3 ಅಧಿಕ ಮೌಲ್ಯದ ಸಿದ್ಧಾಂತ

ಅಧಿಕ ಮೌಲ್ಯದ ಸಿದ್ಧಾಂತವು ಮಾರ್ಕ್ಸ್‌ವಾದದ ಮೂಲಭೂತ ತತ್ವವಾಗಿರುತ್ತದೆ. ಶ್ರಮವೇ ಮೌಲ್ಯ ಉತ್ಪಾದಕ ಎಂಬ ಲಾಕ್‌ನ ವಿಚಾರವನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬಹುದು. ಮಾರ್ಕ್ಸ್‌ನು ಉಪಯುಕ್ತ ಮೌಲ್ಯ ಇವುಗಳ ನಡುವಿನ ಭಿನ್ನತೆಯನ್ನು ತೋರಿಸುತ್ತಾನೆ. ಉಪಯುಕ್ತ ಮೌಲ್ಯವು ಮಾನವನ ಬಯಕೆಯನ್ನು ತೃಪ್ತಿಗೊಳಿಸುವ ಶಕ್ತಿಯಾಗಿದ್ದು ವಿನಿಮಯ ಮೌಲ್ಯವು ಒಂದು

ವಸ್ತುವಿನೊಡನೆ ವಿನಿಮಯ ಮಾಡುವ ಶಕ್ತಿಯಾಗಿರುತ್ತದೆ. ವಿನಿಮಯ ಮೌಲ್ಯವು ಬಳಸಿದ ಶ್ರಮದಿಂದ ನಿರ್ಧರಿಸಲ್ಪಡುತ್ತದೆ. ಅಧಿಕ ಮೌಲ್ಯ ಸಂಪಾದನೆಗಾಗಿ ಬಳಸಿದ ಎಲ್ಲ ಖಾಸಗಿ ಉತ್ಪಾದಕ ಘಟಕಗಳೇ ಬಂಡವಾಳವೆಂದು ಮಾರ್ಕ್ಸ್ ಅಭಿಪ್ರಾಯ ಪಟ್ಟಿರುತ್ತಾನೆ. ಶ್ರಮ ಶೋಷಣೆಯೇ ಈ ಬಂಡವಾಳದ ಗುರಿ, ಎಲ್ಲ ಮೌಲ್ಯವು ಶ್ರಮ ಉತ್ಪಾದಿತ. ಔದ್ಯಮಿಕ ಕ್ರಾಂತಿಯ ಕಾಲದಿಂದ ಬಂಡವಾಳಶಾಹಿಯು ಉತ್ಪಾದಕ ಎಲ್ಲ ಘಟಕಗಳನ್ನು ನಿಯಂತ್ರಿಸುತ್ತ ಬಂದಿದು, ಶ್ರಮ ಮಾರುಕಟ್ಟೆಯಲ್ಲಿ ಪೈಪೋಟಿ ಪರಿಸ್ಥಿತಿಯನ್ನು ನಿಯಂತ್ರಿಸುತ್ತ ನಡೆದಿರುತ್ತಾನೆ. ಈ ಹತೋಟಿಯು ಶ್ರಮ ಶೋಷಣೆಗೆ ಅನುಕೂಲ ವಾತಾವರಣವನ್ನು ಕಲ್ಪಿಸುತ್ತದೆ.

ಮಾರ್ಕ್ಸ್‌ನ ಅಬಿಪ್ರಾಯದಲ್ಲಿ ಶ್ರಮವು ಮೌಲ್ಯ ಉತ್ಪಾದಕ ಕಾರ್ಮಿಕರಿಗೆ ಜೀವನಕ್ಕೆ ಅವಶ್ಯದ ಮಟ್ಟಿಗೆ ಕೂಲಿಕೊಟ್ಟು ಮತ್ತು ಕಚ್ಛಾ ಮಾಲಿನ ಬೆಲೆ ತೆಗೆದು ಉಳಿದ ಹಣವೆಲ್ಲವನ್ನು ಲಾಭ, ಬಡ್ಡಿ ಬಾಡಿಗೆ ಈ ರೂಪದಲ್ಲಿಬಂಡವಾಳಶಾಹಿಯು ತಾನೇ ನುಂಗುತ್ತಾನೆ. ಉತ್ಪಾದನೆಗೆ ಅವಶ್ಯವಾದ ಕಚ್ಚಾಮಾಲನ್ನು ಕಡಿಮೆ ಬೆಲೆಗೆ ಕೊಂಡು ಕೂಲಿಕಾರರಿಗೆ ಕಡಿಮೆ ಕೂಲಿ ಕೊಟ್ಟು ತಯಾರಿಸಿದೆ. ಮಾಲನ್ನು ಹೆಚ್ಚಿನ ಬೆಲೆಗೆ ಮಾಡುತ್ತ ತನ್ನ ಲಾಭವನ್ನೇ ಹೆಚ್ಚಿಸುವುದು ಬಂಡವಾಳಶಾಹಿಯ ಉದ್ದೇಶವಾಗಿರುತ್ತದೆ. ಈ ಶೋಷಣೆಯಿಂದ ಬಂದ ಅಧಿಕ ಮೌಲ್ಯವನ್ನು ಇನ್ನೂ ಹೆಚ್ಚಿಸಿ ಅಧಿಕ ಮೌಲ್ಯ ಸಂಪಾದಿಸಲು ಉತ್ಪಾದನೆಯನ್ನು ವಿಸ್ತರಿಸುವಲ್ಲಿ ಉಪಯೋಗಿಸಲಾಗುತ್ತದೆ. ಬಂಡವಾಳಶಾಹಿಯು, ಈ ಪ್ರಕಾರವಾಗಿ ಅಧಿಕ ಮೌಲ್ಯವನ್ನು ಬೆಳೆಸಿ ಗಿಟ್ಟಿಸಲು ಸದಾ ಹಾತೊರೆಯುತ್ತಾನೆ.

ಕೂಲಿಕಾರರಿಗೆ ಕೇವಲ ಅತೀ ಕಡಿಮೆ ಕೂಲಿಯನ್ನು ಕೊಡಲಾಗುತ್ತದೆ. ಕೂಲಿಕಾರರು ಬದುಕಿ ತಮ್ಮ ಉದ್ದಿಮೆಗಳು ನಡೆಯುವುದನ್ನು ಸ್ವೀಕರಿಸಲು ಅವರಿಗೆ ಬದುಕಲು ಅವಶ್ಯವಾದಷ್ಟೇ ಕೂಲಿಯನ್ನು ಕೊಡಲಾಗುತ್ತದೆ. ತಾನು ಉತ್ಪಾದಿಸಿದ ಮೌಲ್ಯದಲ್ಲಿಯೇ ಅತೀ ಸ್ವಲ್ಪಭಾಗವನ್ನು ಕೂಲಿಕಾರರು ತನ್ನ ಕೂಲಿಯೆಂದು ಪಡೆಯುವನು. ತನ್ನ ಎಲ್ಲ ಶ್ರಮಕ್ಕೂ ಕೂಲಿಕಾರನಿಗೆ ಕೂಲಿ ದೊರೆಯುವುದಿಲ್ಲ. ಉದಾ: ಒಬ್ಬ ಕೂಲಿಕಾರನು ಒಂದು ದಿನಕ್ಕೆ ಹತ್ತು ತಾಸು ಕೂಲಿ ಮಾಡಿದ್ದಕ್ಕೆ ಅವನಿಗೆ ಕೇವಲ ಆರು ತಾಸುಗಳ ಕೂಲಿ ಮಾತ್ರ ದೊರೆತು ಅದು ಅವನ ಅಸ್ತಿತ್ವಕ್ಕೆ ಸಾಗುವಷ್ಟು ಆಗಿರುತ್ತದೆ. ಉಳಿದ ನಾಲ್ಕು ತಾಸುಗಳ ಶ್ರಮದ ಕೂಲಿಯನ್ನು ಬಂಡವಾಳಶಾಹಿಯು ನುಂಗುತ್ತದೆ. ಒಂದು ವಸ್ತುವಿನ ಬೆಲೆಯ ಶ್ರಮ ನಿರ್ಮಿತವಾಗಿದ್ದು, ಶ್ರಮಕ್ಕೆ ಸಮರ್ಪಕ ಕೂಲಿ ದೊರೆಯದೆ ಹೆಚ್ಚಿನ ಮೌಲ್ಯವು ಬಂಡವಾಳಶಾಹಿಗೆ ತಲುಪುತ್ತದೆ. ಉತ್ಪಾದನೆಯ ಸಾಧನೆಗಳೆಲ್ಲವು ಬಂಡವಾಳಶಾಹಿಯ ಕೈಯಲ್ಲಿ ಕೇಂದ್ರೀಕೃತವಾಗಿರುವುದರಿಂದ ಬದುಕಿಗಾಗಿ ಕೂಲಿಕಾರರು ತಮ್ಮ ಶ್ರಮವನ್ನು ಬಂದ ಬೆಲೆಗೆ ಮಾರಾಟ ಮಾಡಲೇಬೇಕಾಗುವಂಥಹ ದುರ್ಧರ ಪರಿಸ್ಥಿತಿಯು ಬರುತ್ತದೆ.

ಬಂಡವಾಳವನ್ನು ತೊಡಗಿಸಿ ಬಂಡವಾಳಶಾಹಿಗಳು ತಮ್ಮ ಉದ್ದಿಮೆಗಳನ್ನು ಸ್ಥಾಪಿಸದೇ ಲಭ್ಯವಾದ ನೈಸರ್ಗಿಕ ಸಂಪತ್ತು ಮತ್ತು ಕೂಲಿಯನ್ನು ಬಳಸಿ ತಮ್ಮ ಕಾರ್ಯಕ್ರಮ ಸಾಗಿಸುವರೆಂದು ಮಾರ್ಕ್ಸ್‌ನ ಅಭಿಪ್ರಾಯ. ಈ ನೈಸರ್ಗಿಕ ಮಾನಿನಿಂದ ಶ್ರಮದ ಆಧಾರದ ಮೇಲೆ ವಸ್ತು ನಿರ್ಮಿತವಾಗಿ ಅದಕ್ಕೆ ಮಾರುಕಟ್ಟೆಯಲ್ಲಿ ಬೆಲೆ ಬರುತ್ತದೆ. ನೈಸರ್ಗಿಕ ಅಥವಾ ಕಚ್ಚಾಮಾಲನ್ನು ಒಂದು ಮೌಲ್ಯ ತರುವ ವಸ್ತುವನ್ನಾಗಿ ಶ್ರಮವೇ ಮಾರ್ಪಡಿಸುತ್ತದೆ. ಈ ನಿರ್ಮಿತ ವಸ್ತುವಿನ ಅಧಿಕ ಮೌಲ್ಯವನ್ನೇ ಉಳಿಸಿ ತನ್ನ ಬಂಡವಾಳವನ್ನಾಗಿ ಉಪಯೋಗಿಸಲಾಗುತ್ತದೆ. ಕಡಿಮೆ ಕೂಲಿ ಕೊಟ್ಟು ಉಳಿದ ಹಣವೇ ಲಾಭವಾಗಿ ಅದರ ಕೆಲವೊಂದು ಭಾಗವನ್ನು ಉಳಿಸುತ್ತ ಅದನ್ನೇ ಬಂಡವಾಳವನ್ನಾಗಿ ಉದ್ದಿಮೆಗಳನ್ನು ಸ್ಥಾಪಿಸಲು ಉಪಯೋಗಿಸಲಾಗುತ್ತದೆ ಎಂದು ಮಾರ್ಕ್ಸ್ ವಿವರಣೆಯನ್ನು ಕೊಟ್ಟಿರುತ್ತಾನೆ. ಬಂಡವಾಳವು ಈ ಪ್ರಕಾರವಾಗಿ ಶ್ರಮ ನಿರ್ಮಿತವಾಗಿದ್ದು ಉದ್ದಿಮೆದಾರರ ಕೈವಶವಾಗಿ ಅದನ್ನು ಪುನಃ ಬಂಡವಾಳವನ್ನು ಹೆಚ್ಚಿಸಲು ವಿನಿಯೋಗಿಸಲಾಗುತ್ತದೆ.

ಅಧಿಕ ಮೌಲ್ಯವು ಶ್ರಮ ನಿರ್ಮಿತವಾಗಿದ್ದು, ಕೂಲಿಯನ್ನು ಬದುಕಿಸಲು ಅವಶ್ಯವಾದ ಮೌಲ್ಯಕ್ಕಿಂತ ಅದು ಹೆಚ್ಚಾಗಿರುತ್ತದೆ. ಈ ಅಧಿಕ ಮೌಲ್ಯದ ಶೋಷಣೆಯನ್ನು ಕಾರ್ಲ್‌ಮಾರ್ಕ್ಸ್‌ನು ಪಿಡುಗು ಎಂದು ಆಪಾದಿಸಿರುತ್ತಾನೆ. ಅಧಿಕ ಮೌಲ್ಯವು 'ಹೆಪ್ಪು ಗಟ್ಟಿದ

ಶ್ರಮ' ಅಥವಾ ಫಲ ದೊರೆಯದ ಶ್ರಮವೆಂದು ಮಾರ್ಕ್ಸ್ ಹೇಳಿರುತ್ತಾನೆ. ಶ್ರಮಕ್ಕೆ ದೊರೆಯುವ ಕೂಲಿಯನ್ನು 'ಕೂಲಿಯ ಉಕ್ಕಿನ ನಿಗಮ' ಮಾರ್ಕ್ಸ್ ಹೇಳಿರುವುದು ಅದರ ಉಗ್ರತೆಯನ್ನು ಪ್ರಕಟಿಸುತ್ತದೆ. ಮರುದಿನ ಕೂಲಿಗಾಗಿ ಶಕ್ತಿ ಇರುವಂತೆ ಸಾಧ್ಯ ಮಾಡಲು ಕೂಲಿಕೊಟ್ಟು ಉಳಿದ ಎಲ್ಲ ಮೌಲ್ಯವನ್ನೇ ಬಂಡವಾಳಶಾಹಿಯು ಶೋಷಿಸುತ್ತದೆ.

ಅಧಿಕ ಮೌಲ್ಯ ಶೋಷಣೆಯ ರುಚಿಯಿಂದ ಬಂಡವಾಳಶಾಹಿಯು ಹೆಚ್ಚಿನ ಉತ್ಪಾದನೆಯನ್ನು ಪ್ರಾರಂಭಿಸುತ್ತದೆ. ಬಂಡವಾಳ ಮತ್ತು ವಸ್ತುಗಳು ಹೆಚ್ಚಾಗುತ್ತ ಹೋಗುತ್ತವೆ. ಆದರೆ ಕಡಿಮೆ ಕೂಲಿ ಸಂಪಾದಿಸುವ ಕೂಲಿಕಾರರಲ್ಲಿ ಕೊಂಡುಕೊಳ್ಳುವ ಶಕ್ತಿಯು ಕಡಿಮೆಯಾಗುತ್ತ ಹೋಗುವುದರಿಂದ ಉತ್ಪಾದಿಸಿದ ವಸ್ತುಗಳಿಗೆ ಬೇಡಿಕೆ ಕಡಿಮೆಯಾಗುತ್ತದೆ. ಆದ್ದರಿಂದ ಈ ವಸ್ತುಗಳಿಗಾಗಿ ಪರದೇಶದ ಮಾರುಕಟ್ಟೆಗಳನ್ನು ಬಂಡವಾಳಶಾಹಿಯು ಶೋಧಿಸತೊಡಗುತ್ತದೆ. ಇದರಿಂದ ಸಾಮ್ರಾಜ್ಯಶಾಹಿ ಮತ್ತು ಯುದ್ಧ ಎಂದು ಬಂಡವಾಳಶಾಹಿಯ ದುರಂತ ದುರಾಗ್ರಹವನ್ನು ಮಾರ್ಕ್ಸ್‌ನು ಮಾರ್ಮಿಕವಾಗಿ ಚಿತ್ರಿಸಿರುತ್ತಾನೆ.

ಬಂಡವಾಳ ಶಾಹಿಯು ಬೆಳೆದಂತೆ ಕೂಲಿಕಾರರ ಪರಿಸ್ಥಿತಿಯು ಹದಗೆಡುತ್ತ ಹೋಗುತ್ತದೆ. ಅಧಿಕ ಮೌಲ್ಯವನ್ನು ಹೆಚ್ಚು ಸಮಯ ದುಡಿಸಿ ಕಡಿಮೆ ಸಮಯದ ಕೂಲಿ ಕೊಟ್ಟು ಸಂಪಾದಿಸಲಾಗುತ್ತದೆ. ಕೆಲವು ಸಲ ಕೆಲಸದ ವಧಿಯನ್ನು ಕಡಿಮೆ ಮಾಡಿ ಸಂಬಂಧಿತ ಅಧಿಕ ಮೌಲ್ಯವನ್ನು ಸಂಪಾದಿಸಲಾಗುತ್ತದೆ. ಯಾಂತ್ರೀಕರಣದಿಂದ ಕೂಲಿಕಾರ ಅಧಿಕಾರ ಅವಧಿಯು ಕಡಿಮೆಯಾಗಿ ಈ ಪ್ರಸಂಗ ಉದ್ಭವಿಸುತ್ತದೆ. ಈ ಪರಿಸ್ಥಿತಿಯಲ್ಲಿ ಬಂಡವಾಳಶಾಹಿಯು ಬೆಲೆಯುತ್ತ ಕಾರ್ಮಿಕರ ಜೊತೆಗೆ ಅದರ ಸಂಬಂಧವು ಸುಗಮವಾಗಿ ಸಾಗುವುದಿಲ್ಲ. ಕ್ರಾಂತಿಗೆ ದಾರಿ ಮಾಡುತ್ತದೆ. ಬಂಡವಾಳ ಶಾಹಿಯ ಅಂತ್ಯ ಸಮೀಪಿಸುತ್ತದೆ.

ಈ ಶೋಷಣೆಯನ್ನು ತಡೆಗಟ್ಟಲು ಮಾರ್ಕ್ಸ್‌ನು ಉತ್ಪಾದನೆ, ವಿತರಣೆ ಹಾಗೂ ವಿನಿಮಯ ಸಾಧನೆಗಳನ್ನು ರಾಷ್ಟ್ರೀಕರಿಸಬೇಕೆಂದು ಸೂಚಿಸಿರುತ್ತಾನೆ. ಭೂಮಿ, ಗಿರಣಿ, ಕಾರ್ಖಾನೆ, ಸಂಪರ್ಕ ಸಾಧನೆ ಮುಂತಾದವುಗಳೆಲ್ಲವೂ ರಾಷ್ಟ್ರದ ನಿಯಂತ್ರಣದಲ್ಲಿರಬೇಕು. ರಾಷ್ಟ್ರೀಕರಣವೇ ಈ ಶೋಷಣೆಗೆ ಸಮರ್ಪಕ ಉಪಾಯವೆಂದು ಮಾರ್ಕ್ಸ್‌ನ ವಿಚಾರ. ಇದೊಂದು ಉಗ್ರವಾದ. ಶಾಂತಿಯುತದಲ್ಲಿ ಕಾನೂನುಗಳ ಮುಖಾಂತರ ಈ ಶೋಷಣೆಯನ್ನು ತಡೆಗಟ್ಟುವುದು ಸಾಧ್ಯವೆಂದು ಔದ್ಯಮಿಕ ರಾಷ್ಟ್ರಗಳು ಇಂದಿನ ಕ್ರಮಗಳಿಂದ ಕಂಡು ಬಂದಿದೆ.

### 21.4.4 ವರ್ಗ ಸಂಘರ್ಷ

ಮಾರ್ಕ್ಸ್‌ವಾದ ದ್ವಂದ್ವಾತ್ಮಕ ಭೌತಿಕತ್ವ ಆಧಾರಿತವಾಗಿದ್ದು ಆರ್ಥಿಕ ಹಿನ್ನೆಲೆಯ ರಚಿತವಾಗಿರುತ್ತದೆ. ಈ ವಾದದಲ್ಲಿ ವರ್ಗ ಕಲಹ ವಿಚಾರಕ್ಕೆ ಹೆಚ್ಚಿನ ಗಮನ ಕೊಡಲಾಗುತ್ತದೆ. ಒಂದು ವರ್ಗವು ಇನ್ನೊಂದು ವರ್ಗವನ್ನು ವಿರೋಧಿಸುತ್ತಿರುವುದು ಕಂಡು ಬರುತ್ತದೆ. ವರ್ಗ ಪ್ರಜ್ಞೆಗೆ ವಿಶೇಷ ಪ್ರಾಧಾನ್ಯ ಮಾರ್ಕ್ಸ್‌ವಾದದಲ್ಲಿ ವ್ಯಕ್ತಿಯನ್ನು ಒಂದು ಉತ್ಪಾದಕ ಸಾಧನೆ ಎಂದು ಪರಿಗಣಿಸಲಾಗಿರುತ್ತದೆ. ಉತ್ಪಾದನೆಯು ಸಾಮೂಹಿಕ ಕೃತಿಯಾಗಿರುವುದರಿಂದ ಆರ್ಥಿಕ ವರ್ಗ ವಿಚಾರವು ಉತ್ಪನ್ನವಾಗುತ್ತದೆ. ಈ ಆರ್ಥಿಕ ವರ್ಗಕ್ಕೆ ವ್ಯಕ್ತಿಯು ಸಂಬಂಧಿಸಿದ್ದು ಅವನ ವಿಚಾರ ಮತ್ತು ನಡಾವಳಿಯು ಅದರ ಪ್ರಭಾವಕ್ಕೆ ಒಳಗಾಗುತ್ತಿರುತ್ತದೆ. ಮಾರ್ಕ್ಸ್ ವಾದದಲ್ಲಿ ವ್ಯಕ್ತಿಗೆ ಪ್ರಾಧಾನ್ಯತೆಯಿರದೆ ಒಂದು ವರ್ಗಕ್ಕೆ ಪ್ರಾಧಾನ್ಯತೆ ಇರುವುದು ಕಂಡು ಬರುತ್ತದೆ. ವರ್ಗವೇ ಮೂಲ ಘಟಕ. ಸಾಮಾಜಿಕ ಉತ್ಕ್ರಾಂತಿಗೆ ಈ ವರ್ಗವೇ ಮೂಲ ಕಾರಣಿಭೂತ. ಸಾಮಾಜಿಕ ಉತ್ಕ್ರಾಂತಿಯು ಈ ವರ್ಗಗಳ ನಡುವಿನ ಘರ್ಷಣೆಯನ್ನು ಅವಲಂಬಿಸಿರುತ್ತದೆ. ಮಾರ್ಕ್ಸ್‌ನ ಇತಿಹಾಸದ ಭೌತಿಕ ಅರ್ಥ ವಿವರಣೆಯು ದ್ವಂದ್ವಾತ್ಮ ತತ್ವವನ್ನು ಅವಲಂಬಿಸಿರುವುದು. ಈ ದ್ವಂದ್ವಾತ್ಮಕ ತತ್ವವು ವಿರೋಧಗಳ ಘರ್ಷಣೆಯನ್ನು ಗ್ರಹಿಸುತ್ತದೆ. ಒಂದು ಸಮಾಜ ರಾಷ್ಟ್ರದಲ್ಲಿ ಈ ವಿರೋಧಗಳ ಘರ್ಷಣೆಯಿಂದಲೇ ಬದಲಾವಣೆಗಳು ಮೂಡಿಬರುತ್ತವೆ. ಒಂದು ವರ್ಗ ಮತ್ತು ಇನ್ನೊಂದು ವರ್ಗ ಇವುಗಳ ನಡುವಿನ ಘರ್ಷಣೆಯು ಸಾಮಾಜಿಕ

ಉತ್ಕ್ರಾಂತಿಯ ಮೂಲ. ಇತಿಹಾಸದ ಆರ್ಥಿಕ ವಿವರಣೆಯು ಸಾಮಾಜಿಕ ಉತ್ಕ್ರಾಂತಿಯ ಸಿದ್ಧಾಂತವನ್ನು ಪ್ರತಿನಿಧಿಸಿದರೆ ವರ್ಗ ಕಲಹವು ಅದರ ಆಚರಣೆಯ ದ್ಯೋತಕವಾಗಿರುತ್ತದೆ. ಮಾರ್ಕ್ಸ್‌ನ ವಿಚಾರದಲ್ಲಿ ಸಾಮಾಜಿಕ ಚಲನವಲನಗಳೆಲ್ಲವೂ ವರ್ಗ ಚಲನವಲನಗಳಾಗಿರುತ್ತವೆ.

ಸಾಮಾಜಿಕ ವರ್ಗಗಳ ಉಗಮ, ಸ್ವರೂಪ ಮತ್ತು ವರ್ಗ ಕಲಹ ಈ ಸಂಕಲ್ಪಗಳು ಮಾರ್ಕ್ಸ್‌ನ ಉನ್ನತ ಕೊಡುಗೆಗಳಾಗಿದ್ದು ಅವುಗಳಿಗೆ ನಿರ್ಧಿಷ್ಟ ಸ್ವರೂಪ ಮತ್ತು ಮಹತ್ವವನ್ನು ಒದಗಿಸಿಕೊಟ್ಟಿರುತ್ತಾನೆ. "ಇಲ್ಲಿಯವರೆಗೆ ಅಸ್ತಿತ್ವದಲ್ಲಿದ್ದ ಸಮಾಜದ ಇತಿಹಾಸವು ವರ್ಗ ಕಲಹಗಳ ಇತಿಹಾಸವೇ ಆಗಿರುತ್ತದೆ ಎಂದು ಹೇಳಿದಾಗ ಈ ವರ್ಗಗಳ ಮಹತ್ವವನ್ನು ಗುರುತಿಸಿದ್ದು ಕಂಡು ಬರುತ್ತದೆ. ಪ್ರತಿಯೊಂದು ಸಮಾಜ ಕಾಲದಲ್ಲಿ ವರ್ಗಗಳು ಇದ್ದದ್ದು ಇತಿಹಾಸ ಸ್ಪಷ್ಟವಿದೆ. ಆರ್ಥಿಕವಾಗಿ ಸುಭದ್ರ ಹಾಗೂ ಸುರಕ್ಷಿಕತವಾದ ವರ್ಗವು ಪ್ರಬಲವಾಗಿದ್ದು ಉಳಿದ ನಿರ್ಬಲ ವರ್ಗಗಳನ್ನು ಶೋಷಿಸಿದ್ದು ಇತಿಹಾಸದಲ್ಲಿ ಉಲ್ಲೇಖವಿದೆ. ಮಾನವ ಜನಾಂಗದ ಇತಿಹಾಸವನ್ನು ಆಳವಾಗಿ ವಿಸ್ತೃತವಾಗಿ ಅಭ್ಯಸಿಸಿ ಮಾರ್ಕ್ಸ್‌ನು ವರ್ಗ ಕಲಹಗಳ ನಡುವಿನ ಹೋರಾಟವನ್ನು ಓದುಗರ ಗಮನಕ್ಕೆ ತಂದಿರುತ್ತಾನೆ. ಗತಕಾಲದಿಂದ ಇಲ್ಲಿಯವರೆಗಿನ ಇತಿಹಾಸದ ಪುಟಗಳನ್ನು ತಿರುವಿದಾಗ ಸಮಾಜದಲ್ಲಿ ವರ್ಗಗಳಿದ್ದದ್ದು ಕಂಡು ಬಂದು ವರ್ಗ ಕಲಹವು ಅವ್ಯಾಹತವಾಗಿ ನಡೆದಿರುವುದರ ಅರಿವು ನಮಗಾಗುವುದೆಂದು ತಿಳಿಸಿ ಹೇಳಿರುತ್ತಾನೆ. ಪ್ರಾಚೀನ ಕಾಲದಲ್ಲಿ ಸ್ವತಂತ್ರರು ಗುಲಾಮರು, ಕುಲೀನರು-ಅಧಮರು ಮಧ್ಯಯುಗದಲ್ಲಿ ಜಮೀನದಾರರು - ಹಿಡುವಳಿದಾರರು (ಆಳುಗಳು), ಇಂದಿನ ಔದ್ಯಮಿಕ ಯುಗದಲ್ಲಿ ಬಂಡವಾಳಗಾರರು ಮತ್ತು ಕಾರ್ಮಿಕರು ಎಂಬ ಎರಡು ಪ್ರಬಲ ವರ್ಗಗಳಿರುವುದು ಸ್ಪಷ್ಟವಿದ್ದು ಅವೆರಡರ ನಡುವೆ ಹೋರಾಟವು ನಡದೇ ಇರುವುದು ಕಂಡು ಬರುತ್ತದೆ. ಪ್ರಬಲ ವರ್ಗವನ್ನು ಸ್ವತಂತ್ರವು, ಜಮೀನುದಾರರು ಮತ್ತು ಬಂಡವಾಳಶಾಹಿಗಳು ದುರ್ಬಲ ವರ್ಗವನ್ನು (ಗುಲಾಮರು, ಆಳುಗಳು, ಕಾರ್ಮಿಕರು) ಶೋಷಿಸಿದ್ದು ಇತಿಹಾಸದಲ್ಲಿ ಉಲ್ಲೇಖಿಸಲಾಗಿದೆ. ಆರ್ಥಿಕವಾಗಿ ಪ್ರಬಲವಾಗಿದ್ದ ಕುಲೀನ ವರ್ಗವು ಅಧಿಕಾರವನ್ನು ತನ್ನ ಕೈಯಲ್ಲಿಟ್ಟುಕೊಂಡು ಈ ಸಾಮಾಜಿಕ ಅಂತರವನ್ನು ಉಳಿಸಿಕೊಂಡು ಹೋಗಲು ಪ್ರಯತ್ನಿಸಿದೆ. ಬಂಡವಾಳಶಾಹಿಗಳು ತಮ್ಮ ಆರ್ಥಿಕ ಬಲದಿಂದ ರಾಜಕೀಯ ಯಂತ್ರವನ್ನೇ ತಮ್ಮ ಅಧೀನದಲ್ಲಿಟ್ಟುಕೊಂಡು ಸ್ವಾರ್ಥ ಸಾಧನೆಗೆ ಅದನ್ನು ಬಳಸುತ್ತಿರುವುದು ಔದ್ಯಮಿಕ ಸಮಾಜದ ಒಂದು ಪ್ರಮುಖ ಲಕ್ಷಣವೆಂದು ಮಾರ್ಕ್ಸ್ ಹೇಳಿರುತ್ತಾನೆ. ಭೂಮಾಲೀಕತ್ವ ಪಡೆದ ಕುಲೀನ ವರ್ಗ, ತರುವಾಯ ಮಧ್ಯಮ ವರ್ಗ ಅನೇಕ ಶತಮಾನಗಳವರೆಗೆ ಅಧಿಕಾರದಲ್ಲಿದ್ದದ್ದು ಕಂಡು ಬರುತ್ತದೆ. ಈ ಸಾಮಾಜಿಕ ಉತ್ಕ್ರಾಂತಿಯಲ್ಲಿ ಒಂದು ವರ್ಗದ ತರುವಾಯ ಇನ್ನೊಂದು ವರ್ಗವು ಜನನವಾಗುತ್ತ ನಡೆದು ಅಂತಿಮವಾಗಿ ಭೂರಹಿತ ಕಾರ್ಮಿಕರ ವರ್ಗವು ಪ್ರಬಲವಾಗುವುದೆಂದು ಮಾರ್ಕ್ಸ್‌ನ ಭವಿಷ್ಯವಾಣಿ. ಜಮೀನ್ದಾರಿಯಿಂದ ಬಂಡವಾಳಶಾಹಿ ಮಧ್ಯಮ ವರ್ಗ ಇದರಿಂದ ಭೂರಹಿತ ಕಾರ್ಮಿಕ ವರ್ಗ ಹೀಗೆ ವರ್ಗದಲ್ಲಿ ಉತ್ಕ್ರಾಂತಿಯಾಗುತ್ತಾ ಬರುತ್ತದೆ. ಬಂಡವಾಳಶಾಹಿಯು ಕಾರ್ಮಿಕ ವರ್ಗವನ್ನು ನಿರ್ಮಿಸುವುದಲ್ಲದೇ ಅದರ ಸಂಘಟನೆ ಹಾಗೂ ಶಿಸ್ತಿಗೆ ಅದೇ ಕಾರಣವಾಗುತ್ತದೆ. ಅಂತಿಮವಾಗಿ ಬಂಡವಾಳಶಾಹಿಯನ್ನು ಕಾರ್ಮಿಕ ವರ್ಗವು ನಾಶಮಾಡುತ್ತದೆ. ನುಂಗುವವರೇ ನುಂಗಲ್ಪಡುತ್ತಾರೆ. ಭೂರಹಿತ ಕಾರ್ಮಿಕರೆ ಕ್ರಾಂತಿಕಾರಕ ವರ್ಗವೆಂದು ಮಾರ್ಕ್ಸ್ ಹೇಳುತ್ತಾನೆ. ಆಧುನಿಕ ಔದ್ಯಮಿಕ ಯುಗದಲ್ಲಿ ಇನ್ನುಳಿದ ವರ್ಗಗಳೆಲ್ಲವು ಮಾಯವಾಗುತ್ತ ಕಾರ್ಮಿಕ ವರ್ಗವೇ ಅದರ ವಿಶೇಷ ಹಾಗೂ ಪ್ರಮುಖ ವರ್ಗವಾಗಿ ಪರಿಣಮಿಸುತ್ತದೆ. ವರ್ಗ ಕಲಹವೇ ಸಾಮಾಜಿಕ ಬದಲಾವಣೆ ಹಾಗೂ ಬೆಳವಣಿಗೆ ಕಾರಣವೆಂದು ಹೇಳುತ್ತಾ ಈ ಬದಲಾವಣೆಯು ಭೂರಹಿತ ಕಾರ್ಮಿಕ ನಿರಂಕುಶ ಪ್ರಭುತ್ವವನ್ನು ಸ್ಥಾಪಿಸುವಲ್ಲಿ ಕೊನೆಗೊಳ್ಳುವುದೆಂದು ಮಾರ್ಕ್ಸ್‌ನ ವಿಚಾರ. ಭೂರಹಿತ ಕಾರ್ಮಿಕರ ನಿರಂಕುಶ ಪ್ರಭುತ್ವವೇ ಸಾಮಾಜಿಕ ಬೆಳವಣಿಗೆಗೆ ಮತ್ತು ಸುವ್ಯವಸ್ಥೆಯ ಮೂಲ ತತ್ವವಾಗಿರುವುದೆಂದು ಮಾರ್ಕ್ಸ್ ಹೇಳಿರುತ್ತಾನೆ. ಭೂರಹಿತ ಕಾರ್ಮಿಕ ಪ್ರಭುತ್ವ ಸಾಧಿಸಿದ ಮೇಲೆ ಬದಲಾವಣೆಯ ವರ್ಗ ಕಲಹವು ಮಾಯವಾಗಿ ವರ್ಗ- ರಹತಿ ಸ್ಥಿರ ಸಮಾಜ ಸ್ಥಾಪಿತವಾಗುತ್ತದೆ.

ಔದ್ಯಮಿಕ ಯುಗದ ವರ್ಗಗಳ ಹಿನ್ನೆಲೆಯಲ್ಲಿ ವರ್ಗ ಕಲಹ ವಿಚಾರವನ್ನು ಸ್ಪಷ್ಟಪಡಿಸುತ್ತ ಮಾರ್ಕ್ಸ್‌ನು ಬಂಡವಾಳಶಾಹಿಯ

ಒಂದು ವಾದ, ಸಂಘಟಿತ ಕಾರ್ಮಿಕರು ಒಂದು ಪ್ರತಿವಾದವಾಗಿದ್ದು ವರ್ಗರಹಿತ ಸಮಾಜವು ಒಂದು ಸಂಯೋಗವಾದವಾಗಿರುವುದು ಎಂದು ಹೇಳುತ್ತಾನೆ. ದ್ವಂದ್ವಾತ್ಮಕ ಸಿದ್ಧಾಂತದ ಮೇಲೆ ಈ ಎರಡು ವರ್ಗಗಳ ನಡುವಿನ ಘೋರ ಘರ್ಷಣೆಯಿಂದ ವರ್ಗರಹಿತ ಸಮಾಜವು ಸ್ಥಾಪನೆಯಾಗುತ್ತದೆ. ಆಧುನಿಕ ಯುಗದಲ್ಲಿ ಭೂರಹಿತ ಕಾರ್ಮಿಕ ವರ್ಗ ಅತೀ ಪ್ರಬಲವಾಗುತ್ತ ಹೋಗುವುದು. ಮಧ್ಯಮ ವರ್ಗವು ಕಾರ್ಮಿಕ ವರ್ಗ ಪ್ರವೇಶಿಸುವುದಲ್ಲದೇ ಸಂಬಳದ ಮೇಲೆ ಜೀವಿಸುವ ಜನರೆಲ್ಲರೂ ಕಾರ್ಮಿಕ ವರ್ಗವನ್ನೇ ಬೆಂಬಲಿಸುತ್ತಾರೆ. ಕೇವಲ ಆರ್ಥಿಕವಾಗಿ ಪ್ರಬಲವಾದ ಶ್ರೀಮಂತವರ್ಗ ಮಾತ್ರ ಬಂಡವಾಳಶಾಹಿಗೆ ಬೆಂಬಲ ನೀಡುತ್ತದೆ. ಭೂರಹಿತ ಕಾರ್ಮಿಕ ವರ್ಗವು ಗಾತ್ರದಲ್ಲಿ ಉಬ್ಬುತ್ತ ಉಬ್ಬುತ್ತ ಹೋಗುತ್ತದೆ. ಭೂರಹಿತ ಕಾರ್ಮಿಕ ಈ ಪದಕ್ಕೆ ವಿಶೇಷ ಅರ್ಥಕೊಡುತ್ತ ಬಂಡವಾಳದ ಮೇಲಿನ ಯಾವ ಲಾಭಾಂಶವನ್ನು ಪಡೆಯದೇ ಕೇವಲ ತನ್ನ ಶ್ರಮವನ್ನು ಮಾರಿಜೀವಿಸುವ ಸಮಾಜದ ಒಂದು ವರ್ಗವೆಂದು ಹೇಳಿರುತ್ತಾನೆ. ಭೂರಹಿತ ಕಾರ್ಮಿಕರೆಂದರೆ ಶ್ರಮಮಾರಿ ಕೂಲಿಗಳಿಸುವವರು. ತೀಕ್ಷ್ಣ ಔದ್ಯಮೀಕರಣದಿಂದ ಈ ಕೂಲಿ ಗಳಿಸುವವರ ಸಂಖ್ಯೆಯು ಬೆಳೆಯುತ್ತ ಹೋಗುತ್ತದೆ. ಕಾರ್ಮಿಕರಲ್ಲಿ ವರ್ಗ ಪ್ರಜ್ಞೆ ಮೂಡಿ ಅವರು ತಮ್ಮ ಸುಧಾರಣೆಗಾಗಿ ಹೋರಾಟ ಪ್ರಾರಂಭಿಸುತ್ತಾರೆ. ಕಡಿಮೆ ಕೂಲಿ ಕೊಟ್ಟು, ಹೆಚ್ಚು ಸಮಯ ದುಡಿಸಿ, ಅಧಿಕ ಮೌಲ್ಯವನ್ನು ಎತ್ತಿಹಾಕುವುದು ಬಂಡವಾಳಶಾಹಿಯ ವಿಶಿಷ್ಟ ಗತ್ತು. ಯಾಂತ್ರೀಕರಣದಿಂದ ನಿರುದ್ಯೋಗ, ಕಾರ್ಮಿಕರಿಗೆ ದುಡಿಮೆ ಕಡಿಮೆ, ಮಾರುಕಟ್ಟೆಯಲ್ಲಿ ಆರ್ಥಿಕ ಕುಸಿತ, ಜನರಲ್ಲಿ ಹಣ ಇಲ್ಲದಾಗ ಸರಕುಗಳಿಗೆ ಬೇಡಿಕೆ ಇಲ್ಲ. ಉತ್ಪಾದನೆಗೆ ಪ್ರೋತ್ಸಾಹ ಇಲ್ಲ. ಇದರಿಂದ ಕಾರ್ಮಿಕರಿಗೆ ಬಲವಾದ ಪೆಟ್ಟು. ಅವರ ಅಸ್ತಿತ್ವಕ್ಕೆ ಧಕ್ಕೆ. ಈ ಸಂದರ್ಭದಲ್ಲಿ ಅವರೆಲ್ಲರೂ ಒಗ್ಗಟ್ಟಾಗಿ ಹೋರಾಟ ಪ್ರಾರಂಭಿಸಿರುತ್ತಾರೆ. ಆರ್ಥಿಕ ಬಲದಿಂದ ಸರ್ಕಾರವನ್ನೇ ತಮ್ಮ ಅಂಕಿತದಲ್ಲಿಟ್ಟುಕೊಂಡು ಬಂಡವಾಳಶಾಹಿ ಪಕ್ಷ ಹಿಡಿದು ಕಾರ್ಮಿಕರನ್ನು ಸದೆಬಡಿಯಲು ಹವಣಿಸುವುದು ಪ್ರಾರಂಭವಾಗುತ್ತದೆ. ಮಧ್ಯಮ ವರ್ಗ ಹಾಗೂ ಇನ್ನುಳಿದ ಭೂರಹಿತ ಸಂಬಳದ ಮೇಲೆ ಜೀವಿಸುವ ವರ್ಗಗಳು ಕಾರ್ಮಿಕರಿಗೆ ಬೆಂಬಲ ಕೊಡುತ್ತಾರೆ. ವರ್ಗ ಕಲಹವು ತೀಕ್ಷ್ಣವಾಗಿ ಕ್ರಾಂತಿ ರೂಪತಾಳಿ ಬಂಡವಾಳಶಾಹಿಯನ್ನು ನಾಶಗೊಳಿಸಲಾಗುತ್ತದೆ. ಭೂರಹಿತ ಕಾರ್ಮಿಕರ ನಿರಂಕುಶ ಪ್ರಯತ್ನವನ್ನು ಸ್ಥಾಪಿಸಲಾಗುತ್ತದೆ. ಈ ಪ್ರಕಾರವಾಗಿ ಬಂಡವಾಳಶಾಹಿಯು ಉತ್ಪಾದನೆಯು ಒಂದು ತಡೆಹಿಡಿಯಲಾಗದ ನಿಸರ್ಗ ನಿಯಮದಿಂದ ತನ್ನ ಅವಸಾನವನ್ನೇ ನಿರ್ಮಿಸುತ್ತದೆ ಎಂದು ಮಾರ್ಕ್ಸ್ ಹೇಳಿರುತ್ತಾನೆ.

ವರ್ಗ ಹಿತಾಸಕ್ತಿ ಹಾಗೂ ವರ್ಗ ಕಲಹ ಇವುಗಳ ಹಿನ್ನೆಲೆಯಲ್ಲಿ ಇತಿಹಾಸದ ಅರ್ಥ ವಿವರಣೆಯನ್ನು ನೀಡುವುದರಲ್ಲಿ ಮಾರ್ಕ್ಸ್‌ನೇ ಪ್ರಥಮ ವಿವೇಚಕನಾಗಿರುತ್ತಾನೆ. ನಿರ್ಬಲ ವರ್ಗಗಳು ತಮ್ಮ ಹಿತರಕ್ಷಣೆಗಾಗಿ ಸಂಘಟಿಸಿ ಸರ್ಕಾರದ ವಿರುದ್ಧ ಹೋರಾಡಲು ಕರೆ ಕೊಟ್ಟಿದ್ದಾನೆ. ಕೂಲಿಕಾರರಲ್ಲಿ ವರ್ಗ ಪ್ರಜ್ಞ ಅವಶ್ಯವೆಂದು ಹೇಳುತ್ತ ಅವರು ಸಂಘಟಿಕರಾಗುವುದು ಅನಿವಾರ್ಯವಾಗುವುದೆಂದು ಅಭಿಪ್ರಾಯಪಟ್ಟಿರುತ್ತಾನೆ. ಸ್ವಾಭಾವಿಕವಾಗಿಯೇ ಅದರಲ್ಲಿ ಸಂಘಟನಾ ಶಕ್ತಿ ಪ್ರಾಪ್ತವಾಗಿ ಬಂಡವಳಶಾಹಿಯನ್ನು ವಿರೋಧಿಸಲು ಸನ್ನದ್ಧವಾಗುತ್ತದೆ. ರಾಜಕೀಯ ಕ್ಷೇತ್ರದಲ್ಲಿಯೂ ಕಾರ್ಮಿಕರು ತಮ್ಮ ಗಮನ ಹರಿಸಬೇಕೆಂದು ಮಾರ್ಕ್ಸ್ ಹೇಳಿ ವರ್ಗ ಕಲಹದಿಂದ ಸಾಮಾಜಿಕ ಬದಲಾವಣೆಯು ಶಾಂತಿಯುತವಾಗಿ ಇಲ್ಲವೇ ಕ್ರಾಂತಿಯಿಂದಾಗಲಿ ಒಡಮೂಡುವುದೆಂದು ಹೇಳಿರುತ್ತಾನೆ. ಅನೇಕ ಸಲ ಕ್ರಾಂತಿಯು ಅನಿವಾರ್ಯವಾಗುತ್ತದೆ. ವರ್ಗ ಕಲಹದ ಅಂತಿಮ ಗುರಿ ವರ್ಗ ರಹಿತ ಸಮಾಜ ಸ್ಥಾಪನೆ ಕ್ರಾಂತಿಯಿಂದ ಭೂರಹಿತ ಕಾರ್ಮಿಕರ ನಿರಂಕುಶ ಪ್ರಭುತ್ವ ಸ್ಥಾಪನೆಯಾಗಿ ಸಮಾಜದಲ್ಲಿಯ ಎಲ್ಲ ವರ್ಗಗಳನ್ನು ನಾಶಪಡಿಸಲಾಗುತ್ತದೆ. ಉತ್ಪಾದಕ ಘಟಕಗಳೆಲ್ಲವೂ ಸರ್ಕಾರದ ವಶವಾಗುತ್ತದೆ. ಎಲ್ಲ ಆರ್ಥಿಕ ವ್ಯವಸ್ಥೆಯು ಸರ್ಕಾರ ಚಾಲಿತ ವ್ಯಕ್ತಿಗಳಿಗೆ ಅವರವರಿಗೆ ತಕ್ಕಂತ ದುಡಿಮೆ ಹಾಗೂ ಜೀವನಾವಶ್ಯಕಗಳು. ಈ ಪ್ರಕಾರ ಒಂದು ವರ್ಗರಹಿತ ಸಮಾಜ ಸ್ಥಾಪನೆಯಾಗುತ್ತದೆ. ವರ್ಗರಹಿತ ಸಮಾಜವೇ ಆದರ್ಶ ಸಮಾಜ. ಇದರಿಂದಾಗಿ ಸಾವಕಾಶವಾಗಿ ರಾಷ್ಟ್ರವು ಹಾದಿ ಹೋಗುವುದು. ರಾಷ್ಟ್ರವು ಸಮಾಜದಲ್ಲಿ ಒಂದು ಪ್ರಕಾರದ ವರ್ಗ ಸ್ಥಾಪನೆಯ ಸಾಧನೆಯಾಗಿರುವುದು ಸಮಾಜದಲ್ಲಿ ವರ್ಗಗಳೇ ಮಾಯವಾಗಿ ಒಂದು ಅಖಂಡ ವರ್ಗರಹಿತ ಸಮಾಜ ಸ್ಥಾಪನೆಯಾದ ಮೇಲೆ

ರಾಷ್ಟ್ರದ ಅವಶ್ಯಕತೆ ಏನು?

### 21.4.5 ಬಂಡವಾಳಶಾಹಿ ಪದ್ಧತಿಯು ತನ್ನ ವಿನಾಶದತ್ತ ಸಾಗಿದೆ

ಕಾರ್ಲ್ ಮಾರ್ಕ್ಸ್ ಅವರು ಬಂಡವಾಳಶಾಹಿ ಪದ್ಧತಿಯ ಆಂತರಿಕ ವಿರೋಧಾಭಾವಗಳನ್ನು ಎತ್ತಿ ತೋರಿಸಿದ್ದಾರೆ. ಬೂರ್ಶ್ವಾ ವರ್ಗ ವಿಕಸಿತವಾದಂತೆ ಕಾರ್ಮಿಕರ ಬಲವೂ ಅಧಿಕವಾಗುತ್ತದೆ. ಬಂಡವಾಳಶಾಹಿ ಪದ್ಧತಿ ವಿಶಾಲಗೊಂಡಂತೆ, ಕಾರ್ಮಿಕ ವರ್ಗವು, ಸಂಖ್ಯೆ, ಬಲ, ಸಂಘಟನಾ ಸಾಮರ್ಥ್ಯ, ಆತ್ಮ-ಪ್ರಜ್ಞಾವಂತಿಕೆ ಮತ್ತು ರಾಜಕೀಯ ಪ್ರಭಾವವನ್ನು ಹೆಚ್ಚಿಸಿಕೊಳ್ಳುತ್ತದೆ.

ಬಂಡವಾಳಶಾಹಿ ಪದ್ಧತಿಯು ಅಭಿವೃದ್ಧಿ ಹೊಂದಿ, ಬಂಡವಾಳವು ಕೆಲವೇ ಕೆಲವು ಕೈಗಳಲ್ಲಿ ಕೇಂದ್ರೀಕೃತವಾದಾಗ, ಪ್ರಾಲಿತಾರಿಯತ್‌ನ ಬೆಂಬಲಿಗರ ಗುಂಪು ಅಧಿಕವಾಗುತ್ತದೆ. ಕುಶಲಕರ್ಮಿಗಳು, ಅಂಗಡಿ ಮುಂಗಟ್ಟುಗಳ ಮಾಲೀಕರು, ಸಣ್ಣಪುಟ್ಟ ಬಂಡವಾಳಗಾರರು ಮಾರುಕಟ್ಟೆಯಿಂದ ಹೊರದೂಡಲ್ಪಟ್ಟು, ಪ್ರಾಲಿತಾರಿಯತ್‌ನ ಶ್ರೇಣಿಗಳನ್ನು ಸೇರುತ್ತಾರೆ. ಅಂದರೆ ಮಧ್ಯಮವರ್ಗದ ಕೆಳದರ್ಜೆಯ ಜನರು, ಶ್ರಮಿಕ ಜೀತದಾಳುಗಳ ವರ್ಗಕ್ಕೆ ಸೇರುತ್ತಾರೆ.

ಬಂಡವಾಳಶಾಹಿ ಪದ್ಧತಿ ಬೆಳೆದಂತೆಲ್ಲಾ ಸಾವಿರಾರು ಮಂದಿ ಕಾರ್ಮಿಕರು ಒಂದೆಡೆ ಕಲೆಯುತ್ತಾರೆ. ಪರಸ್ಪರ ನಿಕಟವರ್ತಿಗಳಾಗುತ್ತಾರೆ. ತಮ್ಮ ದಾರುಣ ಪರಿಸ್ಥಿತಿಯ ಬಗ್ಗೆ ಪ್ರಜ್ಞೆಯನ್ನೂ ಬೆಳೆಸಿಕೊಳ್ಳುತ್ತಾರೆ. ಶೋಷಕರ ವಿರುದ್ಧ ಸಂಘ,ವನ್ನು ಸಂಘಟಿಸುತ್ತಾರೆ. ಇದು ವರ್ಗ ಸಮರದ ಸ್ವರೂಪ ಪಡೆಯುತ್ತದೆ. ಸಂಘಟಿತ ಕಾರ್ಮಿಕರು, ಸಾರ್ವತ್ರಿಕ ಮುಷ್ಕರದ ಮೂಲಕ ವ್ಯವಸ್ಥೆಯನ್ನು ಸ್ಥಗಿತಗೊಳಿಸುವ ತಮ್ಮ ಸಾಮರ್ಥ್ಯದ ಬಗ್ಗೆ ಅರಿವು ಪಡೆಯುತ್ತಾರೆ.

ಬಂಡವಾಳಶಾಹಿ ಪದ್ಧತಿ ಅಭಿವೃದ್ಧಿ ಹೊಂದಿ, ಸಂಪರ್ಕ ಮತ್ತು ಸಾರಿಗೆ ಸಾಧನಗಳನ್ನು ಅಭಿವೃದ್ಧಿಗೊಳಿಸುತ್ತದೆ. ಕಾರ್ಮಿಕರು ಇವುಗಳನ್ನು ಬಳಸಿ ಅಂತರರಾಷ್ಟ್ರೀಯ ಸಂಪರ್ಕ ಸಾಧಿಸುತ್ತಾರೆ. ನಿಧಾನವಾಗಿ ಕಾರ್ಮಿಕರ ಚಳುವಳಿ ಅಂತರರಾಷ್ಟ್ರೀಯ ಚಳುವಳಿಯಾಗುತ್ತದೆ.

ಬಂಡವಾಳಶಾಹಿ ಪದ್ಧತಿ ಬೆಳೆದಂತೆಲ್ಲಾ ಕಾರ್ಮಿಕರ ದುರ್ಭರ ಪರಿಸ್ಥಿತಿ ಇನ್ನೂ ಗಂಭೀರವಾಗುತ್ತದೆ. ಮಾರ್ಕ್ಸ್ ಅವರು ಹೇಳುವಂತೆ ಆಧುನಿಕ ಕಾರ್ಮಿಕ ಕೈಗಾರಿಕಾ ಪ್ರಗತಿಯೊಂದಿಗೆ ಏಳಿಗೆ ಹೊಂದುವ ಬದಲು ತನ್ನ ವರ್ಗದ ಸಾಮಾಜಿಕ ಪರಿಸ್ಥಿತಿಗಳಿಗಿಂತ, ಆಳವಾದ ಕೂಪದಲ್ಲಿ ಮುಳುಗುತ್ತಾನೆ. ಕಾರ್ಮಿಕ ದಿವಾಳಿಯಾಗುತ್ತಾನೆ ಮತ್ತು ಜನಸಂಖ್ಯೆ ಹಾಗೂ ಸಂಪತ್ತಿನ ಹೆಚ್ಚಳಕ್ಕಿಂತ ದಿವಾಳಿತನ ಅತ್ಯಧಿಕವಾಗುತ್ತದೆ. ಬೆಳೆಯುತ್ತಿರುವ ಬಂಡವಾಳಶಾಹಿ ಪದ್ಧತಿಯಿಂದ, ತೀವ್ರವಾದ ಪೈಪೋಟಿ ಉಂಟಾಗುತ್ತದೆ. ಪೈಪೋಟಿ ತೀವ್ರವಾದಂತೆ, ಲಾಭಗಳು ಕುಗ್ಗುತ್ತವೆ, ಬಂಡವಾಳಗಾರ ತನ್ನ ಕುಸಿಯುತ್ತಿರುವ ಲಾಭ ತುಂಬಿಕೊಳ್ಳುವುದಕ್ಕೆ ಕಾರ್ಮಿಕರ ಶೋಷಣೆಯನ್ನು ತೀವ್ರಗೊಳಿಸುತ್ತಾನೆ. ಹೆಚ್ಚುತ್ತಿರುವ ಬಿಕ್ಕಟ್ಟನ್ನು ನಿಭಾಯಿಸಲು ಬಂಡವಾಳಶಾಹಿ ಪದ್ಧತಿ ವಿಫಲವಾಗುತ್ತದೆ. ಬಿಕ್ಕಟ್ಟುಗಳು ಮೇಲಿಂದ ಮೇಲೆ ಹೆಚ್ಚಾಗುವುದರಿಂದ ಮತ್ತು ಸುಧೀರ್ಘವಾಗುವುದರಿಂದ, ಇಡೀ ಸಮುದಾಯವು ಅಪಾಯದಲ್ಲಿ ಸಿಲುಕಿಕೊಳ್ಳುತ್ತದೆ. ಬಂಡವಾಳಶಾಹಿ ಪದ್ಧತಿಯ ಉತ್ಪಾದನಾ ವ್ಯವಸ್ಥೆಯಿಂದ ಅಧಿಕ ಸಂಖ್ಯಾತರಾದ ಕಾರ್ಮಿಕ ವರ್ಗದ ಕಾರ್ಪಣ್ಯ ಅಧಿಕಗೊಂಡಂತೆ, ಶಿಸ್ತು, ಏಕತೆ ಮತ್ತು ಸಂಘಟನಾ ಸಾಮರ್ಥ್ಯಗಳಿಂದ ಕಾರ್ಮಿಕ ವರ್ಗವು ಕ್ರಾಂತಿಯ ಹಾದಿ ತುಳಿಯುತ್ತದೆ. ಉತ್ಪಾದನಾ ಸಾಧನಗಳ ಕೇಂದ್ರೀಕರಣ ಮತ್ತು ಕಾರ್ಮಿಕರ ಸಾಮಾಜೀಕರಣವು ಕಟ್ಟಕಡೆಗೆ ತಲುಪುವ ಬಿಂದು, ಅವೆರಡರ ಹೊಂದಾಣಿಕೆಯಾಗದ ಸ್ಥಿತಿ ಮತ್ತು ಬಂಡವಾಳಶಾಹಿ ಪದ್ಧತಿಯ ಜೊಳ್ಳುತನ. ಇದು ಬಹಿರಂಗ ಕ್ರಾಂತಿಗೆ ದಾರಿ ಮಾಡಿಕೊಡುತ್ತದೆ. ಬಂಡವಾಳಶಾಹಿ ಪದ್ಧತಿಯ ಅಂತ್ಯ ಧ್ವನಿಸುತ್ತದೆ. ಶೋಷಕರು ಸ್ವಾಧೀನ ಕಳೆದುಕೊಳ್ಳುತ್ತಾರೆ.

ಕೋಕರ್ ಅವರು ಬಂಡವಾಳಶಾಹಿ ಪದ್ಧತಿ ತನ್ನ ವಿನಾಶದತ್ತ ಸಾಗುವ ಪರಿಯನ್ನು ಕೆಳಕಂಡಂತೆ ಸಂಗ್ರಹಿಸಿದ್ದಾರೆ.

ಹೇಗೆ ಬಂಡವಾಳಶಾಹಿ ಪದ್ಧತಿಯು ಕಾರ್ಮಿಕರ ಸಂಖ್ಯೆಯನ್ನು ಹಿಗ್ಗಿಸುತ್ತದೆ. ಅವರನ್ನು ನಿಕಟವಾದ ಗುಂಪುಗಳಲ್ಲಿ ಒಂದುಗೂಡಿಸುತ್ತದೆ. ಅವರಲ್ಲಿ ವರ್ಗ ಪ್ರಜ್ಞೆ ಬೆಳೆಸುತ್ತದೆ. ಅವರಿಗೆ ಸಂಪರ್ಕ ಸಾಧನಗಳನ್ನು ಸರಬರಾಜು ಮಾಡುತ್ತದೆ ಮತ್ತು ಅತ್ಯಂತ ವಿಶಾಲ ಪ್ರಮಾಣದಲ್ಲಿ ಸಹಕಾರ ಲಭ್ಯವಾಗುವಂತೆ ಮಾಡುತ್ತದೆ, ಅವರ ಕೊಳ್ಳುವ ಶಕ್ತಿಯನ್ನು ಮೊಟಕುಗೊಳಿಸುತ್ತದೆ, ಮತ್ತು ಅವರನ್ನು ಅಧಿಕವಾಗಿ ಶೋಷಿಸುವುದರಿಂದ, ಅವರನ್ನು ಸಂಘಟಿತ ಪ್ರತಿಭಟನೆಗೆ ಪ್ರೋತ್ಸಾಹಿಸುತ್ತದೆ. ಬಂಡವಾಳಶಾಹಿಗಳು ತಮ್ಮ ಸ್ವಾಭಾವಿಕ ಅಗತ್ಯಗಳ ಅನುಸರಣೆಗಾಗಿ ನಿರಂತರವಾಗಿ ಕಾರ್ಯಶೀಲರಾಗಿ ಲಾಭಗಳನ್ನು ಉಳಿಸಿಕೊಳ್ಳುವ ಅವಲಂಬಿತ ಪದ್ಧತಿಯ ವಿಜಕ್ಕಾಗಿ ಎಡೆಬಿಡದೆ ಸೃಷ್ಟಿಸುವ ಪರಿಸ್ಥಿತಿಗಳು, ಕಾರ್ಮಿಕರ ಸಮಾಜದ ಅಗತ್ಯಗಳಿಗೆ ಸಿದ್ಧವಾಗುವ ಒಂದು ವ್ಯವಸ್ಥೆಯನ್ನು, ಸ್ವಾಭಾವಿಕ ಪ್ರಯತ್ನಗಳಿಂದ ಉತ್ತೇಜಿಸುವ ಮತ್ತು ಬಲಯುತಗೊಳಿಸುವಂತಾಗುತ್ತದೆ.

ವರ್ಗ ಸಮರದ ಅನಿವಾರ್ಯ ಅಂತ್ಯವು ಪ್ರಾಲಿತಾರಿಯತ್‌ನ ವಿಜಯವೇ ಆಗಿದೆ. ಬಂಡವಾಳಶಾಹಿ ಪದ್ಧತಿಯ ಅವನತಿ ಮತ್ತು ಪ್ರಾಲಿತಾರಿಯತ್‌ನ ವಿಜಯಗಳೆರಡೂ ಸಮಾನವಾಗಿ ಅನಿವಾರ್ಯವಾಗಿದೆ. ಈ ವಿಜಯದ ಪರಿಣಾಮವಾಗಿ ವರ್ಗ-ವ್ಯತ್ಯಾಸಗಳು ಸಮಾಜದಿಂದ ಕಣ್ಮರೆಯಾಗುತ್ತವೆ ಮತ್ತು ಅವುಗಳ ಕಣ್ಮರೆಯೊಂದಿಗೆ, ವರ್ಗ ಸಂಘರ್ಷವೂ ಅಂತ್ಯಗೊಳ್ಳುತ್ತದೆ. ಪ್ರಾಲಿತಾರಿಯತ್ ತನ್ನ ರಾಜಕೀಯ ಅಧಿಕಾರ ಬಳಸಿ, ಬಂಡವಾಳಶಾಹಿ ಪದ್ಧತಿಯ ಅಳಿದುಳಿದ ಅಂಶಗಳನ್ನು ನಿರ್ನಾಮಗೊಳಿಸುತ್ತದೆ. ಎಲ್ಲ ವರ್ಗಗಳಿಂದ ಮುಕ್ತವಾಗುತ್ತದೆ. ವರ್ಗರಹಿತ ಸಮಾಜದ ಧ್ಯೇಯವೆಂದರೆ ಪ್ರತಿಯೊಬ್ಬರೂ ತಮ್ಮ ಅಗತ್ಯಗಳಿಗನುಸಾರವಾದ ಪ್ರತಿಫಲ ಪಡೆಯುವುದು. ಶೋಷಣೆಯಿಲ್ಲದ ಹೊಸ ಸಮಾಜ ಈ ತತ್ವವನ್ನು ಆಧರಿಸಿದೆ.

### 21.4.6 ಕ್ರಾಂತಿಯ ಅನಿವಾರ್ಯತೆ

ಮಾರ್ಕ್ಸ್‌ನ ರಾಜಕೀಯ ವಿಚಾರಗಳು ದ್ವಂದ್ವಾತ್ಮಕ ಭೌತಿಕವಾದದ ತಳಹದಿಯ ಮೇಲೆ ನಿರ್ಮಿತವಾಗಿರುತ್ತವೆ. ಅದಕ್ಕಾಗಿ ಕ್ರಾಂತಿಕಾರಕ ಬಣ್ಣ ಅವನ ವಿಚಾರಗಳಿಗೆ, ವರ್ಗ ವರ್ಗಗಳ ನಡುವೆ ಹೋರಾಟವು ಅನಿವಾರ್ಯ ಎಂದು ಮಾರ್ಕ್ಸ್‌ನ ಗ್ರಹಿಕೆ. ಮಾನವನ ಇತಿಹಾಸವು ವರ್ಗ ಕಲಹಗಳ ದಾಖಲೆ ಎಂದು ಮಾರ್ಕ್ಸ್‌ನ ಅಭಿಪ್ರಾಯ. ಆಧುನಿಕ ಔದ್ಯಮಿಕ ಯುಗದಲ್ಲಿ ಈ ವರ್ಗ ಕಲಹವು ತೀಕ್ಷ್ಣ ಸ್ವರೂಪವನ್ನು ತಾಳುತ್ತ ಜಗತ್ತನ್ನೇ ಆವರಿಸುತ್ತದೆ. ಜಾಗತಿಕ ಕೂಲಿಕಾರರ ಸಂಘಟನೆ, ಸಹನೆ ಮೀರಿದ ಕೂಲಿಕಾರರಲ್ಲಿ ಕ್ರಾಂತಿಕಾರಕ ವಿಚಾರಗಳ ಪ್ರಭಾವ ಬಂಡವಾಳಶಾಹಿಯ ದೋಷಗಳೇ ಈ ಕ್ರಾಂತಿಗೆ ಪುಷ್ಟಿಕೊಡುತ್ತದೆ. ಬಲಾತ್ಕಾರದಿಂದಲೇ ತಮ್ಮ ಗುರಿ ಸಾಧನೆ ಸಾಧ್ಯವೆಂದು ಅರಿವು ಕಾರ್ಮಿಕರಲ್ಲಿ. ಆದ್ದರಿಂದ ಒಮ್ಮೆ ಕ್ರಾಂತಿ ಸಂಭವಿಸಲೇಬೇಕು ಎಂದು ಮಾರ್ಕ್ಸ್‌ನ ವಿಚಾರ. ಆತ್ಮಹಿಂಸೆಗೆ ಒಳಪಟ್ಟು, ಕಂಗಾಲಾದ ಕಾರ್ಮಿಕರು ಒಂದು ಪ್ರಬಲ ಸಂಘಟನೆಯನ್ನು ಸ್ಥಾಪಿಸಿ ಬಂಡವಾಳಶಾಹಿಯ ವಿರುದ್ಧ ಬಂಡೇಳುತ್ತಾರೆ. ವರ್ಗ ಕಲಹವು ಕ್ರಾಂತಿಯಲ್ಲಿ ಕೊನೆಗೊಳ್ಳುವುದೆಂದು ಮಾರ್ಕ್ಸ್‌ನ ಅಭಿಪ್ರಾಯ. ಕ್ರಾಂತಿಯಿಂದಲೇ ಬಂಡವಾಳಶಾಹಿಯು ನಾಶಹೊಂದಿ ಕಾರ್ಮಿಕರ ಸರ್ವಾಧಿಕಾರತ್ವವು ಸ್ಥಾಪಿತವಾಗುತ್ತದೆ. ಬಂಡವಾಳಶಾಹಿಯಿಂದ ಕಾರ್ಮಿಕರ ಆಡಳಿತ ಸ್ಥಾಪನೆಯ ವಿಷಯದ ಮೇಲೆ ಮಾರ್ಕ್ಸ್‌ನಿಗೆ ನಿಶ್ಚಿತವಾದ ವಿಚಾರಗಳು ಇದ್ದಂತೆ ಕಂಡು ಬರುವುದಿಲ್ಲ. ಕಮ್ಯುನಿಸ್ಟ್ ಮ್ಯಾನಿಫೆಸ್ಟೋದಲ್ಲಿ ಕ್ರಾಂತಿಯು ಅನಿವಾರ್ಯವಾಗುವುದೆಂದು ಹೇಳುತ್ತಾನೆ. ಬಂಡವಾಳಶಾಹಿಯನ್ನು ನಾಶಪಡಿಸಿ ಕಾರ್ಮಿಕರ ಸರ್ವಾಧಿಕಾರ ಸ್ಥಾಪನೆಗೆ ಕ್ರಾಂತಿಯು ಅವಶ್ಯವೆಂಬ ವಿಚಾರವನ್ನು ವ್ಯಕ್ತಪಡಿಸುತ್ತಾನೆ. ಸಮಾಜವಾದಿ ಸಮಾಜ ನಿರ್ಮಾಣಕ್ಕೆ ಕ್ರಾಂತಿಯೇ ಅವಶ್ಯ. ಯಾವುದೇ ಸುಧಾರಣೆಗಳಿಂದ ಸಮಾಜವಾದಿ ಸಮಾಜ ಸ್ಥಾಪನೆಯು ಅಸಾಧ್ಯವೆಂಬ ಅಭಿಪ್ರಾಯ ತಾಳಿರುತ್ತಾನೆ. ಆದರೆ ತರುವಾಯ ಅವನ ವಿಚಾರಗಳು ಇಷ್ಟು ಉಗ್ರವಾದವುಗಳಾಗಿ ಕಂಡುಬರುವುದಿಲ್ಲ. ಕೂಲಿಕಾರರು ಅಧಿಕಾರವನ್ನು ಪಡೆಯುವ ಮಾರ್ಗಗಳು ಎಲ್ಲೆಡೆಯಲ್ಲಿಯೂ ಒಂದೇ ಆಗಿರುವುದಿಲ್ಲ ಎಂದು 1872 ರಲ್ಲಿ ಅಮೆಸ್ಟರ್‌ಡ್ಯಾಮ್‌ನಲ್ಲಿ ಒಂದು ಸಾರ್ವಜನಿಕ ಸಭೆಯಲ್ಲಿ ಹೇಳಿರುತ್ತಾನೆ. " ಬೇರೆಬೇರೆ ಪ್ರದೇಶಗಳ ಸಂಸ್ಥೆ, ರೂಢಿ, ಚಟುವಟಿಕೆಗಳನ್ನು ನಾವು ಲೆಕ್ಕದಲ್ಲಿ ತೆಗೆದುಕೊಳ್ಳಬೇಕಾಗುವುದೆಂದು ನಮಗೆ ಕಂಡು ಬರುತ್ತದೆ. ಇಂಗ್ಲೆಂಡ್

ಮತ್ತು ನಿಮ್ಮ ಸಂಸ್ಥೆಗಳ ಪರಿಚಯವು ನನಗೆ ವಿಶೇಷವಿದ್ದರೆ ಪೋಲೆಂಡ್ ಇಂಥಹ ರಾಷ್ಟ್ರಗಳಲ್ಲಿ ಕಾರ್ಮಿಕರು ತಮ್ಮ ಗುರಿಗಳನ್ನು ಶಾಂತಿಯುತ ಮಾರ್ಗಗಳಿಂದ ಸಾಧಿಸಬಹುದೆಂಬುದನ್ನು ನಾವು ಅಲ್ಲಗೆಳೆಯಲಾರೆವು. ಆದರೆ ಪ್ರಕರಣವು ಎಲ್ಲ ರಾಷ್ಟ್ರಗಳಿಗೂ ಅನ್ವಯಿಸುವುದಿಲ್ಲ ಎಂದು ಹೇಳಿರುವುದನ್ನು ನೋಡಿದರೆ ಶಾಂತಿಯುತ ಬದಲಾವಣೆಯಲ್ಲಿಯೂ ಮಾರ್ಕ್ಸ್‌ನಿಗೆ ನಂಬಿಕೆ ಇರುವುದು ಕಂಡು ಬರುತ್ತದೆ. ಶಾಂತಿಯುತ ಬದಲಾವಣೆಯು ಅಪವಾದಾತ್ಮಕ. ಕ್ರಾಂತಿ ಸರ್ವೇಸಾಮಾನ್ಯ ಎಂಬ ಗ್ರಹಿಕೆ ಇರಬಹುದು. ಅದು ಒಂದು ಶಾಂತಿಯುತ ಕ್ರಾಂತಿಯೇ ಸರಿ.

ಒಟ್ಟಿನ ಮೇಲೆ ಸಾಮಾನ್ಯವಾಗಿ ಕ್ರಾಂತಿಯಿಂದ ಕಾರ್ಮಿಕರು ಬಂಡವಾಳಶಾಹಿಯನ್ನು ನಾಶಗೊಳಿಸಿ ತಮ್ಮ ಸರ್ವಾಧಿಕಾರವನ್ನು ಸ್ಥಾಪಿಸುತ್ತಾರೆ. ನಂತರ ರಾಷ್ಟ್ರದಲ್ಲಿ ಅಮೂಲಾಗ್ರ ಬದಲಾವಣೆಯ ಕಾರ್ಯಕ್ರಮಗಳನ್ನೂ ನಿರೂಪಿಸಿ ಕಾರ್ಯಗತಗೊಳಿಸುತ್ತಾರೆ. ವರ್ಗಗಳೆಲ್ಲವನ್ನು ನಾಸಗೊಳಿಸಿ ಖಾಸಗಿ ಆಸ್ತಿಯನ್ನು ರದ್ದುಗೊಲಿಸಲಾಗುತ್ತದೆ. ಉತ್ಪಾದನೆಯ ಸಾಧನೆಗಳೆಲ್ಲವೂ ಸಮಾಜಕ್ಕೆ ಸೇರುತ್ತವೆ. ಆರ್ಥಿಕ ಸರ್ವ ವ್ಯವಸ್ಥೆಯು ಸರ್ಕಾರದ ಅಂಕಿತದಲ್ಲಿ ತಂದುಕೊಳ್ಳಲಾಗುತ್ತದೆ. ಪ್ರತಿಯೊಬ್ಬ ವ್ಯಕ್ತಿಯ ಅಭಿವೃದ್ಧಿಯೊಂದಿಗೆ ಸಮಾಜದ ಅಭಿವೃದ್ಧಿ ಸಾಧಿಸುವತ್ತ ಗಮನ ಹರಿಸಲಾಗುತ್ತದೆ. ಕಾರ್ಮಿಕರ ಕ್ರಾಂತಿಯ ವಿಶಿಷ್ಟ ಲಕ್ಷಣವೆಂದರೆ ಉಳಿದ ಕ್ರಾಂತಿಗಳಂತೆ ಕೇವಲ ಸರ್ಕಾರದಲ್ಲಿ ಬದಲಾವಣೆಯನ್ನು ಮಾಡುವುದಷ್ಟೇ ಆಗಿರದೇ ಸಮಾಜದಲ್ಲಿ ಅಮೂಲಾಗ್ರ ಬದಲಾವಣೆಯನ್ನು ಸ್ಥಿಪಸ್ಥಾಯಿಯಾಗಿ ಇಡುವುದು ಆಗಿರುತ್ತದೆ. ಎಲ್ಲ ಹಂತಗಳಲ್ಲಿಯೂ ಬದಲಾವಣೆ ವ್ಯಕ್ತಿ ಜೀವನದಲ್ಲಿ ಪರಿಪೂರ್ಣ ಬದಲಾವಣೆ, ಹೊಸ ಸರ್ಕಾರ, ಹೊಸ ಸಮಾಜ, ಹೊಸ ಪದ್ಧತಿ, ವರ್ಗ ನಿರ್ಮೂಲನ, ವರ್ಗರಹಿತ, ಸಮಾಜ ಸ್ಥಾಪನೆ, ಆರ್ಥಿಕ ವ್ಯವಸ್ಥತೆ ಸರ್ಕಾರದ ವಶಕ್ಕೆ, ಉತ್ಪಾದನೆ ಹಾಗೂ ವಿತರಣೆ, ಸರ್ಕಾರದ ಕೈಯಲ್ಲಿ ಖಾಸಗೀ ಆಸ್ತಿ ನಾಶ ಎಲ್ಲ ಆಸ್ತಿಯು ಸರ್ಕಾರದ ಆಸ್ತಿಯು, ವ್ಯಕ್ತಿಗೆ ತನ್ನ ಸಾಮರ್ಥ್ಯಕ್ಕೆ ತಕ್ಕಂತೆ ದುಡಿಮೆ, ಅವಶ್ಯವಿದ್ದಂತೆ ಪಡೆಯುವುದು ಇವು ಸರ್ಕಾರದ ಗುರಿ ಆಗುತ್ತವೆ. ವ್ಯಕ್ತಿಯ ಆಚಾರ, ವಿಚಾರಗಳಲ್ಲಿಯೂ ಬದಲಾವಣೆಯಾಗುವುದರಿಂದ ಅದೊಂದು ಕ್ರಾಂತಿಕಾರಕ ಬದಲಾವಣೆಯೆಂದು ಕರೆಯಲೆ ಬೇಕಾಗುತ್ತದೆ.

## 21.4.7 ಕಾರ್ಮಿಕರ ನಿರಂಕುಶ ಪ್ರಭುತ್ವ

ಔದ್ಯಮಿಕ ಯುಗದಲ್ಲಿ ವರ್ಗ ಕಲಹದ ತೀಕ್ಷ್ಣತೆಯನ್ನು ಮಾರ್ಕ್ಸ್ ಕಂಡು ಹಿಡಿದು ಬಂಡವಾಳಶಾಹಿ ಮತ್ತು ಭೂರಹಿತ ಕಾರ್ಮಿಕರ ನಡುವೆ ಹೋರಾಟ ಪ್ರಾರಂಭಿಸುತ್ತದೆ. ಕಾರ್ಮಿಕ ಜನಾಂಗವೆಲ್ಲವೂ ಸುಸಂಘಟಿತವಾಗುತ್ತದೆ. ಒಕ್ಕಟ್ಟಿನಿಂದ ಬಂಡವಾಳಶಾಹಿಯನ್ನು ಸದೆಬಡಿಯಲು ಸನ್ನದ್ಧ, ತಮ್ಮ ಗುರಿ ಸಾಧನೆಯು ಬಲಾತ್ಕಾರದಿಂದ ಪ್ರಚಲಿತವಿದ್ದ ಸಾಮಾಜಿಕ ಪರಿಸ್ಥಿತಿಯನ್ನು ಬುಡಮೇಲು ಮಾಡಿದಾಗ ಮಾತ್ರ ಸಾಧ್ಯವೆಂದು ಕಮ್ಯುನಿಸ್ಟರು ಘೋಷಿಸುವರೆಂದು ಮಾರ್ಕ್ಸ್ ಹೇಳುತ್ತಾನೆ. ಈ ಕ್ರಾಂತಿಕಾರಕ ಹೋರಾಟದಿಂದ ಕಾರ್ಮಿಕರು ಕೇವಲ ತಮ್ಮ ಸಂಕೋಲೆಗಳನ್ನು ಮಾತ್ರ ಕಳೆದುಕೊಳ್ಳುತ್ತಾರೆ. ಅವರಿಗಾಗಿ ಸಮಗ್ರ ಗೆಲುವು ಈ ವರ್ಗ ಕಲಹ ಜಗತ್ತನ್ನೇ ಆವರಿಸುವುದು. ಜಾಗತಿಕ ಕಾರ್ಮಿಕರೆಲ್ಲರೂ ಒಕ್ಕಟ್ಟಾಗುತ್ತಾರೆ ಎಂದು ಮಾರ್ಕ್ಸ್‌ನ ಗ್ರಹಿಕೆ. ಸಮತಾವಾದದ ರಾಜಕೀಯ ಪಕ್ಷದ ಸಂಘಟನೆಗಾಗಿ ಮಾರ್ಕ್ಸ್ ಕರೆಕೊಟ್ಟನು. 1864ರಲ್ಲಿ ಒಕ್ಕಟ್ಟನ್ನು ಹುಟ್ಟಿಸಿ ಕಾರ್ಮಿಕರ ಕ್ರಾಂತಿಗೆ ಪುಷ್ಟಿಕೊಡುವುದೆಂದು ಮಾರ್ಕ್ಸ್‌ನು ಭಾವಿಸಿದನು. ಹಿಂಸಾತ್ಮಕ ಕ್ರಾಂತಿಯಿಂದ ಭೂರಹಿತ ಕಾರ್ಮಿಕರ ಸರ್ವಾಧಿಕಾರತ್ವವು ಸ್ಥಾಪಿತವಾಗುವುದೆಂದು ಮಾರ್ಕ್ಸ್‌ನ ತಿಳುವಳಿಕೆ. ವರ್ಗ ಕಲಹವು ಅನಿವಾರ್ಯ. ಯಶಸ್ವಿ ಕ್ರಾಂತಿಯಿಂದ ಕಾರ್ಮಿಕರ ಜಯ ಎಂದು ಮಾರ್ಕ್ಸ್‌ನು ಭಾವಿಸಿದ್ದರೂ ಈ ಬದಲಾವಣೆಯು ಅಧಿಕ ಉತ್ಕ್ರಾಂತಿಯಿಂದ ಶಾಂತಿಯುತವಾಗಿ ಸ್ಥಾಪಿತವಾಗುವುದು ಮಾರ್ಕ್ಸ್‌ನಿಗೆ ಸರಿಬರಲಿಲ್ಲ. ಈ ವರ್ಗ ಕಲಹದಿಂದ ಕ್ರಾಂತಿ ಸ್ಫೋಟವಾಗಬೇಕೆಂದು ಅವನ ಬಯಕೆ. ಆದ್ದರಿಂದ ಕಾರ್ಮಿಕ ಸಂಘಟನೆ ಮತ್ತು ಉತ್ಸಾಹಭರಿತ ಚಟುವಟಿಕೆಗೆ ಕರೆಕೊಟ್ಟನು. ಕಾರ್ಮಿಕರ ಕ್ರಾಂತಿಯನ್ನು ತ್ವರಿತಗೊಳಿಸುವುದು ಮಾರ್ಕ್ಸ್‌ನ ಉದ್ದೇಶವಾಗಿತ್ತು.

ಬಂಡವಾಳಶಾಹಿಯಲ್ಲಿಯೇ ಅದರ ಅವಸಾನದ ಬೀಜಗಳಿರುವುವೆಂದು ಮಾರ್ಕ್ಸ್‌ನ ಅಭಿಪ್ರಾಯ. ಕ್ರಾಂತಿಕಾರಕ

ವಾತಾವರಣವನ್ನು ಬಂಡವಾಳಶಾಹಿಯೇ ಕಲ್ಪಿಸುತ್ತದೆ. ಅಂತಿಮವಾಗಿ ಬಲಾತ್ಕಾರ ಪ್ರಯೋಗದಿಂದ ಬಂಡವಾಳಶಾಹಿಯು ನಾಶ ಹೊಂದುತ್ತದೆ. ಕಾರ್ಮಿಕ ಸಂಘಟನೆ ಮತ್ತು ಕ್ರಾಂತಿಯಿಂದ ವರ್ಗ ರಹಿತ ಸಮಾಜ ಸ್ಥಾಪಿತವಾಗುತ್ತದೆ. ಕಾರ್ಮಿಕರ ನಿರಂಕುಶ ಪ್ರಭುತ್ವವು ಜಾರಿಯಲ್ಲಿ ಬರುತ್ತದೆ. ಈ ಕಾರ್ಮಿಕರು ಸೈನ್ಯ ಹಾಗೂ ಸರ್ಕಾರದ ಯಂತ್ರವನ್ನು ತಮ್ಮ ವಶಪಡಿಸಿಕೊಂಡು ಬಂಡವಾಳಶಾಹಿಯನ್ನು ನಾಶಪಡಿಸುತ್ತಾರೆ. ಆರ್ಥಿಕ ಪದ್ಧತಿಯ ಮೇಲೆ ತಮ್ಮ ಸಂಪೂರ್ಣ ಹತೋಟಿಯನ್ನು ಸಾಮೂಹಿಕ ಹೊಂದುವಿಕೆಯ ಜೀವನ ಪ್ರಾರಂಭಿಸುತ್ತಾರೆ. " ಯಾವ ಬೆಳವಣಿಗೆಯಾದಂತೆ, ವರ್ಗ ಭೇದ ಭಾವ ಮಾಯವಾದಾಗ ಅಂಥಹ ರಾಷ್ಟ್ರದ ಒಂದು ವಿಶಾಲ ಸಂಸ್ಥೆಯ ಕೈಯಲ್ಲಿ ಸಮಗ್ರ ಉತ್ಪಾದನೆಯು ಕೇಂದ್ರೀಕೃತವಾದಾಗ, ಸಾರ್ವಜನಿಕ ಅಧಿಕಾರವು ಅದರ ರಾಜಕೀಯ ಗುಣವನ್ನು ಕಳೆದುಕೊಳ್ಳುತ್ತದೆ. ವರ್ಗಗಳು ಹಾಗೂ ವರ್ಗ ವೈರತ್ವವುಳ್ಳ ಹಳೆಯ ಮಧ್ಯಮ ವರ್ಗದ ಸಮಾಜದ ಸ್ಥಾನದಲ್ಲಿ ಪ್ರತಿಯೊಬ್ಬನು ಸ್ವತಂತ್ರ ಬೆಳವಣಿಗೆಯು ಸರ್ವರ ಸ್ವತಂತ್ರ ಬೆಳವಣಿಗೆಯ ಕಟ್ಟಾಗುವಂಥಹ ಒಂದು ಸಂಸ್ಥೆಯು ನಮಗೆ ಲಭಿಸುತ್ತದೆ ಎಂದು ಮಾರ್ಕ್ಸ್ ಹೇಳಿರುತ್ತಾನೆ. ಪ್ರತಿಯೊಬ್ಬ ವ್ಯಕ್ತಿಯ ಬೆಳವಣಿಗೆಯ ಮುಖಾಂತರ ಸಮಗ್ರ ಸಮಾಜದ ಬೆಳವಣಿಗೆಯನ್ನು ಸಾಧಿಸುವುದೇ ಕಾರ್ಮಿಕರ ಸರ್ವಾಧಿಕಾರತ್ವದ ಗುರಿ.

ಯಶಸ್ವಿ ಕ್ರಾಂತಿಯಿಂದ ಕಾರ್ಮಿಕರು ಸೈನ್ಯ ಮತ್ತು ಸರ್ಕಾರವನ್ನು ತಮ್ಮ ವಶಪಡಿಸಿಕೊಂಡು ಶಾಸಕಾಂಗ ಮತ್ತು ನ್ಯಾಯಾಂಗಗಳಲ್ಲಿ ಅಮೂಲಾಗ್ರ ಬಜಲಾವಣೆಗಳನ್ನು ಮಾಡುತ್ತಾರೆ. ಬಂಡವಾಳಶಾಹಿಯ ನಾಶಕ್ಕಾಗಿ ಹೊಸ ಕಾನೂನು ರಚನೆ, ಉತ್ಪಾದಕ ಘಟಕಗಳನ್ನು ಮತ್ತು ವಿವರಣೆಯನ್ನು ರಾಷ್ಟ್ರೀಕರಣ ಮಾಡಲಾಗುತ್ತದೆ. ಮಾರ್ಕ್ಸ್‌ನ ಪ್ರಕಾರ ನಿರಂಕುಶ ಪ್ರಭುತ್ವವು. ತಾತ್ಪೂರ್ತಿಕವಾಗಿದ್ದು, ಕಾರ್ಮಿಕರು ತಮ್ಮ ಸ್ಥಾನವನ್ನು ಭದ್ರಗೊಳಿಸುವ ತನಕ ಅಸ್ತಿತ್ವದಲ್ಲಿರುತ್ತದೆ. ಬಂಡವಾಳಶಾಹಿಯಿಂದ ವರ್ಗರಹಿತ ಸಮಾಜ ಸ್ಥಾಪನೆಯಾಗುವವರೆಗೆ ಕಾರ್ಮಿಕರ ಸರ್ವಾಧಿಕಾರವು ಬಳಕೆಯಲ್ಲಿರುತ್ತದೆ.

ಮಧ್ಯಮವರ್ಗದಿಂದ ಹಂತಹಂತವಾಗಿ ಎಲ್ಲಬಂಡವಾಳವನ್ನು ಕಸಿದುಕೊಳ್ಳಲು ಭೂರಹಿತ ಕಾರ್ಮಿಕರು ತಮ್ಮ ರಾಜಕೀಯ ಪ್ರಭುತ್ವವನ್ನು ಉಪಯೋಗಿಸುತ್ತಾರೆ. ಉತ್ಪಾದಕರ ಎಲ್ಲ ಸಾಧನೆಗಳನ್ನು ರಾಷ್ಟ್ರದ ಕೈಯಲ್ಲಿ, ಅಂದರೆ ಆಡಳಿತ ವರ್ಗವಾಗಿ ಸಂಘಟಿತವಾಗದ ಭೂರಹಿತ ಕಾರ್ಮಿಕರಲ್ಲಿ ಕೇಂದ್ರೀಕರಿಸಲಾಗುತ್ತದೆ ಎಂಬ ವಿಚಾರವು ಪ್ರಕಟವಾಗುತ್ತದೆ. ಬದಲಾವಣೆಯು ಹಂತ ಹಂತವಾಗಿ ಸಾಗುತ್ತದೆ. ಸಮರ್ಪಕ ಧ್ಯೇಯ ಧೋರಣೆಗಳನ್ನು ನಿರೂಪಿಸಲಾಗುತ್ತದೆ. ಹಣಕಾಸಿನ ಸಂಸ್ಥೆ, ಸಾರಿಗೆ ಸಂಪರ್ಕ, ಉದ್ದಿಮೆ ಒಕ್ಕಲುತನ ಎಲ್ಲವೂ ಸರ್ಕಾರದ ವಶಕ್ಕೆ, ಕಾರ್ಮಿಕರೇ ನೇರವಾಗಿ ರಾಜಕೀಯ ಅಧಿಕಾರವನ್ನು ವಹಿಸಿಕೊಳ್ಳುತ್ತಾನೆ. ಕಾರ್ಮಿಕರಿಂದ, ಕಾರ್ಮಿಕರಿಗಾಗಿ ನಡೆಯುವ ಸರ್ಕಾರ ಸ್ಥಾಪಿತವಾಗುತ್ತದೆ. ಪುಕ್ಕಟೆಯಾದ ಶಿಕ್ಷಣ, ವೈದ್ಯಕೀಯ ಸೌಲಭ್ಯಗಳು ಜಾರಿಯಲ್ಲಿ ಬರುತ್ತವೆ. ಎಲ್ಲರಿಗೂ ಕೆಲಸದ ಹಕ್ಕನ್ನು ಕಡ್ಡಾಯಗೊಳಿಸುತ್ತದೆ. ಚಿಕ್ಕ ಮಕ್ಕಳಿಗೆ ಕೂಲಿ ಹಚ್ಚುವುದನ್ನು ಪ್ರತಿಬಿಂಬಿಸಲಾಗುತ್ತದೆ. ಕಾರ್ಖಾನೆಗಳನ್ನು ಸ್ಥಾಪಿಸಿ ಉದ್ಯೋಗವಕಾಶಗಳನ್ನು ಹೆಚ್ಚಿಸಲಾಗುತ್ತದೆ. ಭೂಸುಧಾರಣೆ ಮಾಡಿ ಹೆಚ್ಚಿನ ಭೂಮಿಯನ್ನು ಸಾಗುಮಾಡಲಾಗುತ್ತದೆ.

ಭೂರಹಿತ ಕಾರ್ಮಿಕರ ಸರ್ವಾಧಿಕಾರತ್ವವು ಒಂದು ಗುರಿ ಆಗಿರದೇ, ಒಂದು ಗುರಿಸಾಧನೆಯ ಮಾರ್ಗವಾಗಿರುತ್ತದೆ. ಪ್ರತಿಯೊಬ್ಬನಿಂದ ಅವನ ಸಾಮರ್ಥ್ಯಕ್ಕೆ ತಕ್ಕಂತೆ ಮತ್ತು ಪ್ರತಿಯೊಬ್ಬನಿಗೆ ಅವನ ಅವಶ್ಯಕತೆಯಂತೆ ಎಂಬ ಮೂಲ ತತ್ವದ ಮೇಲೆ ಜೀವನ ಮತ್ತು ಸಾಮಾಜಿಕ ಸಂಸ್ಥೆಯನ್ನು ಹೊಂದಿದ ಸಮಾಜವನ್ನು ಸ್ಥಾಪಿಸುವುದೇ ಈ ಸರ್ವಾಧಿಕಾರತ್ವದ ಮೂಲ ಧ್ಯೇಯವಾಗಿರುತ್ತದೆ. ಭೂರಹಿತ ಕಾರ್ಮಿಕರ ನಿರಂಕುಶ ಪ್ರಭುತ್ವವು ತಾತ್ಕಾಲಿಕವಾಗಿರುತ್ತದೆ. ವರ್ಗ ಇಲ್ಲದಂತಾಗಿ, ವರ್ಗಕಲಹ ಮಾಯವಾಗುತ್ತದೆ. ಖಾಸಗಿ ಆಸ್ತಿಯೇ ಇಲ್ಲದಾಗ ಬಂಡವಾಳಶಾಹಿ ಬಡಿದಾಟ ಇನ್ನೆಲ್ಲಿಂದ, ಸಮಾನತೆಯ ಆಧಾರದ ಮೇಲೆ ಸಾಮೂಹಿತ ಹೊಂದುವಿಕೆಯು ಅಸ್ತಿತ್ವದಲ್ಲಿ ಬರುತ್ತದೆ. ಸಮತಾವದ ಸಮಾಜವು ಸ್ಥಾಪಿತವಾದ ಮೇಲೆ ಸರ್ವಾಧಿಕಾರದ ಅವಶ್ಯಕತೆಯೇ ಬೀಳುವುದಿಲ್ಲ. ರಾಷ್ಟ್ರವು ಬಾಡಿ ಹೋಗುತ್ತದೆ. ಪ್ರಾರಂಭದಿಂದಲೂ ರಾಷ್ಟ್ರವು ವರ್ಗ ಬಲಾತ್ಕಾರದ ಒಂದು ಸಾಧನೆಯಾಗಿರುತ್ತದೆ. ಕಮ್ಯುನಿಜಂ ಬಂದ ಮೇಲೆ

ರಾಷ್ಟ್ರವು ಮಾಯವಾಗುತ್ತದೆ. ಆಡಳಿತವು ತಾನಾಗಿಯೇ ನಡೆಯುತ್ತದೆ. ಸ್ವತಂತ್ರ ಹಾಗೂ ಸರಸಮಾನಕ ಸಮಾಜವು ಸ್ಥಾಪಿತವಾಗುತ್ತದೆ. ಜೀವನವು ಸಾಂಘಿಕವಾಗುತ್ತದೆ. ರಾಜಕೀಯಮಯವಲ್ಲ. ಆಳುವ ವರ್ಗವೇ ಇರುವುದಿಲ್ಲ ಸಾಮೂಹಿಕ ಜೀವನ ಸಾಗುತ್ತ ಜನರು ಸಮಾಜಕ್ಕಾಗಿ ದುಡಿಯಲಾರಂಭಿಸುತ್ತಾರೆ. ಈ ತತ್ವ ಪದ್ಧತಿ ಜಗತ್ತನ್ನೇ ಆವರಿಸಿ ಶಾಂತಿಯುತ ಜಾಗತಿಕ ಸಮಾಜವಾದವು ಸ್ಥಾಪಿತವಾಗುತ್ತದೆ. ಇದರಿಂದಲೇ ಜಾಗತಿಕ ಶಾಂತಿ ಸಾಧ್ಯ.

ಭೂರಹಿತ ಕಾರ್ಮಿಕರ ನಿರಂಕುಶ ಪ್ರಭುತ್ವವು ಸಮತಾವದ ಸಮಾಜವನ್ನು ಸ್ಥಾಪಿಸಿ, ಪ್ರತಿಯೊಬ್ಬರಿಗೆ ದುಡಿಮೆಯನ್ನು ಹಕ್ಕನ್ನು ಮನ್ನಿಸಿ ಸರ್ವರ ಏಳಿಗೆಯನ್ನು ಸಾಧಿಸುವತ್ತ ತನ್ನ ಅಧಿಕಾರವನ್ನು ಬಳಸುತ್ತದೆ. ಅದಕ್ಕೊಂದು ವಿಶಾಲ ಆದರ್ಶವಿದೆ. ತನ್ನ ಗುರಿಸಾಧನೆಯಿಂದ ನಂತರ ಅದು ತಾನಾಗಿಯೇ ಮಾಯವಾಗುತ್ತದೆ. ಇದೊಂದು ಮಾರ್ಕ್ಸ್‌ನ ಭವಿಷ್ಯವಾಣಿ.

### 21.4.8 ಕ್ರಮೇಣ ರಾಜ್ಯದ ಲಯ

ಕಾರ್ಲ್‌ಮಾರ್ಕ್ಸ್‌ರ ಪ್ರಕಾರ ಕಾರ್ಮಿಕರು ಬೂರ್ಷ್ವಾಗಳಿಂದ ಕ್ರಾಂತಿಯ ಮೂಲಕ ಅಧಿಕಾರ ವಶಪಡಿಸಿಕೊಂಡು, ತಮ್ಮ ಸರ್ವಾಧಿಕಾರ ಸ್ಥಾಪಿಸುತ್ತಾರೆ. ಬಂಡವಾಳಗಾರರು, ಭೂಮಾಲೀಕರು ಮುಂತಾದ ಶೋಷಕರ ವರ್ಗಗಳು ಸ್ವಾಧೀನ ಕಳೆದುಕೊಂಡ ಮೇಲೆ, ಪ್ರಾಲಿತಾರಿಯತ್ ರಾಜ್ಯ ಅನಾವಶ್ಯಕವಾಗುತ್ತದೆ. ಸಾಧಿಸಬೇಕಾದ ಕೆಲಸಗಳನ್ನು ಪೂರ್ಣಗೊಳಿಸಿದ ಮೇಲೆ, ಪರಿವರ್ತಕ ಹಾಗೂ ತಾತ್ಕಾಲಿಕ ರಾಜ್ಯ ತಾನಾಗಿಯೇ ಮಾಯವಾಗುತ್ತದೆ. ಕ್ರಮೇಣ ರಾಜ್ಯದ ಅಗತ್ಯವೇ ಇರುವುದಿಲ್ಲ. ಅಶಾಶ್ವತವಾದ ಸಂಸ್ಥೆಯಾದ ರಾಜ್ಯವು ಸಹಜವಾಗಿಯೇ ಕೊನೆಗೊಳ್ಳುತ್ತದೆ. ಇದೇ ಸಮತಾವಾದದ ಅಂತಿಮ ಗುರಿ, ಶೋಷಣೆ ರಹಿತ, ವರ್ಗ ರಹಿತ ಸಮಾಜವು ಅಧಿಕಾರ ರಹಿತ ಸಂಸ್ಥೆಯಾಗುವುದು. ಹೊಸ ಸಮಾಜದಲ್ಲಿ ಪ್ರತಿಯೊಬ್ಬರೂ ತಮ್ಮ ಕೈಲಾದಷ್ಟು ಶ್ರಮಿಸುವರು, ತಮಗೆ ಅಗತ್ಯವಾದಷ್ಟು ಪಡೆಯುವರು. ಇಂತಹ ಉತ್ಕೃಷ್ಟ ಸ್ಥಿತಿಯೇ ಸಮತಾವದದ ಧ್ಯೇಯ. ಇಲ್ಲಿ ಮನುಷ್ಯನಿಗೆ ನಿಜವಾದ ಸ್ವಾತಂತ್ರ್ಯ ದೊರೆಯುತ್ತದೆ. ವಿಶ್ರಾಂತಿ ಮತ್ತು ವಿರಾಮಕ್ಕೆ ಸಾಕಷ್ಟು ಸಮಯ ಲಭ್ಯವಾಗುತ್ತದೆ ಎಂಬ ಆದರ್ಶವನ್ನು ಕಾರ್ಲ್‌ಮಾರ್ಕ್ಸ್ ನೀಡಿದ್ದಾರೆ.

### 21.4.9 ಧರ್ಮ

ಸಮತಾವಾದವು ಧರ್ಮವನ್ನು ವಿರೋಧಿಸುತ್ತದೆ. ಕಾರ್ಲ್‌ಮಾರ್ಕ್ಸ್‌ರ ಪ್ರಕಾರ ಬಂಡವಾಳಶಾಹಿ ವರ್ಗವು ಕಾರ್ಮಿಕ ವರ್ಗವನ್ನು ಶೋಷಿಸಲು ಕಂಡು ಹಿಡಿದಿರುವ ಸಾಧನವಾಗಿದೆ. ನಿರ್ಗತಿಕರು ತಮ್ಮ ದುಸ್ಥಿತಿಯಲ್ಲಿಯೇ ಮುಂದುವರೆಯಲು ಧರ್ಮ ಅಫೀಮಿನಂತೆ ಕೆಲಸ ಮಾಡುತ್ತದೆ. ಅಂಧಶ್ರದ್ಧೆಯಿಂದ ಕಾರ್ಮಿಕ ವರ್ಗ ಯಥಾಸ್ಥಿತಿಯಲ್ಲಿ ಮುಂದುವರೆಯಲು ಪ್ರಯತ್ನಿಸುತ್ತದೆ. ಧಾರ್ಮಿಕ ಆಚಾರ ವಿಚಾರಗಳು ಅಫೀಮಿನಂತೆ ಮನುಷ್ಯರಲ್ಲಿ ಉನ್ಮತ್ತತೆಯನ್ನು ತಂದು, ಶೋಷಣೆಯ ಕೂಪಕ್ಕೆ ತಳ್ಳುತ್ತದೆ. ಬಂಡವಾಳಗಾರರು ಕೈಯಲ್ಲಿ ಧರ್ಮಕ್ಕಿಂತ ಪ್ರಬಲವಾದ ಅಸ್ತ್ರ ಮತ್ತೊಂದಿಲ್ಲ. ಹೀಗೆ ಮಾರ್ಕ್ಸ್ ತನ್ನ ವೈಚಾರಿಕ ಪರಾಕಷ್ಠೆಯಲ್ಲಿ ಧರ್ಮ ವಿರೋಧಿ ವಿಚಾರ ಪ್ರಕಟಿಸಿ, ನಾಸ್ತಿಕವಾದಕ್ಕೆ ಬೆಂಬಲ ನೀಡಿದ್ದಾನೆ. ಮಾರ್ಕ್ಸ್‌ವಾದವನ್ನು ನಂಬುವವರು ಧರ್ಮ, ದೇವರು, ಪಾಪ, ಪುಣ್ಯ, ಮುಂತಾದ ವಿಚಾರಗಳನ್ನು ಲೇವಡಿ ಮಾಡಿ ಆತ್ಮ ವೈಚಾರಿಕತೆಯನ್ನು ಮೆರೆಯುತ್ತಾರೆ.

## 21.5 ಸಮತಾವಾದದ ವಿಮರ್ಶೆ

ಮಾರ್ಕ್ಸ್‌ನ ವಿಚಾರಗಳು ಸರ್ವ ವ್ಯಾಪಕವಾಗಿದ್ದು ಆರ್ಥಿಕ, ಸಾಮಾಜಿಕ, ಧಾರ್ಮಿಕ ಮತ್ತು ರಾಜಕೀಯ ಜೀವನವನ್ನು ಆವರಿಸುತ್ತದೆ. ಅವನ ಬರಹ ಕೃತಿಗಳ ಮೂಲ ಉದ್ದೇಶವು ಮಾನವನ ಇತಿಹಾಸಕ್ಕೆ ಒಂದು ಹೊಸ ತಿರುವು ಕೊಟ್ಟು ನವಸಮಾಜ ನಿರ್ಮಾಣ ಮಾಡುವುದಾಗಿರುವುದೆಂಬುದು ಸ್ಪಷ್ಟವಿದೆ. ಜಗತ್ತಿನ ಅರ್ಥವಿವರಣೆಯನ್ನು ನೀಡುವುದು ತತ್ವಜ್ಞಾನದ ಕೆಲಸವಾಗಿರದೆ,

ಅದನ್ನು ಬದಲಾಯಿಸುವುದಾಗಿರುತ್ತದೆ ಎಂದು ಮಾರ್ಕ್ಸ್ ಹೇಳಿದ್ದಾನೆ. ಜಗತ್ತಿನಲ್ಲಿಯೇ ಒಂದು ಅಮೂಲಾಗ್ರ ಬದಲಾವಣೆಯನ್ನು ಮಾಡಬೇಕೆಂದು ಭಗೀರಥ ಪ್ರಯತ್ನ ಮಾಡಿದ ಮಾರ್ಕ್ಸ್‌ನಿಗೆ ಯಶ ಲಭಿಸಿದ್ದು ಇತಿಹಾಸದಲ್ಲಿ ದಾಖಲೆಯಾಗಿದೆ. ಇಂದಿನ ರಶಿಯಾ ದೇಶವು ಮಾರ್ಕ್ಸ್‌ವಾದದ ಶಿಶು. ಮಾರ್ಕ್ಸ್‌ವಾದವು ಇಂದು ಜಗತ್ತಿಗೇ ಒಂದು ಸವಾಲಾಗಿರುವುದು ಆ ಧರ್ಮ ಗುರುವಿನ ಪಾಂಡಿತ್ಯ ಪ್ರಕಟಿಸುತ್ತದೆ.

ಅಂತೆಯೇ ಮಾರ್ಕ್ಸ್‌ನನ್ನು ಜಗತ್ತಿನಲ್ಲಿಯೇ ಅತೀ ಶ್ರೇಷ್ಟ ಸಾಮಾಜಿಕ ತತ್ವಜ್ಞಾನಿಯೆಂದು ಗೌರವಿಸಲಾಗಿದೆ. ಅವನ ವಿಚಾರ ಭವಿಷ್ಯವಾಣಿ ಇಂಜು ಆಚಾರದಲ್ಲಿ ವಾಸ್ತವಿಕತೆಯಲ್ಲಿ ಕಂಡುಬರುತ್ತದೆ. ಆದಾಗ್ಯೂ ಮಾರ್ಕ್ಸ್‌ನ ಕೆಲವೊಂದು ವಿಚಾರಗಳನ್ನು ಟೀಕಿಸಲಾಗಿರುತ್ತದೆ.

ಪ್ರಪ್ರಥಮವಾಗಿ ಮಾರ್ಕ್ಸ್‌ನ ಇತಿಹಾಸದ ಆರ್ಥಿಕ ವಿವರಣೆಯ ಮೇಲೆ ಪ್ರಬಲ ದಾಳಿ. ಕೇವಲ ಆರ್ಥಿಕ ಹಿನ್ನೆಲೆಯಲ್ಲಿಯೇ ಇತಿಹಾಸದಲ್ಲಿ ಉಲ್ಲೇಖಿಸಿದ ಬದಲಾವಣೆಗಳನ್ನು ಪರೀಕ್ಷಿಸುವುದು ಮತ್ತು ಆರ್ಥಿಕ ಪರಿಸ್ಥಿತಿಯೇ ಸಾಮಾಜಿಕ ಬದಲಾವಣೆಗಳಿಗೆ ಕಾರಣವೆಂದು ಹೇಳುವುದು ಸಮಂಜಸವಲ್ಲವೆಂದು ಅಭಿಪ್ರಾಯಪಡಲಾಗಿದೆ. ವ್ಯಕ್ತಿ ಜೀವನವು ಬಹುಮುಖ್ಯವಾದದ್ದು. ಧರ್ಮ, ಜ್ಞಾನ, ಅಭಿಲಾಷೆ, ಆಕಾಂಕ್ಷೆ, ರಾಷ್ಟ್ರಪ್ರೇಮಿ, ದುರಾಗ್ರಹ, ಸ್ವಾರ್ಥ ಮುಂತಾದ ಅನೇಕ ಅಂಶಗಳ ಸಾಮೂಹಿಕ ಕ್ರಿಯೆಯಿಂದ ಇತಿಹಾಸದಲ್ಲಿ ಬದಲಾವಣೆಯಾಗುತ್ತ ಬಂದಿರುತ್ತದೆ. ಒಂದೊಂದು ಕಾಲದಲ್ಲಿ ಒಂದೊಂದು ಅಂಶ ಪ್ರಮುಖ ಪಾತ್ರವಹಿಸಿರಬಹುದು. ಧರ್ಮ ಯುದ್ಧಗಳಾಗಿವೆ. ಸ್ವಾರ್ಥ, ಮಹತ್ವಕಾಂಕ್ಷೆಗಾಗಿ, ರಾಜಕೀಯದಲ್ಲಿ, ಬದಲಾವಣೆ ಆಗಿವೆ. ಜನರಲ್ಲಿಯ ತಿಳುವಳಿಕೆ ಮತ್ತು ಬೌದ್ಧಿಕ ಬೆಳವಣಿಗೆಯಿಂದ ಸಮಾಜದಲ್ಲಿ ಮಾರ್ಪಾಟುಗಳಾಗಿವೆ. ರಾಷ್ಟ್ರಪ್ರೇಮಕ್ಕೂ ರಕ್ತಪಾತವಾಗಿದೆ. ಮಣ್ಣಿಗಾಗಿ ಹೋರಾಟವಾದಂತೆ ಹೆಣ್ಣಿಗಾಗಿಯೂ ಹೋರಾಟವಾಗಿದೆ. ಆದ್ದರಿಂದ ಕೇವಲ ಆರ್ಥಿಕ ಅಂಶವೇ ಬದಲಾವಣೆಯ ಬೆನ್ನಲುಬು ಎನ್ನುವ ವಿಚಾರವು ತರ್ಕಬದ್ಧವೆನಿಸಲಾರದು. ಈ ವಿಚಾರವೇನೂ ಸರಿ ಆದರೆ ಮಾರ್ಕ್ಸ್‌ನು ಆರ್ಥಿಕ ಅಂಶವನ್ನು ಒಂದೇ ತೆಗೆದುಕೊಂಡು ಇತಿಹಾಸವನ್ನು ವಿಮರ್ಶಿಸಲಾಗಿರುವುದೆಂದು ಮೊದಲೇ ಹೇಳಿರುತ್ತಾನೆ. ಇನ್ನುಳಿದ ಅಂಶಗಳ ಪ್ರಭಾವವನ್ನು ಕಡೆಗಾಣಿಸಲಾಗುವುದಿಲ್ಲವೆಂದೂ ಒಪ್ಪಿರುತ್ತಾನೆ. ಆರ್ಥಿಕ ಅಂಶವನ್ನು ತೆಗೆದುಕೊಂಡು ಮಾಡಿದ ಸಂಶೋಧನೆ ಅವನ ಕೃತಿ. ಆರ್ಥಿಕ ಅಂಶಗಳತ್ತ ತನ್ನ ದೃಷ್ಟಿಯನ್ನು ಕೇಂದ್ರೀಕರಿಸಿ ಅವು ಬದಲಾವಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಎಂಬುದನ್ನು ಸಿದ್ಧಪಡಿಸಲು ಯಶಸ್ವಿಯಾಗಿ ಮಾರ್ಕ್ಸ್ ಶ್ರಮಿಸಿದ್ದಾನೆ. ಆರ್ಥಿಕ ಪರಿಸ್ಥಿತಿಯು ರಾಜಕೀಯ ಜೀವನದ ಮೇಲೆ ಪರಿಣಾಮವನ್ನು ಬೀರುವುದೆಂದು ಈಗ ಒಪ್ಪಲಾಗಿದೆ. ಪರಸ್ಪರ ಪ್ರಭಾವ ಇದ್ದೆ ಇದೆ. ದಾರಿದ್ರ್ಯವಿದ್ದಲ್ಲಿ ಕಮ್ಯುನಿಜಂ ನುಂಗುವುದೆಂಬ ಭಯ ಈಗ ಎಲ್ಲೆಡೆಯಲ್ಲಿ. ಮಾರ್ಕ್ಸ್ ತೋರಿಸಿದ ಭೂತ ಬಂಧನಕ್ಕಾಗಿ ಪ್ರಜಾರಾಜ್ಯಗಳಲ್ಲಿ ಸಾಮಾಜಿಕ ಸುಧಾರಣೆಗಳ ಸುರಿಮಳೆ ಈಗ ಪ್ರಾರಂಭವಾಗಿದೆ. ವಿಷಯ ಪರಿಚಯಕ್ಕೆ ಐತಿಹಾಸಿಕ ಪದ್ಧತಿಯ ಉಪಯುಕ್ತತೆಯನ್ನು ಮಾರ್ಕ್ಸ್ ತೋರಿಸಿಕೊಟ್ಟಿರುತ್ತಾನೆ. ಅಲ್ಲಿಯ ರಾಜಕೀಯ ಅಧಿಕಾರಿಗಳ ಜೀವನ ಸುಖಮಯವಾಗಿದ್ದರೆ ಕಾರ್ಮಿಕ ಜೀವನ ದುಡಿಮೆಯಿಂದಲೇ ಆವರಿಸಲ್ಪಡುತ್ತದೆ. ಮೇಲು, ಕೀಳು ಎಂಬ ಭಾವನೆ ಅಲ್ಲಿ ಇರಲೇಬೇಕು. ಖಾಸಗೀ ಆಸ್ತಿಯ ಹಕ್ಕು ಪೂರ್ಣವಾಗಿ ನಾಶವಾಗಿಲ್ಲ. ಅಲ್ಪಸ್ವಲ್ಪ ಖಾಸಗಿ ಆಸ್ತಿಗೆ ಮನ್ನಣೆಯು ರಶಿಯಾದಲ್ಲಿ ದೊರಕುತ್ತಲಿದೆ. ರಾಷ್ಟ್ರವು ನಶಿಸಿ ಹೋಗದೇ ರಶಿಯಾದಲ್ಲಿ ಬರಬರುತ್ತ ಉಗ್ರವಾಗತೊಡಗಿದೆ. ಕಮ್ಯುನಿಜಂ ಶಕ್ತಿ ಸಿದ್ಧಾಂತದ ಮೇಲೆ ನಿಂತಿರುವುದೆಂಬ ಕಲ್ಪನೆಯು ಜನರಲ್ಲಿ

ಮೂಡುತ್ತಲಿದೆ. ಈ ಹಿನ್ನೆಲೆಯಲ್ಲಿ ಮಾರ್ಕ್ಸ್‌ವಾದವನ್ನು ಟೀಕಿಸಲಾಗಿರುತ್ತದೆ.

## ನಿಮ್ಮ ಪ್ರಗತಿ ಪರಿಶೀಲನೆ - 1

**ಸೂಚನೆ:** 1. ಈ ಕೆಳಗೆ ಬಿಟ್ಟಿರುವ ಜಾಗವನ್ನು ನಿಮ್ಮ ಉತ್ತರಕ್ಕೆ ಉಪಯೋಗಿಸಿಕೊಳ್ಳಿ.

2. ಈ ಘಟಕದ ಕೊನೆಯಲ್ಲಿ ನೀಡಿರುವ ಉತ್ತರದೊಂದಿಗೆ ನಿಮ್ಮ ಪ್ರಗತಿಯನ್ನು ಪರಿಶೀಲಿಸಿಕೊಳ್ಳಿ.

**1. ಸಮತಾವಾದದ ಲಕ್ಷಣ ಮತ್ತು ಸ್ವರೂಪವನ್ನು ಕುರಿತು ವಿವರಿಸಿ?**

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

**2. ಸಮತಾವಾದದ ಮುಖ್ಯತತ್ವಗಳನ್ನು ವಿವರಿಸಿ?**

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

**3. ಮಾರ್ಕ್ಸ್‌ನ ಅಧಿಕ ಮೌಲ್ಯ ಸಿದ್ಧಾಂತವನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿ.?**

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

..............................................................................................................................................

..............................................................................................................................................

**4. ಸಮತಾವಾದದ ಪ್ರಸ್ತುತೆಯನ್ನು ಕುರಿತು ಚರ್ಚಿಸಿ?**

..............................................................................................................................................

..............................................................................................................................................

..............................................................................................................................................

..............................................................................................................................................

..............................................................................................................................................

..............................................................................................................................................

..............................................................................................................................................

..............................................................................................................................................

..............................................................................................................................................

## 21.6 ಉಪಸಂಹಾರ

ಮಾರ್ಕ್ಸ್‌ವಾದದಲ್ಲಿ ಹಲಕೆಲವು ಲೋಪದೋಷಗಳಿರುವುದೇನೋ ನಿಜ. ಆದರೆ ವ್ಯಕ್ತಿ ಜೀವನದಲ್ಲಿ, ರಾಷ್ಟ್ರದ ಆಗುಹೋಗುಗಳಲ್ಲಿ ಆರ್ಥಿಕ ಅಂಶದ ಮಹತ್ವವನ್ನು ಮಾರ್ಕ್ಸ್ ಎತ್ತಿ ತೋರಿಸಿರುತ್ತಾನೆ. ನಿಮ್ಮ ಶೋಷಣೆ ನಡೆಯುತ್ತಲಿದೆ ಎಂದು ಕಾರ್ಮಿಕರನ್ನು ಜಾಗ್ರತೆಗೊಳಿಸಿದನು. ಅಪರಿಮಿತ ಶೋಷಣೆ ನಡೆದದ್ದೇ ಆದರೆ ನೀವು ನಾಶವಾದೀರಿ ಎಂದು ಬಂಡವಾಳಶಾಹಿಗೆ ಎಚ್ಚರಿಕೆ ಕೊಟ್ಟನು. ರಾಷ್ಟ್ರದಲ್ಲಿ ನಡೆಯುವ ಅನ್ಯಾಯದ ಕಡೆಗೆ ಸರ್ಕಾರದ ಗಮನ ಸೆಳೆದನು. ಶೋಷಣೆಯ ವಿರುದ್ಧ ಚಂಡ ಮಾರುತವನ್ನೇ ಬಿಟ್ಟ ಮಾರ್ಕ್ಸ್ ದಲಿತ ವರ್ಗದ ವಿಮೋಚಕ, ಅಧಿದೇವತಾ, ಅವನ ವಾದ, ವಿಚಾರ ಈಗ ವಿಶ್ವಕ್ಕೆ ಒಂದು ಸವಾಲು ಕಾಲದಲ್ಲಿ ವಿಹರಿಸುವ ಅವನ ವಿಚಾರಕ್ಕೆ ಈಗಲೇ ತೀರ್ಪು ಸಾಧ್ಯವಿಲ್ಲ. ಧರ್ಮದಲ್ಲಿ ನಂಬಿಗೆ ಕಡಿಮೆಯಾಗುತ್ತಲಿದೆ. ಕುಟುಂಬದ ಸ್ಥಾನಮಾನದಲ್ಲಿ ಬದಲಾವಣೆ ಈಗ ಮೂಡುತ್ತಲಿದೆ. ಆರ್ಥಿಕ ಅಸಮಾನತೆ ಹೋದಂತೆ ಸಮಾಜದಲ್ಲಿಯ ಅಂತಸ್ತು ಮಾಯವಾಗುವುದು ಸಹಜ. ಕಾಲದಲ್ಲಿ ಇನ್ನೂ ಚಲಿಸಬೇಕಾಗಿದೆ. ಮಾರ್ಕ್ಸ್‌ನ ಭವಿಷ್ಯವಾಣಿಯ ಮೌಲ್ಯಮಾಪನ ಅಷ್ಟು ಸುಲಭ ಕಾರ್ಯವಲ್ಲ.

## 21.7 ಮುಖ್ಯ ಪದಗಳು

ಅಧಿಕ ಮೌಲ್ಯ - ಕಾರ್ಮಿಕರ ಶ್ರಮದಿಂದ ಬರುವ ಲಾಭ

ಬಂಡವಾಳಶಾಹಿ - ಕೈಗಾರಿಕಾ ಮಾಲೀಕರು

ಔದ್ಯಮೀಕರಣ - ಕೈಗಾರಿಕೀಕರಣ

ವರ್ಗರಹಿತ ಸಮಾಜ - ಬಡವ-ಶ್ರೀಮಂತರೆನ್ನುವ ಅಂತರ ಇಲ್ಲದಿರುವುದು

## 21.8 ಕೆಲವು ಉಪಯುಕ್ತ ಗ್ರಂಥಗಳು


ಆಲ್ಮಂಡ್, ಜಿ .ಎ : ದಿ ಅಪೀಲ್ಸ್ ಆಫ್ ಕಮ್ಯುನಿಸಮ್

ಕೋಲ್, ಜಿ.ಡಿ.ಹೆಚ್ : ವಾಟ್ ಮಾರ್ಕ್ಸ್ ರಿಯಲಿ ಮೆಂಟ್

ಎಬೆಂಸ್ಟೇನ್, ಡಬ್ಲ್ಯೂ : ಮಾಡ್ರನ್ ಪೊಲಿಟಿಕಲ್ ಥಾಟ್

ಸಬೈನ್, ಜಿ.ಹೆಚ್ : ಎ ಹಿಸ್ಟರಿ ಆಫ್ ಪೊಲಿಟಿಕಲ್ ಥಿಯರಿ

ಲಾಸ್ಕಿ, ಹೆಚ್.ಜೆ : ಕಮ್ಯುನಿಸಮ್

ಕಪೂರ್, ಎ.ಸಿ. : ಪ್ರಿನ್ಸಿಪಲ್ಸ್ ಆಫ್ ಪೊಲಿಟಿಕಲ್ ಸೈನ್ಸ್

ಡಾ. ಟಿ.ಡಿ. ದೇವೇಗೌಡ : ಪಾಶ್ಚಿಮಾತ್ಯ ರಾಜಕೀಯ ಚಿಂತನೆ

ಡಾ. ಟಿ.ಡಿ. ದೇವೇಗೌಡ : ರಾಜಕೀಯ ಸಿದ್ಧಾಂತಗಳು

ಡಾ. ಕೆ.ಜೆ. ಸುರೇಶ್ : ಆಧುನಿಕ ರಾಜಕೀಯ ಸಿದ್ಧಾಂತಗಳು


## 21.9 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು

ನಿಮ್ಮ ಪ್ರಗತಿ ಪರಿಶೀಲನೆ - 1

1. ನೋಡಿ ವಿಭಾಗ 21.3
2. ನೋಡಿ ವಿಭಾಗ 21.4
3. ನೋಡಿ ವಿಭಾಗ 21.4.3
4. ನೋಡಿ ವಿಭಾಗ 21.5

# ಘಟಕ 22 ಸೋವಿಯತ್ ಸಮತಾವಾದ

## ರಚನೆ


22.0 ಉದ್ದೇಶಗಳು

22.1 ಪೀಠಿಕೆ

22.2 ರಷ್ಯ ಮತ್ತು ಮಾರ್ಕ್ಸ್

22.3 ಮಾರ್ಕ್ಸ್‌ವಾದ ಮತ್ತು ಲೆನಿನ್

22.4 ಕುಸಿತಕ್ಕೆ ಹಿಂದಿನ ಸೋವಿಯತ್ ರಷ್ಯಾ

22.5 ರಷ್ಯಾದ ಸಮತಾವದದ ಕುಸಿತ

22.5.1 ಸೋವಿಯತ್ ಒಕ್ಕೂಟದ ವೈಜ್ಞಾನಿಕ ವಾದ

22.5.2 ವಾಮಪಂಥೀಯ ಚಿಂತನೆ

22.6 ಸೋವಿಯತ್ ಸಮತಾವಾದ ವಿಮರ್ಶೆ

22.7 ಸಾರಾಂಶ

22.8 ಮುಖ್ಯ ಪದಗಳು

22.9 ಕೆಲವು ಉಪಯುಕ್ತ ಗ್ರಂಥಗಳು

22.10 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು

## 22.0 ಉದ್ದೇಶಗಳು

ಈ ಘಟಕದ ವಸ್ತು ವಿಷಯವನ್ನು ಅಧ್ಯಯನ ಮಾಡಿದ ನಂತರ ನೀವು

* ಮಾರ್ಕ್ಸ್‌ವಾದದ ಅನುಷ್ಠಾನದಲ್ಲಿ ಲೆನಿನ್‌ರವರ ಪಾತ್ರವನ್ನು ಪರಿಶೀಲಿಸಬಹುದು
* ರಷ್ಯಾದ ಸಮತಾವಾದದ ಕುಸಿತಕ್ಕೆ ಕಾರಣಗಳನ್ನು ಚರ್ಚಿಸಬಹುದು
* ವಾಮಪಂಥೀಯ ಚಿಂತನೆಯ ಮಹತ್ವವನ್ನು ವಿಮರ್ಶಿಸಬಹುದು
* ಸೋವಿಯತ್ ಸಮತಾವಾದವನ್ನು ವಿಮರ್ಶಿಸಬಹುದು

## 22.1 ಪೀಠಿಕೆ

ಹಿಂದಿನ ಘಟಕದಲ್ಲಿ ಈಗಾಗಲೇ ಸಮತಾವಾದವೆಂದರೇನು ಅದರ ಮುಖ್ಯ ಕಷ್ಟಗಳೇಉ ಎಂಬುದನ್ನು ತಿಳಿಸಲಾಗಿದೆ. ಈ ಘಟಕದಲ್ಲಿ ಸೋವಿಯತ್ ಸಮತಾವಾದದ ಬಗ್ಗೆ ವಿವರಿಸಲಾಗಿದೆ. ಸೋವಿಯತ್ ಸಮತಾವಾದದಲ್ಲಿ ಲೆನಿನ್‌ರವರ ಪಾತ್ರವೇನು, ಅವರು ಹೇಗೆ ಸಮತಾವಾದದ ಅನುಷ್ಠಾನಕ್ಕೆ ಕಾರಣರಾದರು ಎಂಬುದನ್ನು ವಿವರಿಸಲಾಗಿದೆ. ಅಲ್ಲದೆ ಸಮತಾವಾದವು ವಾಸ್ತವವಾಗಿ ಅನುಷ್ಠಾನಗೊಂಡಿತೆ ಅಥವ ಇಲ್ಲ ಎಂಬುವ ಅಂಶಗಳನ್ನು ಚರ್ಚಿಸಲಾಗಿದೆ.ಸಮತಾವಾದ ಅನುಷ್ಠಾನಗೊಂಡು ನಂತರದಲ್ಲಿ ವಿಶ್ವದಲ್ಲಿ ಬಂಡವಾಳಶಾಹಿ ಪ್ರಬಾಪ್ರಭುತ್ವಕ್ಕೆ ಪ್ರತಿಸ್ಪರ್ಧೆಯಾದ ಸಿದ್ಧಾಂತವಾಗಿ ಹೇಗೆ ಹೊರಹೊಮ್ಮಿತು ಎಂಬುದನ್ನು ವಿಮರ್ಶಿಸಲಾಗಿದೆ. ನಂತರದಲ್ಲಿ 1990ರ ವೇಳೆಗೆ ಇದು ಕುಸಿತಗೊಂಡು ಸೋವಿಯತ್ ಒಕ್ಕೂಟವು ವಿಫಲವಾಗಲು ಕಾರಣಗಳೇನು. ಇದರಲ್ಲಿ ಗೋರ್ಬಚೇವ್‌ರವರ ಪಾತ್ರವೇನು ? ಎಂಬುವ ಅಂಶಗಳನ್ನು ಚರ್ಚಿಸಿ ಸೋವಿಯತ್ ಸಮತಾವಾದದ ಬಗ್ಗೆ ವಿಮರ್ಶೆ ಮಾಡಲಾಗಿದೆ.

## 22.2 ರಷ್ಯಾ ಮತ್ತು ಮಾರ್ಕ್ಸ್

ಕಾರ್ಮಿಕ ವರ್ಗದ ಅಂತರರಾಷ್ಟ್ರೀಯ ಸ್ವರೂಪದ ಬಗ್ಗೆ ಮಾತನಾಡುವ ಮಾರ್ಕ್ಸ್ ಜರ್ಮನಿಯ ಪರವಾಗಿ ಹಾಗೂ ಇತರರ ಹಾಗೂ ವಿಶೇಷವಾಗಿ ರಶಿಯದ ವಿರುದ್ಧ ಮಾತನಾಡುವುದನ್ನು ನೋಡಿದರೆ ಆತನೂ ಒಬ್ಬ ಜನಾಂಗದ್ವೇಷಿಯಾಗಿದ್ದನೇನೋ ಎಂಬ ಸಂದೇಹ ಮೂಡುತ್ತದೆ. ಜರ್ಮನ್ ಕಾರ್ಮಿಕರ ಶಿಕ್ಷಣ ಸಂಘದ 27ನೇಯ ವಾರ್ಷಿಕೋತ್ಸವದಂದು ಮಾಡಿದ ತನ್ನ ಭಾಷಣದಲ್ಲಿ ಆತ ಜರ್ಮನ್ ಕಾರ್ಮಿಕರ ಶ್ರೇಷ್ಠತೆಗೆ ಕಾರಣಗಳನ್ನು ವಿವರಿಸುತ್ತ ಅವರು ಧಾರ್ಮಿಕ ಅರ್ಥಹೀನತೆಯಿಂದ ಅತ್ಯಂತ ಹೆಚ್ಚಿನ ಸ್ವಾತಂತ್ರ್ಯ ಪಡೆದಿದ್ದರು. ಬೇರೆ ದೇಶಗಳ ಕಾರ್ಮಿಕರಂತೆ ಅವರು ಧೀರ್ಘ ಬೂರ್ಜ್ವಾ ಆಂದೋಲನಗಳಿಗೆ ಒಳಪಡಬೇಕಾಗಲಿಲ್ಲ ಹಾಗೂ ಅವರ ಭೌಗೋಳಿಕ ಸ್ಥಾನಮಾನ ಅವರು ಪೌರ್ವಾತ್ಯ ಅನಾಗರೀಕತೆಯ ಮೇಲೆ ಯುದ್ಧವನ್ನು ಸಾರುವಂತೆ ಮಾಡುತ್ತದೆ. ಏಕೆಂದರೆ ಪಶ್ಚಿಮದ ವಿರುದ್ಧ ಹೊರಮೂಡಿದ ಎಲ್ಲಾ ಪ್ರತಿಕ್ರಿಯೆಯೂ ಏಷ್ಯಾದಿಂದಲೇ ಬಂದಿದೆ ಎಂದು ಹೇಳಿದ್ದ. ಅದರಲ್ಲೂ ರಷ್ಯಾದ ಬಗ್ಗೆ ಆತನಿಗಿದ್ದ ದ್ವೇಷ ಹೇಳತೀರದಷ್ಟಿತ್ತು. ರಷ್ಯಾದ ಸಮಾಜವಾದಿ ಹರ್ಜನ್ ಜೊತೆಗೆ ಸಾರ್ವಜನಿಕ ಸಭೆಗಳಲ್ಲಿ ಕಾಣಿಸಿಕೊಳ್ಳಲು ಆತ ಇಷ್ಟಪಡುತ್ತಿರಲಿಲ್ಲ. ಇದಕ್ಕೆ ಕಾರಣವಾಗಿ ಆತ, ಏಕೆಂದರೆ ಹಳೆಯ ಯುರೋಪು ರಷ್ಯಾದ ರಕ್ತದಿಂದಾಗಿ ಹೊಸತನ ಪಡೆಯಬೇಕೆಂದು ನಾನು ಬಯಸುವುದಿಲ್ಲ ಎಂದು ಹೇಳಿದ್ದ. ರಷ್ಯಾದ ಬಗೆಗಿನ ಅವನ ದ್ವೇಷ ಒಂದು ಮಾನಸಿಕ ರೋಗವೇ ಆಗಿತ್ತು ಎಂದು ಡೇವಿಡ್ ಮ್ಯಾಕಲಿಲ್ಲನ್ ಹೇಳುತ್ತಾರೆ. 1878ರಲ್ಲಿ ಟರ್ಕಿಯ ಮುಸ್ಲಿಮರಿಗೂ ರಷ್ಯಾದ ಸ್ಲಾವರಿಗೂ ನಡೆದ ಯುದ್ಧದಲ್ಲಿ ಮಾರ್ಕ್ಸ್ ಟರ್ಕಿಯನ್ನೇ ಬೆಂಬಲಿಸುವುದಕ್ಕೆ, ಪ್ರಥಮ ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆಯಲ್ಲಿ ರಷ್ಯಾದವನಾದ ಬಾಕುನಿನ್ ಜೊತೆಗೆ ಸೆಣಸುವುದಕ್ಕೆ ಅವನ ಈ ಜನಾಂಗ ದ್ವೇಷ ಕಾರಣವಾಗಿತ್ತು ಎಂದು ಹೇಳಲಾಗದು.

ರಷ್ಯಾಕ್ಕೆ ಮೊದಲಿನಿಂದಲೂ ಪೋಲಂಡಿನ ಮೇಲೆ ಕಣ್ಣಿರುವುದನ್ನು ಗಮನಿಸಿದ್ದ ಮಾರ್ಕ್ಸ್ ತನ್ನ ರಶಿಯಾದ ದ್ವೇಷಕ್ಕಾಗಿ ಪೋಲೆಂಡಿನ ಬಗ್ಗೆ ಬಹಳ ಆಸಕ್ತಿ ವ್ಯಕ್ತಪಡಿಸಿದ್ದ. ಈ ಬಗ್ಗೆ ಆತ 1863ರಲ್ಲಿ ಒಂದು ಧೀರ್ಘವಾದ ಲೇಖನವನ್ನು ಬರೆದಿದ್ದ. ಇದು ಆರ್ಥಿಕ ವಿಶ್ಲೇಷಣೆಯಿಲ್ಲದೆ ಬರಿ ರಾಜಕೀಯ ಲೇಖನವಾಗಿತ್ತು. ಮಾರ್ಕ್ಸ್‌ನ ರಷ್ಯಾದ ಬಗೆಗಿನ ದ್ವೇಷವೇ ಈ ಲೇಖನದ ಮೂಲ ಪ್ರೇರಣೆಯಾಗಿತ್ತು ಎಂದು ಮ್ಯಾಕ್‌ಲಿಲ್ಲನ್ ಹೇಳುತ್ತಾರೆ. ಅದರಲ್ಲಿ ಆತ 1781ರ ನಂತರದ ಎಲ್ಲಾ ಕ್ರಾಂತಿಗಳ ತೀವ್ರತೆ ಹಾಗೂ ಅಂತಃಸತ್ವಗಳನ್ನು ಪೋಲೆಂಡಿನ ಬಗ್ಗೆ ಅವು ತಳದ ನಿಲುವಿನ ಆಧಾರದ ಮೇಲೆ ಹೆಚ್ಚು ಕಡಿಮೆ ಖಚಿತವಾಗಿ ಳೆಯಬಹುದು ಎಂದು ಹೇಳುತ್ತಾನೆ. ಜೊತೆಗೆ ಪೋಲೆಂಡಿನ ಪುನಃಸ್ಥಾಪನೆ ಎಂದರೆ ಜಗತ್ತನ್ನೇ ಆಕ್ರಮಿಸಬೇಕು ಎನ್ನುವ ರಷ್ಯಾದ ಮಹತ್ವಾಕಾಂಕ್ಷೆಯನ್ನು ತಡಿಹಿಡಿದಂತಾಗುತ್ತದೆ ಎಂದು ಕೂಡ ಹೇಳಿದ್ದ. ಇಂದೂ ಕೂಡ ಪೋಲೆಂಡಿನ ಮೇಲಿನ ತನ್ನ ಕಪಿಮುಷ್ಠಿಯನ್ನು ಬಿಡಲು ರಷ್ಯಾ ಇಷ್ಟಪಡದಿರುವ ಹಿನ್ನೆಲೆಯಲ್ಲಿ ಮಾರ್ಕ್ಸ್‌ನ ಅಂದಿನ ಈ ಮಾತಲು ಅತ್ಯಂತ ಗಮನಾರ್ಹವಾಗುತ್ತದೆ.

## 22.3 ಮಾರ್ಕ್ಸ್‌ವಾದ ಮತ್ತು ಲೆನಿನ್

ಲೆನಿನ್, ಮಾರ್ಕ್ಸ್‌ನ ನಿಷ್ಠಾವಂತ ಅನುಯಾಯಿ. ಲೆನಿನ್ ಕೇವಲ ಸಿದ್ಧಾಂತಿಯಾಗಿರಲಿಲ್ಲ. ಅವನು ಕರ್ಮನಿಷ್ಠ ಮತ್ತು ಕ್ರಿಯಾಶೀಲ. ಮಾರ್ಕ್ಸ್‌ನ ಸಿದ್ಧಾಂತವನ್ನು ವ್ಯವಹಾರದಲ್ಲಿ ಕಂಡನು. ಹಾಗೆಯೇ ಪರಿಸ್ಥಿತಿಗನುಗುಣವಾಗಿ ಮಾರ್ಕ್ಸ್‌ನ ಮೂಲತತ್ವಗಳಿಗೆ ಲೆನಿನ್ ಸಂಪೂರ್ಣ ಬೆಂಬಲ ನೀಡಿದ್ದಾನೆ. ಸಾಮ್ರಾಜ್ಯವಾದ ಸಿದ್ಧಾಂತವನ್ನು ಉಪಯೋಗಿಸಿಕೊಂಡು, ಲೆನಿನ್ ಮಾರ್ಕ್ಸ್‌ವಾದವನ್ನು ಆಧುನಿಕ ಕಾಲದ ಅವಶ್ಯಕತೆಗಳಿಗೆ ಅನುಗುಣವಾಗಿ ಮತ್ತು ಸಂದರ್ಭಕ್ಕೆ ತಕ್ಕಂತೆ ಮಾರ್ಕ್ಸ್‌ವಾದವನ್ನು ಅತ್ಯಂತ ಜಾಣ್ಮೆಯಿಂದ ಅಳವಡಿಸಿ, ಕೈಗಾರಿಕೆಯಲ್ಲಿ ಮುಂದುವರಿಯದ ರಾಷ್ಟ್ರಕ್ಕೂ ಅನ್ವಯವಾಗುವಂತೆ ಮಾಡಿದನು. ಪ್ರೊ. ಸೆಬೈನ್‌ರವರ ಪ್ರಕಾರ, ಲೆನಿನ್ ಸಿದ್ಧಾಂತವನ್ನು ರೈತ ಸಮುದಾಯವನ್ನು ಹೊಂದಿರುವ ಕೈಗಾರಿಕೇತರ ಆರ್ಥಿಕ ವ್ಯವಸ್ಥೆ ಮತ್ತು ಸಮಾಜಗಳಿಗೆ ಮಾರ್ಕ್ಸ್‌ವಾದದ ಅನ್ವಯವೆಂದು ವ್ಯಾಖ್ಯಾನಿಸಲಾಗಿದೆ. ಲೆನಿನ್ ತನ್ನ ನೀತಿಯ ಸೈದ್ಧಾಂತಿಕ ಸಮರ್ಥನೆಗಿಂತಲೂ ಅದರ ಕಾರ್ಯಾಚರಣೆಯ ಬಗ್ಗೆ ಹೆಚ್ಚು ಆಸಕ್ತಿ ಹೊಂದಿದ್ದನು.

ಲೆನಿನ್ ಮಾರ್ಕ್ಸ್‌ನ ತತ್ವವನ್ನು ಆಧುನಿಕ ಕಾಲದ ಅವಶ್ಯಕತೆಗಳಿಗೆ ತಕ್ಕಂತೆ ಕಾಲೋಚಿತವಾಗಿ ಮಾರ್ಪಡಿಸಿದ್ದಾನೆ. ಇತ್ತೀಚಿನ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಮಾರ್ಕ್ಸ್‌ವಾದವನ್ನು ಲೆನಿನ್ ಪರಿಷ್ಕರಿಸಿದ್ದಾನೆ. ಆದ್ದರಿಂದಲೇ ಸ್ಟಾಲಿನ್‌ರವರು ಲೆನಿನ್ ತತ್ವವನ್ನು ಸಾಮ್ರಾಜ್ಯವಾದ ಮತ್ತು ಕಾರ್ಮಿಕರ ಕ್ರಾಂತಿಯ ಮಾರ್ಕ್ಸ್‌ವಾದದ ಯುಗವೆಂದು ವರ್ಣಿಸಿದ್ದಾರೆ.

ಕಮ್ಯುನಿಸ್ಟ್‌ಪಕ್ಷದ ಪಾತ್ರವನ್ನು ಲೆನಿನ್ ಈ ರೀತಿ ತಿಳಿಸಿದ್ದಾನೆ.

1. ಕಮ್ಯುನಿಸ್ಟ್ ಪಕ್ಷ ಶ್ರಮಜೀವಿಗಳ ಒಂದು ಮುಖ್ಯ ಭಾಗ. ಇದೊಂದೆ ತನ್ನ ವರ್ಗದ ಹಿತಸಾಧನೆಯ ಜಾಗೃತಿಯನ್ನು ಶ್ರಮಜೀವಿಗಳಲ್ಲಿ ಮೂಡಿಸಬಲ್ಲದು, ಇದೊಂದೇ ಕಾರ್ಯಸಾಧನೆಯ ಸಲುವಾಗಿ ಕ್ರಾಂತಿ ಉಳಿಸಬಲ್ಲದು.

2. ಈ ಪಕ್ಷದ ಸದಸ್ಯರಲ್ಲಿ ಗಣ್ಯರಾದವರನ್ನು ಇದರ ನಾಯಕರನ್ನಾಗಿ ಆರಿಸಲಾಗುವುದು. ಇವರಲ್ಲಿ ಕಾರ್ಮಿಕ ವರ್ಗದ ಹಿತ ಸಾಧಿಸಬೇಕೆಂಬ ಜ್ಞಾನವಿದೆ. ಪರೋಪಕಾರ ಬುದ್ಧಿ ಇದೆ. ತ್ಯಾಗ ಬುದ್ಧಿ ಇದೆ. ದೂರದೃಷ್ಟಿ ಇದೆ. ಆದ್ದರಿಂದಲೇ ಇವರು ನಾಯಕರಾಗಿರಲು ಅರ್ಹತೆ ಪಡೆದಿರುವರು.

3. ರಾಜ್ಯದ ಅಧಿಕಾರವನ್ನು ಶ್ರೀಮಂತರಿಂದ ಕಿತ್ತುಕೊಳ್ಳಲು ಸಮತಾವಾದಿ ಪಕ್ಷದ ಸಹಾಯ ಅತ್ಯಾವಶ್ಯಕ. ಶ್ರಮಜೀವಿಗಳಲ್ಲಿ ಗಣ್ಯರಾದವರನ್ನು ಆರಿಸಿ ಅವರಿಗೆ ಅಧಿಕಾರ ಸೂತ್ರ ವಹಿಸುವುದಕ್ಕೂ ಪಕ್ಷವೇ ಸಾಧನೋಪಾಯ. ಸಮಾಜ ಹೇಗೆ ಮುಂದುವರಿಯಬೇಕೆಂಬ ರೀತಿ ನೀತಿಗಳನ್ನು ಈ ಪಕ್ಷವೇ ನಿರ್ಧರಿಸಬಲ್ಲದು.

4. ಸಮತಾವಾದ ಪಕ್ಷಕ್ಕೆ ಸೇರಿದ ಸದಸ್ಯರು ಪಕ್ಷದ ನೀತಿಯನ್ನಾಗಲೀ ಸದಸ್ಯರ ವರ್ತನೆಯನ್ನಾಗಲೀ ಖಂಡಿಸಕೂಡದು. ಪಕ್ಷ ಒಂದು ಅಚ್ಚುಕಟ್ಟಾದ ಶತ್ರುಗಳು ಈ ಪಕ್ಷವನ್ನು ಸುತ್ತುವರಿದಿರುವುದರಿಂದ ಪಕ್ಷದ ಸದಸ್ಯರೆಲ್ಲರೂ ಒಮ್ಮತದಿಂದ ಸೌಹಾರ್ದದಿಂದ ವರ್ತಿಸಬೇಕು.

ಲೆನಿನ್ ಪಕ್ಷಕ್ಕೆ ಸರ್ವಶಕ್ತವಾದ ಸ್ಥಾನವನ್ನು ನೀಡಿ, ಪಕ್ಷದ ಕಾರ್ಮಿಕರ ಸರ್ವಾಧಿಕಾರತ್ವವನ್ನು ಆಚರಣೆಗೆ ತರಲು ಅಸಾಧ್ಯವೆಂದು ಹೇಳಿದ್ದಾನೆ. ಸರ್ಕಾರದ ನೀತಿಯನ್ನು ನಿರ್ಧರಿಸುವುದೂ, ಕಲೆ, ವಿಜ್ಞಾನ, ಆರ್ಥಿಕ, ಸಾಹಿತ್ಯ ಮುಂತಾದ ಕ್ಷೇತ್ರಗಳಲ್ಲಿನ ವಿಚಾರಗಳನ್ನು ನಿರ್ಧರಿಸುವುದೂ ಪಕ್ಷವೇ ಆಗಿದೆ. ಪಕ್ಷದ ಸಂಘಟನೆಯ ಅಥವಾ ವ್ಯವಸ್ಥೆಯ ಬಗ್ಗೆ ಲೆನಿನ್ ಪ್ರಜಾಸತ್ತಾತ್ಮಕ ಕೇಂದ್ರೀಕರಣ ತತ್ವವನ್ನು ಪ್ರತಿಪಾದಿಸಿದ್ದಾನೆ. ಅಂದರೆ

* ಕೆಳಹಂತದಿಂದ ಮೇಲಿನ ಹಂತದವರೆಗಿನ ಎಲ್ಲ ಪಕ್ಷ ಮಂಡಳಿಗಳ ಚುನಾವಣೆ.
* ಪಕ್ಷಮಂಡಳಿಗಳು ಪಕ್ಷದ ಸಂಘಟನೆಗೆ ಹೊಣೆಯಾಗಿರುವುದು
* ಪಕ್ಷದಲ್ಲಿ ಕಟ್ಟುನಿಟ್ಟಿನ ಶಿಸ್ತು ಮತ್ತು ಅಲ್ಪಸಂಖ್ಯಾತರು ಬಹುಸಂಖ್ಯಾತರಿಗೆ ಅಧೀನತೆ ಹಾಗೂ
* ಅಧೀನ ಮಂಡಳಿಗಳು ವರಿಷ್ಠ ಮಂಡಳಿಗಳಿಗೆ ಬೇಷರತ್ತಾಗಿ ವಿಧೇಯತೆಯಿಂದಿರುವುದು

ಲೆನಿನ್ನರು ಪಕ್ಷದ ಸದಸ್ಯತ್ವವನ್ನು ಮಾರ್ಕ್ಸಿಸ್ಟ್-ಲೆನಿನ್‌ವಾದದಲ್ಲಿ ನಿಷ್ಠೆಯಿರುವವರಿಗೆ ಮಾತ್ರ ಸೀಮಿತಗೊಳಿಸಿ. ಅವರು ಮಾರ್ಕ್ಸಿಸ್ಟ್-ಲೆನಿನ್ ತತ್ವಕ್ಕಾಗಿ ಯಾವ ತ್ಯಾಗಕ್ಕಾದರೂ ಸಿದ್ಧರಾಗಿರಬೇಕೆಂದು ತಿಳಿಸಿದ್ದಾನೆ. ಪಕ್ಷದ ಸದಸ್ಯರು ಜನ ಸಮೂಹಕ್ಕೆ ಸರಿಯಾದ ಮಾರ್ಗದರ್ಶನ ನೀಡಿ, ಅವರಲ್ಲಿ ಶಿಸ್ತಿನ ಜೀವನವನ್ನುಂಟು ಮಾಡಬೇಕು. ಜನರ ಕಲ್ಯಾಣದ ಬಗ್ಗೆ ಅಗತ್ಯವಾದ ಕಾರ್ಯಕ್ರಮಗಳನ್ನು ರೂಪಿಸಬೇಕೆಂದು ಪಕ್ಷದ ಸದಸ್ಯರಿಗೆ ಕರೆಕೊಟ್ಟಿದ್ದಾನೆ. ಪಕ್ಷದ ಸದಸ್ಯರು ಕೇವಲ ತಮ್ಮ ಒಳಿತಿಗೆ ಕೆಲಸ ಮಾಡದೆ, ಸದಸ್ಯರಲ್ಲದವರ ಒಳಿತಿಗೂ ಕೆಲಸ ಮಾಡಬೇಕೆಂದು ಹೇಳಿದ್ದಾನೆ. ಪಕ್ಷದ ಸದಸ್ಯರಲ್ಲದವರ ವಿಶ್ವಾಸವನ್ನು ಗಳಿಸಿ ಪಕ್ಷದಲ್ಲಿ ಒಂದುರೀತಿಯ ಸೌಹಾರ್ದತೆಯ ವಾತಾವರಣವನ್ನುಂಟು ಮಾಡಬೇಕೆಂದು ಲೆನಿನ್ ತಿಳಿಸಿದ್ದಾರೆ.

ಕ್ರಾಂತಿಯನ್ನುಂಟು ಮಾಡಿ, ಅದರಿಂದಾಗುವ ಪರಿಣಾಮಗಳನ್ನು ಕಾಯ್ದುಕೊಂಡು ಹೋಗುವಂತಹ ಬಲಿಷ್ಠವಾದ ಪಕ್ಷ ವ್ಯವಸ್ಥೆಯನ್ನು ಲೆನಿನ್ನರು ಬೆಂಬಲಿಸಿದ್ದಾರೆ. ಇಂತಹ ಉತ್ತಮ ಸಂಘಟನೆ ಬರಬೇಕಾದರೆ, ಪಕ್ಷದ ಸದಸ್ಯರಲ್ಲಿ ಕಟ್ಟುನಿಟ್ಟಾದ ಶಿಸ್ತು ಅತ್ಯಾವಶ್ಯಕ. ಪಕ್ಷದ ಯಾವ ಸದಸ್ಯನೇ ಆಗಲಿ ಪಕ್ಷದ ವರಿಷ್ಠರಿಗೆ ನಿಷ್ಠೆಯನ್ನು ನಿರಾಕರಿಸಬಾರದು ಮತ್ತು ಎಲ್ಲ ಸದಸ್ಯರು ಪಕ್ಷದ ಧ್ಯೇಯ ಧೋರಣೆಗನುಗುಣವಾಗಿ ನಡೆಯಬೇಕೆಂದು ಲೆನಿನ್ ಹೇಳಿದ್ದಾನೆ. ಜನರಲ್ಲಿ ಶಿಸ್ತನ್ನು ಮೂಡಿಸಲು, ಪಕ್ಷದ ಸದಸ್ಯರಲ್ಲಿ ಕಟ್ಟುನಿಟ್ಟಿನ ಶಿಸ್ತು ಅತ್ಯಾವಶ್ಯಕ, ಏಕೆಂದರೆ ಕೇವಲ ಶಿಸ್ತಿನ ರಾಷ್ಟ್ರ ಮಾತ್ರ ಪ್ರಗತಿ ಹೊಂದಲು ಸಾಧ್ಯವೆಂದು ಲೆನಿನ್ ತಿಳಿಸಿರುವರು.

## 22.4 ಕುಸಿತಕ್ಕೆ ಹಿಂದಿನ ಸೋವಿಯತ್ ರಷ್ಯಾ

ಝಾರಿಸ್ಟ್ ದೊರೆಗಳ ದುರಾಡಳಿತದಲ್ಲಿ ಅತ್ಯಂತ ಹಿಂದುಳಿದ ರಾಷ್ಟ್ರವಾಗಿದ್ದ ರಷ್ಯಾ ದೇಶದಲ್ಲಿ ಬೋಲ್ಶೆವಿಕ್ ಕ್ರಾಂತಿಯು 1917ರ ಅಕ್ಟೋಬರ್ ಕ್ರಾಂತಿ ಎಂದು ಕರೆಯಲ್ಪಡುತ್ತದೆ. ಸೋವಿಯತ್ ಒಕ್ಕೂಟದ ಪಿತಾಮಹ ಲೆನಿನ್ (1870-1924)ರ ನಾಯಕತ್ವದಲ್ಲಿ ಸ್ಥಾಪಿತವಾದ ಸೋವಿಯತ್ ಸಮತಾವಾದ, ಇಪ್ಪತ್ತನೆಯ ಶತಮಾನದ ಪ್ರಮುಖ ಬೆಳವಣಿಗೆಗಳಲ್ಲಿ ಗಮನಾರ್ಹ ಘಟನೆಯಾಗಿದೆ. ಲೆನಿನ್ ಅವರು ರಷ್ಯಾದ ಪರಿಸ್ಥಿತಿಗೆ ಹೊಂದಿಕೊಳ್ಳುವಂತೆ ಮಾರ್ಕ್ಸ್‌ವಾದವನ್ನು ಮರು ವ್ಯಾಖ್ಯಾನ ಮಾಡಿದರು. ಜಾರ್ಜ್ ಎಚ್. ಸಬೈನ್‌ರ ಪ್ರಕಾರ, ಲೆನಿನ್‌ರ ಅಪೂರ್ವ ಕೊಡುಗೆಗಳೆಂದರೆ, ಕ್ರಾಂತಿಯ ಸಿದ್ಧಾಂತ, ಸಂಘಟನೆ, ಪಕ್ಷ ಮತ್ತು

ನಾಯಕತ್ವ. ಇವೆಲ್ಲವೂ ಅತ್ಯಾವಶ್ಯಕವಾಗಿ, ಅನುಭವ ಜನ್ಯ ತತ್ವಗಳಾಗಿ, ಅಂದಿನ ರಷ್ಯಾದ ಸಮಸ್ಯೆಗಳಿಗೆ ಪರಿಹಾರ ಒದಗಿಸಲು ಸೂಕ್ತವಾಗಿದ್ದವು. ಅವರು ಅನುಸರಿಸಿದ ನೀತಿ ಮತ್ತು ಕಾರ್ಯಕ್ರಮಗಳಿಂದ ಸೋವಿಯತ್ ರಷ್ಯಾದಲ್ಲಿ ಜಗತ್ತಿನ ಮೊದಲ ಸಮಾಜವಾದಿ ರಾಜ್ಯ ಸ್ಥಾಪನೆಯಾಯಿತು.

1927ರ ನಂತರ ಜೋಸೆಫ್ ಸ್ಟಾಲಿನ್ ನೇತೃತ್ವದ ಸೋವಿಯತ್ ರಷ್ಯಾದಲ್ಲಿ (ಅಂಧಶ್ರದ್ಧೆಯ) ಸಮತಾವಾದಿ ತತ್ವಗಳನ್ನು ಬಳಸಿಕೊಂಡು ಆಧುನಿಕ ರಷ್ಯಾದ ನಿರ್ಮಾಣ ಕಾರ್ಯ ಪ್ರಾರಂಭವಾಯಿತು. ಲೆನಿನ್‌ವಾದದ ಹಿನ್ನೆಲೆಯಲ್ಲಿ ವಿಜೃಂಭಿಸಿದ ಸ್ಟಾಲಿನ್‌ವಾದ, ಸೋವಿಯತ್ ರಷ್ಯಾದ ರಾಷ್ಟ್ರೀಯವಾದ ಮತ್ತು ಸೋವಿಯತ್ ಸಮತಾವಾದ, ಜಗತ್ತಿನಲ್ಲಿ ಎರಡನೆಯ ಮಹಾಯುದ್ಧದ ನಂತರ ಬಂಡವಾಳಶಾಹಿ ವ್ಯವಸ್ಥೆಗೆ ಸವಾಲೊಡ್ಡಿದ ಬೃಹತ್ ಬಣವನ್ನು ನಿರ್ಮಾಣ ಮಾಡಿದವು.

1953ರಲ್ಲಿ ಅಧಿಕಾರಕ್ಕೆ ಬಂದ ನಿಕಿಟಾ ಕೃಶ್ಚೇವ್ ಶೀತಲಯುದ್ಧದ ಮಹಾಸೇನಾನಿಯಾಗಿದ್ದರೂ, ಆಧುನಿಕ ರಷ್ಯಾದ ಪ್ರಭಾವವನ್ನು ಇತರ ರಾಷ್ಟ್ರಗಳ ಮೇಲೆ ಬೀರಲು ಸತತವಾಗಿ ಪ್ರಯತ್ನಿಸಿದರು. ಸೋವಿಯತ್ ಸಮತಾವಾದಿ ವ್ಯವಸ್ಥೆಯನ್ನು ಮುಂದುವರೆಸಲು ಅವರು ಕೈಗೊಂಡ ಕ್ರಮಗಳು ನಿರೀಕ್ಷಿಸಿದ ಸಫಲತೆ ನೀಡದಿದ್ದಾಗ ಸೋವಿಯತ್ ರಷ್ಯಾದ ಕಮ್ಯುನಿಸ್ಟ್ ಪಕ್ಷವು ನೂತನ ನಾಯಕ ಲಿಯೊನಿಡ್ ಬ್ರೆಝ್ನೇವ್ ನೇತೃತ್ವದಲ್ಲಿ ನಿಕಿಟಾ ಕೃಶ್ಚೇವ್‌ರನ್ನು ಪದಚ್ಯುತಗೊಳಿಸಿ, ರಷ್ಯಾದ ಸಮಸ್ಯೆಗಳಿಗೆ ಸ್ಪಂದಿಸಲು ಸನ್ನದ್ಧವಾಯಿತು.

ಸೋವಿಯತ್ ರಷ್ಯಾದಲ್ಲಿ ಸಮತಾವಾದವು ಕುಸಿಯುವಂತಾಗಲು, ಬ್ರೆಝ್ನೇಬ್ ಅನುಸರಿಸಿದ ನೀತಿ ಮತ್ತು ಕಾರ್ಯಕ್ರಮಗಳು ಕಾರಣವಾಯಿತೆಂದು ತಜ್ಞರು ಅಭಿಪ್ರಾಯ ಪಟ್ಟಿದ್ದರೂ ಆಶ್ಚರ್ಯಕರ ಬೆಳವಣಿಗೆಗಳಿಂದ, ಸೋವಿಯತ್ ಸಮಾಜದಲ್ಲಿ ಭ್ರಷ್ಟಾಚಾರ ಹಾಗೂ ಹಲವಾರು ಸಾಮಾಜಿಕ ಪಿಡುಗುಗಳು ತಲೆದೋರಿದವು. ಸೈದ್ಧಾಂತಿಕ ಅನಮ್ಯತೆ, ಸರ್ವಾಧಿಕಾರಿ ಪ್ರವೃತ್ತಿ, ಜನತೆಯ ನಿರೀಕ್ಷೆಗಳಲ್ಲಿ ಹೆಚ್ಚಳ, ಜೀವನದ ಸುಖ ಭೋಗಗಳ ಬಗ್ಗೆ ಜನತೆಯ ಒಲವು, ಪಾಶ್ಚಿಮಾತ್ಯ ಜಗತ್ತಿನಲ್ಲಿ ವಿಜೃಂಭಿಸುತ್ತಿದ್ದ ಉದಾರವಾದ ವ್ಯವಸ್ಥೆಯ ಆಕರ್ಷಣೆಗಳ ಸೆಳೆತಕ್ಕೆ ಒಳಗಾದ ಸೋವಿಯತ್ ರಷ್ಯಾ, ಬ್ರೆಝ್ನೇವ್ ನಾಯಕತ್ವದಲ್ಲಿ ಭ್ರಮನಿರಸನ ಹೊಂದಿತು.

ಸೋವಿಯತ್ ರಷ್ಯಾದ ಪದ್ಧತಿಯಲ್ಲಿ, ಗ್ಲಾಸ್‌ನಾಸ್ಟ್ (ಮುಕ್ತ ವಾತಾವರಣ) ಮತ್ತು ಪೆರಿಸ್ಟ್ರೋಯ್ಕ ಮಂತ್ರಗಳನ್ನು ಪಠಿಸಿದ ಮಿಖಾಯಿಲ್ ಗೋರ್ಬಚೆವ್ ಸಮತಾವಾದದ ಪುನರುತ್ಥಾನಕ್ಕೆ ತೆಗೆದುಕೊಂಡ ಕ್ರಮಗಳು, ಸೋವಿಯತ್ ರಷ್ಯಾದ ವಿಘಟನೆಗೆ ಕಳೆದ ಶತಮಾನದ ಕೊನೆಯ ದಶಕದಲ್ಲಿ ಕಾರಣವಾದದ್ದು. ಸಮಕಾಲೀನ ರಾಜಕೀಯ ಪಂಥಗಳ ಬೆಳವಣಿಗೆಯಲ್ಲಿ ಪ್ರಮುಖ ದಾಖಲೆಯಾಗಿದೆ. ಸೋವಿಯತ್ ರಷ್ಯಾದಲ್ಲಿ ಸಮತಾವಾದ ಕುಸಿಯಿತೆ? ಎಂಬ ಪ್ರಶ್ನೆ ಯಕ್ಷಪ್ರಶ್ನೆಯಾಗಿ ಉಳಿದಿದೆ. ಇದರೊಂದಿಗೆ ಇನ್ನೊಂದು ಪ್ರಮುಖ ಪ್ರಶ್ನೆಯೂ ರಾಜಕೀಯ ಸಿದ್ಧಾಂತದಲ್ಲಿ ಚರ್ಚೆಗೆ ಒಳಗಾಗುತ್ತಲೇ ಇದೆ. ಅದೆಂದರೆ ರಷ್ಯಾದಲ್ಲಿ ಇದ್ದುದು ಸಮತಾವಾದವೇ ಸೋವಿಯತ್ ವ್ಯವಸ್ಥೆಯ ಕುಸಿತದ ಬಗ್ಗೆ ಹಲವಾರು ಸಿದ್ಧಾಂತಗಳನ್ನು ಮಂಡಿಸಲಾಗಿದೆ.

1991 ರ ಡಿಸೆಂಬರ್ ತಿಂಗಳಿನಲ್ಲಿ ಸೋವಿಯತ್ ಒಕ್ಕೂಟ ವಿಘಟಿತವಾದದ್ದು ನಿಜವಾಗಿಯೂ ಯುಗಾಂತರ ಮಹತ್ವದಿಂದ ಕೂಡಿದೆ. ಸೋವಿಯತ್ ರಷ್ಯಾದಲ್ಲಿ ಕುಸಿತಕ್ಕೆ ಒಳಗಾದದ್ದು, ಕೇವಲ ಒಂದು ಆಳ್ವಿಕೆಯ ಪದ್ಧತಿಯಾಗಿರದೆ, ಮಹತ್ವಾಕಾಂಕ್ಷೆಯ ದೃಷ್ಟಿಯಿಂದ ಜಗತ್ತನ್ನೇ ಪುನರ್ ರಚಿಸುವ ಅಸಾಮಾನ್ಯ ಸಾಮಾಜಿಕ ಮತ್ತು ರಾಜಕೀಯ ವ್ಯವಸ್ಥೆಯ ಕುಸಿತವೇ ಅದಾಗಿತ್ತು. ಐತಿಹಾಸಿಕವಾಗಿ ಹಾಗೂ ರಾಜಕೀಯವಾಗಿ, ಈ ಮಹತ್ವದ ಘಟನೆಯ ವಿಶ್ಲೇಷಣೆಯಿಂದ ವಿಜ್ಞಾನ ಮತ್ತು ರಾಜಕೀಯ ಪಂಥಗಳ ಪರಸ್ಪರ ಪ್ರಭಾವದಿಂದ ಉಂಟಾಗುವ ವಿಭಿನ್ನ ರಾಜಕೀಯ ಪ್ರಕ್ರಿಯೆಗಳನ್ನು ಅರಿತುಕೊಳ್ಳಲು ಪ್ರಯತ್ನಿಸಬಹುದು. ಹಾಗೆಯೇ, ಸೋವಿಯತ್ ಒಕ್ಕೂಟದಲ್ಲಿ ಕುಸಿತಕ್ಕೆ ಏನು ಒಳಗಾಯಿತು ಎಂಬುದನ್ನು ಘಟನೆಯ ವಿಶಾಲ ರಾಜಕೀಯ ಸಂದರ್ಭದ ಹಿನ್ನೆಲೆಯಲ್ಲಿ ಉತ್ತಮವಾಗಿ ಗ್ರಹಿಸಲು ಸಾಧ್ಯವಾಗುತ್ತದೆ.

## 22.5 ರಷ್ಯಾದ ಸಮತಾವಾದದ ಕುರಿತ

ಸುಮಾರು ಏಳೂವರೆ ದಶಕಗಳ ಅವಧಿಯಲ್ಲಿ ಸೋವಿಯತ್ ಒಕ್ಕೂಟ ಹಲವಾರು ಸಿದ್ಧಾಂತಿಗಳನ್ನು ತನ್ನೆಡೆಗೆ ಸೆಳೆದಿತ್ತು. ಅವರೆಲ್ಲಾ ವೈಜ್ಞಾನಿಕ ಕುತೂಹಲ ಹಾಗೂ ಪಂಥೀಯ ಸೆಳೆತಗಳಿಂದ ಅದರ ಉಗಮ, ಬೆಳವಣಿಗೆ ಮುಂತಾದವುಗಳನ್ನು ಅಧ್ಯಯನ ಮಾಡುತ್ತಿದ್ದರು. ಅಮೆರಿಕ ಸಂಯುಕ್ತ ಸಂಸ್ಥಾನಗಳು, ಯುರೋಪ್ ಹಾಗೂ ವಿಶ್ವದ ಮೂರನೆಯ ಜಗತ್ತಿನ ರಾಷ್ಟ್ರಗಳಲ್ಲಿ ಸೋವಿಯತ್ ರಷ್ಯಾದ ತಜ್ಞರ ಗುಂಪುಗಳು ಮತ್ತು ಸಂಶೋಧನಾ ಸಂಸ್ಥೆಗಳು ಅಗಾಧವಾಗಿ ಬೆಳೆಯುತ್ತಿದ್ದ ಅದರ ಮಿಲಿಟರಿ ಹಾಗೂ ಅಂತರರಾ,ಟ್ರೀಯ ಸ್ಥಾನಮಾನಗಳನ್ನು ಅಧ್ಯಯನ ಮಾಡುತ್ತಿದ್ದವು. ಇಂತಹ ಪ್ರಯತ್ನಗಳಿಂದ ಬೆಳಕಿಗೆ ಬಂದ ಸಾಹಿತ್ಯ ಮಹಾಪೂರವನ್ನು ಸ್ಥೂಲವಾಗಿ ಎರಡು ಗುಂಪುಗಳಾಗಿ ವಿಂಗಡಿಸಬಹುದು.

1. ಸೋವಿಯತ್ ಒಕ್ಕೂಟದ ವೈಜ್ಞಾನಿಕ ವಾದ

2. ವಾಮಪಂಥೀಯ ಚಿಂತನೆ

ಪಾಶ್ಚಿಮಾತ್ಯ ಜಗತ್ತಿನಲ್ಲಿ ಸೋವಿಯತ್ ಒಕ್ಕೂಟದ ಶೈಕ್ಷಣಿಕ ಅಧ್ಯಯನ ಕೇಂದ್ರಗಳಿಂದ ಪ್ರಕಟವಾದರೆ, ಎರಡನೆಯದು, ಮಾರ್ಕ್ಸ್‌ವಾದಿ ಬುದ್ಧಿಜೀವಿಗಳು ಮತ್ತು ಸಮತಾವಾದಿ ನೆಲೆಯಿಂದ ಹೊರಹೊಮ್ಮಿತ್ತು.

### 22.5.1 ಸೋವಿಯತ್ ಒಕ್ಕೂಟದ ವೈಜ್ಞಾನಿಕ ವಾದ

ಇಲ್ಲಿ ಸೋವಿಯತ್ ವ್ಯವಸ್ಥೆಯ ಸಿದ್ಧಾಂತವನ್ನು ವ್ಯವಸ್ಥೆಯ ರಚನೆ ಮತ್ತು ಕಾರ್ಯಾಚರಣೆ ಹಾಗೂ ವ್ಯವಸ್ಥೆಯಲ್ಲಿನ ಮೂಲಗಳು ಮತ್ತು ಬದಲಾವಣೆಯ ಸಾಧ್ಯತೆಗಳ ಕಡೆಗೆ ಗಮನ ಹರಿಸುವುದರ ಮೂಲಕ ಉತ್ತಮ ಅರಿವು ಪಡೆಯುವ ಬೌದ್ಧಿಕ ರಚನೆ ಎನ್ನುವ ಅರ್ಥದಲ್ಲಿ ಬಳಸಲಾಗಿದೆ.

ಸೋವಿಯತ್ ಒಕ್ಕೂಟಶಾಸ್ತ್ರ ಎನ್ನುವುದು, ಪ್ರಸ್ತುತ ರಾಜಕೀಯವಾಗಿ ಮಹತ್ವಪೂರ್ಣವೆನ್ನಿಸುವ ಸೋವಿಯತ್ ಸಮತಾವಾದಿ ವರ್ತನೆ ಮತ್ತು ಭವಿಷ್ಯತ್ಕಾಲದಲ್ಲಿ ಉಂಟಾಗುವ ಬೆಳವಣಿಗೆಗಳಿಗೆ ಸಂಬಂಧಿಸಿದ ಸಕಲ ವಿಷಯಗಳನ್ನು ಅರಿತುಕೊಳ್ಳಲು ಸಹಾಯಕವಾಗುವ ಅಧ್ಯಯನ. ಇಂತಹ ಅಧ್ಯಯನಶಾಸ್ತ್ರವು ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಸಾಂಸ್ಥಿಕ ರೂಪ ಪಡೆದಿದ್ದರಿಂದ, ಎರಡನೆಯ ಮಹಾಯುದ್ಧದ ನಂತರದ ಸೋವಿಯತ್ ಒಕ್ಕೂಟದ ವಿರೋಧಿಗಳ ಮಿಶ್ರ ಬಣ ವ್ಯವಸ್ಥಿತವಾಗಿ ತನ್ನ ವೈರಿಯನ್ನು ಎದುರಿಸಲು ನೆರವಾಯಿತು.

ಮೊಟ್ಟಮೊದಲ ಮಹತ್ವಪೂರ್ಣ ಮತ್ತು ಪ್ರಭಾವಶಾಲಿ ಸೋವಿಯತ್ ಒಕ್ಕೂಟ ಶಾಸ್ತ್ರದ ಸಿದ್ಧಾಂತವನ್ನು 1950ರ ದಶಕದ ಮಧ್ಯದಲ್ಲಿ ಕಾರ್ಲ್ ಫ್ರೆಡರಿಕ್ ಮತ್ತು ಝಿಬಿಗ್ನ್ಯೂ ಬ್ರೆಝಿನ್‌ಸ್ಕಿ ಪ್ರತಿಪಾದಿಸಿದರು. ಅವರ ಪ್ರಕಾರ, ಸೋವಿಯತ್ ಒಕ್ಕೂಟವು ಟೋಟಾಲಿಟೇರಿಯನ್ ವ್ಯವಸ್ಥೆ ಎಂದರೆ, ವ್ಯಕ್ತಿ ಮತ್ತು ಸಂಘ ಸಂಸ್ಥೆಗಳ ಮೇಲೆ ಸಂಪೂರ್ಣವಾಗಿ ರಾಜ್ಯದ ನಿರಂಕುಶಾಧಿಕಾರ ಚಲಾಯಿಸುವ ವ್ಯವಸ್ತೆ. ಇಂತಹ ವ್ಯವಸ್ಥೆಯ ಲಕ್ಷಣಗಳು ಕೆಳಕಂಡಂತಿರುತ್ತವೆ.

* ಜಗತ್ತಿನ ಆಕ್ರಮಿಸುವ ಒಂದು ವ್ಯಾಪಕವಾದ ಅಧಿಕೃತ ಪಂಥ,

* ಸರ್ವಾಧಿಕಾರಿಯೊರ್ವನ ನಾಯಕತ್ವದಲ್ಲಿರುವ ಜನಸ್ತೋಮವಿರುವ ಅಕೈಕ ರಾಜಕೀಯ ಪಕ್ಷ

* ಸಾಂಸ್ಥೀಕರಣಗೊಂಡ ಭಯೋತ್ಪಾದನೆ,

* ಮಾಹಿತಿ ಮೇಲಿನ ಏಕಸ್ವಾಮ್ಯತೆ ಮತ್ತು

* ಒಂದೇ ಕೇಂದ್ರನಿಯಂತ್ರಣದ ಆರ್ಥಿಕ ವ್ಯವಸ್ಥೆ

ಸ್ಟಾಲಿನ್ ಕಾಲದ ಸೋವಿಯತ್ ಒಕ್ಕೂಟವನ್ನು ಪ್ರತಿಬಿಂಬಿಸುವ ಈ ಸಿದ್ಧಾಂತವು ವಿಶ್ಲೇಷಣಾತ್ಮಕ ಸಾಧನವಾಗಿ ಉಪಯುಕ್ತವಾಗಲಾರದೆಂದು, ಸೋವಿಯತ್ ಒಕ್ಕೂಟ ಶಾಸ್ತ್ರಜ್ಞರು ಮನಗೊಂಡು, ಅದರ ಆಂತರಿಕ ವೈರುಧ್ಯಗಳಿಂದಾಗಿ ಮುಂದುವರೆಸಲು ಯೋಗ್ಯವಲ್ಲವೆಂದು ಭಾವಿಸಿದರೂ ಅದನ್ನು ಸಂಪೂರ್ಣವಾಗಿ ತಿರಸ್ಕರಿಸಲಿಲ್ಲ.

ಸೋವಿಯತ್ ಒಕ್ಕೂಟವನ್ನು ನಿರ್ದೇಶಿತ ಸಮಾಜ ಎಂದು ಪ್ರತಿಪಾದಿಸುವ ಸಿದ್ಧಾಂತಗಳು ಅಸ್ತಿತ್ವಕ್ಕೆ ಬಂದವು. ಹಾಗ್ ಮತ್ತು ಮರ್ಲ್ ಫೈನ್ಸಾಡ್ ಅವರು ಸ್ವಯಂ ನೇಮಕಾತಿಗೊಂಡ ನೌಕರಶಾಹಿ, ಮೇಲಿನಿಂದ ನಿಯಂತ್ರಿಸುವ ವ್ಯವಸ್ಥೆ ಎಂದು ಸೋವಿಯತ್ ಒಕ್ಕೂಟವನ್ನು ವರ್ಣಿಸಿದರು. ಅವರು ತಮ್ಮ ಹೆಚ್ಚಿನ ಯೋಜನೆಯಲ್ಲಿ ವೈಚಾರಿಕತೆ, ಕಡಿತಗೊಂಡ ಅನಮ್ಯತೆ ಮತ್ತು ಭಯೋತ್ಪಾದನೆಯ ಮೇಲಿನ ಅವಲಂಬನೆಯನ್ನು ಮೊಟಕುಗೊಳಿಸುವಂತಹ ಬದಲಾವಣೆಗಳನ್ನು ಸೋವಿಯತ್ ವ್ಯವಸ್ಥೆಯಲ್ಲಿ ಅಳವಡಿಸುವುದರ ಮೂಲಕ, ಸರ್ವವ್ಯಾಪಿ ನಿರಂಕುಶ ವ್ಯವಸ್ಥೆಯನ್ನು ಒಂದಷ್ಟು ಪರಿಷ್ಕರಣೆ ಮಾಡಿದರು. ಹೀಗೆ, ಈ ಸಿದ್ಧಾಂತಿಗಳ ಪ್ರಯತ್ನವು ಅಲ್ಪ ಪ್ರಮಾಣದ ಸರಿಪಡಿಸುವಿಕೆ ಉಂಟುಮಾಡುವುದರಲ್ಲಿ ಸಫಲವಾಯಿತು.

ಕಾರ್ನೆಲ್ ಮತ್ತು ಇತರರು ಸೋವಿಯತ್ ಒಕ್ಕೂಟವನ್ನು ಅಭಿವೃದ್ಧಿಯ ದೃಷ್ಟಿಯಿಂದ ರಚನೆಗೊಂಡ ಘಟಕವೆಂದು ಪರಿಗಣಿಸಿದ್ದು, ಸರ್ವವ್ಯಾಪಿ ನಿರಂಕುಶ ವ್ಯವಸ್ಥೆಯಿಂದ ತೀರ ವಿಭಿನ್ನವಾದ ಸಿದ್ಧಾಂತವಾಯಿತು. ಇಂತಹ ಸಿದ್ಧಾಂತಗಳಲ್ಲಿ ಒಂದು ಬಗೆಯ ಸಿದ್ಧಾಂತವು ಸೋವಿಯತ್ ಸಮಾಜವಾದಿ ಗಣರಾಜ್ಯಗಳ ಒಕ್ಕೂಟವನ್ನು ವಿಶ್ವದ ಮೂರನೆಯ ರಾಷ್ಟ್ರಗಳ ಸಾಲಿಗೆ ಸೇರುವ ಅಭಿವೃದ್ಧಿಶೀಲ ಸಮಾಜಗಳ ಗುಂಪಿಗೆ ಸೇರಿಸಲು ಬಳಸಿದ ಸಮಾನ ಸಮರ್ಥನೆಯ ಅಂಶಗಳೆಂದರೆ, ತ್ವರಿತ ಆರ್ಥಿಕ ಬೆಳವಣಿಗೆ ಸಾಧಿಸುವ ಅಗತ್ಯ, ಹೆಚ್ಚಿನ ವೈವಿಧ್ಯತೆಯ ನಡುವೆ ರಾಷ್ಟ್ರ ನಿರ್ಮಾಣ, ಶಿಕ್ಷಣದ ಹರವು ಮತ್ತು ವೈಜ್ಞಾನಿಕ ಆಧುನೀಕರಣ.

ಮತ್ತೊಂದು ಬಗೆಯ ಸಿದ್ಧಾಂತವು ಸೋವಿಯತ್ ಒಕ್ಕೂಟವನ್ನು ಅಭಿವೃದ್ಧಿ ಹೊಂದಿದ ಪಾಶ್ಚಿಮಾತ್ಯ ರಾಷ್ಟ್ರಗಲ ಕೈಗಾರಿಕಾ ಸಮಾಜಗಳ ಸಾಲಿನಲ್ಲಿ ನೆಲೆಗೊಳಿಸಿತು. ಇಂತಹ ವೈರುಧ್ಯಗಳುಳ್ಳ ವ್ಯವಸ್ಥೆಗಳನ್ನು ಕೆಳಕಂಡ ಆಯಾಮಗಳಿಗೆ ಸಂಬಂಧಿಸಿದಂತೆ ಒಂದುಗೂಡುತ್ತಿವೆ ಎಂದು ಹೇಳಲಾಯಿತು.

* ಹೆಚ್ಚಳಗೊಂಡ ಶಕ್ತಿಯ ವಿಘಟನೆ (ಡಿಫ್ಯೂಜನ್) ಅಧಿಕಗೊಂಡ ಅವಕಾಶಗಳ ಸಮಾನತೆ ಮತ್ತು ಸಾಮಾಜಿಕ ಮುನ್ನಡೆ (ಮೊಬಿಲಿಟಿ) ಆದರ್ಶಾತ್ಮಕ ಪಂಥಕ್ಕೆ ಬದಲಾಗಿ ವಾಸ್ತವಿಕತೆಗೆ ಪ್ರಥಮಿಕ ಪ್ರಾಶಸ್ತ್ಯ)

* ಕಾನೂನಿನ ಮೌಲ್ಯಗಳ ಸಾಂಸ್ಥೀಕರಣ, ನೌಕರಶಾಹಿ ಪದ್ಧತಿಯ ಪ್ರತಿಷ್ಠಾಪನೆ, ನಗರೀಕರಣ ಮತ್ತು ಹಸ್ತಕ್ಷೇಪ ಮಾಡುವ ಸರ್ಕಾರ.

ಮೊದಲು ಪ್ರತಿಪಾದಿಸಿದ ಸಿದ್ಧಾಂತಗಳು ಸೋವಿಯತ್ ಒಕ್ಕೂಟದ ಅಸಾಮಾನ್ಯತೆಯನ್ನು ಒತ್ತಿ ಹೇಳಿದರೆ, ಅಭಿವೃದ್ಧಿ ಸಿದ್ಧಾಂತಗಳು ಪ್ರಮುಖ ಸಾಮಾಜಿಕ ಆರ್ಥಿಕ ಮತ್ತು ರಾಜಕೀಯ ಸೂಚ್ಯಾಂಕಗಳ ಆಧಾರದ ಮೇಲೆ ಸಮಾಜದ ನಡುವಣ ಕೆಲವು ಹೋಲಿಕೆಗಳನ್ನು ಎತ್ತಿ ಹಿಡಿದವು. ಇದು ಪ್ರಗತಿಪರ ವ್ಯಾಖ್ಯಾನವಾದರೂ, ಹೋಲಿಕೆಗಳ(ಏಕಮುಖ) ಪಾಕ್ಷಿಕತೆಯಿಂದಾಗಿ ಸೋವಿಯತ್ ವ್ಯವಸ್ಥೆಯ ವೈಶಿಷ್ಟ್ಯತೆಯನ್ನು ಮಸಕುಗೊಳಿಸಿತು. ಇದಲ್ಲದೆ, ಇಂತಹ ಹೋಲಿಕೆಗಳು ನಕಲಿ ಮತ್ತು ದಾರಿ ತಪ್ಪಿಸುವ ಹೋಲಿಕೆಗಳಾಗುವುದೇ ಹೆಚ್ಚಾಗಿತ್ತು. ಮೇಲಾಗಿ ಅವು ಅಸಮರ್ಪಕತೆಯಿಂದಲೂ ದೂರವಾಗಿರಲಿಲ್ಲ.

1970 ರ ದಶಕದ ನಂತರದ ಅವಧಿಯಲ್ಲಿ, ಸಂಕೀರ್ಣವಾದ, ನಿಯಮಗಳ ಅಧಿಪತ್ಯವಿರುವ ಮತ್ತು ಸ್ಥಿರವಾದ ಸೋವಿಯತ್ ಸಂಸ್ಥೆಯ ಸುಂದರ ವಿನ್ಯಾಸವುಳ್ಳ ವಿತರಣೆಗಳಿಂದಾಗಿ, ಜನಪ್ರಿಯವಾದ ಬಹುತ್ವವಾದಿ ಸಿದ್ಧಾಂತಗಳು ಅಸ್ತಿತ್ವಕ್ಕೆ ಬಂದವು. ವಿಶಿಷ್ಟವಾದ ಸಚಿವರು - ಪಕ್ಷ- ವೈಜ್ಞಾನಿಕ ಸಂಕೀರ್ಣಗಳು, ಸುದ್ದಿ ಮಾಧ್ಯಮದಲ್ಲಿ ಬದಲೀ ನೀತಿಗಳನ್ನು ಕುರಿತ ವ್ಯಾಪಕ ಚರ್ಚೆ, ಸ್ಥೂಲವಾಗಿ ವ್ಯಾಖ್ಯಾನಿಸಿದ ನಾಯಕತ್ವದ ಮಜಲಿನಲ್ಲಿ ಹಿತಾಸಕ್ತಿ ಪ್ರತಿನಿಧಿಸುವ ವಿಶಿಷ್ಟ ವ್ಯಕ್ತಿಗಳು ಮತ್ತು ರಾಜಕೀಯ ಹಾಗೂ ಆಡಳಿತಾತ್ಮಕ ನಟರಲ್ಲಿ (ಧುರೀಣರಲ್ಲಿ) ಪಸರಿಸಿದ ಚೌಕಾಸಿ ಧೋರಣೆಯನ್ನು ಪ್ರತಿಬಿಂಬಿಸುವ ದೊಡ್ಡ ಪ್ರಮಾಣದ ಗುಂಪುಗಳ ಸ್ವಾಯತ್ತತೆಯಿಂದಾಗಿ ಬಹುತ್ವ ಸಿದ್ಧಾಂತಗಳು ಹೊರಹೊಮ್ಮಿದವು.

ಬಹುತ್ವವಾದಿ ಸಿದ್ಧಾಂತಗಳು ಸೋವಿಯತ್ ಆಳ್ವಿಕೆಯ ಕೆಲವು ಅಂಶಗಳು ಮತ್ತು ಸಮತಾವಾದಿ ಹಾಗೂ ಬಂಡವಾಳಶಾಹಿ ರಾಜಕೀಯ ವ್ಯವಸ್ಥೆಗಳ ನಡುವಣ ಕುತೂಹಲಕಾರಿ ಸಾಮ್ಯತೆಗಲ ಮೇಲೆ ಬೆಳಕು ಚೆಲ್ಲಿದರೂ, ಸೋವಿಯತ್ ವ್ಯವಸ್ಥೆಯ ಚಲನೆಯ ನಿಯಮಗಳನ್ನು ಸಮರ್ಪಕವಾಗಿ ಸೆರೆಹಿಡಿಯಲು ಸಫಲಾಗಲಿಲ್ಲ.

ಸೋವಿಯತ್ ಒಕ್ಕೂಟ ಶಾಸ್ತ್ರದ ಸಿದ್ಧಾಂತವು ಅಮೆರಿಕ ಸಂಯುಕ್ತ ಸಂಸ್ಥಾನಗಳ ಅಂತರರಾ,ಟ್ರೀಯ ಮತ್ತು ಆಂತರಿಕ ರಾಜಕಾರಣದಲ್ಲಿ ಗೊಂದಲಮಯವಾಗಿ ಸೇರಿತ್ತು. ಸಮಾಜಶಾಸ್ತ್ರಗಳ ಅಧ್ಯಯನದ ಮಹತ್ವಾಕಾಂಕ್ಷೆಯಂತೆಯೇ ಈ ಅಧ್ಯಯನ ಶಾಖೆಯು ಎರಡು ರೀತಿಯ ಆಕಾಂಕ್ಷೆಗಳಾದ ಜಾಗತಿಕ ಸಿಂಧುತ್ವ ಸಾಧಿಸುವ ಮತ್ತು ನೀತಿ ರೂಪಿಸುವ ಗಣ್ಯರಿಗೆ ಬೇಕಾದ ಸಾಮಗ್ರಿ ಒದಗಿಸುವ ಉದ್ದೇಶದಿಂ ಮುನ್ನಡೆದಿತ್ತು. ಮೊದಲನೆಯದರ ಫಲವು ತೌರುಮನೆಯ ಅಂಗಳದಲ್ಲಿ ಬೆಳೆದ ಬಹುತ್ವವಾದದಂತಹ ಸಿದ್ಧಾಂತಗಳನ್ನು ಸೋವಿಯತ್ ಒಕ್ಕೂಟಕ್ಕೆ ಅನ್ವಯಿಸುವುದರಲ್ಲಿ ಕೊನೆಗೊಂಡರೆ, ಎರಡನೆಯದರ ಫಲಶೃತಿಯುಳ್ಳುವ ವರ್ಗದ ಪಂಥೀಯ ಜಿಜ್ಞಾಸೆಗಳಿಗೆ ಕೈಜೋಡಿಸುವ ಮತ್ತು ಅಧರ ರಾಜಕೀಯ ಸಂಚುಗಳಿಗೆ ಒತ್ತಾಸೆ ನೀಡುವುದೇ ಆಗಿತ್ತು.

ಅಮೆರಿಕ ಮತ್ತು ಸೋವಿಯತ್ ರಷ್ಯಾಗಳ ನಡುವಣ ನಿಯಂತ್ರಿತ ಸಂಘರ್ಷವನ್ನು ಮುಂದುವರೆಸಲು ಸೋವಿಯತ್ ಒಕ್ಕೂಟಶಾಸ್ತ್ರದ ಸಿದ್ಧಾಂತಗಳು ಅಮೆರಿಕಾದ ಆಳುವ ವರ್ಗಗಳ ಸೈದ್ಧಾಂತಿಕ ಹೋರಾಟಗಳಿಗೆ ಕುಮ್ಮಕ್ಕು ನೀಡಲು ಬಳಕೆಯಾದವು. 1950 ರ ದಶಕದಲ್ಲಿ ಶೀತಲಯುದ್ಧದ ತೀವ್ರತೆ ಉತ್ಕಟವಾಗಿದ್ದಾಗ ಸೋವಿಯತ್ ಒಕ್ಕೂಟವನ್ನು ಸರ್ವವ್ಯಾಪ್ತಿ ನಿರಂಕುಶ ವ್ಯವಸ್ಥೆಯ ಪೆಡಂಭೂತವೆಂದು ಟೀಕಿಸಲು, ಸಾಧ್ಯವಾದಂತೆ, ಬೃಹತ್ ರಾಷ್ಟ್ರಗಳೆರಡರ ನಡುವೆ ಒಂದಷ್ಟು ನ್ಯಾಯಬದ್ಧತೆಯನ್ನು ನೀಡುವ ಅವಶ್ಯಕತೆಯನ್ನು ಒದಗಿಸಿತು. ಹೀಗೆ, ಸರ್ವವ್ಯಾಪಿ ನಿರಂಕುಶ ವ್ಯವಸ್ಥೆ ಸಿದ್ಧಾಂತವು, ಸೋವಿಯತ್ ಒಕ್ಕೂಟವನ್ನು ದೂರ ಸರಿಸಲು ಮತ್ತು ಅದಕ್ಕಿಂತ ಮಿಗಿಲಾಗಿ, ರೋನಾಲ್ಡ್ ರೇಗನ್‌ರ ಮೊದಲ ಅಧ್ಯಕ್ಷಾವಧಿಯಲ್ಲಿ ಅದನ್ನು ಶಪಿಸಲು ಹೆಚ್ಚಾಗಿ ಬಳಕೆಯಾಯಿತು.

ಸೋವಿಯತ್ ಒಕ್ಕೂಟ ಶಾಸ್ತ್ರವನ್ನು ಪರೋಕ್ಷವಾಗಿ, ವಿಶ್ವದ ಮೂರನೆಯ ರಾಷ್ಟ್ರಗಳಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನಗಳ ನೀತಿಯನ್ನು ಬೆಂಬಲಿಸಲು ಬಳಸಲಾಯಿತು. ಒಂಗು ಬಗೆಯ ಅಭಿವೃದ್ಧಿ ಸಿದ್ಧಾಂತವು ಸೋವಿಯತ್ ಒಕ್ಕೂಟವನ್ನು ಒಂದು ಅಭಿವೃದ್ಧಿ ಶೀಲ ದೇಶವೆಂದು ಪರಿಗಣಿಸಿತ್ತು. ಈ ಸಿದ್ಧಾಂತದ ಪ್ರಮುಖ ಕಾರ್ಯವೆಂದರೆ, ಬಂಡವಾಳಶಾಹಿಯೇತರ, ಅಭಿವೃದ್ಧಿ ಪಥದ ಹಾದಿಯಲ್ಲಿ ಕಂಡು ಬರುವ ಸರ್ವವ್ಯಾಪಿ ನಿರಂಕುಶ ವ್ಯವಸ್ಥೆಯ ಅಪಾಯದ ಬಗ್ಗೆ ವಿಶ್ವದ ಮೂರನೆಯ ರಾಷ್ಟ್ರಗಳನ್ನು ಎಚ್ಚರಿಸುವುದೇ ಆಗಿತ್ತು. ಯಾವ ಪರಿಸ್ಥಿತಿಗಳಲ್ಲಿ ಒಂದು ಅಭಿವೃದ್ಧಿಶೀಲ ರಾಷ್ಟ್ರವು ಸಮತಾವಾದಕ್ಕೆ ಮತಾಂತರಗೊಳ್ಳಬಹುದು ಮತ್ತು ಅದನ್ನು ತಡೆಯುವ ಕ್ರಮಗಳನ್ನು ಕೈಗೊಳ್ಳುವುದರ ಬಗ್ಗೆ ಜಾಗರೂಕರಾಗಿರುವಂತೆ ಅಮೆರಿಕೆಯ ನೀತಿ ರೂಪಿಸುವವರನ್ನು ಸಜ್ಜುಗೊಳಿಸುವ ಉದ್ದೇಶವನ್ನು ಈ ಸಿದ್ಧಾಂತ ಹೊಂದಿತ್ತು.

### 22.5.2 ವಾಮಪಂಥೀಯ ಚಿಂತನೆ

ಸಮಾಜವಾದ ಯೋಜನೆಗಳ ಬಗ್ಗೆ ವಿಶ್ವಾಸ ಮತ್ತು ಮಾರ್ಕ್ಸ್‌ವಾದವನ್ನು ಸೈದ್ಧಾಂತಿಕ ಒಳನೋಟದ ಮೂಲವೆಂದು ಹೇಳುವಷ್ಟರ ಮಟ್ಟಿಗೆ ವಾಮಪಂಥೀಯ ಸಿದ್ಧಾಂತಗಳು ಸಾಮ್ಯತೆ ಹೊಂದಿವೆ. ಆದಾಗ್ಯೂ ಅವು ಸಮಾಜವಾದ ಮತ್ತು ಮಾರ್ಕ್ಸ್‌ವಾದವನ್ನು ವಿಭಿನ್ನ ನೆಲೆಗಟ್ಟಿನಿಂದ ವ್ಯಾಖ್ಯಾನ ಮಾಡುತ್ತವೆ ಸೋವಿಯತ್ ಒಕ್ಕೂಟ ಶಾಸ್ತ್ರಕ್ಕಿಂತ ವಿಭಿನ್ನವಾಗಿರುವ, ಈ ಸಿದ್ಧಾಂತಗಳು ಯಾವುದೇ ಒಂದು ರಾಜಕೀಯ ಕ್ಷೇತ್ರಕ್ಕೆ ನೆಲೆಗೊಳ್ಳಲು ಅಸಾಧ್ಯವಾಗಲು ಕಾರಣವೆಂದರೆ, ನಿರ್ಧಿಷ್ಟ ರಾಜ್ಯಗಳಿಗೆ ಸಂಬಂಧಿಸಿದಂತೆ ಅವುಗಳ ಸಂಬಂಧಗಳು ನಿರಂತರವಾಗಿ ಬದಲಾಗುತ್ತಿರುವುದು, ಇಲ್ಲವೆ ವಿವಾದಾಸ್ಪದವಾಗುವ ಅಥವಾ ಕೆಲವೊಮ್ಮೆ ಅಸ್ತಿತ್ವದಲ್ಲಿರದೇ ಇರುವುದೇ ಆಗಿದೆ. ಏಕೆಂದರೆ ಇಂತಹ ಸಿದ್ಧಾಂತಗಳಲ್ಲಿ ಹಲವು ಭಿನ್ನಮತೀಯ ಬುದ್ಧಿಜೀವಿಗಳು ಮತ್ತು ಕಡೆಗಾಣಿಸಲ್ಪಟ್ಟ ರಾಜಕೀಯ ಗುಂಪುಗಳೂ ಇವೆ. ಇವುಗಳನ್ನು ಹಿಂದಿನ ಸೋವಿಯತ್ ಒಕ್ಕೂಟದ ಸ್ವಯಂ ಪ್ರತಿಪಾದಿತ ಸಿದ್ಧಾಂತಗಳಿಂದ ಪ್ರತ್ಯೇಕಿಸಿ, ಅಚ್ಚುಕಟ್ಟಾಗಿ ವಿಂಗಡಿಸಬಹುದು.

ಗೋರ್ಬಚೆವ್ ನಾಯಕತ್ವದ ಸೋವಿಯತ್ ರಾಜ್ಯ ಅಸ್ತಿತ್ವಕ್ಕೆ ಬರುವ ಮೊದಲೇ ನೆಲೆಗೊಂಡಿದ್ದ ರಾಜ್ಯವನ್ನು ಅಭಿವೃದ್ಧಿ ಹೊಂದಿದ ಸಮಾಜವಾದ ಮೂರ್ತ ರೂಪವೆಂದು ಪರಿಗಣಿಸಬಹುದು. ಈ ಹಂತದಲ್ಲಿ ಸಮಾಜವಾದಿ ರಚನೆಯು, ಕ್ರಾಂತಿ ಮತ್ತು ಪೂರ್ಣಪ್ರಮಾಣದ ಸಮತಾವಾದದ ನಡುವಣ ಸ್ಥಿತಿ ಎನ್ನಬಹುದು. ಕ್ಲೆಮೆಂಟ್ಸೀವ್ ಮತ್ತು ವಾಸ್ಸಿಲ್‌ಯೆವ ಅವರ ಪ್ರಕಾರ 1960 ರ ದಶಕದಲ್ಲಿ ಸೋವಿಯತ್ ಒಕ್ಕೂಟ ಈ ಹಂತವನ್ನು ಪ್ರವೇಶಿಸಿತ್ತು ಮತ್ತು 1977ರ ಸಂವಿಧಾನವು ಸೋವಿಯತ್ ಒಕ್ಕೂಟದಲ್ಲಿ ಅಭಿವೃದ್ಧಿ ಹೊಂದಿದ ಸಮಾಜವಾದಿ ಸಮಾಜವನ್ನು ಸ್ಥಾಪಿಸಲಾಗಿದೆ ಎಂದು ಘೋಷಿಸಲಾಗಿತ್ತು. ಉತ್ಪಾದನಾ ವಿಧಾನವು ಸಂಪೂರ್ಣವಾಗಿ ಸಮಾಜವಾದಿ ತತ್ವಕ್ಕೆ ಒಳಪಟ್ಟಿತ್ತು. ಅಂದರೆ, ಉತ್ಪಾದನಾ ಸಾಧನಗಳು ಮಾಲಿಕತ್ವ ಮತ್ತು ನಿರ್ವಹಣೆ ಸಂಪೂರ್ಣವಾಗಿ ಸಮಾಜದ ಅಧೀನದಲ್ಲಿತ್ತು. ಆರ್ಥಿಕ ರಂಗದಲ್ಲಿ, ವಿವೇಚನಾಯುತ, ಅಗತ್ಯಗಳನ್ನು ಆಧರಿಸಿದ ಯೋಜನೆ, ಅಧಿಕಗೊಂಡ ಉತ್ಪಾದಕತೆ ಮತ್ತು ನೆರವೇರಿಸಿದ ಕಾರ್ಯಕ್ಕನುಗುಣವಾದ ಸಾಮಾಜಿಕ ವಸ್ತುಗಳ ಹಂಚಿಕೆಯನ್ನು ಪ್ರಮುಖ ಸಾಧನಗಳೆಂದು ವರ್ಣಿಸಲಾಯಿತು. ಜನತೆಯ ಸೌಖ್ಯ ನಿರಂತರವಾಗಿ ಅಧಿಕಗೊಳ್ಳುತ್ತಿದೆ ಮತ್ತು ವ್ಯಕ್ತಿಯ ಸರ್ವತೋಮುಖ ಬೆಳವಣಿಗೆಗೆ ಅನುಕೂಲಕರ ಪರಿಸ್ಥಿತಿಗಳನ್ನು ಹೆಚ್ಚಾಗಿ ಒದಗಿಸಲಾಗುತ್ತಿದೆ ಎಂದೂ ಘೋಷಿಸಲಾಯಿತು.

ಸೋವಿಯತ್ ಒಕ್ಕೂಟದಲ್ಲಿ ಸಮಾಜದ ಎಲ್ಲ ವರ್ಗಗಳು ಮತ್ತು ಗುಂಪುಗಳನ್ನು ಒಂದುಗೂಡಿಸುವುದರ ಜತೆಗೆ, ಅದರ ಎಲ್ಲ ಘಟಕ ರಾಷ್ಟ್ರಗಳು ಮತ್ತು ರಾಷ್ಟ್ರೀಯತೆಗಳ ನಡುವಣ ನ್ಯಾಯಬದ್ಧ ಮತ್ತು ವಾಸ್ತವಿಕ ಸಮಾನತೆಯನ್ನು ರಕ್ಷಿಸುವುದರ ಮೂಲಕ ಒಂದು ಹೊಸ ಐತಿಹಾಸಿಕ ಸಮುದಾಯವನ್ನೇ ಸೃಷ್ಟಿಸಲಾಗಿದೆ ಎಂದೂ ಹೇಳಿಕೊಳ್ಳಲಾಯಿತು. ಸೋವಿಯತ್ ಸಮಾಜದಲ್ಲಿ ಉನ್ನತ ಸಂಘಟನಾ ಸಾಮರ್ಥ್ಯ, ಸೈದ್ಧಾಂತಿಕ ನಿಷ್ಠೆ ಮತ್ತು ನಿಜವಾದ ಪ್ರಜಾಪ್ರಭುತ್ವದ ಲಕ್ಷ್ಯಗಳಿರುವುದೆಂದು ವರ್ಣಿಸಲಾಯಿತು. ಸಮಾಜದ ಪ್ರಜಾಸತ್ತಾತ್ಮಕ ಸ್ವರೂಪವು ಎಲ್ಲ ಸಾರ್ವಜನಿಕ ವ್ಯವಹಾರಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುವ ಒಂದು ರಾಜಕೀಯ ವ್ಯವಸ್ಥೆಯಲ್ಲಿ ಅಭಿವ್ಯಕ್ತವಾಗಿದೆ. ರಾಜ್ಯವನ್ನು ನಡೆಸುವುದರಲ್ಲಿ, ದುಡಿಮೆಗಾರರ ಸಕ್ರಿಯ ಪಾಲುಗೊಳ್ಳುವಿಕೆಯು ಅತ್ಯಧಿಕವಾಗಿದೆ ಮತ್ತು ಸಮಾಜಕ್ಕೆ ಜವಾಬ್ದಾರಿ ಹೊಂದಿರುವ ಕರ್ತವ್ಯಗಳೊಂದಿಗೆ, ಪ್ರಜೆಗಳ ನಿಜವಾದ ಹಕ್ಕುಗಳು ಮತ್ತು ಸ್ವಾತಂತ್ರಗಳು ಮೇಳೈಸಿವೆ ಎಂದು ಸಾರಲಾಯಿತು. ನಾಯಕತ್ವದ ಪ್ರಮುಖ ಗುರಿಯು ಸಮಾಜವಾದವನ್ನು ಸತತವಾಗಿ ಅದರ ಸರ್ವಾಂಗೀಣ ವಿಕಾಸಕ್ಕೆ ಒಳಪಡಿಸುವುದೇ ಆಗಿತ್ತು. ದೇಶದ ಸಾಮಾಜಿಕ ಆರ್ಥಿಕ ಅಭಿವೃದ್ಧಿಯನ್ನು ತ್ವರಿತಗೊಳಿಸುವ ಆಧಾರದ ಮೇಲೆ ಸೋವಿಯತ್ ಸಮಾಜವನ್ನು ಸಮತಾವಾದದೆಡೆ ಮುನ್ನಡೆಸುವುದು ನಾಯಕತ್ವದ ಉದ್ದೇಶವೆಂದು ಹೇಳಲಾಯಿತು.

ಆತ್ಮ ಪ್ರಶಂಸೆಯ ಇಂತಹ ವಿವರಣೆಗಳಿಂದ, ಸೋವಿಯತ್ ಒಕ್ಕೂಟದ ಕುಸಿತಕ್ಕೆ ಮೊದಲೇ ಅದರ ದೋಷಗಳು ಸ್ವಯಂವೇದ್ಯವಾದವು ಮತ್ತು ಸ್ಪಷ್ಟವಾಗಿ ಗೋಚರಿಸಿದವು. ವಾಮಪಂಥೀಯ ಬಣಗಳಲ್ಲಿಯೂ ಕೇವಲ ವಿಮರ್ಶಕ ಪ್ರತಿಭೆಯಿಲ್ಲದ ಸೋವಿಯತ್ ಸಮಾಜವಾದಿ ಜನರಾಜ್ಯಗಳ ಒಕ್ಕೂಟದ ಕಟ್ಟಾ ಅಭಿಮಾನಿಗಳು ಇಂತಹ ಸಿದ್ಧಾಂತಗಳನ್ನು ಪ್ರಮಾಣಿಕವಾಗಿ ಹಾಗೂ ಸಂಪೂರ್ಣ ಸಹಮತದಿಂದ ಮೆಚ್ಚಿಕೊಂಡರೆಂದು ಟೀಕಿಸಲಾಗಿದೆ. ಆರ್ಥಿಕ ಸಾಧನೆಗಳ ಬಗ್ಗೆ ತಳೆದ ಅಭಿಪ್ರಾಯಗಳು ಉತ್ಪ್ರೇಕ್ಷೆಯಿಂದ ಕೂಡಿದ್ದವು. ಏಕೆಂದರೆ, ಸೋವಿಯತ್ ಆರ್ಥಿಕ ವ್ಯವಸ್ಥೆಯಲ್ಲಿ ಗ್ರಾಹಕ ವಸ್ತುಗಳು ತೀವ್ರಕೊರತೆ, ಕೃಷಿ ಪದಾರ್ಥಗಳ ಆಮದಿನ ಮೇಲಿನ ಅವಲಂಬನೆ, ಮತ್ತು ತಾಂತ್ರಿಕ ಕ್ಷೇತ್ರದಲ್ಲಿ ಗಣನೀಯ ಪ್ರಮಾಣದ ಹಿನ್ನಡೆ, ಪ್ರಮುಖ ಸಮಸ್ಯೆಗಳಾಗಿದ್ದವು. ಸಾಮಾಜಿಕ ರಾಜಕೀಯ ಸಾಧನೆಗಳ ಬಗ್ಗೆ ಪ್ರಶಂಸಾರ್ಹ ಸಂಗತಿಗಳ ಬದಲಿಗೆ, ವಿವಿಧ ವರ್ಗಗಳು ಮತ್ತು ಪ್ರಾಂತ್ಯಗಳಲ್ಲಿ ವ್ಯಾಪಕವಾಗಿದ್ದ ಅಸಮಾನತೆಗಳು, ನಾಗರಿಕ ಹಕ್ಕುಗಳು ನಿರಾಕರಣೆ ಮತ್ತು ಸಮತಾವಾದಿ ಪಕ್ಷದ ಸರ್ವಾಧಿಕಾರ ಮುಂತಾದವು ಪ್ರಗತಿಯನ್ನು ಕುಂಠಿತಗೊಳಿಸಿದ್ದು ಸ್ಪಷ್ಟವಾಗಿತ್ತು.

ಸೋವಿಯತ್ ಒಕ್ಕೂಟ, ಸಮಾಜವಾದಿ ಆದರ್ಶವನ್ನು ಅಪರಿಪಕ್ವವಾಗಿ ಸಾಧಿಸಿದೆ ಎಂದು ಹೇಳುವಷ್ಟು ಸೌಜನ್ಯವನ್ನು ಹಲವಾರು ವಾಮಪಂಥೀಯ ಬುದ್ಧಿಜೀವಿಗಳು ವ್ಯಕ್ತಪಡಿಸಿದರು. 1978ರಲ್ಲಿ ವ್ಯಾಪಕವಾಗಿ ಚರ್ಚಿತವಾದ ದಿ ಆಲ್ಟರ್‌ನೇಟಿವ್ ಇನ್ ಈಸ್ಟರ್ನ್ ಯುರೋಪ್ ಎಂಬ ಪುಸ್ತಕದಲ್ಲಿ ಬಾರ್ಹರೊ ಅವರು ಸ್ಟಾಲಿನ್‌ವಾದವು ಅನಿವಾರ್ಯ ಮತ್ತು ಪ್ರಗತಿಶೀಲವಾಗಿತ್ತು ಎಂದು ಪ್ರತಿಪಾದಿಸಿದರು. ಸಮಾಜವಾದದ ಐಹಿಕ ಪೂರ್ವ ಷರತ್ತುಗಳನ್ನು ಸೃಷ್ಟಿಸಲು, ಬಲಯುತವಾದ ಹಾಗೂ ಸರ್ವಾಧಿಕಾರಿ ನಾಯಕತ್ವವು ಮಾತ್ರ ಸೋವಿಯತ್ ಜನಸ್ತೋಮವನ್ನ ಔದ್ಯೋಗಿಕರಣಕ್ಕಾಗಿ ಬಡಿದೆಬ್ಬಿಸಬಲ್ಲದೆಂದು ಅಭಿಪ್ರಾಯಪಡಲಾಯಿತು. ಈ ಗುರಿ ಸಾಧಿಸಿದ ಬಳಿಕ ಸ್ಟಾಲಿನ್‌ರ ನೌಕರಶಾಹಿ ತನ್ನ ಮಹತ್ವ ಕಳೆದುಕೊಂಡು, ಸಮಾಜವಾದದ ಪೂರ್ಣ ವಿಕಾಸಕ್ಕೆ ತೊಡಕಾಯಿತೆಂದು ತಜ್ಞರು ಹೇಳಿದ್ದಾರೆ.

ತಜ್ಞರು ಸೋವಿಯತ್ ವ್ಯವಸ್ಥೆಯ ಜಡತ್ವ ನೀಗಿಸಲು, ಒಂದು ಸಾಂಸ್ಕೃತಿಕ ಕ್ರಾಂತಿಯ ಅಗತ್ಯವಿದೆ ಎಂದು ಕರೆ ನೀಡಿದರು. ಸಮಾಜದ ಎಲ್ಲ ವರ್ಗಗಳ ಜನರ ಹಿತಾಸಕ್ತಿಗಳನ್ನು ವ್ಯಕ್ತಪಡಿಸುವ ಸಮತಾವಿದಗಲ ತಂಡವೊಂದು, ಕ್ರಾಂತಿಯ ನೇತೃತ್ವವಹಿಸಬೇಕೆಂದು ಹೇಳಲಾಯಿತು. ಅದು ಯಶಸ್ವಿಯಾದಲ್ಲಿ ಮಾರ್ಕ್ಸ್ ಪ್ರತಿಪಾದಿಸಿದ ವಿಕೇಂದ್ರೀಕೃತ ಸಮಾಜವಿರುವ ಒಕ್ಕೂಟ ವ್ಯವಸ್ಥೆ ಅಸ್ತಿತ್ವಕ್ಕೆ ಬರುತ್ತದೆ ಎಂದು ಆಶಿಸಲಾಯಿತು. ಆದರೆ ಸೋವಿಯತ್ ವ್ಯವಸ್ಥೆಯಲ್ಲಿದ್ದ ಸ್ಟಾಲಿನ್ ಆಳ್ವಿಕೆಯ ಭಯದ ವಾತಾವರಣದ ಸಮರ್ಥನೆ, ಅದರ ಸಮಾಜವಾದಿ ಕಪಟನಾಟಕವನ್ನು ಪ್ರಶ್ನಿಸಲು ಅವರು ವಿಫಲಗೊಂಡಿದ್ದು ಹಾಗೂ ವ್ಯವಸ್ಥೆಯಲ್ಲಿ ಆಳವಾಗಿ ಬೇರೂರಿದ್ದ ಸಾಮಾಜಿಕ-ಆರ್ಥಿಕ ವೈರುದ್ಧ್ಯಗಳನ್ನು ಗ್ರಹಿಸಲು ಅಸಮರ್ಥವಾದ ರುಡಾಲ್ಫ್ ಬಾಹ್‌ರೊ ಅವರ ವಿಶ್ಲೇಷಣೆಯ ಪೊಳ್ಳುತನವು ಬಟ್ಟಬಯಲಾಯಿತು.

ಸೋವಿಯತ್ ವ್ಯವಸ್ಥೆಯನ್ನು ತೀವ್ರವಾಗಿ ಟೀಕಿಸಿದವರಲ್ಲಿ ಅಗ್ರಗಣ್ಯರೆಂದರೆ ಲಿಯಾನ್ ಟ್ರಾಟ್‌ಸ್ಕಿ. ಸ್ಟಾಲಿನ್‌ನೊಂದಿಗೆ ಭಿನ್ನಮತ ಮತ್ತು ಪರಿಣಾಮವಾಗಿ, ರಷ್ಯಾದಿಂದ ಹೊರದೂಡಲ್ಪಟ್ಟ ಟಾಟ್‌ಸ್ಕಿ 1937ರಲ್ಲಿಯೇ ಪ್ರಕಟಿಸಿದ ದಿ ರೆವಲ್ಯೂಷನ್ ಬೆಟ್ರೇಟ್ ಕೃತಿಯಲ್ಲಿ ಸೋವಿಯತ್ ರಾಜ್ಯವನ್ನು ಭ್ರಷ್ಟ ದುಡಿಮೆಗಾರರ ರಾಜ್ಯ ಎಂದು ವರ್ಣಿಸಿದ್ದಾರೆ. ಉತ್ಪಾದನಾ ಸಾಧನಗಳ ಸಾಮಾಜೀಕರಣ ಮಾತ್ರ ಉಳಿದಿದೆ. ಅದು ಅಧಿಕಾರ, ಸ್ಥಾನಮಾನ ಮತ್ತು ಐಹಿಕ ಪ್ರತಿಫಲಗಳನ್ನು ತನ್ನ ಅಳತೆಗೆ ಮೀರಿ ಹೊಂದಿದ್ದು, ಸೌಲಭ್ಯವುಳ್ಳ ಜಾತಿಯಂತಾಗಿದೆ. ಟ್ರಾಟ್‌ಸ್ಕಿ ಪ್ರಕಾರ ಸ್ಟಾಲಿನ್ ನೇತೃತ್ವದ ಸೋವಿಯತ್ ವ್ಯವಸ್ಥೆಯು ಬಂಡವಾಳಶಾಹಿ ಪದ್ಧತಿ ಮತ್ತು ಸಮಾಜವಾದಗಳ ನಡುವಣ ಅಸ್ಥಿರವಾದ, ಸ್ಥಿತ್ಯಂತರ ರಚನೆಯಾಗಿದೆ. ರಾಜಕೀಯ ಕ್ರಾಂತಿಯಿಂದ ಮಾತ್ರ ಪರಿಶುದ್ಧವಾದ ದುಡಿಮೆಗಾರರ ವ್ಯವಸ್ಥೆ ಸಾಧ್ಯವಾಗುತ್ತದೆ ಎಂದೂ ಅವರು ಹೇಳಿದ್ದಾರೆ. ಟ್ರಾಟ್‌ಸ್ಕಿಯವರ ಟೀಕೆ ಎಷ್ಟೇ ಹರಿತವಾಗಿದ್ದರೂ,

ಅಸಮರ್ಪಕವಾಗಿವೆ. ಸೋವಿಯತ್ ಕಮ್ಯುನಿಸ್ಟ್ ಪಕ್ಷದ ಆಂತರಿಕ ಪ್ರಜಾಪ್ರಭುತ್ವವನ್ನು ಪುನರ್ ಪರಿಚಯಿಸುವಷ್ಟರ ಮಟ್ಟಿಗೆ ರಾಜಕೀಯ ಕ್ರಾಂತಿ ಇರಬೇಕೆಂದು ಹೇಳಿದರು ಲೆನಿನ್‌ರು ಸ್ಥಾಪಿಸಿದ ಮೂಲ ಸಂಸ್ಥೆಗಳ ಸಮಗ್ರ ಪರಿಶೀಲನೆ ಮಾಡದಿರುವುದು, ಅವರ ಟೀಕೆಯನ್ನು ಪ್ರಶ್ನಿಸಿಲ್ಲ. ಅಟಿರ ಅನುಯಾಯಿಗಳು ಸೋವಿಯತ್ ವ್ಯವಸ್ಥೆಯ ಈ ವಿಶ್ಲೇಷಣೆಯನ್ನೇ ಮುಂದುವರೆಸಿದ್ದಾರೆ ಮತ್ತು ಈ ಸಿದ್ಧಾಂತವನ್ನು ವಿಸ್ತರಿಸಿದ್ದಾರೆ.

ಸೋವಿಯತ್ ನೌಕರಶಾಹಿಯು ಒಂದು ಹೊಸ ಆಳುವ ವರ್ಗವಾಗಿದ್ದು, ಅದರ ಉತ್ಪಾದನಾ ಪ್ರಭಾವದ ಆಧಾರವು ಗುಲಾಮ ಸಮಾಜಗಳಲ್ಲಿ ಕಂಡು ಬರುವ ಶೋಷಣೆಯ ವಿಧಾನವನ್ನೇ ಹೋಲುತ್ತದೆ. ಸೋವಿಯತ್ ವ್ಯವಸ್ಥೆಯು ನೌಕರಶಾಹಿ ಸಮಷ್ಟಿವಾದದ ಪ್ರತಿರೂಪದಂತಿದ್ದು, ಝೂರ್ ಆಳ್ವಿಕೆಯ ಊಳಿಗಮಾನ್ಯ ಬಂಡವಾಳಶಾಹಿ ರಷ್ಯಾವನ್ನು ಆಧುನೀಕರಣಗೊಳಿಸುವ ಮತ್ತು ಕೈಗಾರಿಕೀಕರಣಗೊಳಿಸುವ ವ್ಯವಸ್ಥೆಯೇ ಸೋವಿಯತ್ ವ್ಯವಸ್ಥೆ ಎನ್ನಲಾಗಿದೆ. ಉತ್ಪಾದನಾ ಶಕ್ತಿಗಳ ಮೇಲಿನ ನಿಯಂತ್ರಣದಿಂದ ಇಂತಹ ಹೊಸ ಆಳುವ ವರ್ಗ ಅಸ್ತಿತ್ವಕ್ಕೆ ಬರುತ್ತದೆ ಎಂದು ಯುಗೋಸ್ಲಾವಿಯಾದ ಭಿನ್ನಮತೀಯ ಧುರೀಣ ಮಿಲೋವಾನ್ ಡ್ಜಿಲಾಸ್ ಹೇಳಿದ್ದಾರೆ.

ಟೋನಿಕ್ಲಿಫ್ ಮತ್ತು ಚಾರ್ಲ್ಸ್ ಬೆಟ್ಟಹೀಮ್ ಸೋವಿಯತ್ ಆಳುವ ವರ್ಗವನ್ನು ಒಂದು ವಿಧವಾದ ರಾಜ್ಯದ ಬೂರ್ಷ್ವಾ (ಶೋಷಕರು) ಗಳೆಂದು ಮತ್ತು ಸೋವಿಯತ್ ವ್ಯವಸ್ಥೆಯು ಒಂದು ಬಗೆಯ ರಾಜ್ಯದ ಬಂಡವಾಳಶಾಹಿ ಪದ್ಧತಿ ಎಂದು ವರ್ಣಿಸಿದ್ದಾರೆ. ಈ ಸಿದ್ಧಾಂತವನ್ನು 1968ರ ನಂತರ ಚೀನಾದ ಸಮತಾವಾದಿಗಳು ಮತ್ತು ಜಗತ್ತಿನ ಇತರ ಭಾಗಗಳಲ್ಲಿರುವ ಮಾವೋ ಅವರ ಅನುಯಾಯಿಗಳು ಎತ್ತಿ ಹಿಡಿದಿದ್ದಾರೆ. ಸೋವಿಯತ್ ಒಕ್ಕೂಟದಲ್ಲಿ ರಾಜ್ಯದ ಯೋಜನೆಯು ಬಂಡವಾಳದ ಪ್ರತಿರೂಪವಾಗಿ, ಅದರ ಹೆಚ್ಚಳದ ಗುರಿಯನ್ನು ಮಾತ್ರ ಹೊಂದಿದೆ. ಅದು ದುಡಿಮೆಗಾರರ ವರ್ಗವನ್ನು ಉತ್ಪಾದನಾ ಪ್ರಕ್ರಿಯೆಯಿಂದ ಪ್ರತ್ಯೇಕಿಸಿ ಅವರನ್ನು ಶೋಷಣೆ ಮಾಡುತ್ತದೆ.

ನೌಕರಶಾಹಿ ಸಮಷ್ಟಿದ ಮತ್ತು ರಾಜ್ಯದ ಬಂಡವಾಲಶಾಹಿ ಪದ್ಧತಿಯಾಗಿ ಸೋವಿಯತ್ ವ್ಯವಸ್ಥೆಯನ್ನು ಪರಿಶೀಲಿಸಿದ ವಿಮರ್ಶಕರು, ಸೋವಿಯತ್ ಸಮಾಜವಾದಿ ಗಣರಾಜ್ಯಗಳ ಒಕ್ಕೂಟವು ಸಮಾಜದತ್ತ ಸಾಗಲು, ಪೂರ್ಣ ಪ್ರಮಾಣದ ಒಂದು ಸಾಮಾಜಿಕ ಕ್ರಾಂತಿಯೇ ನಡೆಯಬೇಕೆಂದು ವಾದಿಸಿದ್ದಾರೆ. ಈ ಸಿದ್ಧಾಂತಗಳು ಸೋವಿಯತ್ ವ್ಯವಸ್ಥೆಯ ರಾಜಕೀಯ ಚಲನಶೀಲತೆಯನ್ನು ಗ್ರಹಿಸುವಲ್ಲಿ ವಿಫಲವಾಗಿರುವುದು ಸ್ಪಷ್ಟವಾಗಿದೆ.

## 22.6 ಸೋವಿಯತ್ ಸಮತಾವಾದದ ವಿಮರ್ಶೆ

ಮೇಲೆ ಹೇಳಿದ ಎರಡು ಬಗೆಯ ಸಿದ್ಧಾಂತಗಳು ಸೋವಿಯತ್ ವ್ಯವಸ್ಥೆಯನ್ನು ಸರಿಯಾಗಿ ಗ್ರಹಿಸುವಲ್ಲಿ ಎಡವಿರುವುದು ಸ್ಪಷ್ಟವಾಗಿದೆ. ಸೋವಿಯತ್ ಒಕ್ಕೂಟ ಶಾಸ್ತ್ರಜ್ಞರು ರಾಜಕಾರಣಕ್ಕೆ ಹೆಚ್ಚಿನ ಮಹತ್ವ ನೀಡಿದ್ದರೆ, ವಾಮಪಂಥೀಯ ತಜ್ಞರು ಆರ್ಥಿಕತೆಗೆ ಅಧಿಕ ಒತ್ತು ನೀಡಿದ್ದಾರೆ. ಸಮರ್ಪಕವಾದ ಸೈದ್ಧಾಂತಿಕ ಚೌಕಟ್ಟನ್ನು ಘಟಿತ ಮತ್ತು ಪೂರ್ಣದೃಷ್ಟಿಯನ್ನು ಅಳವಡಿಸಿಕೊಳ್ಳುವುದರ ಮೂಲಕ ಸಾಧಿಸಬಹುದಾಗಿದೆ. ಸೋವಿಯತ್ ವ್ಯವಸ್ಥೆಯ ಬಗ್ಗೆ ಪಾಲ್ ಪಿಕ್ಕೋನ್ ಮತ್ತು ಅವರ ಸಹವರ್ತಿಗಳು ಸಂಯುಕ್ತವಾದ ಸಿದ್ಧಾಂತ ನೀಡಲು ತಮ್ಮ ಟೆಲೋಸ್ ನಿಯತಕಾಲಿಕದಲ್ಲಿ ಪ್ರಯತ್ನಿಸಿದ್ದಾರೆ.

ಪಿಕ್ಕೋನ್‌ರ ಪ್ರಕಾರ, ವಿಶಿಷ್ಟ ಪದ್ಧತಿ ಎಂದೂ ವಿಶಿಷ್ಟ ಕೈಗಾರಿಕೀಕರಣದ ಪದ್ಧತಿಯನ್ನು ಸ್ಥಾಪಿಸಿರುವುದಾಗಿ ಹೇಳಿಕೊಳ್ಳುತ್ತಾ ತನ್ನ ನ್ಯಾಯಬದ್ಧತೆಯನ್ನು ತಾನೇ ಮರು ಸೃಷ್ಟಿಸಿಕೊಳ್ಳುವ ನಿರಂತರ ಅಗತ್ಯವಿರುವ ಅಸ್ಥಿರವಾದ ಸರ್ವಾಧಿಕಾರಿ ಪದ್ಧತಿಯೇ ಸೋವಿಯತ್ ವ್ಯವಸ್ಥೆ. ಸಾಂಪ್ರದಾಯಿಕ ನೆಲೆಗಟ್ಟಿರುವ ಬಲಯುತವಾದ ನೌಕರಶಾಹಿ ಪದ್ಧತಿಯನ್ನೊಳಗೊಂಡ ಸಮಾಜವನ್ನು ಈ ವ್ಯವಸ್ಥೆ ಸೃಷ್ಟಿಸಿದೆ.

ಈ ವ್ಯವಸ್ಥೆಯ ಪ್ರಧಾನವಾದ ವೈರುಧ್ಯವೆಂದರೆ ಉತ್ಪಾದನಾ ವಿಧಾನಗಳ ಪ್ರತ್ಯೇಕೀಕರಣ. ಗ್ರಾಹಕರ ವಸ್ತುಗಳ ಕ್ಷೇತ್ರ ಮತ್ತು ಉತ್ಪಾದನಾ ವಸ್ತುಗಳ ಕ್ಷೇತ್ರಗಳ ನಡುವಣ ಸಂಬಂಧದಲ್ಲಿ ಮೊದಲನೆಯದು ಸೊರಗಿದರೆ, ಎರಡನೆಯದು ಮಿಲಿಟರಿ ಆದ್ಯತೆಗಳಿಗೆ ಅಧೀನವಾಯಿತು. ರಾಜ್ಯದ ಮಾಲಿಕತ್ವ, ಕೇಂದ್ರ ಯೋಜನಾ ವ್ಯವಸ್ಥೆ, ಹೊಸ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸುವಲ್ಲಿ ಉಂಟಾದ ವೈಫಲ್ಯಗಳಿಂದಾಗಿ, ಎರಡೂ ಕ್ಷೇತ್ರಗಳು ಅದಕ್ಷತೆಯ ಆಗರವಾದವು. ಬ್ರೆಝ್ನೆವ್‌ರ ಆಡಳಿತಾವಧಿಯಲ್ಲಿ ದೊಡ್ಡ ಪ್ರಮಾಣದ ಆರ್ಥಿಕ ಬಿಕ್ಕಟ್ಟು ತಲೆದೋರಿತು.

ಕಾರ್ಲ್‌ಷ್ಮಿಟ್ ಅವರು ಪ್ರತಿಪಾದಿಸಿರುವ ಸರ್ವಾಧಿಕಾರಿ ಪದ್ಧತಿಗಳ ವರ್ಗೀಕರಣದಿಂದ ಸೋವಿಯತ್ ವ್ಯವಸ್ಥೆಯ ರಾಜಕೀಯ ಚಲನಶೀಲತೆಯನ್ನು ಅರಿತುಕೊಳ್ಳಬಹುದು. ಅವರ ಪ್ರಕಾರ, ಸರ್ವಾಧಿಕಾರಿ ಪದ್ಧತಿಗಳು ಮೂಲಭೂತವಾಗಿ ಎರಡು ವಿಧಗಳಲ್ಲಿ ಕಂಡು ಬರುತ್ತವೆ. ಒಂದು, ಕಮಿಸಾರಿಯಲ್ ಬಗೆ ಮತ್ತು ನಿರಂಕುಶರ ಬಗೆ. ಮೊದಲನೆಯ ಪದ್ಧತಿಯು, ಅತಿ ವಿಶಿಷ್ಟ ಬಗೆಯ ತುರ್ತು ಪರಿಸ್ಥಿತಿಗಳಲ್ಲಿ ವ್ಯವಸ್ಥೆಯನ್ನು ಸುಗಮವಾಗಿ ನಡೆಸಿ, ಅಪಾಯದ ಸ್ಥಿತಿ ಅಂತ್ಯಗೊಂಡ ಮೇಲೆ ಸಂವಿಧಾನಾತ್ಮಕ ವ್ಯವಸ್ಥೆಯನ್ನು ನೆಲೆಗೊಳಿಸುವುದು. ಎರಡನೆಯದು, ಕೇಂದ್ರೀಕೃತ ಅಧಿಕಾರದ ಮೂಲಕ ಗುಣಾತ್ಮಕವಾಗಿ, ವಿನೂತನವಾದ ಸಾಮಾಜಿಕ ವ್ಯವಸ್ಥೆ ಜಾರಿಗೊಳಿಸುವ ಉದ್ದೇಶ ಹೊಂದಿದೆ. ಉದ್ದೇಶ ಸಾಧನೆಯ ನಂತರ ಅದು ಕಣ್ಮರೆಯಾಗುತ್ತದೆ ಎಂದು ಭಾವಿಸಲಾಗುತ್ತದೆ. ಬೋಲ್ಶೆವಿಕ್ ಪಕ್ಷ ವರ್ಗರಹಿತ ಸಮಾಜ ಜಾರಿಗೊಳಿಸುವ ಭರವಸೆಯೊಂದಿಗೆ ದುಡಿಮೆಗಾರರ ವರ್ಗದ ಮೇಲೆ ನಿರಂಕುಶ ಸರ್ವಾಧಿಕಾರ ಪದ್ಧತಿಯಾಯಿತು.

1930ರ ದಶಕದಲ್ಲಿ ಎಲ್ಲ ರಂಗಗಳಲ್ಲೂ ಸೋಲನ್ನುಂಡ ಸ್ಟಾಲಿನ್ ತನ್ನ ರಾಜಕೀಯ ಎದುರಾಳಿಗಳನ್ನು ದೂಷಿಸಿ, ಲೆನಿನ್ನರ ರಾಜಕೀಯ ಪಂಥವನ್ನು ಎತ್ತಿಹಿಡಿಯಲು ಪ್ರಯತ್ನಿಸಿದನು. ಮೂಲ ಕಾರ್ಯಯೋಜನೆಯನ್ನು ಸಾಧಿಸಲು, ವ್ಯಾಪಕವಾದ ಹಿಂಸಾಕೃತ್ಯಗಳನ್ನೆಸಗುತ್ತಾ ಕಮಿಸರಿಯಲ್ ಸರ್ವಾಧಿಕಾರಿ ಪದ್ಧತಿಯನ್ನು ನೆಲೆಗೊಳಿಸಿದನು. ಪಕ್ಷದ ಅಧಿಕಾರ ಕೇಂದ್ರೀಕರಿಸಿದ ಬಳಿಕ, ಆಳುವ ನೌಕರಶಾಹಿ ವರಿಷ್ಠ ಗುಂಪನ್ನು ಸೃಷ್ಟಿಸಿದನು. ಈ ವರಿಷ್ಠ ಗಣವೇ ಅಧಿಕಾರದ ಅಕ್ಷಯನಿಧಿಯಾಯಿತು, ಮತ್ತು ಕೃಶ್ಚೇವ್‌ರು ನಿರಂಕುಶ ಸರ್ವಾಧಿಕಾರಿ ಪದ್ಧತಿಯನ್ನು ಪುನರ್ ಪ್ರತಿಷ್ಠಾಪಿಸಲು ಪ್ರಯತ್ನಿಸಿದಾಗ, ಅದನ್ನು ಯಶಸ್ವಿಯಾಗಿ ತಡೆಗಟ್ಟಿತು. ಅದು ತನ್ನ ಸೌಲಭ್ಯಗಳನ್ನುಕಳೆದುಕೊಂಡು ಅಲಂಕಾರಪ್ರಾಯವಾದ ಅಧಿಕಾರದ ನೆಲೆಗಟ್ಟಾಗಲು ಇಚ್ಛಿಸಲಿಲ್ಲ. ಬ್ರೆಝ್ನೆವ್‌ರ ಪ್ರತಿಕ್ರಾಂತಿಯು ನಿರಂಕುಶ ಸರ್ವಾಧಿಕಾರಿ ಪದ್ಧತಿಗೆ ಮರಳುವುದಾಗಲಿ ಅಥವಾ ಅಪಖ್ಯಾತಿಗೆ ಒಳಗಾಗಿದ್ದ ಸ್ಟಾಲಿನ್ನನ ಕಮಿಸಾರಿಯಲ್ ಸರ್ವಾಧಿಕಾರಿ ಪದ್ಧತಿಯನ್ನು ಎತ್ತಿಹಿಡಿಯುವುದಾಗಲಿ ಸಾಧ್ಯವಾಗಲಿಲ್ಲ. ಅದು ಸಿನಿಕೇತನ ಮತ್ತು ಭ್ರಷ್ಟವಾದ ದಬ್ಬಾಳಿಕೆಯಾಗಿ, ರಾಜ್ಯವನ್ನು ಅವಲಂಬಿಸಿದ್ದ ದುಡಿಮೆಗಾರರ ವರ್ಗಕ್ಕೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಮತ್ತು ಉನ್ನತವಾದ ಜೀವನ ನಿರ್ವಹಣಾ ಸೌಲಭ್ಯಗಳನ್ನು ನೀಡುವ ಸಾಮಾಜಿಕ ಹೊಂದಾಣಿಕೆಯ ಮೂಲಕ ಯಥಾಸ್ಥಿತಿ ಕಾಪಾಡುವ ಮಟ್ಟಕ್ಕೆ ಅವನತಿ ಹೊಂದಿತು.

ಉತ್ಪಾದಕತೆಯ ಪ್ರಮಾಣ ಕುಸಿಯುತ್ತಿದ್ದರೂ, ದೇಶದ ಸಂಪನ್ಮೂಲಗಳನ್ನು ಯಥೇಚ್ಛವಾಗಿ ಬಳಸುವ ಹಾಗೂ 1970ರ ದಶಕದಲ್ಲಿ ತೈಲೋತ್ಪನ್ನಗಳ ಬಿಕ್ಕಟ್ಟಿದ್ದಾಗ, ಗಳಿಸಿದ ಅತ್ಯಧಿಕ ಲಾಭದಿಂದ ಸೋವಿಯತ್ ವ್ಯವಸ್ಥೆಯನ್ನು ಬ್ರೆಝ್ನೆವ್ ನಿಭಾಯಿಸಿದರು. ಗೊರ್ಬಚೇವ್‌ರು ಅಧಿಕಾರಕ್ಕೆ ಬರುವ ಸಮಯಕ್ಕೆ ವ್ಯವಸ್ಥೆಯಲ್ಲಿ ಆರ್ಥಿಕ ದುರ್ಬಲತೆ ಎದ್ದು ಕಾಣುತ್ತಿತ್ತು. ಆಫ್‌ಘಾನಿಸ್ತಾನದಲ್ಲಿ ಸೋವಿಯತ್ ವ್ಯವಸ್ಥೆಯ ನ್ಯಾಯಬದ್ಧತೆಯ ಬಿಕ್ಕಟ್ಟು ಆಸ್ಫೋಟಿಸಿತು. ಆಗ ಕಮಿಸಾರಿಯಲ್ ಸರ್ವಾಧಿಕಾರ ಪದ್ಧತಿಯಾಗಲಿ, ನಿರಂಕುಶ ಸರ್ವಾಧಿಕಾರ ಪದ್ಧತಿಯಾಗಲಿ ಸಮರ್ಥನೆಗೆ ಯೋಗ್ಯವಾಗಲಿಲ್ಲ. ಗೊರ್ಬಚೇವ್ ಅವರು ಅನಿವಾರ್ಯವಾಗಿ ಸೋವಿಯತ್ ವ್ಯವಸ್ಥೆಯನ್ನು ಪುನರ್ ರಚಿಸಬೇಕಾಯಿತು.

1986 ರಿಂದ 1991 ರವರೆಗೆ ಜಗತ್ತಿನ ಆಶ್ಚರ್ಯಕರ ಬದಲಾವಣೆಗಳನ್ನು ತಂದ ರೂವಾರಿಯಾಗಿದ್ದ ಮಿಖೈಲ್ ಸರ್ಗೆವಿಕ್ ಗೋರ್ಬಚೇವ್, ಸೋವಿಯತ್ ಒಕ್ಕೂಟದ ಸಮತಾವಾದಿ ಪಕ್ಷದ ಕೇಂದ್ರ ಸಮಿತಿಯನ್ನು ವಿಸರ್ಜಿಸಿದರು. ಮಹಾಕಾರ್ಯದರ್ಶಿ ಹುದ್ದೆಗೆ ರಾಜಿನಾಮೆ ಇತ್ತರು, ಮತ್ತು ಪಕ್ಷದ ಆಸ್ತಿ ಪಾಸ್ತಿಗಳನ್ನು ರಾಷ್ಟ್ರೀಕರಣಗೊಳಿಸಿದರು. ಕೇವಲ ಏಳು ದಿನಗಳಲ್ಲಿ ಸೋವಿಯತ್ ಒಕ್ಕೂಟದ ರಾಜಕೀಯ ಮತ್ತು ಭೌಗೋಳಿಕ ಭೂಪಟ ಬದಲಾಯಿತು. ಮುಕ್ತವಾತಾವರಣ ಮತ್ತು ಸುಧಾರಣೆಗಳನ್ನು ಬಯಸಿದ್ದ ಪ್ರಜೆಗಳಿಗೆ ಗೋರ್ಬಚೇವ್ ಕೇವಲ ವಿಫಲವಾದ ಭರವಸೆಯಾದರು. ಸುಧಾರಣೆ ಅಂತ್ಯಗೊಂಡು, ಹೊಸ ದೇಶ ಜನ್ಮತಾಳಿತು. ಹೊಸ ಶಕ್ತಿಗಳ ಧ್ರುವೀಕರಣ ಮತ್ತು ಸಂಘರ್ಷಗಳು ಸೋವಿಯತ್ ರಷ್ಯದ ಇತಿಹಾಸದ ಭವಿಷ್ಯತ್ತನ್ನು ನಿರ್ಧರಿಸುವಂತಾಯಿತು. ಅವರ ಪ್ರಯತ್ನವು ಸೋವಿಯತ್ ಒಕ್ಕೂಟದ ವಿಘಟನೆಗೆ ಅವಕಾಶ ನೀಡಿತು. ಏಕೆಂದರೆ ವ್ಯವಸ್ಥೆಯ ಅಂತರಾಲದಲ್ಲಿದ್ದ ಆಂತರಿಕ ಶಕ್ತಿಗಳ ಪ್ರಭಾವವನ್ನು ಗೋರ್ಬಚೇವ್‌ರ ಮುಕ್ತ ಹಾಗೂ ಸುಧಾರಣಾವಾದಿಗಳು ಗ್ರಹಿಸಲು ವಿಫಲವಾಗಿದ್ದರು.

ಸೋವಿಯತ್ ಒಕ್ಕೂಟದಲ್ಲಿ ಸಮತಾವಾದದ ಶೀಘ್ರ ಬೆಳವಣಿಗೆ ಮತ್ತು ಅದರ ಪ್ರಮುಖ ಸಾಧನೆಗಳು ಜಗತ್ತಿನಲ್ಲಿ ಬಂಡವಾಳಶಾಹಿ ಪದ್ಧತಿ ಮತ್ತು ಸಮಾಜವಾದ ಪದ್ಧತಿಗಳೆರಡರ ನಡುವೆ ತೀವ್ರ ಪೈಪೋಟಿ ಉಂಟು ಮಾಡಿತ್ತು. ಎರಡನೆಯ ಮಹಾಯುದ್ಧದ ನಂತರ ಪ್ರತ್ಯೇಕವಾದ ಬಣಗಳಾಗಿ ಅಮೆರಿಕಾ ಮತ್ತು ರಷ್ಯಾಗಳೆರಡೂ ಅಂತರರಾಷ್ಟ್ರೀಯ ರಾಜಕಾರಣದಲ್ಲಿ ತಮ್ಮ ಯಜಮಾನಿಕೆ ಸ್ಥಾಪಿಸಲು ಪ್ರಯತ್ನಿಸಿದವು. ಸೋವಿಯತ್ ರಷ್ಯಾದಲ್ಲಿ ಸಮತಾವಾದದ ಕುಸಿತ ಮತ್ತು ಪೂರ್ವ ಯುರೋಪಿನ ರಾಷ್ಟ್ರಗಳಲ್ಲಿ ಅದರ ಹಿನ್ನೆಡೆಯ ಬಲಪಂಥೀಯರಲ್ಲಿ ವಿಜಯೋತ್ಸಾಹ ಮೂಡಿಸಿದರೆ, ವಾಮಪಂಥೀಯರಲ್ಲಿ ನಿರಾಶೆಯನ್ನುಂಟುಮಾಡಿತು.

ಆದರೆ ಸೋವಿಯತ್ ಒಕ್ಕೂಟದಲ್ಲಿ ಸಮತಾವಾದ ಅಸ್ತಂಗತವಾದ ಕೂಡಲೇ, ಜಗತ್ತಿನಲ್ಲಿ ಬಂಡವಾಳಶಾಹಿ ಪದ್ಧತಿಯ ವಿರುದ್ಧದ ಕದನ ಮುಗಿದಿಲ್ಲ, ಉತ್ತಮ ಪರ್ಯಾಯ ವ್ಯವಸ್ಥೆಯ ಕನಸು ಕರಗಿಲ್ಲ. ವಾಸ್ತವವಾಗಿ ಈಗ ಜಗತ್ತಿನಾದ್ಯಂತ ತನ್ನ ಆಕರ್ಷಣೆ ಹೆಚ್ಚಿಸಿಕೊಳ್ಳುತ್ತಿರುವ ಬಂಡವಾಳಶಾಹಿ ಪದ್ಧತಿಯ ವಿರುದ್ಧ, ನಿಜವಾದ ಹೋರಾಟ ಆರಂಭವಾಗಬೇಕಿದೆ.

ಮಾರ್ಸ್ಲೇ ಮತ್ತು ಅಮಿನ್ ಅವರು ಪ್ರತಿಪಾದಿಸಿರುವಂತೆ, ಬಂಡವಾಳ ಶಾಹಿ ಪದ್ಧತಿಯು ಪರಕೀಯತೆ, ಅಸಮಾನತೆ, ಮತ್ತು ಆರ್ಥಿಕ ವಿವೇಚನಾ ಶೂನ್ಯತೆಯನ್ನು ಉಂಟು ಮಾಡುತ್ತವೆ ಎಂಬ ಸಮಾಜವಾದಿ ಟೀಕೆಗಳು ತಮ್ಮ ಹರಿತವನ್ನೇನೂ ಕಳೆದುಕೊಂಡಿಲ್ಲ. ಜಾಗತಿಕ ಹಂತದಲ್ಲಿ ಅದರ ಟೀಕೆಗಳು ಹೆಚ್ಚು ಪ್ರಸ್ತುತವಾಗುತ್ತವೆ. ಇದಲ್ಲದೆ, ರಷ್ಯಾದಲ್ಲಿ ಸಮತಾವಾದದ ಕುಸಿತದಿಂದ ಸಮಾಜವಾದಿಗಳು ಕಲಿಯಬೇಕಾದ ಪಾಠವೂ ಇದೆ. ಸಮಾಜವಾದಿ ಆರ್ಥಿಕ ವ್ಯವಸ್ಥೆಗೆ ಸೂಕ್ತವಾದ ಮಾರುಕಟ್ಟೆಯ ದೃಷ್ಟಿಯನ್ನು ಸಮಾಜವಾದಿಗಳು ಬೆಳೆಸಿಕೊಳ್ಳಬೇಕಾಗುತ್ತದೆ. ರಾಜ್ಯ ಮತ್ತು ನಾಗರಿಕ ಸಮಾಜದ ಹಂತಗಳಲ್ಲಿ ಪಾಲುಗೊಳ್ಳುವ ಸಂಘಟನೆಗಳ ವಿವಿಧ ಬಗೆಗಳು ಸಮಾಜವಾದಿ ಕಾರ್ಯಯೋಜನೆಗೆ ಎಷ್ಟು ಮುಖ್ಯವಾಗಿವೆ ಎಂಬುದು ಮತ್ತೊಂದು ಪ್ರಮುಖ ಅಂಶವಾಗುತ್ತದೆ.

ಇದಲ್ಲದೆ, ಪುನಃಶ್ಚೇತನಗೊಂಡ ಸಮಾಜವಾದವೂ, ಸಮಾಜಕ್ಕೆ ಉಪಯುಕ್ತವಾದ ಉಳಿಸಿಕೊಳ್ಳಬಹುದಾದ ಅಭಿವೃದ್ಧಿಯನ್ನು ಕೈಗೊಳ್ಳುವುದರಿಂದ, ಪರಿಸರಕ್ಕೆ ಒದಗಿರುವ ಬಿಕ್ಕಟ್ಟನ್ನು ಬಗೆಹರಿಸುವ ದೃಷ್ಟಿಯಿಂದ ಐಹಿಕ ಭೋಗಸಾಧನೆಯ ಗುರಿಯನ್ನು ಕೈಬಿಡಬೇಕಾಗುತ್ತದೆ. ಹಾಗೆಯೇ ಅದು ಸ್ತ್ರೀ ಪುರುಷರ ನಡುವಣ ಸಮಾನತೆಗೆ ಅವಕಾಶ ಒದಗಿಸುವ ತನ್ನ ಕಲಾಪವನ್ನು ಪುನರ್ ವ್ಯಾಖ್ಯಾನ ಮಾಡಬೇಕಾಗುತ್ತದೆ. ಪರಿಸರವಾದಿ ಹಾಗೂ ಸ್ತ್ರೀವಾದಿ ಚಳುವಳಿಗಳು ಸಮಾಜವಾದಕ್ಕೆ ರಾಜಕೀಯ ಕಾರ್ಯಕ್ಷೇತ್ರ ಮತ್ತು ಸೈದ್ಧಾಂತಿಕ ಒಳಹರವುಗಳನ್ನು ಒದಗಿಸುವುದರಿಂದ ಅವುಗಳೊಂದಿಗೆ, ಸಹಜವಾದ ಮೈತ್ರಿ ಹೊಂದಬಹುದು. ಸಂಸ್ಕೃತಿಗೆ ಸಂಬಂಧಿಸಿದ ಸಮಾಜವಾದಿ ಸಿದ್ಧಾಂತವನ್ನು ಬೆಳೆಸುವ ಮಹತ್ವವನ್ನು ಈ ಸಂದರ್ಭದಲ್ಲಿ ಒತ್ತಿಹೇಳಬೇಕಾಗಿಲ್ಲ. ಏಕೆಂದರೆ, ಸಂಸ್ಕೃತಿ ಕೈಗಾರಿಕೆ ಮತ್ತು ಧಾರ್ಮಿಕ ಮೂಲಭೂತವಾದ ಮತ್ತು ಜನಾಂಗೀಯ ಸಂಕುಚಿತ ವಾದಗಳಂತಹ ಅವನತಿಯ ಹಾದಿ ಹಿಡಿಯುವ ಸಾಂಸ್ಕೃತಿಕ

ರಾಜಕಾರಣದ ಸವಾಲುಗಳನ್ನೆದುರಿಸಲು, ಅಂತಹ ಸಮಾಜವಾದಿ ಒಳನೋಟವಿರುವ ಸಾಂಸ್ಕೃತಿಕ ಸಿದ್ಧಾಂತವು ಉಪಯುಕ್ತವಾಗುತ್ತದೆ.

ವಿಶ್ವದಾದ್ಯಂತ ಹರಡಿರುವ ಸಮಾಜವಾದಿ ಬಂಧುಗಳು ಮೇಲೆ ಹೇಳಿದ ಕಾರ್ಯಗಳನ್ನು ಕೈಗೊಳ್ಳಲು ಸಾಧ್ಯವಾದರೆ, ಸೋವಿಯತ್ ಒಕ್ಕೂಟದಲ್ಲಿ ಸಂಭವಿಸಿದ ಸೋಲಿನ ದವಡೆಯಿಂದ ವಿಜಯವನ್ನು ಕಸಿದುಕೊಳ್ಳಲು ಸಾಧ್ಯವಾಗುತ್ತದೆ.

## ನಿಮ್ಮ ಪ್ರಗತಿ ಪರಿಶೀಲನೆ - 1

**ಸೂಚನೆ:** 1. ಈ ಕೆಳಗೆ ಬಿಟ್ಟಿರುವ ಜಾಗವನ್ನು ನಿಮ್ಮ ಉತ್ತರಕ್ಕೆ ಉಪಯೋಗಿಸಿಕೊಳ್ಳಿ.

2. ಈ ಘಟಕದ ಕೊನೆಯಲ್ಲಿ ನೀಡಿರುವ ಉತ್ತರದೊಂದಿಗೆ ನಿಮ್ಮ ಪ್ರಗತಿಯನ್ನು ಪರಿಶೀಲಿಸಿಕೊಳ್ಳಿ.

**1. ರಷ್ಯಾದಲ್ಲಿನ ಸಮತಾವಾದವನ್ನು ಕುರಿತು ವಿವರಿಸಿ?**

**2. ಕುಸಿತಕ್ಕೆ ಹಿಂದಿನ ಸೋವಿಯತ್ ರಷ್ಯಾವನ್ನು ಕುರಿತು ಚರ್ಚಿಸಿ?**

**3. ರಷ್ಯಾದ ಸಮತಾವಾದದ ಕುಸಿತವನ್ನು ಕುರಿತು ವಿಮರ್ಶಿಸಿ?**

## 22.7 ಉಪಸಂಹಾರ

1917 ರಿಂದ 1991ರವರೆಗೆ ಸಮಾಜವಾದ ಹಾಗೂ ಅದರ ಉನ್ನತ ರೂಪವಾದ ಸಮತಾವಾದವು ಸೋವಿಯತ್ ಒಕ್ಕೂಟದಲ್ಲಿ ಹಲವಾರು ಅಸಮರ್ಪಕತೆಗಳ ನಡುವೆಯೂ ಅಸ್ತಿತ್ವದಲ್ಲಿತ್ತು. ಒಂದು ಪ್ರಬಲ ರಾಜಕೀಯ ಪಂಥವಾಗಿ, ಅದು ಬಂಡವಾಳಶಾಹಿ ಪದ್ಧತಿ, ಸಮಾಜವಾದ ಹಾಗೂ ಇನ್ನಿತರ ವಿಚಾರಧಾರೆಗಳಂತೆ ಮಾನವ ಸಮಾಜದಲ್ಲಿ ಶಾಶ್ವತವಾಗಿ ಚರ್ಚಿತವಾಗುತ್ತದೆಯೇ ಹೊರತು, ಕುಸಿದು ಅಂತ್ಯಗೊಳ್ಳುವುದಿಲ್ಲ. ಸಮತಾವಾದದ ಬಗ್ಗೆ ಮಾರ್ಕ್ಸ್ ಮತ್ತು ಎಂಗೆಲ್ಸ್ ನೀಡಿರುವ ವ್ಯಾಖ್ಯೆ ಹೀಗಿದೆ. ನಮಗೆ ಸಮತಾವಾದ ಎನ್ನುವುದು ಸ್ಥಾಪಿಸಬೇಕಾದ ವ್ಯವಹಾರಗಳ (ವಿದ್ಯಮಾನ) ಪರಿಸ್ಥಿತಿಯಲ್ಲ ವಾಸ್ತವಿಕತೆ ಹೊಂದಾಣಿಕೆ ಮಾಡಿಕೊಳ್ಳಲೇ ಬೇಕಾದ ಒಂದು ಆದರ್ಶವೇ ಸಮತಾವಾದ. ಪ್ರಸ್ತುತ ಪರಿಸ್ಥಿತಿಗಳನ್ನು ರದ್ದು ಪಡಿಸುವ ನಿಜವಾದ ಚಳುವಳಿಯನ್ನು ನಾವು ಸಮತಾವಾದವೆಂದು ಕರೆಯುತ್ತೇವೆ. ಇಂದಿನ ಪರಿಸ್ಥಿತಿಯಲ್ಲಿರುವ ವಿದ್ಯಾಮಾನಗಳಿಂದಲೇ ಈ ಚಳುವಳಿಯ ಪರಿಸ್ಥಿತಿಗಳು ಉದ್ಭವಿಸುತ್ತವೆ.

## 22.8 ಮುಖ್ಯ ಪದಗಳು

| | | |
|---|---|---|
| ಬೋಲ್ಸೆವಿಕ್ | : | 1917ರಲ್ಲಿ ನಡೆದ ರಷ್ಯಾದ ಕ್ರಾಂತಿ |
| ವಿಘಟಿತ | : | ವಿಭಾಗಗೊಂಡ |
| ಝಾರ್ | : | 1917ರ ಕ್ರಾಂತಿಗೆ ಹಿಂದಿನ ರಷ್ಯಾದ ರಾಜತ್ವ |
| ಔದ್ಯೋಗಿಕರಣ | : | ಕೈಗಾರಿಕೀಕರಣ |

## 22.9 ಕೆಲವು ಉಪಯುಕ್ತ ಗ್ರಂಥಗಳು


| | | |
|---|---|---|
| ಎಬೆಸ್ಟೇನ್, ಡಬ್ಲ್ಯೂ | : | ಮಾಡ್ರನ್ ಪೊಲಿಟಿಕಲ್ ಥಾಟ್ |
| ಎಬೆಂಸ್ಟೇನ್, ಡಬ್ಲ್ಯೂ | : | ಗ್ರೇಟ್ ಪೊಲಿಟಿಕಲ್ ಥಿಂಕರ್ಸ್ |
| ಸಬೈನ್, ಜಿ.ಹೆಚ್ | : | ಎ ಹಿಸ್ಟರಿ ಆಫ್ ಪೊಲಿಟಿಕಲ್ ಥಿಯರಿ |
| ಲಾಸ್ಕಿ, ಹೆಚ್.ಜೆ | : | ಕಮ್ಯುನಿಸಮ್ |
| ಲೆನಿನ್,ವಿ | : | ದಿ ಸ್ಟೇಟ್ ಅಂಡ್ ರೆವಲ್ಯೂಷನ್ |


## 22.10 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು

<u>ನಿಮ್ಮ ಪ್ರಗತಿ ಪರಿಶೀಲನೆ</u> - 1

1. ನೋಡಿ ವಿಭಾಗ 22.3

2. ನೋಡಿ ವಿಭಾಗ 22.4

3. ನೋಡಿ ವಿಭಾಗ 22.5

# ಘಟಕ 23 ಮಾವೋವಾದ (ಮಾವೊ-ತ್ಸೆ-ತುಂಗ್ ಸಿದ್ಧಾಂತ)

ರಚನೆ


23.0 ಉದ್ದೇಶಗಳು

23.1 ಪೀಠಿಕೆ

23.2 ಮಾವೋರವರ ಕ್ರಾಂತಿ ಸಿದ್ಧಾಂತ

23.3 ಮಾವೊ ಸಿದ್ಧಾಂತದ (ಖಚಟಜಿಠಃ) ಮೂಲಭೂತ ವಿಚಾರಗಳು

23.4 ಮಾವೊ ವಾದವು ಮಾರ್ಕ್ಸ್‌ವಾದ ಮತ್ತು ಲೆನಿನ್ ವಾದಗಳ ಸಂಯೋಜನೆ

23.4.1 ಕಾರ್ಮಿಕರ ಸರ್ವಾಧಿಕಾರತ್ವ

23.4.2 ಸಾಮ್ರಾಜ್ಯವಾದದ ಬಗ್ಗೆ ಲೆನಿನ್‌ರ ವಿಚಾರಗಳು

23.4.3 ರಾಜ್ಯದ ಬಗ್ಗೆ ಲಿನಿನ್ನಿನ ವಿಚಾರಗಳು

23.4.4 ಪಕ್ಷಪದ್ಧತಿಯ ಬಗ್ಗೆ ಲಿನಿನ್ನಿನ ವಿಚಾರಗಳು

23.5 ಉಪಸಂಹಾರ

23.6 ಮುಖ್ಯ ಪದಗಳು

23.7 ಕೆಲವು ಉಪಯುಕ್ತ ಗ್ರಂಥಗಳು

23.8 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು

## 23.0 ಉದ್ದೇಶಗಳು

ಈ ಘಟಕ ವಸ್ತು ವಿಷಯವನ್ನು ಅಧ್ಯಯನ ಮಾಡಿದ ನಂತರ ನೀವು,

* ಮಾವೊ ಸಿದ್ಧಾಂತದ ಅರ್ಥವನ್ನು ತಿಳಿಯಬಹುದು
* ಮಾವೊ ಕ್ರಾಂತಿ ಸಿದ್ಧಾಂತವನ್ನು ಚರ್ಚಿಸಬಹುದು
* ಮಾವೊ ವಾದವು ಯಾವ ರೀತಿ ಮಾರ್ಕ್ಸ್‌ವಾದಕ್ಕಿಂತ ಹೊರತಾಗಿದೆ ಎಂಬುದನ್ನು ಚರ್ಚಿಸಲಾಗಿದೆ.
* ಮಾವೊ ಸಿದ್ಧಾಂತದ ಮುಖ್ಯ ಅಂಶಗಳನ್ನು ವಿವರಿಸಲಾಗಿದೆ.

## 23.1 ಪೀಠಿಕೆ

ಕಮ್ಯುನಿಸ್ಟ್ ಚೀನಾದ ಅಧ್ಯಕ್ಷರಾಗಿದ್ದ ಮಾವೊ-ತ್ಸೆ-ತುಂಗ್‌ರ ಧೋರಣೆಗಳನ್ನು ಮಾವೊ ವಾದ ಅಥವಾ ಮಾವೊ-ತ್ಸೆ-ತುಂಗ್ ಚೀನಾದ ಪ್ರತಿಭಾನ್ವಿತ ರಾಜಕೀಯ ವಿವೇಚಕರಲ್ಲಿ ಒಬ್ಬನಾಗಿದ್ದಾನೆ. ತನ್ನ ವಿದ್ಯಾರ್ಥಿ ದೆಸೆಯಿಂದಲೂ ಮಾರ್ಕ್ಸ್‌ವಾದದಿಂದ ಪ್ರಭಾವಿತನಾಗಿದ್ದ ಮಾವೊ ಚೀನಾದ ಸ್ವಾತಂತ್ರ ಸಂಗ್ರಾಮದಲ್ಲಿ ತನ್ನನ್ನೇ ತೊಡಗಿಸಿಕೊಂಡಾಗ ಹಾಗೂ ಚೀನಾದಲ್ಲಿ ಕಮ್ಯುನಿಸಂ ತತ್ವವನ್ನು ಪ್ರಚಾರ ಮಾಡಬೇಕೆಂದಾಗ ಏಷ್ಯಾದಲ್ಲಿ ಕಮ್ಯುನಿಸಂ ಬೇರೆ ಅರ್ಥ ಹಾಗೂ ಅದರ ಸ್ಥಾಪನೆಗೆ ಬೇರೆ ರೀತಿಯ ಇಂಬು ದೊರೆಯಬೇಕೆಂದು ಅನ್ನಿಸಿತು. ಅಂತೆಯೇ ಕಮ್ಯುನಿಸಂಗೆ ಏಷಿಯನ್ನರ ಅರ್ಥವನ್ನು ನೀಡುವುದರಲ್ಲಿ ತೊಡಗಿ ಯಶಸ್ವಿಯೂ ಆದನು. ತನ್ನ ವಿವೇಚನೆಯಲ್ಲಿ ಲಿನಿನ್ ಹಾಗೂ ಸ್ಟಾಲಿನ್ನರ ತತ್ವಗಳಿಗೆ ಹತ್ತಿರವಾಗುವ ಹೊಸ ವಿಚಾರಧಾರೆಯನ್ನೇ ಚೀನಿಯರಿಗೆ ನೀಡಿದನು. ಮಾವೊ ಸಿದ್ಧಾಂತವನ್ನು ಇಂದು ಮಾರ್ಕ್ಸಿಸಂನ ಚೀನಿ ಅಭಿಪ್ರಾಯವೆಂದು ಪರಿಗಣಿಸಲಾಗಿದೆ.

ಮಾರ್ಕ್ಸ್ ಮತ್ತುಲೆನಿನ್‌ರ ತತ್ವಗಳಿಗೆ ಬೆಂಬಲವಿತ್ತು. ಚೀನಾದ ಸನ್ನಿವೇಶಗಳಿಗನುಸಾರವಾಗಿ ಕಮ್ಯುನಿಸಂ ಸಿದ್ಧಾಂತವನ್ನು ಮಾರ್ಪಡಿಸಿದನು. ಮಾರ್ಕ್ಸ್ ಸಿದ್ಧಾಂತವನ್ನು ಚೀನಾದ ಸನ್ನಿವೇಶಗಳಿಗೆ ಅನುಗುಣವಾಗಿ ಅರ್ಥೈಸದಿದ್ದಲ್ಲಿ ಚೀನಾದಲ್ಲಿ ಕಮ್ಯುನಿಸಂ ಉಳಿಯುವ ಸಾಧ್ಯತೆಯೇ ಇರಲಿಲ್ಲ. ಮಾವೊ ಕಾರ್ಮಿಕರಿಗೆ ಮತತಲು ರೈತರಿಗೆ ಸಮಾಜದಲ್ಲಿ ಸಮಾನ ಸ್ಥಾನ ಕೊಟ್ಟನು. ರೈತರ ಸ್ಥಿತಿಯನ್ನು ಉತ್ತಮಗೊಳಿಸುವ ಉದ್ದೇಶದಿಂದ ಸಾಮೂಹಿಕ ಕೃಷಿ ಕ್ಷೇತ್ರಗಳನ್ನು ಏರ್ಪಡಿಸಿದನು. ಕಮ್ಯೂನ್ ಪದ್ಧತಿ ಮತ್ತು ಸಾಂಸ್ಕೃತಿಕ ಕ್ರಾಂತಿ ಎಂಬ ಹೆಸರಿನಲ್ಲಿ ಚೀನಾ ದೇಶದಲ್ಲಿ ಕಮ್ಯೂನಿಸಂ ಒಂದು ಹೊಸ ರೂಪ ತಾಳಿದೆ.

## 23.2 ಮಾವೊ ರವರ ಕ್ರಾಂತಿ ಸಿದ್ಧಾಂತ

ಮಾರ್ಕ್ಸ್‌ರವರ ಅಭಿಪ್ರಾಯದಲ್ಲಿ ಕ್ರಾಂತಿ ಅನಿವಾರ್ಯ ಹಾಗೂ ಅದನ್ನು ಸಶಸ್ತ್ರ ಸೈನಿಕರಿಂದ ರೂಪಿಸಬೇಕಾದರೆ ಅದಕ್ಕೂ ಸಿದ್ಧರಾಗಿರಬೇಕು. ಮಾವೊರವರು ಸಹ ಮಾರ್ಕ್ಸ್ ಮತ್ತು ಲೆನಿನ್‌ರವರು ಪ್ರತಿಪಾದಿಸಿದಂತೆ ಕ್ರಾಂತಿಯ ಬಳಕೆಯನ್ನು ಪ್ರತಿಪಾದಿಸುತ್ತಾರೆ. ಮಾವೊರವರ ಅಭಿಪ್ರಾಯದಲ್ಲಿ ಕಾರ್ಮಿಕ ವರ್ಗವು ಕ್ರಾಂತಿಕಾರಿ ಚಳುವಳಿಯ ಬೆನ್ನೆಲುಬಾಗಿರುತ್ತದೆ. ಆದರೆ ಚಟುವಟಿಕೆಗಳಲ್ಲಿ ಹೆಚ್ಚಿನ ತರಬೇತಿ ನೀಡಬೇಕಾಗುತ್ತದೆ. ಹಾಗೆಯೇ ಕೃಷಿಕರು ಹಾಗೂ ಕೃಷಿ ಕಾರ್ಮಿಕರು ಭಾಗವಹಿಸದ ಯಾವುದೇ ಕ್ರಾಂತಿಯು ಯಶಸ್ವಿಯಾಗುವುದಿಲ್ಲ ಎಂಬುದು ಮಾವೊರವರ ಹೇಳಿಕೆಯಾಗಿದೆ. ಅವರ ಅಭಿಪ್ರಾಯದಲ್ಲಿ ಬೇಸಾಯಗಾರರನ್ನು ಕ್ರಾಂತಿಯ ಮುಂದಾಳುಗಳಂತೆ ನೋಡಿಕೊಳ್ಳಬೇಕು. ಚೀನಾದಲ್ಲಿ ಬೇಸಾಯಗಾರರ ಮಹತ್ವವನ್ನು ಗುರುತಿಸುತ್ತಾ ಪ್ರೊ. ಸೆಬೈನ್‌ರವರು ಬೇಸಾಯಗಾರರಲ್ಲಿ ಮಾವೊ ನೀಡಿರುವ ಮಹತ್ವ ಅಸಂಪ್ರದಾಯವೋ ಅಥವ ಮಾರ್ಕ್ಸ್-ಲೆನಿನ್‌ರ ಅಭಿಪ್ರಾಯಗಳ ಉತ್ತಮ ತಿಳುವಳಿಕೆಯೋ, ಅಂತೂ ಚೀನಾದ ಸನ್ನಿವೇಶದಲ್ಲಿ ಕೃಷಿಕರ ನಾಯಕತ್ವ ಪ್ರಥಮ ಬಾರಿಗೆ ಕ್ರಾಂತಿಯನ್ನುಂಟು ಮಾಡಿದೆ ಎಂದಿದ್ದಾರೆ.

ಪ್ರಥಮ ಬಾರಿಗೆ ಹಳ್ಳಿಗಳ ಪ್ರಾಮುಖ್ಯತೆಯನ್ನು ಮಾವೊ ಗಮನಿಸಿದ್ದಾರೆ. ಹಳ್ಳಿಗಲ ಉತ್ತಮ ವ್ಯವಸ್ಥೆಯನ್ನು ಪ್ರತಿಪಾದಿಸಿರುವ ಮಾವೊ ಆ ಮೂಲಕ ಕಾರ್ಮಿಕರು ಹಾಗೂ ರೈತರನ್ನು ವ್ಯವಸ್ಥೆಗೆ ಒಳಪಡಿಸಬಹುದೆಂದಿದ್ದಾರೆ. ಅಂತಿಮವಾಗಿ ಹಳ್ಳಿಗಳ ಮೂಲದಿಂದ ಉದ್ಭವಿಸುವ ಕ್ರಾಂತಿಕಾರಿ ಶಕ್ತಿಯು ಯಶಸ್ವಿಯಾಗುವುದರಲ್ಲಿ ಸಂದೇಹವಿಲ್ಲ. ಅಧಿಕಾರ ತತ್ವದ ಮೇಲೆ ಮಾವೊ-ತ್ಸೆ-ತುಂಗ್ ಅತಿಯಾದ ನಂಬಿಕೆಯನ್ನು ಹೊಂದಿದವನಾಗಿದ್ದಾನೆ. ಆತನ ಅಭಿಪ್ರಾಯದಲ್ಲಿ ರಾಜಕೀಯ ಅಧಿಕಾರದ ಮೂಲಕ ಪ್ರತಿಯೊಬ್ಬರ ಯೋಚನೆ ಹಾಗೂ ಅಭಿಪ್ರಾಯಗಳನ್ನು ಬದಲಾಯಿಸಬಹುದಾಗಿದೆ. ಆದ್ದರಿಂದ ಚೀನಾದಲ್ಲಿ ಮಸ್ತಿಷ್ಕಶುದ್ದಿ (.............) ನಡೆಯಬೇಕು. ಅದರ ಮುಖಾಂತರ, ಮುಖ್ಯವಾಗಿ ವಿದ್ಯಾರ್ಥಿಗಳನ್ನು ಪಕ್ಷದ ಬೆಂಬಲಕ್ಕೆ ಸಾಧನವಾಗಿಟ್ಟುಕೊಳ್ಳುವ ಪದ್ಧತಿ ಪ್ರಬಲಗೊಳ್ಳುತ್ತಿದೆ. ಕೈಯಲ್ಲಿರುವ ರಾಜಕೀಯ ಅಧಿಕಾರದಿಂದ ಅಸ್ತಿತ್ವದಲ್ಲಿರುವ ಎಲ್ಲ ರೀತಿಯ ಸಾಮಾಜಿಕ ಸಂಸ್ಥೆಗಳೆಲ್ಲವನ್ನೂ ತನಗಿಷ್ಟ ಬಂದ ರೀತಿಯಲ್ಲಿ ಬದಲಾಯಿಸಬಹುದು ಹಾಗೂ ನಿಯಂತ್ರಿಸಬಹುದಾಗಿದೆ. ಮಾರ್ಕ್ಸ್ ವಿವರಿಸಿರುವಂತೆ ಮಾನವನ ಯೋಚನಾ ಲಹರಿ ಹಾಗೂ ಸಂಸ್ಥೆಗಳು ಕೇವಲ ಆರ್ಥಿಕ ಸನ್ನಿವೇಶಗಳಿಂದ (ಅಂಶಗಳಿಂದ) ರೂಪುಗೊಳ್ಳುತ್ತವೆ ಎಂಬುದನ್ನು ಮಾವೊ ಅಲ್ಲಗಳೆದಿದ್ದಾನೆ. ಸಮಾಜವನ್ನು ರೂಪಿಸುವುದು ಕೇವಲ ಅಬಿಪ್ರಾಯಗಳೇ ಆಗಿದ್ದು, ಅನಂತರ ಸೈನಿಕ ಶಕ್ತಿಯನ್ನು ಅವಲಂಬಿಸಬೇಕಾಗಿದೆ. ರಾಜಕೀಯ ಹಾಗೂ ಸೈನಿಕ ಅಧಿಕಾರಿಗಳು ಪರಸ್ಪರ ಸಂಬಂಧವನ್ನು ಹೊಂದಿವೆ. ಸೈನಿಕ ಶಕ್ತಿಯನ್ನು ಬಂದೂಕುಗಳ ಸಹಾಯದಿಂದ ಪಡೆಯಬಹುದಾಗಿದ್ದು ನೋಡಿಕೊಳ್ಳಬಹುದಾಗಿದೆ. ಆತನ ಮಾತಿನಲ್ಲಿಯೇ ಹೇಳುವುದಾದರೆ ಇಡೀ ಪ್ರಪಂಚವನ್ನೇ ಬಂದೂಕದಿಂದ ರೂಪಿಸಬಹುದಾಗಿದೆ. ಯಾರೇ ಆಗಲಿ ರಾಜಕೀಯ ಅಧಿಕಾರವನ್ನು ಹೊಂದಬೇಕಾದರೆ ಅವರಲ್ಲಿ ಪ್ರಬಲ ಸೈನ್ಯದ ಅವಶ್ಯಕತೆ ಇರುತ್ತದೆ. ಪ್ರೊ. ಸಬೈನ್‌ರವರು ಕೆಲವೇ ರಾಜಕೀಯ ಚಿಂತಕರು ಹಾಗೂ ಕಮ್ಯುನಿಸ್ಟ್ ನಾಯಕರು ಯುದ್ಧ ಹಾಗೂ ಸೈನಿಕ ಶಕ್ತಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿರುತ್ತಾರೆ ಎಂದಿದ್ದಾರೆ.

ಮಾವೊ ದೃಷ್ಟಿಯಲ್ಲಿ ಯುದ್ಧವೊಂದೇ ಬಂಡವಾಳಶಾಹಿ ಪ್ರಭುತ್ವವನ್ನು ತೊಡೆದು ಹಾಕಿ ಆಸ್ಥಾನದಲ್ಲಿ ಕಮ್ಯುನಿಸಂ ಅನ್ನು ಸ್ಥಾಪಿಸಬಹುದಾಗಿದೆ. ಒಂದು ಗುಂಪನ್ನು ಮತ್ತೊಂದು ಗುಂಪಿನ ಸಹಾಯದಿಂದ ಹತ್ತಿಕ್ಕುವ ಮಾರ್ಗವನ್ನಾಗಿ ರಾಜ್ಯವನ್ನು ಬಳಸಿಕೊಳ್ಳಬಹುದಾಗಿದೆ. ರಾಜಕೀಯ ಅಧಿಕಾರಕ್ಕೆ ಬರಲು ಹವಣಿಸುವವರು ತಮ್ಮ ವಿರೋಧಿ ಗುಂಪನ್ನು ಮೊದಲು ನಾಶಪಡಿಸಬೇಕು. ಆದುದರಿಂದಲೇ ರಾಜ್ಯದ ಪ್ರಥಮ ಕರ್ತವ್ಯ ಹಾಗೂ ಜವಾಬ್ದಾರಿಯೆಂದರೆ ಕಾರ್ಮಿಕ ವರ್ಗದವರ ವಿರುದ್ಧ ಸಿಡಿದೇಳುವ ಎಲ್ಲಾ ವರ್ಗದ ಜನರನ್ನು ನಿರ್ದಯವಾಗಿ ನಾಶಗೊಳಿಸುವುದೇ ಆಗಿರುತ್ತದೆ. ಒಮ್ಮೆ ಕಮ್ಯುನಿಸ್ಟ್‌ರು ಅಧಿಕಾರಕ್ಕೆ ಬಂದರೆ ಇಂತಹ ಸಮಾಜಘಾತುಕ ಶಕ್ತಿಯು ದುರ್ಬಲಗೊಳಿಸಲಾಗುವುದು. ಹಾಗೆಯೇ ಬಂಡವಾಳಶಾಹಿ ಪದ್ಧತಿಯನ್ನು ಕೊನೆಗಾಣಿಸುವುದೂ ಅದರ ಪ್ರಮುಖ ಜವಾಬ್ದಾರಿಯಾಗಿರುತ್ತದೆ. ವಾಸ್ತವಿಕವಾಗಿ ಮಾವೊ ಏಕ ವ್ಯಕ್ತಿ ಪೂಜೆಯನ್ನು ಪ್ರತಿಪಾದಿಸಿದ್ದಾನೆ ಹಾಗೂ ಅಂತಹ ವ್ಯಕ್ತಿಯು ಎಲ್ಲರಿಗಿಂತ ಶ್ರೇಷ್ಠನಾಗಿದ್ದು ಆತನ ಹೇಳಿಕೆಯನ್ನು ಕಾನೂನು ಎಂದು ಪರಿಗಣಿಸಲಾಗುತ್ತದೆ.

ಮಾವೊ ಯುದ್ಧ ಹಾಗೂ ಸಂಧಿಯ ತತ್ವವನ್ನು ಪ್ರತಿಪಾದಿಸಿದ್ದಾನೆ. ಪ್ರಥಮವಾಗಿ ಎಲ್ಲಾ ಬಂಡವಾಳಶಾಹಿಗಳು ಯುದ್ಧದಲ್ಲಿ ತೊಡಗುವಂತೆ ಮಾಡಿ ಅವರ ಎಲ್ಲಾ ಶಕ್ತಿಗಳೂ ಕುಂಠಿತಗೊಂಡಾಗ ಸಂಧಿಗಾಗಿ ಆಹ್ವಾನಿಸಬೇಕು. ಅದೇ ಕಾಲದಲ್ಲಿ ತನ್ನ ಶಕ್ತಿ ಸಾಮರ್ಥ್ಯಗಳನ್ನು ವೃದ್ಧಿಸಿಕೊಂಡು ಸಂಧಿ ಕಾಲದಲ್ಲಿ ಅವರನ್ನು ಶಾಂತಿ ವಾತಾವರಣವನ್ನು ಕೆಡಿಸಿದ ಅಪರಾಧಕ್ಕಾಗಿ ಬಂಧಿಸಬೇಕು. ಇಲ್ಲವೇ ಕ್ಷಿಪ್ರವಾಗಿ ಅವರ ಮೇಲೆ ಆಕ್ರಮಣ ಮಾಡಿ ಅವರ ಗಡಿ ಪ್ರದೇಶಗಳನ್ನು ಆಕ್ರಮಿಸಿಕೊಂಡು ತಮಗೆ ಅನುಕೂಲವಾಗುವಂತಹ ಒಪ್ಪಂದಗಳಿಗೆ ಸಹಿ ಹಾಕಿಸಿಕೊಳ್ಳಬೇಕು ಎಂಬ ಅಭಿಪ್ರಾಯವನ್ನು ಮಂಡಿಸಿದ್ದಾನೆ.

*** ಪ್ರಜಾಪ್ರಭುತ್ವ ಮತ್ತು ಮಾವೊ-ತ್ಸೆ-ತುಂಗ್**

ಮಾವೊ ಕ್ರಾಂತಿಯ ನಂತರದ ರಾಜಕೀಯ ಬೆಳವಣಿಗೆಗಾಗಿ ಶ್ರಮಿಸಿದ ಉತ್ತಮ ಕಮ್ಯುನಿಸ್ಟ್ ಚಿಂತಕನಾಗಿದ್ದಾನೆ. ಏಂಜೆಲ್ಸ್

ರಾಜ್ಯವು ನಶಿಸಿ ಹೋಗುವುದರ ಬಗ್ಗೆ ತಿಳಿಸಿದ್ದಾನೆ. ಲೆನಿನ್ ಸಹ ಕ್ರಾಂತಿಯ ನಂತರ ಅಲ್ಲಿ ಕಾರ್ಮಿಕರ ಸರ್ಕಾರವಿರುತ್ತದೆ ಎಂದಿದ್ದಾನೆ. ಆದರೆ ಮಾವೊ ಕ್ರಾಂತಿಯ ನಂತರದ ರಾಜ್ಯದ ಬಗ್ಗೆ ಚರ್ಚಾಸ್ಪದವಾದ ಅಭಿಪ್ರಾಯವನ್ನು ಮಂಡಿಸಿದ್ದಾನೆ. ಹೊಸ ಪ್ರಜಾಪ್ರಭುತ್ವದ ನಿರ್ಮಾಣದ ಬಗ್ಗೆ ವಿವರಣೆ ನೀಡಿದ್ದಾನೆ. ಅದು ಪಾಶ್ಚಾತ್ಯ ಪ್ರಭುತ್ವಕ್ಕಿಂತ ಭಿನ್ನವಾಗಿದೆ. ಏಕೆಂದರೆ ಅಲ್ಲಿ ಕೇವಲ ಬಂಡವಾಳಶಾಹಿಗಳ ಆಡಳಿತವಿರುತ್ತದೆ. ಆದರೆ ನವ ಪ್ರಜಾಪ್ರಭುತವ ಪದ್ಧತಿಯಲ್ಲಿ ಕಾರ್ಮಿಕರ ಆಳ್ವಿಕೆಯಿರುತ್ತದೆ. ಈ ಪದ್ಧತಿಯಲ್ಲಿ ಬಂಡವಾಳಶಾಹಿಗಳ ಆಸ್ತಿಯನ್ನು ವಶಪಡಿಸಿಕೊಳ್ಳಲಾಗುವುದಿಲ್ಲ. ಹಾಗೆಯೇ ಉತ್ಪಾದನೆಯನ್ನು ಕಡಿತಗೊಳಿಸುವುದಿಲ್ಲ. ಆದರೆ ಕಾರ್ಮಿಕರು ಶೋಷಿಸಲ್ಪಡುವುದನ್ನು ನಿಷೇಧಿಸಲಾಗುತ್ತದೆ. ಭೂಮಿಯನ್ನು ಉಳುವವರಿಗೆ ನೀಡಲಾಗುತ್ತದೆ. ಹಾಗೆಯೇ ನವ ಸಮಾಜದಲ್ಲಿ ಸಂಸ್ಕೃತಿಯ ಉದ್ದೀಪತೆಗೆ ಅವಕಾಶವಿರುತ್ತದೆ. ಹೀಗೆ ಮಾವೊನ ರಾಜಕೀಯ ವಿಚಾರಗಳು ಇಡೀ ಚೀನಾ ದೇಶವನ್ನು ಜಾಗೃತಿಗೊಳಿಸಿದವು.

## 23.3 ಮಾವೊ ಸಿದ್ಧಾಂತದ ಮೂಲಭೂತ ವಿಚಾರಗಳು

ಮಾವೊ ಸಿದ್ಧಾಂತದ ಮೂಲಭೂತ ವಿಚಾರಗಳನ್ನು ಈ ಕೆಳಗಿನಂತೆ ಸಂಕ್ಷಿಪ್ತವಾಗಿ ಉಲ್ಲೇಖಿಸಬಹುದು.

* ಮಾವೊ ವಾದವು ಮಾರ್ಕ್ಸ್‌ವಾದ ಮತ್ತು ಲೆನಿನ್ ವಾದಗಳ ಸಂಯೋಜನೆಯಾಗಿದೆ. ಅದು ಸೋವಿಯತ್ ರಷ್ಯಾದ ಪರಿಷ್ಕೃತ ಸಮತಾವಾದವನ್ನು ವಿರೋಧಿಸುತ್ತದೆ.

* ಮಾವೊ-ತ್ಸೆ-ತುಂಗ್‌ರು ಯುದ್ಧ ಮತ್ತು ಕ್ರಾಂತಿ ವಿಧಾನಗಳನ್ನು ಎತ್ತಿಹಿಡಿದಿದ್ದರು. ಬಂಡವಾಳಶಾಹಿಗಳ ಮತ್ತು ಸಾಮ್ರಾಜ್ಯಶಾಹಿಗಳ ಹಿಡಿತದಿಂದ ಜನತೆಯನ್ನು ಮುಕ್ತಗೊಳಿಸಲು (ಬಿಡುಗಡೆ) ಮಾವೊರವರು ಜನತಾ ಯುದ್ಧವನ್ನು ಬೆಂಬಲಿಸಿದ್ದರು. ಚೀನಾದ ಮಾರ್ಗದರ್ಶನದಲ್ಲಿ ಆಫ್ರಿಕಾ-ಏಷಿಯಾದ ಜನತೆಯನ್ನು ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿಗಳ ನಿಯಂತ್ರಣದಿಂದ ಬಿಡುಗಡೆಗೊಳಿಸಬೇಕೆಂದು ಮಾವೊರವರ ಮಹದಾಕಾಂಕ್ಷೆಯಾಗಿತ್ತು.

* ಮಾವೊರವರು ಸಾಮ್ರಾಜ್ಯಶಾಹಿ ವಿರೋಧಿಯೂ ಮತ್ತು ಅಮೆರಿಕಾದ ವಿರೋಧಿಯೂ ಆಗಿದ್ದರು. ಅಮೆರಿಕಾದ ಸಾಮ್ರಾಜ್ಯಶಾಹಿ ನೀತಿಯನ್ನು ಮಾವೊ ಆತನ ಬೆಂಬಲಿಗರು ಕಟುವಾದ ಮತ್ತು ಅಸತ್ಯ ಭಾಷೆಯಲ್ಲಿ ನಿಂದಿಸಿದ್ದಾರೆ.

* ಚೀನಾ ವಿಶ್ವ ನಾಯಕತ್ವವನ್ನು ಹೊಂದಬೇಕೆಂಬುದು ಮಾವೊ ವಾದದ ಧ್ಯೇಯವಾಗಿದೆ. ಆದ್ದರಿಂದ ಚೀನಾ ಶಸ್ತ್ರಾಸ್ತ್ರಗಳನ್ನು ಹೊಂದಿ ಎಲ್ಲೆಲ್ಲಿ ಸಾಧ್ಯವೋ ಅಲ್ಲಲ್ಲಿ ಆಕ್ರಮಣ ಮಾಡಬೇಕೆಂಬುದು ಅದರ ಉದ್ದೇಶವಾಗಿದೆ.

ಸೆರೆಮನೆಯಲ್ಲಿದ್ದಾಗ ಅಧ್ಯಯನ, ಚಿಂತನ, ಲೇಖನಗಳ ತಪ್ಪಸ್ಸು ನಡೆಯಿತು. ಜರ್ಮನ್, ಪಾಳೀ ಭಾಷೆಗಳ ಅಧ್ಯಯನವನ್ನು ಸೆರೆಮನೆಯಲ್ಲಿಯೇ ಮಾಡಿದರು. ಸೆರೆಮನೆಯಿಂದ ತಿಲಕರು ರಾಷ್ಟ್ರಕ್ಕೆ ಕೊಟ್ಟ ಕಾಣಿಕೆಯೆಂದರೆ ಗೀತಾ ರಹಸ್ಯ ಎಂಬ ದೊಡ್ಡ ಆಕಾರದ ಸಾವಿರ ಪುಟಗಳ ವಿವೇಚಾನಾತ್ಮಕ ಗ್ರಂಥ. ವೇದಾಂತ ವಿಷಯದ ಇನ್ನೂ ಅನೇಕ ಗ್ರಂಥಗಳನ್ನು ಬರೆದಿದ್ದಾರೆ. ಒರೈಯನ್ (1893) ಮತ್ತು ಅರಾಬಿಕ್ ಹೋಮ್ ಇನ್ ದಿ ವೇದಾಸ್ (1903) ಗ್ರಂಥಗಳು ಇವರ ಸಂಶೋಧನಾ ಪ್ರವೃತ್ತಿಗೆ ಸಾಕ್ಷಿಗಳಾಗಿವೆ.

## 23.4 ಮಾವೊ ವಾದವು ಮಾರ್ಕ್ಸ್‌ವಾದ ಮತ್ತು ಲೆನಿನ್ ವಾದಗಳ ಸಂಯೋಜನೆ

ಮಾರ್ಕ್ಸ್‌ನ ರಾಜಕೀಯ ವಿಚಾರಗಳು ದ್ವಂದ್ವಾತ್ಮಕ ಭೌತಿಕವಾದದ ತಳಹದಿಯ ಮೇಲೆ ನಿರ್ಮಿತವಾಗಿರುತ್ತವೆ. ಅದಕ್ಕಾಗಿ ಕ್ರಾಂತಿಕಾರಕ ಬಣ್ಣ ಅವನ ವಿಚಾರಗಳಿಗೆ, ವರ್ಗ ವರ್ಗಗಳ ನಡುವೆ ಹೋರಾಟವು ಅನಿವಾರ್ಯ ಎಂದು ಮಾರ್ಕ್ಸ್‌ನ ಗ್ರಹಿಕೆ. ಮಾನವನ ಇತಿಹಾಸವು ವರ್ಗ ಕಲಹಗಳ ದಾಖಲೆ ಎಂದು ಮಾರ್ಕ್ಸ್‌ನ ಅಭಿಪ್ರಾಯ. ಆಧುನಿಕ ಔದ್ಯಮಿಕ ಯುಗದಲ್ಲಿ ಈ ವರ್ಗ ಕಲಹವು ತೀಕ್ಷ್ಣ ಸ್ವರೂಪವನ್ನು ತಾಳುತ್ತ ಜಗತ್ತನ್ನೇ ಆವರಿಸುತ್ತದೆ. ಜಾಗತಿಕ ಕೂಲಿಕಾರರ ಸಂಘಟನೆ, ಸಹನೆ ಮೀರಿದ ಕೂಲಿಕಾರರಲ್ಲಿ

ಕ್ರಾಂತಿಕಾರಕ ವಿಚಾರಗಳ ಪ್ರಭಾವ ಬಂಡವಾಳಶಾಹಿಯ ದೋಷಗಳೇ ಈ ಕ್ರಾಂತಿಗೆ ಪುಷ್ಟಕೊಂಡುತ್ತದೆ. ಬಲಾತ್ಕಾರದಿಂದಲೇ ತಮ್ಮ ಗುರಿ ಸಾಧನೆ ಸಾಧ್ಯವೆಂದು ಅರಿವು ಕಾರ್ಮಿಕರಲ್ಲಿ. ಆದ್ದರಿಂದ ಒಮ್ಮೆ ಕ್ರಾಂತಿ ಸಂಭವಿಸಲೇಬೇಕು ಎಂದು ಮಾರ್ಕ್ಸ್‌ನ ವಿಚಾರ. ಆತ್ಮಹಿಂಸೆಗೆ ಒಳಪಟ್ಟು, ಕಂಗಾಲಾದ ಕಾರ್ಮಿಕರು ಒಂದು ಪ್ರಬಲ ಸಂಘಟನೆಯನ್ನು ಸ್ಥಾಪಿಸಿ ಬಂಡವಾಳಶಾಹಿಯ ವಿರುದ್ಧ ಬಂಡೇಳುತ್ತಾರೆ. ವರ್ಗ ಕಲಹವು ಕ್ರಾಂತಿಯಲ್ಲಿ ಕೊನೆಗೊಳ್ಳುವುದೆಂದು ಮಾರ್ಕ್ಸ್‌ನ ಅಭಿಪ್ರಾಯ. ಕ್ರಾಂತಿಯಿಂದಲೇ ಬಂಡವಾಳಶಾಹಿಯು ನಾಶಹೊಂದಿ ಕಾರ್ಮಿಕರ ಸರ್ವಾಧಿಕಾರತ್ವವು ಸ್ಥಾಪಿತವಾಗುತ್ತದೆ. ಬಂಡವಾಳಶಾಹಿಯಿಂದ ಕಾರ್ಮಿಕರ ಆಡಳಿತ ಸ್ಥಾಪನೆಯ ವಿಷಯದ ಮೇಲೆ ಮಾರ್ಕ್ಸ್‌ನಿಗೆ ನಿಶ್ಚಿತವಾದ ವಿಚಾರಗಳು ಇದ್ದಂತೆ ಕಂಡು ಬರುವುದಿಲ್ಲ. ಕಮ್ಯುನಿಸ್ಟ್ ಮ್ಯಾನಿಫೆಸ್ಟೋದಲ್ಲಿ ಕ್ರಾಂತಿಯು ಅನಿವಾರ್ಯವಾಗುವುದೆಂದು ಹೇಳುತ್ತಾನೆ. ಬಂಡವಾಳಶಾಹಿಯನ್ನು ನಾಶಪಡಿಸಿ ಕಾರ್ಮಿಕರ ಸರ್ವಾಧಿಕಾರ ಸ್ಥಾಪನೆಗೆ ಕ್ರಾಂತಿಯು ಅನಿವಾರ್ಯವಾಗುವುದೆಂದು ಹೇಳುತ್ತಾನೆ. ಬಂಡವಾಳಶಾಹಿಯನ್ನು ನಾಶಪಡಿಸಿ ಕಾರ್ಮಿಕರ ಸರ್ವಾಧಿಕಾರ ಸ್ಥಾಪನೆಗೆ ಕ್ರಾಂತಿಯು ಅವಶ್ಯವೆಂಬ ವಿಚಾರವನ್ನು ವ್ಯಕ್ತಪಡಿಸುತ್ತಾನೆ. ಸಮಾಜವಾದಿ ಸಮಾಜ ನಿರ್ಮಾಣಕ್ಕೆ ಕ್ರಾಂತಿಯೇ ಅವಶ್ಯ. ಯಾವುದೇ ಸುಧಾರಣೆಗಳಿಂದ ಸಮಾಜವಾದಿ ಸಮಾಜ ಸ್ಥಾಪನೆಯು ಅಸಾಧ್ಯವೆಂಬ ಅಭಿಪ್ರಾಯ ತಾಳಿರುತ್ತಾನೆ. ಆದರೆ ತರುವಾಯ ಅವನ ವಿಚಾರಗಳು ಇಷ್ಟು ಉಗ್ರವಾದವುಗಳಾಗಿ ಕಂಡುಬರುವುದಿಲ್ಲ. ಕೂಲಿಕಾರರು ಅಧಿಕಾರವನ್ನು ಪಡೆಯುವ ಮಾರ್ಗಗಳು ಎಲ್ಲೆಡೆಯಲ್ಲಿಯೂ ಒಂದೇ ಆಗಿರುವುದಿಲ್ಲ ಎಂದು 1872 ರಲ್ಲಿ ಅಮೆಸ್ಟರ್‌ಡ್ಯಾಮ್‌ದಲ್ಲಿ ಒಂದು ಸಾರ್ವಜನಿಕ ಸಭೆಯಲ್ಲಿ ಹೇಳಿರುತ್ತಾನೆ. ಬೇರೆ ಬೇರೆ ಪ್ರದೇಶಗಳ ಸಂಸ್ಥೆ, ರೂಢಿ, ಚಟುವಟಿಕೆಗಳನ್ನು ನಾವು ಲೆಕ್ಕದಲ್ಲಿ ತೆಗೆದುಕೊಳ್ಳಬೇಕಾಗುವುದೆಂದು ನಮಗೆ ಕಂಡು ಬರುತ್ತದೆ. ಇಂಗ್ಲೆಂಡ್ ಮತ್ತು ನಿಮ್ಮ ಸಂಸ್ಥೆಗಳ ಪರಿಚಯವೂ ನನಗೆ ವಿಶೇಷವಿದ್ದರೆ ಪೋಲೆಂಡ್ ಇಂಥಹ ರಾಷ್ಟ್ರಗಳಲ್ಲಿ ಕಾರ್ಮಿಕರು ತಮ್ಮ ಗುರಿಗಳನ್ನು ಶಾಂತಿಯುತ ಮಾರ್ಗಗಳಿಂದ ಸಾಧಿಸಬಹುದೆಂಬುದನ್ನು ನಾವು ಅಲ್ಲಗಳೆಯಲಾರೆವು. ಆದರೆ ಪ್ರಕರಣವು ಎಲ್ಲ ರಾಷಟ್ರಗಳಿಗೂ ಅನ್ವಯಿಸುವುದಿಲ್ಲ ಎಂದು ಹೇಳಿರುವುದನ್ನು ನೋಡಿದರೆ ಶಾಂತಿಯುತ ಬದಲಾವಣೆಯಲ್ಲಿಯಬ ಮಾರ್ಕ್ಸ್‌ನಿಗೆ ನಂಬಿಕೆ ಇರುವುದು ಕಂಡು ಬರುತ್ತದೆ. ಶಾಂತಿಯುತ ಬದಲಾವಣೆಯು ಅಪವಾದಾತ್ಮಕ. ಕ್ರಾಂತಿ ಸರ್ವೇಸಾಮಾನ್ಯ ಎಂಬ ಗ್ರಹಿಕೆ ಇರಬಹುದು. ಅದು ಒಂದು ಶಾಂತಿಯುತ ಕ್ರಾಂತಿಯೇ ಸರಿ.

ಒಟ್ಟಿನ ಮೇಲೆ ಸಾಮಾನ್ಯವಾಗಿ ಕ್ರಾಂತಿಯಿಂದ ಕಾರ್ಮಿಕರು ಬಂಡವಾಳಶಾಹಿಯನ್ನು ನಾಶಗೊಳಿಸಿ ತಮ್ಮ ಸರ್ವಾಧಿಕಾರವನ್ನು ಸ್ಥಾಪಿಸುತ್ತಾರೆ. ನಂತರ ರಾಷ್ಟ್ರದಲ್ಲಿ ಅಮೂಲಾಗ್ರ ಬದಲಾವಣೆಯ ಕಾರ್ಯಕ್ರಮಗಳನ್ನೂ ನಿರೂಪಿಸಿ ಕಾರ್‍ಯಗತಗೊಳಿಸುತ್ತಾರೆ. ವರ್ಗಗಳೆಲ್ಲವನ್ನು ನಾಶಗೊಳಿಸಿ ಖಾಸಗಿ ಆಸ್ತಿಯನ್ನು ರದ್ದುಗೊಳಿಸಲಾಗುತ್ತದೆ. ಉತ್ಪಾದನೆಯ ಸಾಧನೆಗಳೆಲ್ಲವೂ ಸಮಾಜಕ್ಕೆ ಸೇರುತ್ತವೆ. ಆರ್ಥಿಕ ಸರ್ವ ವ್ಯವಸ್ಥೆಯು ಸರ್ಕಾರದ ಅಂಕಿತದಲ್ಲಿ ತಂದುಕೊಳ್ಳಲಾಗುತ್ತದೆ. ಪ್ರತಿಯೊಬ್ಬ ವ್ಯಕ್ತಿಯ ಅಭಿವೃದ್ಧಿಯೊಂದಿಗೆ ಸಮಾಜದ ಅಭಿವೃದ್ಧಿ ಸಾಧಿಸುವತ್ತ ಗಮನ ಹರಿಸಲಾಗುತ್ತದೆ. ಕಾರ್ಮಿಕರ ಕ್ರಾಂತಿಯ ವಿಶಿಷ್ಟ ಲಕ್ಷಣವೆಂದರೆ ಉಳಿದ ಕ್ರಾಂತಿಗಳಂತೆ ಕೇವಲ ಸರ್ಕಾರದಲ್ಲಿ ಬದಲಾವಣೆಯನ್ನು ಮಾಡುವುದಷ್ಟೇ ಆಗಿರದೇ ಸಮಾಜದಲ್ಲಿ ಅಮೂಲಾಗ್ರ ಬದಲಾವಣೆಯನ್ನು ಸ್ಥಿರಸ್ಥಾಯಿಯಾಗಿ ಇಡುವುದು ಆಗಿರುತ್ತದೆ. ಎಲ್ಲ ಹಂತಗಳಲ್ಲಿಯೂ ಬದಲಾವಣೆ ವ್ಯಕ್ತಿಜೀವನದಲ್ಲಿ ಪರಿಪೂರ್ಣ ಬದಲಾವಣೆ, ಹೊಸ ಸರ್ಕಾರ, ಹೊಸ ಸಮಾಜ, ಹೊಸ ಪದ್ಧತಿ, ವರ್ಗ ನಿರ್ಮೂಲನ, ವರ್ಗರಹಿತ, ಸಮಾಜ ಸ್ಥಾಪನೆ. ಆರ್ಥಿಕ ವ್ಯವಸ್ಥೆ ಸರ್ಕಾರದ ವಶಕ್ಕೆ, ಉತ್ಪಾದನೆ ಹಾಗೂ ವಿತರಣೆ, ಸರ್ಕಾರದ ಕೈಯಲ್ಲಿ ಖಾಸಗೀ ಆಸ್ತಿನಾಶ ಎಲ್ಲ ಆಸ್ತಿಯು ಸರ್ಕಾರದ ಆಸ್ತಿಯು, ವ್ಯಕ್ತಿಗೆ ತನ್ನ ಸಾಮರ್ಥ್ಯಕ್ಕೆ ತಕ್ಕಂತೆ ದುಡಿಮೆ, ಅವಶ್ಯವಿದ್ದಂತೆ ಪಡೆಯುವುದು ಇವು ಸರ್ಕಾರದ ಗುರಿ ಆಗುತ್ತವೆ. ವ್ಯಕ್ತಿಯ ಆಚಾರ, ವಿಚಾರಗಳಲ್ಲಿಯೂ ಬದಲಾವಣೆಯಾಗುವುದರಿಂದ ಅದೊಂದು ಕ್ರಾಂತಿಕಾರಕ ಬದಲಾವಣೆಯೆಂದು ಕರೆಯಲೇಬೇಕಾಗುತ್ತದೆ.

### 21.4.2 ಸಾಮ್ರಾಜ್ಯವಾದದ ಬಗ್ಗೆ ಲೆನಿನ್‌ರ ವಿಚಾರಗಳು

ಲೆನಿನ್‌ರು ಸಾಮ್ರಾಜ್ಯವಾದವನ್ನು ಬಂಡವಾಳಶಾಹಿಯ ಅತ್ಯುನ್ನತ ಹಂತವೆಂದು ಪರಿಗಣಿಸಿದ್ದಾರೆ. ಲೆನಿನ್‌ರ ಅಭಿಪ್ರಾಯದಲ್ಲಿ ಕೈಗಾರಿಕೆಗಳಲ್ಲಿ ಮುಂದುವರಿದಿರುವ ರಾಷ್ಟ್ರಗಳು ಸಾಮ್ರಾಜ್ಯವನ್ನು ಸ್ಥಾಪಿಸದೆ ಇದ್ದಿದ್ದರೆ, ಮಾರ್ಕ್ಸ್‌ನ ಅಭಿಪ್ರಾಯದಂತೆ ಮಧ್ಯಮವರ್ಗಕ್ಕಿಂತ ಕೀಳಾದ ಜನರ ಮತ್ತು ಕೌಶಲ್ಯದಿಂದ ಕೆಲಸ ಮಾಡುವ ಕಾರ್ಮಿಕರ ಜೀವನ ಸ್ಥಿತಿ ಇನ್ನಷ್ಟು ಕೀಳಾಗುತ್ತಿತ್ತು. ಕೈಗಾರಿಕಾ ರಾಷ್ಟ್ರಗಳಿಂದ ವಸಾಹತುಗಳ (ಅಧೀನ ರಾಜ್ಯಗಳನ್ನು) ಶೋಷಣೆಯಿಂದ ಶ್ರಮಜೀವಿಗಳ ಸ್ಥಿತಿಗತಿಗಳ ಸುಧಾರಿಸಲು ಸಾಧ್ಯ ಎಂಬುದು ಲೆನಿನ್‌ರ ವಾದ. ಸಾಮ್ರಾಜ್ಯಶಾಹಿ ರಾಷ್ಟ್ರಗಳಿಂದ ಧೀನ ರಾಷ್ಟ್ರಗಳ ಮೇಲೆ ಅಧಿಪತ್ಯ ನಡೆಸುವುದಕ್ಕೂ, ಆ ರಾಷ್ಟ್ರಗಳ ನೈಸರ್ಗಿಕ ಸಂಪತ್ತನ್ನು ತಮ್ಮ ದೇಶಕ್ಕೆ ಸಾಗಿಸಿಕೊಳ್ಳುವುದಕ್ಕೂ ಅವಕಾಶ ದೊರೆಯುವುದು. ಇದರಿಂದ ಸ್ವದೇಶದ ಕಾರ್ಮಿಕರ, ಮಧ್ಯಮ ವರ್ಗದ ಜನರ ಜೀವನ ಸ್ಥಿತಿಯೂ ಉತ್ತಮಗೊಳ್ಳುವುದು. ಆದರೆ ಅಧೀನ ರಾಜ್ಯಗಳ ಜನರ ಸ್ಥಿತಿ ಅಧೋಗತಿಗೆ ಇಳಿಯಿತು. ಅಧೀನ ರಾಷ್ಟ್ರಗಳ ಜನರು ಶ್ರಮಜೀವಿಗಳ ಸ್ಥಿತಿಗೆ ಇಳಿದರು. ಸಾಮ್ರಾಜ್ಯಶಾಹಿ ರಾಜ್ಯಗಳ ಶ್ರಮಜೀವಿಗಳು ಬಂಡವಾಳಗಾರರ ಸ್ಥಿತಿಗೆ ಏರಿದರು ಎಂಬುದಾಗಿ ಲೆನಿನ್ ತಿಳಿಸಿರುವನು. ಇದು ಮಾರ್ಕ್ಸ್ ತತ್ವಕ್ಕೆ ವಿರುದ್ಧವಾಗಿಲ್ಲವೆಂದೂ, ಮಾರ್ಕ್ಸ್ ತತ್ವದ ಗುರಿ ಮುಟ್ಟುವುದೆಂದೂ ಲೆನಿನ್‌ರ ವಾದವಾಗಿದೆ. ಬಂಡವಾಳ ಹೆಚ್ಚಿದಂತೆಲ್ಲಾ ಪದಾರ್ಥಗಳ ಉತ್ಪಾದನೆ ಹೆಚ್ಚುವುದು, ಕೈಗಾರಿಕೆಗಳು ಮತ್ತು ಕಾರ್ಖಾನೆಗಳು ಒಟ್ಟುಗೂಡಿ ಟ್ರಸ್ಟ್ ಮತ್ತು ಕಾರ್ಟೆಲ್ಸ್ ಎಂಬ ಸಂಸ್ಥೆಗಳು ಸ್ಥಾಪಿತವಾಗುವವು. ಜೊತೆಗೆ ಬಂಡವಾಳದ ಸ್ವಾಮ್ಯತ್ವ ಕೆವರ ಕೈವಶವಾಗುವುದು, ಹಣ ಪ್ರಪಂಚದ ಮೇಲಿನ ಸ್ವಾಮತ್ವವೂ ಕೂಡ ಇದೇ ರೀತಿ ಬ್ಯಾಂಕುಗಳ ಸಮೂಹಿಕ ಸಂಸ್ಥೆಗೆ ಸೇರುವುದು.

ಹಣಕಾಸಿನ ಬಂಡವಾಳ ಸ್ವಾಮ್ಯತ್ವವು ಮೂರು ರೀತಿಯ ಪರಿಣಾಮಗಳನ್ನುಂಟು ಮಾಡುವುದು. ಮೊದಲನೆಯಾದಾಗಿ, ವಸಾಹತುಗಳ ಜನತೆಯ ಶೋಷಣೆ, ಎರಡನೆಯದಾಗಿ, ಮಾರುಕಟ್ಟೆಗಳಿಗಾಗಿ ರಾಷ್ಟ್ರಗಳು ಪೈಪೋಟಿ ನಡೆಸುವುದರಿಂದ ಯುದ್ಧಕ್ಕೆ ನಾಂದಿಯಾಗುವುದು ಮತ್ತು ಮೂರನೆಯದಾಗಿ ಬಂಡವಾಳ ಅಂತ್ಯಗೊಂಡು ಒಂದು ಹೊಸ ವ್ಯವಸ್ಥೆ ಉದಯವಾಗುವುದು. ಏಕೆಂದರೆ ಅಂತರರಾಷ್ಟ್ರೀಯ ಯುದ್ಧಗಳು ವರ್ಗಕಲಹಗಳನ್ನು ಅಂತ್ಯಗೊಳಿಸುತ್ತವೆ. ಸಾಮ್ರಾಜ್ಯಶಾಹಿ ರಾಷ್ಟ್ರಗಳ ಜನರು ಅಧೀನ ರಾಜ್ಯಗಳ ಜನರನ್ನು ಸ್ವಾರ್ಥ ಸಾಧನೆಗಾಗಿ ಹೆಚ್ಚು ಹೆಚ್ಚಾಗಿ ಉಪಯೋಗಿಸಿಕೊಳ್ಳುವುವು. ಇದರಿಂದ ಅಂತರರಾಷ್ಟ್ರೀಯ ಕ್ಷೇತ್ರದಲ್ಲಿ ಅಶಾಂತಿ ತಲೆದೋರುವುದು. ಕೊನೆಗೆ ಯುದ್ಧವಾಗುವುದು. ಇದರ ಪರಿಣಾಮವಾಗಿ ಬಂಡವಾಳ ಪದ್ಧತಿ ಕೊನೆಗೊಂಡು ಶ್ರಮಜೀವಿಗಳು ಮುಂದುವರಿಯುವವರು ಎಂಬುದಾಗಿ ಲೆನಿನ್ ವಾದ ಮಾಡಿದ್ದಾನೆ.

ಲೆನಿನ್ನನ ವಾದವನ್ನು ವಿಮರ್ಸನಕಾರರು ಟೀಕಿಸಿದ್ದಾರೆ. ಇವನ ಅಭಿಪ್ರಾಯ ಇತಿಹಾಸಕ್ಕೆ ವಿರುದ್ಧವಾಗಿದೆ. ಬಂಡವಾಳದ ಆಮದು ರಫ್ತಿಗೂ ಚಕ್ರಾಧಿಪತ್ಯ (ಸಾಮ್ರಾಜ್ಯ) ಸ್ಥಾಪನೆಗೂ ಯಾವ ಸಂಬಂಧವೂ ಇಲ್ಲ. ಅಲ್ಲದೆ. ಚಕ್ರಾಧಿಪತ್ತಯ ಸ್ಥಾಪನೆಗೂ ಶ್ರಮಜೀವಿಗಳ ಜೀವನ ಮಟ್ಟಕ್ಕೂ ನಿಕಟ ಸಂಬಂಧವಿಲ್ಲ. ಚಕ್ರಾಧಿಪತ್ಯ ಸ್ಥಾಪಿಸಿರುವ ಬೆಲ್ಜಿಯಮ್, ಫ್ರಾನ್ಸ್ ರಾಷ್ಟ್ರಗಳ ಜನರ ಜೀವನದ ಮಟ್ಟಕ್ಕಿಂತ, ಚಕ್ರಾಧಿಪತ್ಯ ಸ್ಥಾಪಿಸದೆ ಇರುವ ಸ್ವೀಡನ್ ಡೆನ್ಮಾರ್ಕ್ ರಾಷ್ಟ್ರಗಳ ಜನರ ಜೀವನ ಮಟ್ಟ ಮೇಲ್ಮಟ್ಟದಲ್ಲಿದೆ. ಪರದೇಶಗಳಿಂದ ಬಂಡವಾಳ ಆಮದು ಮಾಡಿಕೊಳ್ಳುತ್ತಿದ್ದ ಅಮೆರಿಕ, ಕೆನಡಾ, ಆಸ್ಟ್ರೇಲಿಯ ದೇಶಗಳ ಜನರು ದಾರಿದ್ರರಿಂದ ನರಳಲಿಲ್ಲ. ಒಟ್ಟಿನಲ್ಲಿ ಬಂಡವಾಳದ ಆಮದು ಮತ್ತು ರಫ್ತುಗಳಿಗೂ ಶ್ರಮಜೀವಿಗಳ ಜೀವನ ಮಟ್ಟಕ್ಕೂ ಲೆನಿನ್ ಹೇಳಿರುವಂತೆ ನಿಕಟ ಸಂಬಂಧ ಕಲ್ಪಿಸುವುದು ತಪ್ಪು ಎಂಬುದಾಗಿ ವಿಮರ್ಶಕರು ವ್ಯಕ್ತಪಡಿಸಿ, ಲೆನಿನ್ನಿನ ವಾದವನ್ನು ಖಂಡಿಸಿದ್ದಾರೆ.

### 21.4.3 ರಾಜ್ಯದ ಬಗ್ಗೆ ಲೆನಿನ್ನನ ವಿಚಾರಗಳು

ಕಾರ್ಲ್ ಮಾರ್ಕ್ಸ್‌ನಂತೆ, ಲೆನಿನ್ ಕೂಡ ರಾಜ್ಯವು ಒಂದು ವರ್ಗ (ಬಂಡವಾಳಶಾಹಿ ವರ್ಗ) ಮಾತ್ರ ಅನುಕೂಲವಾಗಿರುವ, ಆ ವರ್ಗದ ಹಿತವನ್ನು ಮಾತ್ರ ಸಾಧಿಸುತ್ತಿರುವ ಸಂಸ್ಥೆ ಎಂದು ಪರಿಗಣಿಸಿದ್ದನು. ಬಂಡವಾಳಗಾರರ ಕಾರ್ಮಿಕರನ್ನು ಮತ್ತು ರೈತರನ್ನು ತುಳಿಯುವುದಕ್ಕೆ ರಾಜ್ಯದ ಯಂತ್ರವನ್ನು ಬಳಸಿಕೊಳ್ಳುವರು ಎಂದು ಲೆನಿನ್ ಅಭಿಪ್ರಾಯ ಪಟ್ಟಿದ್ದಾನೆ. ಯಾವಾಗ ಸಮಾಜ ಸಮತಾವಾದಕ್ಕನುಗುಣವಾಗಿ ಪುನರ್ ರಚಿತವಾಗುವುದೋ, ಆಗ ರಾಜ್ಯ ತಾನಾಗಿಯೇ ಕೊನೆಗೊಳ್ಳುವುದು, ರಾಜ್ಯವನ್ನು ನಾಶಗೊಳಿಸುವುದು, ಮನುಷ್ಯನ ಮೇಲೆ ಮನುಷ್ಯ ಬಲಪ್ರಯೋಗ ಮಾಡಿ ಒಬ್ಬನನ್ನು ಇನ್ನೊಬ್ಬ ತನ್ನ ಸ್ವಾರ್ಥಕ್ಕಾಗಿ ಉಪಯೋಗಿಸುವುದು ತಪ್ಪಿಸುವುದು, ಇವುಗಳೇ ಸಮತಾವಾದದ ಗುರಿ ಎಂದು ಲೆನಿನ್ ತಿಳಿಸಿರುವನು.

ಲೆನಿನ್ ಸಾಂಪ್ರದಾಯಿಕವಾದ ಪ್ರಜಾಸರ್ಕಾರವನ್ನು ಒಪ್ಪುವುದಿಲ್ಲ. ಏಕೆಂದರೆ, ಶ್ರಮಜೀವಿಗಳನ್ನು ಮೋಸಗೊಳಿಸುವುದೇ ಈ ಸರ್ಕಾರದ ಗುರಿ. ಶ್ರಮಜೀವಿಗಳ ಪರವಾಗಿ ಒಬ್ಬ ಸರ್ವಾಧಿಕಾರಿ ಇರುವುದು ಮೇಲು. ಏಕನಾಯಕ ಪ್ರಭುತ್ವವಿರುವ ರಾಜ್ಯವೇ ಆದರ್ಶ ರಾಜ್ಯ ಎಂದು ಇವನು ತಿಳಿಸಿರುವನು. ಏಕನಾಯಕ ಪ್ರಭುತ್ವವಿರುವ ದೇಶದಲ್ಲಿನ ಪ್ರಜೆಗಳೆಲ್ಲರ ಪರವಾಗಿ ಅಥವಾ ಬಹುಸಂಖ್ಯಾತರಾದ ಶ್ರಮಜೀವಿಗಳ ಪರವಾಗಿ ಒಬ್ಬ ನಾಯಕ ಅಧಿಕಾರ ನಡೆಸುವುದರಿಂದ ಈ ಬಗೆಯ ಅಧಿಕಾರವನ್ನು ಬಡವರ ಪ್ರಜಾಸರ್ಕಾರವೆಂದು ಹೇಳಬಹುದು ಎಂಬುದು ಲೆನಿನ್‌ನ ಅಭಿಪ್ರಾಯ. ಏಕನಾಯಕ ಪ್ರಭುತ್ವಕ್ಕೆ ಬಲಪ್ರಯೋಗ ಮುಖ್ಯವಾದ ಆಧಾರ, ಕ್ರಾಂತಿಯಿಂದ ಕಾರ್ಯ ಸಾಧಿಸುವುದೇ ಇದರ ನೀತಿ. ಕ್ರಾಂತಿ ಪದ್ಧತಿಯಲ್ಲಿರುವ ಶಕ್ತಿ ಇನ್ನಾವ ಪದ್ಧತಿಯಲ್ಲಿಯೂ ಇಲ್ಲ. ಶಾಂತ ರೀತಿಯಿಂದ ಬಂಡವಾಳ ಪದ್ಧತಿಯನ್ನು ಕೊನಗಾಣಿಸಿ ಇದರ ಸ್ಥಾನದಲ್ಲಿ ಸಮಾಜದ ಸ್ವಾಮ್ಯತ್ವವನ್ನು ಸ್ಥಾಪಿಸುವುದು ಅಸಾಧ್ಯ. ಕ್ರಾಂತಿಯಿಂದಲೇ ಈ ಕಾರ್ಯವನ್ನು ಸಾಧಿಸಲಾಗುವುದು. ಬಂಡವಾಳಗಾರರು ಆತ್ಮ ಸಂತೋಷದಿಂದ ತಮ್ಮ ಸ್ಥಾನಮಾನಗಳನ್ನು, ಆಸ್ತಿಯನ್ನು, ಅಧಿಕಾರವನ್ನು ಬಿಟ್ಟುಕೊಂಡುವುದು ಸ್ವಾಭಾವಿಕವಲ್ಲವಾದ್ದರಿಂದ ಇವರ ಮೇಲೆ ಬಲಪ್ರಯೋಗ ಮಾಡಬೇಕಾಗಿದೆ. ಇನ್ನಾವ ಉಪಾಯದಿಂದಲೂ ಇವರನ್ನು ಪದಚ್ಯುತರನ್ನಾಗಿ ಮಾಡಲಾಗುವುದಿಲ್ಲ ಎಂಬುದು ಇವನ ಅಭಿಪ್ರಾಯ. ರಾಜ್ಯ ಶಾಶ್ವತ ಸಂಸ್ಥೆಯಲ್ಲ. ರಾಜ್ಯದ ಸಹಾಯ ಶ್ರಮ ಜೀವಿಗಳಿಗೆ ತಾತ್ಕಾಲಿಕವಾಗಿರಬೇಕು. ಇದೆ ಸಹಾಯದಿಂದ ಶ್ರಮಜೀವಿಗಳು ತಮ್ಮ ವಿರುದ್ಧ ಪಕ್ಷದ ಜನರನ್ನು ನಿರ್ಮೂಲಗೊಳಿಸಿದ ಮೇಲೆ ರಾಜ್ಯ ತಾನಾಗಿಯೇ ಕೊನೆಗಾಣುವುದು ಎಂದು ಲೆನಿನ್ ಹೇಳಿರುವನು.

ರಾಷ್ಟ್ರ ಉತ್ಕಟಾವಸ್ಥೆಗೆ ಬರದಿದ್ದರೆ, ಸಮಾಜದ ಸ್ಥಿತಿ ಹದಗೆಡದಿದ್ದರೆ ಕ್ರಾಂತಿ ಸಾಧ್ಯವಾಗುವುದಿಲ್ಲ. ಬಹುಸಂಖ್ಯಾತ ಶ್ರಮಜೀವಿಗಳು ಕ್ರಾಂತಿಯ ಅವಶ್ಯಕತೆಯನ್ನು ಚೆನ್ನಾಗಿ ತಿಳಿದಿರಬೇಕು. ಇದಕ್ಕಾಗಿ ಸರ್ವ ತ್ಯಾಗಕ್ಕೂ ಸಿದ್ಧರಾಗಿರಬೇಕು. ದೇಶಕ್ಕೆ ಬಂದಿರುವ ವಿಪತ್ತನ್ನು ಎಲ್ಲರೂ ಮನಗಾಣುವಂತಿರಬೇಕು. ಆಗ ಕ್ರಾಂತಿ ಸಾಧ್ಯವಾಗುವುದು. ಸಮತಾವಾದಕ್ಕನುಗುಣವಾದ ಸಮಾಜದಲ್ಲಿ ಸ್ವಾತಂತ್ರ್ಯ. ಸಮಾನತೆಗಳಿಗೆ ಸ್ಥಾನವಿಲ್ಲ. ಈ ಸಮಾಜದಲ್ಲಿ ಪ್ರತಿಯೊಬ್ಬನಿಂದ ಅವನ ಶಕ್ತಿಗನುಗುಣವಾಗಿಕೆಲಸ ತೆಗೆಯಬೇಕು, ಪ್ರತಿಯೊಬ್ಬನಿಗೆ ಅವನ ಬೇಡಿಕೆಗಳಿಗನುಸಾರವಾಗಿ ಜೀವನ ಸೌಕರ್ಯಗಳನ್ನು ಒದಗಿಸಬೇಕು. ಈ ಸ್ಥಿತಿ ಬರುವವರೆಗೆ ಸಮನಾದ ಕೆಲಸಕ್ಕೆ ಸಮನಾದ ವೇತನ ಕೊಡುವ ಪದ್ಧತಿಯನ್ನು ಆಚರಣೆಗೆ ತರುವುದು ಒಳ್ಳೆಯದು ಎಂಬುದಾಗಿ ತಿಳಿಸಿರುವನು.

### 21.4.4 ಪಕ್ಷ ಪದ್ಧತಿಯ ಬಗ್ಗೆ ಲೆನಿನ್ನನ ವಿಚಾರಗಳು

ಲೆನ್ನಿನನ ಪಕ್ಷ ಸಿದ್ಧಾಂತವು ಸಮತಾವಾದದ ತತ್ವಕ್ಕೆ ನೀಡಿರುವ ಮಹತ್ತರ ಕೊಡುಗೆಯಾಗಿದೆ. ಬಂಡವಾಲಶಾಹಿ ಪದ್ಧತಿಯನ್ನು ಕಿತ್ತೊಗೆಯಲು ಪಕ್ಷ ಸಂಘಟನೆಯು ಪ್ರಮುಖವಾದುದೆಂದು ಲೆನಿನ್ ಪರಿಗಣಿಸಿದ್ದಾನೆ. ತಮ್ಮ ಹೋರಾಟದಲ್ಲಿ ಕಾರ್ಮಿಕರಿಗಿರುವುದು ಸಂಘಟನೆಯಲ್ಲದೆ ಮತ್ತಾವ ಅಸ್ತ್ರವೂ ಇರುವುದಿಲ್ಲ. ಲೆನಿನ್ ಧೋರಣೆಯ ಪ್ರಕಾರ, ಕಾರ್ಮಿಕರಲ್ಲಿ ಕಾರ್ಮಿಕ ವೃತ್ತಿ ಸಂಘದ ಅರಿವಿದ್ದರೆ ಸಾಲದು. ಅವರಲ್ಲಿ ಪ್ರಬಲವಾದ ಪಕ್ಷ ಭಾವನೆ ಇರಬೇಕು. ಸಮತಾವಾದಿ ಪಕ್ಷ ಕ್ರಾಂತಿಯ ಮುಂದಾಳೆಂದು ಲೆನಿನ್

ಅಭಿಪ್ರಾಯಪಟ್ಟಿದ್ದನು. ಪಕ್ಷದ ನೇತೃತ್ವವಿಲ್ಲದಿದ್ದರೆ ಕಾರ್ಮಿಕರಿಗೂ ಕ್ರಾಂತಿಯ ತಿಳುವಳಿಕೆಯುಂಟಾಗುವುದಿಲ್ಲ ಮತ್ತು ಅವರು ಹೀನ ಸ್ಥಿತಿಯಲ್ಲಿಯೇ ಇರಬೇಕಾಗುವುದು ಎಂದು ಲೆನಿನ್ ಒತ್ತಿ ಹೇಳಿದನು.

ಮಾರ್ಕ್ಸ್ ಶ್ರಮಜೀವಿಗಳಲ್ಲಿ ತಮ್ಮ ವರ್ಗದ ಹಿತಸಾಧನೆಯ ಜಾಗೃತಿ ಇರಬೇಕೆಂಬುದನ್ನು ಒತ್ತಿ ಹೇಳಿರುವಂತೆ ಲೆನಿನ್ ಸಮತಾವಾದಿಗಳ ಪಕ್ಷ ಬಲವಾಗಿರುವುದು ಬಹಳ ಮುಖ್ಯವೆಂಬುದನ್ನು ಒತ್ತಿ ಹೇಳಿರುವನು. ಬಲಿಷ್ಟವಾಗಿಯೂ, ಸುವ್ಯವಸ್ಥಿತವಾಗಿಯೂ ಇರುವ ಪಕ್ಷದ ಸಹಾಯವಿಲ್ಲದೆ ಕ್ರಾಂತಿಯ ಮೂಲಕ ಜಯಗಳಿಸುವುದು ಅಸಾಧ್ಯ. ಶ್ರಮಜೀವಿಗಳಿಗಿರುವ ಮುಖ್ಯವಾದ ಬಲವೇ ಇವರ ಪಕ್ಷದ ಸಂಘಟನೆ. ಇವರು ಎಷ್ಟು ಬಡತನದಲ್ಲಿದ್ದರೂ ಇವರೆಲ್ಲರೂ ಒಟ್ಟುಗೂಡುವುದಾದರೆ ಯಾವ ಕೆಲಸವನ್ನಾದರೂ ಸಾಧಿಸಬಲ್ಲರು ಎಂಬುದಾಗಿ ಲೆನಿನ್ ವಾದ ಮಾಡಿ ಪಕ್ಷವನ್ನು ಸಮರ್ಥಿಸಿರುವನು. ಕಾರ್ಮಿಕರಲ್ಲಿ ಕ್ರಾಂತಿಯ ಭಾವನೆಯನ್ನು ಉತ್ತೇಜಿಸಲು ಕ್ರಾಂತಿಗೆ ಮುನ್ನ ಪಕ್ಷ ಅವಶ್ಯಕವಾಗಿರುವುದಲ್ಲದೆ, ಕ್ರಾಂತಿಯ ನಂತರವೂ ಸಹ ಬಂಡವಾಳಶಾಹಿ ರಾಜ್ಯವನ್ನು ನಿರ್ಮೂಲನ ಮಾಡಿ ಕಾರ್ಮಿಕರ ಸರ್ವಾಧಿಕಾರತ್ವವನ್ನು ಸ್ಥಾಪಿಸಲು ಪಕ್ಷ ಅಗತ್ಯವಾಗಿದೆ ಎಂದು ಲೆನಿನ್ ವಾದಿಸಿದ್ದಾನೆ. ಪಕ್ಷವು ಕಾರ್ಮಿಕರಿಗೆ ಒಂದು ಸಿದ್ಧಾಂತವನ್ನು ಕೊಡುವುದಲ್ಲದೆ, ಅವರ ರಕ್ಷಕನಾಗಿಯೂ ಕಾರ್ಯನಿರ್ವಹಿಸುವುದೆಂದು ಲೆನಿನ್ ಹೇಳಿದ್ದಾನೆ.

ಹೀಗೆ ಮಾವೊವಾದವು ಈ ಮೇಲೆ ಗಮನಿಸಿದ ಮಾರ್ಕ್ಸ್ ಮತ್ತು ಲೆನಿನ್‌ರವರ ಚಿಂತನೆಗಳ ಸಂಯೋಜನೆಯಾಗಿದೆ.

## ನಿಮ್ಮ ಪ್ರಗತಿ ಪರಿಶೀಲನೆ - 1

**ಸೂಚನೆ:** 1. ಈ ಕೆಳಗೆ ಬಿಟ್ಟಿರುವ ಜಾಗವನ್ನು ನಿಮ್ಮ ಉತ್ತರಕ್ಕೆ ಉಪಯೋಗಿಸಿಕೊಳ್ಳಿ.

2. ಈ ಘಟಕದ ಕೊನೆಯಲ್ಲಿ ನೀಡಿರುವ ಉತ್ತರದೊಂದಿಗೆ ನಿಮ್ಮ ಪ್ರಗತಿಯನ್ನು ಪರಿಶೀಲಿಸಿಕೊಳ್ಳಿ.

**1. ಕ್ರಾಂತಿಯ ಬಗ್ಗೆ ಮಾವೋರವರ ಚಿಂತನೆಗಳನ್ನು ವಿಮರ್ಶನಾತ್ಮಕವಾಗಿ ಪರಿಸೀಲಿಸಿ?**

........................................................................................................................................................
........................................................................................................................................................
........................................................................................................................................................
........................................................................................................................................................
........................................................................................................................................................
........................................................................................................................................................
........................................................................................................................................................
........................................................................................................................................................

**2. ಮಾವೊ ಸಿದ್ಧಾಂತವನ್ನು ಸಂಕ್ಷಿಪ್ತವಾಗಿ ವಿವರಿಸಿ?**

........................................................................................................................................................
........................................................................................................................................................
........................................................................................................................................................
........................................................................................................................................................
........................................................................................................................................................
........................................................................................................................................................
........................................................................................................................................................

3. ಮಾರ್ಕ್ಸ್ ಮತ್ತು ಲೆನಿನ್‌ರವರ ಚಿಂತನೆಗಳ ಬಗ್ಗೆ ಮಾವೋರವರ ಅಭಿಪ್ರಾಯಗಳನ್ನು ತಿಳಿಸಿ?

.................................................................................................................................................................

.................................................................................................................................................................

.................................................................................................................................................................

.................................................................................................................................................................

.................................................................................................................................................................

## 23.5 ಉಪಸಂಹಾರ

ಮಾವೊರವರು ಚೀನಾದಲ್ಲಿನ ಒಬ್ಬ ಮಹಾನ್ ಮಾನವತಾವಾದಿ ಎನ್ನಬಹುದು. ಇವರು ಚಿಕ್ಕಂದಿನಿಂದಲೇ ಕಾರ್ಲ್ ಮಾರ್ಕ್ಸ್‌ರವರ ಸಮತಾವಾದದಲ್ಲಿ ಹೆಚ್ಚು ಆಸಕ್ತಿ ಉಳ್ಳವರಾಗಿದ್ದುನಂತರ ಚೀನಾದ ರಾಜಕೀಯ ರಂಗದಲ್ಲಿ ಬಿರುಗಾಳಿಯನ್ನೆಬ್ಬಿಸಿ ಹೊಸದಾದ ರಾಜಕೀಯ ವ್ಯವಸ್ಥೆಯನ್ನು ಅಸ್ಥಿತ್ವಕ್ಕೆ ತಂದರು. ಚೀನಾದಲ್ಲಿ ಸಮತಾವಾದಿ ಸರ್ಕಾರ ಅಸ್ಥಿತ್ವಕ್ಕೆ ಬರಲು ಕಾರಣಪುರುಷರಾದರು ಅದರ ಜೊತೆಗೆ ಈ ಸರ್ಕಾರದ ಉಸ್ತುವಾರಿಯನ್ನು ಹೊಂದಿದರು. ಮಾವೊರವರು ಸಮತಾವಾದವನ್ನು ಅನುಸರಿಸಿದರು ಸಹ ಮಾರ್ಕ್ಸ್‌ರವರ ಸಮತಾವಾದವನ್ನು ಯಥಾವತ್ತಾಗಿ ಅನುಸರಿಸಲು ಬಯಸದೆ ಮಾರ್ಕ್ಸ್ ಹಾಗೂ ಲೆನಿನ್‌ರವರ ತತ್ವಗಳೆರಡರ ಸಂಯೋಜಿತ ಅಂಶಗಳನ್ನು ಆಯ್ದುಕೊಂಡು ತಮ್ಮದೇ ಆದಂತ ಹೊಸದಾದ ಸಿದ್ಧಾಂತವನ್ನು ಅಥವಾ ವಾದವನ್ನು ಅನುಷ್ಠಾನಗೊಳಿಸಿದರು. ಇದನ್ನೆ ಮಾವೊವಾದ ಎಂದು ಕರೆಯಲಾಗುತ್ತಿದೆ. ಇವರು ಚೀನಾದಲ್ಲಿನ ರಾಜಕೀಯ ಪರಿಸ್ಥಿತಿಯನ್ನು ಸಂಪೂರ್ಣವಾಗಿ ಬದಲಾಯಿಸಿದರು. ಇದರಿಂದಾಗಿ ಇವರು ಚೀನಾದಲ್ಲಿ ಹೊಸಯುಗ ಪ್ರಾರಂಭಿಸಿ ಅಲ್ಲಿಯ ಜನತೆಯ ಆರಾಧ್ಯ ದೈವರಾಗಿದ್ದಾರೆ.

## 23.6 ಮುಖ್ಯ ಪದಗಳು

ಬಂಡವಾಳಶಾಹಿ : ಖಾಸಗಿ ಒಡೆತನ

ನವಪ್ರಜಾಪ್ರಭುತ್ವ : ಕಾರ್ಮಿಕರ ಆಳ್ವಿಕೆ(ಮಾವೊ ದೃಷ್ಟಿಯಲ್ಲಿ)

ಸಾಮ್ರಾಜ್ಯಶಾಹಿ : ಇತರ ರಾಷ್ಟ್ರಗಳ ಮೇಲೆ ಪ್ರಭುತ್ವ ಸಾಧಿಸುವುದು

## 23.7 ಕೆಲವು ಉಪಯುಕ್ತ ಗ್ರಂಥಗಳು


ಜಯಪಾಲನ್, ಎನ್. : ಹಿಸ್ಟರಿ ಆಫ್ ಚೈನಾ

ಡಾ. ಸುಖ್‌ಬೀರ್ ಸಿಂಗ್ : ಹಿಸ್ಟರಿ ಆಫ್ ಪೊಲಿಟಿಕಲ್ ಥಾಟ್

ಸಬೈನ್, ಜಿ.ಹೆಚ್ : ಎ ಹಿಸ್ಟರಿ ಆಫ್ ಪೊಲಿಟಿಕಲ್ ಥಿಯರಿ,

ಬ್ರಿಚ್ಟ್, ಅರ್ನಾಲ್ಡ್ : ಪೊಲಿಟಿಕಲ್ ಥಿಯರಿ

ಡಾ.ಟಿ.ಡಿ.ದೇವೇಗೌಡ : ಪಾಶ್ಚಿಮಾತ್ಯ ರಾಜಕೀಯ ಚಿಂತನೆ


## 23.8 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು

<u>ನಿಮ್ಮ ಪ್ರಗತಿ ಪರಿಶೀಲನೆ</u> - 1

1. ನೋಡಿ ವಿಭಾಗ 23.2
2. ನೋಡಿ ವಿಭಾಗ 23.3
3. ನೋಡಿ ವಿಭಾಗ 23.4

# ಘಟಕ 24 ಗಾಂಧಿ - ರಾಜ್ಯ, ಗುರಿ ಮತ್ತು ಸಾಧನೆ ಧರ್ಮದರ್ಶಿತ್ವ ಮಂಡಳಿ ಮತ್ತು ಅಹಿಂಸಾವಾದ

## ರಚನೆ


24.0 ಉದ್ದೇಶಗಳು

24.1 ಪೀಠಿಕೆ

24.2 ಜೀವನ ಮತ್ತು ಕೃತಿಗಳು

24.3 ರಾಜ್ಯ

24.4 ಗುರಿ ಮತ್ತು ಸಾಧನೆ

24.5 ಸತ್ಯ ಮತ್ತು ಅಹಿಂಸೆ

24.6 ಗಾಂಧೀಜಿಯವರ ಧರ್ಮದರ್ಶಿತ್ವ ಸಿದ್ಧಾಂತ

24.7 ಉಪಸಂಹಾರ

24.8 ಮುಖ್ಯ ಪದಗಳು

24.9 ಕೆಲವು ಉಪಯುಕ್ತ ಗ್ರಂಥಗಳು

24.10 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು

## 24.0 ಉದ್ದೇಶಗಳು

ಈ ಘಟಕದ ವಸ್ತು ವಿಷಯವನ್ನು ಅಧ್ಯಯನ ಮಂಡಿಸಿದ ನಂತರ ನೀವು

* ಗಾಂಧಿಯವರ ಜೀವನ ಕ್ರಮವನ್ನು ತಿಳಿಯಬಹುದು
* ಗಾಂಧಿಯವರು ಪ್ರತಿಪಾದಿಸಿದ ಗುರಿ ಮತ್ತು ಸಾಧನೆ ತತ್ವವನ್ನು ಚರ್ಚಿಸಬಹುದು
* ಗಾಂಧಿಯವರು ರಾಜ್ಯದ ಬಗ್ಗೆ ತಾಳಿದ ಅಭಿಪ್ರಾಯಗಳನ್ನು ಪರಿಶೀಲಿಸಬಹುದು
* ಗಾಂಧಿಯವರ ತತ್ವವಾದ ಸತ್ಯ ಮತ್ತು ಅಹಿಂಸೆಯ ಮಹತ್ವವನ್ನು ಅರಿಯಬಹುದು.

## 24.1 ಪೀಠಿಕೆ

ಗಾಂಧಿಯವರು 1869ರ ಅಕ್ಟೋಬರ್ 2ರಂದು ಗುಜರಾತಿನಲ್ಲಿ ಜನಿಸಿ ಅಲ್ಲಿಯೇ ತಮ್ಮ ವಿದ್ಯಾಭ್ಯಾಸವನ್ನು ಪ್ರಾರಂಭಿಸಿ ಇಂಗ್ಲೆಂಡಿನಲ್ಲಿ ಕಾನೂನು ಪದವಿ ಪಡೆದು ವಕೀಲಿ ವೃತ್ತಿ ಪ್ರಾರಂಭಿಸಿದರು. ಈ ವಕೀಲಿ ವೃತ್ತಿಯ ಪ್ರಯುಕ್ತವಾಗಿ ದಕ್ಷಿಣ ಆಫ್ರಿಕಾಕ್ಕೆ ತೆರಳಿ ಅಲ್ಲಿದಂತ ವರ್ಣ ಭೇದ ನೀತಿಯಿಂದ ಬೇಸತ್ತು ಈ ಅಮಾನವೀಯತೆಯ ವಿರುದ್ಧ ಹೋರಾಡಿದರು. ಅಂದರೆ ಅಲ್ಲಿ ಅವರ ಅಹಿಂಸಾ ಮಾರ್ಗದ ಹೋರಾಟವನ್ನು ಪ್ರಯೋಗಿಸಿ ಯಶಸ್ವಿಯಾದರು. ನಂತರ ಭಾರತಕ್ಕೆ ಬಂದು ಇಲ್ಲಿ ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಟ ಪ್ರಾರಂಭಿಸಿದರು. ಇವರ ಹೋರಾಟ ಅಹಿಂಸಾ ಮಾರ್ಗದ್ದಾಗಿದ್ದು ಸತ್ಯ, ಧರ್ಮ, ನೈತಿಕತೆ, ಸತ್ಯಾಗ್ರಹಗಳಂತವುಗಳಲ್ಲಿ ನಂಬಿಕೆ ಇಟ್ಟು ಅವುಗಳನ್ನು ಆಧರಿಸಿಕೊಂಡೆ ಹೋರಾಟ ಮಾಡಿದರು. ಇದರ ಫಲವಾಗಿ ಸಾಮ್ರಾಜ್ಯಶಾಹಿಗಳಾದ ಹಾಗೂ ಬಲಿಷ್ಟ ರಾಷ್ಟ್ರವಾಗಿದ್ದ ಇಂಗ್ಲೆಂಡ್‌ನ್ನು ಮನವೊಲಿಸಿ 1947 ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ದೊರಕಿಸಿ ಕೊಡುವಲ್ಲಿ ಯಶಸ್ವಿಯಾದರು. ಇದರಿಂದಾಗಿಯೆ ಮಹತ್ವ ರಾಷ್ಟ್ರಪಿತ ಎಂಬೆಲ್ಲಾ ಹೆಸರಿನಿಂದ ಕರೆಯಲಾಗುತ್ತದೆ. ಇವರು ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದಲ್ಲದೆ ಭಾರತೀಯ ಸಮಾಜದಲ್ಲಿದ್ದಂತ ಅನೇಕ ಅಮಾನವೀಯ ಅಂಶಗಳ ಸುಧಾರಣೆಗೂ ಯತ್ನಿಸಿರುವರು.

## 24.2 ಜೀವನ ಮತ್ತು ಕೃತಿಗಳು

ಗಾಂಧಿಯವರು 1869ರ ಅಕ್ಟೋಬರ್ 2 ನೇ ತಾರೀಖಿನಂದು ಗುಜರಾತಿನ ಪೋರ್‌ಬಂದರಿನಲ್ಲಿ ಜನಿಸಿದರು. ಇವರು ಕರಮ ಚಂದ ಗಾಂಧಿ ಮತ್ತು ಪುಟ್ಲಿಬಾಯಿರವರ ನಾಲ್ಕನೇ ಮಗ. ಗಾಂಧಿಯವರ ಮೇಲೆ ಅವರ ತಂದೆ ಮತ್ತು ತಾಯಿಯವರ ಪ್ರಭಾವ ಬಾಲ್ಯದಲ್ಲಿಯೇ ಪರಿಣಾಮವನ್ನು ಬೀರಿತು. ಗಾಂಧಿಯವರು ಮೆಟ್ರಿಕ್ಯುಲೇಷನ್ ನಂತರ ಕಾನೂನು ಪದವಿಗಾಗಿ ಇಂಗ್ಲೆಂಡಿಗೆ ತೆರಳಿದರು. ಇಂಗ್ಲೆಂಡಿನಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿ 1891ರಲ್ಲಿ ಭಾರತಕ್ಕೆ ಮರಳಿ ವಕೀಲಿ ವೃತ್ತಿಯನ್ನು ಆರಂಭಿಸಿದರು. ನಂತರ 1893ರಲ್ಲಿ ಇವರಿಗೆ ದಕ್ಷಿಣಾ ಆಫ್ರಿಕಾದಿಂದ ಆಹ್ವಾನ ಬಂದಿದ್ದರಿಂದಾಗಿ ದಕ್ಷಿಣ ಆಫ್ರಿಕಾಕ್ಕೆ ತೆರಳಿದರು. ದಕ್ಷಿಣ ಆಫ್ರಿಕಾದಲ್ಲಿನ ರಾಜಕೀಯ ಪರಿಸ್ಥಿತಿಯು ಗಾಂಧಿಯವರ ಮನಸ್ಸಿನ ಮೇಲೆ ಆಳವಾದ ಪರಿಣಾಮ ಬೀರಿತು. ಇದರ ಫಲವಾಗಿ ಅವರು ದಕ್ಷಿಣ ಆಫ್ರಿಕಾದಲ್ಲಿ ಬಲವಾಗಿ ಬೇರೂರಿದ್ದ ವರ್ಣಭೇದ ನೀತಿಯ ವಿರುದ್ಧ ಮೊದಲ ಬಾರಿಗೆ ಅಹಿಂಸೆಯಿಂದ ಕೂಡಿದ ಸತ್ಯಾಗ್ರಹವನ್ನು ನಡೆಸಿ ಯಶಸ್ವಿಯಾದರು. 1914ರ ವೇಳೆಗೆ ದಕ್ಷಿಣ ಆಫ್ರಿಕಾದಿಂದ ಹಿಂದುರಿಗಿದ ಗಾಂಧಿ ಭಾರದಲ್ಲಿನ ಬ್ರಿಟೀಷರ ವಸಾಹತುಶಾಹಿ ಆಡಳಿತದ ವಿರುದ್ಧ ತಮ್ಮ ಹೋರಾಟವನ್ನು ನಡೆಸಿದರು. ಇಲ್ಲಿ ಗಾಂಧಿಯವರ ಹೋರಾಟ ಅಹಿಂಸೆಯಿಂದ ಕೂಡಿದ ಹೋರಾಟವಾಗಿತ್ತು. ಗಾಂಧಿಯವರು ಇದರಲ್ಲಿ ಯಶಸ್ವಿಯಾಗುವ ಮೂಲಕ ಆಗಸ್ಟ್ 15, 1947 ರಂದು ಭಾರತಕ್ಕೆ ಸ್ವಾತಂತ್ರ್ಯವನ್ನು ದೊರಕಿಸಿಕೊಡುವಲ್ಲಿ ಯಶಸ್ವಿಯಾದರು. ಗಾಂಧಿಯವರು ತಮ್ಮ ಹೋರಾಟದ ಜೊತೆ ಜೊತೆಗೆ ಹರಿಜನ, ಯಂಗ್ ಇಂಡಿಯಾ ಎಂಬ ಪತ್ರಿಕೆಗಳನ್ನು

ಪ್ರಾರಂಭಿಸಿದರು. ಇದಲ್ಲದೆ ಗಾಂಧಿಯವರು ಹಲವಾರು ಕೃತಿಗಳನ್ನು ಸಹ ರಚಿಸಿದ್ದು ಅವುಗಳಲ್ಲಿ ಪ್ರಮುಖವಾದವುಗಳು ಈ ಕೆಳಗಿನಂತಿದೆ

* ಸತ್ಯಾಗ್ರಹ ಇನ್ ಸೌತ್ ಆಫ್ರಿಕಾ
* ದಿ ಸ್ಟೋರಿ ಆಫ್ ಮೈ ಎಕ್ಸ್‌ಪೆರಿಮೆಂಟ್ ವಿಥ್ ಟ್ರೂಥ್
* ಹಿಂದ್ ಸ್ವರಾಜ್
* ಇಂಡಿಯಾ ಕೇಸ್ ಫಾರ್ ಸ್ವರಾಜ್
* ಟುವರ್ಡ್ಸ್ ನಾನ್ ವೈಲೆಂಟ್ ಸೊಸೈಟಿ

ಇತ್ಯಾದಿ ಪ್ರಮುಖ ಕೃತಿಗಳನ್ನು ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಗಾಂಧೀಜಿಯವರು ರಚಿಸಿದ್ದಾರೆ.

## 24.3 ರಾಜ್ಯ

ಗಾಂಧಿಯವರು ಆಧುನಿಕ ರಾಜ್ಯ ಪರಿಕಲ್ಪನೆಯನ್ನು ವಿರೋಧಿಸುತ್ತಾ ಇದು ಹೆಚ್ಚು ಅಧಿಕಾರ ಕೇಂದ್ರೀಕೃತವಾದ ನೌಕರಶಾಹಿ ವ್ಯವಸ್ಥೆಯಿಂದ ಕೂಡಿರುವ ವ್ಯವಸ್ಥೆಯಾಗಿದೆ ಎಂದಿದ್ದಾರೆ. ರಾಜ್ಯ ಅಧಿಕಾರದ ಏಕಸ್ವಾಮ್ಯಕ್ಕೆ ಕಾರಣವಾಗುತ್ತದೆ ಇದಕ್ಕೆ ಬದಲಾಗಿ ರಾಜ್ಯವು ಕೆಳಸ್ತರದಲ್ಲಿನ ಜನರ ಕಲ್ಯಾಣವನ್ನು ಕಾಪಾಡುವ ಕಡೆಗೆ ಹೆಚ್ಚು ಕೇಂದ್ರೀಕೃತವಾಗಿರಬೇಕೆಂಬ ನಿಲುವನ್ನು ವ್ಯಕ್ತಪಡಿಸುತ್ತಾರೆ. ಗಾಂಧಿಯವರು ಅಧಿಕಾರ ಎಂಬುದು ಸಮಾಜ ಮತ್ತು ರಾಜ್ಯಗಳೆರಡರಲ್ಲೂ ವಿಕೇಂದ್ರೀಕೃತವಾಗಿ ಹಂಚಿಕೆಯಾಗಬೇಕೆಂದಿದ್ದಾರೆ. ಒಂದು ವೇಳೆ ಜನತೆಯಲ್ಲಿ ಅಧಿಕಾರ ವಿಕೇಂದ್ರೀಕರಣಗೊಳ್ಳದಿದ್ದಲ್ಲಿ ಆಧುನಿಕ ರಾಜ್ಯ ವ್ಯವಸ್ಥೆಯಲ್ಲಿ ನಿಜವಾದ ಪ್ರಜಾಪ್ರಭುತ್ವವನ್ನು ಕಾಣಲು ಸಾಧ್ಯವಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಗಾಂಧಿಯವರ ಪ್ರಕಾರ ನಿಜವಾದ ಪ್ರಜಾಪ್ರಭುತ್ವವೆಂದರೆ ಯಾವುದೇ ಒಬ್ಬ ವ್ಯಕ್ತಿ ಅಥವಾ ಸಂಸ್ಥೆಯ ಪ್ರಾಬಲ್ಯತೆಯಿಂದ ಮುಕ್ತವಾಗಿರುವ ಸಾಮಾಜಿಕ ಹಾಗೂ ರಾಜಕೀಯ ವ್ಯವಸ್ಥೆಯಾಗಿದ್ದು ಇಲ್ಲಿ ಪ್ರತಿಯೊಬ್ಬ ಪ್ರಜೆಯೂ ಸಹ ಎಲ್ಲಾ ರೀತಿಯಲ್ಲಿ ಸಮಾನ ಪ್ರಾತಿನಿಧ್ಯತೆ ಹೊಂದಿದವನಾಗಿದ್ದು ಗಾಂಧಿಯವರು ತಮ್ಮ ಆದರ್ಶ ರಾಜ್ಯದ ಸ್ವರಾಜ್ಯ ಪರಿಕಲ್ಪನೆಯಲ್ಲಿ ಪ್ರಜೆಗಳನ್ನು ರಾಜಕೀಯ ಅಧಿಕಾರದ ಮೂಲ ಆತ್ಮವಿದ್ದಂತೆ ಎಂದು ತಿಳಿಸಿದ್ದು ಅವರ ಆಡಳಿತವನ್ನು ಅವರೇ ಸ್ವಪ್ರೇರಣೆಯಿಂದ ಕೈಗೊಳ್ಳುವಂತಾಗಬೇಕೆಂದಿದ್ದಾರೆ.

ಗಾಂಧಿಯವರ ಸ್ವರಾಜ್ಯದ ಮೂಲ ಸ್ವಯಂ ಆಡಳಿತವನ್ನೊಳಗೊಂಡ ಹಾಗೂ ಉತ್ತಮ ಆಡಳಿತ ಸಂಘಟನೆಯನ್ನೊಳಗೊಂಡ ಒಂದು ಚಿಕ್ಕ ಹಳ್ಳಿ ಅಥವಾ ಗ್ರಾಮವೇ ಆಗಿದೆ. ಈ ಹಳ್ಳಿ ಅಥವಾ ಗ್ರಾಮ ಗಾಂಧಿಯವರ ಚಿಂತನೆಯ ಪ್ರಕಾರ ಹೆಚ್ಚು ಸ್ವಾಯತ್ತತೆಯನ್ನು ಪಡೆದಿದ್ದು ಆರ್ಥಿಕವಾಗಿ ಸ್ವಾವಲಂಬಿಯಾಗಿರಬೇಕು. ಹಾಗೂ ಪ್ರಜೆಗಳು ಸಮುದಾಯದ ಒಳಿತಿಗೆ ಬದ್ಧರಾಗಿರಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಗಾಂಧಿ ಮುಂದುವರೆದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ ನೇರ ಬದಲಾವಣೆಗಳನ್ನು ವಿರೋಧಿಸುತ್ತಾರೆ ಕಾರಣ ಇವುಗಳು ಭ್ರಷ್ಟಾಚಾರಕ್ಕೆ ಕಾರಣವಾಗುತ್ತವೆ ಎಂಬ ನಿಲುವನ್ನು ವ್ಯಕ್ತಪಡಿಸುತ್ತಾರೆ. ಗಾಂಧಿಯವರ ಪ್ರಕಾರ ರಾಜ್ಯ ಒಂದು ನೈತಿಕ ಸಂಸ್ಥೆಯಾಗಿದ್ದು ಧರ್ಮವು ಮಾನವನ ನೈತಿಕ ಜೀವನವನ್ನು ಸಾಗಿಸಲು ಸಹಕಾರಿಯಾದಂತೆ ರಾಷ್ಟ್ರವೂ ಸಹ ಮಾನವನ ನೈತಿಕ ಉನ್ನತಿಗೆ ಪೂರಕವಾಗಿರಬೇಕೆಂದಿದ್ದಾರೆ. ಅಂದರೆ ರಾಜ್ಯದಲ್ಲಿನ ರಾಜಕೀಯ ಜೀವನವು ಧಾರ್ಮಿಕ ತತ್ವಗಳನ್ನು ಆಧರಿಸಿದ್ದಾಗ ಮಾತ್ರ ರಾಜಕೀಯ ಹೆಚ್ಚು ಪರಿಪೂರ್ಣವಾಗಿರುತ್ತದೆ. ಇಲ್ಲವಾದಲ್ಲಿ ಮೌಲ್ಯಗಲಿಂದ ಹೊರತಾದ ರಾಜಕೀಯ ವ್ಯವಸ್ಥೆಯು ಮಾನವನ ಇಡೀ ನೈತಿಕ ಜೀವನವನ್ನು ಹಾಳುಗೆಡವುವ ಮೂಲಕ ಆತ್ಮವನ್ನು ಕೊಲ್ಲುತ್ತದೆ ಎಂದಿದ್ದಾರೆ. ರಾಜ್ಯ ತನ್ನ ಗುರಿ ಸಾಧಿಸಬೇಕಾದಲ್ಲಿ ಸತ್ಯ, ಅಹಿಂಸೆ, ಸೇವಾಭಾವನೆ ಹಾಗೂ ನಿಸ್ವಾರ್ಥಗಳಂತಹ ನೈತಿಕ ತತ್ವಗಳಿಂದ ಕೂಡಿದ್ದಾಗ ಮಾತ್ರ ರಾಜ್ಯವು ತನ್ನ

ಗುರಿಯನ್ನು ಸಾಧಿಸಲು ಸಾಧ್ಯ. ಇಲ್ಲವಾದಲ್ಲಿ ಹಿಂಸೆಯಿಂದ ರಾಜಕೀಯವು ಮಲಿನವಾಗಿ ಮಾನವ ಜನಾಂಗದ ಅವನತಿಗೆ ಕಾರಣವಾಗುತ್ತದೆ ಎಂದಿದ್ದಾರೆ.

ಗಾಂಧಿಯವರು ರಾಜ್ಯದ ಬಗ್ಗೆ ತಮ್ಮ ಅಭಿಪ್ರಾಯವನ್ನು ಮುಂದುವರೆದು ತಿಳಿಸುತ್ತಾ ರಾಜ್ಯವು ಯಾವುದೇ ಕಾರಣಕ್ಕೂ ಸಾಂಸ್ಕೃತಿಕ ವೈವಿಧ್ಯತೆಯನ್ನು ದಮನ ಮಾಡಲು ಪ್ರಯತ್ನಿಸಬಾರದು. ಇದಕ್ಕೆ ಪ್ರತಿಯಾಗಿ ರಾಜ್ಯದಲ್ಲಿನ ಸಾಂಸ್ಕೃತಿಕ ವೈವಿಧ್ಯತೆಯನ್ನು ರಚಿಸಬೇಕೆಂದು ತಿಳಿಸಿದ್ದಾರೆ. ಸಾಂಸ್ಕೃತಿಕ ವೈವಿಧ್ಯತೆಯ ರಕ್ಷಣೆಯ ಸಂದರ್ಭದಲ್ಲಿ ಯಾವುದೇ ಒಂದು ಸಾಮಾಜಿಕ ಆಚರಣೆಯು ಬೇರೊಂದು ಭಾಷೆ ಅಥವಾ ಸಮುದಾಯದ ಹಿತಕ್ಕೆ ಧಕ್ಕೆ ತರುವಂತಿದ್ದರೆ ಅಂತಹ ವೈವಿಧ್ಯತೆಯನ್ನು ಪ್ರೋತ್ಸಾಹಿಸುವುದಕ್ಕೆ ಬದಲಾಗಿ ರಾಜ್ಯ ಅದನ್ನು ನಿಯಂತ್ರಿಸಬೇಕೆಂದಿದ್ದಾರೆ.

ಗಾಂಧಿಯವರು ಕೇಂದ್ರೀಕೃತ ರಾಜ್ಯ ವ್ಯವಸ್ಥೆಯನ್ನು ಪ್ರಬಲವಾಗಿ ಅಲ್ಲಗೆಳೆಯುತ್ತಾ ಆಡಳಿತ ಹಾಗೂ ಅಧಿಕಾರ ಎಂಬುದು ಗ್ರಾಮೀಣ ಸಮುದಾಯಗಳಲ್ಲಿ ವಿಕೇಂದ್ರೀಕೃತವಾಗಬೇಕು ರಾಜ್ಯದಲ್ಲಿ ನ್ಯಾಯವು ಸಾಮಾನ್ಯ ಜನತೆಗೂ ಸಹ ಸುಲಭವಾಗಿ ದೊರೆಯುವಂತಹ ವ್ಯವಸ್ಥೆ ಇರಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ ಪ್ರಸ್ತುತದಲ್ಲಲಿನ ನ್ಯಾಯಾಂಗ ವ್ಯವಸ್ಥೆಯನ್ನು ಹೆಚ್ಚು ದುಬಾರಿಯಿಂದ ಕೂಡಿದ ವ್ಯವಸ್ಥೆಯಾಗಿದೆ ಎಂದು ತಮ್ಮ ಬೇಸರವನ್ನು ವ್ಯಕ್ತಪಡಿಸುತ್ತಾರೆ. ಗಾಂಧಿ ಅಹಿಂಸೆಯಿಂದ ಕೂಡಿದ ಪ್ರಜಾಸತ್ತಾತ್ಮಕ ರಾಜ್ಯ ವ್ಯವಸ್ಥೆಯನ್ನು ಪ್ರತಿಪಾದಿಸಿದ್ದು ರಾಜ್ಯ ವ್ಯವಸ್ಥೆಯು ನೆರೆಹೊರೆ ರಾಜ್ಯಗಳೊಂದಿಗೆ ಉತ್ತಮ ಬಾಂಧವ್ಯವನ್ನುಹೊಂದಿರಬೇಕು. ಆದ್ದರಿಂದ ಸಶಸ್ತ್ರ ಸೈನಿಕ ಪಡೆಯನ್ನು ಹೊಂದಿರಬೇಕಾದ ಅವಶ್ಯಕತೆ ಇರುವುದಿಲ್ಲ ಎಂದಿದ್ದಾರೆ. ಸರ್ಕಾರವು ಹೆಚ್ಚು ಕ್ರಿಯಾಶೀಲವಾಗಬೇಕಾದರೆ ಅಸಹಕಾರ ಮತ್ತು ಅಹಿಂಸೆಗಳಿಂದ ಕೂಡಿದಂತಹ ಹೋರಾಟಗಳಿಂದ ಅದನ್ನು ಪಡೆಯಲು ಸಾಧ್ಯ ಎಂಬ ನಿಲುವನ್ನು ವ್ಯಕ್ತಪಡಿಸುತ್ತಾರೆ. ಸಶಸ್ತ್ರ ಪೋಲೀಸ್ ಪಡೆಯ ಅಪರಾಧಗಳನ್ನು ನಿಯಂತ್ರಿಸುವುದಕ್ಕೆ ಬದಲಾಗಿ ಮತ್ತಷ್ಟು ಅಪರಾಧಿಗಳ ಸಂಖ್ಯೆಯ ಹೆಚ್ಚಳಕ್ಕೆ ಕಾರಣವಾಗುತ್ತದೆ. ಆದ್ದರಿಂದ ಪ್ರತಿಯೊಂದು ಹಳ್ಳಿಯಲ್ಲಿನ ಸಮುದಾಯಗಳು ಸ್ವಯಂ ಪ್ರೇರಿತ ಪೋಲೀಸರಾಗಿ ಅಂದರೆ ತಮ್ಮಲ್ಲಿನ ಅಪರಾಧಿಗಳ ನಿಯಂತ್ರಣ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕೆಂದಿದ್ದು, ಈ ನಿಯಂತ್ರಣ ಕಾರ್ಯದಲ್ಲಿ ಅಹಿಂಸೆ ಇವರ ಪ್ರಧಾನ ಅಸ್ತ್ರವಾಗಿರಬೇಕೆಂದು ತಿಳಿಸಿದ್ದಾರೆ.

ರಾಜ್ಯದಲ್ಲಿನ ಕಾನೂನು ವ್ಯವಸ್ಥೆಯ ಜನರಿಗೆ ಗೌರವ ಹಾಗೂ ಸ್ವಾಭಿಮಾನ ರಕ್ಷಣೆಗೆ ಪೂರಕವಾಗಿರಬೇಕು, ಒಂದು ವೇಳೆ ಕಾನೂನು ವ್ಯವಸ್ಥೆಯು ವ್ಯಕ್ತಿಯ ಗೌರವ ಹಾಗೂ ಸ್ವಾಭಿಮಾನಕ್ಕೆ ಧಕ್ಕೆ ತರುವಂತಿದ್ದರೆ ಅಂತಹ ಕಾನೂನು ವ್ಯವಸ್ಥೆಯನ್ನು ಜನತೆ ಗೌರವಿಸುವುದಿಲ್ಲ ಅಲ್ಲದೆ ಇದರಿಂದಾಗಿ ರಾಜ್ಯದಲ್ಲಿ ಅರಾಜಕತೆ ವಾತಾವರಣ ಸೃಷ್ಟಿಯಾಗುವ ಸಾಧ್ಯತೆ ಇರುತ್ತದೆ. ಆದ್ದರಿಂದ ರಾಜ್ಯದಲ್ಲಿನ ಕಾನೂನು ವ್ಯವಸ್ಥೆಯು ಸಾರ್ವಜನಿಕ ಹಿತಾಸಕ್ತಿಯ ರಕ್ಷಣೆಗೆ ಪೂರಕವಾಗಿರಬೇಕೆಂದಿದ್ದಾರೆ. ಒಂದು ವೇಳೆ ರಾಜ್ಯದಲ್ಲಿನ ಕಾನೂನು ವ್ಯವಸ್ಥೆಯು ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವಾಗಿದ್ದಲ್ಲಿ ಸಮಾಜದಿಂದ ಅದಕ್ಕೆ ನೀರಸವಾದ ಪ್ರತಿಕ್ರಿಯೆ ಬರುವುದರೊಂದಿಗೆ ಜನತೆಗೆ ಕಾನೂನಿನ ಬಗ್ಗೆ ಇರುವಂತಹ ಗೌರವ ಮನೋಭಾವನೆ ಕಡಿಮೆಯಾಗುತ್ತಾ ಸಾಗುತ್ತದೆ ಆದ್ದರಿಂದ ರಾಜ್ಯದಲ್ಲಿನ ಕಾನೂನು ವ್ಯವಸ್ಥೆ ಪ್ರಜೆಗಳ ಹಿತಾಸಕ್ತಿಗೆ ಪೂರಕವಾಗಿರಬೇಕೆಂದಿದ್ದಾರೆ.

## 24.4 ಗುರಿ ಮತ್ತು ಸಾಧನೆ

ಗಾಂಧಿಯವರು ಗುರಿ ಮತ್ತು ಸಾಧನೆಗಳ ಬಗ್ಗೆ ತಿಳಿಸುತ್ತಾ ಯಾವುದೇ ಒಂದು ಗುರಿಯು ಮಾತ್ರ ಒಳ್ಳೆಯದಾಗಿದ್ದರೆ ಸಾಲದು ಗುರಿಯ ಸಾಧನೆಯ ಮಾರ್ಗವೂ ಸಹ ಒಳ್ಳೆಯದಾಗಿರಬೇಕು. ಯಾವುದೇ ಒಂದು ಗುರಿ ಸಾಧನೆಯು ಆ ಗುರಿಸಾಧನೆಗಾಗಿ ಅನುಸರಿಸಿದ ಮಾರ್ಗದ ಮೇಲೆ ಅವಲಂಬಿತವಾಗಿರುತ್ತದೆ ಎಂದಿರುವ ಗಾಂಧಿಯವರು ಹಿಂಸಾ ಮಾರ್ಗದಿಂದ ಕೈಗೊಂಡ ಗುರಿ ಸಾಧನೆಯು

ಪೆಚ್ಚು ಧೀರ್ಘಕಾಲಿಕವಾಗಿ ಉಳಿಯಲು ಸಾಧ್ಯವಿಲ್ಲ ಎಂದಿದ್ದಾರೆ. ಇದಕ್ಕೆ ಪೂರಕವಾಗಿ ರಷ್ಯಾದಲ್ಲಿನ ಬೋಲ್ಶೆವಿಸಕ್‌ರನ್ನು ಗಾಂಧಿಯವರು ಕಟುವಾಗಿ ಟೀಕಿಸುತ್ತಾ ಹಿಂಸೆಯಿಂದ ಕೂಡಿದ ಅಡ್ಡಮಾರ್ಗಗಳು ಗುರಿ ಸಾಧನಾ ಮಾರ್ಗಗಳನ್ನಾಗಿಸಿಕೊಳ್ಳಬಾರದೆಂದಿದ್ದು ಇದಕ್ಕೆ ಬದಲಾಗಿ ಗುರಿ ಸಾಧನೆಯ ಮಾರ್ಗ ಯಾವಾಗಲೂ ಸತ್ಯ ಮತ್ತು ಅಹಿಂಸೆಯಿಂದ ಕೂಡಿರಬೇಕೆಂದು ತಿಳಿಸಿದ್ದಾರೆ. ಗುರಿಸಾಧನೆಯ ಮಾರ್ಗ ಅಹಿಂಸೆಯಿಂದ ಕೂಡಿದ್ದಾಗ ಅದರಿಂದ ಬರುವ ಪ್ರತಿಫಲ ಹೆಚ್ಚು ಧೀರ್ಘಕಾಲವಾಗಿ ಉಳಿಯುವಂತಹ ಫಲಿತಾಂಶವಾಗಿರುತ್ತದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

ಗಾಂಧಿಯವರು ಗುರಿ ಮತ್ತು ಸಾಧನೆ ವಿಚಾರಗಳಿಗೆ ಸಂಬಂಧಿಸಿದಂತೆ ಮೆಕೆವೆಲ್ಲಿಯ ಚಿಂತನೆಗಳನ್ನು ತಿರಸ್ಕರಿಸುತ್ತಾ ಮಾನವನ ಜೀವನವು ನೈತಿಕತೆಯನ್ನು ಆಧರಿಸಿದಂತಹುವಾಗಿರಬೇಕು. ಈ ನೈತಿಕತೆಯ ಗುರಿಯನ್ನು ಕಾಪಾಡಿಕೊಂಡು ಬರಲು ಸತ್ಯ ಅಹಿಂಸೆ, ಪ್ರೀತಿಗಳಂತಹ ಸನ್ಮಾರ್ಗಗಳಿಂದ ಮಾತ್ರ ಸಾಧ್ಯ. ಇದಕ್ಕೆ ಬದಲಾಗಿ ಮೆಕೆವಲ್ಲಿ ತಿಳಿಸಿರುವಂತಹ ಹಿಂಸೆಯಿಂದ ಕೂಡಿರುವ ಹೋರಾಟ ಮಾರ್ಗ ಹೆಚ್ಚು ಅನೈತಿಕ ಹೋರಾಟಮಾರ್ಗವಾಗಿದ್ದು ಅದರಿಂದ ಸಾಧಿಸಿದ ಸಾಧನೆಯು ಅಪರಿಶುದ್ಧವಾದುದಾಗಿದ್ದು ಇದು ಜನರ ಕಲ್ಯಾಣಸಾಧನೆಗೆ ಪೂರಕವಾಗಿರಲು ಸಾಧ್ಯವಾಗಿರುವುದಿಲ್ಲ ಎಂದಿದ್ದಾರೆ.

ಗಾಂಧಿಯವರು ಗುರಿಯ ಬಗ್ಗೆ ತಿಳಿಸುತ್ತಾ ಯಾವುದೇ ಒಂದು ಗುರಿ ವ್ಯಕ್ತಿಗತವಾಗಿರಬಹುದು ಅಥವಾ ಸಾಂಸ್ಥಿಕ ಸ್ವರೂಪದ್ದಾಗಿರಬಹುದು. ಆ ಗುರಿಯ ಸಾಧನೆಯು ಸಮುದಾಯದ ಕಲ್ಯಾಣಕ್ಕೆ ಸಹಕಾರಿಯುತವಾದಂತಹದ್ದಾಗಿರಬೇಕು, ಇದಕ್ಕೆ ಪ್ರತಿಯಾಗಿ ಯಾವುದೇ ಒಬ್ಬ ವ್ಯಕ್ತಿ ಥವಾ ಒಂದು ಸಂಸ್ಥೆಯ ಏಕಸ್ವಾಮ್ಯ ಅಥವಾ ಸರ್ವಾಧಿಕಾರಿ ಧೋರಣೆಯನ್ನು ಪ್ರೇರೇಪಿಸುವಂತಾಗಿರಬಾರದೆಂದು ತಿಳಿಸಿದ್ದಾರೆ. ಇದಲ್ಲದೆ ಅಂತಹ ಗುರಿಸಾಧನೆಗಾಗಿ ಸಮುದಾಯದತ್ತವಾದ ಸತ್ಯಾಗ್ರಹದಂತಹ ಸಾಧನೆಯ ಮಾರ್ಗಗಳನ್ನು ಅನುಸರಿಸಬೇಕೆಂಬ ಸಲಹೆ ನೀಡಿದ್ದಾರೆ. ಗಾಂಧಿಯವರು ಮುಂದುವರೆದು ಗುರಿ ಮತ್ತು ಸಾಧನೆಯ ಬಗ್ಗೆ ತಿಳಿಸುತ್ತಾ ಗುರಿಗಳ ಸಂಖ್ಯೆ ಹೆಚ್ಚಾಗುತ್ತಾ ಹೋದಂತೆಲ್ಲಾ ಅದರ ಸಾಧನಾ ಮಾರ್ಗಗಳಲ್ಲಿ ಹೆಚ್ಚು ವೈವಿಧ್ಯತೆಗಳಿಗೆ ಕಾರಣವಾಗುತ್ತದೆ ಎಂದು ತಿಳಿಸಿದ್ದು ಗುರಿಗಳ ಸಂಖ್ಯೆ ಎಷ್ಟು ಇದ್ದರೂ ಸಹ ಅವುಗಳ ಸಾಧನೆಗಾಗಿ ಅನುಸರಿಸುವ ಮಾರ್ಗ ಶಾಂತಿಯುತವಾದ ಅಹಿಂಸಾ ಮಾರ್ಗವಾಗಬೇಕೆಂದಿದ್ದಾರೆ. ಗಾಂಧಿಯವರ ಈ ಚಿಂತನೆಗೆ ಜಯಪ್ರಕಾಶ್ ನಾರಾಯಣ್ ಪ್ರತಿಕ್ರಿಯಿಸುತ್ತಾ ನಾವು ಸಮಾಜವಾದ ತತ್ವಗಳನ್ನು ಆಚರಣೆಗೆ ತರಬೇಕಾದಲ್ಲಿ ಗಾಂಧಿ ತಿಳಿಸಿರುವಂತಹ ಅಹಿಂಸಾ ಗುರಿ ಸಾಧನಾ ಮಾರ್ಗಗಳಿಂದ ಸಾಧ್ಯ. ಆದರೆ ಪ್ರಸ್ತುತದಲ್ಲಿನ ಹೋರಾಟ ಮಾರ್ಗಗಳಲ್ಲಿ ಗಾಂಧಿಯವರ ಚಿಂತನೆಗೆ ವಿರುದ್ಧವಾದಂತಹ ಹೋರಾಟ ಮಾರ್ಗಗಳಾಗಿದ್ದು ಇದರಿಂದ ಸಮಾಜವಾದದ ತತ್ವಗಳ ಸಾಧನೆ ಅಸಾಧ್ಯ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಒಟ್ಟಿನಲ್ಲಿ ಹೇಳುವುದಾದರೆ ಗಾಂಧಿಯವರ ಗುರಿ ಮತ್ತು ಸಾಧನೆಗೆ ಸಂಬಂಧಿಸಿದ ಚಿಂತನೆಯಲ್ಲಿ ಗುರಿ ಎಷ್ಟು ಪ್ರಮುಖವೊ ಅದರ ಸಾಧನೆ ಹಾಗೂ ಅದರ ಸಾಧನೆಗಾಗಿ ಅನುಸರಿಸುವ ಮಾರ್ಗವೊ ಅಷ್ಟೇ ಪ್ರಮುಖವಾಗಿದ್ದು ಆ ಗುರಿಸಾಧನೆಯ ಪ್ರತಿಫಲ ಹೆಚ್ಚು ಉಪಯುಕ್ತಕಾರಿಯಾಗಿರಬೇಕಾದಲ್ಲಿ ಅಹಿಂಸೆಯಿಂದ ಕೂಡಿದಂತಹ ಮಾರ್ಗಗಳಿಂದ ಮಾತ್ರ ಸಾಧ್ಯ ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

## ನಿಮ್ಮ ಪ್ರಗತಿ ಪರಿಶೀಲನೆ - 1

**ಸೂಚನೆ:** 1. ಈ ಕೆಳಗೆ ಬಿಟ್ಟಿರುವ ಜಾಗವನ್ನು ನಿಮ್ಮ ಉತ್ತರಕ್ಕೆ ಉಪಯೋಗಿಸಿಕೊಳ್ಳಿ.

2. ಈ ಘಟಕದ ಕೊನೆಯಲ್ಲಿ ನೀಡಿರುವ ಉತ್ತರದೊಂದಿಗೆ ನಿಮ್ಮ ಪ್ರಗತಿಯನ್ನು ಪರಿಶೀಲಿಸಿಕೊಳ್ಳಿ.

**1. ರಾಜ್ಯವನ್ನು ಕುರಿತಾದ ಗಾಂಧಿಯವರ ಚಿಂತನೆಯನ್ನು ವಿವರಿಸಿ?**

..............................................................................................................................................

..............................................................................................................................................

..............................................................................................................................................

..............................................................................................................................................

..............................................................................................................................................

..............................................................................................................................................

..............................................................................................................................................

**2. ಗಾಂಧಿಯವರ ಗುರಿ ಮತ್ತು ಸಾಧನೆಯ ಸಿದ್ಧಾಂತವನ್ನು ವಿಶ್ಲೇಷಿಸಿ?**

..............................................................................................................................................

..............................................................................................................................................

..............................................................................................................................................

..............................................................................................................................................

..............................................................................................................................................

..............................................................................................................................................

## 24.5 ಸತ್ಯ ಮತ್ತು ಅಹಿಂಸೆ

ಸತ್ಯ ಮತ್ತು ಅಹಿಂಸೆ ಗಾಂಧಿಯವರ ಚಿಂತನೆಯಲ್ಲಿ ಹೋರಾಟದ ಪ್ರಮುಖ ಅಸ್ತ್ರವಾಗಿದ್ದು ಪ್ರತಿಯೊಬ್ಬ ಮಾನವನ ದೈನಂದಿನ ಜೀವನದಲ್ಲಿ ಸತ್ಯ ಮತ್ತು ಅಹಿಂಸೆಯ ಪರಿಪಾಲನೆ ಹೆಚ್ಚು ಅವಶ್ಯಕ ಎಂಬ ನಿಲುವನ್ನು ವ್ಯಕ್ತಪಡಿಸಿದ್ದಾರೆ. ಗಾಂಧಿಯವರು ಸತ್ಯವನ್ನು ಕುರಿತು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ ಸತ್ಯ ಅಹಿಂಸೆಯ ಮೂಲ ಘಟಕವಾಗಿದ್ದು ದೇವರು ಸತ್ಯವೆಂದು ಹೇಳುವುದಕ್ಕೆ ಬದಲಾಗಿ ಸತ್ಯವೇ ದೇವರೆಂದು ತಿಳಿಸಿದ್ದಾರೆ ಇವರು ಸತ್ಯವೆಂಬುದು ಕೇವಲ ವಿಚಾರದಲ್ಲಿ ಮಾತ್ರವೇ ಇರದೆ ಆಚರಣೆಯಲ್ಲಿಯೂ ಇರಬೇಕು, ಇದೊಂದು ನಿರಂತರ ಜೀವನ ತತ್ವವಾಗಿದ್ದು ಇದರಿಂದ ಒಳಿತನ್ನು ಸಾಧಿಸಬಹುದಾಗಿದೆ ಎಂದಿದ್ದಾರೆ. ಸತ್ಯ ಸಾಧನೆ ಎಂಬುದು ಕೇವಲ ಸಾಧು ಸಂತರಿಗೆ ಮಾತ್ರ ಇರದೆ ಸರ್ವರಿಗೂ ಇದನ್ನು ಸಾಧಿಸುವ ಶಕ್ತಿ ಇದ್ದು ಸತ್ಯ - ಅಸತ್ಯವನ್ನು ಪ್ರೀತಿ-ಕ್ರೋಧವನ್ನು ಹಾಗೂ ಆತ್ಮ ಬಳಲುವಿಕೆಯನ್ನು ಬಡಿದೋಡಿಸುತ್ತವೆ. ಆದ್ದರಿಂದ ಸತ್ಯ, ಅಹಿಂಸೆ, ತ್ಯಾಗಗಳಂತಹ ಉದಾತ್ತ ನಿಯಮಗಳ ಪರಿಪಾಲನೆಯು ಪ್ರತಿಯೊಬ್ಬ ವ್ಯಕ್ತಿಗೂ ಅವಶ್ಯಕವಾಗಿದ್ದು ಇದರಿಂದ ಮಾತ್ರ ಸಮಾಜದಲ್ಲಿ ಹಸನಾದ ಜೀವನ ಶೈಲಿ, ನೆಲೆಸಲು ಸಾಧ್ಯ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

ಸತ್ಯ ಸಾಧನೆಗೆ ಸಂಬಂಧಿಸಿದಂತೆ ಪ್ರಾರಂಭದಲ್ಲಿ ಹಲವಾರು ಅಡ್ಡಿ ಆತಂಕಗಳು ಬಂದು ಒದಗುವುದು ನಿಜ ಆದರೆ ಅಂತಿಮವಾಗ ಸತ್ಯಕ್ಕೆ ಜಯ ದೊರತೇ ದೊರೆಯುತ್ತದೆ. ಸತ್ಯ ಮತ್ತು ದೇವರಲ್ಲಿನ ನಂಬಿಕೆ ಇವೆರಡೂ ಒಂದೇ ದೇವರಲ್ಲಿನ ನಂಬಿಕೆಯಂತೆ ಸತ್ಯದಲ್ಲಿಯೂ ನಂಬಿಕೆ ಇರಬೇಕಾದುದು ಅವಶ್ಯವಾಗಿದ್ದು, ಸತ್ಯ ಸಾಧನೆಗಾಗಿ ನಡೆಯುವ ಹೋರಾಟವು ಅಹಿಂಸಾತ್ಮಕವಾಗಿರಬೇಕು.

ಅದು ಅಹಿಂಸಾತಮ್ಮಕವಾಗಿದ್ದಲ್ಲಿ ಹೋರಾಟದಲ್ಲಿ ಗೆಲುವು ಸೋಲೆಂಬ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಒಂದು ವೇಳೆ ಹೋರಾಟವು ಹಿಂಸೆಯ ರೂಪವನ್ನು ಪಡೆವರೆ ಅಂತಹ ಹೋರಾಟದಿಂದ ದೂರ ಉಳಿಯಬೇಕೆಂದಿದ್ದರೆ ಇದಕ್ಕಾಗಿಯೇ 1922 ರಲ್ಲಿ ಅಸಹಕಾರ ಚಳುವಳಿಯು ಹಿಂಸಾ ರೂಪತಾಳಿದಾಗ ಆ ಹೋರಾಟವನ್ನು ನಿಲ್ಲಿಸಿದ ಗಾಂಧಿ ನಾನು ಈ ಹೋರಾಟದಿಂದಾಗಿ ಹಿಮಾಲಯದಷ್ಟು ದೊಡ್ಡದಾದ ತಪ್ಪನ್ನು ಮಾಡಿದೆ ಎಂದ ಗಾಂಧಿಯವರು ಹೋರಾಟದಲ್ಲಿ ಹೋರಾಟದ ಯಶಸ್ಸಿಗಿಂತ ಅಲ್ಲಿ ಅನುಸರಿಸುವ ಸತ್ಯಯುತವಾದ ಮಾರ್ಗವೇ ಪ್ರಮುಖವಾಗಿದ್ದು ಪ್ರತಿಯೊಂದು ಹೋರಾಟವೂ ಕೂಡ ಸತ್ಯ ಹಾಗೂ ದೈವ ನಿರ್ದೇಶನಕ್ಕೆ ಪೂರಕವಾಗಿ ನಡೆಯಬೇಕೆಂದಿದ್ದಾರೆ.

ಅಹಿಂಸೆಯ ಬಗ್ಗೆ ಗಾಂಧಿಯವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ ಹಿಂಸೆ ಎಂಬುದು. ಪಶುಗಳಿಗೆ ಸೀಮಿತವಾಗಿರುವ ನಿಯಮವಾಗಿದ್ದರೆ ಅಹಿಂಸೆ ಎಂಬುದು ಮಾನವನಿಗೆ ಸಂಬಂಧಿಸಿದ ನಿಯಮವಾಗಿದ್ದು ಇದು ಪ್ರತಿಯೊಬ್ಬ ಮಾನವನಲ್ಲಿ ಇರಬೇಕಾದ ಅಗತ್ಯಾಂಶವಾಗಿದೆ. ಕಾರಣ ಪಶುಗಳಲ್ಲಿ ಆತ್ಮವು ಪರಿಪೂರ್ಣಾವಸ್ಥೆಯನ್ನು ತಲುಪಿರುವುದಿಲ್ಲ. ಆದ್ದರಿಂದ ಅದು ಕೇವಲ ಶಾರೀರಿಕ ಬಲವನ್ನು ಅವಲಂಬಿಸಿರುತ್ತದೆ. ಆದರೆ ಮಾನವನಿಗೆ ಸಂಬಂಧಿಸಿದಂತೆ ಈ ಹಿಂಸಾ ನಿಯಮ ಸಲ್ಲುವುದಿಲ್ಲ ಕಾರಣ ಮಾನವನಲ್ಲಿನ ಆತ್ಮ ಪರಿಪೂರ್ಣವಾದಂತವುದಾಗಿದ್ದು ಮಾನವನು ಉನ್ನತ ನಿಯಮಗಳನ್ನು ಪಾಲಿಸಬೇಕಾಗಿರುತ್ತದೆ. ಆಗ ಮಾತ್ರ ಮಾನವೀಯತೆಯ ಗೌರವವನ್ನು ಕಾಪಾಡಿದಂತಾಗುತ್ತದೆ. ಆಗ ಮಾತ್ರ ಮಾನವೀಯತೆಯ ಗೌರವವನ್ನು ಕಾಪಾಡಿದಂತಾಗುತ್ತದೆ ಎಂದಿರುವ ಗಾಂಧಿಯವರು ಅಹಿಂಸೆಯು ಕೇವಲ ಒಂದು ತಾತ್ವಿಕ ನಿಯಮವಾಗಿರದೆ ಇದೊಂದು ಜೀವನದ ನಿಯಮ ಹಾಗೂ ಉಸಿರಾಗಿದ್ದು ಇದು ಬುದ್ಧಿಶಕ್ತಿಯ ಪ್ರಶ್ನೆಯಾಗಿರದೆ ಹೃದಯದ ಪ್ರಶ್ನೆಯಾಗಿರುತ್ತದೆ ಎಂದಿದ್ದಾರೆ.

ಗಾಂಧಿಯವರು ಅಹಿಂಸಾ ಮಾರ್ಗ ಎಂದರೆ ಇದೊಂದು ಅಸಹಾಯಕ ಅಥವಾ ನಿಸ್ಸಹಾಯಕ ಪರಿಸ್ಥಿತಿಯ ದ್ಯೂತಕವಲ್ಲ . ಅಂದರೆ ಅಹಿಂಸೆ ಎಂದರೆ ನಿಷ್ಕ್ರಿಯವಾಗಿ ಹಾಗೂ ಹತಾಶನಾಗಿ ಕೂರುವುದಿಲ್ಲ ಇದಕ್ಕೆ ಬದಲಾಗಿ ದುಷ್ಟಶಕ್ತಿಯ ವಿರುದ್ಧ ಆತ್ಮಶಕ್ತಿ, ಸತ್ಯಶಕ್ತಿಯನ್ನು ಬಳಸಿಕೊಂಡು ಸತ್ಯಯುತವಾದ ಹೋರಾಟವನ್ನು ಕೈಗೊಳ್ಳಬೇಕು. ಸತ್ಯಾಗ್ರಹವೆಂದರೆ ಸಾಧ್ಯವಿಲ್ಲ ನೈತಿಕ ಹಾಗೂ ಆತ್ಮಶಕ್ತಿಯಿಂದ ಕೆಟ್ಟದ್ದನ್ನು ಪ್ರತಿಭಟಿಸುವ ಶಕ್ತಿಯಾಗಿದ್ದು ಇದು ಹೆಚ್ಚು ದೃಡತೆಯಿಂದ ಕೂಡಿರಬೇಕೆಂದು ತಿಳಿಸಿದ್ದಾರೆ. ಉಗ್ರ ಹಿಂಸೆಯನ್ನು ಸಹ ಅಹಿಂಸೆಯಿಂದ ಜಯಿಸಬಹುದಾಗಿದ್ದು ಅಹಿಂಸಾ ಮಾರ್ಗ ವಿದ್ಯುತ್ ಶಕ್ತಿಗಿಂತಲೂ ಹೆಚ್ಚು ಶಕ್ತಿಶಾಲಿಯಾದಂತಹ ಶಕ್ತಿಯಾಗಿದೆ ಎಂದಿರುವ ಗಾಂಧಿ. ಅಹಿಂಸೆ ತತ್ವ ಪರಿಪಾಲನೆಗಾಗಿಯೇ ನಾನು ಜೀವಿಸಲು ಇಚ್ಛಿಸುತ್ತೇನೆ. ಅಹಿಂಸೆಯ ತತ್ವ ಪಾಲನೆಗಾಗಿ ನನ್ನ ಪ್ರಾಣವೇ ಅರ್ಪಣೆಯಾದರೂ ನಾನು ನನ್ನ ಹೋರಾಟದಲ್ಲಿ ಧೃತಿಗೆಡುವುದಲ್ಲ ಎಂದಿದ್ದಾರೆ.

ಗಾಂಧಿಯವರು ಅಹಿಂಸಾ ತತ್ವವೆಂದರೆ ಪ್ರತಿಯೊಂದನ್ನು ಪ್ರೀತಿ, ಗೌರವ ಹಾಗೂ ಸಹನೆಯಿಂದ ಕಾಣಬೇಕೆಂದಿರುವ ಗಾಂಧಿ ಈ ರೀತಿಯ ಆಚರಣೆಗಳಿಂದ ಎಲ್ಲಾ ರೀತಿಯ ಗುರಿಗಳನ್ನು ಸಾಧಿಸಬಹುದೆಂದಿದ್ದಾರೆ. ಇವರು ಮುಂದುವರೆದು ಅಹಿಂಸೆಯ ಬಗ್ಗೆ ತಿಳಿಸುತ್ತಾ ಹಿಂಸೆ ಒಂದು ಅಸಾಮಾನ್ಯ ಅಸ್ತ್ರವಾಗಿದ್ದು ಇದರ ಸಾಧನೆಗಾಗಿ ಸತ್ಯ, ಆತ್ಮಪರಿಶುದ್ಧತೆ, ನಿರಶನವ್ರತ, ತಾಳ್ಮೆ ಸತತ ಪ್ರಯತ್ನ ಧೈರ್ಯ ನಿರ್ಲಿಪ್ತತೆ ಇವು ಅವಶ್ಯಕ ಅಂಶಗಳಾಗಿದ್ದು ಇವುಗಳನ್ನು ಅಹಿಂಸೆಯ ಮೂಲಘಟಕಗಳೆಂದು ಕರೆದಿದ್ದಾರೆ. ಈ ಅಂಶಗಳ ಪರಿಪಾಲನೆಯಿಂದಾಗಿ ಅಹಿಂಸಾ ಚಳುವಳಿಯು ಯಶಸ್ವಿಯಾಗಲು ಸಾಧ್ಯವೆಂದಿದ್ದಾರೆ.

ಅಹಿಂಸೆಯು ಪ್ರತಿಪಾದಕರಾಗಿರುವ ಗಾಂಧಿ ಹಿಂಸೆಯಿಂದ ಕೂಡಿರುವ ಸಮಾಜ ಅಥವಾ ರಾಜ್ಯದಲ್ಲಿ ಜನರ ನೈತಿಕ ಅಧಃ ಪತನ ಪ್ರಾರಂಭವಾಗಿ ರಾಷ್ಟ್ರವು ಅಳಿದು ಹೋಗುವ ಸಾಧ್ಯತೆಯೇ ಹೆಚ್ಚು ಎಂದು ತಿಳಿಸಿರುವ ಗಾಂಧಿ ಹಿಂಸೆಯಿಂದ ಕೂಡಿರುವ ಪ್ರಭುತ್ವ ವ್ಯವಸ್ಥೆಯನ್ನು ತಮ್ಮ ಚಿಂತನೆಯಲ್ಲಿ ಖಂಡಿಸುತ್ತಾ ಹಿಂಸೆಯಿಂದ ಕೂಡಿರುವ ರಾಜ್ಯ ವ್ಯವಸ್ಥೆಯನ್ನು ಅಹಿಂಸಾ ಹೋರಾಟದಿಂದ ಜಯಿಸಬಹುದೆಂದಿದ್ದಾರೆ.

## 24.6 ಗಾಂಧಿಯವರ ಧರ್ಮದರ್ಶಿತ್ವ ಸಿದ್ಧಾಂತ

ಗಾಂಧಿಯವರ ಧರ್ಮದರ್ಶಿತ್ವ ಸಿದ್ಧಾಂತವು ಸಮಾನ ಮತ್ತು ವ್ಯಕ್ತಿಯ ಅಭ್ಯುದಯಕ್ಕೆ ಸಂಬಂಧಿಸಿದಂತಹ ಚಿಂತನೆಗಳ ಸಮುಚ್ಚಯವಾಗಿದೆ. ಗಾಂಧಿಯವರ ಪ್ರಕಾರ ಯಾವುದೇ ಒಂದು ಸಮಾಜ ಸುಗಮವಾಗಿ ಸಾಗಬೇಕಾದರೆ ಸಮಾಜದಲ್ಲಿನ ವ್ಯಕ್ತಿಯ ಅಭಿವೃದ್ಧಿ ಹಾಗೂ ಸಾಮರಸ್ಯ ಹಾಗೂ ಸದಾಚಾರಗಳು ಹೆಚ್ಚು ಪ್ರಮುಖವೆಂದು ಹೇಳಿರುವ ಇವರು ತಮ್ಮ ಧರ್ಮದರ್ಶಿತ್ವ ಸಿದ್ಧಾಂತದಡಿಯಲ್ಲಿ ಪ್ರಮುಖವಾಗಿ ಅಪರಿಗ್ರಹ, ಅನ್ನದ ಕಾರ್ಯ ಹಾಗೂ ಆರ್ಥಿಕ ಸಮಾನತೆ ವಿಷಯಗಳಿಗೆ ಸಂಬಂಧಿಸಿದಂತೆ ತಮ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ.

ಅಪರಿಗ್ರಹವನ್ನು ವಿವರಿಸುತ್ತಾ ರಾಜ್ಯ ಹಾಗೂ ಸಮಾಜದ ಸದುದ್ದೇಶವೆಂದರೆ ವ್ಯಕ್ತಿಯ ಸಂತೃಪ್ತ ಜೀವನಕ್ಕೆ ಸಂಬಂಧಿಸಿದುದಾಗಿದೆ. ಆದರೆ ಶತಮಾನಗಳಿಂದ ಮಾನವನ ಸಂತೃಪ್ತತೆ ಹೇಗೆ ಸಾಧ್ಯ ಎಂಬ ಪ್ರಶ್ನೆಯು ನಮಗೆ ಎದುರಾಗಿವೆ. ಇದಕ್ಕೆ ಕಾರಣ ಮನುಷ್ಯ ಮೂಲತಃ ಆಸೆಯುಳ್ಳ ಜೀವಿಯಾಗಿದ್ದು ಆಸೆಗಳ ಪ್ರಮಾಣ ಮಿತಿ ಮೀರಿದಾಗ ಮನುಷ್ಯ ಅನಿವಾರ್ಯವಾಗಿ ಕಷ್ಟಕ್ಕೆ ಸಿಲುಕುತ್ತಾನೆ. ಆದ್ದರಿಂದ ಮನುಷ್ಯ ತನ್ನ ನಿತ್ಯ ಜೀವನಕ್ಕೆ ಎಷ್ಟು ಅಗತ್ಯವೋ ಅಷ್ಟನ್ನು ಮಾತ್ರ ಗಲಿಸುವ ಅಥವಾ ಸಂಪಾದಿಸುವ ಪ್ರಯತ್ನವನ್ನು ನಡೆಸಬೇಕು. ಇದಕ್ಕೆ ಪ್ರತಿಯಾಗಿ ಹಣ ಅಥವಾ ಸಂಪತ್ತಿನ ಸಂಗ್ರಹಣೆಯಲ್ಲಿ ತೊಡಗಿದಾಗ ಇದರಿಂದ ಬೇರೊಬ್ಬರ ಅನ್ನವನ್ನು ಕಬಳಿಸಿದಂತಾಗುತ್ತದೆ ಎಂದಿದ್ದಾರೆ. ಮನುಷ್ಯ ತನ್ನ ಅಗತ್ಯಕ್ಕಿಂತ ಹೆಚ್ಚಿಗೆ ಸಂಪತ್ತನ್ನು ಸಂಗ್ರಹಿಸುವುದನ್ನು ಗಾಂಧಿಯವರು ಅಪರಿಗ್ರಹ ಎಂದು ಕರೆಯುತ್ತಾರೆ. ಮುಂದುವರೆದು ತಿಳಿಸುತ್ತಾ ಗಾಂಧಿಯು ಇಂದಿನ ಸಮಾಜದಲ್ಲಿ ಅಪರಿಗ್ರಹ ಪ್ರಕ್ರಿಯೆಯು ಹೆಚ್ಚಾಗಿದ್ದು ಇದು ಹಾಗೆಯೇ ಮುಂದುವರೆದರೆ ಸಾಮಾಜಿಕ ಸಾಮರಸ್ಯ ಹಾಳಾಗಲು ಕಾರಣವಾಗಿ ಪರಿಣಮಿಸುತ್ತದೆ ಎಂದಿದ್ದಾರೆ.

ಗಾಂಧಿಯವರು ಅನ್ನದ ಕಾರ್ಯ ಪ್ರಕ್ರಿಯೆಗೆ ಸಂಬಂಧಿಸಿದಂತೆ ವಿವರಿಸುತ್ತಾ ಯಾವುದೇ ಒಬ್ಬ ವ್ಯಕ್ತಿ ತನ್ನ ಜೀವನವನ್ನು ಸುಗಮವಾಗಿ ಸಾಗಿಸಬೇಕಾದರೆ ಸ್ವಾವಲಂಬ ದುಡಿಮೆಯನ್ನು ಹೊಂದಿದ್ದಾಗ ಮಾತ್ರ ಸಾಧ್ಯ ಎಂದಿರುವ ಇವರು ವ್ಯಕ್ತಿಯ ಈ ಸ್ವಾವಲಂಬಿ ದುಡಿಮೆಯನ್ನೇ ಅನ್ನದ ಕಾರ್ಯ ಎಂದು ಪ್ರತಿಪಾದಿಸಿದ್ದಾರೆ. ಇದಕ್ಕೆ ಗಾಂಧಿಯವರು ಬೈಬಲ್ ಮತ್ತು ಭಗವದ್ಗೀತೆಗಳನ್ನು ಉದಾಹರಿಸುತ್ತಾ ಬಗವದ್ಗೀತೆಯಲ್ಲಿ ಶ್ರೀ ಕೃಷ್ಣ ನಿನ್ನ ಅನ್ನವನ್ನು ನೀನೇ ಗಳಿಸಿಕೊಳ್ಳಬೇಕೆಂದು ಕರ್ಮಸಿದ್ಧಾಂತವನ್ನು ಪ್ರತಿಪಾದಿಸಿದ್ದರೆ ಬೈಬಲ್‌ನಲ್ಲಿಯೂ ಸಹ ನಿನ್ನ ದುಡಿಮೆಯು ನಿನ್ನ ಬೆವರಿನ ಪ್ರತಿಫಲವಾಗಿರಬೇಕು ಎಂಬುದನ್ನು ಗಾಂಧಿಯವರು ಉಲ್ಲೇಖಿಸುತ್ತಾರೆ. ಮುಂದುವರೆದು ಗಾಂಧಿಯವರು ಅನ್ನದ ಕಾರ್ಯಕ್ಕೆ ಸಂಬಂಧಿಸಿದಂತೆ ವ್ಯಕ್ತಿಯನ್ನು ಯಾವುದೇ ಒಂದು ನಿರ್ದಿಷ್ಟವಾದ ಉದ್ಯೋಗಕ್ಕೆ ಸೀಮಿತಗೊಳಿಸಿದೆ ಸೋಲುವುದು ನೇಯ್ಗೆ, ಕಮ್ಮಾರಿಕೆ, ಚಮ್ಮಾರಿಕೆ, ಬಡಗಿತನ, ಒಕ್ಕಲುತನ ಹೀಗೆ ಯಾವುದೇ ಒಂದು ಕಾರ್ಯದಲ್ಲಿ ತನ್ನನ್ನು ತೊಡಗಿಸಿಕೊಳ್ಳುವ ಮೂಲಕ ಅನ್ನದ ಕಾರ್ಯದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ನಿರತರಾಗಬಹುದೆಂದು ತಿಳಿಸಿದ್ದಾರೆ. ಈ ರೀತಿಯ ನಿರಂತರತೆ ಶ್ರಮ ಪಡುವಿಕೆ ಕೇವಲ ವ್ಯಕ್ತಿಯ ವೈಯಕ್ತಿಕ ಅಭಿವೃದ್ಧಿಗೆ ಮಾತ್ರ ಪೂರಕವಾಗಿರದೆ ಸಮಾಜದ ಅಭಿವೃದ್ಧಿಗೂ ಸಹ ಪೂರಕವಾಗಿರುತ್ತದೆ ಎಂದು ತಿಳಿಸುತ್ತಾ ಇದರಿಂದ ನಿರುದ್ಯೋಗ, ಬಡತನ, ಬಡವ-ಶ್ರೀಮಂತ, ಮೇಲು-ಕೀಳು ಎಂಬ ತಾರತಮ್ಯಗಳೂ ಸಹ ದೂರವಾಗುವ ಸಾಧ್ಯತೆ ಇರುತ್ತದೆ ಎಂದಿದ್ದಾರೆ.

ಗಾಂಧಿಯವರು ಆರ್ಥಿಕ ಸಮಾನತೆಯ ಬಗ್ಗೆ ತಮ್ಮ ಚಿಂತನೆಯನ್ನು ಮಂಡಿಸುತ್ತಾ ಆರ್ಥಿಕ ಸಮಾನತೆಯೆಂದರೆ ಬಂಡವಾಳ ಮತ್ತು ಶ್ರಮಗಳ ನಡುವೆ ಸಮಾಜದಲ್ಲಿ ನಿರಂತರವಾಗಿ ನಡೆಯುವ ಘರ್ಷಣೆಯು ಆರ್ಥಿಕ ಸಮಾನತೆಗಾಗಿ ನಡೆಯುವ ಹೋರಾಟವೇ ಆಗಿದ್ದು. ಇದರಿಂದ ರಾಷ್ಟ್ರದ ಸಂಪತ್ತಿನ ಕೇಂದ್ರೀಕರಣಕ್ಕೆ ಬದಲಾಗಿ ಸಂಪತ್ತಿನ ವಿಕೇಂದ್ರೀಕರಣಗೊಳ್ಳಬೇಕಾದುದು ಅವಶ್ಯಕವಾಗಿದ್ದು ಇದು ಕೆಳಹಂತದ ಕೋಟ್ಯಾಂತರ ಜನರ ಪರವಾಗಿ ನಡೆಯಬೇಕಾದ ಅವಶ್ಯಕತೆ ಇದೆ ಎಂದಿದ್ದಾರೆ. ಗಾಂಧಿಯವರೇ ಹೇಳಿರುವಂತೆ ಸಮಾಜದಲ್ಲಿ ಎಲ್ಲಾ ವಿಷಯಗಳಿಗೆ ಸಂಬಂಧಿಸಿದಂತೆ ಸಮಾನ ವಿತರಣೆ ಕಷ್ಟಸಾಧ್ಯ ಆದೆ ನ್ಯಾಯ ಸಮ್ಮತವಾದ ಹಾಗೂ ಸಮಂಜಸವಾದ

ನ್ಯಾಯಿಕ ವಿತರಣೆಗೆ ಅಹಿಂಸಾತ್ಮಕ ಹೋರಾಟದಿಂದ ಸಾಧಿಸಬಹುದಾಗಿದೆ. ಇದಕ್ಕೆ ಬದಲಾಗಿ ಹಿಂಸೆಯಿಂದ ಕೂಡಿದೆ ಹೋರಾಟ ನಡೆದಲ್ಲಿಅಲ್ಲಿ ಆರ್ಥಿಕ ಸಮಾನತೆ ಅಥವಾ ಸಮಾನ ವಿತರಣೆ ನಡೆಯುವುದಕ್ಕೆ ಬದಲಾಗಿ ಸಮಾಜದಲ್ಲಿ ಎರಡು ವರ್ಗಗಳ ಸೃಷ್ಟಿಗೆ ಕಾರಣವಾಗಿ ಅದು ಪುನಃ ವರ್ಗಗಳ ನಡುವಿನ ಅಂತರವು ಹೆಚ್ಚಳಕ್ಕೆ ಕಾರಣೀಭೂತ ಅಂಶವಾಗಿ ಪರಿಣಮಿಸುತ್ತದೆ ಎಂದಿದ್ದಾರೆ. ಇದಕ್ಕೆ ಗಾಂಧಿ ಸಂಪೂರ್ಣ ಸಮಾನತೆ ಕಷ್ಟಸಾಧ್ಯವೆನಿಸಿದರೂ ಸಹ ಯಾವುದೇ ಒಬ್ಬ ವ್ಯಕ್ತಿಯು ಬೇರೊಬ್ಬ ವ್ಯಕ್ತಿಯ ಸಂಪತ್ತು ಅಥವಾ ಆಸ್ತಿಯನ್ನು ಬಲಾತ್ಕಾರವಾಗಿ ಕಬಳಿಸುವುದನ್ನು ವಿರೋಧಿಸಿದ್ದಾರೆ. ಇದಕ್ಕೆಲ್ಲಾ ಗಾಂಧಿಯವರ ಪ್ರಕಾರ ಪರಿಹಾರವೆಂದರೆ ಬಂಡವಾಳಗಾರರು, ಜಮೀನ್ದಾರರು, ಕಾರ್ಮಿಕರು ಮತ್ತು ರೈತರು ಪರಸ್ಪರ ಸ್ವಾರ್ಥರಹಿತರಾಗಿ ಕೆಲಸ ನಿರ್ವಹಿಸಿದಾಗ ವರ್ಗ ಕಲಹವಾಗಲೀ ಅಥವಾ ವರ್ಗ ದ್ವೇಷವಾಗಲಿ ಇರುವುದಿಲ್ಲ ಎಂದಿದ್ದಾರೆ. ಒಂದು ವೇಳೆ ಯಾವುದೇ ಒಬ್ಬ ವ್ಯಕ್ತಿಯು ಹೆಚ್ಚು ಸ್ವಾರ್ಥಿಯಾಗಿ ಆಸ್ತಿಯನ್ನು ಅಥವಾ ಸಂಪತ್ತನ್ನು ಸಂಗ್ರಹಿಸುವ ಕಾರ್ಯದಲ್ಲಿ ನಿರತವಾದರೆ ಸರ್ಕಾರ ಕಾನೂನಿನ ಮೂಲಕ ಇದನ್ನು ನಿಯಂತ್ರಿಸುವ ಕೆಲಸವನ್ನು ಮಾಡಬೇಕು ಇಲ್ಲವೇ ರಾಜ್ಯವೇ ಟ್ರಸ್ಟಿಯಾಗಿ ಯಾವ ವ್ಯಕ್ತಿಯೂ ತನ್ನ ಸ್ವಾರ್ಥಕ್ಕಾಗಿ ಹೆಚ್ಚಿನ ಆಸ್ತಿಯನ್ನು ಸಂಗ್ರಹಿಸದಂತೆ ಪೂರ್ವ ತಯಾರಿ ಕ್ರಮಗಳನ್ನು ಕೈಗೊಳ್ಳುವ ಮೂಲಕ ವ್ಯಕ್ತಿಯ ಹಿತಕ್ಕಿಂತ ಸಮಾಜದ ಹಿತವನ್ನು ರಕ್ಷಿಸಬೇಕು ಎಂಬುದು ಗಾಂಧಿಯವರ ನಿಲುವಾಗಿತ್ತು. ಒಂದು ವೇಳೆ ಬಂಡವಾಳ ಶಾಹಿಗಳು ಸ್ವಾರ್ಥರಹಿತರಾಗಿ ನಡೆದುಕೊಳ್ಳದೇ ಹೋದ ಪಕ್ಷದಲ್ಲಿ ಸರ್ಕಾರವು ಸ್ವಯಂ ಪ್ರೇರಿತವಾಗಿ ಕೈಗಾರಿಕೆಗಳನ್ನು ರಾಷ್ಟ್ರೀಕರಣಗೊಳಿಸುವ ಪ್ರಕ್ರಿಯೆಗೆ ಮುಂದಾಗಬೇಕು ಕಾರಣ ಕೈಗಾರಿಕೆಗಳ ಸ್ಥಾಪನೆಯ ಉದ್ದೇಶ ಸಮಾಜದ ಹಿತವನ್ನು ಕಾಯ್ದುಕೊಳ್ಳುವುದಾಗಿರಬೇಕೇ ವಿನಃ ಲಾಭವನ್ನು ಗಳಿಸುವುದಾಗಿರಬಾರದು ಎಂದಿದ್ದಾರೆ.

## 24.7 ಉಪಸಂಹಾರ

ಗಾಂಧಿಯವರು ತಮ್ಮ ಚಿಂತನೆಯಲ್ಲಿ ಆಧುನಿಕ ರಾಜ್ಯ ವ್ಯವಸ್ಥೆಯನ್ನು ಪ್ರಬಲವಾಗಿ ವಿರೋಧಿಸುತ್ತಾ ವಿಕೇಂದ್ರೀಕೃತ ಹಾಗೂ ಆರ್ಥಿಕ ಸ್ವಾವಲಂಬನೆಯನ್ನು ಹೊಂದಿರುವ ಹಳ್ಳಿಗಳನ್ನು ಒಳಗೊಂಡಿರುವ ಆದರ್ಶ ಸಮಾಜ ಅಥವಾ ರಾಜ್ಯ ವ್ಯವಸ್ಥೆಯನ್ನು ಪ್ರತಿಪಾದಿಸುತ್ತಾರೆ. ಆದರೆ ಇಂದಿನ ಆಧುನಿಕ ಯುಗದಲ್ಲಿ ಗಾಂಧಿಯವರು ಹೇಳುವಂತೆ ಗುಡಿ ಕೈಗಾರಿಕೆಗಳ ಸ್ಥಾಪನೆಯಿಂದ ಒಂದರಿಂದಲೇ ಆಧುನಿಕ ರಾಜ್ಯ ವ್ಯವಸ್ಥೆಯಲ್ಲಿನ ಪಿಡುಗುಗಲನ್ನು ನಿವಾರಿಸಲು ಸಾಧ್ಯವಿಲ್ಲ. ಕಾರಣ ಇಂದಿನ ಜಾಗತೀಕರಣ ಯುಗದಲ್ಲಿ ಪ್ರತಿಯೊಂದು ಕ್ಷೇತ್ರದಲ್ಲಿಯೂ ತೀವ್ರವಾದ ಪೈಪೋಟಿಯು ನಿರಂತರವಾಗಿ ಏರುಮುಖವಾಗಿ ಸಾಗುತ್ತಿದ್ದು ಇಂತಹ ಪೈಪೋಟಿಯಲ್ಲಿ ಗಾಂಧಿಯವರು ಹೇಳಿರುವ ಸ್ವಾವಲಂಬಿ ಗ್ರಾಮಗಳ ರಚನೆ ಹೆಚ್ಚು ಕಷ್ಟಸಾಧ್ಯವೆನಿಸುತ್ತದೆ. ಈ ಕಾರಣದಿಂದಲೇ ಗಾಂಧಿಯವರ ರಾಜ್ಯ ಪರಿಕಲ್ಪನೆಯನ್ನು ಗ್ರಾಮ ರಾಜ್ಯ ಅಥವಾ ಆದರ್ಶ ರಾಮರಾಜ್ಯ ಎಂದು ಕರೆಯಲಾಗಿದೆ. ಹಾಗೆಯೇ ಗಾಂಧಿಯವರು ತಿಳಿಸಿರುವ ಸತ್ಯ ಮತ್ತು ಅಹಿಂಸಾ ತತ್ವಗಳ ಆಚರಣೆಗಳು ಸಮಾಜದ ಶಾಂತಿಯ ದೃಷ್ಟಿಯಿಂದ ಹೆಚ್ಚು ಪ್ರಮುಖ ಹಾಗೂ ಅವಶ್ಯಕವೆನಿಸಿದರೂ ಸಹ ಪ್ರಸ್ತುತ ಸಮಾಜದಲ್ಲಿ ಅವುಗಳನ್ನು ಸಾಧಿಸುವುದು ಸುಲಭದ ಕೆಲಸವಲ್ಲ. ಕಾರಣ ಇಂದಿನ ಸಮಾಜದಲ್ಲಿನ ಪ್ರತಿಯೊಬ್ಬ ವ್ಯಕ್ತಿಯೂ ಸಹ ಸ್ವಾರ್ಥಪರರಾಗಿದ್ದು ಇದು ಗಾಂಧಿಯವರೇ ಹೇಳಿರುವಂತೆ ಇದು ಅಹಿಂಸೆಗೆ ಬದಲಾಗಿ ಹೆಚ್ಚು ಹಿಂಸೆಯ ಪ್ರಚೋದನೆಗೆ ಕಾರಣವಾಗಿದೆ. ಹಾಗೆಯೇ ಗಾಂಧಿಯವರು ತಿಳಿಸಿರುವ ಅಪರಿಗ್ರಹ, ಅನ್ನದಕಾರ್ಯ, ಹಾಗೂ ಆರ್ಥಿಕ ಸಮಾನತೆಯ ಚಿಂತನೆಗಳು ಸಮಾಜದ ದೃಷ್ಟಿಯಿಂದ ಹೆಚ್ಚು ಉಪಯುಕ್ತ ಕಾರಿಯಾದಂತಹವುಗಳು ಎನಿಸಿದರೂ ಸಹ ಅವುಗಳನ್ನು ಪ್ರಸ್ತುತ ಸಮಾಜದಲ್ಲಿ ಆಚರಣೆಗೆ ತರಲು ಸಾಧ್ಯವಿಲ್ಲದರ ಪ್ರತಿಫಲವಾಗಿ ಅವು ಆದರ್ಶ ಚಿಂತನೆಗಳಾಗಿಯೇ ಉಳಿದಿರುವುದನ್ನು ಗಮನಿಸಬಹುದಾಗಿದೆ.

## ನಿಮ್ಮ ಪ್ರಗತಿ ಪರಿಶೀಲನೆ - 2

**ಸೂಚನೆ:** 1. ಈ ಕೆಳಗೆ ಬಿಟ್ಟಿರುವ ಜಾಗವನ್ನು ನಿಮ್ಮ ಉತ್ತರಕ್ಕೆ ಉಪಯೋಗಿಸಿಕೊಳ್ಳಿ.

2. ಈ ಘಟಕದ ಕೊನೆಯಲ್ಲಿ ನೀಡಿರುವ ಉತ್ತರದೊಂದಿಗೆ ನಿಮ್ಮ ಪ್ರಗತಿಯನ್ನು ಪರಿಶೀಲಿಸಿಕೊಳ್ಳಿ.

**1. ಗಾಂಧಿಯವರ ಸತ್ಯ ಮತ್ತು ಅಹಿಂಸಾ ತತ್ವಗಳನ್ನು ಕುರಿತು ಚರ್ಚಿಸಿ.**

..........................................................................................................

..........................................................................................................

..........................................................................................................

..........................................................................................................

..........................................................................................................

..........................................................................................................

..........................................................................................................

..........................................................................................................

**2. ಗಾಂಧಿಯವರ ಧರ್ಮದರ್ಶಿತ್ವ ಸಿದ್ಧಾಂತವನ್ನು ವಿಮರ್ಶಿಸಿ?**

..........................................................................................................

..........................................................................................................

..........................................................................................................

..........................................................................................................

..........................................................................................................

..........................................................................................................

..........................................................................................................

..........................................................................................................

## 24.8 ಮುಖ್ಯ ಪದಗಳು

| | | |
|---|---|---|
| ಸತ್ಯ ಮತ್ತು ಅಹಿಂಸೆ | - | ಗಾಂಧಿ ಮಾರ್ಗ |
| ಕರ್ಮ ಸಿದ್ಧಾಂತ | - | ಕರ್ತವ್ಯ ನಿರತತೆ |
| ನೈತಿಕತೆ | - | ಧರ್ಮದ ಆಧಾರ |
| ಅಪರಿಗ್ರಹ | - | ಸಂತೃಪ್ತ ಜೀವನ |
| ಅನ್ನದ ಕಾರ್ಯ | - | ಅನ್ನಕ್ಕಾಗಿ ಪ್ರತಿಯೊಬ್ಬನ ಕಡ್ಡಾಯ ದುಡಿಮೆ |
| ಆರ್ಥಿಕ ಸಮಾನತೆ | - | ಸಂಪತ್ತಿನ ಸಮಾನ ಗಳಿಕೆ ಅಥವಾ ಹಂಚಿಕೆ |
| ಗ್ರಾಮ ಸ್ವರಾಜ್ಯ | - | ಹಳ್ಳಿಗಳ ಸ್ವಾವಲಂಬನೆ |
| ರಾಮರಾಜ್ಯ | - | ಗಾಂಧಿಯವರ ಆದರ್ಶ ರಾಜ್ಯ ಪರಿಕಲ್ಪನೆ |

## 24.9 ಕೆಲವು ಉಪಯುಕ್ತ ಗ್ರಂಥಗಳು


ಡಾ. ಟಿ.ಡಿ. ದೇವೇಗೌಡ : ರಾಜಕೀಯ ಸಿದ್ಧಾಂತಗಳು

ಡಾ. ಟಿ.ಡಿ. ದೇವೇಗೌಡ : ರಾಜಕೀಯ ಚಿಂತಕರು

ಡಾ. ಕೆ.ಜೆ. ಸುರೇಶ್ : ಆಧುನಿಕ ರಾಜಕೀಯ ಸಿದ್ಧಾಂತಗಳು

ಎಂ.ಕೆ. ಗಾಂಧಿ : ದಿ ರಿಮೂವಲ್ ಆಫ್ ಅನ್‌ಟಚ್‌ಬಿಲಿಟಿ

ಜಿ. ಧವನ್ : ಪೊಲಿಟಿಕಲ್ ಫಿಲಾಸಫಿ ಆಫ್ ಮಹಾತ್ಮಗಾಂಧಿ

ಬಂಡೋಪಧ್ಯಾಯ : ಸೋಷಿಯಲ್ ಅಂಡ್ ಪೊಲಿಟಿಕಲ್ ಥಾಟ್ ಆಫ್ ಗಾಂಧಿ

ಎಂ.ಕೆ. ಗಾಂಧಿ : ಮೈ ಎಕ್ಸ್‌ಪಿರಿಯನ್ಸ್ ವಿಥ್ ಟ್ರೂಥ್

ವಿ.ಟಿ. ಪಾಟೀಲ್ : ನ್ಯೂ ಡೈಮನ್ಷನ್ಸ್ ಅಂಡ್ ಪರ್ಸ್‌ಪೆಕ್ಟೀವ್ಸ್ ಇನ್ ಗಾಂಧಿ

ಬಿಕು ಪಾರೀಕ್ : ಇಂಟ್ರಡಕ್ಷನ್ ಟು ಗಾಂಧಿ


## 24.10 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು

<u>ನಿಮ್ಮ ಪ್ರಗತಿ ಪರಿಶೀಲನೆ</u> **-1**

1. ನೋಡಿ ಭಾಗ 24.3
2. ನೋಡಿ ಭಾಗ 24.4

<u>ನಿಮ್ಮ ಪ್ರಗತಿ ಪರಿಶೀಲನೆ</u> **-2**

1. ನೋಡಿ ಭಾಗ 24.5
2. ನೋಡಿ ಭಾಗ 24.6

# ಘಟಕ 25 ಸತ್ಯಾಗ್ರಹದ ತಂತ್ರಗಳು, ಗ್ರಾಮ ಸ್ವರಾಜ್ಯ ಮತ್ತು ಮಹಿಳೆಯ ಸ್ಥಾನಮಾನದ ಬಗ್ಗೆ ಗಾಂಧಿಯ ಅಭಿಪ್ರಾಯ

## ರಚನೆ


25.0 ಉದ್ದೇಶಗಳು

25.1 ಪೀಠಿಕೆ

25.2 ಸತ್ಯಾಗ್ರಹ

25.3 ಸತ್ಯಾಗ್ರಹದ ವಿವಿಧ ತಂತ್ರಗಳು

- 25.3.1 ಅಸಹಕಾರ
- 25.3.2 ಹರತಾಳ
- 25.3.3 ತಡೆಗಾವಲು
- 25.3.4 ಸವಿನಯ ಅವಿಧೇಯತೆ
- 25.3.5 ಹಿಜರತ್
- 25.3.6 ನಿರಶನ ವ್ರತ
- 25.3.7 ಸಂಪು

25.4 ಗಾಂಧಿಯವರ ಗ್ರಾಮ ಸ್ವರಾಜ್ಯ ಚಿಂತನೆ

25.5 ಗಾಂಧಿಯವರ ಪರಿಕಲ್ಪನೆಯಲ್ಲಿ ಮಹಿಳೆ

25.6 ಉಪಸಂಹಾರ

25.7 ಮುಖ್ಯ ಪದಗಳು

25.8 ಕೆಲವು ಉಪಯುಕ್ತ ಗ್ರಂಥಗಳು

25.9 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು

## 25.0 ಉದ್ದೇಶಗಳು

ಈ ಘಟಕದ ವಸ್ತು ವಿಷಯವನ್ನು ಅಧ್ಯಯನ ಮಾಡಿದ ನಂತರ ನೀವು

* ಸತ್ಯಾಗ್ರಹ ಎಂದರೇನು ಎಂಬುದನ್ನು ತಿಳಿಯಬಹುದು
* ಸತ್ಯಾಗ್ರಹದ ವಿವಿಧ ತಂತ್ರಗಳನ್ನು ಪರಿಶೀಲಿಸಬಹುದು
* ಗಾಂಧಿಯವರ ಗ್ರಾಮಸ್ವರಾಜ್ಯ ತತ್ವವನ್ನು ಚರ್ಚಿಸಬಹುದು
* ಗಾಂಧಿಯವರ ಚಿಂತನೆಯಲ್ಲಿ ಮಹಿಎಯ ಪ್ರಾಮುಖ್ಯತೆಯ ಬಗ್ಗೆ ತಿಳಿಯಬಹುದು

## 25.1 ಪೀಠಿಕೆ

ಪ್ರಪಂಚದಲ್ಲಿ ಇದುವರೆಗೆ ಅನ್ಯಾಯ ಹಾಗೂ ಅಸಮಾನತೆಯ ವಿರುದ್ಧ ನಡೆದಿರುವ ಹೋರಾಟಗಳಲ್ಲಿ ಗಾಂಧಿಯವರ ಹೋರಾಟ ಬೇರೆಯವರ ಹೋರಾಟಕ್ಕಿಂತ ಭಿನ್ನವಾಗಿದೆ. ಇದಕ್ಕೆ ಕಾರಣ ಗಾಂಧಿಯವರು ಅನುಸರಿಸಿದ ಹೋರಾಟ ಮಾರ್ಗ ಬೇರೆ ಹೋರಾಟಗಾರರು ಅನುಸರಿಸಿದ ಮಾರ್ಗಕ್ಕಿಂತ ಭಿನ್ನವಾದುದಾಗಿತ್ತು. ಗಾಂಧಿಯವರು ಮೊದಲ ಬಾರಿಗೆ ದಕ್ಷಿಣ ಆಫ್ರಿಕಾದಲ್ಲಿನ ಕರಿಯರ ಸಮಸ್ಯೆಗೆ ಸಂಬಂಧಿಸಿದಂತೆ ಕೈಗೊಂಡ ಅಹಿಂಸಾತ್ಮಕ ಹೋರಾಟವು ಯಶಸ್ವಿಯಾದ ನಂತರ ಭಾರತಕ್ಕೆ ಹಿಂದಿರುಗಿದ ಗಾಂಧಿಯವರು ಚಂಪಾರಣ್ಯ ಸತ್ಯಾಗ್ರಹ, ದಂಡಿ ಸತ್ಯಾಗ್ರಹ ಹಾಗೂ ಭಾರತ ಬಿಟ್ಟು ತೊಲಗಿ ಚಳುವಳಿಗಳಂತಹ ಅಹಿಂಸಾತ್ಮಕ ಹೋರಾಟಗಳನ್ನು ನಡೆಸಿ ಪ್ರಾಯೋಗಿಕವಾಗಿ ಸಫಲರಾದರು. ಗಾಂಧಿಯವರು ಕೇವಲ ಒಬ್ಬ ರಾಜಕೀಯ ಚಿಂತಕರಾಗಿರದೆ ವಿರು ಒಬ್ಬ ಸ್ವತಃ ಆಚರಣೆಯನ್ನು ಸಮಾಜ ಸುಧಾರಕರಾಗಿದ್ದಾರೆ. ಕಾರಣ ಗಾಂಧಿಯವರು ಸಮಾಜದಲ್ಲಿನ ಸಾಮಾಜಿಕ ಹಾಗೂ ಆರ್ಥಿಕ ಅಸಮಾನತೆಗಳನ್ನು ತೊಡೆದುಹಾಕುವ ಉದ್ದೇಶಕ್ಕೆ ಸಂಬಂಧಿಸಿದಂತೆ ಚಿಂತನೆಗಳನ್ನು ಮಾತ್ರ ನೀಡದೆ ಅವುಗಳನ್ನು ಸ್ವತಃ ಅವರೇ ಕಾರ್ಯರೂಪಕ್ಕೆ ತರುವ ಪ್ರಯತ್ನವನ್ನು ಕೈಗೊಂಡರು. ಗಾಂಧಿ ಅವರು ತಮ್ಮ ಸಮಾಜ ಸುಧಾರಣೆ ಅಥವಾ ಪರಿವರ್ತನೆಗಾಗಿ ನಡೆಸಿದ ಹೋರಾಟಕ್ಕೆ ಅವರು ಸತ್ಯಮ ತ್ತು ಅಹಿಂಸೆಯಿಂದ ಕೂಡಿದ ಮಾರ್ಗವನ್ನು ಪ್ರಬಲವಾಗಿ ಪ್ರತಿಪಾದಿಸಿದರಲ್ಲದೆ ಅದರ ಸಾಧನೆಯಲ್ಲಿಯೂ ಸಹ ಅವರು ಯಶಸ್ವಿಯಾದರು. ಹಾಗೆಯೇ ಗ್ರಾಮ ಸ್ವರಾಜ್ಯದ ಬಗ್ಗೆ ತಿಳಿಸಿದ ಗಾಂಧಿಯವರು ಗ್ರಾಮಗಳ ಆರ್ಥಿಕ ಸ್ವಾವಲಂಬನೆಗಾಗಿ ಗುಡಿ ಕೈಗಾರಿಕೆಗಳ ಸ್ಥಾಪನೆಗೆ ಹೆಚ್ಚಿನ ಪ್ರೋತ್ಸಾಹ ನೀಡಬೇಕೆಂದು ತಿಳಿಸಿದ ಇವರು ಹಳ್ಳಿಗಳಲ್ಲಿ ಖಾದಿ ಗ್ರಾಮೋದ್ಯೋಗ ಕೇಂದ್ರಗಳನ್ನು ಸ್ಥಾಪಿಸುವ ಮೂಲಕ ಕಾರ್ಯ ಪ್ರವೃತ್ತರಾದರು. ಈ ರೀತಿಯ ಪ್ರಬಲವಾದ ಚಿಂತನೆಗಳನ್ನು ಒಳಗೊಂಡ ಗಾಂಇಯವರ ಚಿಂತನೆಯು ಕೇವಲ ಭಾರತಕ್ಕೆ ಮಾತ ಸೀಮಿತಗೊಳ್ಳದೆ ಪ್ರಪಂಚದಾದ್ಯಂತ ಮನ್ನಣೆ ಪಡೆಯುವಲ್ಲಿ ಯಶಸ್ವಿಯಾಯಿತು. ಇದಕ್ಕೆ ದಕ್ಷಿಣ ಆಫ್ರಿಕಾದಲ್ಲಿನ ಕರಿಯರ ಸಮಸ್ಯೆಯನ್ನು ನಿವಾರಿಸುವಲ್ಲಿ ನೆಲ್ಸನ್ ಮಂಡೇಲಾರವರು ಗಾಂಧಿಯವರ ಹೋರಾಟ ಮಾರ್ಗವನ್ನು ಅನುಸರಿಸಿ ಯಶಸ್ವಿಯಾದುದನ್ನು ಉದಾಹರಿಸಬಹುದಾಗಿದೆ. ಗಾಂಧಿಯವರು ತಮ್ಮ ಚಿಂತನೆಯಲ್ಲಿ ಆದರ್ಶ ಗ್ರಾಮ ರಾಜ್ಯ ಅಥವಾ ರಾಮರಾಜ್ಯದ ಬಗ್ಗೆ ಪ್ರತಿಪಾದಿಸಿದ್ದು ಇದರಲ್ಲಿ ಪ್ರಬಲವಾದ ಆರ್ಥಿಕ, ರಾಜಕೀಯ ವಿಕೇಂದ್ರೀಕರಣ ಹಾಗೂ ಸಮಾನತೆಯ ಸಾಧನೆಯ ಬಗ್ಗೆ ತಿಳಿಸಿರುವುದ ಜೊತೆಗೆ ಸಮಾಜದಲ್ಲಿ ಎಲ್ಲಾ ರೀತಿಯ ಸಾಮರಸ್ಯದ ಅಗತ್ಯತೆಯನ್ನು ಕುರಿತು ಪ್ರತಿಪಾದಿಸಿದ್ದಾರೆ.

## 25.2 ಸತ್ಯಾಗ್ರಹ

ಗಾಂಧಿಯವರ ವಿಚಾರಧಾರೆಯಲ್ಲಿ ಸತ್ಯಾಗ್ರಹ ಪರಿಕಲ್ಪನೆಯು ಒಂದು ಪ್ರಮುಖ ಅಂಶವಾಗಿದೆ. ಸತ್ಯಾಗ್ರಹವೆಂದರೆ ಗಾಂಧಿಯವರೇ ತಿಳಿಸಿರುವಂತೆ ಇದೊಂದು ಶಾಂತಿ ಮತ್ತು ಅಹಿಂಸೆಯಿಂದ ಕೂಡಿದ ಹೋರಾಟ ವಿಧಾನವಾಗಿದ್ದು ಅನ್ಯಾಯದ ವಿರುದ್ಧ

ನಡೆಯುವ ಹೋರಾಟದಲ್ಲಿ ನೈತಿಕ ಶಕ್ತಿ ಮತ್ತು ಆತ್ಮದ ಬಲವನ್ನು ಪ್ರೇರೇಪಿಸುವ ಒಂದು ಹೋರಾಟ ವಿಧಾನವಾಗಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಈ ಸತ್ಯಾಗ್ರಹ ಮಾರ್ಗವನ್ನು ಮೊದಲ ಬಾರಿಗೆ ಗಾಂಧಿಯವರು ದಕ್ಷಿಣ ಆಫ್ರಿಕಾದಲ್ಲಿನ ಭಾರತೀಯರ ಸಮಸ್ಯೆಗೆ ಸಂಬಂಧಿಸಿದ ಹೋರಾಟದಲ್ಲಿ ಪ್ರಯೋಗಿಸಿದರು. ಅಲ್ಲಿನ ಜನಾಂಗೀಯ ಸಮಸ್ಯೆಗೆ ಸಂಬಂಧಿಸಿದಂತೆ ಮಾತ್ರ ಗಾಂಧಿಯವರು ತಮ್ಮ ಸತ್ಯಾಗ್ರಹದ ಹೋರಾಟ ತಂತ್ರವನ್ನು ಸೀಮಿತಗೊಳಿಸಲಿಲ್ಲ. ಅದಕ್ಕೆ ಬದಲಾಗಿ ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಹಿಂದಿರುಗಿದ ನಂತರ ಭಾರತದಲ್ಲಿನ ಬ್ರಿಟೀಷ್ ವಸಾಹತುಶಾಹಿ ನೀತಿ ಹಾಗೂ ಬಂಡವಾಳಶಾಹಿ ನೀತಿಯ ವಿರುದ್ಧ ತಮ್ಮ ಸತ್ಯಾಗ್ರಹ ತಂತ್ರವನ್ನು ಬಳಸಿದರಲ್ಲದೆ ಅದರಿಂದ ಭಾರತಕ್ಕೆ ಸ್ವಾತಂತ್ರ್ಯವನ್ನು ದೊರಕಿಸಿಕೊಡುವಲ್ಲಿಯೂ ಸಹ ಯಶಸ್ವಿಯಾದರು.

ಸತ್ಯಾಗ್ರಹ ಹೋರಾಟ ತತ್ವವು ರಾಜಕೀಯ ಕ್ಷೇತ್ರದಲ್ಲಿ ಅವರು ನೀಡಿದ ಒಂದು ಪರಿಣಾಮಕಾರಿಯಾದ ಹೋರಾಟ ಅಸ್ತ್ರವಾಗಿದೆ. ಗಾಂಧಿಯವರೇ ತಿಳಿಸಿರುವಂತೆ ಸತ್ಯವೆಂಬುದು ಒಂದು ಅಂತಿಮವಾದ ನೈಜ ಸ್ಥಿತಿಯಾಗಿದ್ದು ಇದರ ಸಾಧನೆಗಾಗಿ ಸಮಾಜದ ಪ್ರತಿಯೊಬ್ಬ ನಾಗರೀಕರೂ ಕಾರ್ಯಶೀಲರಾಗಬೇಕು. ಇದಕ್ಕಾಗಿ ನಿಸ್ವಾರ್ಥ, ನೈತಿಕತೆ ಹಾಗೂ ಅಚಲವಾದ ಧೃಡಸಂಕಲ್ಪ ಹೆಚ್ಚು ಅವಶ್ಯಕ ಮುಂದುವರೆದು ಗಾಂಧಿಯವರು ಅನ್ಯಾಯ, ಶೋಷಣೆ ಹಾಗೂ ದಬ್ಬಾಳಿಕೆಯ ವಿರುದ್ಧ ಆತ್ಮಶಕ್ತಿಯನ್ನು ಬಳಸಿಕೊಂಡು ಹೋರಾಟ ನಡೆಸುವುದೇ ಸತ್ಯಾಗ್ರಹ ಎಂದಿದ್ದಾರೆ. ಸತ್ಯಾಗ್ರಹದ ಗುರಿಯನ್ನು ಸಾಧಿಸಬೇಕಾದರೆ ಬರುವ ತೊಂದರೆಗಳನ್ನು ಶಾಂತಿ ಮತ್ತು ಸಹನೆಯಿಂದ ಜಯಿಸಬೇಕು, ಶಾಂತಿ ಮತ್ತುಅಹಿಂಸಾ ಮಾರ್ಗದಿಂದಲೇ ಸತ್ಯಾಗ್ರಹದ ಬಗ್ಗೆ ಜನತೆಯ ಸಮ್ಮತಿಯನ್ನು ಕ್ರೂಢೀಕರಿಸಬೇಕು, ಹಾಗೆಯೇ ಸತ್ಯಾಗ್ರಹದ ಗುರಿ ಸಾಧನೆಯ ಬಗ್ಗೆ ಜನತೆಯ ಮನಪರಿವರ್ತನೆ ಮಾಡಬೇಕಾದುದು ಹೆಚ್ಚು ಅಗತ್ಯ ಎಂಬ ಅಬಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಗಾಂಧಿಯವರು ಸೂಚಿಸಿರುವ ಸತ್ಯಾಗ್ರಹ ಹೋರಾಟವು ಸಂಪೂರ್ಣವಾಗಿ ಅಹಿಂಸಾ ಪ್ರಧಾನ ಹೋರಾಟವಾಗಿದ್ದು ಶಾಂತಿ ಪ್ರೀತಿ ಹಾಗೂ ಕರುಣೆಗಳು ಸತ್ಯಾಗ್ರಹದ ಮೂಲ ಮಂತ್ರಗಳಾಗಿರಬೇಕೆಂದಿದ್ದಾರೆ. ಯಾವುದೇ ಒಬ್ಬ ವೈರಿಯನ್ನು ಹಿಂಸೆಯಿಂದ ಕೂಡಿದ ದೈಹಿಕ ಅಥವಾ ಮಾನಸಿಕ ಬಲಾತ್ಕಾರದಿಂದ ಗೆಲ್ಲುವುದಕ್ಕೆ ಬದಲಾಗಿ ಪ್ರೀತಿ ಹಾಗೂ ಕರುಣೆಯನ್ನೊಳಗೊಂಡ ಬಲಾತ್ಕಾರದಿಂದ ಜಯಿಸಬೇಕೆಂದಿದ್ದು. ಹೀಗೆ ಗಳಿಸಿದ ಯಶಸ್ಸು ಹೆಚ್ಚು ಧೀರ್ಘಕಾಲಿಕವಾದ ಯಶಸ್ಸಿಗೆ ಉಳಿಯಬಲ್ಲದು ಎಂಬ ಅಭಿಪ್ರಾಯವನ್ನು ಮಂಡಿಸುತ್ತಾರೆ.

ಗಾಂಧಿಯವರ ಪ್ರಕಾರ ಯಾವುದೇ ಒಬ್ಬ ವ್ಯಕ್ತಿ ಸತ್ಯಾಗ್ರಹಿ ಎನಿಸಿಕೊಳ್ಳಬೇಕಾದರೆ ಮೊದಲು ಅವನು ಹಿಂಸಾಚಾರ ಮನೋಭಾವನೆಯಿಂದ ಮುಕ್ತನಾಗಬೇಕು. ಹಾಗೂ ನೈತಿಕವಾಗಿ ಪ್ರಬಲವಾದ ಮಾನಸಿಕ ಸ್ಥೈರ್ಯವನ್ನು ಹೊಂದಿರುವುದರ ಜೊತೆಗೆ ಆತ್ಮ ಸಧೃಡತೆಯನ್ನು ಹೊಂದಿದ್ದಾಗ ಮಾತ್ರ ಅವನು ಸತ್ಯಾಗ್ರಹಿಯಾಗಲು ಸಾಧ್ಯ ಎಂದಿದ್ದಾರೆ. ಗಾಂಧಿಯವರ ಪ್ರಕಾರ ಸತ್ಯಾಗ್ರಹ ಒಂದು ನ್ಯಾಯ ಸಮ್ಮತ ಅಹಿಂಸಾತ್ಮಕ ಹೋರಾಟವಾಗಿದ್ದು ಇದಕ್ಕೆ ಅಂತಿಮವಾಗಿ ಸತ್ಯಕ್ಕೆ ಜಯ ದೊರೆತೇ ದೊರೆಯುತ್ತದೆ ಎಂಬ ಧೃಡ ವಿಶ್ವಾಸವು ಸತ್ಯಾಗ್ರಹಿಗಳಿಗೆ ಪ್ರಬಲವಾದ ನೈತಿಕ ಶಕ್ತಿ ಹಾಗೂ ಆತ್ಮ ಬಲವನ್ನು ವೃದ್ಧಿಸುವಲ್ಲಿ ಸಹಕಾರಿಯಾಗುತ್ತದೆ ಅಲ್ಲದೆ ಆತ್ಮಶಕ್ತಿಯ ದೃಡತೆ ಇದ್ದಲ್ಲಿ ಹೋರಾಟದಲ್ಲಿ ಜಯ ಅಥವಾ ಯಶಸ್ಸು ಖಂಡಿತವಾಗಿಯೂ ಲಭಿಸೇ ಲಭಿಸುತ್ತದೆ ಎಂದು ತಿಳಿಸುತ್ತಾರೆ.

ಗಾಂಧಿಯವರು ಸತ್ಯಾಗ್ರಹದ ಬಗ್ಗೆ ಮುಂದುವರೆದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ ಸತ್ಯಾಗ್ರಹವು ಪ್ರತಿಯೊಬ್ಬ ನಾಗರೀಕನ ಆಜನ್ಮ ಸಿದ್ಧ ಹಕ್ಕು ಎಂದಿದ್ದಾರೆ ಅಲ್ಲದೆ ಸತ್ಯಾಗ್ರಹ ಒಂದು ಹಕ್ಕು ಮಾತ್ರವಾಗಿರದೆ ಪ್ರತಿಯೊಬ್ಬರ ಒಂದು ಪವಿತ್ರವಾದ ಕರ್ತವ್ಯವೆಂದು ಅಭಿಪ್ರಾಯ ಪಡುತ್ತಾರೆ. ಕಾನೂನಿನ ಪರಿಪಾಲನೆಯು ಪ್ರತಿಯೊಬ್ಬ ವ್ಯಕ್ತಿಯ ಆದ್ಯ ಕರ್ತವ್ಯವಾಗಿದ್ದು ಸತ್ಯಾಗ್ರಹಿಯಾದವನು ಯಾವಾಗಲೂ ಕಾನೂನಿಗೆ ವಿಧೇಯನಾಗಿರುತ್ತಾನೆ. ಆದರೆ ಸತ್ಯಾಗ್ರಹಿಯು ಗೌರವಿಸುವ ಕಾನೂನು ನ್ಯಾಯಸಮ್ಮತವಾಗಿದ್ದಾಗ ಮಾತ್ರ ಅವನು ಅದನ್ನು ಗೌರವಿಸುತ್ತಾನೆ ಇಲ್ಲವಾದಲ್ಲಿ ಆ ಕಾನೂನಿನ ಪ್ರಬಲ ವಿರೋಧ ಮಾತ್ರವಾಗಿರದೆ ಅದರ ವಿರುದ್ಧ ಹೋರಾಟವನ್ನು ಸಹ ಸತ್ಯಾಗ್ರಹಿಯಾದವನು ಕೈಗೊಳ್ಳುತ್ತಾನೆ ಎಂದಿರುವ ಇವರು ಸತ್ಯಾಗ್ರಹಿಯಾದವರು ಯಾವ

ಕಾನೂನು ನ್ಯಾಯ ಸಮ್ಮತವಾದಂತಹುದು ಯಾವುದು ನ್ಯಾಯ ಸಮ್ಮತವಾದಂತಹುದಲ್ಲ ಎಂಬುದನ್ನು ನಿರ್ಣಯಿಸುವ ಸಾಮರ್ಥ್ಯವನ್ನು ಪಡೆದಿದ್ದು ಯಾವ ಕಾನೂನನ್ನು ಯಾವಾಗ ಮತ್ತು ಹೇಗೆ ಗೌರವಿಸಬೇಕೆಂಬುದನ್ನು ಅರಿತಿದ್ದು ನ್ಯಾಯಸಮ್ಮತವಾದ ಹಾಗೂ ನ್ಯಾಯಯುತವಾದ ಕಾನೂನುಗಳನ್ನು ಸತ್ಯಾಗ್ರಹಿಯು ಜಾಣ್ಮೆಯಿಂದ ಹಾಗೂ ಸ್ವಪ್ರೇರಣೆಯಿಂದ ಪರಿಪಾಲಿಸುವ ಗುಣ ಹೊಂದಿರುತ್ತಾನೆ ಎಂದಿದ್ದಾರೆ. ಒಟ್ಟಿನಲ್ಲಿ ಗಾಂಧಿಯವರು ತಿಳಿಸಿರುವ ಸತ್ಯಾಗ್ರಹ ಪರಿಕಲ್ಪನೆಯು ಅಹಿಂಸಾ ಪ್ರಧಾನ ಹೋರಾಟ ವಿಧಾನವಾಗಿದ್ದು ಸಮಾಜದಲ್ಲಿನ ಅನ್ಯಾಯಗಳ ವಿರುದ್ಧ ನಡೆಸಲು ಗಾಂಧಿಯವರು ರೂಪಿಸಿದ ನಿಸ್ವಾರ್ಥ ಹಾಗೂ ತ್ಯಾಗಮನೋಭಾವನೆಯನ್ನೊಳಗೊಂಡ ಹೋರಾಟ ವಿಧಾನವಾಗಿದೆ ಎಂದು ಹೇಳಬಹುದಾಗಿದೆ.

## 25.3 ಸತ್ಯಾಗ್ರಹದ ವಿವಿಧ ತಂತ್ರಗಳು

ಗಾಂಧಿಯವರು ತಿಳಿಸಿರುವಂತೆ ಸತ್ಯಾಗ್ರಹ ಹೋರಾಟ ವಿಧಾನವು ಎಲ್ಲಾ ಕಾಲದಲ್ಲಿ ಹಾಗೂ ಎಲ್ಲಾ ಪ್ರದೇಶಗಳಲ್ಲಿ ಒಂದೇ ರೀತಿ ಕೈಗೊಳ್ಳಲು ಸಾಧ್ಯವಿಲ್ಲ ಎಂದು ತಿಳಿಸಿರುವ ಇವರು ಸಮಾಜದಲ್ಲಿನ ಅನ್ಯಾಯ, ದಬ್ಬಾಳಿಕೆಯಂತಹ ಸಮಸ್ಯೆಗಳ ತೀವ್ರತೆಯನ್ನು ಆಧರಿಸಿ ಅದಕ್ಕೆ ಪೂರಕವಾಗಿ ಸಮಯ ಹಾಗೂ ಸನ್ನಿವೇಶಕ್ಕೆ ತಕ್ಕಂತೆ ವಿವಿಧ ರೀತಿಯ ಸತ್ಯಾಗ್ರಹದ ಹೋರಾಟ ತಂತ್ರಗಳನ್ನು ತಿಳಿಸಿದ್ದಾರೆ. ಹೀಗೆ ಗಾಂಧಿ ತಿಳಿಸಿರುವ ಸತ್ಯಾಗ್ರಹದ ವಿವಿಧ ತಂತ್ರಗಳು ಸತ್ಯಾಗ್ರಹದ ಮೂಲ ಉದ್ದೇಶವಾದ ಸತ್ಯ ಮತ್ತು ಅಹಿಂಸೆಗೆ ಪೂರಕವಾಗಿಯೇ ಇರುವುದನ್ನು ಗಮನಿಸಬಹುದಾಗಿದ್ದು ಅವುಗಳನ್ನು ಈ ಕೆಳಗಿನಂತೆ ತಿಳಿಯಬಹುದಾಗಿದೆ.

### 25.3.1 ಅಸಹಕಾರ

ಗಾಂಧಿಯವರು ತಿಳಿಸಿರುವಂತೆ ಅಸಹಕಾರ ತಂತ್ರವು ಶೋಷಣೆಗೆ ಅಥವಾ ಅನ್ಯಾಯಕ್ಕೆ ಕಾರಣವಾದ ಪ್ರಬಲತ್ವಶಾಹಿ ಆಡಳಿತದ ವಿರುದ್ಧ ಅಥವಾ ಅಂತಹ ವ್ಯವಸ್ಥೆಯ ವಿರುದ್ಧವಾಗಿ ನಡೆಸುವ ಹೋರಾಟವಾಗಿದ್ದು. ಗಾಂಧಿ ಪ್ರಕಾರ ಅಸಹಕಾರ ಎಂದರೆ ಪ್ರಭುತ್ವಶಾಹಿ ಅಥವಾ ರಾಜ್ಯದ ಶೋಷಣಾ ನೀತಿಗಳನ್ನೊಳಗೊಂಡ ಕಾನೂನು ಮತತಲು ನಿಯಮಾವಳಿಗಳಿಗೆ ಅಸಹಕಾರವನ್ನು ಅಹಿಂಸಾ ರೂಪದಲ್ಲಿ ವ್ಯಕ್ತಪಡಿಸುವುದೇ ಆಗಿದೆ. ಇಂತಹ ಅಸಹಕಾರ ಪ್ರತಿಭಟನೆಯನ್ನು ಹರತಾಳ, ಸಾಮಾಜಿಕ ಬಹಿಷ್ಕಾರ, ತಡೆಗಾವಲು ಈ ರೀತಿಯ ಅಸ್ತ್ರಗಳ ಬಳಕೆಯೊಂದಿಗೆ ಕಾರ್ಯರೂಪಕ್ಕೆ ತರಬಹುದಾಗಿದೆ ಎಂದು ತಿಳಿಸಿದ್ದಾರೆ.

### 25.3.2 ಹರತಾಳ

ಹರತಾಳ ಅಸಹಕಾರ ಅಸ್ತ್ರದ ಒಂದು ತಂತ್ರವಾಗಿದೆ. ಹರತಾಳವೆಂದರೆ ವೃತ್ತಿನಿರತರು ತಮ್ಮ ದೈನಂದಿನ ಕಾರ್ಯ ಚಟುವಟಿಕೆಯನ್ನು ಸ್ಥಗಿತಗೊಳಿಸುವ ಮೂಲಕ ಅಸಹಕಾರವನ್ನು ವ್ಯಕ್ತಪಡಿಸುವುದಾಗಿದೆ. ಹರತಾಳವನ್ನು ಆಚರಿಸುವವರು ನಿಷ್ಠತೆ ಹಾಗೂ ಪ್ರಮಾಣಿಕತೆಯ ಜೊತೆಗೆ ಧೈರ್ಯಶಾಲಿಗಳಾಗಿರಬೇಕೆಂದು ಗಾಂಧಿಯವರು ಹೇಳುತ್ತಾರೆ. ಹರತಾಳವನ್ನು ವಿರೋಧಿಸುವ ವ್ಯಕ್ತಿಗಳ ಮನಸ್ಸನ್ನು ಪರಿವರ್ತಿಸುವ ಪ್ರಯತ್ನಿಸಬೇಕು. ಈ ಮನಸ್ಸಿನ ಪರಿವರ್ತನೆ ಬಲಾತ್ಕಾರದಿಂದ ನಡೆಯಬಾರದು ಅದಕ್ಕೆ ಬದಲಾಗಿ ನ್ಯಾಯಸಮ್ಮತವಾಗಿ ಹಾಗೂ ಶಾಂತಿಯುತವಾಗಿ ಮನಪರಿವರ್ತನೆಯನ್ನು ಜಾಣತನದಿಂದ ಮಾಡಬೇಕು ಎಂದಿರುವ ಗಾಂಧಿಯವರು ಹರತಾಳ ಯಶಸ್ವಿಯಾಗಬೇಕಾದರೆ ಹರತಾಳದಲ್ಲಿ ವ್ಯಕ್ತಿಗಳು ಸ್ವಯಂ ಪ್ರೇರಣೆಯಿಂದ ಭಾಗವಹಿಸಿದಾಗ ಮಾತ್ರ ಸಾಧ್ಯ. ಇದಕ್ಕೆ ಬದಲಾಗಿ ಬಲಾತ್ಕಾರದಿಂದ ಹರತಾಳದಲ್ಲಿ ಭಾಗವಹಿಸುವುದರಿಂದ ಹರತಾಳವು ಯಶಸ್ವಿಯಾಗಲು ಸಾಧ್ಯವಿಲ್ಲ ಎಂಬ ನಿಲುವನ್ನು ಗಾಂಧಿಯವರು ವ್ಯಕ್ತಪಡಿಸಿದ್ದಾರೆ.

### 25.3.3. ತಡೆಗಾವಲು

ತಡೆಗಾವಲು ಸಹ ಅಸಹಕಾರ ಹೋರಾಟದ ಒಂದು ರೂಪವಾಗಿದ್ದು ಸತ್ಯಾಗ್ರಹಿಗಳು ತಮ್ಮ ಹೋರಾಟದ ಸಂದರ್ಭದಲ್ಲಿ ಸಂಬಂಧಿಸಿದವರಿಗೆ ಅಥವಾ ಸಂಬಂಧಿಸಿದ ಪ್ರದೇಶಕ್ಕೆ ಶಾಂತಿಯುತವಾಗಿ ಯಾರು ಪ್ರವೇಶಿಸದಂತೆ ತಡೆಗಟ್ಟಬಹುದು. ಇದನ್ನು ಮೀರಿ ಆ ಪ್ರದೇಶಕ್ಕೆ ಪ್ರವೇಶಿಸಿದವರ ಮೇಲೆ ಬಲಾತ್ಕಾರವನ್ನು ಮಾಡಿ ಅವರನ್ನು ಹೊರಗೆ ದೂಡುವುದಕ್ಕೆ ಬದಲಾಗಿ ಅವರ ಮನವೊಲಿಸುವ ಮೂಲಕ ಶಾಂತಿಯುತವಾಗಿ ಅವರನ್ನು ಆ ಪ್ರದೇಶದಿಂದ ಹೊರನಡೆಯುವಂತೆ ಪ್ರೇರೇಪಿಸಬೇಕೆಂದಿದ್ದಾರೆ. ಈ ತಡೆಗಾವಲು ಹೋರಾಟ ಶಾಂತಿಯುತವಾಗಿ ಸಾಗಿದ್ದಲ್ಲಿ ಅದರ ಬಲವರ್ಧನೆಯಾಗುತ್ತದೆ ಆದರೆ ಇದಕ್ಕೆ ಪ್ರತಿಯಾಗಿ ಹೋರಾಟದ ಸಂದರ್ಭದಲ್ಲಿ ಬಲಪ್ರಯೋಗವಾದರೆ ಆ ಹೋರಾಟ ಶಕ್ತಿಹೀನವಾಗುವುದರ ಜೊತೆಗೆ ಅದು ತನ್ನ ಅರ್ಥವನ್ನು ಕಳೆದುಕೊಳ್ಳುತ್ತದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

### 25.3.4 ಸವಿನಯ ಅವಿಧೇಯತೆ

ಗಾಂಧಿಯವರು ತಿಳಿಸಿರುವಂತೆ ಸವಿನಯ ಅವಿಧೇಯತೆ. ತಂತ್ರವು ಸತ್ಯಗ್ರಹದ ಪರಿಣಾಮಕಾರಿ ತಂತ್ರಗಳಲ್ಲಿ ಒಂದಾಗಿದ್ದು ಇದು ಹೆಚ್ಚು ಉಗ್ರಸ್ವರೂಪದ ಹೋರಾಟ ತಂತ್ರವಾಗಿದೆ. ಸವಿನಯ ಅವಿಧೇಯತೆ ಎಂದರೆ ಅಹಿಂಸೆ ಹಾಗೂ ಶಿಸ್ತಿನಿಂದ ಕೂಡಿದ ಕಾನೂನು ಉಲ್ಲಂಘನೆಯ ಪ್ರಕ್ರಿಯೆಯೇ ಆಗಿದೆ. ಈ ಪ್ರಕ್ರಿಯೆಯು ಒಬ್ಬ ವ್ಯಕ್ತಿಯಿಂದ ಅಥವಾ ಜನ ಸ್ತೋಮದಿಂದ ಪ್ರಾರಂಭವಾಗಬಹುದಾಗಿದ್ದು ಇದು ಜನರೇ ಸ್ವಪ್ರೇರಣೆಯಿಂದ ಕಾನೂನು ಉಲ್ಲಂಘನೆಯನ್ನು ಮಾಡುವ ಮೂಲಕ ಪ್ರಾರಂಭಿಸಬೇಕು. ಈ ರೀತಿಯ ಕಾನೂನು ಉಲ್ಲಂಘನೆಯ ಶಾಂತಿ ಹಾಗೂ ಅಹಿಂಸೆಯಿಂದ ಕೂಡಿರಬೇಕಾಗಿದ್ದು ಇದಕ್ಕೆ ಸಂಬಂಧಿಸಿದಂತೆ ಜನರಿಗೆ ತರಬೇತಿ ಕೊಡಬೇಕಾದುದು ಅವಶ್ಯಕ ಎಂದಿದ್ದಾರೆ. ಈ ಕಾನೂನು ಉಲ್ಲಂಘನೆಯು ಸರ್ವವ್ಯಾಪಕವಾಗಿ ಕೈಗೊಳ್ಳಬೇಕು. ಈ ಕಾನೂನುಭಂಗ ಚಳುವಳಿಯು ವ್ಯಾಪಕವಾಗಿ ಬೆಳೆದಲ್ಲಿ ಶಸ್ತ್ರ ಹೋರಾಟಕ್ಕಿಂತಲೂ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. ಆದರೆ ಕಾನೂನುಭಂಗ ಚಳುವಳಿಯು ಶಾಂತಿ ಹಾಗೂ ಶಿಸ್ತಿನಿಂದ ಕೂಡಿರಬೇಕಾದುದು ಹೆಚ್ಚು ಅವಶ್ಯಕವಾದುದು ಎಂದು ಹೇಳಿದ್ದಾರೆ.

### 25.3.5 ಹಿಜರತ್

ಹಿಜರತ್ ಸತ್ಯಾಗ್ರಹದ ಮತ್ತೊಂದು ತಂತ್ರವಾಗಿದ್ದು ಗಾಂಧಿಯವರು ತಿಳಿಸಿರುವಂತೆ ಹಿಜರತ್ ಎಂದರೆ ಒಂದು ಸ್ಥಳದಲ್ಲಿ ವಾಸಿಸುವ ಜನರು ಅನ್ಯಾಯವನ್ನು ಪ್ರತಿಭಟಿಸುವ ಉದ್ದೇಶದ ಸಲುವಾಗಿ ವಾಸಿಸುವ ಸ್ಥಳವನ್ನು ಸ್ವಯಂ ಪ್ರೇರಿತರಾಗಿ ಬಿಟ್ಟುಹೋಗುವುದನ್ನೇ ಹಿಜರತ್ ಎಂದಿದ್ದಾರೆ. ಈ ಹಿಜರತ್ ತಂತ್ರವನ್ನು ಅನ್ಯಾಯವನ್ನು ಅಹಿಂಸಾತ್ಮಕ ಹೋರಾಟದಿಂದ ಪ್ರತಿಭಟಿಸಲು ಸಾಧ್ಯವಿಲ್ಲ ಎಂಬುದು ಮನವರಿಕೆಯಾದಾಗ ಹಾಗೂ ಅಲ್ಲಿನ ಹಿಂಸೆಯನ್ನು ಸಾಗಿಸುವುದು ಅಸಾಧ್ಯವೆನಿಸಿದಾಗ ಈ ತಂತ್ರವನ್ನು ಬಳಸಬೇಕೆಂಬ ಸಲಹೆಯನ್ನು ಗಾಂಧಿಯವರು ನೀಡಿದ್ದಾರೆ.

### 25.3.6 ನಿರಶನ ವ್ರತ

ಅಹಿಂಸಾತ್ಮಕ ಹೋರಾಟದಲ್ಲಿ ನಿರಶನ ವ್ರತ ಒಂದು ಪ್ರಮುಖ ಹಂತವೆಂದು ಗಾಂಧಿ ಅಭಿಪ್ರಾಯಪಡುತ್ತಾರೆ. ನಿರಶನ ವ್ರತವೆಂದರೆ ದೇಹದಂಡನೆಯನ್ನು ಮಾಡುವ ಮೂಲಕ ಆತ್ಮವನ್ನು ಶುದ್ಧಿಗೊಳಿಸುವ ಪ್ರಕ್ರಿಯೇ ಆಗಿದ್ದು ಇದು ಭಾರತದಲ್ಲಿ ಗತಕಾಲದಿಂದ ಬೆಳೆದುಬಂದ ಒಂದು ಆತ್ಮ ಶುದ್ಧೀಕರಣ ಮಾರ್ಗವಾಗಿದ್ದು ಇದು ದೇಹ, ಆತ್ಮ ಮನಸ್ಸನ್ನು ಶುದ್ಧಿಗೊಳಿಸುತ್ತದೆ ಎಂದಿದ್ದಾರೆ. ಈ ನಿರಶನ ಪ್ರತವನ್ನು ಕೈಗೊಳ್ಳುವುದು ಕಾಯಾ, ವಾಚಾ ಹಾಗೂ ಮನಸ್ಸು ಶುದ್ಧಿಯಾಗಿದ್ದ ವ್ಯಕ್ತಿಯಿಂದ ಮಾತ್ರ ಸಾಧ್ಯ. ಕಾರಣ ಈ

ವ್ರತಕ್ಕೆ ಶಿಸ್ತು ಸಂಯಮ ಹಾಗೂ ಆತ್ಮಬಲ ಹೆಚ್ಚು ಅಗತ್ಯವಾಗಿದ್ದು ಇವುಗಳನ್ನು ಮೈಗೂಡಿಸಿಕೊಂಡ ವ್ಯಕ್ತಿಯಿಂದ ಮಾತ್ರ ನಿರಶನವ್ರತವನ್ನು ಯಶಸ್ವಿಯಾಗಿ ಕೈಗೊಳ್ಳಲು ಸಾಧ್ಯ ಎಂದಿದ್ದು ಇದು ಒಂದು ನೈತಿಕ ಒತ್ತಾಯವನ್ನೊಳಗೊಂಡ ಹೋರಾಟದ ಸತ್ಯಾಗ್ರಹದ ಒಂದು ತಂತ್ರವಾಗಿದೆ ಎಂದು ತಿಳಿಸಿದ್ದಾರೆ.

### 25.3.7 ಸಂಪು

ಸಂಪು ಕಾರ್ಮಿಕರ ಪ್ರತಿಭಟನೆ ಅಥವಾ ಹೋರಾಟದ ಒಂದು ಶಾಂತಿಯುತವಾದ ಪ್ರಕಾರವಾಗಿದೆ ಎಂದಿರುವ ಗಾಂಧಿಯವರು ಬಂಡವಾಳಗಾರರಿಂದ ಕಾರ್ಮಿಕರ ಶೋಷಣೆ ಮಿತಿಮೀರಿದಾಗ ಕಾರ್ಮಿಕರು ಈ ತಂತ್ರವನ್ನು ಬಳಸಬೇಕೆಂಬ ಸಲಹೆಯನ್ನು ನೀಡಿದ್ದಾರೆ. ಈ ಸಂಪನ್ನು ಹೂಡುವ ಮುನ್ನ ಕಾರ್ಮಿಕರು ಮಾಲೀಕರ ಮುಂದೆ ಮಂಡಿಸುವ ಬೇಡಿಕೆಗಳು ನ್ಯಾಯಸಮ್ಮತವಾಗಿರಬೇಕು ಇದಕ್ಕೆ ಬದಲಾಗಿ ಹೆಚ್ಚು ಆಸೆಯಿಂದ ಕೂಡಿದ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಸಂಪನ್ನು ಹೂಡುವುದು ತಪ್ಪು ಎಂದಿರುವ ಗಾಂಧಿಯವರು ಸಂಪು ಶಾಂತಿಯುತ ಹಾಗೂ ಅಹಿಂಸೆಯಿಂದ ಕೈಗೊಂಡಾಗ ಮಾತ್ರ ಸಂಪು ಯಶಸ್ವಿಯಾಗಲು ಸಾಧ್ಯ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಹೀಗೆ ಗಾಂಧಿಯವರು ಸತ್ಯಾಗ್ರಹ ಆಚರಣೆಯನ್ನು ಸಂದರ್ಭಕ್ಕೆ ತಕ್ಕಂತೆ ವಿವಿಧ ತಂತ್ರಗಳನ್ನು ಕಾರ್ಯರೂಪಕ್ಕೆ ತರುವ ಮೂಲಕ ಕಾರ್ಯಪ್ರವೃತ್ತಗೊಳಿಸಬಹುದಾಗಿದೆ ಎಂದಿದ್ದಾರೆ.

## ನಿಮ್ಮ ಪ್ರಗತಿ ಪರಿಶೀಲನೆ - 1

**ಸೂಚನೆ:** 1. ಈ ಕೆಳಗೆ ಬಿಟ್ಟಿರುವ ಜಾಗವನ್ನು ನಿಮ್ಮ ಉತ್ತರಕ್ಕೆ ಉಪಯೋಗಿಸಿಕೊಳ್ಳಿ.

2. ಈ ಘಟಕದ ಕೊನೆಯಲ್ಲಿ ನೀಡಿರುವ ಉತ್ತರದೊಂದಿಗೆ ನಿಮ್ಮ ಪ್ರಗತಿಯನ್ನು ಪರಿಶೀಲಿಸಿಕೊಳ್ಳಿ.

**1. ಗಾಂಧಿಯವರು ತಿಳಿಸಿರುವ ಸತ್ಯಾಗ್ರಹವನ್ನು ಕುರಿತು ಸಂಕ್ಷಿಪ್ತವಾಗಿ ವಿವರಿಸಿ?**

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

**2. ಸತ್ಯಾಗ್ರಹದ ವಿವಿಧ ತಂತ್ರಗಳನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿ?**

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

## 25.4 ಗಾಂಧಿಯವರ ಗ್ರಾಮ ಸ್ವರಾಜ್ಯ ಚಿಂತನೆ

ಗಾಂಧಿಯವರ ಗ್ರಾಮ ಸ್ವರಾಜ್ಯ ಪರಿಕಲ್ಪನೆಯು ಗ್ರಾಮ ರಾಜ್ಯ, ರಾಮರಾಜ್ಯ, ಗಾಂಧಿರಾಜ್ಯ ಹೀಗೆ ಹಲವಾರು ಹೆಸರುಗಳಿಂದ ಪ್ರಚಲಿತವಾಗಿದೆ. ಗಾಂಧಿಯವರ ಈ ಗ್ರಾಮಸ್ವರಾಜ್ಯ ಚಿಂತನೆಯ ಒಂದು ಆದರ್ಶ ಗ್ರಾಮೀಣ ರಾಜ್ಯದ ಪರಿಕಲ್ಪನೆಯಾಗಿದೆ. ಗಾಂಧಿಯವರು ಪ್ರಸ್ತುತದಲ್ಲಿರುವ ರಾಜ್ಯ ಸಮಾಜವಾದವನ್ನು ತಿರಸ್ಕರಿಸುತ್ತಾ ಗ್ರಾಮೀಣ ಸಮಾಜವಾದವನ್ನು ಪ್ರಬಲವಾಗಿ ಸಮರ್ಥಿಸುತ್ತಾರೆ. ಕಾರಣ ಗಾಂಧಿಯವರು ರಾಜ್ಯ ಸಮಾಜವಾದದಲ್ಲಿ ಉತ್ಪಾದನೆಯು ಸಂಪೂರ್ಣವಾಗಿ ರಾಜ್ಯ ನಿಯಂತ್ರಿತವಾಗಿರಬೇಕಾಗಿರುವುದನ್ನು ವಿರೋಧಿಸುವುದರ ಜೊತೆಗೆ ಬಂಡವಾಳಶಾಹಿ ಪದ್ಧತಿಯನ್ನು ಖಂಡಿಸಿದ ಇವರು ಮಿತಿಮೀರಿದ ಸಂಪತ್ತಿನ ಗಳಿಕೆ ಹಾಗೂ ಅದರ ಕೇಂದ್ರೀಕರಣಕ್ಕೆ ತಮ್ಮ ಪ್ರಬಲವಾದ ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ಗಾಂಧಿಯವರು ತಮ್ಮ ಗ್ರಾಮ ಸ್ವರಾಜ್ಯ ಕುರಿತಾದ ಚಿಂತನೆಯಲ್ಲಿ ವ್ಯಕ್ತಿ ಸ್ವಾತಂತ್ರ್ಯಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುವುದರ ಜೊತೆಗೆ ಆರ್ಥಿಕ ಸಮಾನತೆಯನ್ನು ಪ್ರಬಲವಾಗಿ ಪ್ರತಿಪಾದಿಸಿದ್ದಾರೆ.

ಗಾಂಧಿಯವರು ತಮ್ಮ ಚಿಂತನೆಯಲ್ಲಿ ಐಷರಾಮದ ಆಡಂಬರಪೂರಿತವಾದ ಜೀವನ ಶೈಲಿಗೆ ತಮ್ಮ ಅಸಮ್ಮತಿಯನ್ನು ಸೂಚಿಸುತ್ತಾ ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಜೀವನ ಶೈಲಿಯು ಸರಳತೆಯಿಂದ ಕೂಡಿರಬೇಕು ಹಾಗೂ ಸಮಾಜದಲ್ಲಿ ಶ್ರೀಮಂತಿಕ ಮತ್ತು ಬಡತನವೆಂಬ ಕಂದಕ ನಿರ್ಮೂಲನೆಯಾಗಬೇಕು, ಇದು ನಿರ್ಮೂಲನೆಯಾಗಬೇಕಾದರೆ ಸಂಪತ್ತಿನ ವಿಕೇಂದ್ರೀಕರಣ ಪ್ರಕ್ರಿಯೇ ಪರಿಣಾಮಕಾರಿಯಾಗಿ ಜರುಗಬೇಕು ಎಂದು ತಿಳಿಸಿರುವ ಇವರು ಸಮಾಜದಲ್ಲಿ ಸರ್ವಧರ್ಮ ಸಮನ್ವಯತೆಯನ್ನು ಸ್ಥಾಪಿಸಿರುವ ಮೂಲಕ ಮೇಲು ಕೀಳು ಎಂಬ ಶೋಷಣೆಯಿಂದ ಕೂಡಿದ ಸಾಮಾಜಿಕ ಸ್ತರ ವಿನ್ಯಾಸದ ರಚನೆಯಲ್ಲಿ ಬದಲಾವಣೆಯಾಗಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

ಗಾಂಧಿಯವರು ತಮ್ಮ ಗ್ರಾಮಸ್ವರಾಜ್ಯ ಚಿಂತನೆಯಲ್ಲಿ ಆರ್ಥಿಕ ಸಮಾನತೆಯನ್ನು ಪ್ರತಿಪಾದಿಸಿದ್ದು ಪ್ರತಿಯೊಬ್ಬನಿಗೂ ಅವನ ಜೀವನಕ್ಕೆ ಅಗತ್ಯವಿರುವಂತಹ ಮೂಲಭೂತ ಸೌಕರ್ಯಗಳು ಮುಕ್ತವಾಗಿ ದೊರೆಯುವಂತಹ ವಾತಾವರಣ ನಿರ್ಮಾಣಗೊಳ್ಳಬೇಕೆಂದಿದ್ದಾರೆ. ಗಾಂಧಿಯವರು ತಿಳಿಸುವಂತೆ ಮೂಲಭೂತ ಅಗತ್ಯತೆಗಳೆಂದರೆ ಸಮತೋಲನ ಆಹಾರ, ವಾಸಿಸಲು ಯೋಗ್ಯವಾದ ವಸತಿ, ಶಿಕ್ಷಣ, ಆರೋಗ್ಯ ಇವುಗಳಾಗಿದ್ದು ಇವುಗಳ ಸಾಧನೆಗಾಗಿ ಗ್ರಾಮೋದ್ಯೋಗದ ಸ್ಥಾಪನೆಯನ್ನು ಪ್ರತಿಪಾದಿಸಿದ್ದಾನೆ. ಮುಂದುವರೆದು ಖಾದಿ ಗ್ರಾಮೋದ್ಯೋಗದ ಮೂಲಕ ಪ್ರತಿಯೊಬ್ಬ ವ್ಯಕ್ತಿಯು ತನಗೆ ಅವಶ್ಯವಿರುವ ಮೂಲಭೂತ ಅಗತ್ಯತೆಗಳನ್ನು ಪಡೆಯುವ ಮೂಲಕ ಸ್ವಾವಲಂಬಿಗಳಾಗಿ ಜೀವನ ನಡೆಸಬಹುದೆಂದಿದ್ದಾರೆ. ಗಾಂಧಿ ಮುಂದುವರೆದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ ಭಾರತವು ಹಳ್ಳಿಗಳಿಂದ ಕೂಡಿದ ದೇಶವಾಗಿದ್ದು ಹಳ್ಳಿಗಳ ಸಮಗ್ರ ಅಭಿವೃದ್ಧಿಯಾದಾಗ ಮಾತ್ರ ರಾಷ್ಟ್ರದ ಅಭಿವೃದ್ಧಿ ಸಾಧ್ಯ ಎಂದಿರುವ ಇವರು ಹಳ್ಳಿಗಳು ಅಭಿವೃದ್ಧಿ ಆಗಬೇಕಾದರೆ ಗೃಹ ಕೈಗಾರಿಕೆಗಳು ಹೆಚ್ಚು ಹೆಚ್ಚು ಅಸ್ತಿತ್ವಕ್ಕೆ ಬಂದಾಗ ಮಾತ್ರ ಸಾಧ್ಯವೆಂದಿದ್ದಾರೆ ಕಾರಣ ಗೃಹ ಕೈಗಾರಿಕೆಗಳಿಂದಾಗಿ ಏಕ ಕಾಲದಲ್ಲಿ ಆರ್ಥಿಕ ವಿಕೇಂದ್ರೀಕರಣದ ಜೊತೆಗೆ ಇದರಿಂದ ನಿರುದ್ಯೋಗದಂತಹ ಸಮಸ್ಯೆಯನ್ನು ತೊಡೆದು ಹಾಕುವುದರ ಜೊತೆಗೆ ಪ್ರಜಾಪ್ರಭುತ್ವ ತತ್ವವನ್ನು ಹಳ್ಳಿಗಳಲ್ಲಿ ಯಶಸ್ವಿಯಾಗಿ ಆಚರಣೆ ತರಲು ಸಹಕಾರಿಯಾದುದಾಗಿದೆ ಎಂದಿದ್ದಾರೆ.

ಗಾಂಧಿಯವರು ತಮ್ಮ ಗ್ರಾಮ ಸ್ವರಾಜ್ಯ ಚಿಂತನೆಯಲ್ಲಿ ಬೃಹತ್ ಕೈಗಾರಿಕೆ ಹಾಗೂ ನಗರೀಕರಣವನ್ನು ಪ್ರಬಲವಾಗಿ ವಿರೋಧಿಸುತ್ತಾರೆ. ಇವರು ಯಾಂತ್ರೀಕರಣ ಹಾಗೂ ಔದ್ಯೋಗೀಕರಣ ಒಂದು ರೀತಿಯ ರೋಗಗಳಂತಿದ್ದು ಸಮಾಜದಲ್ಲಿನ ಸಾಂಸ್ಕೃತಿಕ ತಳಹದಿಯನ್ನು ನಾಶಗೊಳಿಸುತ್ತದೆ ಎಂದಿರುವ ಇವರು ಪಾಶ್ಚಿಮಾತ್ಯ ಸಮಾಜವಾದವು ಹಿಂಸೆಯನ್ನು ಪ್ರೇರೇಪಿಸುತ್ತದೆ. ನಿಜವಾದ ಸಮಾಜವಾದವನ್ನು ಆಚರಣೆಗೆ ತರಬೇಕಾದರೆ ಸತ್ಯಾಗ್ರಹದಿಂದ ಮಾತ್ರ ಸಾಧ್ಯ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಸಮಾಜವು

ಅಹಿಂಸೆಯ ತಳಹದಿಯ ಮೇಲೆ ರೂಪಿತವಾಗಿರಬೇಕು. ಇದರಿಂದ ಸಮಾಜದಲ್ಲಿ ಸಾಮರಸ್ಯದ ಜೀವನ ಸಾಧ್ಯ ಹಿಂಸೆಯಿಂದ ಮಾತ್ರ ಸಾಮಾಜಿಕ ಬದಲಾವಣೆ ಸಾಧ್ಯ ಎಂಬ ಕಾರ್ಲ್‌ಮಾರ್ಕ್ಸ್‌ರವರ ನಿಲುವನ್ನು ಗಾಂಧಿಯವರು ಖಂಡಿಸುತ್ತಾ ಸಾಮಾಜಿಕ ಬದಲಾವಣೆಯು ಹಿಂಸೆಗೆ ಬದಲಾಗಿ ಶಾಂತಿ, ಸಹಕಾರ ಹಾಗೂ ಅಹಿಂಸೆಯಿಂದಲೂ ಸಾಧ್ಯವೆಂದು ತಿಳಿಸಿದ್ದಾರೆ. ಮುಂದುವರೆದು ಗಾಂಧಿಯವರು ಧಾರ್ಮಿಕ ಜೀವನಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡಿದ್ದಾರೆ.

ಗಾಂಧಿಯವರ ಪ್ರಕಾರ ರಾಷ್ಟ್ರಕ್ಕೆ ಲಭಿಸಿರುವ ಸ್ವಾತಂತ್ರ್ಯ ಹೆಚ್ಚು ಅರ್ಥಪೂರ್ಣವಾಗಬೇಕಾದರೆ ಗ್ರಾಮೀಣ ಸಮಾಜ ಹೆಚ್ಚು ಅರ್ಥಪೂರ್ಣವಾದ ಅಭಿವೃದ್ಧಿಯನ್ನು ಹೊಂದಿದಾಗ ಮಾತ್ರ ಸಾಧ್ಯ ಎಂದಿದ್ದಾರೆ. ಗ್ರಾಮಗಳು ಸಮಗ್ರವಾಗಿ ಅಭಿವೃದ್ಧಿಯಾಗಬೇಕಾದಲ್ಲಿ ಅಧಿಕಾರ ವಿಕೇಂದ್ರೀಕರಣದ ಜೊತೆಗೆ ಆರ್ಥಿಕ ವಿಕೇಂದ್ರೀಕರಣದಲ್ಲೇ ಸಾಗಬೇಕೆಂದಿದ್ದು ಎಲ್ಲಾ ವಿಷಯಗಳಿಗೆ ಸಂಬಂಧಿಸಿದಂತೆ ಅಂತಿಮ ಅದಿಕಾರ ಜನರಲ್ಲಿಯೇ ನೆಲೆಗೊಳ್ಳಬೇಕು ಆಗ ಮಾತ್ರ ರಾಜಕೀಯ ಹಾಗೂ ಆರ್ಥಿಕ ಸ್ವಾತಂತ್ರ್ಯ ಜಾರಿಗೊಳ್ಳುವ ಮೂಲಕ ಪ್ರಜಾಪ್ರಭುತ್ವಕ್ಕೆ ಒಂದು ಉತ್ತಮ ತಾತ್ವಿಕ ತಳಹದಿ ನೀಡಿದಂತಾಗುತ್ತದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆರ್ಥಿಕ ವಿಕೇಂದ್ರಿಕರಣ ಪ್ರಕ್ರಿಯೆಗೆ ಸಂಬಂಧಿಸಿದಂತೆ ಸಂಪನ್ಮೂಲಗಳ ಕ್ರೂಢೀಕರಣ, ಅದರ ವಿನಿಯೋಗ, ಮತ್ತು ಅದರ ಸದ್ಬಳಕೆಯ ಜವಾಬ್ದಾರಿ ಹಾಗೂ ಅದರ ನ್ಯಾಯಯುತವಾದ ವಿತರಣೆಯ ಜವಾಬ್ದಾರಿಯು ಗ್ರಾಮಗಳಲ್ಲಿ ನೆಲೆಗೊಳ್ಳಬೇಕು. ಹಾಗೆಯೇ ಸಾಮಾಜಿಕ ಮತ್ತು ಶೈಕ್ಷಣಿಕ ಅಭಿವೃದ್ಧಿಯ ನಿರ್ಧಾರಗಳನ್ನು ಕೈಗೊಳ್ಳುವ ಅದಿಕಾರವೂ ಸಹ ಗ್ರಾಮಗಳಲ್ಲಿ ಕೇಂದ್ರೀಕೃತವಾಗಿರಬೇಕು ಎಂದಿದ್ದಾರೆ. ಒಂದು ರಾಜ್ಯದಲ್ಲಿ ಸಂವೈಧಾನಿಕ ತತ್ವಗಳು ಆಚರಣೆಗೆ ಬರಬೇಕಾದಲ್ಲಿ ಗ್ರಾಮಗಳು ಸ್ವಾವಲಂಬಿಯಾಗಿ ಕಾರ್ಯನಿರ್ವಹಿಸಿದಾಗ ಮಾತ್ರ ಸಾಧ್ಯ ಎಂದಿದ್ದು ಗ್ರಾಮಗಳಲ್ಲಿ ರಾಜಕೀಯ ಸ್ವಾತಂತ್ರ್ಯ ನೆಲೆಗೊಳ್ಳಬೇಕಾದಲ್ಲಿ ಗ್ರಾಮ ಪಂಚಾಯಿತಿಗಳ ಶಿಸ್ತಿಯುತವಾದ ಆಡಳಿತ ಕಾರ್ಯಾಚರಣೆಯಿಂದ ಸಾಧ್ಯವಿದ್ದು ಇದು ರಾಜಕೀಯದಲ್ಲಿ ಯುವಕರನ್ನು ತರಬೇತಿಗೊಳಿಸುವಲ್ಲಿ ಹೊಂದಿದೆ ಅವರುಗಳಲ್ಲಿ ನಾಯಕತ್ವ ಗುಣವನ್ನು ಪ್ರೇರೇಪಿಸುವಲ್ಲಿ ಸಹಕಾರಿಯಾಗಿ ಕಾರ್ಯನಿರ್ವಹಿಸಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾನೆ.

ಗಾಂಧಿಯವರು ಅಭಿವ್ಯಕ್ತಗೊಳಿಸಿರುವ ಗ್ರಾಮಸ್ವರಾಜ್ಯ ಪರಿಕಲ್ಪನೆಯನ್ನು ಸ್ವಾತಂತ್ರ್ಯಾ ನಂತರದ ಭಾರತದಲ್ಲಿ ನಡೆದ ಸಂವಿಧಾನ ರಚನೆಯಲ್ಲಿ ಅಳವಡಿಸಿರುವ ಮೂಲಕ ಇದಕ್ಕೆ ಒಂದು ರೀತಿಯ ಸಂವಿಧಾನಿಕ ಪ್ರಾತಿನಿಧ್ಯತೆಯನ್ನು ದೊರಕಿಸಿಕೊಡಲಾಗಿದೆ. ಗಾಂಧಿಯವರ ಗ್ರಾಮ ಸ್ವರಾಜ್ಯ ತತ್ವಗಳನ್ನು ಭಾರತ ಸಂವಿಧಾನದ ರಾಜ್ಯನಿರ್ದೇಶಾತ್ಮಕ ತತ್ವಗಳಡಿಯಲ್ಲಿ 40 ನೇ ವಿಧಿಯಲ್ಲಿ ಅಲವಡಿಸಲಾಗಿದ್ದು ಗ್ರಾಮ ಸ್ವರಾಜ್ಯವನ್ನು ಜಾರಿಗೆ ತರುವ ಜವಾಬ್ದಾರಿಯನ್ನು ರಾಜ್ಯ ಸರ್ಕಾರಗಳಿಗೆ ವಹಿಸಲಾಗಿತ್ತು. ಆದರೆ ಇದನ್ನು ಕಡ್ಡಾಯಗೊಳಿಸಲಾಗಿರಲಿಲ್ಲ. 1993 ರಲ್ಲಿ ಭಾರತ ಸಂವಿಧಾನಕ್ಕೆ 73ಮತ್ತು 74ನೇ ತಿದ್ದುಪಡಿಗಳನ್ನು ತರುವ ಮೂಲಕ ದೇಶದ ಪ್ರತಿಯೊಂದು ರಾಜ್ಯದಲ್ಲಿಯು ಸಹ ಸ್ಥಳೀಯ ಸರ್ಕಾರಗಳ ರಚನೆಯನ್ನು ಕಡ್ಡಾಯಗೊಳಿಸುವ ಮೂಲಕ ಗಾಂಧಿಯ ಗ್ರಾಮ ಸ್ವರಾಜ್ಯ ಚಿಂತನೆಗೆ ಹೆಚ್ಚಿನ ಪ್ರಾಮುಖ್ಯತೆಯು ದೊರೆತಿರುವುದನ್ನು ಗಮನಿಸಬಹುದಾಗಿದೆ.

## 25.5 ಗಾಂಧಿಯವರ ಪರಿಕಲ್ಪನೆಯಲ್ಲಿ ಮಹಿಳೆ

ಗಾಂಧಿಯವರ ಪರಿಕಲ್ಪನೆಯಲ್ಲಿ ಪುರುಷ ಮತ್ತು ಮಹಿಳೆ ಇವರು ಸಮಾನರಾಗಿದ್ದು ಇವರ ಆತ್ಮಗಳು ಒಂದೇ ಆಗಿದ್ದು ಒಂದೇ ರೀತಿಯ ಸಮಸ್ಯೆಗಳು ಹಾಗೂ ಭಾವನೆಗಳನ್ನು ಹೊಂದಿದವರಾಗಿರುತ್ತಾರೆ. ಪುರುಷ ಮತ್ತು ಮಹಿಳೆ ಇವರುಗಳು ಒಂಟಿಯಾಗಿ ಕ್ರಿಯಾಶೀಲತೆಯಿಂದ ಕೂಡಿದ ಜೀವನವನ್ನು ನಡೆಸಲು ಸಾಧ್ಯವಿಲ್ಲ ಎಂದಿರುವ ಗಾಂಧಿ ಪುರುಷ ಪ್ರಾಚೀನ ಕಾಲದಿಂದಲೂ ಮಹಿಳೆಯ ಮೇಲೆ ದಬ್ಬಾಳಿಕೆಯನ್ನು ನಡೆಸುತ್ತಾ ಬಂದಿದ್ದು ನಮ್ಮ ಸಮಾಜ ಪುರುಷ ಪ್ರಧಾನ ಸಮಾಜವಾಗಿರುವುದೇ ಇದಕ್ಕೆ ಪ್ರಮುಖ ಕಾರಣವಾಗಿದ್ದು ಇದು ಮಹಿಳಾ ಸಮಾಜವನ್ನು ಕೀಳುಹಿರಿಮೆಗೆ ತಳ್ಳಿದಂತಾಗಿದೆ ಎಂದಿದ್ದಾರೆ. ಗಾಂಧಿಯವರು ಪುರುಷ ಮತ್ತು ಮಹಿಳೆಯವರ ನಡುವೆ ಹಲವಾರು ರೀತಿಯ ವ್ಯತ್ಯಾಸಗಳಿವೆ ಅದರಲ್ಲಿ ಪ್ರಮುಖವಾಗಿ ಮಹಿಳೆಯ ತಾಯ್ತನದ ಕಾರ್ಯ ಹೆಚ್ಚು ಜವಾಬ್ದಾರಿಯುತವಾದ

ಹಾಗೂ ಅಮೂಲ್ಯವಾದ ಕಾರ್ಯವಾಗಿದ್ದು ಇದರಿಂದ ಮಹಿಳೆಯ ಮೇಲೆ ಸಮಾಜದ ಜವಾಬ್ದಾರಿಯು ಅನಿವಾರ್ಯವಾಗಿ ಹೆಚ್ಚಾಗಿ ಇರುತ್ತದೆ ಎಂದಿದ್ದಾರೆ. ಪುರುಷ ಪ್ರಧಾನ ಸಮಾಜದಲ್ಲಿ ಪುರುಷ ಮನೆಯ ಹೊರಭಾಗದಲ್ಲಿ ಕ್ರಿಯಾಶೀಲನಾಗಿ ದುಡಿಯುವ ವಾತಾವರಣ ಕಲ್ಪಿತವಾಗಿದ್ದರೆ ಮಹಿಳೆಯರಿಗೆ ಈ ರೀತಿಯ ವಾತಾವರಣ ಕಲ್ಪಿತವಾಗಿಲ್ಲ ಗಾಂಧಿ ತಿಳಿಸಿರುವಂತೆ ಮಹಿಳೆಯನ್ನು ಕೇವಲ ಗೃಹಕೃತ್ಯಕ್ಕೆ ಮಾತ್ರ ಸೀಮಿತಗೊಳಿಸಲಾಗಿದೆ. ಇವಳನ್ನು ಕೇವಲ ಗೃಹಿಣಿಯನ್ನಾಗಿ ಮಾತ್ರ ದುಡಿಸಲಾಗುವ ಮೂಲಕ ಮಹಿಳೆಯನ್ನು ಶೋಷಣೆಗೆ ಒಳಪಡಿಸುತ್ತಾ ಬರಲಾಗಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಮುಂದುವರೆದು ಗಾಂಧಿಯವರು ನಾನು ಗಮನಿಸಿದಾಗ ಶ್ರಮಪ್ರಧಾನ ಕೆಲಸಗಳಲ್ಲಿ ಪುರುಷರಿಗೆ ಮಾತ್ರ ಸೀಮಿತವಾಗಿವೆ ಪುರುಷ ಮತ್ತು ಮಹಿಳೆ ಇಬ್ಬರೂ ಒಟ್ಟಾಗಿ ದುಡಿಯುವ ಕ್ಷೇತ್ರವೆಂದರೆ ಕೃಷಿಕ್ಷೇತ್ರ ಮಾತ್ರವಾಗಿದ್ದು ಇಲ್ಲಿಯೂ ಸಹ ಶ್ರಮಾಧಾರಿತ ಕೆಲಸಗಳನ್ನು ಪುರುಷ ನಿರ್ವಹಿಸಿದರೆ ಕಡಿಮೆ ಶ್ರಮಾಧಾರಿತ ಕೆಲಸಗಳನ್ನು ಮಹಿಳೆಯು ನಿರ್ವಹಿಸುವುದನ್ನು ಕಾಣಬಹುದಾಗಿದೆ ಎಂದಿರುವ ಗಾಂಧಿಯವರು ಕೃಷಿಗಿಂತ ಹೆಚ್ಚು ಶ್ರಮಾಧಾರಿತ ಉಪಕಸುಬುಗಳಾದ ಕಮ್ಮಾರಿಕೆ, ಬಡಗಿತನ ಈ ಉದ್ಯೋಗಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಕೃಷಿಯಷ್ಟು ಸಕ್ರಿಯವಾಗಿ ಇಲ್ಲದಿರುವುದನ್ನು ಅಭಿವ್ಯಕ್ತಗೊಳಿಸಿದ್ದಾರೆ.

ಗಾಂಧಿಯವರು ಪುರುಷ ಮತ್ತು ಮಹಿಳೆಯರ ನಡುವೆ ನಿಸರ್ಗದತ್ತವಾಗಿ ಹುಟ್ಟಿನಿಂದಲೇ ಕೆಲವು ವ್ಯತ್ಯಾಸಗಳ ಸೃಷ್ಟಿಯಾಗಿವೆ. ನಾವು ಪುರುಷ ಮತ್ತು ಮಹಿಳೆ ಸಮಾನರು ಎಂದು ಎಷ್ಟೋ ಹೇಳಿದರೂ ಸಹ ಅವರ ಕಾರ್ಯಶೈಲಿ, ವ್ಯತ್ಯಾಸದಿಂದ ಕೂಡಿದೆ ಮಹಿಳೆ ಮನೆಯಲ್ಲಿ ಒಡತಿ ಅಥವಾ ಪರಿಣತಿ ಹೊಂದಿದವಳಾಗಿದ್ದರೆ ಪುರುಷ ಮನೆಯಿಂದ ಹೊರ ವ್ಯವಸ್ಥೆಯಲ್ಲಿ ಪರಿಣತನಾಗಿರುತ್ತಾನೆ. ಪುರುಷ ಹಣವನ್ನು ಗಳಿಸುವವನಾದರೆ ಮಹಿಳೆ ಪುರುಷ ಗಳಿಸಿದ ಹಣವನ್ನು ಉಳಿತಾಯ ಮಾಡುವ ಮತ್ತು ವೆಚ್ಚ ಮಾಡುವ ಜವಾಬ್ದಾರಿ ಮಹಿಳೆಯದಾಗಿರುತ್ತದೆ. ಗಾಂಧಿಯವರು ಪ್ರಕಾರ ಮಹಿಳೆಯ ಮೇಲೆ ಇರುವ ದೊಡ್ಡ ಜವಾಬ್ದಾರಿಯೆಂದರೆ ಮಕ್ಕಳ ಪೋಷಣೆಯಾಗಿದ್ದು ಅವಳ ಜವಾಬ್ದಾರಿ ಮಕ್ಕಳ ಪೋಷಣೆಗೆ ಮಾತ್ರ ಸೀಮಿತವಾಗಿರದೆ ಆ ಮಗುವಿನ ಭವಿಷ್ಯವನ್ನು ರೂಪಿಸುವ ಹೊಣೆಯೇ ಸಹ ಮಹಿಳೆಯ ಮೇಲೆ ಅವಲಂಬಿತವಾಗಿರುತ್ತದೆ. ಕಾರಣ ಮಗು ಪ್ರಬುದ್ಧಮಾನಕ್ಕೆ ಬರುವ ಮುನ್ನ ಆ ಮಗುವಿನ ಗುಣ ಮತ್ತು ಚಾರಿತ್ರ್ಯ ಹಾಗೂ ನಡೆವಳಿಕೆಗಳ ಮೇಲೆ ತಾಯಿಯ ಪ್ರಭಾವ ಹೆಚ್ಚಾಗಿ ಇರುವುದರಿಂದ ಈ ಜವಾಬ್ದಾರಿಯನ್ನು ಮಹಿಳೆ ತುಂಬಾ ಜಾಗರೂಕತೆಯಿಂದ ನಿರ್ವಹಿಸಬೇಕೆಂದಿದ್ದಾರೆ.

ಗಾಂಧಿಯವರು ಮಹಿಳೆಯ ಶೋಷಣೆಯನ್ನು ಕುರಿತು ತಿಳಿಸುತ್ತಾ ಭಾರತ ಸಮಾಜದಲ್ಲಿ ಮಹಿಳೆಯರ ಶೋಷಣೆಯು ಮಿತಿ ಮೀರಿ ಬೆಳೆದಿದ್ದು ಇದಕ್ಕೆ ಪ್ರಮುಖ ಕಾರಣ ಪ್ರಾಚೀನ ಕಾಲದಿಂದ ಆಚರಿಸಿಕೊಂಡು ಬಂದಿರುವ ಧಾರ್ಮಿಕ ಹಾಗೂ ಸಾಮಾಜಿಕವಾದಂತಹ ಆಚರಣೆಗಳೇ ಆಗಿವೆ ಎಂದಿದ್ದಾರೆ. ಗಾಂಧಿಯವರು ಭಾರತೀಯ ಸಮಾಜದಲ್ಲಿನ ಬಾಲ್ಯವಿವಾಹ, ದೇವದಾಸಿ ಪದ್ಧತಿ ಹಾಗೂ ಸತಿಪದ್ಧತಿಗಳಿಂದ ನಡೆಯುತ್ತಿರುವ ಶೋಷಣೆಯಿಂದ ಮಹಿಳೆಯರಿಗೆ ವಿಮೋಚನೆಯಾಗಬೇಕು ಹಾಗೂ ಕಾನೂನಿನ ರೀತಿಯಲ್ಲಿ ಅವರಿಗೆ ಪುರುಷರಿಗೆ ಸಮಾನವಾದ ಸ್ಥಾನಮಾನಗಳು ದೊರೆಯುವಂತಾಗಬೇಕೆಂದು ತಿಳಿಸಿದರೂ ಇವರು ದಕ್ಷಿಣ ಭಾರತದಲ್ಲಿ ಆಚರಣೆಯಲ್ಲಿದ್ದ ದೇವದಾಸಿ ಪದ್ಧತಿ ಹಾಗೂ ಉತ್ತರಭಾರತದಲ್ಲಿ ಆಚರಣೆಯಲ್ಲಿದ್ದ ಸತಿಪದ್ಧತಿಗಳೆರಡನ್ನು ಅಮಾನವೀಯವಾದಂತಹ ಆಚರಣೆಗಳೆಂದು ಕರೆದಿದ್ದು ಇವುಗಳ ನಿಷೇದಕ್ಕಾಗಿ ಆಗ್ರಹಪಡಿಸಿದರು. ಗಾಂಧಿಯವರು ಸ್ವಾತಂತ್ರ್ಯಾ ನಂತರದ ಭಾರತದಲ್ಲಿ ಮಹಿಳೆಯರಿಗೆ ಸಮಾನತೆ ದೊರೆಯಬೇಕೆಂದು ಪ್ರತಿಯೊಬ್ಬ ಕಾಂಗ್ರೆಸ್ಸಿಗರ ಮೇಲೆ ಒತ್ತಡವನ್ನು ತಂದಿದ್ದರ ಫಲವಾಗಿ ಸಂವಿಧಾನ ರಚನೆಯ ಸಂದರ್ಭದಲ್ಲಿ ಸಂವಿಧಾನದ ಮೂರು ಮತ್ತು ನಾಲ್ಕನೇ ಭಾಗಗಳಲ್ಲಿ 14ನೇ ವಿಧಿಯನ್ವಯ ಸಮಾನತೆಯ ಹಕ್ಕನ್ನು ನೀಡುವ ಮೂಲಕ ಮೊದಲಬಾರಿಗೆ ಸಂವಿಧಾನಾತ್ಮಕವಾಗಿ ಮಹಿಳೆಯರನ್ನು ಸಮಾನರನ್ನಾಗಿ ಪರಿಗಣಿಸಲಾಯಿತು. ಅಲ್ಲದೆ 15(3) ಉಪವಿಧಿಯನ್ವಯ ಮಹಿಳೆಯರ ಅಭ್ಯುದಯಕ್ಕಾಗಿ ವಿಶೇಷ ಯೋಜನೆ ಅಥವಾ ಕಾರ್ಯಕ್ರಮಗಳನ್ನು ಜಾರಿಗೊಳಿಸುವ ಅವಕಾಶವನ್ನು ಕಲ್ಪಿಸುವ ಮೂಲಕ ಸಂವಿಧಾನಾತ್ಮಕವಾಗಿ ಮಹಿಲಾ ಸಮಾನತೆಯನ್ನು ಜಾರಿಗೊಳಿಸಲಾಗಿದೆ.

## 25.6 ಉಪಸಂಹಾರ

ಗಾಂಧಿಯವರು ತಮ್ಮ ಜೀವಿತ ಅವಧಿಯಲ್ಲಿ ಅವರು ಸೂಚಿಸಿದ ಚಿಂತನೆಗಳನ್ನು ಪ್ರಾಯೋಗಿಕವಾಗಿ ಅವರೇ ಕಾರ್ಯರೂಪಕ್ಕೆ ತರುವ ಪ್ರಯತ್ನವನ್ನು ನಡೆಸಿದವರಾಗಿದ್ದು ಇಂದಿನ ಆಧುನಿಕ ಸಾಮಾಜಿಕ ವ್ಯವಸ್ಥೆಯು ಗಾಂಧಿಯ ಹಲವಾರು ಚಿಂತನೆಗಳಿಂದ ಪ್ರಭಾವಿತವಾಗಿರುವುದನ್ನು ಗುರುತಿಸಬಹುದಾಗಿದೆ. ಮೊದಲನೆಯದಾಗಿ ಗಾಂಧಿಯವರು ತಮ್ಮ ಗ್ರಾಮಸ್ವರಾಜ್ಯದ ಪರಿಕಲ್ಪನೆಯಲ್ಲಿ ಪ್ರತಿಪಾದಿಸಿದ ಗ್ರಾಮಗಳ ಸ್ವಾವಲಂಬನೆ, ಆರ್ಥಿಕ ಹಾಗೂ ಅಧಿಕಾರದ ವಿಕೇಂದ್ರೀಕರಣ ವ್ಯವಸ್ಥೆಯಿಂದ ದೇಶದ ಸಮಗ್ರ ಅಭಿವೃದ್ಧಿ ಸಾಧ್ಯ ಎಂದು ತಿಳಿಸಿದ ಹಿನ್ನೆಲೆಯಲ್ಲಿಯೇ ಭಾರತ ಸಂವಿಧಾನಕ್ಕೆ 73ಮತ್ತು 74ನೇ ಸಂವಿಧಾನ ತಿದ್ದುಪಡಿಗಳನ್ನು ತರುವ ಮೂಲಕ ರಾಷ್ಟ್ರದಾದ್ಯಂತ ಪಂಚಾಯತ್ ರಾಜ್ ಸಂಸ್ಥೆಗಳ ಸ್ಥಾಪನೆಯನ್ನು ಕಡ್ಡಾಯಗೊಳಿಸಲಾಗಿದೆ. ಗಾಂಧಿಯವರು ಗ್ರಾಮರಾಜ್ಯ ಪರಿಕಲ್ಪನೆಯಲ್ಲಿ ಆಧುನಿಕ ರಾಜ್ಯ ವ್ಯವಸ್ಥೆಯನ್ನು ಬಲವಾಗಿ ವಿರೋಧಿಸಿದ್ದು ಇದರಿಂದ ಇಡೀ ಸಾಮಾಜಿಕ ಹಾಗೂ ಸಾಂಸ್ಕೃತಿಕ ವ್ಯವಸ್ಥೆಯೇ ಹಾಳಾಗುವ ಸಾಧ್ಯತೆ ಇದೆ ಎಂದು ತಿಳಿಸಿದ್ದರೂ ಸಹ ಇಂದು ದಿನೇ ದಿನೇ ಯಾಂತ್ರೀಕರಣ, ನಗರೀಕರಣ ಪ್ರಕ್ರಿಯೆ ನಿರಂತರವಾಗಿ ಮುಂದುವರೆದಿರುವುದು ಗಾಂಧಿಯವರ ಮೂಲಚಿಂತನೆಗೆ ಪ್ರಾಯೋಗಿಕವಾಗಿ ಅಸಾಧ್ಯವೆನಿಸಿದೆ. ಒಟ್ಟಿನಲ್ಲಿ ಗಾಂಧಿಯವರ ಚಿಂತನೆಯು ಸಂಪೂರ್ಣವಾಗಿ ಸತ್ಯ, ಅಹಿಂಸೆ, ಕರುಣೆ, ಪ್ರೀತಿ ಇವುಗಳಾಧಾರಿತ ನೈತಿಕ ನೆಲೆಗಟ್ಟನ್ನು ಪ್ರಬಲವಾಗಿ ಪ್ರತಿಪಾದಿಸುತ್ತದೆ ಎಂದು ಹೇಳಬಹುದಾಗಿದೆ.

### ನಿಮ್ಮ ಪ್ರಗತಿ ಪರಿಶೀಲನೆ - 2

**ಸೂಚನೆ:** 1. ಈ ಕೆಳಗೆ ಬಿಟ್ಟಿರುವ ಜಾಗವನ್ನು ನಿಮ್ಮ ಉತ್ತರಕ್ಕೆ ಉಪಯೋಗಿಸಿಕೊಳ್ಳಿ.

2. ಈ ಘಟಕದ ಕೊನೆಯಲ್ಲಿ ನೀಡಿರುವ ಉತ್ತರದೊಂದಿಗೆ ನಿಮ್ಮ ಪ್ರಗತಿಯನ್ನು ಪರಿಶೀಲಿಸಿಕೊಳ್ಳಿ.

**1. ಗಾಂಧಿಯವರ ಗ್ರಾಮ ಸ್ವರಾಜ್ಯ ಚಿಂತನೆಯನ್ನು ವಿಮರ್ಶಾತ್ಮಕವಾಗಿ ಚರ್ಚಿಸಿ?**

....................................................................................................

....................................................................................................

....................................................................................................

....................................................................................................

....................................................................................................

....................................................................................................

....................................................................................................

....................................................................................................

**2. ಗಾಂಧಿಯವರ ಪರಿಕಲ್ಪನೆಯಲ್ಲಿ ಮಹಿಳಾ ಸಮಾನತೆಯ ಪ್ರಾಮುಖ್ಯತೆಯನ್ನು ವಿವರಿಸಿ?**

....................................................................................................

....................................................................................................

....................................................................................................

....................................................................................................

....................................................................................................

....................................................................................................

....................................................................................................



VOP_FL_MA_Pol_Sci_C-8(1-7)_TF.20_F.No.69 -H
69 H

## 25.7 ಮುಖ್ಯ ಪದಗಳು

| | | |
|---|---|---|
| ನಿಸ್ವಾರ್ಥ | - | ಸ್ವಾರ್ಥವನ್ನು ಬಿಟ್ಟಿದ್ದು |
| ತಡೆಗಾವಲು | - | ಪ್ರವೇಶವನ್ನು ನಿರ್ಬಂಧಿಸುವುದು |
| ಹಿಜರತ್ | - | ಸ್ವಪ್ರೇರಿತರಾಗಿ ವಾಸಿಸುವ ಸ್ಥಳವನ್ನು ಬಿಟ್ಟು ಹೊರಡುವುದು |
| ಅಹಿಂಸೆ | - | ಹಿಂಸೆಯಿಂದ ಮುಕ್ತವಾದುದು |
| ಸತ್ಯಾಗ್ರಹ | - | ಗಾಂಧಿಯವರು ಪರಿಚಯಿಸಿದ ಹೋರಾಟ ಮಾರ್ಗ |
| ನಿರಶನ ವ್ರತ | - | ಸ್ವತಃ ದೇಹದಂಡನೆಯನ್ನೊಳಗೊಂಡ ಪ್ರತಿಭಟನಾ ಮಾರ್ಗ |
| ಸಂಪು | - | ಗಾಂಧಿ ಪರಿಚಯಿಸಿದ ಕಾರ್ಮಿಕರ ಹೋರಾಟ |
| ಸವಿನಯ ಅವಿಧೇಯತೆ | - | ಶಾಂತಿಯುತವಾದ ಕಾನೂನು ಭಂಗ ಹೋರಾಟ |

## 25.8 ಕೆಲವು ಉಪಯುಕ್ತ ಗ್ರಂಥಗಳು


| | | |
|---|---|---|
| ಡಾ. ಟಿ.ಡಿ. ದೇವೇಗೌಡ | : | ರಾಜಕೀಯ ಸಿದ್ಧಾಂತಗಳು |
| ಡಾ. ಟಿ.ಡಿ. ದೇವೇಗೌಡ | : | ರಾಜಕೀಯ ಚಿಂತಕರು |
| ಡಾ. ಕೆ.ಜೆ. ಸುರೇಶ್ | : | ಆಧುನಿಕ ರಾಜಕೀಯ ಸಿದ್ಧಾಂತಗಳು |
| ಬಿ.ಆರ್. ನಂದಾ | : | ಗಾಂಧಿ ಅಂಡ್ ಹಿಸ್ ಕ್ರಿಟಿಕ್ಸ್ |
| ಎಂ.ಕೆ. ಗಾಂಧಿ | : | ಮೈ ಎಕ್ಸ್‌ಪಿರಿಯನ್ಸ್ ವಿಥ್ ಟ್ರೂಥ್ |
| ಜೊಡಿಥ್ ಬ್ರೌನ್ | : | ಗಾಂಧಿ ಅಂಡ್ ಸಿವಿಲ್ ಡಿಸ್‌ಒಬಿಡಿಯನ್ಸ್, ದಿ ಮಹಾತ್ಮ ಇನ್ ಇಂಡಿಯನ್ ಪಾಲಿಟಿಕ್ಸ್.1928-1934 |
| ಬಿಕು ಪಾರೀಕ್ | : | ಇಂಟ್ರಡಕ್ಷನ್ ಟು ಗಾಂಧಿ |


## 25.9 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು

<u>ನಿಮ್ಮ ಪ್ರಗತಿ ಪರಿಶೀಲನೆ</u> **-1**

1. ನೋಡಿ ಭಾಗ 25.2
2. ನೋಡಿ ಭಾಗ 25.3

<u>ನಿಮ್ಮ ಪ್ರಗತಿ ಪರಿಶೀಲನೆ</u> **-2**

1. ನೋಡಿ ಭಾಗ 25.4
2. ನೋಡಿ ಭಾಗ 25.5

## ಘಟಕ 26 ಡಾ .ಬಿ.ಆರ್ ಅಂಬೇಡ್ಕರ್‌ರವರ ಜೀವನ ಮತ್ತು ಸಂವಿಧಾನ ರಚನೆಯಲ್ಲಿ ಅವರ ಪಾತ್ರ

**ರಚನೆ**

26.0 ಉದ್ದೇಶಗಳು

26.1 ಪೀಠಿಕೆ

26.2 ಜೀವನ ಮತ್ತು ಕೃತಿಗಳು

26.3 ಸಂವಿಧಾನ ರಚನೆಯಲ್ಲಿ ಅವರ ಪಾತ್ರ

26.4 ಉಪಸಂಹಾರ

26.5 ಮುಖ್ಯ ಪದಗಳು

26.6 ಕೆಲವು ಉಪಯುಕ್ತ ಗ್ರಂಥಗಳು

26.7 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು

## 26.0 ಉದ್ದೇಶಗಳು

ಈ ಘಟಕದ ವಸ್ತುವಿಷಯವನ್ನು ಅಧ್ಯಯನ ಮಾಡಿದ ನಂತರ ನೀವು

* ಅಂಬೇಡ್ಕರ್‌ರವರ ಜೀವನ ಮತ್ತು ಅವರು ರಚಿಸಿರುವ ಕೃತಿಗಳ ಬಗ್ಗೆ ತಿಳಿಯಬಹುದು
* ಅಂಬೇಡ್ಕರ್‌ರವರ ಜೀವನದ ಮೇಲೆ ಪ್ರಭಾವ ಬೀರಿದ ಅಂಶಗಳನ್ನು ಗುರುತಿಸಬಹುದು
* ಸಂವಿಧಾನ ರಚನೆಗೆ ಅಂಬೇಡ್ಕರ್‌ರವರ ಕೊಡುಗೆಯನ್ನು ಕುರಿತು ಚರ್ಚಿಸಬಹುದು
* ಅಂಬೇಡ್ಕರ್‌ರವರು ಸಮಾನತೆಗಾಗಿ ನೀಡಿದ ಪ್ರಾಧಾನ್ಯತೆಯನ್ನು ತಿಳಿಯಬಹುದು

## 26.1 ಪೀಠಿಕೆ

ಅಂಬೇಡ್ಕರ್ ಒಬ್ಬ ಸಾಮಾಜಿಕ ಹಾಗೂ ರಾಜಕೀಯ ಸುಧಾರಕರಾಗಿದ್ದು ಇವರ ಜೀವನ ಮತ್ತು ಕೃತಿಗಳಿಂದ ಭಾರತದಲ್ಲಿನ ಶೋಷಿತ ಸಮಾಜ ಪರಿಣಾಮಕಾರಿಯಾದ ಪ್ರಭಾವಕ್ಕೆ ಒಳಗಾಗಿದೆ. ಅಂಬೇಡ್ಕರ್ ಒಬ್ಬ ಸಂವಿಧಾನ ತಜ್ಞರು ಮಾತ್ರ ಆಗಿರದೆ ಒಬ್ಬ ಉತ್ತಮ ಆರ್ಥಿಕ ಪರಿಣತರೂ ಸಹ ಆಗಿದ್ದವರು. ಅಂಬೇಡ್ಕರ್‌ರವರು ಚಿಂತನೆಗಳನ್ನು ನೀಡಿದುದಕ್ಕಿಂತ ಅವರು ನಡೆಸಿದ ಸಾಮಾಜಿಕ ಹೋರಾಟಗಳಿಂದಾಗಿ ಹೆಚ್ಚು ಜಗತ್‌ವಿಖ್ಯಾತಿಯಾದಂತಹವರು. ಭಾರತಕ್ಕೆ ಸ್ವಾತಂತ್ರ್ಯ ಬರುವ ಮುನ್ನವೇ ಅಂಬೇಡ್ಕರ್ ಅವರು ಭಾರತ ಸಮಾಜದಲ್ಲಿನ ಅಮಾನವೀಯವಾದ ಶೋಷಣೆಯ ವಿರುದ್ಧ ತಮ್ಮ ಹೋರಾಟ ಪ್ರಾರಂಭಿಸಿದರು ಇದಕ್ಕೆ ಪ್ರಮುಖ ಕಾರಣ ತಮ್ಮ ಬಾಲ್ಯದಿಂದಲೇ ಅಂಬೇಡ್ಕರ್ ಅವರು ಅಮಾನವೀಯವಾದ ಸಾಮಾಜಿಕ ಶೋಷಣೆಗೆ ಗುರಿಯಾಗಿದ್ದರಿಂದಾಗಿ ಪ್ರಾರಂಭದಿಂದಲೇ ಅವರಲ್ಲಿ ಹೋರಾಟ ಮನೋಭಾವನೆ ಬೆಳೆಯಲು ಕಾರಣವಾಯಿತು. ಈ ಹಿನ್ನೆಲೆಯಲ್ಲಿ ಅಂಬೇಡ್ಕರ್ ಸಾಮಾಜಿಕ ಶೋಷಣೆಯ ವಿರುದ್ಧ ಚಾದರ್ ಕೆರೆಯ ಚಳುವಳಿ, ಮಹಾಡ್ ಸತ್ಯಾಗ್ರಹ, ಕಳಾರಮ್ಮದೇವಾಲಯದ ಹೋರಾಟ ಹೀಗೆ ಹಲವಾರು ಜನನಿಬಿಡವಾದಂತಹ ಹೋರಾಟಗಳನ್ನು ಸಂಘಟಿಸಿ ಹೋರಾಟ ನಡೆಸಿದರು. ಅಂಬೇಡ್ಕರ್ ಸಾಮಾಜಿಕ ಹಾಗೂ ಧಾರ್ಮಿಕ ಶೋಷಣೆಯನ್ನು ಮನುಧರ್ಮ ಶಾಸ್ತ್ರವನ್ನು ಬಹಿರಂಗವಾಗಿ ಬೆಂಕಿಗೆ ಹಾಕಿ ದಹಿಸುವ ಮೂಲಕ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದರು. ಇದಲ್ಲದೆ ಅಂಬೇಡ್ಕರ್‌ರವರು ಸಾಮಾಜಿಕ ಆರ್ಥಿಕ ಹಾಗೂ ರಾಜಕೀಯ ಸಮಾನತೆಯನ್ನು ಪಡೆಯುವ ಸಲುವಾಗಿ ಅಂದಿನ ಬ್ರಿಟೀಷ್ ಸರ್ಕಾರ ಆಯೋಜಿಸಿದ್ದ ದುಂಡು ಮೇಜಿನ ಪರಿಷತ್‌ಗಳಲ್ಲಿ ಭಾಗವಹಿಸುವ ಪ್ರತ್ಯೇಕ ಮತದಾನವನ್ನು ಪಡೆಯುವಲ್ಲಿ ಹೋರಾಟ ನಡೆಸಿದರಾದರೂ ನಂತರ ಗಾಂಧಿ ಮತ್ತು ಅಂಬೇಡ್ಕರ್‌ರವರ ನಡುವೆ ಪೂನಾ ಒಪ್ಪಂದ ಏರ್ಪಡುವ ಮೂಲಕ ಅದು ವಿಫಲವಾಯಿತು. ಇಷ್ಟಾದರೂ ಅಂಬೇಡ್ಕರ್ ಶೋಷಣೆಯ ವಿರುದ್ಧ ತಮ್ಮ ಹೋರಾಟವನ್ನು ನಿಲ್ಲಿಸದೆ ಸ್ವತಂತ್ರ್ಯಾ ನಂತರ ಹಾಗೂ ಭಾರತದಲ್ಲಿ ಸಂವಿಧಾನ ರಚನೆಯಲ್ಲಿ ಕರಡು ಸಮಿತಿಯ ಅಧ್ಯಕ್ಷರಾಗಿ ಶೋಷಣೆ ಮುಕ್ತ ವ್ಯವಸ್ಥೆಯ ಆಚರಣೆಗೆ ಸಹಕಾರಿಯಾಗಬಲ್ಲ ಸಂವಿಧಾನವನ್ನು ರಚಿಸುವಲ್ಲಿ ಪ್ರಮುಖ ಪಾತ್ರವಹಿಸಿದರು. ಅಂಬೇಡ್ಕರ್‌ರವರ ಹೋರಾಟ ಹಾಗೂ ಅವರು ರಚಿಸಿರುವ ಕೃತಿಗಳು ಸಂಪೂರ್ಣವಾಗಿ ಅಂಬೇಡ್ಕರ್‌ರವರ ಶೋಷಣ ಮುಕ್ತ ಸಮಾಜದಲ್ಲಿ ಸ್ವಾತಂತ್ರ್ಯ ಸಮಾನತೆ, ಹಾಗೂ ಭ್ರಾತೃತ್ವಗಳಿಗೆ ನೀಡಿದ ಪ್ರಾಮುಖ್ಯತೆಯ ಬಗ್ಗೆ ತಿಳಿಸುತ್ತವೆ.

## 26.2 ಜೀವನ ಮತ್ತು ಕೃತಿಗಳು

ಡಾ. ಬಿ.ಆರ್. ಅಂಬೇಡ್ಕರ್‌ರವರು ಮಹಾರಾಷ್ಟ್ರ ರಾಜ್ಯದ ಇಂದೋರ್‌ಗೆ ಸಮೀಪವಿರುವ ಮಹ್ಗಾವಾ ಎಂಬಲ್ಲಿ ಏಪ್ರಿಲ್ 14, 1891 ರಂದು ಜನಿಸಿದರು. ಇವರ ತಂದೆ ರಾಮ್‌ಜಿ ಸಕ್ಪಾಲ್ ಸ್ಥಳೀಯ ಮಿಲಿಟರಿ ಶಾಲೆಯಲ್ಲಿ ಶಿಕ್ಷಕರಾಗಿದ್ದರೆ ಇವರ ತಾಯಿ ಭೀಮಾಬಾಯಿ ಇವರು ಸಂತ ಕಬೀರ್ ಪಂಥದ ಆರಾಧಕರಾಗಿದ್ದರು. ಅಂಬೇಡ್ಕರ್ ಅವರು ಅವರ ತಂದೆತಾಯಿಯವರಿಗೆ 14ನೇ

ಮಗನಾಗಿದ್ದು ಬಾಂಬೆಯ ಎಲ್ಫಿನ್‌ಸ್ಟೋನ್ ಪ್ರೌಢಶಾಲೆಯಲ್ಲಿ 1907 ರಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಇವರು 1908ರಲ್ಲಿ 9 ವರ್ಷ ವಯಸ್ಸಿನ ರಮಾಬಾಯಿ ಎಂಬ ಯುವತಿಯೊಂದಿಗೆ ವಿವಾಹವಾದರು. ನಂತರ 1912ರ ವೇಳೆಗೆ ಎಲ್ಫಿನ್‌ಸ್ಟೋನ್ ಕಾಲೇಜಿನಲ್ಲಿ ತಮ್ಮ ಬಿ.ಎ. ಪದವಿಯನ್ನು ಇಂಗ್ಲಿಷ್ ಮತ್ತು ಪರ್ಶಿಯನ್ ಭಾಷಾ ವಿಷಯಗಳನ್ನೊಳಗೊಂಡಂತೆ ಪಡೆದರು. ನಂತರ ಅಂಬೇಡ್ಕರ್‌ರವರು ಬರೋಡ ಮಹಾರಾಜರು ನೀಡಿದ ಶಿಷ್ಯ ವೇತನದ ಸಹಾಯದಿಂದ ಉನ್ನತ ವ್ಯಾಸಂಗಕ್ಕಾಗಿ 1913ರಲ್ಲಿ ಅಮೇರಿಕಾದ ಕೊಲಂಬಿಯಾ ವಿಶ್ವವಿದ್ಯಾನಿಲಯಕ್ಕೆ ತೆರಳಿದರು. ಅಲ್ಲಿ ಅಂಬೇಡ್ಕರ್ ಅವರು ಅವರ ಗುರುಗಳಾದ ಜಾನ್ ಡ್ಯೆಸ್ಸಿ, ಎಡ್ವಿನ್ ಸೆಲಿಗ್‌ಮನ್ ಹಾಗೂ ಗೋಲ್ಡನ್ ವೈಸರ್ ಇವರುಗಳಿಂದ ಬೌದ್ಧಿಕವಾಗಿ ಪ್ರಭಾವಿತರಾದ ಇವರು ಭಾರತದಲ್ಲಿನ ಈಸ್ಟ್ ಇಂಡಿಯಾ ಕಂಪನಿಯ ಹಣಕಾಸು ಆಡಳಿತಕ್ಕೆ ಸಂಬಂಧಿಸಿದಂತೆ ಪ್ರಬಂಧವನ್ನು ಮಂಡಿಸಿ ಎಂ.ಎ. ಪದವಿ ಗಳಿಸಿದರು. ನಂತರ ನ್ಯಾಷನಲ್ ಡಿವಿಡೆಂಟ್ ಫಂಡ್‌ಗೆ ಸಂಬಂಧಿಸಿದಂತೆ ಪಿ.ಹೆಚ್.ಡಿ. ಪದವಿಯನ್ನು ಸಹ ಪಡೆದರು. ಇದಲ್ಲದೆ ಭಾರತದಲ್ಲಿನ ಜಾತಿ ವ್ಯವಸ್ಥೆ ಮತ್ತು ಅದರ ಬೆಳವಣಿಗೆಯನ್ನು ಕುರಿತು ಪ್ರಬಂಧವನ್ನು ಮಂಡಿಸಿದರು. ಅಂಬೇಡ್ಕರ್‌ರವರು 1916ರಲ್ಲಿ ಕೊಲಂಬಿಯಾದಿಂದ ಇಂಗ್ಲೆಂಡಿಗೆ ತೆರಳಿ ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್. ಕಾಲೇಜಿಗೆ ಸೇರಿದ ಇವರು ಅಲ್ಲಿ ಬಾರ್-ಅಟ್-ಲಾ ಪದವಿಗೆ ಸೇರಿಕೊಂಜರಾದರೂ ಇವರಿಗೆ ಸಯ್ಯಾಜಿ ಗಾಯಕ್‌ವಾಡ್‌ರವರು ನೀಡಿದ್ದ ಶಿಷ್ಯವೇತನದ ಅವಧಿ ಮುಗಿದಿದ್ದರಿಂದಾಗಿ ವಿದ್ಯಾಭ್ಯಾಸವನ್ನು ಅರ್ಧಕ್ಕೆ ನಿಲ್ಲಿಸಿ ಭಾರತಕ್ಕೆ ಹಿಂದಿರುಗಿದರು. ಭಾರತಕ್ಕೆ ಹಿಂದಿರುಗಿದ ನಂತರ ಇವರು ಒಪ್ಪಂದದಂತೆ ಬರೋಡಾ ಸಂಸ್ಥಾನದಲ್ಲಿ ಮಿಲಿಟರಿ ಕಾರ್ಯದರ್ಶಿಯಾಗಿ ಕೆಲಸಕ್ಕೆ ಸೇರಿದರು. ಆದರೆ ಅಲ್ಲಿನ ಅಧೀನ ಅಧಿಕಾರಿಗಳ ಸಾಮಾಜಿಕ ಕಿರುಕುಳದಿಂದಾಗಿ ಅಂಬೇಡ್ಕರ್‌ರವರು ಆ ಹುದ್ದೆಗೆ ರಾಜೀನಾಮೆಯನ್ನು ನೀಡಿ ಬಾಂಬೆಗೆ ತೆರಲಿ ಷೇರು ವಿಕ್ರಯ ವೃತ್ತಿಯನ್ನು ಆರಂಭಿಸಿದರಾದರೂ ಇದರ ಮೇಲೆಯೂ ಸಾಮಾಜಿಕವಾದಂತಹ ರೂಢಿಪದ್ಧತಿಯಗಳು ಅಂಬೇಡ್ಕರ್ ವ್ಯಾಪಾರವನ್ನು ನಷ್ಟಕ್ಕೇ ಸಿಲುಕಿಸುವಲ್ಲಿ ಯಶಸ್ವಿಯಾಗಿದ್ದವು. ಇದರಿಂದ ಬೇಸತ್ತ ಅಂಬೇಡ್ಕರ್ ಅವರು ಬಾಂಬೆಯ ಸಿಡನ್‌ಹ್ಯಾಂ ಕಾಲೇಜಿನಲ್ಲಿ ರ್‍ಹಾಜಕೀಯ ಅರ್ಥಶಾಸ್ತ್ರದ ಪ್ರಾಧ್ಯಾಪಕರಾಗಿ ಕೆಲಸಕ್ಕೆ ಸೇರಿಕೊಂಡು ಅಲ್ಲಿ ಸೇವೆಸಲ್ಲಿಸಿದ ಅಂಬೇಡ್ಕರ್ 1920ರಲ್ಲಿ ಪುನಃ ಇಂಗ್ಲೆಂಡಿಗೆ ತೆರಳಿ ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್ ಶಾಲೆಗೆ ಸೇರಿದ ಇವರು ಎಂ.ಎಸ್ಸಿ ಪದವಿಯನ್ನು ಪಡೆದರು. ಆನಂತರದಲ್ಲಿ 1921ರಲ್ಲಿ ರೂಪಾಯಿ ಸಮಸ್ಯೆಗೆ ಸಂಬಂಧಿಸಿದಂತೆ ಪ್ರಬಂಧವನ್ನು ಮಂಡಿಸಿ ಡಿ.ಎಸ್.ಸಿ ಪದವಿಯನ್ನು ಆಗಿನ ಸಮಯದಲ್ಲಿ ಪ್ರಸಿದ್ಧ ಅರ್ಥಶಾಸ್ತ್ರಜ್ಞರಾಗಿದ್ದ ಎಡ್ವಿನ್ ಕಯಾನನ್ ಅವರ ಮಾರ್ಗದರ್ಶನದಲ್ಲಿ ಪಡೆದರು. ಇವರು ಡಿ.ಎಸ್.ಸಿ.ಗಾಗಿ ಸಲ್ಲಿಸಿದ ಪ್ರಬಂಧವು 1925ರಲ್ಲಿ ದಿ ಪ್ರಾಬ್ಲಮ್ ಆಫ್ ರುಪಿ ಇಟ್ಸ್ ಒರಿಜಿನ್ ಅಂಡ್ ಇಟ್ಸ್ ಸಲ್ಯೂಷನ್ (The problem of Rupee its origin and its solution) ಎಂಬ ಹೆಸರಿನಲ್ಲಿ ಪ್ರಕಟಗೊಂಡಿತು. ಇವರು ಪಿ.ಹೆಚ್.ಡಿ. ಪದವಿಗಾಗಿ ಸಲ್ಲಿಸಿದ ಪ್ರಬಂಧವೂ ಸಹ 1922ರಲ್ಲಿ ಎವಲೂಷನ್ ಆಫ್ ಪ್ರಾವಿನ್ಸಿಯಲ್ ಫೈನಾನ್ಸ್ ಇನ್ ಬ್ರಿಟೀಷ್ ಇಂಡಿಯಾ (Evolution of Provincial finance in British India) ಎಂಬ ಶೀರ್ಷಿಕೆಯೊಂದಿಗೆ ಪ್ರಕಟವಾಯಿತು.

ಅಂಬೇಡ್ಕರ್‌ರವರು ಸಾತ್‌ಬರೋ ಸಮಿತಿಯ ಮುಂದೆ ಹಾಜರಾಗುವ ಮೂಲಕ ಮೊದಲ ಬಾರಿಗೆ ಸಾರ್ವಜನಿಕ ರಂಗ ಪ್ರವೇಶಿಸಿದರು. ಸಾತ್‌ಬರೋ ಸಮಿತಿಯ ಮುಂದೆ ಭಾರತ ಸಮಾಜದಲ್ಲಿ ದಲಿತ ವರ್ಗದ ಶೋಷಣೆಯನ್ನು ಮನವರಿಕೆ ಮಾಡಿಕೊಟ್ಟ ಇವರು ಭಾರತದಲ್ಲಿ ಮುಸ್ಲಿಂರಿಗೆ ನೀಡಿರುವಂತೆ ದಲಿತ ಸಮುದಾಯಕ್ಕೂ ಪ್ರತ್ಯೇಕ ಮತದಾನ ಸೌಲಭ್ಯವನ್ನು ಕಲ್ಪಿಸಬೇಕೆಂಬ ಬೇಡಿಕೆಯನ್ನು ಮಂಡಿಸಿದರು. ಇವರು ದಲಿತರನ್ನು ಶೋಷಣೆಯ ವಿರುದ್ಧ ಜಾಗೃತಗೊಳಿಸುವ ಉದ್ದೇಶದಿಂದ 1920 ಜನವರಿ 31 ರಂದು ಮೂಕನಾಯಕ ಪತ್ರಿಕೆಯನ್ನು ಪ್ರಾರಂಭಿಸಿದರಲ್ಲದೆ ಅದೇ ವರ್ಷ ಕೊಲ್ಹಾಪುರದ ಸಾಹು ಮಹಾರಾಜರ ಸಹಕಾರಯೊಂದಿಗೆ ಡಿಪ್ರೆಸಡ್ ಕ್ಲಾಸ್ ಪೋರಂ (ದಲಿತ ಸಮಾಜ ಸಂಘಟನೆ) ಯನ್ನು ಪ್ರಾರಂಭಿಸಿ ಇದರ ಆಶ್ರಯದಲ್ಲಿ ಅಖಿಲ ಭಾರತ ದಲಿತ ಸಮುದಾಯದ ಸಮ್ಮೇಳನವನ್ನು ನಾಗಪುರದಲ್ಲಿ ಆಯೋಜಿಸಿದರು. ನಂತರ 1924ರಲ್ಲಿ ಬಹಿಷ್ಕೃತ ಹಿತಕಾರಣೆ ಸಭಾವನ್ನು ಸ್ಥಾಪಿಸಿದ ಇವರು ಇದರ ಆಶ್ರಯದಲ್ಲಿ

ದಲಿತ ವಿದ್ಯಾರ್ಥಿಗಳಿಗಾಗಿ ವಿದ್ಯಾರ್ಥಿ ನಿಲಯವನ್ನು ಆರಂಭಿಸಿದರು. ನಂತರ 1927ರಲ್ಲಿ ಅಸ್ಪೃಶ್ಯರು ಸಾರ್ವಜನಿಕ ಕೆರೆಯ ನೀರನ್ನು ಪಡೆಯುವ ಉದ್ದೇಶದಿಂದ ಅವಕಾಶ ಕಲ್ಪಿಸುವ ಸತ್ಯಾಗ್ರಹವನ್ನು ಕೈಗೊಂಡರು. ಇದೇ ಸಂದರ್ಭದಲ್ಲಿ ಡಿಸೆಂಬರ್ 25, 1927 ರಂದು ಮನುಸ್ಮೃತಿಯನ್ನು ಬೆಂಕಿಗೆ ಹಾಕುವ ಮೂಲಕ ತಮ್ಮ ಪ್ರತಿಭಟನೆಯನ್ನು ನಡೆಸಿದರು. ನಂತರ ಅಂಬೇಡ್ಕರ್ ಅವರನ್ನು 1927 ರಲ್ಲಿ ಬಾಂಬೆ ಪ್ರಾಂತ್ಯದ ಶಾಸಕಾಂಗ ಸಮಿತಿಯ ಸದಸ್ಯರನ್ನಾಗಿ ನೇಮಿಸಲಾಯಿತು. ಇವರು 1928ರಲ್ಲಿ ಭಾರತಕ್ಕೆ ಆಗಮಿಸಿದ್ದ ಸೈಮನ್ ಕಮಿಷನ್ ಮುಂದೆ ಹಾಜರಾಗಿ ತಮ್ಮ ಬೇಡಿಕೆಗಳನ್ನು ಮಂಡಿಸಿದರು. ನಂತರ 1930ರಲ್ಲಿ ದೇವಾಲಯದ ಪ್ರವೇಶಕ್ಕೆ ಸಂಬಂಧಿಸಿದಂತೆ ನಾಸಿಕ್‌ನ ಕಳರಾಯ ದೇವಾಲಯ ಸತ್ಯಾಗ್ರಹವನ್ನು ಕೈಗೊಂಡರು. 1930ರಲ್ಲಿ ನಡೆದ ಮೊದಲ ದುಂಡು ಮೇಜಿನ ಸಭೆಯಲ್ಲಿ ಭಾಗವಹಿಸಿದ್ದ ಗಾಂಧಿಯವರು ಅಂಬೇಡ್ಕರ್ ಅವರ ಈ ಪ್ರತ್ಯೇಕ ಮತದಾನದ ಬೇಡಿಕೆಯನ್ನು ವಿರೋಧಿಸಿದರು. ನಂತರ ಈ ವಿಷಯಕ್ಕೆ ಸಂಬಂಧಿಸಿದಂತೆ ಗಾಂದಿ ಉಪವಾಸ ಸತ್ಯಾಗ್ರಹವನ್ನು ಹೂಡಿದ್ದರ ಪ್ರತಿಫಲವಾಗಿ 1932ರಲ್ಲಿ ಗಾಂಧಿ ಮತ್ತು ಅಂಬೇಡ್ಕರ್‌ರವರ ನಡುವೆ ಪೂನಾ ಒಪ್ಪಂದ ಏರ್ಪಟ್ಟು ಇದರನ್ವಯ ದಲಿತರಿಗಾಗಿ ಪ್ರತ್ಯೇಕ ಮತಕ್ಷೇತ್ರವನ್ನು ಪಡೆಯುವಲ್ಲಿ ಮಾತ್ರ ಅಂಬೇಡ್ಕರ್ ಯಶಸ್ವಿಯಾದರು. ಆದರೆ 1935ರಲ್ಲಿ ಜಾರಿಗೆ ಬಂದ ಭಾರತ ಸರ್ಕಾರ ಕಾಯ್ದೆಯಲ್ಲಿ ಅಂಬೇಡ್ಕರ್ ಸೂಚಿಸಿದ ಹಲವಾರು ಸುಧಾರಣೆಗಳನ್ನು ಅಳವಡಿಸಲಾಯಿತು. ಅಂಬೇಡ್ಕರ್‌ವರು ಪ್ರಾರಂಭದಿಂದ ನಡೆಸಿದ ಸಾಮಾಜಿಕ ಹೋರಾಟದಿಂದ ಬೇಸತ್ತು ಈ ಹಿಂದೂ ಸಮಾಜದಲ್ಲಿ ಸಾಮಾಜಿಕ ಸಮಾನತೆಯನ್ನು ಜಾರಿಗೊಳಿಸುವುದು ಅಸಾಧ್ಯದ ವಿಷಯವೆಂಬ ಬೇಸರವನ್ನು ವ್ಯಕ್ತಪಡಿಸುತ್ತಾ ಹಿಂದೂ ಧರ್ಮದ ಸುಧಾರಣೆ ಒಂದು ಅಸಾಧ್ಯವಾದ ವಿಷಯವೆಂದು ಅರಿತು ಅಕ್ಟೋಬರ್ 13, 1935 ರಂದು ಮೊದಲ ಬಾರಿಗೆ ಕರೆ ನೀಡಿದರು. 1936ರಲ್ಲಿ ಹಿಂದೂ ಧರ್ಮದಲ್ಲಿನ ಜಾತಿಯ ನಿರ್ಮೂಲನೆಗೆ ಸಂಬಂಧಿಸಿದಂತೆ ಅನಿಹಿಲೇಷನ್ ಆಫ್ ಕಾಸ್ಟ್ (Annihilation of caste) ಎಂಬ ಪ್ರಬಂಧವನ್ನು ವಿಚಾರ ಗೋಷ್ಠಿಯಲ್ಲಿ ಮಂಡಿಸುವ ಉದ್ದೇಶದಿಂದ ರಚಿಸಿದರು. ನಂತರ ಇವರು ದಲಿತ ಸಮುದಾಯದ ಪರವಾಗಿ ಹೋರಾಡುವ ಸಲುವಾಗಿ ಇಂಡಿಪೆಂಡೆಂಟ್ ಲೇಬರ್ ಪಕ್ಷ (Independent Labour Party)ಯನ್ನು ಪ್ರಾರಂಭಿಸಿದರು. 1942ರಲ್ಲಿ ವೈಸ್‌ರಾಯ್ ಆಡಳಿತ ಮಂಡಳಿ ಸಮಿತಿಯ ಸದಸ್ಯರಾಗಿ ಆಯ್ಕೆಗೊಂಡ ಇವರು ಈ ಸಮಯದಲ್ಲಿ ಮೀಸಲಾತಿ ನಿಯಮಾವಳಿಗಳು ಹಾಗೂ ಕಾರ್ಮಿಕರ ಕಲ್ಯಾಣಕ್ಕೆ ಸಂಬಂಧಿಸಿದ ನಿಯಮಗಳ ಅನುಷ್ಠಾನಕ್ಕಾಗಿ ಶ್ರಮಿಸಿದರು.

ಸ್ವಾತಂತ್ರ್ಯಾ ನಂತರ ಭಾರತದಲ್ಲಿ ಅಂಬೇಡ್ಕರ್‌ರವರು ಸಂವಿಧಾನ ಕರಡು ಸಮಿತಿಯ ಅಧ್ಯಕ್ಷರಾಗಿ ಕೆಲಸ ನಿರ್ವಹಿಸಿ ಸಂವಿಧಾನ ರಚನೆಯಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದರು. ಇವರು ಭಾರತದ ಮೊದಲ ಕಾನೂನು ಮಂತ್ರಿಯಾಗಿ ನೇಮಕಗೊಂಡರು ಆದರೆ ಸಂಸತ್ತಿನಲ್ಲಿ ಇವರು ಮಂಡಿಸಿದ ಹಿಂದೂ ಕೋಡ್ ಮಸೂದೆಗೆ ಬೆಂಬಲ ದೊರೆಯದಿದ್ದುದನ್ನು ಪ್ರತಿಭಟಿಸಿ ತಮ ಕಾನೂನು ಮಂತ್ರಿ ಹುದ್ದೆಗೆ ರಾಜೀನಾಮೆ ನೀಡುವ ಮೂಲಕ ತಮ್ಮ ಪ್ರತಿಭಟನೆಯನ್ನು ಸೂಚಿಸಿದರು. ಅಂಬೇಡ್ಕರ್ 1951ರಲ್ಲಿ ಬಾಂಬೆಯ ಉತ್ತರ ಕ್ಷೇತ್ರದಿಂದ ಮತ್ತು 1954ರಲ್ಲಿ ಬಾಂದ್ರಾ ಕ್ಷೇತ್ರದಿಂದ ಲೋಕಸಭೆಗೆ ಸ್ಪರ್ಧಿಸಿ ಎರಡು ಬಾರಿಯೂ ಸಹ ಸೋಲನ್ನು ಅನುಭವಿಸಿದ ಇವರು ದಲಿತ ಸಮಾಜದ ಸುಧಾರಣೆ ಹಿಂದೂ ಧರ್ಮದ ಅಡಿಯಲ್ಲಿ ಸಾಧ್ಯವಿಲ್ಲವೆಂಬುದನ್ನು ಮನಗಂಡು 1956 ಅಕ್ಟೋಬರ್ 14ರಂದು ತಮ್ಮ ಬೆಂಬಲಿಗರೊಂದಿಗೆ ನಾಗಪುರದಲ್ಲಿ ಒಂದು ಬೃಹತ್ ಸಮಾವೇಶವನ್ನು ಏರ್ಪಡಿಸುವ ಮೂಲಕ ಬೌದ್ಧ ಧರ್ಮಕ್ಕೆ ಮತಾಂತರಗೊಂಡರು. ಇವರು ತಮ್ಮ ಜೀವಿತದ ಅಂತಿಮ ಅವಧಿಯಲ್ಲಿ ಬುದ್ಧ ಮತ್ತು ಧರ್ಮ ಎಂಬ ಕೃತಿಯನ್ನು ರಚಿಸಿದರು. 1956 ರ ಡಿಸೆಂಬರ್ 6 ರಂದು ದಲಿತ ಸಮುದಾಯದ ಪರವಾಗಿ ಶೋಷಣೆಯ ವಿರುದ್ಧ ಹೋರಾಟ ನಡೆಸಿದ ಅಂಬೇಡ್ಕರ್ ಮರಣ ಹೊಂದಿದರು. ಇವರು ತಮ್ಮ ಜೀವಿತ ಅವಧಿಯಲ್ಲಿ ಆರ್ಥಿಕ, ರಾಜಕೀಯ, ಸಾಮಾಜಿಕ ಹಾಗೂ ಧಾರ್ಮಿಕ ವಿಷಯಗಳಿಗೆ ಸಂಬಂಧಿಸಿದಂತೆ ಹಲವಾರು ಪ್ರಮುಖ ಕೃತಿಗಳನ್ನು ಹಾಗೂ ಬರಹ ಭಾಷಣಗಳನ್ನು ಪ್ರಕಟಿಸಿದ್ದಾರೆ ಅವುಗಳನ್ನು ಈ ಕೆಳಕಂಡಂತೆ ಗುರುತಿಸಬಹುದಾಗಿದೆ.

ಭಾಷಣಗಳು ಮತ್ತು ಲೇಖನಗಳು

* ರಾನಡೇ, ಗಾಂಧಿ ಅಂಡ್ ಜಿನ್ನಾ
* ಆನ್ ಪಾರ್ಲಿಮೆಂಟರಿ ಡೆಮಾಕ್ರಸಿ
* ಕ್ಯಾಸ್ಟ್ ಇನ್ ಇಂಡಿಯಾ
* ಲೇಬಲ್ ಅಂಡ್‌ಪಾರ್ಲಿಮೆಂಟರಿ ಡೆಮಾಕ್ರಸಿ
* ಬುದ್ಧಿಸಂ ಅಂಡ್ ಕಮ್ಯುನಿಸಂ ಇತ್ಯಾದಿ

ಇವರು ರಚಿಸಿರುವ ಪ್ರಮುಖ ಕೃತಿಗಳು

* ಸ್ಟೇಟ್ಸ್ ಅಂಡ್ ಮೈನಾರಿಟೀಸ್
* ಹೂ ವರ್ ದಿ ಶೂದ್ರಾಸ್
* ಪಾಕಿಸ್ತಾನ್ ಆರ್ ಪಾರ್ಟಿಷಿಯನ್ ಆಫ್ ಇಂಡಿಯಾ
* ದಿ ಅನ್‌ಟಚ್‌ಬಲ್
* ವಾಟ್ ಕಾಂಗ್ರೆಸ್ ಅಂಡ್ ಗಾಂಧಿ ಹ್ಯಾವ್ ಡನ್ ಟು ದಿ ಅನ್‌ಟಚ್‌ಬಲ್ಸ್
* ದಿ ರೈಸ್ ಅಂಡ್ ಪಾಲ್ ಆಫ್ ದಿ ಹಿಂದೂ ವುಮೆನ್ ಇತ್ಯಾದಿ ಪ್ರಮುಖಕೃತಿಗಳನ್ನು ರಚಿಸಿದ್ದಾರೆ.

## ನಿಮ್ಮ ಪ್ರಗತಿ ಪರಿಶೀಲನೆ - 1

**ಸೂಚನೆ:** 1. ಈ ಕೆಳಗೆ ಬಿಟ್ಟಿರುವ ಜಾಗವನ್ನು ನಿಮ್ಮ ಉತ್ತರಕ್ಕೆ ಉಪಯೋಗಿಸಿಕೊಳ್ಳಿ.

2. ಈ ಘಟಕದ ಕೊನೆಯಲ್ಲಿ ನೀಡಿರುವ ಉತ್ತರದೊಂದಿಗೆ ನಿಮ್ಮ ಪ್ರಗತಿಯನ್ನು ಪರಿಶೀಲಿಸಿಕೊಳ್ಳಿ.

**1. ಅಂಬೇಡ್ಕರ್‌ರವರ ಜೀವನವನ್ನು ಕುರಿತು ಸಂಕ್ಷಿಪ್ತವಾಗಿ ವಿವರಿಸಿ?**

....................................................................................................

....................................................................................................

....................................................................................................

....................................................................................................

....................................................................................................

....................................................................................................

....................................................................................................

....................................................................................................

2. ಅಂಬೇಡ್ಕರ್‌ರವರ ಪ್ರಮುಖ ಕೃತಿಗಳು ಹಾಗೂ ಬರಹ ಭಾಷಣಗಳನ್ನು ಕುರಿತು ಚರ್ಚಿಸಿ?

.......................................................................................................................................

.......................................................................................................................................

.......................................................................................................................................

.......................................................................................................................................

.......................................................................................................................................

.......................................................................................................................................

.......................................................................................................................................

.......................................................................................................................................

## 26.3 ಸಂವಿಧಾನ ರಚನೆಯಲ್ಲಿ ಅಂಬೇಡ್ಕರ್‌ರವರ ಪಾತ್ರ

ಭಾರತ ಸಂವಿಧಾನ ರಚನೆಯಲ್ಲಿ ಅಂಬೇಡ್ಕರ್‌ರವರ ಪಾತ್ರ ಬಹುಮುಖ್ಯವಾಗಿದ್ದಿತ್ತು. ಆ ಕಾರಣದಿಂದಲೇ ಅಂಬೇಡ್ಕರ್ ಅವರನ್ನು ಭಾರತ ಸಂವಿಧಾನದ ಶಿಲ್ಪಿ ಅಥವಾ ನಿರ್ಮಾಪಕ ಎಂದು ಕರೆಯಲಾಗುತ್ತದೆ. ಸ್ವಾತಂತ್ರ್ಯಾನಂತರ ಭಾರತದಲ್ಲಿ ಸಂವಿಧಾನ ರಚನೆಗೆ ಸಂಬಂಧಿಸಿದಂತೆ ನಡೆದ ಚರ್ಚೆಗಳ ಸಂದರ್ಭದಲ್ಲಿ ಭಾರತಕ್ಕೆ ಸಂವಿಧಾನವನ್ನು ವಿದೇಶಿ ಪರಿಣಿತರ ನೆರವಿನಲ್ಲಿ ರಚಿಸಬೇಕೆಂಬ ಚರ್ಚೆ ಪ್ರಬಲವಾಗಿ ಈ ವಿಷಯಕ್ಕೆ ಸಂಬಂಧಿಸಿದಂತೆ ಇಂಗ್ಲೆಂಡಿನಲ್ಲಿ ಸಂವಿಧಾನ ತಜ್ಞರಾಗಿದ್ದ ಐವರ್ ಜನ್ನಿಂಗ್ಸ್‌ರವರನ್ನು ಸ್ವತಂತ್ರ ಭಾರತಕ್ಕೆ ಸಂವಿಧಾನವನ್ನು ರಚಿಸಿಕೊಡುವಂತೆ ಸಹಾಯ ಕೋರಲಾಯಿತು. ಆ ಸಂದರ್ಭದಲ್ಲಿ ಜನ್ನಿಂಗ್ಸ್‌ರವರು ನಮ್ಮಲ್ಲಿಯೇ ಇರುವ ಡಾ. ಬಿ.ಆರ್. ಅಂಬೇಡ್ಕರ್ ರವರ ಹೆಸರನ್ನು ಸೂಚಿಸಿ ಅವರ ನೆರವಿನಿಂದ ಸಂವಿಧಾನವನ್ನು ರಚಿಸುವ ಸಲಹೆಯನ್ನು ನೀಡಿದರು. ಅಂಬೇಡ್ಕರ್ ಭಾರತ ಸಂವಿಧಾನ ಕರಡು ಸಮಿತಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು. ಇವರು ಭಾರತ ಸಂವಿಧಾನ ರಚನೆಯಲ್ಲಿ 1919ರ ಮಾಂಟೆಗೋ ಚಲ್ಸ್‌ಫರ್ಡ್ ಸುಧಾರಣೆಗಳಿಂದ 1946ರ ಕ್ಯಾಬಿನೆಟ್ ಮಿಷನ್‌ವರೆಗೆ ಅಂಬೇಡ್ಕರ್‌ರವರ ಸಂವಿಧಾನ ರಂಚನೆಗೆ ಸಂಬಂಧಿಸಿದಂತೆ ಹೆಚ್ಚು ಶ್ರಮ ವಹಿಸಿದರು. ಅಂಬೇಡ್ಕರ್ ರವರು ಮಾಂಟೆಗೋ ಚಲ್ಸ್‌ಫರ್ಡ್ ವರದಿಯ ಮುಂದೆ ಪ್ರತ್ಯೇಕ ಮತದಾನವನ್ನು ದಲಿತ ಸಮುದಾಯಕ್ಕೆ ಜನಸಂಖ್ಯಾ ಪ್ರತಿನಿಧಿತ್ವಕ್ಕನುಗುಣವಾಗಿ ನೀಡಬೇಕೆಂದು ಹೋರಾಟ ನಡೆಸಿದರು. ಅಂಬೇಡ್ಕರ್ ಸೈಮನ್ ಕಮಿಷನ್ ಮತ್ತು ದುಂಡು ಮೇಜಿನ ಸಭೆಗಳಲ್ಲಿ ಪ್ರಧಾನ ಪಾತ್ರವನ್ನು ನಿರ್ವಹಿಸಿದರು.

ಅಂಬೇಡ್ಕರ್‌ರವರು ಸಂವಿಧಾನ ರಚನೆಯ ಸಂದರ್ಭದಲ್ಲಿ ದೇಶದಲ್ಲಿ ಸ್ಥಿರತೆ ಹಾಗೂ ಏಕತೆಯನ್ನು ಕಾಪಾಡುವ ದೃಷ್ಟಿಯಿಂದ ಒಕ್ಕೂಟ ಸರ್ಕಾರ ವ್ಯವಸ್ಥೆಯಲ್ಲಿ ಎರಡು ಸರ್ಕಾರಗಳಿಗೆ ಅಧಿಕಾರ ನೀಡಿದರೆ ಬಹು ವೈವಿಧ್ಯತೆ ಹೊಂದಿರುವ ಭಾರತ ದೇಶದ ಏಕತೆಗೆ ಧಕ್ಕೆ ಬಂದೊದಗುವ ಸಾಧ್ಯತೆ ಹೆಚ್ಚು ಎಂಬುದನ್ನು ಮನಗಂಡ ಅಂಬೇಡ್ಕರ್ ಬಲಿಷ್ಠ ಕೇಂದ್ರ ಸರ್ಕಾರದ ರಚನೆಗೆ ಸಂವಿಧಾನ ರಚನೆಯ ಸಂದರ್ಭದಲ್ಲಿ ಹೆಚ್ಚು ಪ್ರಾಮುಖ್ಯತೆಯನ್ನು ನೀಡಿದ್ದಾರೆ. ಈ ಕಾರಣಕ್ಕಾಗಿಯೇ ಏಕ ನ್ಯಾಯಾಂಗ, ಏಕರೂಪದ ಕಾನೂನು, ಅಖಿಲ ಭಾರತ ನಾಗರಿಕ ಸೇವೆಗಳನ್ನು ಸೃಷ್ಟಿಸುವುದರೊಂದಿಗೆ ಪ್ರಬಲ ಕೇಂದ್ರ ಸರ್ಕಾರವನ್ನು ರೂಪಿಸಿದ್ದಾರೆ. ಇದಕ್ಕೆ ಪೂರಕವಾಗಿಯೇ ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಪ್ರಾಬಲ್ಯತೆಯನ್ನು ಮತ್ತಷ್ಟು ಹೆಚ್ಚಿಸುವ ಮೂಲಕ ಪ್ರಬಲ ಕೇಂದ್ರ ಸರ್ಕಾರದ ರಚನೆಯನ್ನು ಮಾಡಿದ್ದಾರೆ.

ಅಂಬೇಡ್ಕರ್ ಸಂವಿಧಾನ ರಚನೆಯ ಸಂದರ್ಭದಲ್ಲಿ ಸಾಮಾಜಿಕ ನ್ಯಾಯಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುವ ದೃಷ್ಟಿಯಿಂದ ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ಕಾಪಾಡುವ ದೃಷ್ಟಿಯಿಂದ ಮೂಲಭೂತ ಹಕ್ಕುಗಳ ಪಟ್ಟಿಯಲ್ಲಿ ಪ್ರತಿಯೊಂದು ವಿಷಯಕ್ಕೆ

ಸಂಬಂಧಿಸಿದಂತೆ ಎಲ್ಲಾ ರೀತಿಯ ಸಂವಿಧಾನಾತ್ಮಕ ರಕ್ಷಣಾ ಕ್ರಮಗಳನ್ನು ಅಳವಡಿಸಿದರು. ಅಂಬೇಡ್ಕರ್‌ರವರು ಸಂಸದೀಯ ಸರ್ಕಾರ ಪದ್ಧತಿಯನ್ನು ಬೆಂಬಲಿಸಿದ ಇವರು ಸರ್ಕಾರ ಸಾರ್ವತ್ರಿಕ ಮತದಾನ ಪದ್ಧತಿಯ ಮೂಲಕ ಚುನಾಯಿತಗೊಂಡ ಪ್ರತಿನಿಧಿಗಳನ್ನೊಳಗೊಂಡಿರಬೇಕು, ಚುನಾವಣೆಯು ಮುಕ್ತ ಹಾಗೂ ಸ್ವಾತಂತ್ರ್ಯವಾಗಿ ನಡೆಯುವುದರ ಜೊತೆಗೆ ಜನತೆಗೆ ಬಹು ಆಯ್ಕೆಗೆ ಅವಕಾಶವಿರಬೇಕೆಂಬ ದೃಷ್ಟಿಯಿಂದ ಭಾರತ ಸಂವಿಧಾನದಲ್ಲಿ ಬಹುಪಕ್ಷ ಪದ್ಧತಿಯನ್ನು ಅಳವಡಿಸಿದನು.

ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ ಯಾವುದೇ ರೀತಿಯ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯವಾಗಿ ದಬ್ಬಾಳಿಕೆ ಇರಬಾರದು ಒಂದು ವೇಳೆ ಬಲಿಷ್ಠರಿಂದ ದಬ್ಬಾಳಿಕೆ ನಿರಂತರವಾಗಿ ಮುಂದುವರೆದರೆ ಪ್ರಜಾಪ್ರಭುತ್ವ ಯಶಸ್ವಿಯಾಗಲು ಸಾಧ್ಯವಿಲ್ಲ ಎಂದಿರುವ ಅಂಬೇಡ್ಕರ್ ಅಲ್ಪಸಂಖ್ಯಾತರು ಹಾಗೂ ದಲಿತರ ರಕ್ಷಣೆಗಾಗಿ ಮೂಲಭೂತ ಹಕ್ಕುಗಳ ಅಡಿಯಲ್ಲಿ ದುರ್ಬಲರನ್ನು ರಕ್ಷಣೆ ಮಾಡುವ ಪ್ರಯತ್ನ ನಡೆಸಿದರು. ಇವರು ದಲಿತರು ಆರ್ಥಿಕವಾಗಿ ರಾಜಕೀಯವಾಗಿ ಹಾಗೂ ಸಾಮಾಜಿಕವಾಗಿ ಹಿಂದುಳಿದವರು ಮೇಲ್ವರ್ಗದ ಜನರೊಂದಿಗೆ ಸ್ಪರ್ಧಿಸಲು ಸಾಧ್ಯವಿಲ್ಲ ಎಂಬ ಉದ್ದೇಶದಿಂದ ದಲಿತ ಸಮುದಾಯಕ್ಕೆ ಮೀಸಲಾತಿ ನೀಡಬೇಕೆಂಬ ಒತ್ತಾಯವನ್ನು ಸಂವಿಧಾನ ರಚನಾ ಸಭೆಯಲ್ಲಿ ಒತ್ತಾಯ ತರುವ ಮೂಲಕ ಮೀಸಲಾತಿ ಸೌಲಭ್ಯವನ್ನು ದೊರಕಿಸುವಲ್ಲಿ ಯಶಸ್ವಿಯಾದರು. ಸಂವಿಧಾನ ಕರಡು ಸಮಿತಿಯ ಅಧ್ಯಕ್ಷರಾಗಿದ್ದ ಅಂಬೇಡ್ಕರ್‌ರವರ ಮೇಲೆ ಸಂವಿಧಾನ ರಚನೆಯ ಹೆಚ್ಚಿನ ಹೊಣೆ ಇದ್ದಿತು. ಕಾರಣ ಸಂವಿಧಾನ ರಚನಾ ಸಭೆ ರಚಿಸಿದ್ದಂತ ಅನೇಕ ಸಮಿತಿಗಳು ಮತ್ತು ಉಪಸಮಿತಿಗಳು ನೀಡಿದ ಸಲಹೆ ಸೂಚನೆಗಳನ್ನೊಳಗೊಂಡ ವರದಿಗಳನ್ನು ಸಂವಿಧಾನ ರಚನಾ ಸಭೆಯ ಮುಂದೆ ಮಂಡಿಸಿ ಅಲ್ಲಿನ ಸಲಹೆ ಸೂಚನೆಗಳನ್ನಾಧರಿಸಿ ಸಂವಿಧಾನವನ್ನು ರಚಿಸುವಲ್ಲಿ ಅಂಬೇಡ್ಕರ್ ವಹಿಸಿದ ಶ್ರಮದಿಂದಾಗಿಯೇ ಅವರನ್ನು ಭಾರತದ ಸಂವಿಧಾನ ಶಿಲ್ಪಿ ಎಂದು ಕರೆಯಲಾಗಿದೆ.

ಅಂಬೇಡ್ಕರ್ ಪಾರ್ಲಿಮೆಂಟರಿ ಪ್ರಜಾಪ್ರಭುತ್ವವನ್ನು ಸಮರ್ಥಿಸುತ್ತಾರೆ ಇದಕ್ಕೆ ಅವರು ನೀಡುವ ಸಮರ್ಥತೆಯೆಂದರೆ ಈ ವ್ಯವಸ್ಥೆಯು ಅನುವಂಶೀಯ ಆಡಳಿತಕ್ಕೆ ಅವಕಾಶ ನೀಡದಿಲ್ಲದಿರುವುದರ ಜೊತೆಗೆ ರಾಷ್ಟ್ರಕ್ಕೆ ಸಂಬಂಧಿಸಿದ ಯಾವುದೇ ಒಂದು ಕಾನೂನಿನ ರಚನೆಯೂ ಸಹ ಜನತೆಯಿಂದ ಆಯ್ಕೆಗೊಂಡ ಚುನಾಯಿತ ಪ್ರತಿನಿಧಿಗಳೂ ಕಾಲಕಾಲಕ್ಕೆ ಜನತೆಯ ವಿಶ್ವಾಸವನ್ನು ಪಡೆದಾಗ ಮಾತ್ರ ಅವರ ಪ್ರತಿನಿಧಿತ್ವ ಮುಂದುವರಿಯಲು ಸಾಧ್ಯವಿರುವುದರಿಂದ ಇಲ್ಲಿ ಆಡಳಿತ ನಿರ್ಮಾಣ ಕಾರ್ಯ ಅಂತಿಮವಾಗಿ ಜನತೆಯಲ್ಲಿ ಕೇಂದ್ರೀಕೃತವಾಗಿರುವುದರಿಂದ ಅಂಬೇಡ್ಕರ್ ಸಂವಿಧಾನ ರಚನೆಯ ಸಂದರ್ಭದಲ್ಲಿ ಸಂಸದೀಯ ಪ್ರಜಾಪ್ರಭುತ್ವವನ್ನು ಸಮರ್ಥಿಸಿದ್ದಾರೆ.

ಅಂಬೇಡ್ಕರ್ ಅವರು ತಿಳಿಸಿರುವಂತೆ ಪ್ರಜಾಪ್ರಭುತ್ವದ ಯಶಸ್ವಿಯು ಪ್ರಜೆಗಳ ಮೇಲೆ ನಿರ್ಧಾರಿತವಾಗುತ್ತದೆ ಎಂದಿರುವ ಇವರು ಪ್ರಜಾಪ್ರಭುತ್ವ ವೈಫಲ್ಯವು ಕೆಟ್ಟ ಸಿದ್ಧಾಂತಕ್ಕಿಂತ ಕೆಟ್ಟ ಸಂಘಟನೆಗಳಿಂದಲೇ ವೈಪಲ್ಯ ಹೊಂದುತ್ತದೆ ಎಂದಿದ್ದು ಆ ಕಾರಣಕ್ಕಾಗಿಯೇ ಸಂವಿಧಾನ ರಚನೆಯ ಸಂದರ್ಭದಲ್ಲಿ ಪ್ರಜಾಪ್ರಭುತ್ವ ತತ್ವಕ್ಕೆ ವಿರುದ್ಧವಿರುವ ಸಂಘಟನೆಗಳನ್ನು ನಿಯಂತ್ರಿಸಬೇಕೆಂಬ ಸಲಹೆಯನ್ನು ನೀಡಿದ್ದಾರೆ. ಮುಂದುವರೆದು ಅಂಬೇಡ್ಕರ್‌ರವರು ಕೃಷಿ ಮತ್ತು ಕೈಗಾರಿಕಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ 1947 ರಲ್ಲಿ ಸಂವಿಧಾನ ರಚನಾ ಸಭೆಗೆ ಅರ್ಪಿಸಿದ ಮನವಿಯಲ್ಲಿ ರಾಷ್ಟ್ರದ ಪ್ರಮುಖ ಕೈಗಾರಿಕೆಗಳು ಸರ್ಕಾರದ ಒಡೆತನದಲ್ಲಿರಬೇಕು. ಇದರ ಜೊತೆಗೆ ಮೂಲಭೂತ ಕೈಗಾರಿಕೆಗಳೂ ಸಹ ಸರ್ಕಾರದ ಒಡೆತನದಲ್ಲಿದ್ದು ಸರ್ಕಾರದಿಂದ ನೇಮಕವಾಗ ನಿಗಮಗಳಿಂದ ನಡೆಸಲ್ಪಡಬೇಕು, ಕೃಷಿಯೂ ಸಪ ಪ್ರಭುತ್ವದ ಹಿಡಿತಕ್ಕೆ ಒಳಪಡಬೇಕು ಕೈಗಾರಿಕೆ ಹಾಗೂ ಜಮೀನಿನ ಮಾಲೀಕನಿಗೆ ಅವುಗಳ ಮೌಲ್ಯಕ್ಕೆ ತಕ್ಕಂತೆ ಸರ್ಕಾರವು ಪರಿಹಾರವನ್ನು ನೀಡಬೇಕೆಂಬ ಸಲಹೆಯನ್ನು ನೀಡಿದ ಇವರು ಕೃಷಿಯನ್ನು ಸಾಮೂಹಿಕ ಕೃಷಿಯನ್ನಾಗಿ ಪರಿವರ್ತಿಸಿ ನೀಡಬೇಕು. ಇದರಿಂದ ಸಮಾಜದಲ್ಲಿ ಆರ್ಥಿಕ ಸಮಾನತೆಯನ್ನು ಸಾಧಿಸಬಹುದೆಂಬ ಅಭಿಪ್ರಾಯವನ್ನು ಸಂವಿಧಾನ ರಚನಾ ಸಭೆಯ ಮುಂದೆ ಮಂಡಿಸಿದರು. ಆದರೆ ಚರ್ಚೆಯ ನಂತರ ಭಾರತ ಆರ್ಥಿಕ ವ್ಯವಸ್ಥೆಯನ್ನು ಒಂದು ಮಿಶ್ರ ಆರ್ಥಿಕ ವ್ಯವಸ್ಥೆಯನ್ನಾಗಿ ರೂಪಿಸುವ ನಿರ್ಧಾರವನ್ನು ಕೈಗೊಳ್ಳಲಾಯಿತು.

ಮೂಲತಃ ಕಾನೂನು ತಜ್ಞರಾಗಿದ್ದ ಅಂಬೇಡ್ಕರ್‌ರವರು ಸಂವಿಧಾನ ರಚನೆಯ ಸಂದರ್ಭದಲ್ಲಿ ಕಾನೂನಿನ ಸಾರ್ವಭೌಮತ್ವಕ್ಕೆ

ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿದ ಇವರು ಆ ಕಾರಣಕ್ಕಾಗಿಯೇ ಸ್ವತಂತ್ರ ನ್ಯಾಯಾಂಗ ವ್ಯವಸ್ಥೆಯನ್ನು ರೂಪಿಸುವಲ್ಲಿ ಯಶಸ್ವಿಯಾದರು. ಮುಂದುವರೆದು ಇವರು ಕಾನೂನಿನ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ ಕಾನೂನು ರಹಿತವಾದ ರಾಜ್ಯ ಅಥವಾ ಸಮಾಜದಲ್ಲಿ ಬಲಿಷ್ಟರ ಹಾಗೂ ಬಹುಸಂಖ್ಯಾತರ ದಬ್ಬಾಳಿಕೆಯು ದುರ್ಬಲರು ಹಾಗೂ ಅಲ್ಪಸಂಖ್ಯಾತರ ಮೇಲೆ ಮುಂದುವರೆಯುವ ಸಾಧ್ಯತೆಯೇ ಹೆಚ್ಚಾಗಿರುತ್ತದೆ. ಆದ್ದರಿಂದ ಈ ದಬ್ಬಾಳಿಕೆ ಅಥವಾ ಶೋಷಣೆಯನ್ನು ನಿಯಂತ್ರಿಸುವಂತಹ ಪ್ರಬಲವಾದ ಕಾನೂನು ವ್ಯವಸ್ಥೆಯ ಅಗತ್ಯತೆ ತೀರಾ ಅನಿವಾರ್ಯವೆಂದಿರುವ ಅಂಬೇಡ್ಕರ್ ಶೋಷಣೆಗೆ ವಿರುದ್ಧವಾದಂತಹ ಅಥವ ಶೋಷಣೆಯನ್ನು ಪ್ರತಿಟಿಸುವಂತಹ ಸಂವಿಧಾನ ರಚಿಸುವಲ್ಲಿ ಯಶಸ್ವಿಯಾದರು. ಇದಕ್ಕೆ ಸಂಬಂಧಿಸಿದಂತೆ ಅಂಬೇಡ್ಕರ್ ರವರು ಭಾರತ ಸಂವಿಧಾನದಲ್ಲಿ ಅಳವಡಿಸಿರುವ ಮೂಲಭೂತ ಹಕ್ಕುಗಳ ಪಟ್ಟಿಗೆ ಸಂಬಂಧಿಸಿದಂತೆ ತಮ್ಮ ನಿಲುವನ್ನು ವ್ಯಕ್ತಪಡಿಸುತ್ತಾ ಇಲ್ಲಿ ಪ್ರತಿಯೊಬ್ಬ ಸಾಮಾನ್ಯ ಪ್ರಜೆಯ ಸ್ವಾತಂತ್ರ್ಯ ಸಮಾನತೆಗಳನ್ನು ರಕ್ಷಿಸುವ ಪ್ರಯತ್ನವನ್ನು ನಡೆಸಲಾಗಿದೆ ಒಂದು ವೇಳೆ ಇವುಗಳನ್ನು ಪಡೆಯುವಲ್ಲಿ ವಿಫಲವಾದರೆ ಅದನ್ನು ಪಡೆಯುವ ಉದ್ದೇಶದಿಂದಾಗಿಯೇ ಸಂವಿಧಾನದಲ್ಲಿ ಸಂವಿಧಾನಾತ್ಮಕ ಪರಿಹಾರ ಹಕ್ಕನ್ನು ಒದಗಿಸಲಾಗಿದ್ದು ಇದರ ಅಡಿಯಲ್ಲಿ ಯಾವುದೇ ಒಬ್ಬ ಪ್ರಜೆಯೂ ಸಹ ತನಗೆ, ಸಂವಿದಾನಾತ್ಮಕವಾಗಿ ಒದಗಿದ ಅನ್ಯಾಯದ ಹೋರಾಡಿ ನ್ಯಾಯವನ್ನು ಪಡೆಯಬಹುದಾಗಿದೆ ಎಂದಿದ್ದು ಈ ಹಕ್ಕನ್ನು ಇಡೀ ಸಂವಿಧಾನದಲ್ಲಿಯೇ ನನ್ನ ಪ್ರಕಾರ ಹೆಚ್ಚು ಪ್ರಮುಖವಾದ ಒಂದು ಭಾಗ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾನೆ.

ಅಂಬೇಡ್ಕರ್ ಭಾರತ ಸಂವಿದಾನ ರಚನೆಗೆ ಸಂಬಂಧಿಸಿದಂತೆ ಅಪಾರವಾದ ಶ್ರಮವನ್ನು ವಹಿಸಿದ್ದರೂ ಸಹ ಸಂವಿಧಾನ ರಚನೆಗೆ ಸಂಬಂಧಿಸಿದಂತೆ ಅವರ ವೈಯಕ್ತಿಕ ಅಭಿಪ್ರಾಯವನ್ನು ಕೇಳಿದಾಗ ಈಗ ರಚನೆಗೊಂಡಿರುವ ಸಂವಿಧಾನದ ಬಗ್ಗೆ ನನಗೆ ಸಂಪೂರ್ಣವಾದ ಸಂತೃಪ್ತಿಯಲ್ಲಿ ಕಾರಣ ಈ ಸಂವಿಧಾನದಲ್ಲಿ ಇರುವ ಎಲ್ಲಾ ಅಂಶಗಳು ನನ್ನ ನಿಲುವಿಗೆ ಬದ್ಧವಾಗಿ ಅಳವಡಿಸಿಲ್ಲ ಅದಕ್ಕೆ ಬದಲಾಗಿ ಸಂವಿಧಾನ ರಚನಾ ಸಭೆಯಲ್ಲಿನ ಸಮಿತಿಗಳು ಹಾಗೂ ಉಪಸಮಿತಿಗಳು ಕೈಗೊಂಡ ನಿರ್ದಾರಗಳ ಆಧಾರದ ಮೇಲೆ ಇದರ ರಚನೆಯಾಗಿದೆ ಎಂದಿರುವ ಅಂಬೇಡ್ಕರ್ ಸಂವಿಧಾನ ರಚನಾ ಕಾರ್ಯದಲ್ಲಿ ನಾನು ಕರಡು ಸಮಿತಿಯ ಅಧ್ಯಕ್ಷನಾಗಿದ್ದರೂ ಸಹ ನಾನು ಈ ಕಾರ್ಯದಲ್ಲಿ ಒಂದು ಬಾಡಿಗೆಯ ಕುದುರೆಯಂತೆ ಕಾರ್ಯನಿರ್ವಹಿಸಿದ್ದೇನೆ. ಅಂದರೆ ನಾನೊಂದು ಬಾಡಿಗೆ ಕುದುರೆಯಾಗಿದ್ದು ಬೇರೆಯವರು ಕುದುರೆಯನ್ನು ಓಡಿಸಿದಂತೆ ನಾನು ಈ ಕಾರ್ಯದಲ್ಲಿ ಓಡಿದ್ದೇನೆ ಎಂದಿದ್ದಾರೆ. ಅಂದರೆ ಅಂಬೇಡ್ಕರ್ ಅವರ ಸ್ಪಷ್ಟ ಅಭಿಪ್ರಾಯವೆಂದರೆ ಸಂವಿಧಾನ ರಚನೆಯು ಸಂಪೂರ್ಣವಾಗಿ ನನ್ನ ಅಭಿಮತಕ್ಕೆ ಪೂರಕವಾಗಿ ರಚನೆಯಾಗಿರದೆ ಸಂವಿಧಾನ ರಚನಾ ಸಬೆಯಲ್ಲಿ ನಡೆದ ಚರ್ಚೆಗಳ ಪ್ರತಿಫಲವಾಗಿದೆ ಎಂದಿದ್ದಾರೆ.

## 26.4 ಉಪಸಂಹಾರ

ಅಂಬೇಡ್ಕರ್‌ರವರು ಸಂವಿಧಾನಶಿಲ್ಪಿ ಮಹಾ ಮಾನವತಾವಾದಿ, ಆಧುನಿಕ ಮನು ಎಂಬೆಲ್ಲಾ ಹೆಸರುಗಳಿಂದ ಕಂಗೊಳಿಸಲು ಪ್ರಮುಖ ಕಾರಣ ಇವರು ಕೇವಲ ಒಬ್ಬ ರಾಜಕೀಯ ಚಿಂತಕರಾಗಿರದೆ ಸಾಮಾಜಿಕ ಹಾಗೂ ಆರ್ಥಿಕ ಚಿಂತಕರಾಗಿ ತಮ್ಮ ಚಿಂತನೆಗಳನ್ನು ಮಂಡಿಸಿದುದರ ಜೊತೆಗೆ ಅವುಗಳನ್ನು ಪಡೆಯುವ ಉದ್ದೇಶದಿಂದ ಸ್ವತಃ ಇವರೇ ಪ್ರಭುತ್ವಶಾಹಿಯ ವಿರುದ್ಧ ಹೋರಾಟಕ್ಕೆ ಇಳಿಯುವ ಮೂಲಕ ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸಿದರು. ಇವರು ಅತಿ ಶೂದ್ರವರ್ಗದಲ್ಲಿ ಜನಿಸಿದ ಇವರು ಬಾಲ್ಯದಿಂದಲೇ ಹಿಂದೂ ಧರ್ಮದಡಿಯಲ್ಲಿ ನಡೆಯುವ ಸಾಮಾಜಿಕ ಶೋಷಣೆಯ ಕಹಿ ಅನುಭವ ಇವರನ್ನು ಹೆಚ್ಚು ಜಾಗೃತರನ್ನಾಗಿಸಿತು ಈ ಕಾರಣದಿಂದಾಗಿಯೇ ಅಂಬೇಡ್ಕರ್ ಅವರು ಇಡೀ ದಲಿತ ಸಮುದಾಯವನ್ನು ಸಂಘಟಿಸಿ ಹೋರಾಟವನ್ನು ನಡೆಸುವ ಪ್ರಯತ್ನವನ್ನು ಕೈಗೊಂಡರೂ ಇವರು ಮೊದಲು ಸಾಮಾಜಿಕ ಸಮಾನತೆಯನ್ನು ಪಡೆಯುವ ಉದ್ದೇಶದಿಂದ ಸಾಮಾಜಿಕವಾದಂತಹ ಶೋಷಣೆಯ ವಿರುದ್ಧ ತಮ್ಮ ಹೋರಾಟವನ್ನು ಕೈಗೊಂಡರು ಈ ಹಿನ್ನೆಲೆಯಲ್ಲಿಯೇ ಇವರು ಸಾರ್ವಜನಿಕರ ಕೆರೆ ನೀರಿಗಾಗಿ, ಸತ್ಯಾಗ್ರಹ, ಕಳಾರಮ್ಮ ದೇವಾಲಯ ಪ್ರವೇಶದಂತಹ

ಹೋರಾಟವನ್ನು ಆಯೋಜಿಸಿದರು. ಆದರೆ ಅವುಗಳಲ್ಲಿ ಅಂಬೇಡ್ಕರ್ ಯಶಸ್ವಿಯಾಗದಿದ್ದರ ಪ್ರತಿಫಲವಾಗಿ ಅವರೇ ಹೇಳುವಂತೆ ಈ ಸಮಾಜದಲ್ಲಿ ಪರಿವರ್ತನೆ ಅಸಾಧ್ಯವೆಂದು ತಿಳಿದ ಇವರು ಸಾಮಾಜಿಕ ಸಮಾನತೆಗೆ ಬದಲಾಗಿ ಆರ್ಥಿಕ ಸಮಾನತೆಯನ್ನು ಪಡೆಯುವ ಪ್ರಯತ್ನವನ್ನು ನಡೆಸಿದರು. ಆರ್ಥಿಕ ಸಮಾನತೆಯನ್ನು ಪಡೆಯಬೇಕಾದಲ್ಲಿ ಮೊದಲು ರಾಜಕೀಯ ಅಧಿಕಾರಬೇಕೆಂದು ಮನಗಂಡ ಇವರು ದುಂಡು ಮೇಜಿನ ಸಭೆಗಳಲ್ಲಿ ದಲಿತರ ಪ್ರತಿನಿಧಿಯಾಗಿ ಬಾಗವಹಿಸಿ ದಲಿತರಿಗೆ ಜನಸಂಖ್ಯಾಧಾರಿತ ಪ್ರತ್ಯೇಕ ಮತದಾನವನ್ನು ನೀಡಬೇಕೆಂದು ಪ್ರತಿಪಾದಿಸಿದರು.

ಅಂಬೇಡ್ಕರ್ ತಮ್ಮ ಹೋರಾಟದ ಸಮಯದಲ್ಲಿ ದಲಿತವರ್ಗದ ಸಂಘಟನೆಗಾಗಿ ಹಾಗೂ ಅವರಲ್ಲಿ ಜಾಗೃತಿಯನ್ನು ಮೂಡಿಸುವ ದೃಷ್ಟಿಯಿಂದ ಲೋಕನಾಯಕ, ಬಿಹಶೃತ ಭಾರತ ಎಂಬ ಪತ್ರಿಕೆಗಳನ್ನು ಪ್ರಾರಂಭಿಸಿದರಲ್ಲದೆ ಬಹಿಷ್ಕೃತ ಹಿತಕಾರಣಿ ಸಭಾ ಎಂಬ ಸಂಘಟನೆಯನ್ನು ಸ್ಥಾಪಿಸುವ ಮೂಲಕ ದಲಿತ ವರ್ಗದ ಸಂಘಟನೆಗೆ ಶ್ರಮಿಸಿದ ಇವರು ನಂತರದಲ್ಲಿ ಇಂಡಿಪೆಂಡೆಂಟ್ ಲೇಬರ್ ಪಾರ್ಟಿ ಎಂಬ ರಾಜಕೀಯ ಪಕ್ಷವನ್ನು ಸಹ ಸ್ಥಾಪಿಸಿದರು. ಸಂವಿದಾನದ ಕರಡು ಸಮಿತಿಯ ಅಧ್ಯಕ್ಷರಾಗಿ ಸಂವಿಧಾನ ರಚನೆಯಲ್ಲಿ ನಿರ್ಣಾಯಕ ಪಾತ್ರವನ್ನು ನಿರ್ವಹಿಸಿದವರು. ಒಟ್ಟಿನಲ್ಲಿ ಅಂಬೇಡ್ಕರ್‌ರವರು ಮಹಾ ಮಾನವತಾವಾದಿಯಾಗಿ ಸ್ವಾತಂತ್ರ್ಯ ಹಾಗೂ ಸಮಾನತೆಯ ಹರಿಕಾರನಾಗಿ ಹೋರಾಟ ನಡೆಸುವ ಮೂಲಕ ಭಾರತದ ರಾಜಕೀಯ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿ ಹಲವಾರು ರೀತಿಯ ಬದಲಾವಣೆಗಳನ್ನು ತರುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ಹೇಳಬಹುದಾಗಿದೆ.

## ನಿಮ್ಮ ಪ್ರಗತಿ ಪರಿಶೀಲನೆ - 2

**ಸೂಚನೆ:** 1. ಈ ಕೆಳಗೆ ಬಿಟ್ಟಿರುವ ಜಾಗವನ್ನು ನಿಮ್ಮ ಉತ್ತರಕ್ಕೆ ಉಪಯೋಗಿಸಿಕೊಳ್ಳಿ.

2. ಈ ಘಟಕದ ಕೊನೆಯಲ್ಲಿ ನೀಡಿರುವ ಉತ್ತರದೊಂದಿಗೆ ನಿಮ್ಮ ಪ್ರಗತಿಯನ್ನು ಪರಿಶೀಲಿಸಿಕೊಳ್ಳಿ.

**1. ಸಂವಿಧಾನ ರಚನೆಯಲ್ಲಿ ಅಂಬೇಡ್ಕರ್‌ರವರ ಪಾತ್ರವನ್ನು ಕುರಿತು ಚರ್ಚಿಸಿ?**

........................................................................................................................................
........................................................................................................................................
........................................................................................................................................
........................................................................................................................................
........................................................................................................................................
........................................................................................................................................
........................................................................................................................................
........................................................................................................................................

**2. ಸಂವಿಧಾನ ರಚನೆಯಲ್ಲಿ ಅಂಬೇಡ್ಕರ್ ಸಮಾನತೆಗೆ ನೀಡಿರುವ ಪ್ರಾಮುಖ್ಯತೆಯನ್ನು ವಿಶ್ಲೇಷಿಸಿ?**

........................................................................................................................................
........................................................................................................................................
........................................................................................................................................
........................................................................................................................................
........................................................................................................................................
........................................................................................................................................
........................................................................................................................................

## 26.5 ಮುಖ್ಯ ಪದಗಳು

ಅಸ್ಪೃಷ್ಯರು - ಮುಟ್ಟಲು ಅರ್ಹರಲ್ಲದವರು

ಶೋಷಿತರು - ಶೋಷಣೆಗೆ ಒಳಗಾದವರು

ಸಂವಿಧಾನ ಶಿಲ್ಪಿ - ಸಂವಿಧಾನ ರಚನಾಕಾರ

ಕಾನೂನು ತಜ್ಞ - ಕಾನೂನಿನ ಬಗ್ಗೆ ಆಳವಾದ ಪರಿಣಿತಿ ಹೊಂದಿರುವವ

ಎಂ.ಎಸ್.ಸಿ - ಮಾಸ್ಟರ್ ಆಫ್ ಸೈನ್ಸ್

ಡಿ.ಎಸ್.ಸಿ - ಡಾಕ್ಟರ್ ಆಫ್ ಸೈನ್ಸ್

ಕರಡು ಸಮಿತಿ - ಸಂವಿಧಾನ ರಚನೆಯ ಸಂದರ್ಭದಲ್ಲಿ ರಚಿಸಿದ ಒಂದು ಪರಿಣಿತರನ್ನೊಳಗೊಂಡ ತಂಡ

## 26.6 ಕೆಲವು ಉಪಯುಕ್ತ ಗ್ರಂಥಗಳು

ವೆಲೀರಿಯಟ್ ರೊಡ್ರಿಗಸ್ - ಎಸೆನ್ಷಿಯಲ್ ರೈಟಿಂಗ್ಸ್ ಆಫ್ ಡಾ. ಬಿ.ಆರ್. ಅಂಬೇಡ್ಕರ್

ಧನಂಜಯ ಕೀರ್ - ಡಾ. ಅಂಬೇಡ್ಕರ್ ಲೈಫ್ ಅಂಡ್ ಮಿಸನ್

ಎಲೆನಾರ್ ಜಿಲೆಟ್ - ಡಾ. ಅಂಬೇಡ್ಕರ್ ಅಂಡ್ ಮಹಾರ್ ಮೂಮೆಂಟ್

ಡಬ್ಲ್ಯೂ. ಎನ್. ಕುಬೇರ್ - ಕ್ರಿಟಿಕಲ್ ಸ್ಟಡಿ ಆಫ್ ಸೋಷಿಯಲ್ ಅಂಡ್ ಪೊಲಿಟಿಕಲ್ ಥಾಟ್ಸ್ ಆಫ್ ಅಂಬೇಡ್ಕರ್

ಡಾ. ಅಂಬೇಡ್ಕರ್ - ವಾಟ್ ಕಾಂಗ್ರೆಸ್ ಅಂಡ್ ಗಾಂಧಿ ಹ್ಯಾವ್ ಡನ್ ಟುದಿ ಅನ್‌ಟಚಬಲ್ಸ್

ಎ.ಎಮ್. ರಾಜಶೇಖರಯ್ಯ - ಬಿ.ಆರ್. ಅಂಬೇಡ್ಕರ್ ಪೊಲಿಟಿಕಲ್ ಆಫ್ ಇಮ್ಯೂನಿಸಿಪೀಷನ್

ಡಾ. ಟಿ.ಡಿ. ದೇವೇಗೌಡ - ರಾಜಕೀಯ ಚಿಂತಕರು

ಡಾ. ಟಿ.ಡಿ. ದೇವೇಗೌಡ - ಭಾರತ ಸಂವಿಧಾನ

## 26.7 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು

**ನಿಮ್ಮ ಪ್ರಗತಿ ಪರಿಶೀಲನೆ -1**

1. ನೋಡಿ ಭಾಗ 26.1 ಮತ್ತು 26.2
2. ನೋಡಿ ಭಾಗ 26.2

**ನಿಮ್ಮ ಪ್ರಗತಿ ಪರಿಶೀಲನೆ -2**

1. ನೋಡಿ ಭಾಗ 25.3
2. ನೋಡಿ ಭಾಗ 25.3 ಮತ್ತು 25.4

# ಘಟಕ 27 ಅಂಬೇಡ್ಕರ್‌ರವರ ಆರ್ಥಿಕ ಮತ್ತು ರಾಜಕೀಯ ಅಂಶಗಳು ಸಾಮಾಜಿಕ ನ್ಯಾಯ ಮತ್ತು ವಿಮರ್ಶೆ

## ರಚನೆ


27.0 ಉದ್ದೇಶಗಳು

27.1 ಪೀಠಿಕೆ

27.2 ಆರ್ಥಿಕ ವಿಚಾರಗಳು

27.3 ರಾಜಕೀಯ ವಿಚಾರಗಳು

27.4 ಸಾಮಾಜಿಕ ನ್ಯಾಯ

27.5 ವಿಮರ್ಶೆ

27.6 ಉಪಸಂಹಾರ

27.7 ಮುಖ್ಯ ಪದಗಳು

27.8 ಕೆಲವು ಉಪಯುಕ್ತ ಗ್ರಂಥಗಳು

27.9 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು

## 27.0 ಉದ್ದೇಶಗಳು

ಈ ಘಟಕದ ವಸ್ತುವಿಷಯವನ್ನು ಅಧ್ಯಯನ ಮಾಡಿದ ನಂತರ ನೀವು

* ಅಂಬೇಡ್ಕರ್‌ರವರ ಆರ್ಥಿಕ ವಿಚಾರಗಳನ್ನು ಚರ್ಚಿಸಬಹುದು
* ಅಂಬೇಡ್ಕರ್‌ರವರ ರಾಜಕೀಯ ವಿಚಾರಗಳನ್ನು ವಿಶ್ಲೇಷಿಸಬಹುದು
* ಅಂಬೇಡ್ಕರ್‌ರವರ ಸಾಮಾಜಿಕ ನ್ಯಾಯ ಸಿದ್ಧಾಂತವನ್ನು ತಿಳಿಯಬಹುದು
* ಅಂಬೇಡ್ಕರ್ ಸಾಮಾಜಿಕ ನ್ಯಾಯ ಸಿದ್ಧಾಂತವನ್ನು ವಿಮರ್ಶಿಸಬಹುದು
* ಅಂಬೇಡ್ಕರ್‌ರವರ ಆರ್ಥಿಕ ಮತ್ತು ರಾಜಕೀಯ ವಿಚಾರಗಳ ಪ್ರಸ್ತುತತೆಯನ್ನು ಕುರಿತು ಚರ್ಚಿಸಬಹುದು

## 27.1 ಪೀಠಿಕೆ

ಅಂಬೇಡ್ಕರ್‌ರವರು ಒಬ್ಬ ಮಹಾನ್ ರಾಜಕೀಯ ಹಾಗೂ ಆರ್ಥಿಕ ಚಿಂತಕರಾಗಿದ್ದು ಒಬ್ಬ ಸಾಮಾಜಿಕ ಹೋರಾಟಗಾರ ಹಾಗೂ ಸಮಾಜ ಸುಧಾರಕರಾಗಿದ್ದಾರೆ. ಅಂಬೇಡ್ಕರ್‌ರವರು ಮಹಾರ್ ಎಂಬ ಅಸ್ಪೃಶ್ಯ ಸಮುದಾಯದಲ್ಲಿ ಜನಿಸಿದ ಇವರು ಸತತ ಶ್ರದ್ಧೆ ಹಾಗೂ ಪರಿಶ್ರಮದಿಂದಾಗಿ ಉತ್ತಮ ವಿದ್ಯಾವಂತರಾಗಿ ರೂಪಗೊಂಡರೂ ಅಂಬೇಡ್ಕರ್‌ರವರ ವಿದ್ಯಾಭ್ಯಾಸ ಪದವಿ ಹಂತವವರೆಗೆ ಸ್ವದೇಶದಲ್ಲಿ ನಡೆಯಿತು. ನಂತರದ ಸ್ನಾತಕೋತ್ತರ ಹಾಗೂ ಸಂಶೋಧನಾ ಅಧ್ಯಯನಗಳನ್ನು ಅಮೇರಿಕಾದ ಕೊಲಂಬಿಯಾ ವಿಶ್ವವಿದ್ಯಾನಿಲಯ ಹಾಗೂ ಇಂಗ್ಲೆಂಡಿನ ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್ ಶಾಲೆಯಲ್ಲಿ ನಡೆಸಿದರು. ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿದ ನಂತರ ಬರೋಡ ಸಂಸ್ಥಾನದಲ್ಲಿ ಬಾಂಬೆಯ ಷೇರು ವಿಕ್ರಯ ಸಂಸ್ಥೆಯಲ್ಲಿ ಬಾಂಬೆಯ ಸಿಡನ್ ಹ್ಯಾಂ ಕಾಲೇಜಿನಲ್ಲಿ ವಿವಿಧ ಹುದ್ದೆಗಳನ್ನು ನಿರ್ವಹಿಸಿದ ಇವರು ನಂತರದ ದಿನಗಳಲ್ಲಿ ಭಾರತ ಸಮಾಜದಲ್ಲಿ ಆಳವಾಗಿ ಬೇರೂರಿದ್ದ ಸಾಮಾಜಿಕ ಶೋಷಣೆಯನ್ನು ತೊಡೆದು ಹಾಕುವ ಉದ್ದೇಶದಿಂದ ಪ್ರಭುತ್ವಶಾಹಿಯ ವಿರುದ್ಧ ಬಹಿರಂಗವಾಗಿ ಹೋರಾಟಕ್ಕೆ ಧುಮುಕಿದರು. ಹೋರಾಟವನ್ನು ಪ್ರಾರಂಭಿಸಿದ ಅಂಬೇಡ್ಕರ್‌ರವರು ದಲಿತರ ಸ್ಥಿತಿಯನ್ನು ಸುಧಾರಿಸುವತ್ತ ತಮ್ಮ ಗಮನವನ್ನು ಕೇಂದ್ರೀಕರಿಸಿದ ಇವರು ದಲಿತರ ಸ್ಥಿತಿ ಉತ್ತಮಗೊಳ್ಳಬೇಕಾದರೆ ಅವರು ಮೊದಲು ಶಿಕ್ಷಿತರಾಗಬೇಕೆಂಬ ಉದ್ದೇಶದಿಂದ ಬಹಿಷ್ಕೃತ ಹಿತಕಾರಣಿ ಸಭಾ ಮತ್ತು ಕೊಲ್ಹಾಪುರದ ಸಾಹು ಮಹಾರಾಜರ ನೆರವಿನಿಂದ ದಲಿತ ವಿದ್ಯಾರ್ಥಿಗಳಿಗಾಗಿ ಉಚಿತ ವಿದ್ಯಾರ್ಥಿನಿಲಯವನ್ನು ಸ್ಥಾಪಿಸುವ ಮೂಲಕ ದಲಿತರನ್ನು ಶಿಕ್ಷಿತರನ್ನಾಗಿಸಲು ಪ್ರಯತ್ನ ನಡೆಸಿದರು. ಇದಲ್ಲದೆ ದಲಿತರ ಕಲ್ಯಣಕ್ಕಾಗಿ ಆಗಿನ ವಸಾಹತುಶಾಹಿ ಬ್ರಿಟೀಷ್ ಸರ್ಕಾರ ನೇಮಿಸಿದ ಹಲವಾರು ವಿಚಾರಣಾ ಹಾಗೂ ಅಧ್ಯಯನ ಸಮಿತಿಗಳ ಮುಂದೆ ಹಾಜರಾಗುವ ಮೂಲಕ ಭಾರತದಲ್ಲಿನ ದಲಿತರ ಶೋಷಿತ ಸ್ಥಿತಿಯನ್ನು ಮನವರಿಕೆ ಮಾಡಿಕೊಡುವ ಪ್ರಯತ್ನವನ್ನು ನಡೆಸಿದರು. ಇವರು ಸ್ವಾತಂತ್ರ್ಯಾನಂತರ ಭಾರತದಲ್ಲಿ ಸಂವಿಧಾನ ಕರಡು ಸಮಿತಿಯ ಅಧ್ಯಕ್ಷರಾಗಿದ್ದುಕೊಂಡು ಸ್ವಾತಂತ್ರ್ಯ ಸಮಾನತೆಯ ತತ್ವಗಳಿಗೆ ಬದ್ಧವಾದ ಸಂವಿಧಾನವನ್ನು ರಚಿಸುವಲ್ಲಿ ನಿರ್ಣಾಯಕ ಪಾತ್ರವನ್ನು ನಿರ್ವಹಿಸಿದರು. ಸ್ವತಂತ್ರ ಭಾರತದ ಮೊದಲ ಕಾನೂನು ಮಂತ್ರಿಯಾದ ಇವರು ಭಾರತದಲ್ಲಿ ಎಲ್ಲಾ ರೀತಿಯ ಸಮಾನತೆಯನ್ನು ತರುವ ಉದ್ದೇಶದಿಂದ ಸಂಸತ್ತಿನಲ್ಲಿ ಹಿಂದು ಕೋಡ್ ಬಿಲ್ಲನ್ನು ಮಂಡಿಸಿದರು. ಆದರೆ ಅದಕ್ಕೆ ಸಂಸತ್ತಿನಲ್ಲಿ ಬೆಂಬಲ ಸಿಗಲಿಲ್ಲವಾದ್ದರಿಂದ ಬೇಸತ್ತು ತಮ್ಮ ಕಾನೂನು ಪದವಿಗೆ ರಾಜೀನಾಮೆ ನೀಡಿ ಮಂತ್ರಿ ಮಂಡಲದಿಂದ ಹೊರನಡೆಯುವ ಮೂಲಕ ತಮ್ಮ ಹೋರಾಟ ಮನೋಭಾವನೆಯನ್ನು ಪ್ರದರ್ಶಿಸಿದರು. ಹಾಗೆಯೇ ಹಿಂದೂ ಧರ್ಮದಲ್ಲಿನ ಶೋಷಣೆಯನ್ನು ಪ್ರಬಲವಾಗಿ ತಮ್ಮ ಜೀವಿತ ಅವಧಿಯುದ್ದಕ್ಕೂ ಟೀಕಿಸಿದ ಇವರು ತಾನು ಹಿಂದುವಾಗಿ ಹುಟ್ಟುವುದನ್ನು ನನ್ನಿಂದ ತಪ್ಪಿಸಲಾಗಲಿಲ್ಲ. ಆದರೆ ನಾನು ಹಿಂದುವಾಗಿ ಮಾತ್ರ ಸಾಯಲಾರಿ ಎಂದು ತಮ್ಮ ಅಂತಿಮ ದಿನಗಳಲ್ಲಿ ಬೌದ್ಧ ಧರ್ಮಕ್ಕೆ ತಮ್ಮ ಅನುಯಾಯಿಗಳೊಂದಿಗೆ ಮತಾಂತರ ಹೊಂದುವ

ಮೂಲಕ ಹಿಂದೂ ಧರ್ಮದ ಶೋಷಣೆಗೆ ತಮ್ಮ ಪ್ರತಿಭಟನೆಯನ್ನು ಸೂಚಿಸಿದರು.

## 27.2 ಅಂಬೇಡ್ಕರ್‌ರವರ ಆರ್ಥಿಕ ವಿಚಾರಗಳು

ಅಂಬೇಡ್ಕರ್‌ರವರು ಒಬ್ಬ ರಾಜಕೀಯ ಚಿಂತಕರಾಗಿರದೆ ಒಬ್ಬ ಉತ್ತಮ ಆರ್ಥಿಕ ಚಿಂತಕರೂ ಸಹ ಆಗಿದ್ದಾರೆ. ಅಂಬೇಡ್ಕರ್‌ರವರು ಆರ್ಥಿಕ ವಿಚಾರಗಳಿಗೆ ಸಂಬಂಧಿಸಿದಂತೆ ಪ್ರಾಚೀನ ಭಾರತದಲ್ಲಿ ವಾಣಿಜ್ಯ (Ancient Indian Commerce) ಎಂಬ ಕೃತಿಯನ್ನು ರಚಿಸಿದ್ದು ಇದರಲ್ಲಿ ಪ್ರಾಚೀನ ಭಾರತದಲ್ಲಿನ ಹಣಕಾಸು ಹಾಗೂ ವಾಣಿಜ್ಯ ಸ್ಥಿತಿಯನ್ನು ವಿಶ್ಲೇಷಿಸುವುದರ ಜೊತೆಗೆ ಮಧ್ಯಯುಗದ ಭಾರತ ಹಾಗೂ ಭಾರತೀಯ ರಾಜರುಗಳ ಅವಧಿಯಲ್ಲಿ ಯಾವ ರೀತಿಯ ಆರ್ಥಿಕ ಸ್ಥಿತಿಯನ್ನು ಹೊಂದಿದ್ದಿತು ಎಂಬುದನ್ನು ಸವಿವರವಾಗಿ ವಿಶ್ಲೇಷಿಸುವ ಪ್ರಯತ್ನ ನಡೆಸಿದ್ದಾರೆ. ನಂತರ ಅಂಬೇಡ್ಕರ್ ರಚಿಸಿರುವ ಮತ್ತೊಂದು ಪ್ರಮುಖ ಆರ್ಥಿಕ ಕೃತಿಯಾದ ಈಸ್ಟ್ ಇಂಡಿಯಾ ಕಂಪನಿಯ ಹಣಕಾಸು ಆಡಳಿತಕ್ಕೆ ಸಂಬಂಧಿಸಿದ (The Administration and Finance of East India Company) ಕೃತಿಯಲ್ಲಿ ಆಸ್ಟ್ ಇಂಡಿಯಾ ಕಂಪನಿಯ ಶೋಷಣೆಯುಕ್ತವಾದ ಆರ್ಥಿಕ ನೀತಿಯನ್ನು ಮೊದಲ ಬಾರಿಗೆ ತಿಳಿಯಪಡಿಸಿದರು ಮುದುವರೆದು ಅಂಬೇಡ್ಕರ್‌ರವರು ಆಸ್ಟ್ ಇಂಡಿಯಾ ಕಂಪನಿಯ ಹಣಕಾಸಿನ ಮೂಲಗಳು ಮತ್ತು ಅದರ ವೆಚ್ಚವನ್ನು ಕುರಿತಂತೆ 1857 ರವರೆಗೆ ಸವಿವರವಾದ ವರದಿಯನ್ನು ತಮ್ಮ ಕೃತಿಯಲ್ಲಿ ಪ್ರಕಟಿಸುವ ಮೂಲಕ ಅದರ ಶೋಷಣೆಯ ಪ್ರಮಾಣವನ್ನು ಪ್ರಚುರ ಪಡಿಸುವ ಪ್ರಯತ್ನ ಮಾಡಿದರು. ನಂತರ ಬ್ರಿಟೀಷ್ ಇಂಡಿಯಾದಲ್ಲಿ ಪ್ರಾಂತೀಯ ಸರ್ಕಾರಗಳಲ್ಲಿ ಹಣಕಾಸು ಆಡಳಿತದ ವಿಕಾಸವನ್ನು ಕುರಿತಂತೆ (The Evaluation of Provincial Finance in British India)ಎಂಬ ಗ್ರಂಥದಲ್ಲಿ ಬ್ರಿಟೀಷ್ ಕೇಂದ್ರ ಸರ್ಕಾರ ಹಾಗೂ ಸ್ಥಳೀಯ ಸರ್ಕಾರಗಳ ನಡುವೆ 1833ರಿಂದ 1919ರವರಿಗೆ ಇದ್ದ ಹಣಕಾಸು ವಿನಿಮಯದ ವಿವರಗಳನ್ನು ಪರಿಚಯಿಸಿದರು.

ಅಂಬೇಡ್ಕರ್‌ರವರು ಡಾಕ್ಟರೇಟ್ ಪದವಿಗಾಗಿ ಸಲ್ಲಿಸಿದ ಪ್ರಬಂಧವಾದ ರೂಪಾಯಿ ಸಮಸ್ಯೆ ಅದರ ಉಗಮ ಮತ್ತು ಪರಿಹಾರ (The problems of Rupee its origin and its solution)ಇದು ಒಂದು ಪ್ರಮುಖ ಆರ್ಥಿಕ ಚಿಂತನೆಗಳನ್ನೊಳಗೊಂಡ ಗ್ರಂಥವಾಗಿದ್ದು ಇದರಲ್ಲಿ ಇವರು ಒಳ್ಳೆಯ ಪ್ರಮಿತಿಗೆ ಬದಲಾಗಿ ಸುವರ್ಣ ಪ್ರಮಿತಿಯನ್ನು ಬೆಂಬಲಿಸಿದ್ದು ಇವರು ಇದರಿಂದ ಹಣಕಾಸಿನ ವಿನಿಮಯದಲ್ಲಿ ಹೆಚ್ಚು ಸ್ಥಿರತೆಯನ್ನು ಸಾಧಿಸಲು ಸಾಧ್ಯ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಮುಂದುವರೆದು ಅಂಬೇಡ್ಕರ್‌ರವರು ತಮ್ಮ ಆರ್ಥಿಕ ಚಿಂತನೆಯನ್ನು ವ್ಯಕ್ತಪಡಿಸುತ್ತಾ ಕೃಷಿ ಮತ್ತು ಕೈಗಾರಿಕೆ ಈ ಎರಡೂ ವಲಯಗಳೂ ಸಂಪೂರ್ಣವಾಗಿ ರಾಷ್ಟ್ರೀಕರಣಗೊಳ್ಳಬೇಕು. ಅವು ರಾಷ್ಟ್ರೀಕರಣಗೊಂಡಾಗ ಆರ್ಥಿಕ ಶೋಷಣೆಯ ಪ್ರಮಾಣ ನಿಯಂತ್ರಿತವಾಗುತ್ತದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಕೈಗಾರಿಕೆಗಳ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಕೈಗಾರಿಕೆಗಳ ಬಗ್ಗೆ ತಮ್ಮ ಅಭಿಪ್ರಾಯವನ್ನು ತಿಳಿಸುತ್ತಾ ಕೈಗಾರಿಕಾ ಕಾರ್ಮಿಕರ ದುಡಿಮೆಗೆ ಸಂಬಂಧಿಸಿದಂತೆ ರಾಜ್ಯ ನಿಯಂತ್ರಿತ ವ್ಯವಸ್ಥೆ ಇರಬೇಕು ಹಾಗೂ ಇವರುಗಳ ದುಡಿಮೆಯ ಅವಧಿ, ಕನಿಷ್ಠ ವೇತನ, ಹಾಗೂ ಕಾರ್ಮಿಕರ ಕಲ್ಯಾಣಕ್ಕೆ ಸಂಬಂಧಿಸಿದಂತೆ ಕಾನೂನುಗಳನ್ನು ರಚಿಸುವ ಮೂಲಕ ಕಾರ್ಮಿಕರ ಸಂಪೂರ್ಣ ಕಲ್ಯಾಣದ ಜವಾಬ್ದಾರಿಯು ರಾಜ್ಯಕ್ಕೆ ಸೇರಿದಂತಹುದಾಗಿರಬೇಕು ಎಂದಿದ್ದಾರೆ. ಹಾಗೆಯೇ ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕೃಷಿಗೆ ಯೋಗ್ಯವಾದ ಭೂಮಿಯ ಮೇಲಿನ ಒಡೆತನ ರಾಜ್ಯಕ್ಕೆ ಸೇರಿದ್ದು ರಾಜ್ಯವು ಯಾವುದೇ ರೀತಿಯ ತಾರತಮ್ಯವನ್ನು ನಡೆಸದೆ ಎಲ್ಲರಿಗೂ ಸಮಾನ ಪ್ರಾತಿನಿಧ್ಯದ ಆಧಾರದ ಮೇಲೆ ಗೇಣಿಗಾಗಿ ಕೃಷಿ ಭೂಮಿಯನ್ನು ಒದಗಿಸಬೇಕೆಂದು ತಿಳಿಸುತ್ತಾ ಕೃಷಿ ಪ್ರಧಾನ ಅರ್ಥವ್ಯವಸ್ಥೆಯನ್ನು ಹೊಂದಿರುವ ಭಾರತದ ಆರ್ಥಿಕತೆ ಉತ್ತಮಗೊಳ್ಳಬೇಕಾದರೆ ಕೃಷಿ ಕ್ಷೇತ್ರದಲ್ಲಿ ಕ್ರಾಂತಿಕಾರಕವಾದ ಬದಲಾವಣೆಗಳಾಗಬೇಕಾದ ಅಗತ್ಯವಿದ್ದು ಇದರಿಂದ ಭಾರತ ಎದುರಿಸುತ್ತಿರುವ ಆಹಾರದ ಸಮಸ್ಯೆಯನ್ನು ನೀಗಿಸುವುದರ ಜೊತೆಗೆ ದೇಶದ ಆರ್ಥಿಕ ಮಟ್ಟವೂ ಸಹ ಉತ್ತಮಗೊಳ್ಳುತ್ತದೆ ಎಂಬುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

## 27.3 ಅಂಬೇಡ್ಕರ್‌ರವರ ರಾಜಕೀಯ ವಿಚಾರಗಳು

ಅಂಬೇಡ್ಕರ್‌ರವರು ವಸಾಹತುವಾಗಿ ಆಡಳಿತವನ್ನು ವಿರೋಧಿಸಿದರೂ ಸಹ ವಸಾಹುತುಶಾಹಿ ಆಡಳಿತವು ಭಾರತದಲ್ಲಿ ಕೆಲವು ನಿರ್ಣಾಯಕವಾದ ಕಾಸೂನುಗಳನ್ನು ಜಾರಿಗೊಳಿಸುವ ಮೂಲಕ ಶೋಷಣೆಯಿಂದ ಬಳಲುತ್ತಿದ್ದ ಅಸ್ಪೃಷ್ಯ ಸಮಾಜಕ್ಕೆ ನ್ಯಾಯದೊರಕಿಸುವಲ್ಲಿ ಸ್ವಲ್ಪಮಟ್ಟಿಗೆ ಸಹಕಾರಿಯಾಗಿ ಕಾರ್ಯ ನಿರ್ವಹಿಸಿತು. ಇದಕ್ಕೆ ಕಾರಣ ವಸಾಹತುಶಾಹಿಯು ಸಂಪ್ರದಾಯಬದ್ಧ ಆಡಳಿತ ನೀತಿಗಳಿಗೆ ತೆರೆ ಎಳೆಯುವ ಮೂಲಕ ಹೊಸದಾದ ಕಾನೂನುಗಳ ಆದಿಪತ್ಯಾಧಾರಿತ ಆಡಳಿತವನ್ನು ಅನುಷ್ಠಾನಗೊಳಿಸುವಲ್ಲಿ ಯಶಸ್ವಿಯಾಯಿತೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಸರ್ಕಾರದ ಕ್ರಿಯಾಶೀಲತೆಯ ಬಗ್ಗೆ ತಿಳಿಸಿದ ಅಂಬೇಡ್ಕರ್‌ರವರು ಮೊದಲ ಬಾರಿಗೆ ಸೈಮನ್ ಕಮಿಷನ್‌ಗೆ ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿಯನ್ನು ಜಾರಿಗೆ ತರುವಂತೆ ಒತ್ತಾಯಿಸಿದರು. ಇವರು ಒಬ್ಬ ರಾಷ್ಟ್ರೀಯ ವಾದಿಯಾಗಿದ್ದು ಭಾರತದಲ್ಲಿ ಇರುವ ಭಾರತ ರಾಷ್ಟ್ರೀಯ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ಇವುಗಳೆರಡೂ ಭಾರತದ ರಾಷ್ಟ್ರೀಯತೆಗೆ ತೊಡಕುಗಳಾಗಿವೆ ಎಂದಿದ್ದಾರೆ ಇದಕ್ಕೆ ಕಾರಣ ಈ ಎರಡೂ ಸಂಘಟನೆಗಳು ರಾಷ್ಟ್ರದಲ್ಲಿ ಪ್ರತ್ಯೇಕತಾ ಮನೋಭಾವನೆಯನ್ನು ಕೆರಳಿಸುವಲ್ಲಿ ಸಹಕಾರಿಯಾಗಿದ್ದು ಇದರಿಂದ ರಾಷ್ಟ್ರದ ಏಕತೆ ಹಾಗೂ ಭದ್ರತೆಗೆ ಅಪಾಯ ಖಂಡಿತ ಎಂಬ ನಿಲುವನ್ನು ಹೊಂದಿದ್ದರು.

ಅಂಬೇಡ್ಕರ್‌ರವರು ಸಂವಿಧಾನಾತ್ಮಕ ಪ್ರಜಾಪ್ರಭುತ್ವವಾದಿಯಾಗಿದ್ದು ಇದರ ಸ್ಥಾಪನೆಗಾಗಿ ಸಂವಿಧಾನ ರಚನೆಯ ಸಂದರ್ಭ ತಮ್ಮ ಪ್ರಬಲವಾದ ವಿಚಾರಮಂಡನೆಯನ್ನು ಸಂವಿಧಾನ ರಚನಾ ಸಭಾ ಮಂದೆ ಮಂಡಿಸಿದರು. ಇವರು ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ ಜನತೆಯು ಮನ್ನಿಸುವಂತಹ ಕಾನೂನು ಹಾಗೂ ನ್ಯಾಯಾಂಗ ವ್ಯವಸ್ಥೆಯಿಂದ್ದಾಗ ಮಾತ್ರ ಸಾಧ್ಯ. ಇದು ಸಾಧ್ಯವಾಗಬೇಕಾದಲ್ಲಿ ರಾಷ್ಟ್ರದ ಕಾನೂನು ವ್ಯವಸ್ಥೆಯ ಸಮಕಾಲೀನ ಸ್ಥಿತಿಗತಿಗಳನ್ನು ಆಧರಿಸಿ ರಚಿತವಾಗಿರಬೇಕು. ಅದಕ್ಕೆ ಬದಲಾಗಿ ಕಾನೂನು ವ್ಯವಸ್ಥೆಯಲ್ಲಿ ಕಠಿಣತೆ ಇದ್ದಾಗ ಅದರಿಂದ ಜನತೆಯ ಶೋಷಣೆಗೆ ದಾರಿಮಾಡಿಕೊಡುವ ಸಾಧ್ಯತೆ ಇರುತ್ತದೆ. ಆದರೆ ಇದರ ಸ್ಥಿತಿಸ್ಥಾಪಕ ಕ್ರಿಯೆಯು ತುಂಬಾ ಜಾಗರೂಕತೆಯಿಂದ ಕೂಡಿರಬೇಕು ಇಲ್ಲವಾದಲ್ಲಿ ಕಾನೂನುಗಳು ಆಡಳಿತಗಾರರ ಸ್ವಾರ್ಥಕ್ಕೆ ತಕ್ಕಂತೆ ಬಳಕೆಯಾಗುವ ಸಾಧ್ಯತೆಯೇ ಹೆಚ್ಚಾಗಿರುತ್ತದೆ ಎಂದಿದ್ದು ಇದನ್ನು ಆ ರಾಷ್ಟ್ರದ ನ್ಯಾಯಾಂಗ ವ್ಯವಸ್ಥೆ ಹಾಗೂ ವಿರೋಧ ಪಕ್ಷಗಳು ತುಂಬಾ ಜಾಗರೂಕರಾಗಿ ಗಮನಿಸುತ್ತಿರಬೇಕು ಎಂಬ ಕಾರಣದಿಂದಲೇ ಅಂಬೇಡ್ಕರ್ ಸಂವಿಧಾನ ರಚನೆಯ ಸಂದರ್ಭದಲ್ಲಿ ಸ್ವತಂತ್ರ ನ್ಯಾಯಾಂಗ ವ್ಯವಸ್ಥೆ ಹಾಗೂ ಬಹುಪಕ್ಷ ಪದ್ಧತಿಯನ್ನು ಬೆಂಬಲಿಸಿದರು. ಅಂಬೇಡ್ಕರ್ ಹೇಳುವಂತೆ ಪ್ರಜಾಪ್ರಭುತ್ವವು ಯಶಸ್ವಿಯಾಗಬೇಕಾದರೆ ಜನತೆಗೆ ರಾಷ್ಟ್ರದ ಸ್ಥಿತಿಯನ್ನು ಅರಿಯುವಲ್ಲಿ ಉತ್ತಮ ರಾಜೀಕಯ ಶಿಕ್ಷಣ ದೊರೆಯುವಂತಾಗಬೇಕು ಎಂದಿದ್ದಾರೆ.

ಅಂಬೇಡ್ಕರ್ ಸರ್ಕಾರದ ಅಧಿಕಾರವನ್ನು ಕುರಿತು ಪ್ರಸ್ತಾಪಿಸುತ್ತಾ ಸರ್ಕಾರದ ಪ್ರಮುಖ ಕರ್ತವ್ಯ. ರಾಜಕೀಯ ಆರ್ಥಿಕ ಹಾಗೂ ಸಾಮಾಜಿಕವಾಗಿ ಪ್ರತಿಯೊಬ್ಬ ನಾಗರೀಕನಿಗೆ ದೊರೆಯಬೇಕಾಗಿರುವ ಸೌಲಭ್ಯಗಳನ್ನು ದೊರಕಿಸುವುದು ಹಾಗೂ ಅವರು ಸಂವಿಧಾನಾತ್ಮಕವಾಗಿ ಪಡೆದಿರುವ ಹಕ್ಕುಗಳನ್ನು ರಕ್ಷಿಸುವುದೇ ಆಗಿದೆ ಎಂದಿರುವ ಇವರು ಸರ್ಕಾರ ಮೊದಲ ಪ್ರಾಶಸ್ತ್ಯವನ್ನು ನಾಗರೀಕ ಸಮಾಜದಲ್ಲಿನ ಶೋಷಣೆ ಪರವಾಗಿ ಹೊಂದಿರಬೇಕು. ನಾಗರಿಕ ಸಮಾಜದಲ್ಲಿನ ಶೋಷಣೆಯನ್ನು ನಿಯಂತ್ರಿಸುವ ಒಂದು ಸಾಧನದ ರೀತಿಯಲ್ಲಿ ಸರ್ಕಾರ ಕಾರ್ಯನಿರ್ವಹಿಸುವ ಮೂಲಕ ಮಾನವೀಯ ಮೌಲ್ಯಗಳನ್ನು ರಕ್ಷಿಸುವ ಕೆಲಸವನ್ನು ನಿರ್ವಹಿಸಬೇಕು ಈ ಮೂಲಕ ಸ್ವಾತಂತ್ರ್ಯ ಮತ್ತು ಸಮಾನತೆಗಳನ್ನು ನಾಗರೀಕ ಸಮಾಜದಲ್ಲಿ ನೆಲೆಹೊಂದುವಂತೆ ಮಾಡುವ ಹೊಣೆ ಸರ್ಕಾರದ್ದಾಗಿರುತ್ತದೆ ಎಂದಿದ್ದಾರೆ. ಈ ಕೆಲಸವನ್ನು ಪ್ರಜಾಪ್ರಭುತ್ವಧಾರಿತ ಸರ್ಕಾರಗಳಿಂದ ಮಾತ್ರ ಮಾಡಲು ಸಾಧ್ಯ ಕಾರಣ ಈ ಪ್ರಜಾಪ್ರಭುತ್ವ ವ್ಯವಸ್ಥೆಯು ಪ್ರತಿಯೊಬ್ಬ ಸಾಮಾನ್ಯ ಜನತೆಯ ಅಭಿಪ್ರಾಯದ ಫಲವಾಗಿರುತ್ತದೆ. ಒಂದು ವೇಳೆ ಸರ್ಕಾರದ ಕಾರ್ಯತಂತ್ರ ಜನತೆಯ ಹಿತಾಸಕ್ತಿಗೆ ವಿರುದ್ಧವಾಗಿದ್ದಲ್ಲಿ ಅದು ಜನತೆಯ ವಿಶ್ವಾಸವನ್ನು ಕಳೆದುಕೊಳ್ಳುವ ಸಾಧ್ಯತೆಯೇ ಹೆಚ್ಚಾಗಿರುತ್ತದೆ. ಆದರೆ ಬೇರೆ ಮಾದರಿಯ

ಸರ್ಕಾರಗಳಲ್ಲಿ ಇಷ್ಟೊಂದು ಪಾರದರ್ಶಕ ಆಡಳಿತವನ್ನು ನಡೆಸಲು ಸಾಧ್ಯವಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದರೂ ಅವರೇ ಮುಂದುವರೆದು ಪ್ರಜಾಪ್ರಭುತ್ವ ಮಾದರಿಯ ಸರ್ಕಾರ ಬಹುಸಂಖ್ಯಾತ ತತ್ವವನ್ನು ಒಳಗೊಂಡಿದ್ದು ಭಾರತದಂತಹ ಸಂಪ್ರದಾಯಬದ್ಧ ಹಿಂದೂ ರಾಷ್ಟ್ರದಲ್ಲಿ ಬಹುಸಂಖ್ಯಾತ ಕೋಮಿನವರು ಜಾತಿ ಅಥವಾ ಕೋಮಿನ ಆಧಾರದ ಮೇಲೆ ಬಹುಮತವನ್ನು ಪಡೆಯುವ ಮೂಲಕ ಅಲ್ಪಸಂಖ್ಯಾತ ಕೋಮು ಅಥವಾ ದುರ್ಬಲವರ್ಗದವರ ಮೇಲೆ ದಬ್ಬಾಳಿಕೆ ನಡೆಸುವ ಸಾಧ್ಯತೆ ಹೆಚ್ಚು ಎಂದಿದ್ದು ಆ ಕಾರಣಕ್ಕಾಗಿಯೇ ಅವರು ದುಂಡು ಮೇಜಿನ ಸಭೆಗಳಲ್ಲಿ ಭಾಗವಹಿಸಿ ಬ್ರಿಟಿಷ್ ಸರ್ಕಾರದ ಮೇಲೆ ದಲಿತ ಸಮುದಾಯಕ್ಕೆ ಪ್ರತ್ಯೇಕ ಮತದಾನವನ್ನು ನೀಡಬೇಕೆಂಬ ಬೇಡಿಕೆಯನ್ನು ಮಂಡಿಸಿದರು. ನಂತರ 1946ರಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಫೆಡರೇಷನ್ (Sheduled caste federation) ವತಿಯಿಂದ ದಲಿತ ಸಮುದಾಯದ ಹಿತಾಸಕ್ತಿಯನ್ನು ರಕ್ಷಿಸಬೇಕೆಂಬ ಒಂದು ಬೇಡಿಕೆಯನ್ನು ಸಂವಿಧಾನ ರಚನಾ ಸಭೆಯ ಮುಂದೆ ಪ್ರಸ್ತಾಪಿಸಿದರು. ಇದರಲ್ಲಿ ಅಟರು ಪ್ರಮುಖವಾಗಿ ಅವರು ಸ್ಥಳೀಯ ಸರ್ಕಾರಗಳ ಶಾಸಕಾಂಗದಲ್ಲಿ, ರಾಷ್ಟ್ರದ ಕಾರ್ಯಾಂಗೀಯ ವ್ಯವಸ್ಥೆಯಲ್ಲಿ ಅಖಿಲ ಭಾರತ ಸೇವೆಗಳಲ್ಲಿ ದಲಿತ ಸಮುದಾಯಕ್ಕೆ ಪ್ರಾತಿನಿಧ್ಯತೆಯನ್ನು ದೊರಕಿಸಬೇಕೆಂಬ ಬೇಡಿಕೆಯನ್ನು ಮಂಡಿಸಿದರು. ಈ ಕಾರಣದಿಂದಾಗಿ ಅಲ್ಪಸಂಖ್ಯಾತರ ರಕ್ಷಣೆಯ ದೃಷ್ಟಿಯಿಂದಾಗಿಯೇ ಅವರು ಪಾಕಿಸ್ತಾನದ ಪ್ರತ್ಯೇಕತೆಗೂ ಸಹ ತಮ್ಮ ಸಹಮತಿಯನ್ನು ಸೂಚಿಸಿದ್ದರು.

ಅಂಬೇಡ್ಕರ್ ಸಂಸದೀಯ ಮಾದರಿ ಸರ್ಕಾರದ ಪ್ರತಿಪಾದಕರಾಗಿದ್ದು ಅನುವಂಶೀಯ ಆಡಳಿತವನ್ನು ಪ್ರಬಲವಾಗಿ ವಿರೋಧಿಸಿದ್ದಾರೆ. ಇವರ ಪ್ರಕಾರ ಸಂಸದೀಯ ಸರ್ಕಾರದ ಕೆಲಸವೆಂದರೆ ಸಮಾಜದಲ್ಲಿ ಸಮಾನತೆಯನ್ನು ಜಾರಿಗೊಳಿಸಬೇಕು ಇದಕ್ಕೆ ಪೂರಕವಾದಂತ ಸ್ವತಂತ್ರ ಆಡಳಿತ ಸೇವಾವರ್ಗವನ್ನು ರಚಿಸಬೇಕು, ಇದರ ಜೊತೆಗೆ ಮಾನವೀಯ ಮೌಲ್ಯಗಳನ್ನುರಕ್ಷಿಸುವ ಹಿನ್ನೆಲೆಯಲ್ಲಿ ಅಲ್ಪಸಂಖ್ಯಾತರುಸ, ದಲಿತರು ಹಾಗೂ ಮಹಿಳೆಯರ ರಕ್ಷಣೆಯ ಬಗ್ಗೆ ವಿಶೇಷ ಕಾಳಜಿಯನ್ನು ಹೊಂದಿರಬೇಕು. ಈ ಕಾರಣಕ್ಕಾಗಿಯೇ ಅಂಬೇಡ್ಕರ್‌ರವರು ರಾಜ್ಯ ಸಮಾಜವಾದವನ್ನು ಬೆಂಬಲಿಸುತ್ತಾ ರಾಷ್ಟ್ರದಲ್ಲಿ ಕೃಷಿ ಮತ್ತು ಕೈಗಾರಿಕೆ ಈ ಎರಡೂ ವಲಯಗಳು ರಾಷ್ಟ್ರೀಕರಣಗೊಳ್ಳಬೇಕು ಇಲ್ಲಿ ಉತ್ಪಾದನೆಯನ್ನು ಸಾಮೂಹಿಕ ಉತ್ಪಾದನಾ ವಿಧಾನವನ್ನಾಗಿ ಅಳವಡಿಸಿಕೊಳ್ಳಬೇಕು. ಆಗ ಸಮಾಜದಲ್ಲಿ ಸಮಾನತೆಯನ್ನು ಸಾಧಿಸಬಹುದಾಗಿದೆ ಎಂದಿದ್ದಾರೆ. ಹಾಗೆಯೇ ರಾಜ್ಯದ ಏಕತೆಯನ್ನು ಕಾಪಾಡಬೇಕಾದರೆ ಬಹುಭಾಷಾ ತತ್ವವು ರಾಷ್ಟ್ರದ ಏಕತೆಗೆ ಧಕ್ಕೆಯನ್ನುಂಟು ಮಾಡುತ್ತದೆ. ಕಾರಣ ಇದರಿಂದ ಜನತೆಯಲ್ಲಿ ಒಡಕುಗಳು ಸಂಭವಿಸಿ ದೇಶದ ಏಕತೆಗೆ ಮಾರಕವಾಗುವುದರಿಂದ ಏಕಭಾಷಾ ತತ್ವವನ್ನು ಅವರು ಪ್ರತಿಪಾದಿಸದರಾದರೂ ಸಂವಿಧಾನ ರಚನೆಯ ಸಂದರ್ಭದಲ್ಲಿ ವೈವಿಧ್ಯತೆಯನ್ನು ರಕ್ಷಿಸುವ ದೃಷ್ಟಿಯಿಂದ ಭಾಶಾವಾರು ರಾಜ್ಯಗಳ ರಚನೆಗೆ ತಮ್ಮ ಸಹಮತವನ್ನು ಸೂಚಿಸಿದರು. ಈ ರೀತಿಯಾಗಿ ಅಂಬೇಡ್ಕರ್‌ರವರು ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ತಮ್ಮ ರಾಜಕೀಯ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ.

## ನಿಮ್ಮ ಪ್ರಗತಿ ಪರಿಶೀಲನೆ - 1

**ಸೂಚನೆ:** 1. ಈ ಕೆಳಗೆ ಬಿಟ್ಟಿರುವ ಜಾಗವನ್ನು ನಿಮ್ಮ ಉತ್ತರಕ್ಕೆ ಉಪಯೋಗಿಸಿಕೊಳ್ಳಿ.

2. ಈ ಘಟಕದ ಕೊನೆಯಲ್ಲಿ ನೀಡಿರುವ ಉತ್ತರದೊಂದಿಗೆ ನಿಮ್ಮ ಪ್ರಗತಿಯನ್ನು ಪರಿಶೀಲಿಸಿಕೊಳ್ಳಿ.

**1.ಅಂಬೇಡ್ಕರ್‌ರವರ ಆರ್ಥಿಕ ಚಿಂತನೆಯನ್ನು ಕುರಿತು ಚರ್ಚಿಸಿ?**

........................................................................................................................................

........................................................................................................................................

........................................................................................................................................

........................................................................................................................................

........................................................................................................................................

**2.** ಅಂಬೇಡ್ಕರ್‌ರವರ ರಾಜಕೀಯ ವಿಚಾರಗಳನ್ನು ವಿವರಿಸಿ?

..............................................................................................................................................

..............................................................................................................................................

..............................................................................................................................................

..............................................................................................................................................

..............................................................................................................................................

..............................................................................................................................................

..............................................................................................................................................

..............................................................................................................................................

**3.** ಅಂಬೇಡ್ಕರ್‌ರವರ ಆರ್ಥಿಕ ಹಾಗೂ ರಾಜಕೀಯ ವಿಚಾರಗಳನ್ನು ವಿಮರ್ಶಿಸಿ?

..............................................................................................................................................

..............................................................................................................................................

..............................................................................................................................................

..............................................................................................................................................

..............................................................................................................................................

..............................................................................................................................................

..............................................................................................................................................

..............................................................................................................................................

## 27.4 ಅಂಬೇಡ್ಕರ್ ಮತ್ತು ಸಾಮಾಜಿಕ ನ್ಯಾಯ

ಅಂಬೇಡ್ಕರ್ ಪ್ರಕಾರ ಸಾಮಾಜಿಕ ನ್ಯಾಯ ಎಂದರೆ ಪ್ರಾಚೀನ ಕಾಲದಿಂದ ಸಾಮಾಜಿಕ ಹಾಗೂ ಧಾರ್ಮಿಕ ಶೋಷಣೆಗೆ ಒಳಗಾಗುತ್ತಾ ಬಂದಿರುವ ಅತಿಶೂದ್ರವರ್ಗದವರನ್ನು ಶೋಷಣೆಯಿಂದ ವಿಮೋಚನೆಗೊಳಿಸುವುದೇ ಆಗಿದೆ. ಇವರ ಸಾಮಾಜಿಕ ನ್ಯಾಯ ಪರಿಕಲ್ಪನೆಯು ಅವರು ಬಾಲ್ಯದಿಂದ ಸವರ್ಣಿಯರಿಂದ ಅನುಭವದ ಶೋಷಣೆಯ ಕಹಿ ಘಟನೆಗಳು ಹಾಗೂ ಅವರು ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಕಂಡ ಉದಾರಮಾಡಿ ವ್ಯವಸ್ಥೆಗಳಿಂದ ಪ್ರಭಾವಿತವಾಗಿದೆ. ಅವರೇ ಹೇಳುವಂತೆ ಭಾರತೀಯ ಸಮಾಜದಲ್ಲಿ ಆಚರಣೆಯಲ್ಲಿರುವ ಅಸ್ಪೃಶ್ಯತೆಯ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿನ ಗುಲಾಮಗಿರಿಗಿಂತ ತುಂಬಾ ಅಮಾನವೀಯವಾದುದಾಗಿದ್ದು ಇದರಿಂದ ವಿಮೋಚನೆ ದೊರೆಯದೆ ಯಾವುದೇ ರೀತಿಯಲ್ಲಿ ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ಸಮಾನತೆಗಳನ್ನು ನಮ್ಮ ಸಮಾಜದಲ್ಲಿ ಕಾಣಲು ಸಾಧ್ಯವಿಲ್ಲವೆಂದಿದ್ದಾರೆ. ಈ ಉದ್ದೇಶದಿಂದಾಗಿಯೇ ಅವರು ಸವರ್ಣಿಯರ ಪುರೋಹಿತಶಾಹಿ ಆಚರಣೆಗಲ ವಿರುದ್ಧ ಹೋರಾಟಗಳನ್ನು ಸಂಘಟಿಸಿದರು. ಇದರ ಪ್ರತಿಫಲವಾಗಿ ಅವರು ಚಾದರ್ ಕೆರೆಯ ಹಾಗೂ ಕಳಾರಮ್ಮ ದೇವಾಲಯದ ಹೋರಾಟಗಳನ್ನು ಸಂಗಟಿಸಿ ಭಾರತೀಯ ಪುರೋಹಿತಶಾಹಿ ಆಚರಣೆಗಳನ್ನು ವಿರೋಧಿಸುವ ಸೂಚಕವಾಗಿ ಮನು ಧರ್ಮಶಾಸ್ತ್ರವನ್ನು ಬಹಿರಂಗವಾಗಿ ಬೆಂಕಿಗೆ ಹಾಕಿ ದಹಿಸುವ ಮೂಲಕ ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸಿದರು. ಅಂಬೇಡ್ಕರ್ ಅವರ ಅಭಿಪ್ರಾಯದಂತೆ ಸಾಮಾಜಿಕ ನ್ಯಾಯವು ಆಯಾ ಪ್ರದೇಶ ಹಾಗೂ ಕಾಲಮಿತಿಗಳಿಗೆ ಸಂಬಂಧಿಸಿದಂತಹುದಾಗಿದ್ದು ಅದರ ಆಧಾರದ ಮೇಲೆ ನ್ಯಾಯ ಅಥವಾ

ಅನ್ಯಾಯವನ್ನು ನಿರ್ಧರಿಸಬೇಕಾಗಿರುತ್ತದೆ ಎಂದಿದ್ದಾರೆ. ನ್ಯಾಯ ಸಮಾಜದಲ್ಲಿರುವವರೆಲ್ಲರಿಗೂ ಮುಕ್ತವಾಗಿ ದೊರೆಯಬೇಕಾದರೆ ಸಂವಿಧಾನಾತ್ಮಕವಾಗಿ ಪ್ರಜೆಗಳ ಹಕ್ಕುಗಳಿಗೆ ಸುಭದ್ರ ರಕ್ಷಣಾ ವ್ಯವಸ್ಥೆ ಇರಬೇಕು. ಮುಂದುವರೆದು ಇವುಗಳಿಗೆ ರಕ್ಷಣೆ ಮಾತ್ರ ಇದ್ದರೆ ಸಾಲದು ಇವುಗಳನ್ನು ಆಚರಣೆಗೆ ತರುವಂತಹ ಜವಾಬ್ದಾರಿಯು ರಾಜ್ಯದ ಮೊದಲ ಆದ್ಯತೆಯಾಗಿರಬೇಕೆಂದಿದ್ದಾರೆ. ಅಂಬೇಡ್ಕರ್‌ರವರು ಭಾರತದಲ್ಲಿನ ಅಸ್ಪೃಶ್ಯತೆಯು ಗುಲಾಮಗಿರಿಗಿಂತ ಹೀನಾಯವಾದುದು ಎಂದು ವರ್ಣಿಸುತ್ತಾ ಅಸ್ಪೃಶ್ಯತೆ ಮತ್ತು ಗುಲಾಮಗಿರಿಯ ನಡುವೆ ಈ ರೀತಿಯ ಭಿನ್ನತೆಗಳನ್ನು ಗುರುತಿಸುತ್ತಾರೆ. ಅವುಗಳೆಂದರೆ ಗುಲಾಮಗಿರಿಯಲ್ಲಿ ಶಿಕ್ಷಣ ಹಾಗೂ ಅವರ ಸಾಂಸ್ಕೃತಿಕ ಆಯ್ಕೆಗೆ ಮುಕ್ತ ಅವಕಾಶಗಳಿವೆ. ಗುಲಾಮನೊಬ್ಬನು ಉತ್ತಮ ಶಿಕ್ಷಣ ಪಡೆಯುವ ಮೂಲಕ ಅವನು ಗುಲಾಮಗಿರಿಯಿಂದ ಮುಕ್ತ ಪಡೆಯುವ ಅವಕಾಶವನ್ನು ನೀಡಲಾಗಿರುತ್ತದೆ. ಆದರೆ ಅಸ್ಪೃಶ್ಯತೆಯು ಹುಟ್ಟಿನಿಂದಲೇ ಬಂದಂತಹುದಾಗಿದ್ದು ಇಲ್ಲಿ ಯಾವುದೇ ರೀತಿಯ ಆಯ್ಕೆ ಸ್ವಾತಂತ್ರ್ಯಗಳಿಲ್ಲದಿರುವುದರ ಜೊತೆಗೆ ಇದರಿಂದ ಮುಕ್ತಿ ಹೊಂದುವ ಅವಕಾಶಗಳೇ ಇಲ್ಲ ಎಂದಿದ್ದಾರೆ. ಇವರು ಹೇಳುವಂತೆ ಭಾರತದ ಸಮಾಜ ಪ್ರಮುಖವಾಗಿ ಸ್ಪೃಶ್ಯ ಣತ್ತು ಅಸ್ಪೃಶ್ಯ ಎಂಬ ಎರಡು ಸಮುದಾಯಗಳನ್ನು ಹೊಂದಿದ್ದು ಸ್ಪೃಶ್ಯ ಸಮುದಾಯ ಬಹುಸಂಖ್ಯಾತ ವರ್ಗವಾಗಿದ್ದರೆ ಅಸ್ಪೃಶ್ಯ ಸಮುದಾಯ ಅಲ್ಪಸಂಖ್ಯಾತ ವರ್ಗವಾಗಿದೆ. ಹಾಗೆಯೇ ಸ್ಪೃಶ್ಯ ಸಮುದಾಯ ಆರ್ಥಿಕವಾಗಿ, ರಾಜಕೀಯವಾಗಿ ಹಾಗೂ ಸಾಮಾಜಿಕವಾಗಿ ಪ್ರಾಬಲ್ಯವನ್ನು ಸಾಧಿಸಿದ್ದರೆ ಅಸ್ಪೃಶ್ಯ ಸಮುದಾಯವು ಬಹುಸಂಖ್ಯಾತ ಮೌಲ್ಯತೆ ಹೊಂದಿರುವ ಸ್ಪೃಶ್ಯ ಸಮುದಾಯದ ತುಳಿತ ಹಾಗೂ ಶೋಷಣೆಗೆ ಒಳಗಾಗುತ್ತಾ ಸಾಗಿದೆ ಎಂದಿರುವ ಇವರು ಇದಕ್ಕೆಲ್ಲಾ ಮುಕ್ತಿ ದೊರೆಯಬೇಕಾದರೆ ಕಾನೂನಿನ ಪ್ರಾಬಲ್ಯವಿರುವ ರಾಜ್ಯ ಸಮಾಜವಾದದ ಆಚರಣೆಯಿಂದ ಮಾತ್ರ ಸಾಧ್ಯ ಎಂಬ ನಿಲುವನ್ನು ವ್ಯಕ್ತಪಡಿಸಿದ್ದಾರೆ.

ಅಂಬೇಡ್ಕರ್ ಅಭಿಪ್ರಾಯದಂತೆ ಸಾಮಾಜಿಕ ನ್ಯಾಯಸ್ಥಾಪಿತವಾಗಬೇಕಾದರೆ ಶೋಷಣೆಗೆ ಒಳಗಾಗಿರುವ ಜನತೆಯ್ನಲ್ಲಿ ಜಾಗೃತಿ ಮಾಡಬೇಖು ಆದರೆ ಅವರಲ್ಲಿ ಜಾಗೃತಿ ಮೂಡುವ ಸಂಭವವಿಲ್ಲ ಕಾರಣ ಪ್ರಾಚೀನ ಕಾಲದಿಂದಲೂ ಆ ವರ್ಗ ಶಿಕ್ಷಣದಿಂದ ವಂಚಿತವಾಗುತ್ತಾ ಬಂದಿದೆ. ಆದ್ದರಿಂದ ಅವರಿಗೆ ತುರ್ತಾಗಿ ಶಿಕ್ಷಣ ನೀಡುವ ಕೆಲಸವಾಗಬೇಕೆಂದು ಹೇಳಿದ ಇವರು ಶಿಕ್ಷಣದ ಪ್ರಸಾರಕ್ಕಾಗಿ ಮೂಕನಾಯಕ, ಬಹಿಷ್ಕೃತ ಭಾರತ ಪತ್ರಿಕೆಗಳನ್ನು ಸ್ಥಾಪಿಸುವ ಮೂಲಕ ದಲಿತ ಸಮುದಾಯದಲ್ಲಿ ಜಾಗೃತಿ ಮೂಡಿಸುವ ಪ್ರಯತ್ನ ನಡೆಸಿದರು. ಹಾಗೆಯೇ ಶಿಕ್ಷಣದ ಉದ್ದೇಶದಿಂದ ಇವರು ಅಸ್ಪೃಶ್ಯ ವಿದ್ಯಾರ್ಥಿಗಳಿಗಾಗಿ ಬಹಿಷ್ಕೃತ ಹಿತಕಾರಿಣಿ ಸಭಾ ಮತ್ತು ಕೊಲ್ಹಾಪುರದ ಸಾಹು ಮಹಾರಾಜರ ಸಹಕಾರದೊಂದಿಗೆ ಉಚಿತ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಿದರು. ಅಂಬೇಡ್ಕರ್ ಹೇಳುವಂತೆ ಯಾವುದೇ ಒಂದು ಅನ್ಯಾಯವನ್ನು ವಿರೋಧಿಸುವುದಕ್ಕಿಂತ ಮೊದಲು ಆ ಅನ್ಯಾಯದ ಹಿನ್ನೆಲೆ ಹಾಗೂ ತೀವ್ರತೆಯನ್ನು ಮೊದಲು ಅರಿಯುವ ಪ್ರಯತ್ನವನ್ನು ಮಾಡಬೇಕು. ಆ ನಂತರವೇ ಸಂಬಂಧಿಸಿದ ಅನ್ಯಾಯದ ವಿರುದ್ಧ ಪ್ರಬಲವಾಗಿ ಹೋರಾಟ ನಡೆಸಲು ಸಾಧ್ಯವೆಂದಿರುವ ಇವರು ಧರ್ಮದಿಂದ ಸ್ವಲ್ಪ ಮಟ್ಟಿಗೆ ಸಾಮಾಜಿಕ ನ್ಯಾಯವನ್ನು ಸ್ಥಾಪಿಸಲು ಸಾಧ್ಯ. ಧರ್ಮರಹಿತವಾಗಿ ಯಾವುದೇ ಒಬ್ಬ ವ್ಯಕ್ತಿಯು ಜೀವಿಸುವುದು ಕಷ್ಟಸಾಧ್ಯ. ಆದರೆ ಹಿಂದೂಧರ್ಮದಡಿಯಲ್ಲಿ ನಡೆಯುತ್ತಿರುವ ದಲಿತರ ಶೋಷಣೆಯನ್ನು ಗಮನಿಸಿದರೆ ಧರ್ಮದಿಂದಲೂ ಸಾಮಾಜಿಕ ನ್ಯಾಯವನ್ನು ಸ್ಥಾಪಿಸುವುದು ಅಸಾಧ್ಯ ಎಂಬ ಸಂಶಯವನ್ನು ವ್ಯಕ್ತಪಡಿಸಿದ್ದಾರೆ. ಈ ಸಂಶಯದ ಕಾರಣದಿಂದಲೇ ಅವರು ತಮ್ಮ ಅಂತಿಮ ದಿನಗಳಲ್ಲಿ ಬೌದ್ಧ ಧರ್ಮಕ್ಕೆ ಮತಾಂತರಗೊಂಡರು. ಕಾರಣ ಸಾಮಾಜಿಕ ಸುಧಾರಣೆಯು ರಾಜಕೀಯ ಸುಧಾರಣೆಗಿಂತ ಮಹತ್ವ ಪೂರ್ಣವಾದುದಾಗಿದ್ದು ಹಿಂದೂ ಧರ್ಮದಲ್ಲಿ ಸಾಮಾಜಿಕ ಸುಧಾರಣೆ ಅಸಾಧ್ಯವೆಂದು ಮನಗಂಡ ಇವರು ಅಂತಿಮವಾಗಿ ಸಮಾನತೆ ಹಾಗೂ ಅಹಿಂಸೆಯನ್ನು ಬೋಧಿಸುವ ಧರ್ಮವಾದ ಬೌದ್ಧ ಧರ್ಮವನ್ನು ಆಯ್ಕೆ ಮಾಡಿಕೊಂಡುದುದು ಅವರ ಸಮರ್ಥನೆಯಾಗಿತ್ತು.

ಅಂಬೇಡ್ಕರ್ ಸಾಮಾಜಿಕ ನ್ಯಾಯದ ಬಗ್ಗೆ ಕೇವಲ ಒಬ್ಬ ಸಿದ್ಧಾಂತವಾದಿಯಾಗಿ ಕೂರದೆ ಪ್ರಾಯೋಗಿಕವಾಗಿ ಶೋಷಿತ ದಲಿತ ಸಮುದಾಯಕ್ಕೆ ಸಾಮಾಜಿಕ ನ್ಯಾಯವನ್ನು ದೊರಕಿಸಿಕೊಡುವ ಪ್ರಯತ್ನವನ್ನು ನಡೆಸಿದರು ಈ ಹಿನ್ನೆಲೆಯಲ್ಲಿ ಆಗಿನ ವಸಾಹತುಶಾಹಿ

ಬ್ರಿಟೀಷ್ ಸರ್ಕಾರದೊಂದಿಗೆ ತಮ್ಮ ಅಹವಾಲುಗಳನ್ನು ಮಂಡಿಸಿ ಅಸ್ಪೃಶ್ಯ ವರ್ಗದ ಶೋಚನೀಯ ಸ್ಥಿತಿಯನ್ನು ಮನವಿರಿಕೆ ಮಾಡಿಕೊಡುವ ಪ್ರಯತ್ನ ನಡೆಸಿದನು, ಇವರು ಸೈಮನ್ ಕಮೀಷನ್ ಮತ್ತು ದುಂಡು ಮೇಜಿನ ಸಭೆಗಳಲ್ಲಿ ಭಾಗವಹಿಸುವ ಮೂಲಕ ದಲಿತ ಸಮುದಾಯಕ್ಕೆ ನ್ಯಾಯ ದೊರಕಿಸಿಕೊಡುವ ಪ್ರಯತ್ನವನ್ನು ನಡೆಸಿದರೂ ಸ್ವಾತಂತ್ರ್ಯಾಯನಂತರ ಭಾರತದಲ್ಲಿ ಸಂವಿಧಾನ ರಚನೆಯ ಕರಡು ಸಮಿತಿಯ ಅಧ್ಯಕ್ಷರಾಗಿದ್ದ ಇವರು ಸಾಮಾಜಿಕ ನ್ಯಾಯವನ್ನು ಜಾರಿಗೊಳಿಸುವ ಉದ್ದೇಶದಿಂದ ಸ್ವಾತಂತ್ರ್ಯ, ಸಮಾನತೆಯನ್ನು ಬಿಂಬಿಸುವಂತಹ ಸಂವಿಧಾನದ ರಚನೆಗಾಗಿ ತಮ್ಮ ಪ್ರಯತ್ನವನ್ನು ನಡೆಸಿದರು. ಹಾಗೆಯೇ ಭಾರತದ ಮೊದಲ ಕಾನೂನು ಮಂತ್ರಿಯಾಗಿ ಹಿಂದೂ ಕೋಡ್ ಬಿಲ್ಲನ್ನು ಸಂಸತ್ತಿನಲ್ಲಿ ಮಂಡಿಸುವ ಮೂಲಕ ಸಮಾನತೆಯನ್ನು ಮತ್ತಷ್ಟು ಪ್ರಬಲವಾದ ಕಾನೂನಿನ ಮರ್ಜಿಗೆ ಒಳಪಡಿಸುವ ಪ್ರಯತ್ನ ನಡೆಸಿದರು. ಆದರೆ ಅದಕ್ಕೆ ಸಂಸತ್ತಿನ ಬೆಂಬಲ ದೊರೆಯದಿದ್ದಾಗ ಅದರಿಂದ ಬೇಸತ್ತು ತಮ್ಮ ಮಂತ್ರಿ ಪದವಿಗೆ ರಾಜೀನಾಮೆಯನ್ನು ನೀಡಿ ಹೊರಬಂದರು. ಹೀಗೆ ಅಂಬೇಡ್ಕರ್ ಒಬ್ಬ ಕಾನೂನುತಜ್ಞರಾಗಿ, ಸಾಮಾಜಿಕ, ರಾಜಕೀಯ ಹಾಗೂ ಆರ್ಥಿಕ ಚಿಂತಕರಾಗಿ ಸಮಾಜ ಸುಧಾರಣಾ ಹೋರಾಟಗಾರರಾಗಿ ಶೋಷಿತ ದಲಿತ ಸಮುದಾಯಕ್ಕೆ ಸಾಮಾಜಿಕ ನ್ಯಾಯವನ್ನು ದೊರಕಿಸುವ ಪ್ರಯತ್ನವನ್ನು ನಡೆಸಿದರು ಎಂದು ಹೇಳಬಹುದಾಗಿದೆ.

## 27.5 ವಿಮರ್ಶೆ

ಅಂಬೇಡ್ಕರ್‌ರವರು ಒಬ್ಬ ಸಂವಿಧಾನ ಶಿಲ್ಪಿಯಾಗಿ ಭಾರತದ ರಾಜಕೀಯ ಕ್ಷೇತ್ರಕ್ಕೆ ಮಹತ್ತರವಾದ ಕಾರ್ಯವನ್ನು ನಿರ್ವಹಿಸಿ ಯಶಸ್ವಿಯಾದರು. ಆದರೆ ಇವರು ಸಾಮಾಜಿಕ ನ್ಯಾಯವನ್ನು ಪಡೆಯಲು ಪ್ರಾಯೋಗಿಕವಾಗಿ ನಡೆಸಿದ ಹೋರಾಟದಲ್ಲಿ ಅವರು ನಿರೀಕ್ಷಿತ ಜಯ ಪಡೆಯಲು ಸಾಧ್ಯವಾಗಲಿಲ್ಲ. ಕಾರಣ ಅವರು ನಡೆಸಿದ ಚಾದರ್ ಕೆರೆಯ ಸತ್ಯಾಗ್ರಹ ಹಾಗೂ ಕಳಾರಾಮ ದೇವಾಲಯ ಪ್ರವೇಶದ ಹೋರಾಟಗಳ ಪ್ರತಿಫಲವಾಗಿ ಅವರು ಸವರ್ಣೀಯರಿಂದ ಮಾರಣಾಂತಿಕ ಹಲ್ಲೆಗಳಿಗೆ ಒಳಗಾಗಬೇಕಾಯಿತು. ಅಲ್ಲದೆ ಅವರು ನಡೆಸಿದ ಹೋರಾಟದಿಂದ ಕೆರೆಯ ನೀರನ್ನು ಹೋರಾಟ ಸಂದರ್ಭದಲ್ಲಿ ಮುಟ್ಟಿ ಕುಡಿದರೂ ಸಹ ನಂತರದಲ್ಲಿ ಅದನ್ನು ಮುಂದುವರೆಸಲು ಸಾಧ್ಯವಾಗದಂತೆ ಸವರ್ಣೀಯರಿಂದ ಭೀಕರವಾದ ಪ್ರತಿರೋಧ ವ್ಯಕ್ತವಾಯಿತು. ಹಾಗೆಯೇ ಕಳಾರಮ ದೇವಾಲಯದ ಪ್ರವೇಶವನ್ನು ಸಹ ಅಂಬೇಡ್ಕರ್‌ರವರು ಸಾಧಿಸಲಾಗಲಿಲ್ಲ. ಇದಲ್ಲದೆ ಅಂಬೇಡ್ಕರ್ ದಲಿತರಲ್ಲಿ ಜಾಗೃತಿ ಮೂಡಿಸುವ ಪ್ರಯತ್ನವೂ ಸಹ ಸಾಕಷ್ಟು ಯಶಸ್ಸು ಸಾಧಿಸುವಲ್ಲಿ ವಿಫಲವಾಯಿತು ಕಾರಣ ಅವರೇ ಹೇಳಿರುವಂತೆ ಪ್ರಾಚೀನ ಕಾಲದಿಂದ ದಲಿತ ಸಮುದಾಯ ಶಿಕ್ಷಣದಿಂದ ವಂಚಿತವಾಗಿದ್ದರ ಜೊತೆಗೆ ಆರ್ಥಿಕವಾಗಿಯೇ ಶೋಷಣೆಗೆ ಒಳಗಾಗಿದ್ದರಿಂದಾಗಿ ಅವರಲ್ಲಿ ಜಾಗೃತಿ ಮೂಡಿಸುವುದು ಕಷ್ಟ ಸಾಧ್ಯದ ಕೆಲಸವಾಗಿಯೇ ಉಳಿಯಿತು.

ಆದರೆ ಅಂಬೇಡ್ಕರ್‌ರವರು ವಸಾಹತುಶಾಹಿ ಸರ್ಕಾರದೊಂದಿಗೆ ನಡೆಸಿದ ಹೋರಾಟದ ಪ್ರತಿಫಲವಾಗಿ ದಲಿತ ಸಮುದಾಯಕ್ಕೆ ಕೆಲವು ರೀತಿಯ ಸೌಲಭ್ಯಗಳನ್ನು ದೊರಕಿಸುವಲ್ಲಿ ಯಶಸ್ವಿಯಾದರು. 1932ರಲ್ಲಿ ಗಾಂಧಿ ಅಂಬೇಡ್ಕರ್ ನಡುವೆ ಏರ್ಪಟ್ಟ ಪೂನಾ ಒಪ್ಪಂದದ ಪ್ರತಿಫಲವಾಗಿ ದಲಿತರಿಗಾಗಿ ಪ್ರತ್ಯೇಕ ಮತದಾನದ ಹಕ್ಕನ್ನು ಪಡೆಯುವಲ್ಲಿ ವಿಫಲವಾದರೂ ಸಹ ಪ್ರತ್ಯೇಕ ಮೀಸಲು ಮತ ಕ್ಷೇತ್ರಗಳನ್ನು ಪಡೆಯುವಲ್ಲಿ ಯಶಸ್ವಿಯಾದರು. ಹಾಗೆಯೇ ಸ್ವಾತಂತ್ರ್ಯಾ ನಂತರ ಭಾರತದಲ್ಲಿ ಸ್ವಾತಂತ್ರ್ಯ ಸಮಾನತೆ ತತ್ವಗಳನ್ನೊಳಗೊಂಡ ಸಂವಿಧಾನವನ್ನು ರಚಿಸುವ ಮೂಲಕ ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ರಕ್ಷಿಸುವಲ್ಲಿ ಯಶಸ್ವಿಯಾದರು.

## 27.6 ಉಪಸಂಹಾರ

ಅಂಬೇಡ್ಕರ್ ತಮ್ಮ ಚಿಂತನೆ ಹಾಗೂ ಹೋರಾಟದ ಮೂಲಕ ಸಮಾನತೆಯ ಹರಿಕಾರನಾಗಿ ಹೊರಹೊಮ್ಮುವಲ್ಲಿ ಸಫಲರಾಗಿದ್ದಾರೆ. ಇವರು ಬಾಲ್ಯದಿಂದಲೇ ಅಸ್ಪೃಶ್ಯತೆಯ ನೋವನ್ನು ಅನುಭವಿಸದರೂ ಸಹ ಸ್ವತಃ ಕಠಿಣ ಪರಿಶ್ರಮ ಹಾಗೂ

ಅಂಬಾವಾಡೇಕರ್, ಕೆಲೋಸ್ಕೇರ್, ಸಲಿಗ್‌ಮನ್ ರವರಂತಹ ಗುರುಗಳ ಮಾರ್ಗದರ್ಶನದಿಂದಾಗಿ ಹಾಗೂ ಸಯ್ಯಾಜಿ ಗಾಯಕ್‌ವಾಡ್‌ರವರ ಆರ್ಥಿಕ ನೆರವಿನೊಂದಿಗೆ ಉತ್ತಮ ಶಿಕ್ಷಣವನ್ನು ಪಡೆಯುವಲ್ಲಿ ಯಶಸ್ವಿಯಾದರು. ಹಾಗೆಯೇ ಇವರು ಉತ್ತಮ ರಾಜಕೀಯ ಚಿಂತಕರಾಗಿ, ಸಂವಿಧಾನ ತಜ್ಞರಾಗಿ, ಸಮಾಜ ಸುಧಾರಣಾಕಾರರಾಗಿ ಆರ್ಥಿಕ ವಿತಾರವಾದಿಯಾಗಿ ಶೋಷಿತ ಸಮಾಜಕ್ಕೆ ಸಾಮಾಜಿಕ ನ್ಯಾಯವನ್ನು ದೊರಕಿಸಿಕೊಡುವ ನಿರಂತರ ಪ್ರಯತ್ನವನ್ನು ನಡೆಸಿದವರಾಗಿದ್ದಾರೆ. ಈ ಸಾಮಾಜಿಕ ನ್ಯಾಯದ ಸಾಧನೆಗಾಗಿಯೇ ನೆಡೆಸಿದವರಾಗಿದ್ದಾರೆ. ಈ ಸಾಮಾಜಿಕ ನ್ಯಾಯದ ಸಾಧನ್ನಾಗಿಯೇ ಇವರು ರಾಜ್ಯ ಸಮಾಜವಾದ, ಕಾನೂನಿನ ಆದಿಪತ್ಯ, ಸಂಸದೀಯ ಪ್ರಜಾಪ್ರಭುತ್ವಗಳನ್ನು ಬೆಂಬಲಿಸುವ ಮೂಲಕ ಸಂವಿಧಾನದ ಚೌಕಟ್ಟಿನೊಳಗೆ ಸಮಾನತೆ ಹಾಗೂ ಸ್ವಾತಂತ್ರ್ಯವನ್ನು ಯಾವುದೇ ರೀತಿಯ ಜಾತಿ. ಧರ್ಮ, ವರ್ಣ, ವರ್ಗಗಳ ಬೇಧವಿಲ್ಲದೆ ದೊರೆಯುವಂತೆ ಮಾಡುವಲ್ಲಿ ಸಫಲರಾಗಿದ್ದಾರೆ ಎಂದು ಹೇಳಬಹುದಾಗಿದೆ.

## ನಿಮ್ಮ ಪ್ರಗತಿ ಪರಿಶೀಲನೆ - 2

**ಸೂಚನೆ:** 1. ಈ ಕೆಳಗೆ ಬಿಟ್ಟಿರುವ ಜಾಗವನ್ನು ನಿಮ್ಮ ಉತ್ತರಕ್ಕೆ ಉಪಯೋಗಿಸಿಕೊಳ್ಳಿ.

2. ಈ ಘಟಕದ ಕೊನೆಯಲ್ಲಿ ನೀಡಿರುವ ಉತ್ತರದೊಂದಿಗೆ ನಿಮ್ಮ ಪ್ರಗತಿಯನ್ನು ಪರಿಶೀಲಿಸಿಕೊಳ್ಳಿ.

**1. ಅಂಬೇಡ್ಕರ್‌ರವರ ಸಾಮಾಜಿಕ ನ್ಯಾಯ ಸಿದ್ಧಾಂತವನ್ನು ವಿವರಿಸಿ?**

.......................................................................................................................................
.......................................................................................................................................
.......................................................................................................................................
.......................................................................................................................................
.......................................................................................................................................
.......................................................................................................................................
.......................................................................................................................................
.......................................................................................................................................

**2. ಅಂಬೇಡ್ಕರ್‌ರವರ ಸಾಮಾಜಿಕ ನ್ಯಾಯ ಪರಿಕಲ್ಪನೆಯನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿ?**

.......................................................................................................................................
.......................................................................................................................................
.......................................................................................................................................
.......................................................................................................................................
.......................................................................................................................................
.......................................................................................................................................
.......................................................................................................................................
.......................................................................................................................................
.......................................................................................................................................
.......................................................................................................................................

## 27.7 ಮುಖ್ಯ ಪದಗಳು

| | | |
|---|---|---|
| ದಲಿತ | - | ಶೋಷಣೆಗೆ ಒಳಗಾದವ |
| ಮನುಸ್ಮೃತಿ | - | ಹಿಂದೂ ಧರ್ಮದ ಧಾರ್ಮಿಕ ಗ್ರಂಥ |
| ಸವರ್ಣಿಯ | - | ಉತ್ತಮ ಜಾತಿಗೆ ಸೇರಿದವ |
| ಅತಿಶೂದ್ರ | - | ಶೂದ್ರರಲ್ಲಿಯೇ ಕೆಳಸ್ತರದ ಜಾತಿಗೆ ಸೇರಿದವರು |
| ಅಸ್ಪೃಶ್ಯ | - | ಸ್ಪರ್ಶಿಸಲು ಅರ್ಹತೆಯಿಲ್ಲದವ |
| ಸಾಮಾಜಿಕ ನ್ಯಾಯ | - | ಶೋಷಣೆ ರಹಿತ ಸಮಾನತೆ |
| ಬಹುಸಂಖ್ಯಾತರು | - | ಹೆಚ್ಚು ಜನಸಂಖ್ಯೆ ಇರುವವರು |
| ಅಲ್ಪಸಂಖ್ಯಾತರು | - | ಕಡಿಮೆ ಜನಸಂಖ್ಯೆ ಹೊಂದಿರುವವರು |

## 27.8 ಕೆಲವು ಉಪಯುಕ್ತ ಗ್ರಂಥಗಳು


| | | |
|---|---|---|
| ವೆಲೇರಿಯನ್ ರೂಡ್ರಿಗ್ಸ್ | : | ಎಸೆನ್ಶಿಯಲ್ ರೈಟಿಂಗ್ಸ್ ಆಫ್ ಡಾ. ಬಿ.ಆರ್. ಅಂಬೇಡ್ಕರ್ |
| ಡಬ್ಲ್ಯೂ, ಎನ್. ಕುಬೇರ್ | : | ಕ್ರಿಟಿಕಲ್ ಸ್ಟಡಿ ಆಫ್ ಸೋಷಿಯಲ್ ಅಂಡ್ ಪೊಲಿಟಿಕಲ್ ಥಾಟ್ಸ್ ಆಫ್ ಡಾ. ಅಂಬೇಡ್ಕರ್ |
| ಡಾ. ಬಿ.ಆರ್. ಅಂಬೇಡ್ಕರ್ | : | ಕ್ಯಾಸ್ಟ್ ಇನ್ ಇಂಡಿಯಾ |
| ಬ್ಯಾರಿಲ್ ಚಾವ್ರ | : | ಸೋಷಿಯಲ್ ಅಂಡ್ ಪೊಲಿಟಿಕಲ್ ಐಡಿಯಾಸ್ ಆಫ್ ಡಾ. ಅಂಬೇಡ್ಕರ್ |
| ಧನಂಜಯ ಕೀರ್ | : | ಡಾ. ಅಂಬೇಡ್ಕರ್ ಲೈಫ್ ಅಂಡ್ ಮಿಸನ್ |
| ಡಾ.ಟಿ.ಡಿ. ದೇವೇಗೌಡ | : | ರಾಜಕೀಯ ಚಿಂತಕರು |
| ಡಾ. ಕೆ.ಜೆ. ಸುರೇಶ್ | : | ರಾಜಕೀಯ ಸಿದ್ಧಾಂತ ಮತ್ತು ಚಿಂತಕರು |


## 27.9 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು

<u>ನಿಮ್ಮ ಪ್ರಗತಿ ಪರಿಶೀಲನೆ</u> **-1**

1. ನೋಡಿ ಭಾಗ 27.2
2. ನೋಡಿ ಭಾಗ 27.3
3. ನೋಡಿ ಭಾಗ 27.2 ಮತ್ತು 27.3

<u>ನಿಮ್ಮ ಪ್ರಗತಿ ಪರಿಶೀಲನೆ</u> **-2**

1. ನೋಡಿ ಭಾಗ 27.4
2. ನೋಡಿ ಭಾಗ 27.4 ಮತ್ತು 27.5

# ಟಿಪ್ಪಣಿ


# ಟಿಪ್ಪಣಿ

# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮಾನಸ ಗಂಗೋತ್ರಿ ಮೈಸೂರು – 570 006

ಉನ್ನತ ಶಿಕ್ಷಣದ ಅವಕಾಶಗಳನ್ನು ವೃದ್ಧಿಸಿ ಶಿಕ್ಷಣವನ್ನು ಪ್ರಜಾತಾಂತ್ರಿಕರಿಸುವ ಸಾಧನವಾಗಿ ಮುಕ್ತ ವಿಶ್ವವಿದ್ಯಾನಿಲಯ ವ್ಯವಸ್ಥೆಯನ್ನು ಅನಾವರಣಗೊಳಿಸಲಾಗಿದೆ.

*ರಾಷ್ಟ್ರೀಯ ಶಿಕ್ಷಣ ನೀತಿ ೧೯೮೬*




♣ ಪ್ರಾದೇಶಿಕ ಕೇಂದ್ರಗಳು

- ಬೆಂಗಳೂರು
- ದಾವಣಗೆರೆ
- ಗುಲ್ಬರ್ಗಾ
- ಧಾರವಾಡ
- ಶಿವಮೊಗ್ಗ
- ಮಂಗಳೂರು
- ತುಮಕೂರು
- ಹಾಸನ
- ಚಾಮರಾಜನಗರ
- ಬಳ್ಳಾರಿ
- ಮಂಡ್ಯ
- ಕೋಲಾರ
- ಬಿಜಾಪುರ
- ಬೆಳಗಾಂ
- ರಾಮನಗರ
- ಬೆಂಗಳೂರು (ಮತ್ತೊಂದು)
- ಚಿಕ್ಕಮಗಳೂರು
- ಉಡುಪಿ
- ಕಾರವಾರ
- ಬೀದರ್
- ಮೈಸೂರು

- ✹ ಮುಖ್ಯಕಚೇರಿಗಳು
- ★ ಒಟ್ಟು ಅಧ್ಯಯನ ಕೇಂದ್ರಗಳು: ೧೨೩
- ♣ ಪ್ರಾದೇಶಿಕ ಕೇಂದ್ರಗಳು: ೨೧
- ❄ ಬಿ ಎಡ್ ಅಧ್ಯಯನ ಕೇಂದ್ರಗಳು: ೧೦
- ✦ ಎಂ ಎಡ್ ಅಧ್ಯಯನ ಕೇಂದ್ರಗಳು: ೦೬


ಆದೇಶ ಸಂಖ್ಯೆ : ಕ.ರಾ.ಮು.ವಿ./ಅ.ಸಾ.ವಿ./4-398/2015-16 ದಿನಾಂಕ : 21.01.2016

ಒಳಪುಟ : 60 GSM ಮ್ಯಾಪ್ಲಿತೋ ಕಾಗದ ಮತ್ತು ರಕ್ಷಾ ಪುಟ : 220 GSM ಆರ್ಟ್ ಕಾರ್ಡ್

ಮುದ್ರಕರು : ವಿನಾಯಕ ಆಫ್‌ಸೆಟ್ ಪ್ರಿಂಟರ್ಸ್, ಬನಶಂಕರಿ 2ನೇ ಹಂತ, ಬೆಂ-70. ಪ್ರತಿಗಳು : 3500

# KSOU

**Higher Education to everyone everywhere**
**ಉನ್ನತ ಶಿಕ್ಷಣ ಎಲ್ಲರಿಗೂ ಎಲ್ಲೆಡೆ**




ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು - 570 006

**Karnataka State Open University**
Manasagangotri, Mysore - 570 006 Website : www.ksoumysore.edu.in

VOP-8